ಅಭಿಜ್ಞಾನ
ಸಂಸ್ಕೃತಿಕೋಶ 4

ಸಾ. ಕೃ. ರಾಮಚಂದ್ರರಾವ್

ತಿರುಪತಿ ತಿಮ್ಮಪ್ಪ





ತಿರುಪತಿ ತಿಮ್ಮಪ್ಪ

ಭಾರತೀಯ ಸಂಸ್ಕೃತಿಯಲ್ಲಿ ಗುಡಿ-ಗೋಪುರಗಳಿಗೆ ಮಹತ್ತ್ವದ ಸ್ಥಾನವಿದೆಯಷ್ಟೆ. ಇಂಥ ದೇವಾಲಯಗಳಲ್ಲಿ ತಿರುಮಲೆ ತಿರುಪತಿಗಿರುವ ಸ್ಥಾನ ವಿಶೇಷವಾದದ್ದು.

ಅನಂತ ಆಕರ್ಷಣೆ-ಶಕ್ತಿಗಳಿಂದ ವಿರಾಜಿಸುತ್ತಿರುವ ತಿರುಪತಿ ತಿಮ್ಮಪ್ಪ, ಅವನನ್ನು ಸುತ್ತುವರೆದಿರುವ ಪುರಾಣ-ಕಥೆಗಳು, ಅವನು ನೆಲೆನಿಂತ ಬೆಟ್ಟ, ಅಲ್ಲಿಯ ಆಲಯ, ಆಲಯದ ವಾಸ್ತುಶಿಲ್ಪ, ಗುಡಿಯಲ್ಲಿ ನಡೆಯುವ ಅರ್ಚನೆ-ಪೂಜಾಪದ್ಧತಿಗಳು, ಅಲ್ಲಿ ಜರಗುವ ಉತ್ಸವ-ವೈಭವಗಳು, ಅದಕ್ಕೆ ಹೊಂದಿಕೊಂಡ ಆಗಮ-ಶಾಸ್ತ್ರ-ಸಾಹಿತ್ಯ-ಶಾಸನ— ಹೀಗೆ ಪ್ರತಿ ವಿವರವೂ ಆಸ್ತಿಕರ ಪಾಲಿಗೆ ಪರಮಪವಿತ್ರ ವೆನಿಸಿದೆ; ಆಸಕ್ತರ ಪಾಲಿಗೆ ಕುತೂಹಲವಿಷಯವೆನಿಸಿದೆ.

ಒಟ್ಟಿನಲ್ಲಿ ಹೇಳುವುದಾದರೆ, ತಿರುಪತಿ ತಿಮ್ಮಪ್ಪ ನೂರಾರು ವರ್ಷಗಳಿಂದ ಭಾರತೀಯ ಸಂಸ್ಕೃತಿಪ್ರವಾಹದ ಒಂದು ಪ್ರಧಾನಸ್ರೋತವೆನಿಸಿದ್ದಾನೆ. ಇಂಥ ದೈವ ತಿಮ್ಮಪ್ಪನನ್ನೂ, ಆತನ ಗುಡಿ ವೇಂಗಡವನ್ನೂ ಹಲವು ಧಾರೆಗಳಲ್ಲಿ ವಿವರಿಸುವ ಬೃಹದ್ಗ್ರಂಥವೇ ಪ್ರಕೃತಕೃತಿ **ತಿರುಪತಿ ತಿಮ್ಮಪ್ಪ.**

ಈ ಮಹಾಕೃತಿಯ ಲೇಖಕರು ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ವೇದಾಂತನಿಧಿ, ಸಂಗೀತಕಲಾರತ್ನ, ವಾಚಸ್ಪತಿ ಪ್ರೊ॥ ಸಾ. ಕೃ. ರಾಮಚಂದ್ರರಾಯರು. ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಲಿ, ಅರ್ಧಮಾಗಧಿ, ಟಿಬೆಟನ್, ತೆಲುಗು, ತಮಿಳು ಮುಂತಾದ ಭಾಷೆಗಳಲ್ಲಿ ಪರಿಣತರೂ, ಇನ್ನೂರಕ್ಕೂ ಹೆಚ್ಚು ಕೃತಿಗಳ ಕರ್ತೃಗಳೂ, ವೇದ-ವೇದಾಂತ-ಬೌದ್ಧ-ಜೈನ-ಆಗಮ-ತಂತ್ರ-ಶಿಲ್ಪ-ನಾಟ್ಯ-ಚಿತ್ರ-ಸಂಗೀತ-ಆಯುರ್ವೇದ ಮುಂತಾದ ಹತ್ತಾರು ವಿಷಯಗಳಲ್ಲಿ ತಜ್ಞರೂ ಆಗಿದ್ದ ರಾಯರು ನಾಡು ಕಂಡಿರುವ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರು.



ಸಂಸ್ಕೃತಿಕೋಶ-4

ತಿರುಪತಿ ತಿಮ್ಮಪ್ಪ

(ವೇಂಗಡದೊಡೆಯನ ಗುಡಿಯನ್ನು ಕುರಿತು ಒಂದು ಅಧ್ಯಯನ)

ಸಾ. ಕೃ. ರಾಮಚಂದ್ರರಾವ್

2024

ಅಭಿಜ್ಞಾನ

ನಂ. 2, ದತ್ತಾತ್ರೇಯ ದೇವಸ್ಥಾನದ ಆವರಣ
ಪೈಪ್‌ಲೈನ್ ರಸ್ತೆ, ಮಲ್ಲೇಶ್ವರ, ಬೆಂಗಳೂರು - 560 003
✆ 94484 94949

TIRUPATI TIMMAPPA—The Veṅgaḍa Temple: A Study
In Kannada by *Vidyālaṅkāra, Śástra-chūḍāmaṇi, Saṅgīta-kalāratna, Vāchaspati* Prof. S. K. Ramachandra Rao, and Published by Abhijñāna, No. 2, Dattatreya Temple Campus, Pipeline Road, Malleshwaram, Bengaluru – 560 003 ✆ 94484 94949

Pages: 560 Price: ₹650

© ಹಕ್ಕುಗಳನ್ನು ಕಾದಿರಿಸಲಾಗಿದೆ.

ಪುಟಗಳು: 560
ಬೆಲೆ: ರೂ. 650

ಮೊದಲ ಮುದ್ರಣ: 1980
ಮೊದಲ ವಿಸ್ತೃತಮುದ್ರಣ (ಅಭಿಜ್ಞಾನದಿಂದ): 2006
ಮರುಮುದ್ರಣ: 2024

ಮುದ್ರಕರು
ಗಾಯತ್ರೀ ಪ್ರಿಂಟ್ಸ್, ಬೆಂಗಳೂರು - 560050

ಪ್ರತಿಗಳಿಗಾಗಿ ಸಂಪರ್ಕಿಸಿ
232/4, 4ನೇ ಮುಖ್ಯರಸ್ತೆ, ಶ್ರೀನಿವಾಸನಗರ, ಬೆಂಗಳೂರು - 560050
ದೂರವಾಣಿ: 92435 94818, 94484 94949

ವಿಷಯಾನುಕ್ರಮಣಿಕೆ

	ಕೃತಜ್ಞತೆಗಳು	x
	ಅಭಿಜ್ಞಾನದ ಮಾತು	xi
	ಮೊದಲ ಮಾತು	xv
ಒಂದು	**ಬೆಟ್ಟದ ದೈವ—ವೇಂಗಡ**	1-19
	ಬೆಟ್ಟದ ಜೀವ (1); ವಡವೇಂಗಡ (9); ವೈದಿಕಮೂಲ (12)	
ಎರಡು	**ಆಳ್ವಾರರು ಕಂಡ ವೇಂಗಡ**	20-38
	ಆಳ್ವಾರರು (20); ದಿವ್ಯಕ್ಷೇತ್ರಗಳು (24); ಪ್ರಬಂಧಗಳಲ್ಲಿ ವೇಂಗಡಬೆಟ್ಟ (26); ಮೊದಲಾಳ್ವಾರರು (29); ಅನಂತರದ ಆಳ್ವಾರರು (33)	
ಮೂರು	**ಗುಡಿಯು ಮೂಡಿಕೊಂಡ ಬಗೆ**	39-55
	ಬೇಟೆಗಾರರ ದೇವರು (39); ಅರಸರ ಆಸಕ್ತಿ (43); ಬೆಟ್ಟದ ಕೆಳಗೆ ಗುಡಿ (43); ಬೆಟ್ಟದ ಮೇಲೆ ಮೂರ್ತಿ (46); ಸಾಮವೈ ಕೊಡುಗೆ (47); ಶ್ರೀವೈಷ್ಣವರಕ್ಷೆ (50); ಬ್ರಹ್ಮೋತ್ಸವದ ವ್ಯವಸ್ಥೆ (53)	
ನಾಲ್ಕು	**ರಾಮಾನುಜರು ಕೈಗೊಂಡ ಕೆಲಸ**	56-76
	ತಿರುಮಲೆ-ನಂಬಿ (56); ರಾಮಾನುಜರ ಪ್ರವೇಶ (59); ಯಾದವರಾಯರು (62); ದೇವರಿಗೆ ವೈಷ್ಣವದೀಕ್ಷೆ (65); ನಂದವನಗಳು (67); ಕೋಯಿಲ್-ಕೆಳ್ವಿ (70); ತಿರುಪತಿಯ ಏರ್ಪಾಟು (71); ಭಾಷ್ಯಕಾರಸನ್ನಿಧಿ (75)	
ಐದು	**ಇತಿಹಾಸದ ಇಣುಕುನೋಟ**	77-102
	ಕಾಲುದಾರಿಗಳಿಂದ ಹೆದ್ದಾರಿಗೆ (77); ಯಾದವರಾಯರು (79); ಗುಡಿಗೆ ಬಂಗಾರದ ವಿಮಾನ (82); ಜಟಾವರ್ಮ–ಸುಂದರಪಾಂಡ್ಯ (85); ಕನ್ನಡ ನಾಡಿನ ನಂಟು (88); ಉತ್ಸವಗಳು, ನಿಮಂದನಗಳು (93); ಆದಿವಣ್–ಶಠಕೋಪಸ್ವಾಮಿ (95); ವೇದಾಂತದೇಶಿಕರು (97)	
ಆರು	**ಸಾಳುವರ ಅಭ್ಯುದಯದಲ್ಲಿ ಗುಡಿಯ ವೈಭವ**	103-125
	ಸಾಳುವ ಅರಸರು (103); ಮಂಗಿದೇವ-ಸುವರ್ಣಶಿಖರ (105); ಮುಲ್ಲೈ-ತಿರುವೇಂಕಟಜೀಯರ್ (108); ಮಲ್ಲಣ-ಮಾಧವದಾಸ (109); ಇಮ್ಮಡಿ ದೇವರಾಯ (111); ಸಾಳುವ–ನರಸಿಂಹ (113); ಪ್ರಸಾದದ ಮಾರಾಟ (117); ಕಂದಾಡೆ–ಅಯ್ಯನ ಕಾರುಬಾರು (119); ಗುಡಿಯ ಸಿಬ್ಬಂದಿ (121); ತಿರುಪತಿಯವರು (121); 'ತಿರುವೇಂಕಟಮಾಹಾತ್ಮ್ಯ' (123)	
ಏಳು	**ತಾಳ್ಪಾಕದವರು ಸಲ್ಲಿಸಿದ ಸೇವೆ**	126-144
	ಅಣ್ಣಮಾಚಾರ್ಯರು (126); ಬೆಟ್ಟದ ದೇವರ ಸೇವೆ (128); ಪೆದ್ದ–ತಿರುಮಲಾಚಾರ್ಯ (135); ಅಲಮೇಲುಮಂಗಾಪುರ (138); ದೇವರಿಗೆ ಕಲ್ಯಾಣೋತ್ಸವ (139); ತಿರುವೇಂಗಳನಾಥ (142)	

ಎಂಟು **ಕೃಷ್ಣದೇವರಾಯನ ಕೈಂಕರ್ಯ** 145-172
ತುಳುವ-ಮನೆತನ (145); ಕೃಷ್ಣದೇವರಾಯ-ಮಹಾರಾಯ (147); ಬೆಟ್ಟದ ದೇವರ ಭಕ್ತ (150); ದೇವರಿಗೆ ಕನಕಾಭಿಷೇಕ (152); ನವರತ್ನ–ಪ್ರಭಾವಳಿ (153); ವಿಮಾನಕೈಂಕರ್ಯ (154); ಅರಸನಂತೆ ಅಧಿಕಾರಿಗಳು (155); ಮಹಾಜನರ ಸೇವೆ (158); ವ್ಯಾಸತೀರ್ಥರು (159); ಹರಿದಾಸರ ತಿಮ್ಮಪ್ಪ (161); ನಾರಾಯಣ-ಜೀಯರ್ (171)

ಒಂಬತ್ತು **ಅಚ್ಯುತರಾಯನ ಉತ್ಸಾಹ, ರಸಿಕತೆ** 173-187
ಗುಡಿಗೆ ಕೊಡುಗೆ (173); ಚಕ್ರತೀರ್ಥ (174); ಸಹಸ್ರನಾಮಾರ್ಚನೆಯ ಸಾಹಸ (175); ಲಕ್ಷ್ಮೀದೇವಿಗೆ ಉತ್ಸವ (176); ರಾಮನಿಗೆ ಪುನರ್ವಸು-ತಿರುನಾಳ್ (178); ತಿರುಪತಿಯ ಗೋವಿಂದರಾಜನಿಗೆ ಉತ್ತೇಜನ (179); ದೇವದಾಸಿಯರ ಸಂಪರ್ಕ (180); ತಿರುಪತಿಯ ತಿರುವೀಧಿಸಾನಿಯರು (182)

ಹತ್ತು **ದೇವರ ದಂಡಿಗೆಯು ದೇವದಾಸಿಯ ಪಾಲು** 188-208
ಅರವೀಡು–ಅರಸರು (188); ತಿರುಪತಿಯ ಹಿರಿಮೆ (190); ಸದಾಶಿವರಾಯನ ಅಧಿಕಾರಿಗಳು (191); ಕುಮಾರ–ತಾತಯ್ಯಂಗಾರರ ಪ್ರಭಾವ (192); ದೇವರ ದಂಡಿಗೆಯ ದಾನ (193); ಗುಡಿಗೆ ನಡೆದುಕೊಂಡವರು (196); ವೇಂಕಟಪತಿರಾಯ (198); ಮಟ್ಲಕುಮಾರ–ಅನಂತರಾಜ (199); ಉತ್ಸವಗಳ ಮೇಲಾಟ (201); ಬಿಕ್ಕಟ್ಟು (203); ಮಹಾಜನರ ಕೈಂಕರ್ಯ (204); ಮೈಸೂರುದೊರೆಗಳ ಕೊಡುಗೆ (206)

ಹನ್ನೊಂದು **ಕಾಸಿಗೆ ಆಸೆ ಪಡುವ ದೇವರು** 209-232
ಬೊಕ್ಕಸ ಬರಿದಾದಾಗ (209); ಕೊಪ್ಪರದ ಏರ್ಪಾಟು (210); ಗುತ್ತಿಗೆದಾರರು (212); ಮುಸಲ್ಮಾನರ ಆಸಕ್ತಿ (213); ತೋಡರಮಲ್ಲ (216); ಆರ್‌ಕಾಡು–ನವಾಬರು (218); ಫ್ರೆಂಚರೂ ಇಂಗ್ಲಿಷರೂ (219); ಈಸ್ಟ್ ಇಂಡಿಯಾ ಕಂಪೆನಿಯ ವಶ (222); ಸವಾಲ್–ಜವಾಬ್ ಪಟ್ಟಿ (224); ಮಹಂತರ ಪಾಲು (225); ಸುಲಿಗೆ-ಸೇವೆ (226); ಅನುಕೂಲವಾದ ಕಥೆಗಳು (228); ಮಹಂತರಿಂದ ಸಮಿತಿಗೆ (230)

ಹನ್ನೆರಡು **ಈಗಿರುವ ಗುಡಿ** 233-296
ಕಮರಿಯಲ್ಲಿ ಗುಡಿ (235); ಪ್ರತಿಮಾಮಂಡಪ (238); ರಂಗಮಂಡಪ (240); ತಿರುಮಲರಾಯ-ಮಂಡಪ (246); ವಿಮಾನಪ್ರದಕ್ಷಿಣ (251); ಕಲ್ಯಾಣಮಂಡಪ (257); ವಿಮಾನ–ಶ್ರೀನಿವಾಸ (271); ರಾಮಾನುಜರ ಸನ್ನಿಧಿ (272); ನರಸಿಂಹನ ಆಲಯ (273); ತಿರುಮಾಮಣಿ-ಮಂಡಪ (276); ಸ್ನಪನಮಂಡಪ (277); ರಾಮರ ಮೇಡೆ (278); ಶಯಾನ-ಮಂಡಪ (279); ಮುಕ್ಕೋಟಿ ಪ್ರದಕ್ಷಿಣೆ (280); ವಿಷ್ವಕ್ಸೇನನ ಸನ್ನಿಧಿ (282); 'ಆನಂದನಿಲಯ'–ವಿಮಾನ (284); ವರಾಹಸ್ವಾಮಿಯ ಗುಡಿ (286)

ಹದಿಮೂರು **ಗರ್ಭಗುಡಿಯಲ್ಲಿರುವ ಮೂರ್ತಿಗಳು** 297-327
ಅಲಂಕಾರದ ಹೊರೆ, ಮುಸುಕು (297); ಮೂಲಮೂರ್ತಿಯ ರೂಪ (301); ಮೂಲವರ ಮೂರ್ತಿಲಕ್ಷಣ (303); ವಕ್ಷಃಸ್ಥಲ–ಲಕ್ಷ್ಮೀ (308); ಮುಖದ

ಮಂದಹಾಸ (309); ನಾಮಗಳು (311); ಭೋಗ–ಶ್ರೀನಿವಾಸ (312); ಉಗ್ರ–ಶ್ರೀನಿವಾಸ (317); ಉತ್ಸವಮೂರ್ತಿ ಮಲೆಯಪ್ಪ (318); ಕೊಲುವು–ಶ್ರೀನಿವಾಸ (321); ಇತರ ಮೂರ್ತಿಗಳು (323)

ಹದಿನಾಲ್ಕು **ಗುಡಿಯಲ್ಲಿ ನಡೆಯುವ ಪೂಜೆ** **328-338**
ವೈಖಾನಸ-ಸಂಪ್ರದಾಯ (328); ಗುಡಿಯ ಅರ್ಚಕರು (332); ಪೂಜಾಪದ್ಧತಿ (336); ಧರ್ಮದರ್ಶನ (337)

ಹದಿನೈದು **ನಿತ್ಯಾರ್ಚನೆ** **339-362**
ಪ್ರಾತಃಕಾಲಾರ್ಚನೆ (339); ತೋಮಾಲೆಸೇವೆ (341); ಮಾಧ್ಯಾಹ್ನಿಕಾರಾಧನೆ (345); ಪೂಲಂಗಿ–ಸೇವೆ (346); ಶುಕ್ರವಾರ-ತಿರುಮಂಜನ (348); ಸಹಸ್ರ ಕಳಶಾಭಿಷೇಕ (354); ಪ್ರಸಾದ (354); ಬ್ರಹ್ಮೋತ್ಸವ (355)

ಹದಿನಾರು **ಹಿನ್ನೆಲೆಯ ಕೆಲವು ಕಥೆಗಳು** **363-373**
ವರಾಹಕ್ಷೇತ್ರ (363); ಶ್ರೀನಿವಾಸ ನೆಲೆಗೊಂಡ ಕಥೆ (366); ತೋಂಡಮಾನನ ಕಥೆ (368); ಪದ್ಮಾವತೀ-ಪರಿಣಯ (369); ಗುಡಿ ಮೂಡಿಕೊಂಡ ಕಥೆ (372)

ಶ್ರೀವೇಂಕಟೇಶ್ವರ–ಅಷ್ಟೋತ್ತರಶತನಾಮಾವಲಿಗಳು **375-389**
ಶ್ರೀಮದ್ವೇಂಕಟನಾಥಾಷ್ಟೋತ್ತರಶತನಾಮಾವಲಿಃ (377); ಶ್ರೀವೇಂಕಟೇಶ್ವರ-ಅಷ್ಟೋತ್ತರಶತನಾಮಸ್ತೋತ್ರಮ್ (381); ಶ್ರೀವೇಂಕಟೇಶ್ವರ - ಅಷ್ಟೋತ್ತರ ಶತನಾಮಾವಲಿಃ (386)

ಆಳ್ವಾರರ ನುಡಿಮುತ್ತುಗಳು **391-444**
ಅರಿಕೆ (393); ಆಳ್ವಾರರನ್ನು ಕುರಿತು (395); ಮುದಲ್ ತಿರುವಂದಾದಿ (407); ಪೊಯ್ಗೈ ಆಳ್ವಾರರ ಮೊದಲ ಸಿರಿ ಅಂತಾದಿಯಿಂದ (408); ಇರಂಡಾಂ ತಿರುವಂದಾದಿ (413); ಪೂದತ್ತಾಳ್ವಾರರ ಎರಡನೆಯ ಸಿರಿ ಅಂತಾದಿಯಿಂದ (414); ಮೂನ್ರಾಮ್ ತಿರುವಂದಾದಿ (419); ಪೇಯಾಳ್ವಾರರ ಮೂರನೆಯ ಸಿರಿ ಅಂತಾದಿಯಿಂದ (420); ನಾನ್ಮುಗನ್ ತಿರುವಂದಾದಿ (429); ತಿರುಮಳಿಶೈ ಆಳ್ವಾರರ ನಾಲ್ಕೊಗನ ಸಿರಿ ಅಂತಾದಿಯಿಂದ (430); ಪೆರಿಯ ತಿರುವಂದಾದಿ (435); ನಮ್ಮಾಳ್ವಾರರ ಹಿರಿಯ ಸಿರಿ ಅಂತಾದಿಯಿಂದ (436); ತಿರುವಾಯ್‌ಮೊಳಿ (441); ನಮ್ಮಾಳ್ವಾರರ ಸಿರಿಬಾಯ ನುಡಿಯಿಂದ (442)

ಚಿತ್ರಗಳು **447-536**

ಕೃತಜ್ಞತೆಗಳು

ಅಭಿಜ್ಞಾನದಿಂದ **ತಿರುಪತಿ ತಿಮ್ಮಪ್ಪ** ಪ್ರಕಟವಾಗಿ 18 ವರ್ಷಗಳಾಗಿವೆ; ಅಲ್ಪಕಾಲದಲ್ಲಿಯೇ ಪ್ರತಿಗಳಷ್ಟೂ ಮಾರಾಟವೂ ಆದವು. ಅನಂತರದಲ್ಲಿ ಸಹೃದಯರಿಂದ ಅಪಾರ ಬೇಡಿಕೆಯೂ ಇದ್ದಿತು. ಈಗ 'ತಿಮ್ಮಪ್ಪ' ನಿಮ್ಮ ಕೈ ಸೇರುತ್ತಿದ್ದಾನೆ. ನಮ್ಮ ಕರ್ತವ್ಯವೊಂದನ್ನು ನಿರ್ವಹಿಸಿದ ತೃಪ್ತಿ ನಮ್ಮದು. ಗುರುಗಳಾದ ವಿದ್ಯಾಲಂಕಾರ ಸಾ. ಕೃ. ರಾಮಚಂದ್ರರಾಯರ ಕೃತಿಗಳು ನಿರಂತರವಾಗಿ ಜನರಿಂದ ಮನ್ನಣೆಯನ್ನೂ ಪ್ರೀತಿಯನ್ನೂ ಪಡೆಯುತ್ತಲೇ ಬಂದಿವೆ. ಭಾರತೀಯ ಸಂಸ್ಕೃತಿಯ ಬಗ್ಗೆ ಆದರ-ಅಕ್ಕರೆಗಳು ಇರುವವರೆಲ್ಲರೂ ಅವರ ಕೃತಿಗಳನ್ನು ಅನುಸಂಧಾನಿಸಲೇಬೇಕಾಗುತ್ತದೆ. ನಮ್ಮ ಪರಂಪರೆ-ಸಂಸ್ಕೃತಿಗಳ ಬಗ್ಗೆ ಅವರಷ್ಟು ಆತ್ಮೀಯತೆಯಿಂದಲೂ ಸರಳವಾಗಿಯೂ ಸುಂದರವಾಗಿಯೂ ಬರೆದವರು ವಿರಳವೇ ಹೌದು. ನಿರಂತರ ಸಾರಸ್ವತತಪಸ್ಸು ಅವರ ವ್ಯಕ್ತಿತ್ವದ ಪ್ರಧಾನ ಲಕ್ಷಣವಾಗಿತ್ತು. ಈಗ ಅವರು ಭೌತಿಕವಾಗಿ ನಮ್ಮೊಂದಿಗೆ ಇದ್ದಿದ್ದರೆ 'ತಿರುಪತಿ ತಿಮ್ಮಪ್ಪ' ಇನ್ನಷ್ಟು ವಿವರಗಳಿಂದ ಕಂಗೊಳಿಸುತ್ತಿದ್ದ ಎನ್ನುವುದರಲ್ಲಿ ಸಂದೇಹವೇ ಇಲ್ಲ. ರಾಯರ ಯಶಃಕಾಯದ ಬೆಳಕು ಸದಾ ನಮ್ಮನ್ನು ಮುನ್ನಡೆಸುತ್ತಿರಲಿ.

ಈ ಕೃತಿಯನ್ನು ಪ್ರಕಟಿಸಲು ಸಂತೋಷದಿಂದ ಒಪ್ಪಿಗೆ ನೀಡಿದ ರಾಯರ ಕುಟುಂಬವರ್ಗಕ್ಕೆ ನಾವು ಕೃತಜ್ಞರಾಗಿದ್ದೇವೆ. ಪುಸ್ತಕವನ್ನು ಮುದ್ರಣಕ್ಕೆ ಸಿದ್ಧಗೊಳಿಸುವಲ್ಲಿ ಶ್ರೀ ರಜನೀಶ್ ಅವರು ಹೆಚ್ಚಿನ ಶ್ರಮವನ್ನು ಪಟ್ಟಿದ್ದಾರೆ. ಅವರು ಮುದ್ರಕರೂ ಹೌದು, ಅಭಿಜ್ಞಾನದ ಸದಸ್ಯರೂ ಹೌದು. ಅವರ ತಾಳ್ಮೆಗೂ ಕರ್ತವ್ಯಬದ್ಧತೆಗೂ ನಮನಗಳು. ಕರಡನ್ನು ತಿದ್ದುವಲ್ಲಿ 'ಅಭಿಜ್ಞಾನ'ಕ್ಕೆ ನೆರವಾದವರು ನಮ್ಮವರೇ ಆದ ಶ್ರೀ ಮಹೇಶ ಭಟ್ಟ ಆರ್. ಹಾರ್ಯಾಡಿ. ಅವರ ವಿದ್ವತ್ತಿನ ಬೆಳಕು ನಮ್ಮ ಕೃತಿಗಳ ಸತ್ಚಕ್ಕೆ ದೊಡ್ಡ ಕೊಡುಗೆಯನ್ನು ನೀಡುತ್ತಬಂದಿದೆ. ಈ ಕಾಯಕದಲ್ಲಿ ನಮಗೆ ನೆರವಾದವರು ಶ್ರೀ ಶ್ರೀನಿಧಿ ರಾಮಚಂದ್ರ ಮತ್ತು ಶ್ರೀ ಗೌತಮ್ ಎಂ. 'ಆಳ್ವಾರರ ನುಡಿಮತ್ತು'ಗಳಲ್ಲಿದ್ದ ಅಕ್ಷರದೋಷಗಳನ್ನು ತಿದ್ದಿಕೊಟ್ಟವರು ಶ್ರೀ ಏ. ನರಸಿಂಹನ್. ಕೆಲವೊಂದು ಸಂದೇಹಗಳನ್ನು ಪರಿಹರಿಸುವಲ್ಲಿ ನೆರವಾದವರು ಶ್ರೀ ಶೇಷ ಶಾಸ್ತ್ರೀ ಆರ್., ಶ್ರೀ ದೇವರಕೊಂಡಾರೆಡ್ಡಿ ಮತ್ತು ಶ್ರೀ ಮಂಜುನಾಥ ಕೊಳ್ಳೇಗಾಲ. ಈ ಎಲ್ಲ ಆತ್ಮೀಯ ವಿದ್ವಾಂಸರಿಗೂ ಅನಂತ ನಮನಗಳು.

ಈ ಕೃತಿಯ ಮುದ್ರಣದಲ್ಲಿ ತೊಡಗಿದ್ದಾಗ ನನಗೆ ಅನಾರೋಗ್ಯ ಒದಗಿ, ಓಡಾಡಲೂ ಆಗದಂಥ ಪರಿಸ್ಥಿತಿ ಎದುರಾಗಿತ್ತು. ಆಗ ನನಗೆ ಶ್ರೀ ಮೈಲಾರಿ ಕರಬೀರ ಅವರ ನೆರವು ದಕ್ಕದೇ ಇದ್ದಿದ್ದರೆ ನನ್ನ ಆರೋಗ್ಯಕ್ಕೂ ಪುಸ್ತಕದ ಮುದ್ರಣಕ್ಕೂ ತೊಂದರೆ ಒದಗುತ್ತಿತ್ತು. ಅವರಿಗೆ ನಾನು ಸರ್ವದಾ ಋಣಿ.

'ತಿಮ್ಮಪ್ಪ'ನ ಬಗ್ಗೆ ಹೆಚ್ಚಿನ ಜನರಿಗೆ ಮಾಹಿತಿಯನ್ನು ತಲಪಿಸುವಲ್ಲಿ ಶ್ರೀ ಕನಕರಾಜು ನೆರವಾಗಿದ್ದಾರೆ. ಹೀಗೆಯೇ ಹಲವರು ಸಹೃದಯರು ಹಲವು ರೀತಿಗಳಲ್ಲಿ ಈ ಮುದ್ರಣಕಾರ್ಯದಲ್ಲಿ ಜೊತೆಯಾಗಿದ್ದಾರೆ; ಹಲವರು ತಮ್ಮ ಹೆಸರನ್ನು ಉಲ್ಲೇಖಿಸಬಾರದೆಂದೂ ಆಗ್ರಹಿಸಿದ್ದಾರೆ. 'ಅಭಿಜ್ಞಾನ ಅಧ್ಯಯನಗೋಷ್ಠಿ'ಯ ಸದಸ್ಯರು ನಮ್ಮ ಎಲ್ಲ ಚಟುವಟಿಕೆಗಳಲ್ಲೂ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಹಲವು ವರ್ಷಗಳಿಂದ 'ಅಭಿಜ್ಞಾನ'ದ ಕಷ್ಟಗಳನ್ನು ಹಂಚಿಕೊಳ್ಳುತ್ತಿರುವ ಮಿತ್ರ ಶ್ರೀ ಬಿ. ಎಸ್. ಸೂರ್ಯಪ್ರಕಾಶ್ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದು ಕೇವಲ ಉಪಚಾರವಾದೀತಷ್ಟೆ. 'ಗಾಯತ್ರೀ ಪ್ರಿಂಟ್ಸ್'ನ ಶ್ರೀ ಸತೀಶ್ ಅವರಿಗೂ ನಮ್ಮ ನಮನಗಳು ಸಲ್ಲಬೇಕು. ನಮ್ಮ ಮೊದಲನೆಯ ಆವೃತ್ತಿಗೆ ಮುಖಪುಟವನ್ನು ರಚಿಸಿಕೊಟ್ಟಿದ್ದ ಮಿತ್ರ ಶ್ರೀ ಶ್ರೀಪಾದ ಅವರನ್ನೂ ಇಲ್ಲಿ ಸ್ಮರಿಸಿಕೊಳ್ಳುತ್ತಿರುವೆ. ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ನೆರವಾಗಿರುವ ಎಲ್ಲ ಕೈಗಳಿಗೂ ಕೈ ಜೋಡಿಸಿ ನಮಿಸುತ್ತಿದ್ದೇನೆ. ಕೊಂಡು ಓದುತ್ತಿರುವ ನಿಮಗೂ ನಮನಗಳು.

ಎಂದರೋ ಮಹಾನುಭಾವುಲು ಅಂದರಿಕಿ ವಂದನಮುಲು

12.5.2024
ಶಂಕರಜಯಂತಿ

ಎಸ್. ಸೂರ್ಯಪ್ರಕಾಶ ಪಂಡಿತ್
ಬೆಂಗಳೂರು
suryaprakashpandit@gmail.com

ಅಭಿಜ್ಞಾನದ ಮಾತು

Intellect is the temple of God.

—Meister Eckhart

(ಅರಿವೇ ಭಗವಂತನ ಆಲಯ.)

ದೃಷ್ಟ್ವಾ ದಿಶಿ ದಿಶಿ ಸ್ವೀಯಾನ್ ದಯಯಾ ಪಾಲಯನ್ನಿವ।
ವರ್ತತೇ ವಿಶ್ವತಶ್ಚಕ್ಷುಃ ವೇಂಕಟೇ ವೇಂಕಟೇಶ್ವರಃ॥

—ಶ್ರೀವಾದಿರಾಜ

(ಜಗತ್ತಿಗೇ ಕಣ್ಣಾಗಿರುವ ವೇಂಕಟೇಶ್ವರನು ತನ್ನವರನ್ನು ಕಾಪಾಡಬೇಕೆಂಬ ಕಾರುಣ್ಯದಿಂದ ಎಲ್ಲ ದಿಕ್ಕುಗಳಿಂದಲೂ ಅವರನ್ನು ಕಾಣುವಂತಾಗಲೆಂದು ವೇಂಕಟಪರ್ವತವನ್ನು ಏರಿ ನಿಂತಿದ್ದಾನೆ.)

ವೇಂಕಟಾದ್ರಿಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ।

—ಬ್ರಹ್ಮಾಂಡಪುರಾಣ

(ವೇಂಗಡಬೆಟ್ಟಕ್ಕೆ ಸಮನಾದ ಮತ್ತೊಂದು ನೆಲೆ ಇಡಿಯ ಸೃಷ್ಟಿಯಲ್ಲಿಯೇ ಇಲ್ಲ.)

ದೇವಮಂದಿರ ಭಜನೆ ಪೂಜೆ ಪ್ರಸಾದಗಳು
ಜೀವನದಲಂಕಾರ, ಮನಸಿನುದ್ಧಾರ।
ಭಾವವಂ ಕ್ಷುಲ್ಲಜಗದಿಂ ಬಿಡಿಸಿ ಮೇಲೊಯ್ದು-
ದಾವುದಾದೊಡಮೊಳಿತು—ಮಂಕುತಿಮ್ಮ॥

—ಡಿ. ವಿ. ಜಿ.

ಭಾರತೀಯಸಂಸ್ಕೃತಿಯಲ್ಲಿ ಗುಡಿ-ಗೋಪುರಗಳಿಗೆ ಮಹತ್ತ್ವದ ಸ್ಥಾನವಿದೆಯಷ್ಟೆ. ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕಕ್ಷೇತ್ರಗಳಲ್ಲಿ ದೇವಾಲಯಗಳು ನಿರ್ವಹಿಸುತ್ತ ಬಂದಿರುವ ಕಾರ್ಯವಂತಿಕೆಯಂತೂ ಅನನ್ಯ, ಅಪಾರ. ಇಂಥ ದೇವಾಲಯಗಳಲ್ಲಿ ತಿರುಮಲೆ ತಿರುಪತಿಗಿರುವ ಸ್ಥಾನ ವಿಶೇಷವಾದದ್ದು; ಇಲ್ಲಿಯ ದೇವತೆಯಾದ ತಿಮ್ಮಪ್ಪ ಸರ್ವಜನರ ಆರಾಧ್ಯದೈವ; ಜಾತಿ-ಮತ-ಪ್ರಾಂತ-ಭಾಷೆಯ ಗಡಿಗಳಿಗೆ ಅಂಟಿಕೊಳ್ಳದ ವಿಶ್ವವ್ಯಾಪಿ.

ವೇಂಗಡದ (ತಿರುಮಲೆ) ಮೇಲೆ ಶತಮಾನಗಳಿಂದ ನೆಲೆನಿಂತಿರುವ ತಿಮ್ಮಪ್ಪನ ಸೊಬಗಿಗೆ ತಲೆಬಾಗದಿರುವವರಾರು? ಅವನ ವೈಭವಕ್ಕೆ ಬೆರಗಾಗದಿರುವವರಾರು? ಅವನಿರುವ ಕ್ಷೇತ್ರದ ಪಾವಿತ್ರ್ಯಕ್ಕೆ ಶರಣಾಗದಿರುವವರಾರು? ಇನ್ನು, ಅವನ ಪ್ರಸಾದದ ರುಚಿಗೆ ಮನಸೋಲದಿರುವವರು ಇಲ್ಲವೇ ಇಲ್ಲವೆನ್ನಿ! ಇದು ಕೇವಲ ಒಂದು ಪ್ರದೇಶದ ಜನರಿಗಷ್ಟೇ ಅನ್ವಯವಾಗುವ ವಿವರಣೆಯೇನಲ್ಲ; ನಮ್ಮ ತಿಮ್ಮಪ್ಪ ಜಗದ್ವಿಖ್ಯಾತ.

ಅನಂತ ಆಕರ್ಷಣೆ-ಶಕ್ತಿಗಳಿಂದ ವಿರಾಜಿಸುತ್ತಿರುವ ತಿರುಪತಿ ತಿಮ್ಮಪ್ಪ, ಅವನನ್ನು ಸುತ್ತುವರೆದಿರುವ ಪುರಾಣ-ಕಥೆಗಳು, ಅವನು ನೆಲೆನಿಂತ ಬೆಟ್ಟ, ಅಲ್ಲಿಯ ಆಲಯ, ಆಲಯದ ವಾಸ್ತುಶಿಲ್ಪ, ಗುಡಿಯಲ್ಲಿ ನಡೆಯುವ ಅರ್ಚನೆ-ಪೂಜಾಪದ್ಧತಿಗಳು, ಅಲ್ಲಿ ಜರಗುವ ಉತ್ಸವ-ವೈಭವಗಳು, ಅದಕ್ಕೆ ಹೊಂದಿಕೊಂಡ ಆಗಮ-ಶಾಸ್ತ್ರ-ಸಾಹಿತ್ಯ-ಶಾಸನ—ಹೀಗೆ ಪ್ರತಿ ವಿವರವೂ ಆಸ್ತಿಕರ ಪಾಲಿಗೆ ಪರಮಪವಿತ್ರವೆನಿಸಿದೆ; ಆಸಕ್ತರ ಪಾಲಿಗೆ ಕುತೂಹಲವಿಷಯವೆನಿಸಿದೆ. ಒಮ್ಮೆಯಾದರೂ ತಿಮ್ಮಪ್ಪನನ್ನೂ, ಅವನ ಬೆಟ್ಟವನ್ನೂ ಕಾಣಬೇಕೆಂಬ ಹಂಬಲವಿರದ ಜನಸಾಮಾನ್ಯನನ್ನು ಕಾಣುವುದು ಕಷ್ಟವೆನ್ನಿ.

ಬಹಳ ಹಿಂದಿನ ದಿನಗಳಿಂದಲೂ ತಿಮ್ಮಪ್ಪನಿಗೂ, ಅವನ ನೆಲೆಗೂ ಆದರ ಸಲ್ಲುತ್ತಬಂದಿದೆಯಷ್ಟೆ. 'ವೇಂಗಡಬೆಟ್ಟಕ್ಕೆ ಮಿಗಿಲಾದ ಮತ್ತೊಂದು ತಾಣವನ್ನು ಈ ಜಗತ್ತಿನಲ್ಲಿಯೇ ಕಾಣಲಾರೆವು'—ಎಂಬುದು ಬ್ರಹ್ಮಾಂಡಪುರಾಣದ ಒಕ್ಕಣೆ. ಈ ಮಾತಿಗೆ ಸ್ವಲ್ಪವೂ ಕುಂದುಬಾರದಂತೆ ನಮ್ಮ ಶ್ರದ್ಧಾಳುಗಳು ತಿಮ್ಮಪ್ಪನಿಗೂ ತಿರುಮಲೆಗೂ ನಡೆದುಕೊಂಡಿದ್ದಾರೆ, ನಡೆದುಕೊಳ್ಳುತ್ತಲೂ ಇದ್ದಾರೆ. ತಿಮ್ಮಪ್ಪನಲ್ಲಿ ಎಷ್ಟು ಭಯ-ಭಕ್ತಿಗಳುಂಟೊ ಅಷ್ಟೇ ಭಯ-ಭಕ್ತಿಗಳು ಅವನ ಬೆಟ್ಟವನ್ನು ಕುರಿತೂ ಉಂಟು. ತಿಮ್ಮಪ್ಪ ಬೇರೆ ಅಲ್ಲ , ವೇಂಗಡದ ಬೆಟ್ಟ ಬೇರೆ ಅಲ್ಲ—ಎಂಬ ಸಮೀಕರಣವು ಭಕ್ತರ ಹೃದಯದಲ್ಲಿ ಆಳವಾಗಿ ನೆಲೆಯೂರಿದೆ. 'ಭಗವಂತನ ಅನಂತಗುಣಗಳೆಲ್ಲವೂ ಈ ಬೆಟ್ಟದಲ್ಲಿಯೇ ಅಡಗಿದೆ' (**ಯಾವದುಕ್ತಾ ಭಗವತಃ ಕಲ್ಯಾಣಗುಣರಾಶಯಃ। ತಾವಂತೋಽಸ್ಯ ಗಿರೇಃ ಸಂತಿ ಗುಣಾಃ ಪರಮಪಾವನಾಃ॥**); 'ತಿರುಮಲಗಿರಿಯನ್ನು ಪ್ರದಕ್ಷಿಣೆ ಮಾಡಿದರೆ ಸಾಕು ಇಡಿಯ ಭೂಮಿಯನ್ನು ಪ್ರದಕ್ಷಿಣೆ ಮಾಡಿದಷ್ಟು ಪುಣ್ಯ;' (**ವೇಂಕಟಾದ್ರಿಂ ನರೋ ಗತ್ವಾ ಕುರ್ಯಾತ್ ತತ್ರ ಪ್ರದಕ್ಷಿಣಮ್। ಭೂಮಿಪ್ರದಕ್ಷಿಣೇ ಪುಣ್ಯಂ ಯತ್ ತತ್ಪುಣ್ಯಮವಾಪ್ನುಯಾತ್ ॥**)—ಇಂಥ ಶ್ರದ್ಧೆ-ನಂಬಿಕೆಗಳು ಅನಾದಿಕಾಲದಿಂದಲೂ ಜನಮಾನಸದ ಮೇಲೆ ಪ್ರಭಾವ ಬೀರುತ್ತ ಬಂದಿವೆ. ಇಷ್ಟಕ್ಕೂ ಈ ಬೆಟ್ಟದ ಹಿರಿಮೆಯಾದರೂ ಏನು? ಇದು ಎಲ್ಲ ಪಾಪಗಳನ್ನೂ ಸುಡುತ್ತದೆ ಎಂದೇ ಇದಕ್ಕೆ ಪ್ರಾಶಸ್ತ್ಯ. 'ಎಲ್ಲ ಪಾಪಗಳು ಒಂದಾಗಿ "ವೇಂ" ಎಂದಾಗುತ್ತದೆ; ಅವನ್ನು ಸುಡುವುದೇ "ಕಟ". ಹೀಗೆ ಪಾಪವನ್ನು ಸುಡುವ ಬೆಟ್ಟವೇ ವೇಂಕಟಾಚಲ' (**ಸರ್ವಪಾಪಾನಿ ವೇಂ ಪ್ರಾಹುಃ ಕಟಸ್ತದ್ದಾಹ ಉಚ್ಯತೇ। ತಸ್ಮಾದ್ ವೇಂಕಟಶೈಲೋಽಯಂ ಲೋಕೇ ಖ್ಯಾತಿಂ ಗಮಿಷ್ಯತಿ ॥**).

ಒಟ್ಟಿನಲ್ಲಿ ಹೇಳುವುದಾದರೆ, ತಿರುಪತಿ ತಿಮ್ಮಪ್ಪ ನೂರಾರು ವರ್ಷಗಳಿಂದ ಭಾರತೀಯಸಂಸ್ಕೃತಿಪ್ರವಾಹದ ಒಂದು ಪ್ರಧಾನಸ್ರೋತವೆನಿಸಿದ್ದಾನೆ. ಇಂಥ ದೈವ ತಿಮ್ಮಪ್ಪನನ್ನೂ, ಆತನ ಗುಡಿ ವೇಂಗಡವನ್ನೂ ಹಲವು ಧಾರೆಗಳಲ್ಲಿ ವಿವರಿಸುವ ಬೃಹದ್ಗ್ರಂಥವೇ ಪ್ರಕೃತಕೃತಿ **ತಿರುಪತಿ ತಿಮ್ಮಪ್ಪ**.

ಈ ಮಹಾಕೃತಿಯ ಲೇಖಕರು ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ವೇದಾಂತನಿಧಿ, ಸಂಗೀತಕಲಾರತ್ನ, ವಾಚಸ್ಪತಿ ಪ್ರೊ॥ ಸಾ. ಕೃ. ರಾಮಚಂದ್ರರಾಯರು.

ಸಂಸ್ಕೃತ, ಕನ್ನಡ, ಇಂಗ್ಲಿಷ್, ಪಾಲಿ, ಅರ್ಧಮಾಗಧಿ, ಟಿಬೆಟನ್, ತೆಲುಗು, ತಮಿಳು ಮುಂತಾದ ಭಾಷೆಗಳಲ್ಲಿ ಪರಿಣತರೂ, ಇನ್ನೂರಕ್ಕೂ ಹೆಚ್ಚು ಕೃತಿಗಳ ಕರ್ತೃಗಳೂ, ವೇದ - ವೇದಾಂತ - ಬೌದ್ಧ - ಜೈನ - ಆಗಮ - ತಂತ್ರ - ಶಿಲ್ಪ - ನಾಟ್ಯ - ಚಿತ್ರ - ಸಂಗೀತ - ಆಯುರ್ವೇದ ಮುಂತಾದ ಹತ್ತಾರು ವಿಷಯಗಳಲ್ಲಿ ತಜ್ಞರೂ ಆಗಿದ್ದ ರಾಯರು ನಾಡು ಕಂಡಿರುವ ಶ್ರೇಷ್ಠ ವಿದ್ವಾಂಸರಲ್ಲಿ ಒಬ್ಬರು.

ಪ್ರಕೃತಕೃತಿಯನ್ನು ರಾಯರು ಹಲವಾರು ಆಕರಗಳಿಂದ ವಿಷಯಸಂಗ್ರಹವನ್ನು ಮಾಡಿ ರಚಿಸಿದ್ದಾರೆ. ಹತ್ತಾರು ವರ್ಷಗಳ ಅವರ ಸಾರಸ್ವತತಪಸ್ಸಿನ ಫಲ ಈ ಕೃತಿ. ಇದು ಮೊದಲ ಬಾರಿ ಪ್ರಕಟವಾದಾಗ ಇದಕ್ಕೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಲಭಿಸಿತ್ತು. ಇದು ಈಗ ಕೇವಲ ಮರುಮುದ್ರಣವಲ್ಲ ; ಮೊದಲ ಮುದ್ರಣಕ್ಕೂ ಈಗಿನದಕ್ಕೂ ತುಂಬ ಬೆಳವಣಿಗೆಯಾಗಿರುವುದು ಎದ್ದುಕಾಣುವಂಥದೇ. ಅಂತಿಮ ಕರಡುಪ್ರತಿಯಲ್ಲೂ ರಾಯರು ಹತ್ತುಹಲವು ಪುಟಗಳಷ್ಟು ವಿಷಯವನ್ನು ಸೇರಿಸಿದರು. ನಿರಂತರ ಅಧ್ಯಯನ ಅವರ ಬಾಳಿನ ಒಂದು ಅವಿಭಾಜ್ಯ ಅಂಗವಾಗಿದ್ದಿತು. ವಿದ್ಯೆಯ ಸಂಗ್ರಹಣ ಮತ್ತು ಅದರ ವಿತರಣ—ಅವರು ಜೀವನದುದ್ದಕ್ಕೂ ನಡೆಸಿಕೊಂಡು ಬಂದ ಕಾಯಕ. ಹೀಗೆ **ತಿರುಪತಿ ತಿಮ್ಮಪ್ಪನೂ** ಕೂಡ ದಿನದಿಂದ ದಿನಕ್ಕೆ ಬೆಳೆಯುತ್ತಲೇ ಬಂದ. ಹೀಗಿದ್ದರೂ ರಾಯರಿಗೆ ಪೂರ್ಣಸಮಾಧಾನವಾಗಿರಲಿಲ್ಲವೆನ್ನಬಹುದು. ತಿಮ್ಮಪ್ಪನ ಗುಡಿಗೆ ಸೇರಿದಂತೆ ಇತ್ತೀಚೆಗೆ ಕೆಲವೊಂದು ಬದಲಾವಣೆಗಳು ನಡೆದಿದ್ದುವು; ಅವನ್ನೂ ಈ ಕೃತಿಯಲ್ಲಿ ಕಾಣಿಸಬೇಕೆಂಬುದು ಅವರ ತವಕವಾಗಿದ್ದಿತು. ಆದರೆ ಇದನ್ನು ಮಾಡಗೊಡಲು ಅವರ ಅನಾರೋಗ್ಯ ಬಿಡಲಿಲ್ಲ. 'ಒಂದೆರಡು ತಿಂಗಳ ಬಳಿಕ ಈ ವಿವರಗಳನ್ನೂ ಸೇರಿಸೋಣ'—ಎಂದಿದ್ದರು; ಆದರೆ ನಡೆದದ್ದೇ ಬೇರೆ.

ರಾಯರ ಅನುಪಸ್ಥಿತಿಯಲ್ಲಿ **ತಿರುಪತಿ ತಿಮ್ಮಪ್ಪ** ಲೋಕಾರ್ಪಣೆಯಾಗಿದೆ; ಅವರು ಭೌತಿಕವಾಗಿ ಕಣ್ಮರೆಯಾಗಿದ್ದರೂ ಒಂದು ತತ್ತ್ವವಾಗಿ ನಮ್ಮ ಮುಂದೆ ಎಂದೂ ಬೆಳಗುತ್ತಿರುತ್ತಾರೆ ಎಂಬ ವಿಶ್ವಾಸ ನಮ್ಮದು. ಅವರು ಹಿಮ್ಮರಳಿದ್ದು ನಮಗೆ ಒಂದು ದೊಡ್ಡ ಖಾಲಿತನವನ್ನು ಸೃಷ್ಟಿಸಿದೆ. ಅವರ ನೆರಳಿನಲ್ಲಿ 'ಅಭಿಜ್ಞಾನ' ಕಂಡಿದ್ದ ಕನಸುಗಳು ಹತ್ತುಹಲವು; ಆದರೆ ಈಗ ಅದೆಲ್ಲ ಬರಿಯ ನೆನಪುಗಳಷ್ಟೆ. ನಮಗೊಂದು ದಿಕ್ಕಾಗಿದ್ದ ಆ ಋಷಿಚೇತನಕ್ಕೆ ಕೈಮುಗಿಯುವುದಷ್ಟೆ ನಮಗೆ ಗೊತ್ತಿರುವ ದಾರಿ.

ಪ್ರಾಯಶಃ ವೇಂಗಡದ ಗುಡಿಯ ಬಗ್ಗೆ ಶ್ರದ್ಧೆ-ಭಕ್ತಿ-ಗೌರವಗಳು ಮೂಡಿಕೊಂಡ ದಿನದಿಂದಲೇ ಇದರ ಬಗ್ಗೆ ಅನಾದರ ತೋರುವ, ಸ್ವಾರ್ಥಕ್ಕೆ ಇದನ್ನು ಉಪಯೋಗಿಸಿ ಕೊಳ್ಳುವ ವಿಕೃತಪರಂಪರೆಗಳೂ ಹುಟ್ಟಿಕೊಂಡವು ಎಂದು ತೋರುತ್ತದೆ. ಗುಡಿಯ ಸೌಂದರ್ಯವನ್ನೂ ಪಾವಿತ್ರ್ಯವನ್ನೂ ಮೌಲ್ಯವನ್ನೂ ನಾಶಪಡಿಸುವ ಹುನ್ನಾರಗಳು ನೂರಾರು ವರ್ಷಗಳಿಂದ ರಾಜಕೀಯ, ಆರ್ಥಿಕ, ಮತದುರಭಿಮಾನದ ಹಿನ್ನೆಲೆಗಳಿಂದ ಧಾರಾಳವಾಗಿಯೇ ನಡೆದುಬಂದಿವೆ. ಇಂದೂ ಕೂಡ ಇದು ಮುಂದುವರೆದಿದೆ; ಮತ್ತೂ ತೀವ್ರವಾಗಿ ಸಾಗಿದೆಯೆನ್ನಬಹುದು. ಇಂಥ ಆಘಾತದ ಸನ್ನಿವೇಶದಲ್ಲಿ ಈ

ಕೃತಿ ಪ್ರಕಟವಾಗುತ್ತಿದೆ. ಈ ಸಂಸ್ಕೃತಿಭಂಜಕರ ಅನೀತಿಗಳನ್ನು ಕಂಡಾಗ ನೆನಪಾಗುವುದು ತ್ಯಾಗರಾಜಸ್ವಾಮಿಗಳ ಒಂದು ಮಾತು—

ತೆರ ತೀಯಗರಾದ? ಲೋನಿ
ತಿರುಪತಿ ವೇಂಕಟರಮಣ ಮತ್ಸರಮನು

ಈ ಸ್ವಾರ್ಥಶಕ್ತಿಗಳ ಕಲ್ಮಷಮನಸ್ಸುಗಳ ಪದರಗಳನ್ನು ತಿಮ್ಮಪ್ಪ ಕತ್ತರಿಸಿಹಾಕಲಿ; ವಿಕೃತಗಳನ್ನು ಎದುರಿಸಲು ಅಗತ್ಯವಿರುವ ಶಕ್ತಿ-ಯುಕ್ತಿಗಳನ್ನು ಅವನು ಜನಮಾನಸಕ್ಕೆ ಒದಗಿಸಲಿ ಎಂದು ಹಾರೈಸೋಣವೆ?

ರೂಪಂ ರೂಪವಿವರ್ಜಿತಸ್ಯ ಭವತೋ ಧ್ಯಾನೇನ ಯತ್ಕಲ್ಪಿತಂ
ಸ್ತುತ್ಯಾನಿರ್ವಚನೀಯತಾಽಖಿಲಗುರೋ ದೂರೀಕೃತಾ ಯನ್ಮಯಾ।
ವ್ಯಾಪಿತ್ವಂ ಚ ನಿರಾಕೃತಂ ಭಗವತೋ ಯತ್ತೀರ್ಥಯಾತ್ರಾದಿನಾ
ಕ್ಷಂತವ್ಯಂ ಜಗದೀಶ! ಯದ್ವಿಕಲತಾದೋಷತ್ರಯಂ ಮತ್ಕೃತಮ್॥

—ಶ್ರೀಶಂಕರಾಚಾರ್ಯ

(ಜಗದೊಡೆಯ! ನೀನು ಎಲ್ಲ ರೂಪಗಳಿಗೂ ಮೀರಿದವನು; ಆದರೂ ನಾನು ನಿನಗೊಂದು ರೂಪವನ್ನು ಕಲ್ಪಿಸಿದೆ. ನೀನು ಯಾವ ಮಾತುಗಳಿಗೂ ನಿಲುಕದವನು; ಆದರೂ ನಾನು ನಿನ್ನನ್ನು ಮಾತುಗಳಿಗೆ ಸಿಲುಕಿಸಿದೆ. ನೀನು ಎಲ್ಲೆಲ್ಲೂ ಇರುವವನು; ಆದರೂ ನಾನು ನಿನ್ನನ್ನು ತೀರ್ಥಕ್ಷೇತ್ರಗಳಿಗೆ ಸಂಕೋಚಿಸಿದೆ. ಹೀಗೆ ಮನಸ್ಸು, ಮಾತು, ದೇಹ—ಈ ಮೂರು ನೆಲೆಗಳಿಂದ ಆಗಿರುವ ನನ್ನ ತಪ್ಪುಗಳನ್ನು ಮನ್ನಿಸು.)

2-05-2006
ಶಂಕರಜಯಂತಿ

ಎಸ್. ಸೂರ್ಯಪ್ರಕಾಶ ಪಂಡಿತ್
ಸಂಪಾದಕ

ಮೊದಲ ಮಾತು

ಈಗ ತಿರುಮಲೆಯೆಂದು ಹೆಸರಾಗಿರುವ ವೇಂಗಡಬೆಟ್ಟದ ಮೇಲೆ ನಿಂತಿರುವ ಗುಡಿ ಬಹುಕಾಲದಿಂದ ಬಹುಮಟ್ಟಿಗೆ ಜನಪ್ರೀತಿಯನ್ನು ಪಡೆದುಕೊಂಡಿದೆ. ಯಾತ್ರೆಯ ಬಗೆಬಗೆಯ ತೊಂದರೆಗಳನ್ನೆಲ್ಲ ತಾಳಿಕೊಂಡು ಜನ ಅಲ್ಲಿಗೆ ಹೋಗಿಬರುತ್ತಿರುವುದು ಸಾವಿರಾರು ವರ್ಷಗಳಿಂದ ಬೆಳೆದು ಬಂದ ಪಾರಿಪಾಟಿ. ಆ ದೈವವನ್ನು ನಂಬಿ ಕೊಂಡವರು, ಅದಕ್ಕೆ ಹರಕೆ ಹೊತ್ತವರು, ಅದನ್ನು ಒಲಿಸಿಕೊಳ್ಳಲು ಹಲವಾರು ಸೇವೆಗಳನ್ನು ಕೈಗೊಳ್ಳುವವರು, ಅದನ್ನು ಮನೆದೇವರಾಗಿ ಉಳ್ಳವರು ದಕ್ಷಿಣದೇಶದಲ್ಲೂ ಉತ್ತರದ ಕಡೆಯೂ ಎಲ್ಲೆಲ್ಲಿಯೂ ಕಾಣುತ್ತಾರೆ. ಇಷ್ಟೊಂದು ಜನಪ್ರೀತಿಯ ಗುಟ್ಟೇನು? ಬೇರೆ ಯಾವ ಗುಡಿಗೂ ಇಲ್ಲದಿರುವ ಕೋಡು ಈ ಗುಡಿಗೆ ಮೂಡಿರುವುದು ಹೇಗೆ?

ಈ ಸಮಸ್ಯೆಯನ್ನು ಬಗೆಹರಿಸುವುದು ಸುಲಭವಲ್ಲ. ಈ ಬೆಟ್ಟವು ಮೇರು ಪರ್ವತದ ಒಂದು ಭಾಗವೆಂದಾಗಲೀ, ಗುಡಿಯ ವಿಮಾನವು ವೈಕುಂಠದಿಂದಲೇ ಇಳಿದು ಬಂದುದೆಂದಾಗಲೀ, ಗರ್ಭಗುಡಿಯಲ್ಲಿರುವ ದೈವವು ವೈಕುಂಠವನ್ನು ಬಿಟ್ಟು ಇಲ್ಲಿ ಕಾಣಿಸಿಕೊಂಡಿತೆಂದಾಗಲೀ ನಂಬಿಕೆಗಳು ಈ ಜನಪ್ರೀತಿಗೆ ಕಾರಣವಾಗಲಾರವು. ಇಂಥ ಕಥೆಗಳನ್ನು ಯಾವ ಕ್ಷೇತ್ರದಲ್ಲಿಯೂ ಕೇಳಬಹುದು. ಯಾವ ಕಾಲದಲ್ಲಿಯಾಗಲೀ ಬುದ್ಧಿವಂತಜನರು ಈ ಕಥೆಗಳಿಗೆ ಮನಸೋತಿದ್ದರೆಂದು ಹೇಳುವುದಾಗದು. ಸ್ಥಳದ ಜನಪ್ರೀತಿಯನ್ನು ಗಮನಿಸಿ ಈ ಕಥೆಗಳು ಎದ್ದುಕೊಂಡುವು; ಈ ಕಥೆಗಳಿಂದ ಜನಪ್ರೀತಿ ಒದಗಲಿಲ್ಲ. ಮತ್ತೆ, ಸಾವಿರಾರು ವರ್ಷಗಳಿಂದ ದಿನದಿನವೂ ಸಾವಿರಾರು ಜನ ಈ ಬೆಟ್ಟವನ್ನೇರಿ ಗುಡಿಯನ್ನು ಹೊಕ್ಕು ದೈವವನ್ನು ನೋಡಿಬರುತ್ತಿರುವುದರ ಗುಟ್ಟೇನು? ಎತ್ತರವಾದ ಜಾಗ, ಅಲೌಕಿಕ-ಸನ್ನಿಧಾನವುಳ್ಳ ದೈವ ಎನ್ನುವುದನ್ನು ಬಿಟ್ಟರೂ, ಇತಿಹಾಸ, ಆಗಮ, ಧರ್ಮ, ಸಂಸ್ಕೃತಿ ಮೊದಲಾದ ಹಲವು ವಿವರಗಳು ಇಲ್ಲಿ ಕಲೆತಿವೆ.

ಇದರ ಹಳಮೆ, ಹಿರಿಮೆ, ಜನಪ್ರೀತಿಗಳನ್ನು ಕುರಿತು ಹದಿನೆಂಟು ಪುರಾಣಗಳೂ ಹಲವಾರು ಕಥೆಗಳನ್ನು ಹೆಣೆದಿವೆ. ಆದರೆ ಪುರಾಣಗಳು ಹೇಳುವುದಕ್ಕಿಂತ ಹೆಚ್ಚು ಸ್ವಾರಸ್ಯವಾದ, ಸೋಜಿಗವೆನಿಸುವ ವಿವರಗಳು ಇತಿಹಾಸದ ಹಾಳೆಗಳಲ್ಲಿ ಕಾಣ ಸಿಗುತ್ತವೆ. ಕಾಲಕಾಲಕ್ಕೆ ಗುಡಿಗೆ ಸಂಬಂಧಪಟ್ಟಂತೆ ಮೂಡಿಕೊಂಡ ಶಾಸನಗಳೂ ಗ್ರಂಥಗಳೂ, ಜನರಲ್ಲಿ ಬಳಕೆಗೆ ಬಂದ ಪ್ರಸಂಗಗಳೂ, ಜಾನಪದಪ್ರಕ್ರಿಯೆಗಳೂ ಇಂಥ ವಿವರಗಳನ್ನು ಒದಗಿಸುತ್ತವೆ. ಈ ವಿವರಗಳನ್ನೆಲ್ಲ ಒಂದೆಡೆ ಕೂಡಿಸುವ ಹವಣಿಕೆ ನನ್ನದು.

ಇಂಥ ಹವಣಿಕೆಯನ್ನು ಹಿಂದೆ ಯಾರೂ ಮಾಡಿರಲಿಲ್ಲವೆಂದಲ್ಲ, ಎರಡು ಪ್ರಯತ್ನಗಳಾದರೂ ನಡೆದಿವೆ. ಮೊದಲನೆಯದು ಪಂಡಿತಮಂಡಲಿಯಲ್ಲಿ ಅಗ್ರಗಣ್ಯ ರೆಂದು ಹೆಸರಾಗಿದ್ದ ಡಾ॥ ಎಸ್. ಕೃಷ್ಣಸ್ವಾಮಿ ಅಯ್ಯಂಗಾರರು ಕೈಗೊಂಡಿದ್ದು; 'ತಿರುಪತಿ

ಇತಿಹಾಸ'ವೆಂದು ಎರಡು ಸಂಪುಟಗಳನ್ನು ಅವರು ಬರೆದು ಐತಿಹಾಸಿಕ ವಿವರಗಳನ್ನೆಲ್ಲ ಕಲೆಹಾಕಿದರು. ಆದರೆ ಅವರ ಗಮನವೆಲ್ಲ ಗುಡಿಯ ನೆರೆಹೊರೆಯಲ್ಲಿ ಜರುಗಿದ ಚಾರಿತ್ರಿಕಪ್ರಸಂಗಗಳ ಮೇಲೆ. ಬೆಟ್ಟ, ಗುಡಿ, ದೈವ—ಈ ತ್ರಿಪುಟಿಯ ಮೇಲೆ ಅವರ ಗಮನ ಅಷ್ಟಾಗಿ ಹರಿಯಲಿಲ್ಲ. ಎರಡನೆಯ ಪ್ರಯತ್ನದಲ್ಲಿ ಈ ಇತಿಹಾಸದ ಹೊರೆ ಇರದೆ ಗುಡಿಯ ಮೇಲೆ ಗಮನ ಹೆಚ್ಚಾಗಿ ಬಿದ್ದಿತು. ಗುಡಿಯ ಪ್ರಥಮಾಚಾರ್ಯ ಪುರುಷರ ಪರಂಪರೆಗೆ ಸೇರಿದ ಟಿ. ಕೆ. ಟಿ. ವೀರರಾಘವಾಚಾರ್ಯರು ಎರಡು ಸಂಪುಟಗಳಲ್ಲಿ ಇದೇ ಹೆಸರಿನಿಂದ ಬರೆದ ಗ್ರಂಥದಲ್ಲಿ (1953) ಇತಿಹಾಸ, ಆಗಮ, ಪದ್ಧತಿಗಳು—ಇವನ್ನು ಕುರಿತ ವಿವರಗಳು ದೊರೆಯುತ್ತವೆ.

ವೀರರಾಘವಾಚಾರ್ಯರ ಬರಹದಲ್ಲಿ ಗುಡಿಯ ಬಗ್ಗೆ ಆದರವೂ ಇದೆ, ವಿವರಗಳನ್ನು ಕುರಿತು ತೆರೆದ ಮನಸ್ಸಿನ ಪರಿಶೀಲನೆಯೂ ಇದೆ. ಮನೆತನದಲ್ಲಿ ವೈದಿಕರಾದರೂ ಅವರು ಲೌಕಿಕವೃತ್ತಿಯಲ್ಲಿದ್ದವರು (ಎಂಜಿನಿಯರರು). ಕುರುಡುನಂಬಿಕೆಗಳನ್ನು ಹರಿಯಬಿಡದೆ, ಹರಿತವಾದ ವಿಮರ್ಶೆಯ ಮೂಸೆಯಲ್ಲಿ ಎಲ್ಲ ವಿವರಗಳನ್ನು ಪುಟವಿಟ್ಟು ನೋಡಿದ್ದಾರೆ. ಗುಡಿಗೆ ಸೇರಿದವರಾದರೂ ಅಲ್ಲಿ ನಡೆಯುವ ಅನ್ಯಾಯಗಳನ್ನು ಅಂಜದೆ ಅಳುಕದೆ ಎತ್ತಿ ಆಡಿದ್ದಾರೆ. ಅವರ ಬರಹದಲ್ಲಿ ಸೊಗಸೂ ರುಚಿಯೂ ಇವೆ. ಆದರೆ ವಿವರಗಳ ಹರವಿನಲ್ಲಿ ಒಟ್ಟಾರೆ ಚಿತ್ರವನ್ನು ಕಾಣಿಸಲಾರದೆ ಹೋಗಿದ್ದಾರೆ. ಒಂದು ನಿರ್ದಿಷ್ಟವಾದ ಚೌಕಟ್ಟನ್ನು ಒದಗಿಸದೆ ಬಿಟ್ಟಿದ್ದಾರೆ. ತಮ್ಮ ಗ್ರಂಥದ ಮೂರನೆಯ ಭಾಗವನ್ನು ಸಿದ್ಧಪಡಿಸುತ್ತಿದ್ದ ಸಮಯದಲ್ಲೇ ತೀರಿಕೊಂಡರೆಂದು ಕೇಳಿದ್ದೇನೆ. ಬಹುಶಃ, ಅಪೂರ್ಣವಾಗಿ ಉಳಿದ ಈ ಪ್ರಯತ್ನದಲ್ಲಿ ಚೌಕಟ್ಟು ಮೂಡುತ್ತಿತ್ತೋ ಏನೋ?

ಅಂತೂ, ಎರಡೂ ಪ್ರಯತ್ನಗಳು ಅಷ್ಟಾಗಿ ಫಲಕಾರಿಗಳಾಗಲಿಲ್ಲ. ಉಳಿದಂತೆ ಕೆಲವು ಪ್ರಯತ್ನಗಳು ನಡೆದಿವೆ. ಆದರೆ ಇವುಗಳಲ್ಲಿ ಯಾವುದೂ ಗಣನೆಗೆ ತೆಗೆದುಕೊಳ್ಳುವಂಥದಲ್ಲ. ಬಹುಮಟ್ಟಿಗೆ ಭಕ್ತಿಯ ಭರದಲ್ಲಿ ಅಸಂಬದ್ಧವಾಗಿ, ವಿಮರ್ಶೆಯ ಸೋಂಕೂ ಇಲ್ಲದೆ, ಸಿದ್ಧವಾದುವೇ. ಇಲ್ಲವಾದರೆ, ಕೇವಲ ಪ್ರವಾಸಕಥನಗಳು; ಎಲ್ಲರೂ ನೋಡುವ ವಿವರಗಳ ನಿರೂಪಣೆಗಳಷ್ಟೆ. ಅವನ್ನೂ ಬಿಟ್ಟರೆ, ಬರಿಯ ಪುರಾಣಕಥೆಗಳು. ಇತಿಹಾಸಕ್ಕೆ ಒಪ್ಪಾಗಿ, ಆಗಮಕ್ಕೆ ಓರಣವಾಗಿ, ಜಾನಪದ ನೆಲೆಗೆ ಅನುಕೂಲವಾಗಿ, ಸಾಹಿತ್ಯಕ್ಕೆ ಹೊಂದಿಕೊಂಡಂತೆ ಬೆಟ್ಟ-ಗುಡಿ-ದೈವ—ಈ ತ್ರಿಪುಟಿಯನ್ನು ಪರಿಶೀಲಿಸಬೇಕಾದ ಅಗತ್ಯವಿದೆ. ಸ್ಪಷ್ಟವಾದ, ಸಾರ್ಥಕವಾದ ಒಂದು ಚೌಕಟ್ಟನ್ನು ಒದಗಿಸಬೇಕಾದದ್ದಿದೆ. ಹಾಗಾದರೆ, ಜನಪ್ರೀತಿಯ ಗುಟ್ಟೇನೆಂಬುದು ತಿಳಿದುಬಂದೀತು.

ನನ್ನ ಹವಣಿಕೆಯಲ್ಲಿ ಇದು ಕೈಗೂಡಿದೆಯೆಂದು ನನಗನಿಸಿಲ್ಲ. ಆದರೆ ಚೌಕಟ್ಟಿನ ಅಗತ್ಯವನ್ನು ಅರಿತುಕೊಂಡು ವಿವರಗಳನ್ನು ಪಡೆದುಕೊಂಡಿದ್ದೇನೆ, ಜೋಡಿಸಿದ್ದೇನೆ. ಹರಿದು ಹರಡಿಕೊಂಡಿರುವ ಮುತ್ತುಗಳನ್ನು ಹೆಕ್ಕಿಕೊಂಡು ಮಾಲೆಯೊಂದನ್ನು ಕಟ್ಟಿಡಲು ಯತ್ನಿಸಿದ್ದೇನೆ. ವಿವರಗಳ ಆಶಯ, ಇಂಗಿತ, ಹಿನ್ನೆಲೆ, ಯುಗಧರ್ಮ, ಪ್ರಾದೇಶಿಕ

ಪ್ರವೃತ್ತಿಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದೇನೆ. ಈ ಕೆಲಸ ನೇರವೂ ಅಲ್ಲ, ಸುಲಭವೂ ಅಲ್ಲ. ಕಲ್ಪನೆಗಳ ಕಾಡಿನಲ್ಲಿ, ವಿವರಗಳ ಸುರಿಮಳೆಯಲ್ಲಿ, ಊಹಾಮೃಗದ ಬೆನ್ನೇರಿ (ಅಥವಾ ಬೆನ್ನಟ್ಟಿ) ಸಾಗಬೇಕಾಗುತ್ತದೆ. ಇಲ್ಲಿ ಎಡವದೆ ನಡೆಯುವುದಾಗದು. ಹೀಗಾಗಿ ನನ್ನ ಯತ್ನ ಸಫಲವಾಯಿತು ಎಂಬ ವಿಶ್ವಾಸ ನನಗಿಲ್ಲದಿದ್ದರೂ ನನ್ನ ಶಕ್ತಿಯಿದ್ದಷ್ಟು, ನನ್ನ ವ್ಯವಸಾಯ ನಡೆದಷ್ಟು, ನನಗೆ ತೋರಿದಂಥ ಚೌಕಟ್ಟನ್ನು ಇಲ್ಲಿ ಮೂಡಿಸಲೆತ್ನಿಸಿದ್ದೇನೆ.

ಇದರಲ್ಲಿ ನನಗೆ ನೆರವಾದ ಆಕರಗಳು ಹಲವಾರು. ಗುಡಿಯವರೇ ಗುಡಿಗೆ ಸಂಬಂಧಿಸಿದ ತಮಿಳು, ತೆಲುಗು, ಕನ್ನಡ, ಸಂಸ್ಕೃತಶಾಸನಗಳನ್ನೆಲ್ಲ ಐದಾರು ಸಂಪುಟಗಳಲ್ಲಿ ಪ್ರಕಟಿಸಿದ್ದಾರೆ. ಗುಡಿಯ ವಿಚಾರಣಕರ್ತನಾಗಿದ್ದ ಮಹಂತ ಪ್ರಯಾಗ ದಾಸನು 1930ರಲ್ಲಿಯೇ ಈ ಮಾಲೆಯನ್ನು ಆರಂಭಿಸಿದ. ಸಾಧು-ಸುಬ್ರಹ್ಮಣ್ಯಶಾಸ್ತ್ರಿ ಎಂಬ ತಜ್ಞರಿಂದ ಸುದೀರ್ಘವಾದ ವರದಿಯೊಂದನ್ನು ಬರೆಯಿಸಿ ಅದರಲ್ಲಿ ಗುಡಿಯ ಇತಿಹಾಸ, ವಾಸ್ತುಶಿಲ್ಪ, ಉತ್ಸವಗಳ ವಿಚಾರವಾಗಿ ನಿಖರವಾದ ವಿವರಗಳನ್ನು ಪ್ರಕಟಪಡಿಸಿದ. ಈ ಸಂಪುಟಗಳನ್ನು ಅವಲಂಬಿಸಿಯೇ ಮೇಲೆ ಹೇಳಿದ ಎರಡು 'ತಿರುಪತಿಯ ಇತಿಹಾಸ'ಗಳು (ಡಾ॥ ಎಸ್. ಕೃಷ್ಣಸ್ವಾಮಿ ಅಯ್ಯಂಗಾರರದ್ದು, ಶ್ರೀ ವೀರರಾಘವಾಚಾರ್ಯರದ್ದು) ಹೊರಬಂದುವು. ಇವನ್ನೂ ಗುಡಿಯ ಆಡಳಿತದವರೇ ಅಚ್ಚುಮಾಡಿಸಿದರು. ಇವಲ್ಲದೆ, ಗುಡಿಯ ಕಡೆಯಿಂದ (1950 ರಿಂದ) ಹೊರಬರುತ್ತಿರುವ ಮಾಸಪತ್ರಿಕೆಯು ಸ್ಥಳಪುರಾಣ, ಸ್ತೋತ್ರಸಾಹಿತ್ಯ, ಉತ್ಸವಗಳು, ವಾಸ್ತುಶಿಲ್ಪ ಮೊದಲಾದ ವಿಷಯಗಳನ್ನು ಕುರಿತು ಉತ್ತಮವಾದ ಪ್ರಬಂಧಗಳನ್ನು ಪ್ರಕಟಿಸುತ್ತಿದೆ. ತಿರುಮಲೈ-ಒಳಗು, ವೇಂಗಡದೊಡೆಯನಿಗೆ ಆಳ್ವಾರರು ಮಾಡಿರುವ ಮಂಗಳಾಶಾಸನ, ಸವಾಲ್-ಎ-ಜವಾಬ್ ಮೊದಲಾದ ಆಕರಗ್ರಂಥಗಳನ್ನೂ ಗುಡಿಯವರೇ ಅಚ್ಚುಮಾಡಿಸಿದ್ದಾರೆ.

ಇಂಥ ಗ್ರಂಥಗಳಲ್ಲದೆ ಗುಡಿಯ ಪೂಜಾಪದ್ಧತಿಗಳನ್ನು ಅರಿತುಕೊಳ್ಳಲು ವೈಖಾನಸ ಸಂಪ್ರದಾಯಕ್ಕೆ ಸೇರಿದ ಆಗಮಗ್ರಂಥಗಳನ್ನೂ ನೋಡಬೇಕಾಯಿತು; ಪ್ರಯೋಗಗಳನ್ನೂ ಪದ್ಧತಿಗಳನ್ನೂ ಗುಡಿಯ ಅರ್ಚಕರಿಂದ ಮತ್ತು ಆಚಾರ್ಯಪುರುಷರಿಂದ ತಿಳಿದುಕೊಳ್ಳಬೇಕಾಯಿತು. ಪಾಂಚರಾತ್ರ ಮತ್ತು ವೈಖಾನಸ-ಆಗಮಗಳ ನಡುವೆ ಇಲ್ಲಿ ಸೆಣಸಾಟ ನಡೆದುದು ಕಂಡುಬರುತ್ತದೆ. ಯಾವ ಕಾಲದಲ್ಲೂ ಇದು ಬಿರುಸಾಗಲಿಲ್ಲವಾದರೂ, ಇದು ಮುಖ್ಯವಾದ ವಿವರವೆಂದು ನನ್ನ ಅನಿಸಿಕೆ. ವೀರರಾಘವಾಚಾರ್ಯರೂ ಈ ವಿಚಾರವನ್ನು ತಮ್ಮ ಗ್ರಂಥದಲ್ಲಿ ಪ್ರಸ್ತಾಪಿಸಿದ್ದಾರೆ. ನನ್ನ ಬರಹದಲ್ಲೂ ಹಲವೆಡೆ ಇದರ ಮಾತು ಬರುತ್ತದೆ. ಆಗಮ-ಸಂಪ್ರದಾಯಗಳ ಧೋರಣೆ ಗುಡಿಯೊಂದರ ಸ್ವರೂಪ-ಸ್ವಭಾವಗಳನ್ನು ವಿಮರ್ಶೆಮಾಡುವಾಗ ಪ್ರಧಾನವಾಗುತ್ತದೆ. ಅದೂ, ತುಂಬ ಪ್ರಾಚೀನವಾದ ವೇಂಗಡದ ಗುಡಿಯನ್ನು ಕುರಿತು ಪರಿಶೀಲಿಸುತ್ತಿರುವಾಗ ಆಗಮದ ನಿಲುವು ಇನ್ನಷ್ಟು ಮುಖ್ಯವಾಗುತ್ತದೆ, ಸ್ವಾರಸ್ಯವಾಗುತ್ತದೆ.

ಗುಡಿಯ ಸ್ವರೂಪವನ್ನು ಕುರಿತು, ಅಲ್ಲಿನ ಸಂಪ್ರದಾಯಗಳ ಸ್ವಭಾವವನ್ನು ಕುರಿತು, ಆ ಮೂಲಬೇರದ ಮೂರ್ತಿಲಕ್ಷಣಗಳನ್ನು ಕುರಿತು ಜನರ ನಡುವೆ ಹಲವಾರು ನಂಬಿಕೆಗಳು, ಶಂಕೆಗಳು, ಕಲ್ಪನೆಗಳು ಹರಡಿಕೊಂಡಿವೆ. ಇವು ಬಹುಮಟ್ಟಿಗೆ ಸಲ್ಲದ ಕುತೂಹಲಕ್ಕೆ ಕಾರಣವಾಗಿವೆ. ನಿದರ್ಶನಕ್ಕೆ ಅಲ್ಲಿನ ದೇವರು ವಿಷ್ಣುವೋ ಶಿವನೋ ಹರಿಹರನೋ ಸುಬ್ರಹ್ಮಣ್ಯನೋ ದುರ್ಗೆಯೋ ವೀರಭದ್ರನೋ ಎನ್ನುವ ಸಮಸ್ಯೆ; ಗುಡಿಯು ವೈಷ್ಣವಸಂಪ್ರದಾಯದ್ದೋ ಶಾಕ್ತಸಂಪ್ರದಾಯದ್ದೋ ಎನ್ನುವ ಜಿಜ್ಞಾಸೆ. ಇದನ್ನು ಕುರಿತ ಕುತೂಹಲ ನನ್ನನ್ನೂ ಕೆಲಕಾಲ ಕಾಡಿದ್ದಿತು. ಆದರೆ ಇದು ಸಲ್ಲದ ಕುತೂಹಲವೆಂದೂ ಅನುಚಿತವಾದ ಆಸಕ್ತಿಯೆಂದೂ ನನ್ನನ್ನು ಎಚ್ಚರಿಸಿದವರು ನನ್ನ ತೀರ್ಥರೂಪರು. ದಿಟವಾಗಿ, ಇವೆಲ್ಲ ಅರ್ಥವಿಲ್ಲದ ವಿವಾದಗಳು. ವೇಂಗಡ ದೊಡೆಯನ ಹಳಮೆಯನ್ನು ಕಂಡುಕೊಂಡವರಿಗೆ ಪಂಥಪ್ರಕ್ರಿಯೆಗಳ ಕಟ್ಟು ಕಳಚಿ ಬೀಳುತ್ತದೆ, ಹಿರಿಮೆಯನ್ನು ಅರಿತುಕೊಂಡರಂತೂ ಇದಕ್ಕೆ ಕಾರಣವೇ ಇಲ್ಲವಾಗುತ್ತದೆ. ಈ ಗ್ರಂಥದಲ್ಲಿ ಈ ಸಮಸ್ಯೆಯನ್ನು ನಾನು ಎತ್ತಿಕೊಂಡಿಲ್ಲ; ಈಗ ಅದು ಸಮಸ್ಯೆಯೆಂದು ನನಗೆ ತೋರುತ್ತಿಲ್ಲದಿರುವುದೇ ಕಾರಣ.

ಹಾಗೆಯೇ ಇನ್ನೊಂದು ನಂಬಿಕೆ ಜನರ ನಡುವೆ ಹರಡಿಕೊಂಡಿರುವುದು; ಅಲ್ಲಿ ಶಂಕರಾಚಾರ್ಯರು ಧನಾಕರ್ಷಣಯಂತ್ರವನ್ನೋ ಶ್ರೀಚಕ್ರವನ್ನೋ ಮೂಡಿಸಿರುವುದೇ ಗುಡಿಯ ಜನಪ್ರೀತಿಗೂ ಸಂಪತ್ತಿಗೂ ಕಾರಣವೆಂಬುದು. ಈ ನಂಬಿಕೆಗೆ ಇತಿಹಾಸದ ಆಧಾರವೇನೂ ಇರದು. ಶಂಕರಾಚಾರ್ಯರು ಇಲ್ಲಿ ಬಂದಿದ್ದರೆನ್ನುವುದಕ್ಕೆ ನಿದರ್ಶನವಿಲ್ಲ; ಮತ್ತು ಗರ್ಭಗುಡಿಯಲ್ಲಿ ಇಂಥ ಯಾವ ಯಂತ್ರವೂ ಇರುವುದಕ್ಕೆ ಪ್ರಮಾಣವಿಲ್ಲ. ದಿಟವಾಗಿ ಶಂಕರಾಚಾರ್ಯರಿಗೂ ಶ್ರೀಚಕ್ರಕ್ಕೂ ಸಂಬಂಧವೇನೂ ಇರಲಿಲ್ಲ; ಆದರೆ ಅದು ಬೇರೆಯ ಮಾತು, ಅದನ್ನು ಬೇರೆಡೆ ಪ್ರಸ್ತಾಪಿಸಿದ್ದೇನೆ. ವೇಂಗಡದ ಗುಡಿಯಲ್ಲಿ ಕೌತುಕಬೇರದ ಅಡಿಯಲ್ಲಿರುವುದು ಷಾಡ್ಗುಣ್ಯಯಂತ್ರ; ಇದು ಶುದ್ಧಾಂಗವಾಗಿ ವೈಷ್ಣವ ಮಂಡಲ; ಇದು ಸಾಮವೈ–ಕಾಲದಲ್ಲಿ (ಎಂದರೆ ಕ್ರಿಸ್ತಾಬ್ದ 900 ಸುಮಾರಿನಲ್ಲಿ) ಮೂಡಿಕೊಂಡುದು. ಶ್ರೀಚಕ್ರಪೂಜೆಗಾಗಲೀ ಶಾಕ್ತಸಂಪ್ರದಾಯಕ್ಕಾಗಲೀ ಇದರಲ್ಲಿ ಯಾವ ಅವಕಾಶವೂ ಇರದು. ಹೀಗಾಗಿ ಕುತೂಹಲಿಗಳು ಈ ಗ್ರಂಥದಲ್ಲಿ ಎಲ್ಲಿಯೂ ಈ ವಿಚಾರವನ್ನು ಕಾಣಲಾರರು.

ಈ ಗ್ರಂಥದ ರಚನೆಗೆ ನೆರವಾದವರು ಹಲವರು. ಗುಡಿಯ ಲೌಕಿಕಭಾಗ್ಯ ಹೆಚ್ಚಾಗುತ್ತಿದ್ದಾಗ ಬಹುಕಾಲ ಅದರ ಪ್ರಧಾನ ಅಧಿಕಾರಿಯಾಗಿದ್ದು, ಆಡಳಿತದ ಅಚ್ಚುಕಟ್ಟಿಗೆ ಹೆಚ್ಚುಪಾಲು ಕಾರಣರಾದ ಶ್ರೀ ಸಿ. ಅಣ್ಣಾರಾಯರು ಹಲವು ವಿವರಗಳನ್ನು ತಿಳಿಸಿದರು; ಮುಖ್ಯವಾಗಿ ಗರ್ಭಗುಡಿಯಲ್ಲಿ ದುರಸ್ತಿನಡೆದ ವಿಚಾರವಾಗಿ. ಮೂರ್ತಿ ಲಕ್ಷಣ, ಪೂಜಾಪದ್ಧತಿಗಳನ್ನು ಕುರಿತು ವಿಶೇಷವಾದ ವಿವರಗಳನ್ನು ಹೇಳಿದವರು ಆಗಮಪಂಡಿತರೂ, ಅಲ್ಲಿ ಬಹುಕಾಲ ಪ್ರಧಾನ–ಅರ್ಚಕರಾಗಿ ಸೇವೆ ಸಲ್ಲಿಸಿದವರೂ, ನನ್ನಲ್ಲಿ ಪ್ರೀತಿ ವಾತ್ಸಲ್ಯಗಳನ್ನಿರಿಸಿಕೊಂಡವರೂ ಆದ ಆಸ್ಥಾನ ವಿದ್ವಾನ್ ಮಾಡಂಬಾಕಂ

ಶ್ರೀನಿವಾಸ ಭಟ್ಟಾಚಾರ್ಯರು, ಮತ್ತು ಪ್ರಸ್ತುತ ಪ್ರಧಾನ–ಅರ್ಚಕರೂ ಮಿತ್ರರೂ ಆದ ಡಾ॥ ರಮಣ ದೀಕ್ಷಿತರು. ಅಲ್ಲಿ ಮೊದಲಿಂದ ನಲವತ್ತು ವರ್ಷಗಳಿಗೂ ಮೀರಿ ಗುಡಿಯ ಇಂಜಿನಿಯರ್ ಆಗಿದ್ದ ದಿವಂಗತ ಶ್ರೀ ದೀವಿ ವಿಖನಸಾಚಾರಿಯವರು ನನ್ನ ಆತ್ಮೀಯ ಗೆಳೆಯರಾಗಿದ್ದವರು; ಗುಡಿಯ ವಿಚಾರವಾಗಿ ಅವರ ತಿಳಿವಳಿಕೆ ಆಳವಾಗಿದ್ದಿತು. ನನ್ನನ್ನು ಗುಡಿಯ ಎಲ್ಲ ಭಾಗಗಳಿಗೂ ಕರೆದೊಯ್ದು ಹಲವಾರು ಬಾರಿ ವಿವರಿಸಿದ್ದಾರೆ; ಕ್ಷೇತ್ರದಲ್ಲೆಲ್ಲ ಸುತ್ತಾಡಿಸಿದ್ದಾರೆ. ಅವರ ನಿಷ್ಕಲ್ಮಷವಾದ ಸ್ವಭಾವವನ್ನೂ ಉದಾರವಾದ ಅವ್ಯಾಜವಾದ ಉಪಕಾರವನ್ನೂ ನಾನು ಮರೆಯುವಂತಿಲ್ಲ. ಅವರ ಮಗ ಶ್ರೀ ದೀವಿ ಶ್ರೀನಿವಾಸ ದೀಕ್ಷಿತುಲು ನನ್ನನ್ನು ಕುರಿತಂತೆ ತಂದೆಯಂತೆಯೇ ಪ್ರೀತ್ಯಾದರಗಳನ್ನು ತೋರಿಸುತ್ತಿದ್ದಾರೆ. ಗುಡಿಯ ಆಡಳಿತದಲ್ಲಿ ಅವರು ಸೀನಿಯರ್ ಅನಲಿಸ್ಟ್ ಆಗಿ ಕೆಲಸ ನಿರ್ವಹಿಸುತ್ತಿದ್ದು, ಬೆಟ್ಟದ ಮೇಲೆ ವೈಖಾನಸ ದಿವ್ಯಸಿದ್ಧಾಂತ ವಿವರ್ಧಿನೀಸಭೆಯ ಕಾರ್ಯದರ್ಶಿಯೂ ಆಗಿದ್ದಾರೆ. ಹಾಗೆಯೇ ತರುಣ ಉತ್ಸಾಹಿಗಳೂ ಸದಾಚಾರಸಂಪನ್ನರೂ ಗುಡಿಯ ಬಗ್ಗೆ ಆಳವಾದ ಪರಿಚಯ ಆದರಗಳನ್ನುಳ್ಳವರೂ, ವೈಖಾನಸಗ್ರಂಥಪ್ರಕಾಶನದಲ್ಲಿ ಸಾಮರ್ಥ್ಯ-ಅನುರಕ್ತಿಗಳೆರಡಕ್ಕೂ ಹೆಸರಾದವರೂ, ನನ್ನ ಸನ್ಮಿತ್ರರೂ ಆದ ಶ್ರೀ ಪ್ರಭಾಕರಾಚಾರ್ಯರು ಬೆಟ್ಟಕ್ಕೆ ನಾನು ಹೋದಾಗಲೆಲ್ಲ ನನ್ನ ವಾಸ್ತವ್ಯಕ್ಕೆ ಬಹುವಾಗಿ ನೆರವಾದವರು. ಇವರಿಬ್ಬರು ತರುಣ ಮಿತ್ರರಿಗೂ ನಾನು ಕೃತಜ್ಞನಾಗಿದ್ದೇನೆ.

ಹಾಗೆಯೇ, ಗುಡಿಯಲ್ಲಿ ಮೀರಾಸೀಪದ್ಧತಿಯಿರುವಾಗ ಪರಂಪರೆಯಿಂದ ಪ್ರಧಾನ –ಅರ್ಚಕರಾಗಿದ್ದ ಶ್ರೀ ಶ್ರೀನಿವಾಸನಾರಾಯಣ ದೀಕ್ಷಿತರು ನನಗೆ ಅಕ್ಕರೆಯ ಗೆಳೆಯರು; ಅವರದ್ದು ಕವಿಹೃದಯ; ಭಾವುಕರು; ಗಾಯಕರು. ತಮಗೆ ಗುಡಿಯಲ್ಲಾದ, ಗುಡಿಯ ಒಡೆಯನಿಂದಾದ ಅನುಭವಗಳನ್ನು ನನಗೆ ತಿಳಿಯಹೇಳುವಾಗ ಭಕ್ತಿಯ ಪರಾಕಾಷ್ಠೆ ಕಾಣುತ್ತದೆ. ಅವರ ಒಡನಾಡಿ ಶ್ರೀ ಚಿನ್ನಚೆಂಚಯ್ಯನವರೂ ನನಗೆ ಸಾಹಿತ್ಯಸಾಮಗ್ರಿ ಒದಗಿಸುವಲ್ಲಿ, ತಿರುಮಲೆಯ ಪ್ರವಾಸ, ವಸತಿ ಸುಖಮಯವಾಗುವಲ್ಲಿ ತುಂಬ ಉಪಕರಿಸಿದ್ದಾರೆ. ಇವರಿಬ್ಬರನ್ನು ನೆನೆಯದೆ ಈ ಮೊದಲ ಮಾತನ್ನು ಮುಗಿಸಲಾರೆ.

ಗುಡಿಯ ನಡವಳಿಕೆಯನ್ನು ಕುರಿತು ಮತ್ತು ತಾಳ್ಳಪಾಕಂ ಕವಿಗಳ ವಿಚಾರವಾಗಿ ಹಲವಾರು ಸ್ವಾರಸ್ಯವಾದ ವಿವರಗಳನ್ನು ತಿಳಿಯಹೇಳಿದವರು ನನ್ನ ಗುರುಸ್ವರೂಪರೂ, ತಿರುಪತಿಯಲ್ಲೇ ಬಹುಕಾಲ ಇದ್ದು ತಾಳ್ಳಪಾಕಂ ಕವಿಗಳ ಕೃತಿಗಳನ್ನು ಸಂಪಾದಿಸಿದವರೂ ಆದ ಡಾ॥ ರಾಳ್ಳಪಲ್ಲಿ ಅನಂತಕೃಷ್ಣಶರ್ಮರು. ಆಳ್ವಾರರು ವೇಂಗಡದೊಡೆಯನಿಗೆ ಮಾಡಿದ ತಮಿಳುಮಂಗಳಾಶಾಸನ-ಪಾಶುರಗಳನ್ನು ನನಗೆ ಪಾಠ ಹೇಳಿದವರು ವಿದ್ವಾನ್ ಹೆಮ್ಮಿಗೆ ದೇಶಿಕಾಚಾರ್ಯರು.

ನನಗೆ ಈ ಗುಡಿಯ ಮೇಲೆ ಆಸಕ್ತಿ ಬೆಳೆದುದು ನನ್ನ ಎಳೆತನದಲ್ಲೇ. ಈ ಬೆಟ್ಟದ ದೇವರು ನಮ್ಮ ಮನೆದೇವರು. ನನ್ನ ಹಿರಿಯರು ತಲೆಮಾರುಗಳಿಂದ ಈ ದೇವರಿಗೆ ನಡೆದುಕೊಂಡವರು. ವರ್ಷಕ್ಕೊಮ್ಮೆಯಾದರೂ ಬೆಟ್ಟಕ್ಕೆ ಹೋಗಿಬರುವ

ಪರಿಪಾಟಿಯಿದ್ದವರು. ಹೀಗಾಗಿ ನನ್ನ ನೆನಪು ಇರುವಂದಿನಿಂದಲೂ ನನಗೂ ಈ ಬೆಟ್ಟಕ್ಕೂ ನಂಟು ಬೆಳೆದು ಬಂದಿದೆ. ನನ್ನ ಚೌಲವಾದದ್ದು ಅಲ್ಲಿಯೇ, ಮುಂಜಿಯಾದದ್ದು ಅಲ್ಲಿಯೇ, ಮದುವೆಯಾದದ್ದು ಅಲ್ಲಿಯೇ. ಮನೆಯವರೊಂದಿಗೆ ಅಡಿಗಡಿಗೆ ಬೆಟ್ಟಕ್ಕೆ ಹೋಗಿಬರುತ್ತಲೇ ಇದ್ದೇನೆ. ಬೆಟ್ಟದ ಪರಿಸರ, ನಿಸರ್ಗದ ಚೆಲುವು ಗುಡಿಯ ಆಕರ್ಷಣೆಯನ್ನು ಹೆಚ್ಚಿಸಿವೆ.

ಆದರೆ ಈಚೆಗೆ ಅಲ್ಲಿ ಹಣದ ಮೇಲಾಟ ಹೆಚ್ಚಾಗಿರುವುದನ್ನೂ, ಅಡಳಿತದವರು ಒದಗಿಸಿರುವ ಸೌಕರ್ಯಗಳನ್ನು ಪೋಲುಮಾಡುವುದನ್ನೂ, ಭಕ್ತಿಯಾಗಲೀ ಭಾವುಕತೆಯಾಗಲೀ ಇಲ್ಲದೆ ವಿಹಾರಕ್ಕೆಂದೇ ಬರುವ ಅಥವಾ ವ್ಯವಹಾರಕ್ಕೆಂದು ಬರುವ ಜನಜಂಗುಳಿಯನ್ನೂ, ಗುಡಿಯೊಳಗೆ ಕಾಲಿಡಲೂ ತೋರಿಕೊಂಡಿರುವ ನಿರ್ಬಂಧಗಳನ್ನು ನೋಡಿದರೆ ಅಲ್ಲಿಗೆ ಮತ್ತೆ ಮತ್ತೆ ಹೋಗಬೇಕೆನ್ನುವ ತವಕ ಕಡಮೆಯಾಗಿದೆಯೆನ್ನಿ! ಪರಿಸರದ ಸೊಬಗೂ ಬರಬರುತ್ತ ಮರೆಯಾಗುತ್ತಿದೆ. ನಾನು ಚಿಕ್ಕಂದಿನಲ್ಲಿ ಕಂಡ ಗುಡಿಗೂ ಈಗಿನ ಗುಡಿಗೂ ಆಗಿರುವ ವ್ಯತ್ಯಾಸ ದಿಟವಾಗಿ ಅಜ–ಗಜಾಂತರವೇ. ಆಗ, ಬೆಟ್ಟಕ್ಕೆ ಸಹಜವಾಗಿ ಹೊಂದಿಕೊಂಡು, ಬೆಟ್ಟದಿಂದ ತಾನಾಗಿ ಮೇಲೆದ್ದು ತೋರಿಕೊಂಡಂತೆ ಗುಡಿಯಿದ್ದಿತು. ವೇಂಗಡದೊಡೆಯ ಎಂಬ ಹೆಸರು ಸಾರ್ಥಕವಾಗಿದ್ದಿತು. ಬೆಟ್ಟದ ಮೇಲೆ ಎಲ್ಲಿಂದ ನೋಡಿದರೂ ತಗ್ಗಿನಲ್ಲಿ ಗುಡಿಯೊಂದೇ ಕಟ್ಟಡ ಎದ್ದುಕಾಣುತ್ತಿದ್ದಿತು, ಆನಂದನಿಲಯವಿಮಾನ ಬೆಳಗುತ್ತಿದ್ದಿತು. ಆದರೆ ಈಗ ಹಾಗಿಲ್ಲ. ಗುಡಿಯೆಲ್ಲಿದೆಯೆಂದು ಹುಡುಕಾಡಬೇಕು; ಸುತ್ತಲೂ ಎದ್ದಿರುವ ಬೃಹದಾಕಾರದ ಅರಸಿಕ ಕಟ್ಟಡಗಳು ಗುಡಿಯನ್ನು ಮರೆಮಾಡಿಬಿಟ್ಟಿವೆ. ಗುಡಿಯಿಂದಲೇ ಸಂಪತ್ತು, ಸಮೃದ್ಧಿ. ಆದರೆ ಸಂಪತ್ತು, ಸಮೃದ್ಧಿಗಳು ಗುಡಿಯನ್ನೇ ಹಿಂದಕ್ಕೆ ಸರಿಸಿಬಿಟ್ಟಿವೆ!

ಆದರೂ ಈ ದೈವದ ಆಕರ್ಷಣೆ ಬೇರೂರಿ ನಿಂತಿದೆ. ಎಂಟು-ಹತ್ತು ವರ್ಷದ ಹುಡುಗನಾಗಿದ್ದಾಗ, ಗುಡಿಯಲ್ಲಿ ಶುಕ್ರವಾರದ ತಿರುಮಂಜನ ನಡೆಯುತ್ತಿರುವಾಗ ಗರ್ಭಗುಡಿಯ ಬಳಿಯೇ ನಿಂತು ಈ ದೈವವನ್ನು ಎವೆಯಿಕ್ಕದೆ ದಿಟ್ಟಿಸಿ ನೋಡಿದ ನೆನಪು ಈ ಎಪ್ಪತ್ತು ಮೀರಿ ವರ್ಷಗಳೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ. ಈ ನೆನಪು ಮರುಕಳಿಸಿ, ಪುಟಗೊಂಡು, ಮುಪ್ಪರಿದು ಈ ದೈವವನ್ನು ಕುರಿತು, ಈ ಗುಡಿಯನ್ನು ಕುರಿತು, ಈ ಬೆಟ್ಟವನ್ನು ಕುರಿತು, ಅಭ್ಯಾಸಮಾಡುವ ಒತ್ತಾಸೆಯನ್ನು ಒದಗಿಸಿತು. ಮೊದಲಿಗೆ ವಾಡಿಕೆಯಂತೆಯೋ ಭಕ್ತಿಯಿಂದಲೋ ಬೆಟ್ಟಕ್ಕೆ ಹೋಗಿ ಬರುತ್ತಿದ್ದುದು ಬರುಬರುತ್ತ ಅಧ್ಯಯನ-ಪ್ರವಾಸ(ಸ್ಟಡಿ-ಟೂರ್)ಗಳಾದುವು. ಬಹುಶಃ ಯಾತ್ರೆಗೆ ಅನುಗುಣವಾದ ಮನೋಧರ್ಮವಲ್ಲ ಇದು; ಆದರೇನು ಮಾಡುವುದು? 'ಪ್ರಕೃತಿಂ ಯಾಂತಿ ಭೂತಾನಿ' ಅಲ್ಲವೆ?

ಹಾಗಾಗಿ ಸುಮಾರು ಐವತ್ತು ವರ್ಷಗಳಿಂದಲೂ ಈ ಗುಡಿಗೆ ಸಂಬಂಧಿಸಿದಂತೆ ವಿವರಗಳನ್ನು ಸಂಗ್ರಹಿಸುತ್ತ ಬಂದಿದ್ದೇನೆ. ಅಲ್ಲಿನ ಶಾಸನಗಳು, ಕಥೆಗಳು, ಉತ್ಸವಗಳು, ಪೂಜೆಯ ಪದ್ಧತಿಗಳು, ಅದಕ್ಕೆ ಹೊಂದಿಕೊಂಡ ಆಗಮ, ಸಾಹಿತ್ಯ, ವಾಸ್ತುಶಿಲ್ಪ

ಎಲ್ಲವನ್ನೂ ಆದರದಿಂದ ಅಧಿಕೃತವಾಗಿ ಅಭ್ಯಾಸಮಾಡುವುದಾಗಿದೆ. ಈ ವ್ಯವಸಾಯವು ಖಚಿತವಾದ ಒಂದು ಘಟ್ಟ ಮುಟ್ಟಿತು ಎಂದುಕೊಂಡಾಗ ಬರಹ ಮೊದಲಾಯಿತು. ನನ್ನ ಈ ಬರಹವನ್ನು ಐಬಿಎಚ್ ಸಂಸ್ಥೆಯ ಕನ್ನಡವಿಭಾಗದ ಒಡೆಯರಾಗಿದ್ದ, ಮಿತ್ರರಾದ ಶ್ರೀ ಜಿ. ಕೆ. ಅನಂತರಾಮ್ ಅವರು ತಮ್ಮ ಪ್ರಕಾಶನದ ಹರವಿನಲ್ಲಿ ಆರಿಸಿಕೊಂಡರು. 1980 ರಲ್ಲಿ ಹಾಗೆ ಪ್ರಕಟವಾದ ಈ ಪುಸ್ತಕವು ಜನಪ್ರೀತಿಯನ್ನು ಗಳಿಸಿಕೊಂಡದ್ದು ನನ್ನ ಭಾಗ್ಯ. ಈಗ ನನ್ನ ತರುಣಮಿತ್ರರಾದ ಶ್ರೀ ಸೂರ್ಯಪ್ರಕಾಶ ಪಂಡಿತರು ಈ ಪುಸ್ತಕವನ್ನು ತಮ್ಮ 'ಅಭಿಜ್ಞಾನ' ಪ್ರಕಾಶನಸಂಸ್ಥೆಯಿಂದ ಮತ್ತೊಮ್ಮೆ ಹೊರತರಲು ಉತ್ಸಾಹವನ್ನು ತೋರಿದ್ದಾರೆ. ಇದು ಬರಿಯ ಪುನರ್ಮುದ್ರಣವಲ್ಲ ; ವಿಸ್ತೃತವಾಗಿದೆ, ಪರಿಷ್ಕೃತವಾಗಿದೆ, ಚಿತ್ರಭರಿತವಾಗಿದೆ. ಇದಕ್ಕೆಲ್ಲ ಈ ನನ್ನ ಮಿತ್ರರ ಒತ್ತಾಸೆಯೇ ಕಾರಣ. ಇವರಿಗೆ ನಾನು ಋಣಿಯಾಗಿದ್ದೇನೆಂದು ಬೇರೆ ಹೇಳುವ ಅಗತ್ಯವಿದೆಯೆ?

ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

ತಿರುಪತಿ ತಿಮ್ಮಪ್ಪ

ಒಂದು

ಬೆಟ್ಟದ ದೈವ—ವೇಂಗಡ

ಬೆಟ್ಟದ ಜೀವ


ಬೆಟ್ಟಕ್ಕೊಂದು ಜೀವ ಇದೆ, ಅದರಲ್ಲೊಂದು ದೈವ ನೆಲೆಸಿದೆ ಎನ್ನುವ ನಂಬಿಕೆ ತುಂಬ ಹಳೆಯದು. ಮನುಷ್ಯ, ಭೂಮಿಯ ಮೇಲೆ ಬದುಕತೊಡಗಿದಂದಿನಿಂದಲೂ ಬೆಳೆದುಬಂದಿರುವ ಭಾವನೆ ಇದು. ನಮ್ಮ ದೇಶದಲ್ಲಿ ಮಾತ್ರವಲ್ಲ, ಎಲ್ಲೆಲ್ಲಿಯೂ ಇದರ ಗುರುತುಗಳನ್ನು ಕಾಣಬಹುದು. ಬೆಟ್ಟಗಳನ್ನು ದೇವತಾಸ್ಥಾನಗಳೆಂದು ಅಥವಾ ದೇವತಾಸ್ವರೂಪವೆಂದು ತಿಳಿದು ಪೂಜೆಮಾಡುವ ಪದ್ಧತಿ ಎಲ್ಲ ಸಂಸ್ಕೃತಿಗಳ ಮೊದಲ ಪದರಗಳಲ್ಲಿ ಕಾಣಸಿಗುತ್ತದೆ. ಹಲವು ದೇಶಗಳಲ್ಲಿ ಇದು ಇಂದಿಗೂ ಉಳಿದುಬಂದಿದೆ.

ಕೊರಿಯ, ಪರ್ಶಿಯ, ಚೀಣ, ಜಪಾನ್, ಮೆಕ್ಸಿಕೋ ಮೊದಲಾದ ದೇಶಗಳಲ್ಲೂ ಇದು ಇಂದಿಗೂ ಒಂದಲ್ಲ ಒಂದು ಬಗೆಯಲ್ಲಿ ಬಳಕೆಯಲ್ಲಿದೆ. ಸೆಮಿಟಿಕ್ ಜನರು ಬೆಟ್ಟಗಳನ್ನು ವ್ಯಕ್ತಿಗಳೆಂದೇ ಬಗೆದು, ಒಂದೊಂದು ಬೆಟ್ಟಕ್ಕೆ ಒಬ್ಬೊಬ್ಬ ದೇವತೆಯ ಹೆಸರನ್ನು ಸೇರಿಸುತ್ತಾರೆ. ಕೆಲ್ಟಿಕ್ ಜನರ ಪೊವಿನಿನಸ್ ಎಂಬ ದೇವತೆಯ ನೆಲೆ ಪೈನೈನ್ ಆಲ್ಪ್ಸ್ ಎಂಬ ಬೆಟ್ಟವೇ. ಪರ್ಶಿಯದೇಶದ ಹಳಬರು ತಮ್ಮ ಅಲ್‌ಬೂರ್ಜ್ ಬೆಟ್ಟವೇ ಜಗತ್ತಿನಲ್ಲಿ ಮೊಟ್ಟಮೊದಲು ತೋರಿಕೊಂಡ ಬೆಟ್ಟವೆಂದು ನಂಬುತ್ತಾರೆ. ಸೂರ್ಯನೂ ನಕ್ಷತ್ರಗಳೂ ಈ ಬೆಟ್ಟದ ಸುತ್ತ ತಿರುಗುವುವೆಂದೂ, ಬದುಕಿಗೆ ನೆರವಾಗುವ ಬೆಳಕು ಈ ಬೆಟ್ಟದಿಂದಲೇ ಹೊರಹೊಮ್ಮಿ ಅನಂತರ ಇಲ್ಲಿಯೇ ಮರೆಯಾಗುವುದೆಂದೂ ಅವರ ನಂಬಿಕೆ. ಅವರು ಮೊದಲಿಗೆ, ಎಂದರೆ ಪ್ರವಾದಿ ಮುಹಮ್ಮದ್ ಪೈಗಂಬರರ ಉಪದೇಶ ಬೇರೂರುವ ಮೊದಲು, ಈ ಬೆಟ್ಟದ ಮೇಲೆ ಮೂರ್ತಿಗಳನ್ನಿರಿಸಿ ಪೂಜಿಸುತ್ತಿದ್ದರು. ಗ್ರೀಕ್‌ಜನರ ದೇವರಾಜ ಜ್ಯೂಸ್ ಇರುವುದು ಒಲಿಂಪಸ್‌ಪರ್ವತದ ಮೇಲೆ. ಫ್ರಿಜಿಯನ್ ಸೈಬಿಲ್ ಎಂಬ ಮಾತೃದೇವತೆ ನಿಂತಿರುವುದು ಬೆಟ್ಟದ ಮೇಲೆ—ನಮ್ಮ ದುರ್ಗೆಯಂತೆ. ಮೆಕ್ಸಿಕನ್ನರ ತ್ಲಲೋಚ್ ಕೂಡ ಬೆಟ್ಟದ ದೈವವೇ. ಚೀಣೇಜನರು 'ಶೆನ್' ಎಂಬ ಸೌಮ್ಯದೇವತೆಗಳ ಗುಂಪಿಗೇ ಬೆಟ್ಟಗಳನ್ನು ಸೇರಿಸುವರು. ಜಪಾನೀಯರ ಕಮಿದೇವತೆಗಳಲ್ಲಿ ಬೆಟ್ಟಗಳೂ ಸೇರುತ್ತವೆ. ಟಿಬೆಟನ್ ಜನರಲ್ಲಂತೂ ಬೆಟ್ಟಗುಡ್ಡಗಳ ಪೂಜೆ ರೂಢಮೂಲವಾಗಿ ನಿಂತಿದೆ.

ನಮ್ಮ ದೇಶದ ಇತಿಹಾಸದುದ್ದಕ್ಕೂ ಬೆಟ್ಟಗಳ ಪ್ರಭಾವ ಉಳಿದು ಬೆಳೆದು ಬಂದಿದೆ. ಹಿಮಾಲಯದ ಹಿರಿಮೆಯನ್ನು ನಮ್ಮ ಸಾಹಿತ್ಯ, ಧರ್ಮ, ಸಂಸ್ಕೃತಿ ಎಲ್ಲವೂ

ಅಳವಡಿಸಿಕೊಂಡಿವೆಯಲ್ಲವೆ? ಶಿವನ ನೆಲೆಯಾದ ಕೈಲಾಸ ಇರುವುದೂ, ವಿಷ್ಣುವಿನ ನೆಲೆಯಾದ ಬದರಿಯಿರುವುದೂ, ಜಗಜ್ಜನನಿಯಾದ ಗಂಗೆಯ ಉಗಮಸ್ಥಾನ ಇರುವುದೂ, ಯಮುನೋತ್ರಿಯಿರುವುದೂ ಅಲ್ಲಿಯೇ ಅಲ್ಲವೆ? ಹಿಮಾಲಯವಲ್ಲದೆ ವಿಂಧ್ಯ, ಸಹ್ಯ, ಮಲಯ, ನೀಲಾಚಲ, ಮಂದರ, ಮಹಾಬಲ, ಅಹೋಬಲ, ಸಿಂಹಾಚಲ, ಕುಟಚಾದ್ರಿ, ಶ್ರೀಶೈಲ, ಮಂಗಳಗಿರಿ—ಹೀಗೆ ನೂರಾರು ಬೆಟ್ಟಗಳು ನಮಗೆ ಪವಿತ್ರಕ್ಷೇತ್ರಗಳು. ಪುರಾಣಗಳಲ್ಲಿ ಸಪ್ತಕುಲಾಚಲಗಳ ಉಲ್ಲೇಖ ಬರುತ್ತದೆ—ವಿಂಧ್ಯ, ರೈವತಕ, ಸಹ್ಯ, ಕುಮಾರ, ಮಲಯ, ಶ್ರೀ ಮತ್ತು ಪಾರಿಯಾತ್ರ. ಪೂರ್ವಘಟ್ಟ ಮತ್ತು ಪಶ್ಚಿಮಘಟ್ಟಗಳಲ್ಲಿ ಹಲವಾರು ಬೆಟ್ಟಗಳು ಪವಿತ್ರವೆಂದು ಪ್ರಸಿದ್ಧವಾಗಿರುವುವು. ಆದಿವಾಸಿಗಳು ಹೆಚ್ಚೂ ಕಡಮೆ ಎಲ್ಲರೂ ಪರ್ವತಪೂಜಕರೇ. ಮುಂಡರು, ಕೋಲರು, ಸಂತಾಲರು, ಕೊರವರು, ಮಿಹಿಲಿಗಳು, ನಾಗರು ಮೊದಲಾದವರ ಸಂಸ್ಕೃತಿಯಲ್ಲಿ ಬೆಟ್ಟದ ಪಾತ್ರ ಹೆಚ್ಚು. ನಾಡಿನಲ್ಲಿ ಹೆಸರಾದ ದೈವಗಳಲ್ಲಿ ಬಹುಮಟ್ಟಿಗೆ ಬೆಟ್ಟದ ಸಂಬಂಧವನ್ನು ತಳೆದವು. ಬಯಲಲ್ಲಿರುವ ದೈವಗಳಿಗೂ ಬೆಟ್ಟದ ಹಿನ್ನೆಲೆಯನ್ನು ಹಚ್ಚುವುದುಂಟು.

ಬೆಟ್ಟಕ್ಕೆ ಸಂದಿರುವ ಈ ಗೌರವ ಸಹಜವಾದುದೇ. ಬೆಟ್ಟವನ್ನು ಕಂಡೊಡನೆ ಮೂಡುವ ಭಾವನೆಗಳಲ್ಲಿ ಭಯ, ವಿಸ್ಮಯ, ಭಕ್ತಿಗಳು ಮುಖ್ಯವಾದುವು. ದೊಡ್ಡದಾಗಿ, ಎತ್ತರವಾಗಿ ನಿಂತಿರುವ ಭೀಮಾಕಾರದ ಬೆಟ್ಟ, ಭೂತದಂತೆ ಅಡರಿ ನಿಲ್ಲುವ ಬಂಡೆಗಳು, ಮುಗಿಲನ್ನು ಮುಟ್ಟುವ ಶಿಖರ, ಮೋಡವನ್ನು ತಡೆದು ಮಳೆಗರೆಸುವ



ಶಿಲಾತೋರಣ

ಸಾಹಸ, ಮೇಲೆ ಮುಸುಕುವ ಮಂಜು, ಅಕ್ಕಪಕ್ಕಗಳಲ್ಲಿ ದಟ್ಟವಾಗಿ ಹರಡುವ ಕಾಡು, ಮಿತಿಯಿರದೆ ಮೇರೆಯರಿಯದೆ ಬೆಳೆಯುವ ಮರಗಿಡಗಳು, ಅಂಜಿಕೆಯಿಲ್ಲದೆ ಅಲೆದಾಡುವ ದುಷ್ಟಮೃಗಗಳು, ಒಡಲೊಳಗಿಂದ ಹೊರಬರುವ ವಿಚಿತ್ರಶಬ್ದ, ಎಲ್ಲಿಯೋ ಚಿಮ್ಮಿ ಅಲ್ಲಲ್ಲಿ ಧುಮುಕಿ ಹರಿದುಬರುವ ಝರಿಗಳ ಮೊರೆತ, ಸುಯ್ಯೆಂದು ಬೀಸುವ ಬಿರುಗಾಳಿಯ ಅಬ್ಬರ—ಇವೆಲ್ಲ ನಮ್ಮಲ್ಲಿ ಭೀತಿಯನ್ನು ಮಾತ್ರವಲ್ಲದೆ ಕುತೂಹಲವನ್ನೂ ಕೆರಳಿಸುತ್ತವೆ. ಬೆಟ್ಟದ ಗುಟ್ಟನ್ನು ಒಡೆಯಬಲ್ಲ ಗಂಡು ಯಾರು? ಅದು ಒದಗಿಸುವ ಆತಂಕವನ್ನು ಅಡಗಿಸುವ ಸಾಮರ್ಥ್ಯ ಮನುಷ್ಯನಿಗಿದೆಯೆ? ಪಾಶ್ಚಾತ್ಯರಲ್ಲಿ ದೊಡ್ಡ ಬೆಟ್ಟವನ್ನು ಕಂಡರೆ ಅದನ್ನು ಗೆಲ್ಲಬೇಕೆಂಬ ಹಂಬಲ ಮೂಡುವುದಂತೆ; ಬೆಟ್ಟವಿರುವುದು ಸೆಣಸಾಟಕ್ಕೆ ಕರೆಯೆಂದು ಅವರ ಕಲ್ಪನೆಯಂತೆ. ನಮಗೆ ಆ ಹಂಬಲವಿಲ್ಲ , ಆ ಕಲ್ಪನೆಯೂ ಇಲ್ಲ; ನಮ್ಮ ಮನೋಧರ್ಮ ಬೇರೆ. ಬೆಟ್ಟವನ್ನೇರಿಬಿಟ್ಟರೆ ಅದನ್ನು ಗೆದ್ದುಕೊಂಡಂತಾದೀತೆ? ಗೆಲುವೆಂಬುದು ಇಲ್ಲಿ ಸಲ್ಲುವ ಭಾವನೆಯಲ್ಲ. ನಾವು ಬೆಟ್ಟವನ್ನು ಕಾಣುವುದು ಭಕ್ತಿಯಿಂದ. ಬೆಟ್ಟವೆಂದರೆ ದೈವದ ಸಾನ್ನಿಧ್ಯ; ಅದು ದೈವದ ಅದ್ಭುತ, ಅಪೂರ್ವ, ವಿಚಿತ್ರಲೀಲೆಯ ಪ್ರತೀಕ. ಅಲ್ಲಿ ನಾವು ನೋಡುವುದು ನಿಸರ್ಗದ ಸೌಂದರ್ಯವನ್ನು, ಧರ್ಮದ ನೆಲೆಯನ್ನು; ಮನುಷ್ಯನ ಭಾವನೆಗಳು ತಿಳಿಯಾಗುವುದನ್ನು.

ವೇದಗಳಲ್ಲೇ ಬೆಟ್ಟದ ಮೇಲ್ಮೈಯನ್ನೂ ಸ್ಥೈರ್ಯವನ್ನೂ ಲೋಕೋಪಕಾರಕ ಪ್ರವೃತ್ತಿಯನ್ನೂ ಹೇಳುವ ಮಂತ್ರಗಳಿವೆ. ವೇದಯುಗಕ್ಕೆ ಮೊದಲೇ ಬೆಟ್ಟಗಳ ಆರಾಧನೆ ಬಳಕೆಯಲ್ಲಿದ್ದಿತೆನ್ನಲು ಆಧಾರಗಳಿವೆ. ಅವ್ಯಕ್ತವಾದ ದೈವಕ್ಕೆ ವ್ಯಕ್ತಾಕಾರವನ್ನು ಕೊಡುವ ಪ್ರತಿಮೆಗಳು ಮೂಡಿಕೊಳ್ಳುವ ಮೊದಲು ದೈವದ ವ್ಯಕ್ತಾವ್ಯಕ್ತರೂಪವೆಂದು ಬೆಟ್ಟ, ನದಿ, ಮರ ಮೊದಲಾದುವು ಪೂಜೆಗೊಳ್ಳುತ್ತಿದ್ದುದು ಸಹಜವೇ. ಸೈಂಧವಸಂಸ್ಕೃತಿಯ ಅವಶೇಷಗಳೂ ವೈದಿಕವಾಙ್ಮಯದ ಮೊದಲ ಪದರಗಳೂ ಇದನ್ನು ಸೂಚಿಸುತ್ತವೆ. ನಾವು ಪೂಜೆಮಾಡುವ ಲಿಂಗ ಬೆಟ್ಟದ ಪ್ರತೀಕವೇ ತಾನೆ? ಶಿವನೂ ಗಿರೀಶನಲ್ಲವೆ? ಹಿಮಾಲಯವೇ ಅವನ ಮನೆ; ಕೈಲಾಸಶಿಖರವೇ ಅವನ ನೆಲೆ. ವೃಕ್ಷಪೂಜೆಗೂ ಪರ್ವತಪೂಜೆಗೂ ನಿಕಟವಾದ ನಂಟು; ಸ್ಥಾವರವರ್ಗಕ್ಕೇ ಎರಡೂ ಸೇರಿದರೂ ಜಂಗಮದ ಕಲ್ಪನೆಯೇ ಆರಾಧನೆಗೆ ಆಧಾರ. "ಅಹಂ ವೃಕ್ಷಸ್ಯ ರೇರಿವಾ , ಕೀರ್ತಿಃ ಪೃಷ್ಠಂ ಗಿರೇರಿವ" ಎಂದು ವೈದಿಕಋಷಿ ತನ್ನ ಗೆಲುವನ್ನು ಕುರಿತು ಹೇಳಿಕೊಂಡಾಗ ವೃಕ್ಷ-ಗಿರಿಗಳ ನಡುವಣ ನಂಟು ಸ್ಪಷ್ಟವಾಗುತ್ತದೆ. ವೃಕ್ಷವೇ ದೈವ, ಗಿರಿಯೇ ನೆಲೆಯೆನ್ನುವ ನಂಬಿಕೆಯನ್ನು ವೈದಿಕಮಂತ್ರಗಳಲ್ಲಿಯೂ ಜಾನಪದಸಾಹಿತ್ಯದಲ್ಲಿಯೂ ಆದಿವಾಸಿ ಜನರ ಆಚಾರಗಳಲ್ಲಿಯೂ ಕಾಣಬಹುದು. ಋಗ್ವೇದದ ಒಂದು ಮಂತ್ರ 'ಗಿರಿಂ ಗಚ್ಛ ಸದಾನ್ವೇ' ಎಂದು ಕರೆನೀಡುತ್ತದೆ. ಪಾಪಗಳನ್ನು ತೊಳೆದುಕೊಳ್ಳಲು ಬೆಟ್ಟವನ್ನೇರಬೇಕಂತೆ. ಆದಿಕಾಲದಿಂದ ಜನ ಬೆಟ್ಟಗಳನ್ನೇರುತ್ತಲೆ ಬಂದಿದ್ದಾರೆ.

ಹೀಗೆ ತುಂಬ ಹಿಂದಿನಿಂದ ಪೂಜೆಗೊಳ್ಳುತ್ತ ಬಂದಿರುವ ಬೆಟ್ಟಗಳಲ್ಲಿ ಈಗ ತಿರುಮಲೆಯೆಂದು ಹೆಸರಾಗಿರುವುದೂ ಒಂದು. 'ತಿರುಮಲೆ' ಎನ್ನುವ ಮಾತಿಗೆ



ಬೆಟ್ಟದ ಒಂದು ನೋಟ

ದೊಡ್ಡಬೆಟ್ಟ ಎಂದಷ್ಟೇ ಅರ್ಥ; ಇದೇ ಮಾತು ಸಂಸ್ಕೃತದಲ್ಲಿ 'ಶ್ರೀಶೈಲ', 'ಶ್ರೀಗಿರಿ' ಎಂದಾಗುತ್ತದೆ. ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಗೆ ಸೇರಿದಂತಿರುವ ಈ ಬೆಟ್ಟಕ್ಕೆ ಮೊದಲಿನ ಹೆಸರು ವೇಂಗಡ ಎಂದು; ಅದಕ್ಕೆ ಸಂಸ್ಕೃತಛಾಯೆಯನ್ನು ಒದಗಿಸಿ 'ವೇಂಕಟಾದ್ರಿ', 'ವೇಂಕಟಾಚಲ' ಎಂದು ಕರೆಯುತ್ತಾರೆ. ಈ ಬೆಟ್ಟದ ಪ್ರಖ್ಯಾತಿಯ ಪ್ರಾಚೀನತೆಯನ್ನು ಖಚಿತವಾಗಿ ಹೇಳುವುದು ಕಷ್ಟ. ನೋಟವನ್ನು ಹಿಂದೆಹಿಂದೆ ಹರಿಸಿದಂತೆಲ್ಲ, ಅದರ ಹಳಮೆಯೂ ಹಿಂದೆಹಿಂದೆ ಸರಿಯುತ್ತದೆ. ಇತಿಹಾಸದ ಚೌಕಟ್ಟು ಮೊದಲಾಗುವ ಮೊದಲೇ ಈ ಬೆಟ್ಟದ ಪ್ರಖ್ಯಾತಿ ಪ್ರಸಿದ್ಧವಾಗಿದ್ದಿತು. ವೇದಮಂತ್ರಗಳಲ್ಲೇ ಇದರ ಪ್ರಸ್ತಾಪವನ್ನು ಕಾಣುವವರಿದ್ದಾರೆ. ಮೇಲೆ ಹೇಳಿದ ಋಗ್ವೇದದ ಹತ್ತನೆಯ ಮಂಡಲದಲ್ಲಿ, ಹನ್ನೆರಡನೆಯ ಅನುವಾಕವಾದ 115ನೆಯ ಸೂಕ್ತವು ಶಿರಿಂಬಿಠ ಭಾರದ್ವಾಜನೆಂಬ ಋಷಿಯ ಹೆಸರಿನಲ್ಲಿದ್ದು, ಅದರ ಒಂದು ಮಂತ್ರ ಈ ಬೆಟ್ಟವನ್ನು ಹೆಸರಿಸುವುದೆಂದು ಒಂದು ಅಭಿಪ್ರಾಯವಿದೆ. ಇದರ ಪ್ರಸ್ತಾಪ

ಮತ್ತೆ ಮುಂದೆ ಬರುತ್ತದೆ—ವೇಂಗಡ ಎಂಬ ಹೆಸರಿನ ತಾತ್ಪರ್ಯವನ್ನು ವಿವೇಚಿಸುವ ಸಂದರ್ಭದಲ್ಲಿ. ಅಂತೂ ಈ ಬೆಟ್ಟದ ಹಿರಿಮೆ ತುಂಬ ಹಳೆಯದು. ಬೆಟ್ಟದ ಹಿರಿಮೆ ಇತಿಹಾಸದಲ್ಲಿ ಅನುಕ್ರಮವಾಗಿ ಬೆಳೆಯಿತು ಎಂದು ಹೇಳಲಾಗದು. ಬೆಳೆಯಿತಾದರೆ ಅದರ ಹಂತಗಳನ್ನೂ ಹೆಜ್ಜೆಗಳನ್ನೂ ಗುರುತಿಸಲಾರೆವು. ಇದ್ದಕ್ಕಿದ್ದಂತೆ ಅದರ ದೊಡ್ಡಸ್ತಿಕೆ ಸಾಹಿತ್ಯದಲ್ಲೂ ಶಾಸನಗಳಲ್ಲೂ ಕಾಣಿಸಿಕೊಳ್ಳುತ್ತದೆ.

ಈ ಬೆಟ್ಟ ಪೂರ್ವಘಟ್ಟಗಳೆನಿಸಿಕೊಳ್ಳುವ ಬೆಟ್ಟಸಾಲಿನ ಒಂದು ಭಾಗ. ಈ ಘಟ್ಟಸಾಲು ತಮಿಳುನಾಡಿನ ಕೆಳತುದಿಯಲ್ಲಿರುವ 'ಆನೆಮಲೆ' ಎಂಬಲ್ಲಿ ಮೊದಲಾಗುತ್ತದೆ; ನೀಲಗಿರಿ ಶ್ರೇಣಿಗೆ ತೆಕ್ಕೆಯಾಗಿ, ಅಲ್ಲಿಂದ ಮೇಲೆ ಹಬ್ಬುತ್ತ ತಮಿಳುನಾಡು, ಕರ್ನಾಟಕ, ನೆರೆ ಆಂಧ್ರಪ್ರದೇಶಗಳನ್ನು ದಾಟಿ ಒರಿಸ್ಸಾ ಪ್ರಾಂತ್ಯವನ್ನು ಮುಟ್ಟುತ್ತದೆ. ಪಶ್ಚಿಮಘಟ್ಟದಂತೆ ಇದು ಅಖಂಡವಾದುದಲ್ಲ , ಅಷ್ಟು ಎತ್ತರದ ಬೆಟ್ಟಗಳೂ ಇಲ್ಲಿಲ್ಲ. ಇಲ್ಲಿನ ಬೆಟ್ಟಗಳ ಸರಾಸರಿ ಎತ್ತರ ಮೂರುಸಾವಿರ ಅಡಿಗಳು ಎಂದು ನಿರ್ಧರಿಸಿದ್ದಾರೆ. ನಡುನಡುವೆ ದೊಡ್ಡದೊಡ್ಡ ನದಿಗಳು ಹಾಯುವಷ್ಟು ಎಡೆಯಿರುತ್ತದೆ; ಬಯಲೆನ್ನ ಬಹುದಾದಷ್ಟು ಪ್ರದೇಶವೂ ಇರುತ್ತದೆ. ಆಂಧ್ರಪ್ರದೇಶದಲ್ಲಿ ಈ ಬೆಟ್ಟಸಾಲು ಪಲಮನೇರು ಎಂಬಲ್ಲಿ ಚಿತ್ತೂರು ಜಿಲ್ಲೆಯನ್ನು ಸೇರುತ್ತದೆ. ಅಲ್ಲಿಂದ ಮುಂದೆ ತಲಕೋಣ ಎಂಬಲ್ಲಿ 'ಅವಚಾರಿ-ವಂಕ' ಎಂಬ ತಿರುವಿನವರೆಗೆ ಬೆಟ್ಟಸಾಲಿನ ಹರವು ಸುಮಾರು ಹನ್ನೆರಡು ಮೈಲಿಗಳಂತೆ. ಆದರೆ ಹೀಗೆ ಹೋಗುವುದಾಗದು. ಕಾಡುಗಳ ನಡುವೆ ಕಾಲುದಾರಿಯನ್ನು ಹಿಡಿದು ಹೋಗಬೇಕಾಗುತ್ತದೆ. ಆಗ ಒಂದು ತುದಿಯಿಂದ ಇನ್ನೊಂದು ತುದಿಗೆ ಇಪ್ಪತ್ತುಮೈಲಿಗಳಷ್ಟು ದೂರ. ಈ ಹರವನ್ನು ಪವಿತ್ರವಾದ ಪ್ರದೇಶವೆಂದು ತುಂಬ ಹಿಂದಿನಿಂದ ಜನ ನಂಬಿದ್ದಂತೆ ತೋರುತ್ತದೆ. ಇದರಲ್ಲಿಯೇ ಈಗ ಪುರಾಣಪ್ರಸಿದ್ಧವಾದ ತುಂಬುರುತೀರ್ಥ, ಆಕಾಶಗಂಗೆ, ಪಾಪವಿನಾಶತೀರ್ಥ, ಗೋಗರ್ಭ, ವೈಕುಂಠತೀರ್ಥ, ಶೇಷತೀರ್ಥ, ಭೀಮತೀರ್ಥ, ಆಳ್ವಾರ್‌ತೀರ್ಥ ಮೊದಲಾದುವು ಸೇರಿವೆ. ಪಾಪಗಳನ್ನು ಕಳೆಯುವ ತೀರ್ಥಗಳೆಂದು ಈ ಬೆಟ್ಟದ, ಅದರ ನೀರಿನ ಪ್ರಖ್ಯಾತಿ ಮೊದಲಿನಿಂದ ಇದ್ದದ್ದೇ.

ಈ ಹರವಿನಲ್ಲಿ ತಿರುಮಲೆಯೆನ್ನುವುದು ಏಳು ಬೆಟ್ಟಗಳ ಕೂಟ. ಏಳು ಬೆಟ್ಟಗಳನ್ನು ಒಂದೇ ಬೆಟ್ಟಕೂಟದ ಏಳು ಶಿಖರಗಳು ಎಂದರೂ ಸರಿಯೇ. ತಿರುಪತಿ ಪಟ್ಟಣದಿಂದ ಹೊರಟವರೇನೋ ಏಳು ಬೆಟ್ಟಗಳನ್ನು ಬೇರೆ ಬೇರೆಯಾಗಿ ಗುರುತಿಸಬಹುದು; ಗುಡಿಯಿರುವುದು ಏಳನೆಯ ಬೆಟ್ಟದ ಮೇಲೇ. ಪುರಾಣಗಳಲ್ಲಿ ಒಂದೊಂದು ಬೆಟ್ಟಕ್ಕೂ ಒಂದೊಂದು ಹೆಸರನ್ನು ಕೊಟ್ಟಿರುವುದೂ ಉಂಟು—ಶೇಷಾಚಲ, ವೃಷಭಾಚಲ, ಗರುಡಾಚಲ, ಅಂಜನಾದ್ರಿ, ನಾರಾಯಣಾದ್ರಿ, ವೃಷಾದ್ರಿ (ಸಿಂಹಾಚಲ) ಮತ್ತು ವೇಂಕಟಾದ್ರಿ. ಈ ಹೆಸರುಗಳೆಲ್ಲ ಒಂದೇ ಬೆಟ್ಟಕ್ಕೆ ಬೇರೆಬೇರೆ ಸಂದರ್ಭಗಳಲ್ಲಿ ಬಂದುವು ಎನ್ನುವ ಮಾತೂ ಇದೆ, ಸಂದರ್ಭಗಳನ್ನು ವಿವರಿಸುವ ಕಥೆಗಳೂ ಪುರಾಣಗಳಲ್ಲಿವೆ. ಕೃತಯುಗದಲ್ಲಿ ಈ ಬೆಟ್ಟಕೂಟವನ್ನು ವೃಷಾದ್ರಿಯೆಂದು ಕರೆಯುತ್ತಿದ್ದರೆಂದೂ, ತ್ರೇತಾಯುಗದಲ್ಲಿ ಇದೇ ಅಂಜನಾದ್ರಿಯಾಯಿತೆಂದೂ, ದ್ವಾಪರದಲ್ಲಿ



ಬೆಟ್ಟದ ಒಂದು ನೋಟ

ಶೇಷಾಚಲವೆಂದೂ, ಕಲಿಯುಗದಲ್ಲಿ ವೇಂಕಟಾಚಲವಾಗಿದೆಯೆಂದೂ ಒಂದು ಪುರಾಣವು ಸಮಾಧಾನವನ್ನು ಕೊಟ್ಟಿದೆ. ಭವಿಷ್ಯೋತ್ತರಪುರಾಣದ ಈ ಮಾತಿನ ತಾತ್ಪರ್ಯ—ಇದು ತುಂಬ ಪ್ರಾಚೀನವಾದ ಪರ್ವತವೆನ್ನುವುದು.

ಗುಡಿಯಿರುವ ಬೆಟ್ಟವನ್ನು ನಾರಾಯಣಾದ್ರಿಯೆಂದು ಕರೆಯುವುದು ವಾಡಿಕೆ; ದಿಟವಾಗಿ ಇದೇ 'ತಿರುಮಲೆ' (ಶ್ರೀ-ಗಿರಿ). ಗರುಡನು ಇದನ್ನು ವೈಕುಂಠದಿಂದ ತಂದನೆಂದು ವರಾಹಪುರಾಣದ ಕಥೆ—

ನಾರಾಯಣಗಿರಿಂ ನಾಮ್ನಾ ಕ್ರೀಡಾದ್ರಿಂ ಪರಮೇಷ್ಠಿನಃ।
ಯೋಜನತ್ರಯವಿಸ್ತಾರಂ ತ್ರಿಂಶದ್ಯೋಜನಮಾಯತಮ್॥
ಅಪ್ರಾಕೃತಮಮೇಯಂ ಚ ಸರ್ವರತ್ನಮಯಂ ಗಿರಿಮ್।
ಹಿರಣ್ಮಯಂ ಮಹಾಶೃಂಗಂ ಪಂಚೋಪನಿಷದಾತ್ಮಕಮ್॥


(ಭಾಗ 1, ಅಧ್ಯಾಯ 34)

ದಿವ್ಯೋಽಯಂ ಪರ್ವತೇಂದ್ರಸ್ತು ನ ಪುನಃ ಪ್ರಾಕೃತೋ ಗಿರಿಃ।
ಸ್ವರೂಪಂ ತಸ್ಯ ಶೈಲಸ್ಯ ನ ತು ಜಾನಂತಿ ಮಾನುಷಾಃ॥

ಈ ಬೆಟ್ಟ ಸಾಮಾನ್ಯವಾದ ಬೆಟ್ಟವಲ್ಲವೆಂದೂ, ಉಪನಿಷತ್ತುಗಳ ಸ್ವರೂಪವಾದುದೆಂದೂ, ಅದರ ಕೀರ್ತಿಯನ್ನು ಪುರಾಣಗಳು ಹಾಡುತ್ತವೆ. ಬ್ರಹ್ಮಾಂಡಪುರಾಣದಲ್ಲಿರುವ ಕಥೆ, ನಾರಾಯಣನೆಂಬ ಭಕ್ತನು ಇಲ್ಲಿ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದುಕೊಂಡದ್ದರಿಂದ ಬೆಟ್ಟ ನಾರಾಯಣಾದ್ರಿಯೆನಿಸಿತು ಎಂದು—

ಅದ್ಯಪ್ರಭೃತಿ ಚೈವಾಯಂ ಗಿರಿಸ್ತ್ವನ್ನಾಮತಃ ಸದಾ।
ನಾರಾಯಣಾಚಲ ಇತಿ ಪ್ರಸಿದ್ಧೋ ಭವತು ದ್ವಿಜ॥ (ಅಧ್ಯಾಯ 3)


—ಎಂದು ನಾರಾಯಣನೇ ಅವನಿಗೆ ವರವನ್ನು ಕೊಟ್ಟನೆಂದು ಇಲ್ಲಿ ಬರುವ ವಿವರ. ಅವನು ತಪಸ್ಸಿಗೆ ತೊಡಗುವ ಮುನ್ನ ಸ್ವಾಮಿಪುಷ್ಕರಿಣಿಯಲ್ಲಿ ಮಿಂದು ಸನ್ನಿಧಿಯಲ್ಲಿ ಕೂಡುತ್ತಿದ್ದನೆಂದು ಹೇಳಿದೆ.



ಅಲಿಪಿರಿ-ಗೋಪುರ

ನಾರಾಯಣಾದ್ರಿಯೆಂಬ ಬೆಟ್ಟದಲ್ಲಿ ಗುಡಿಯಿರುವುದು ತಗ್ಗಿನಲ್ಲಿ. ಬೆಟ್ಟ ಬಾಗಿರುವ ಕಡೆ ನಿಂತಿರುವ ದೈವವೆಂದು ಈ ದೇವರಿಗೆ ಹೆಸರಿದ್ದಿತು; ತಮಿಳಿನಲ್ಲಿ 'ಮಲೈಕ್ಕೂನಿಯ ನಿನ್ರಾನ್' ಎಂಬ ಹಳೆಯ ಹೆಸರಿಗೆ ಇದೇ ಅರ್ಥ. ಸುತ್ತಲೂ ಇರುವ ಬೆಟ್ಟಗಳೆಲ್ಲ ಎತ್ತರವಾಗಿದ್ದು, ಗುಡಿಯಿರುವುದು ಹಳ್ಳದಲ್ಲಿ ಎನಿಸುತ್ತದೆ. ಗುಡಿಯ ಉತ್ತರಕ್ಕೆ ಬೆಟ್ಟವು 3583 ಅಡಿಗಳಷ್ಟು ಎತ್ತರವಿದೆ, ನೈಋತ್ಯಕ್ಕೆ 3620 ಅಡಿಗಳು. ಜಾಬಾಲಿತೀರ್ಥದ ಬಳಿ 3177 ಅಡಿಗಳು, ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ 3800 ಅಡಿಗಳಷ್ಟು. ಗುಡಿಯಿರುವುದು 2820 ಅಡಿ ಎತ್ತರದಲ್ಲಿ ಅಷ್ಟೆ. ಗುಡಿಯು ಸುತ್ತಲೂ ಇರುವ ಪ್ರದೇಶಕ್ಕಿಂತ ಸುಮಾರು ಹದಿನೈದು ಅಡಿ ತಗ್ಗಿನಲ್ಲಿದೆ. ಬೆಟ್ಟವೇರಿ ಬರುವಾಗ ಗುಡಿ ಎಲ್ಲಿಯೂ ಕಾಣುವುದೇ ಇಲ್ಲ. ನಾರಾಯಣಗಿರಿಯನ್ನು ಮುಟ್ಟಿದಮೇಲೆ ಕೆಳಗಿಳಿದು ಕಾಲುದಾರಿಯಲ್ಲಿ ನಡೆಯುವಾಗಲೂ ಗುಡಿಯನ್ನು ಕಾಣಲಾರೆವು. ಗುಡಿಗೆ ತೀರ ಹತ್ತಿರದಿಂದಲೇ ಅದು ಕಾಣಿಸಿಕೊಳ್ಳುವುದು. ಇದೊಂದು ಇಲ್ಲಿನ ಸ್ವಾರಸ್ಯ. 'ಬೆಟ್ಟದ ಮೇಲೆ ನಿಂತಿರುವ ದೈವ' (ಉಚ್ಚಿಯಿಲ್ ನಿನ್ರಾನ್) ಎಂಬ ಪ್ರಖ್ಯಾತಿಯಿದ್ದರೂ ಅವನು ನಿಂತಿರುವುದು ತಗ್ಗಿನಲ್ಲೇ.

ಎಂದಮೇಲೆ ಈ ದೈವವನ್ನು ಪತ್ತೆಮಾಡಿದುದೇ ಒಂದು ರಹಸ್ಯವಾಗಿ ಉಳಿದಿದೆ. ಅದರ ವಿಚಾರ ಮುಂದೆ ಸ್ವಲ್ಪ ಪ್ರಸ್ತಾಪಮಾಡಬೇಕಾಗುತ್ತದೆ. ಗುಡಿಯಿರುವ ಬೆಟ್ಟವನ್ನು ಮುಟ್ಟಲು ಈ ಬೆಟ್ಟಗಾಡುಪ್ರದೇಶದಲ್ಲಿ ನಾಲ್ಕಾರು ಹೆದ್ದಾರಿಗಳೂ ಹತ್ತಾರು ಕಾಲು ದಾರಿಗಳೂ ಇವೆ. ಈಗ ಹೆಚ್ಚಾಗಿ ಬಳಕೆಯಲ್ಲಿರುವ ದಾರಿ ತಿರುಪತಿಪಟ್ಟಣದಿಂದ ಹೊರಡುವುದು. ಬೆಟ್ಟದ ಆಗ್ನೇಯದಿಕ್ಕಿನಲ್ಲಿ ಸುಮಾರು ಹನ್ನೆರಡನೆಯ ಶತಮಾನದಲ್ಲಿ ಮೂಡಿಕೊಂಡ ಈ ಪಟ್ಟಣ ನಾರಾಯಣಾದ್ರಿಯಿಂದ ಸುಮಾರು ಏಳು ಮೈಲಿ ದೂರವಿದೆ—ಸೋಪಾನಮಾರ್ಗವನ್ನೇರಿ ಇಳಿದು, ಕಾಡುದಾರಿಯನ್ನು ತುಳಿದು ನಡೆದರೆ. ವಾಹನವನ್ನು ಬಳಸಿ ರಾಜಮಾರ್ಗವನ್ನು ಹಿಡಿದರೆ ಹದಿನಾಲ್ಕು ಮೈಲಿಗಳಷ್ಟು ದೂರ. ಬೆಟ್ಟದ ದಕ್ಷಿಣದಿಕ್ಕಿನಿಂದ ಹೆದ್ದಾರಿಯು ಚಂದ್ರಗಿರಿ ಎಂಬ ಊರಿನಿಂದ ಹೊರಡುತ್ತದೆ. ಇಲ್ಲಿಂದ ಗುಡಿಗೆ ಆರೇ ಮೈಲಿಗಳು; ಆದರೆ ದಾರಿ ಕಡಿದು, ಬೆಟ್ಟವನ್ನೇರುವುದು ಕಷ್ಟಸಾಧ್ಯವಾದ ಕೆಲಸ. ಇದು ಗುಡಿಯ ಹಿಂಭಾಗಕ್ಕೆ ಬಂದು ಸೇರುತ್ತದೆ. ತಿರುಪತಿಯಿಂದ ಬರುವುದಾದರೆ ಗುಡಿಯ ಮುಂಭಾಗವನ್ನೇ ದಾರಿ ಸೇರುತ್ತದೆ. ತಿರುಪತಿಯ ಹೆದ್ದಾರಿ ಚಂದ್ರಗಿರಿಯ ದಾರಿಗಿಂತ ಹೆಚ್ಚು ಬಳಕೆಯಲ್ಲಿರುವುದಕ್ಕೆ ಇದೂ ಒಂದು ಕಾರಣ. ದೇವರ ಮುಂದೆಯೇ ನಡೆದುಬರಬೇಕು ಎನ್ನುವ ವಿಧಿಯಿದೆ. ಚಂದ್ರಗಿರಿ, ತಿರುಪತಿಯಿಂದ ಏಳು ಮೈಲಿ ದೂರದಲ್ಲಿ, ಅದರ ಪಶ್ಚಿಮಕ್ಕೆ ಇದೆ. ಮಾಮಂಡೂರಿನಿಂದ ಪೂರ್ವದಿಕ್ಕಿನ ಹೆದ್ದಾರಿ, ನಾಗಪಟ್ಲ ಎಂಬಲ್ಲಿಂದ ಪಶ್ಚಿಮದ ಹೆದ್ದಾರಿ, ಇವೆರಡೂ ತಿರುಮಲೆಯನ್ನು ಸೇರುವುವು. ಈಗ ಇವು ಅಷ್ಟಾಗಿ ಬಳಕೆಯಲ್ಲಿಲ್ಲ. ಮೊದಲು, ತಿರುಚ್ಚಾನೂರು ಎಂಬಲ್ಲಿಂದ ನೇರವಾಗಿ ತಿರುಮಲೆಗೆ ಹೋಗುವ ಹೆದ್ದಾರಿಯೇ ಬಳಕೆಯಲ್ಲಿದ್ದದ್ದು. ಅದು ಈಗಿನ ತಿರುಪತಿಪಟ್ಟಣದ ಮೇಲೇ




ಕಪಿಲತೀರ್ಥ

ಹೋಗುತ್ತಿದ್ದಿತು; ಆದರೆ ಆಗ ಈ ಪಟ್ಟಣ ಇರಲಿಲ್ಲ. ತಿರುಪತಿಯು ಪ್ರಸಿದ್ಧವಾಗುವ ಕಾಲಕ್ಕೆ ತಿರುಚ್ಚಾನೂರಿನ ಪ್ರಸಿದ್ಧಿ ಮರೆಯಾಗಿದ್ದಿತು. ಇದರ ವಿಚಾರ ಮುಂದೆ ಬರುತ್ತದೆ.

ವಡವೇಂಗಡ

ಈ ಬೆಟ್ಟಕ್ಕೆ ಈಗ ತಿರುಮಲೆಯೆಂದು ಹೆಸರು ಹೆಚ್ಚಾಗಿ ಹೊಂದಿಕೊಂಡು ಬಂದಿದೆ. ಈ ತಮಿಳುಮಾತಿಗೆ 'ದೊಡ್ಡಬೆಟ್ಟ' (ಶ್ರೀ-ಗಿರಿ) ಎಂದಷ್ಟೇ ಅರ್ಥವೆಂದು ಈಗಾಗಲೇ ತಿಳಿಸಿಯಾಗಿದೆ. ಇದು ಬೆಟ್ಟಕ್ಕೆ ಮೊದಲಿದ್ದ ಹೆಸರಲ್ಲ. ಕ್ರಿಸ್ತಾಬ್ದ ನಾಲ್ಕು-ಐದನೆಯ ಶತಮಾನಗಳ ಸುಮಾರಿಗೆ ಇದ್ದಿರಬಹುದಾದ ಪೇಯಾಳ್ವಾರರು ತಮ್ಮ ಪಾಶುರವೊಂದರಲ್ಲಿ (61) 'ತಿರುಮಲೆ'ಯೆಂಬ ಮಾತನ್ನು ಬಳಸಿದ್ದಾರೆ. ಆದರೆ ಈ ಪಾಶುರದ ಪ್ರಾಮಾಣಿಕತೆಯನ್ನು ಕುರಿತು ವಿವಾದವಿದೆ. ಅವರು ಬಳಸಿರ ಬಹುದಾದ 'ಪೆರುಮಲೈ' (ದೊಡ್ಡಬೆಟ್ಟ) ಎಂಬುದರ ಬದಲು 'ತಿರುಮಲೈ' ಎಂದು ಯಾರೋ ಲಿಪಿಕಾರರು ಕೂಡಿಸಿದ್ದಾರೆಂದು ಪಂಡಿತರು ಸೂಚಿಸುತ್ತಾರೆ. ಇದೊಂದು ಸಂದರ್ಭವನ್ನು ಬಿಟ್ಟರೆ ಇದೇ ಆಳ್ವಾರರು ಉಳಿದೆಲ್ಲ ಕಡೆಗಳಲ್ಲೂ ಬೆಟ್ಟವನ್ನು ವೇಂಗಡವೆಂದೇ ವ್ಯವಹರಿಸಿದ್ದಾರೆ. ಉಳಿದಂತೆ, ಆಳ್ವಾರರಲ್ಲಿ ಯಾರೂ ಈ ಬೆಟ್ಟವನ್ನು ವೇಂಗಡವೆಂದಲ್ಲದೆ ಬೇರೆ ಯಾವ ಹೆಸರಿನಿಂದಲೂ ಕರೆದಿಲ್ಲ. ನಮ್ಮಾಳ್ವಾರರು 'ತಿರುಮಲೆ'ಯೆಂಬ ಮಾತನ್ನೇನೋ ಬಳಸಿದ್ದಾರೆ (*ತಿರುವಾಯ್‌ಮೋಳಿ, 2, 10, 4*); ಆದರೆ ಅವರು ಈ ಮಾತಿನಿಂದ ನಿರ್ದೇಶಿಸಿರುವ ಬೆಟ್ಟ ತಿರುಮಾಲಿರುಂ ಶೋಲೈನ



ಕಪಿಲತೀರ್ಥಕ್ಕೆ ಪ್ರವೇಶ

ನೆರೆಯಲ್ಲಿರುವ ಬೆಟ್ಟ. ಎಂದರೆ, ಎಂಟು-ಒಂಬತ್ತನೆಯ ಶತಮಾನದವರೆಗೆ ಬೆಟ್ಟ ವೇಂಗಡವೆಂದೇ ಪ್ರಸಿದ್ಧವಾಗಿದ್ದಿತು.

ದೊರೆತಿರುವ ಶಾಸನಗಳಲ್ಲಿ ತಿರುಮಲೆಯೆನ್ನುವ ಹೆಸರು ಮೊಟ್ಟಮೊದಲು ಕಾಣಿಸಿಕೊಳ್ಳುವುದು ಕ್ರಿಸ್ತಾಬ್ದ 1013ರ ಸುಮಾರಿಗೆ. ಚೋಳವಂಶದ ರಾಜ ಕೊಪ್ಪಾತ್ರ ಕೇಸರಿ-ಪನ್ಮಾರ್, ಎಂದರೆ ರಾಜೇಂದ್ರಚೋಳ, ತನ್ನ ಆಳ್ವಿಕೆಯನ್ನು ಮೊದಲುಮಾಡಿ ಏಳನೆಯ ದಿನದಂದು ಬರೆಸಿದ ತಮಿಳುಶಾಸನದಲ್ಲಿ "ತಿರುಮಲೆಯಲ್ಲಿರುವ ಭಂಡಾರ"ದ (ಬಂಡಾರತ್ತುಕ್ಕು, ತಿರುಮಲೈಕ್ಕು) ಪ್ರಸ್ತಾಪ ಬರುತ್ತದೆ. ದೇವರೆದುರು ನಂದಾದೀಪವನ್ನು ಬೆಳಗಿಸುವ ಸಲುವಾಗಿ ಇಪ್ಪತ್ತಮೂರು ಪೊನ್ನುಗಳನ್ನು ಗುಡಿಯ ಭಂಡಾರಕ್ಕೆ ಸಲ್ಲಿಸುವ ವಿಚಾರ ಇಲ್ಲಿನ ಸಂದರ್ಭ. ಇಲ್ಲಿಯೂ ದೇವರನ್ನು 'ತಿರುವೇಂಗಡದೇವರು' ಎಂದೇ ಕರೆಯಲಾಗಿದೆ. ತಿರುಕಾಳತ್ತಿ-ಯಾದವರಾಯನ ಕ್ರಿ. ಶ. 1209-10ರ ಶಾಸನವೊಂದರಲ್ಲಿ 'ತಿರುಮಲೆಯ ಸ್ಥಾನತ್ತಾರರ' ಪ್ರಸ್ತಾಪವಿದ್ದರೂ ದೇವರನ್ನು 'ತಿರುವೇಂಗಡಮುಡೈಯಾನ್' ಎಂದೇ ಉಲ್ಲೇಖಿಸಲಾಗಿದೆ.

ಮುಂದೆ ತಿರುಮಲೆಯೆಂಬ ಹೆಸರು ವಿಜಯನಗರದ ಅರಸರ ಕಾಲದಲ್ಲೇ ಹೆಚ್ಚಾಗಿ ಕಾಣಿಸಿಕೊಳ್ಳುವುದು. ಮಂಡಲೇಶ್ವರನಾಗಿದ್ದ ಮಂಗಿದೇವಮಹಾರಾಜನ ಶಾಸನ ವೊಂದು (ಶಕವರ್ಷ 1281, ಎಂದರೆ ಕ್ರಿಸ್ತಾಬ್ದ 1359) 'ತಿರುಮಲೆದೇವರ' ಗುಡಿಯ ಮೇಲೆ ಹೊನ್ನಿನ ಕಲಶವನ್ನು ಮೂಡಿಸಿದುದನ್ನು ಪ್ರಸ್ತಾಪಿಸುತ್ತದೆ. ಇಲ್ಲಿಂದ ಮುಂದೆ ತಿರುಮಲೆಯೆನ್ನುವ ಹೆಸರು ಬಳಕೆಗೆ ಬಂದಂತೆ ತೋರುತ್ತದೆ. ಎಂದರೆ, ಬೆಟ್ಟದ ಕೆಳಗಿನ ತಿರುಪತಿಗ್ರಾಮ ಅಥವಾ ಪಟ್ಟಣವು ಪ್ರಸಿದ್ಧಿಗೆ ಬರತೊಡಗಿದಾಗ ಬೆಟ್ಟ ತಿರುಮಲೆಯಾಯಿತೆನ್ನಬಹುದು. ಶ್ರೀವೈಷ್ಣವಸಂಪ್ರದಾಯದವರಲ್ಲಿ 'ನೂರೆಂಟು ತಿರು ಪತಿಗಳು' ಇದ್ದರೂ ಈ ತಿರುಪತಿಯೇ ತಿರುಪತಿಯಾದಂತೆ, ನೂರಾರು 'ಕೋಯಿಲು'(ಎಂದರೆ ಗುಡಿ)ಗಳಿದ್ದರೂ ಶ್ರೀರಂಗದ ಗುಡಿಯೇ 'ಕೋಯಿಲ್' ಆದಂತೆ, ಹತ್ತಾರು 'ತಿರುಮಲೆ'(ದೊಡ್ಡ ಬೆಟ್ಟ)ಗಳಿದ್ದರೂ ಈ ಬೆಟ್ಟವೇ ತಿರುಮಲೆಯಾಯಿತು. ಹದಿನಾರನೆಯ ಶತಮಾನದ ಸುಮಾರಿಗೆ 'ತಿರುಮಲೈಒಳಗು' ಎಂಬ ಕ್ಷೇತ್ರ-ಇತಿಹಾಸದ ಪುಸ್ತಕ ಸಿದ್ಧವಾದಮೇಲಂತೂ ಹಳೆಯ ವೇಂಗಡವೆಂಬ ಹೆಸರಿಗಿಂತ ತಿರುಮಲೆಯೇ ಹೆಚ್ಚು ಬಳಕೆಗೆ ಬಂದಿತು.

ಬೆಟ್ಟದ ಹೆಸರು ವೇಂಗಡವೆಂದೇ. ಕ್ರಿಸ್ತಾಬ್ದ ಮೊದಲ ಶತಮಾನದ ಸುಮಾರಿಗೆ ಸಿದ್ಧವಾಯಿತೆನ್ನುವ 'ತೋಳ್‌ಕಾಪ್ಪಿಯಂ' ತಮಿಳುನಾಡಿನ ಹರವನ್ನು ಹೇಳುತ್ತ, ಉತ್ತರದಲ್ಲಿರುವ ವೇಂಗಡ ಮತ್ತು ದಕ್ಷಿಣದಲ್ಲಿರುವ ಕುಮಾರಿ (ಕನ್ಯಾಕುಮಾರಿ)— ಇವುಗಳ ನಡುವೆ ಇರುವ ನಾಡೆಂದು ನಿರ್ದೇಶಿಸುತ್ತದೆ—

ವಡವೇಂಗಡತ್ತೆನ್‌ಕುಮರಿಯಾಯಿಡ-
ತ್ತಮಿಳ್ ಕೂರುಂ ನಲ್ ಉಲಹಂ

ಇಲ್ಲಿ ವೇಂಗಡವೆಂಬುದು ಬೆಟ್ಟ. ಶಂಗಂಯುಗದ ಕವಿಗಳಲ್ಲಿ ಒಬ್ಬರಾದ

ಮಾಮೂಲನಾರ್ ಕೂಡ ತಮ್ಮ 'ಅಹನಾನೂರಿ'ನಲ್ಲಿ ವೇಂಗಡವೆಂಬ ಬೆಟ್ಟ ಪುಳ್ಳಿಯೆಂಬ ಕಳ್ವರ್ ಕುಲದೊಡೆಯನಿಗೆ ಸೇರಿದ್ದಿತೆಂದೂ ಅಲ್ಲಿ ಉತ್ಸವಗಳು ನಡೆಯುತ್ತಿದ್ದುವೆಂದೂ ತಿಳಿಸುತ್ತಾರೆ. "ಈ ಒಳ್ಳೆಯ ನಾಡನ್ನು (ಎಂದರೆ ತಮಿಳುನಾಡನ್ನು) ದಾಟಿಹೋದರೆ ಎತ್ತರವಾದ ಬೆಟ್ಟಗಳುಳ್ಳ ಈ ಬೆಟ್ಟಸಾಲನ್ನು ಮುಟ್ಟುವೆವು" (*ಅಹ. 393*) ಎಂದು ಅಲ್ಲಿ ಬರುವ ವಿವರ. ಆಳ್ವಾರರಂತೂ ವೇಂಗಡವೆಂದೇ ವ್ಯವಹರಿಸುತ್ತಾರೆ. ಅವರ ಕಾಲಕ್ಕೇ ಸೇರುವ ತಮಿಳುಮಹಾಕಾವ್ಯ 'ಶಿಲಪ್ಪದಿಕಾರಂ' ಬೆಟ್ಟವನ್ನು ವೇಂಗಡವೆಂದೂ ವಿಷ್ಣುವಿನ ನೆಲೆಯಾದ ಬೆಟ್ಟವೆಂದೂ ('ವೇಂಗಡಮೆನ್ರು ಮೊಂಗುಯರ್ ಮಲೈ....', ನೇಡಿಯೋನ್‌ಕುನ್ರಂ) ಸ್ಪಷ್ಟಪಡಿಸುತ್ತದೆ (*ಕಾಡು ಕಾನ್‌ಕತೈ, 41-51*). ಈ ಬೆಟ್ಟದ ಮೇಲೆ ಝರಿಗಳು ಚಿಮ್ಮಿ ಎರಡೂ ಕಡೆಗಳಲ್ಲಿ ಹರಿದುಬರುವುವೆಂದೂ, ಸೂರ್ಯ-ಚಂದ್ರರ ಹೊಳಪುಗಳನ್ನು ತಳೆಯುವುವೆಂದೂ, ಬೆಟ್ಟದ ಮೇಲೆ ತಾವರೆ ಗಣ್ಣಿನ ವಿಷ್ಣು ಶಂಖ-ಚಕ್ರಗಳನ್ನು ಹಿಡಿದು, ಹೊಂಬಣ್ಣದ ಬಟ್ಟೆಯುಟ್ಟು, ಸೊಗಸಾದ ಮಾಲೆಯನ್ನು ಧರಿಸಿ, ಮಿಂಚಿನ್ನೂ ಕಾಮನಬಿಲ್ಲನ್ನೂ ಒಳಗೊಂಡ ಕಾರ್ಮೋಡದಂತೆ ಕಂಗೊಳಿಸುತ್ತ ನಿಂತಿದ್ದಾನೆಂದೂ ಈ ಪ್ರಾಚೀನ ಕಾವ್ಯ ಬಣ್ಣಿಸುತ್ತದೆ.

ವೀಜ್ಞನೀರರುವಿ ವೇಂಗಡಮೆನ್ರುಂ
ಓಙ್ಗಯರ್ ಮಲಯತುಚ್ಚಿ ಮೀಮಿಶೈ
ವಿರಿಕದಿರ್ ಞಾಯಿರುಂ ತಿಙ್ಗಳುಂ ವಿಳಙ್ಗಿ
ಇರುಮರು ಜೋಙ್ಗೆಯ ವಿಡೈನಿಲೈ ತಾನತ್ತು
ಮಿನ್ನುಕ್ಕೋಡಿ ಯುಡುತ್ತು ವಿಳಙ್ಗ ವಿರ್ಞಾಂಡು
ನನ್ನಿರಮೇಗಂ ನಿನ್ರದುವೋಲ
ಪಗೈಯಣಙ್ಞಾರ್ನಿಯುಂ ಪಾಲ್ ವೆಣ್ ಶಂಗಮುಂ
ತಕೈಪೆರು ತಾಮರೈ ಕೈಯಿನೆಂದಿ
ನಳಙ್ಗೆರ ರಾಮರರ್ ವಿಪ್ಪೂಂಡು
ವೋಲಂಪೂವಾಡೈ ಯಿರ್ ವೋಲಿಂಟು ತೋನ್ರಿಯ
ಶೆಙ್ಗಣ್ ನೆಡಿಯೋನ್ ನಿನ್ರ ವಣ್ಣಮುಂ

ಬೆಟ್ಟದ ಹೆಸರು ವೆಂಗಡ. ಅಲ್ಲಿ ನದಿಗಳ ನೀರು ಪ್ರವಾಹದಂತೆ ಹರಿಯುತ್ತದೆ. ಬೆಟ್ಟದ ನೆತ್ತಿಯ ಮೇಲೆ, ಸೂರ್ಯನ ಬಿಸಿಲಿಗೆ, ಚಂದ್ರನ ಬೆಳಕಿಗೆ ಮೈಯೊಡ್ಡಿ ನೆಟ್ಟಗೆ ನಿಂತಿರುವ ಬೆಲುವ, ಮಿಂಚಿನಲ್ಲಿ ಮೊಡದಂತೆ ಕಂಗೊಳಿಸುವನು; ಕಾಮನಬಿಲ್ಲಿನಂತೆ ಹೊಳೆಯುವನು. ಒಂದು ಕೈಯಲ್ಲಿ ಬೆದರಿಸುವ ಚಕ್ರ, ಇನ್ನೊಂದರಲ್ಲಿ ಹಾಲು ಬಿಳಿಯ ಶಂಖ. ಅವನ ಕಣ್ಣುಗಳಲ್ಲಿ ಕೆಂಪಡರಿದೆ. ಬಗೆಬಗೆಯ ಬಣ್ಣಗಳ ಹೂಮಾಲೆಗಳನ್ನು ತೊಟ್ಟಿದ್ದಾನೆ. ಇದು ಎರಡನೆಯ ಶತಮಾನದಲ್ಲಿ ಕವಿಯ ಕಣ್ಣಿಗೆ ಕಂಡುಕೊಂಡ ವೇಂಗಡದೊಡೆಯನ ರೂಪ.

'ವಡವೇಂಗಡ', ಎಂದರೆ ಬಡಗುದಿಕ್ಕಿನಲ್ಲಿರುವ ಬೆಟ್ಟ, ಎಂಬುದು ಹಳೆಯ ಶಾಸನಗಳಲ್ಲೂ ಕಾಣಸಿಗುತ್ತದೆ. ನಿದರ್ಶನಕ್ಕೆ, ತಂಜೈಯರಸ ಓಬಳನಾಥನೆಂಬ

ಯಾದವಕುಲದ ರಾಜನ ಒಂದು ಶಾಸನ, ಕ್ರಿಸ್ತಾಬ್ದ 1403ರ ಸುಮಾರಿನದು, 'ವಡವೇಂಗಡವಾಣಕ್ಕು' (ಎಂದರೆ ಬಡಗುವೇಂಗಡದ ದೇವರಿಗೆ) ಸಲ್ಲಿಸಿದ ಕೈಂಕರ್ಯವೊಂದನ್ನು ಹೇಳುತ್ತದೆ. ಈ ಪ್ರದೇಶವನ್ನು ತೋಂಡಮಂಡಲ (ಜಯನ್‌ಕೊಂಡ ಚೋಳಮಂಡಲಂ) ಎಂದು ಪಲ್ಲವ-ಚೋಳಯುಗದಲ್ಲಿ ವಿಭಾಗಮಾಡಿದಾಗ, ಈ ಕಡೆಯ ಬೆಟ್ಟವನ್ನೂ ಬೆಟ್ಟದ ತಪ್ಪಲಿನ ಊರುಗಳನ್ನೂ 'ತಿರುವೇಂಗಡಕ್ಕೋಟ್ಟ' ಎಂದು ಕರೆಯುತ್ತಿದ್ದರು. ಇದು ಕುಡವೂರುನಾಡು (ಈಗಿನ ತಿರುಪತಿಯ ಸುತ್ತಮುತ್ತ), ವೈಕುಂದವಲನಾಡು (ಈಗಿನ ಚಂದ್ರಗಿರಿಯ ಸುತ್ತಮುತ್ತ), ತುಯ್ಯನಾಡು (ಚಿತ್ತೂರಿನ ಆಸುಪಾಸು), ಅರ್ರೂರುನಾಡು (ಕಾಳಹಸ್ತಿಯ ಅಕ್ಕಪಕ್ಕ) ಎಂದು ಮತ್ತೆ ವಿಭಾಗ ಮಾಡಿದ್ದರು. ತಿರುಪತಿಯು ಹೆಸರಾಗುವ ಮೊದಲು ಈ ಬೆಟ್ಟದೊಂದಿಗೆ ಹತ್ತಿರದ ನಂಟನ್ನು ಬೆಳೆಸಿಕೊಂಡಿದ್ದ ತಿರುಚ್ಚುಕನೂರು (ತಿರುಚ್ಚಾನೂರು), ಕುಡವೂರುನಾಡಿನಲ್ಲೇ ಸೇರಿದ್ದಿತು. ಹತ್ತು-ಹನ್ನೊಂದನೆಯ ಶತಮಾನಗಳವರೆಗೂ ಬೆಟ್ಟದ ಮೇಲಿನ ಗುಡಿಗೆ ಬೇಕಾಗುವ ಪೂಜಾಸಾಮಗ್ರಿಗಳನ್ನು ತಿರುಚ್ಚಾನೂರಿನಿಂದಲೇ ಒಯ್ಯುತ್ತಿದ್ದರು. ಜನರು ವಾಸವಾಗಿರುತ್ತಿದ್ದ ಪ್ರದೇಶಕ್ಕೆ ಆಗ ಎಲ್ಲೆಯೆಂದರೆ ತಿರುಚ್ಚಾನೂರೇ. ಅದನ್ನೂ ದಾಟಿ ಬಡಗುದಿಕ್ಕಿನಲ್ಲಿ ಇದ್ದುದು ಈ ಬೆಟ್ಟ. ಹಾಗೆಂದೇ ಇದು 'ವಡವೇಂಗಡ'.

ವೈದಿಕಮೂಲ

'ವೇಂಗಡ'ವೆಂಬ ಮಾತಿಗೆ ಏನು ಅರ್ಥವೋ ಖಚಿತವಾಗಿ ತಿಳಿದುಬರುವುದಿಲ್ಲ. ಇದನ್ನು 'ವೇಂಕಟ'ವೆಂದು ಸಂಸ್ಕೃತವಾಗಿಸಿ, ಅದಕ್ಕೆ ಅರ್ಥಮಾಡುವ ಪ್ರಯತ್ನ ನಡೆದಿದೆ. ಸಂಸ್ಕೃತಪಂಡಿತರು ಋಗ್ವೇದದ ಹತ್ತನೆಯ ಮಂಡಲದಲ್ಲಿ ಹನ್ನೆರಡನೆಯ ಅನುವಾಕದ 155ನೆಯ ಸೂಕ್ತದಲ್ಲಿ ಬರುವ ಮಂತ್ರವನ್ನು ವೇಂಕಟವೆಂಬ ಮಾತಿನ ಮೂಲ ಆಕರವೆಂದು ತೋರಿಸುತ್ತಾರೆ. ಶಿರಿಂಬಿಠ ಭಾರದ್ವಾಜನೆಂಬ ಋಷಿಗೆ ಗೋಚರವಾದ ಈ ಮಂತ್ರ—


ಅರಾಯಿ ಕಾಣೇ ವಿಕಟೇ ಗಿರಿಂ ಗಚ್ಛ ಸದಾನ್ವೇ

—ಎಂಬ ಮಾತುಗಳನ್ನು ಒಳಗೊಳ್ಳುತ್ತದೆ. ಇಲ್ಲಿ 'ವಿಕಟೇ' ಎನ್ನುವ ಮಾತು 'ವೇಂಕಟ'ದ ಪ್ರಾಚೀನರೂಪವೆಂದು ವಾದ. ಈ ಮಂತ್ರಕ್ಕೆ 'ಅಲಕ್ಷ್ಮೀಘ್ನ'ದೇವತೆ ಎಂದು ಹೇಳಿದೆ; ಎಂದರೆ ಅಮಂಗಳವನ್ನು ದೂರ ಓಡಿಸುವ, ಕಾಡಿಗಟ್ಟುವ ಪ್ರಯೋಜನ. ಈ ಮಂತ್ರದ 'ವಿಕಟೇ' ಎನ್ನುವ ವೈದಿಕಪ್ರಯೋಗಕ್ಕೆ ಸಾಯಣಾಚಾರ್ಯರು 'ವಿऽಕಟೇ' ಎಂದು ಪದಪಾಠಮಾಡಿ "ವಿಕೃತಗಮನೇ, ವಿಕೃತಾಂಗೇ ವಾ" ಎಂದು ವಿವರಿಸುತ್ತಾರೆ. ಇದಕ್ಕೆ ನಡಿಗೆ ಕೊಂಕಾಗಿರುವುದು, ಅಥವಾ ಮೈಯೇ ವಕ್ರವಾಗಿರುವುದು ಎಂದರ್ಥವಾಗುತ್ತದೆ. ಅಮಂಗಳದೇವತೆಗೆ ಸಂಬೋಧನೆಯಂತೆ

ಈ ಮಾತು ಮೂಡಿಕೊಂಡಿದೆ. ವಿಶೇಷಣವಾಗಿ 'ಅರಾಯಿ' (ಎಂದರೆ, 'ಅದಾಯಿನಿ, ದಾನವಿರೋಧಿನಿ') ಮತ್ತು 'ಕಾಣೇ' (ಎಂದರೆ, 'ಕುತ್ಸಿತಶಬ್ದಕಾರಿಣಿ') ಎಂಬ ಮಾತುಗಳನ್ನು ಜೋಡಿಸಿದ್ದಾರೆ. ಔದಾರ್ಯವಿರದ, ಕೆಟ್ಟಕೂಗನ್ನು ಹೊರಡಿಸುವ, ಕ್ಷುದ್ರಮನೋಧರ್ಮದ ದೇವತೆ 'ವಿಕಟೇ' ಎಂಬ ಸಂಬೋಧನೆಯ ಹಿಂಬದಿಯಲ್ಲಿ ಮೂಡಿಕೊಳ್ಳುತ್ತಾಳೆ. ಇವಳನ್ನು 'ಗಿರಿಂ ಗಚ್ಛ' ('ಬೆಟ್ಟಕ್ಕೆ ಹೋಗು!') ಎಂದು ಮಂತ್ರ ಹೊರದೂಡುತ್ತದೆ. 'ಗಿರಿ' ಎಂದರೆ 'ನಿರ್ಜನಪ್ರದೇಶ'ವೆಂದೇನೋ ಭಾಷ್ಯಕಾರರು ನಿರ್ದೇಶಿಸಿದ್ದಾರೆ. ಜನರಿರುವ ಊರನ್ನು ಬಿಟ್ಟು ಜನರಿಲ್ಲದ ಕಾಡು ಅಥವಾ ಬೆಟ್ಟವನ್ನು ಸೇರಿಕೋ, ಎಂದು ಮಂತ್ರದ್ರಷ್ಟಾರರ ಆಶಯ. ಇದಕ್ಕೆ 'ವಸತಿಯಾಚೆಯಿರುವ ವಡವೇಂಗಡಕ್ಕೆ ಓಡು' ಎಂದು ಬೇಕಾದರೆ ಅರ್ಥಮಾಡಬಹುದು.

ಈ ಮಂತ್ರಕ್ಕೆ ವೈಖಾನಸಆಚಾರ್ಯರು ಬೇರೊಂದು ರೀತಿಯಲ್ಲಿ ಅರ್ಥ ಮಾಡುತ್ತಾರೆ. 'ಅರಾಯಿ'ಯೆಂದರೆ ಐಶ್ವರ್ಯವಿಲ್ಲದಿರುವ ('ರಯಿ' ಎನ್ನುವುದು ಐಶ್ವರ್ಯವಾಚಿಯಾದ ಶಬ್ದ); 'ಕಾಣೇ' ಎಂದರೆ ಹೊರಗಿನ ಅಥವಾ ಒಳಗಿನ ದೃಷ್ಟಿಯಿಲ್ಲದಿರುವುದು; 'ವಿಕಟೇ' ಎಂದರೆ ವಿಶಿಷ್ಟವಾಗಿ ತಾಪತ್ರಯಶಾಲಿನಿಯಾದುದು; 'ಸದಾನ್ವೇ' ಎನ್ನುವಾಗ ದಾನವ ಶಬ್ದಕ್ಕೆ ದಾನ್ವ ಎಂಬುದು ಛಾಂದಸಪ್ರಯೋಗ, ಎಂದರೆ ಐಹಿಕ ಆಮುಷ್ಮಿಕ ಪುರುಷಾರ್ಥಗಳಿಗೆ ವಿರೋಧಿಯಾದ. ಇವೆಲ್ಲ ಇರುವಾಗ, ಇವುಗಳ ಪರಿಹಾರಕ್ಕಾಗಿ ಬೆಟ್ಟಕ್ಕೆ ತೆರಳು (ಗಿರಿಂ ಗಚ್ಛ). ಯಾರ ಬೆಟ್ಟವೆಂದರೆ ಶಿರಿಂಬಿಠನದು. ಶಿರಿಂಬಿಠ ಎನ್ನುವುದು ಶ್ರೀನಿವಾಸನಿಗೆ ಪರ್ಯಾಯಪದ. ಶಿರಿ ಎಂದರೆ ಶ್ರೀ, ಲಕ್ಷ್ಮಿ; ಅವನಿಗೆ ಪೀಠಪ್ರಾಯವಾದವಳು (ಬಿಠ ಎನ್ನುವುದು ಪೀಠದ ಛಾಂದಸರೂಪ). ಅವನು ಶ್ರೀ-ನಿವಾಸ. 'ವಿಕಟ' ಎನ್ನುವ ಮಾತಿಗೂ ಪಾಪಗಳನ್ನು ಉರಿಸುವವನು (ಸರ್ವ ಪಾಪಾನಿ ವೇಂ ಪ್ರಾಹುಃ ಕಟಸ್ತದ್ದಾಹ ಉಚ್ಯತೇ) ಎಂಬರ್ಥವನ್ನು ಹೇಳುವುದಿದೆ. 'ವಿಕಟೇ ಗಿರಿಂ' ಎಂದರೆ ವೇಂಕಟಗಿರಿಯನ್ನು ಎಂದಾಗಬಹುದು.

'ವಿಕಟಾ' ಎಂಬ ಮಾತನ್ನು ಮುಂದಿನ ಸಾಹಿತ್ಯದಲ್ಲಿ 'ರಕ್ತ-ಕೀವುಗಳನ್ನು ಸುರಿಸುವವಳು' (**ವಿಕಟಯತಿ, ಪೂಯರಕ್ತಾದಿಕಂ ವರ್ಷತಿ**) ಎಂದು ಬಿಡಿಸಿ ವಜ್ರ ಕಾಳಿಗೂ ವಜ್ರವಾರಾಹಿಗೂ ವಿಶೇಷಣವಾಗಿ ಬಳಸುವುದಿದೆ. ವಿಕಟೆಯೆಂದರೆ ಕ್ರೂರ ದೇವತೆ; ಈ ಸ್ತ್ರೀಲಿಂಗದ ನಾಮಪದದ ಸಂಬೋಧನಾರೂಪವೇ 'ವಿಕಟೇ'. ನಮ್ಮ ಜಾನಪದನೆಲೆಯಲ್ಲಿ ನಮ್ಮ ಕಷ್ಟ-ನಿಷ್ಠುರಗಳಿಗೆ, ರೋಗ-ರುಜಿನಗಳಿಗೆ, ಆಪತ್ತು-ವಿಪತ್ತುಗಳಿಗೆಲ್ಲ ಕಾರಣರಾದ ಶಕ್ತಿದೇವತೆಯರಿದ್ದಾರಲ್ಲವೆ? ಇಂಥ ಕ್ರೂರದೇವತೆಗಳಲ್ಲಿ ವಿಕಟೆಯೂ ಸೇರಿರಬಹುದು. ಈ ಸಂದರ್ಭದಲ್ಲಿ ಸ್ವಾರಸ್ಯವಾದ ಒಂದು ವಿವರವನ್ನು ಗಮನಿಸಬೇಕು: ತಿರುಪತಿ-ಊರಿನಲ್ಲಿ ಗಂಗಾಜಾತ್ರೆ ನಡೆಯುತ್ತದೆ, ಸಮಾನ್ಯವಾಗಿ ಏಪ್ರಿಲ್-ಮೇ ತಿಂಗಳುಗಳಲ್ಲಿ. ಈ ಕಡೆ ಹಲವು ಊರುಗಳಲ್ಲಿ ಈ ಜಾತ್ರೆ ನಡೆದರೂ, ತಿರುಪತಿಯದು ಹೆಸರಾದದ್ದು, ಬಹುಜನರು ನೆರೆಯುತ್ತಾರೆ. ಈ ಜಾತ್ರೆಯ ಮುಖ್ಯದೇವತೆ ಗಂಗಮ್ಮ, ತಿರುಮಲೆಯ ದೇವರ ಸೋದರಿಯಂತೆ. ಊರಿನ ಪೂರ್ವಕ್ಕೆ ಗುಡ್ಡವೊಂದರ ಮೇಲೆ ಈ ಜಾತ್ರೆ ನಡೆಯುತ್ತದೆ. ದೇವತೆಗೆ ಗುಡಿಯೆಂಬು



ಅಲಿಪಿರಿಗೋಪುರ-ಬೆಟ್ಟದ ಹಿನ್ನೆಲೆಯಲ್ಲಿ

ದಿಲ್ಲ. ಜಾತ್ರೆಯ ಸಮಯದಲ್ಲಿ ಮಣ್ಣಿನಿಂದ ಮಾಡಿ ಒಣಹುಲ್ಲಿನಿಂದ ತುಂಬಿಸಿದ ಮೂರ್ತಿಯೊಂದನ್ನು ಸಿದ್ಧಪಡಿಸಿ, ಅದೇ ಗಂಗಮ್ಮನೆಂದು ಪೂಜೆಮಾಡುತ್ತಾರೆ. ಪೊಂಗಲು ನೈವೇದ್ಯದೊಂದಿಗೆ ಕೋಣ, ಕುರಿ, ಕೋಳಿಗಳನ್ನು ಬಲಿಗೊಟ್ಟು ಎಡೆಯಿಡುತ್ತಾರೆ. ಜಾತ್ರೆಯು ಮುಗಿದಮೇಲೆ ಮೂರ್ತಿಯನ್ನು ಸಂಭ್ರಮದಿಂದ ಸುಡುತ್ತಾರೆ.

ಈ ಗಂಗೆಗೂ ವೇಂಗಡಕ್ಕೂ ನಂಟು ಇರುವುದು ಜಾನಪದಕಲ್ಪನೆಯಲ್ಲಿ ಸ್ಪಷ್ಟವಾಗಿದೆ. ಹಾಗಾದರೆ ವೇಂಗಡವೆಂಬುದು ಅಮಂಗಳದ ನೆಲೆಯೆಂದೇ? ಅಥವಾ ಅಮಂಗಳವೂ ಅಲ್ಲಿ ಮಂಗಳವಾಗಿ ಮಾರ್ಪಡುವುದೆಂದೋ? ಪಾಪಗಳನ್ನು ಸುಡುವ ಬೆಟ್ಟ ಇದೆಂದು ನಮ್ಮಾಳ್ವಾರರ ತಿರುವಾಯ್ಮೊಳಿಯಲ್ಲೇ ಒಕ್ಕಣೆಯಿದೆ. 'ಕಟ'ವೆಂದರೆ ಮೂರು ಬಗೆಯಾದ ಋಣಗಳೆಂದೂ ಅದನ್ನು ನೀಗಿಸುವುದು ವೇಂಗಡವೆಂದೂ ವ್ಯಾಖ್ಯಾನಕಾರರ ವಿವರಣೆ. ಇದೇ ಅರ್ಥವನ್ನೇ ಹಿಡಿದು ವೇದಾಂತದೇಶಿಕರೂ 'ಇಬ್ಬಗೆಯ ಪಾಪಗಳನ್ನೂ ಕಡಿಯುವ ಬೆಟ್ಟ' (**ಇರುವಿನೈಯುಂ ಕಡಿಯುಂ ವೇಙ್ಕಟ್ಟು**) ಎಂದು ವೇಂಗಡಬೆಟ್ಟದ ಹಿರಿಮೆಯನ್ನು ಹಾಡಿದ್ದಾರೆ (*ರಹಸ್ಯತ್ರಯಸಾರದಲ್ಲಿ*). ತಮಿಳಿನ 'ವಿನೈ' (ಪಾಪಗಳು) ಮತ್ತು 'ಕಡಂ' (ನೀಗುವಿಕೆ)—ಎರಡೂ ಪದಗಳು ಕಲೆತು ವೇಂಗಡವಾಯಿತೆಂದು ಇಲ್ಲಿನ ಸೂಚನೆ.


ತಮಿಳಿನ ರೂಪಕ್ಕೆ ಸಂಸ್ಕೃತದ ಮುದ್ರೆಯನ್ನೊತ್ತುವ ಅಗತ್ಯ ಕಂಡುಬಂದಾಗ ಭವಿಷ್ಯೋತ್ತರಪುರಾಣವು ಮೇಲೆ ಕಾಣಿಸಿದಂತೆ, "ಸರ್ವಪಾಪಾನಿ ವೇಂ ಪ್ರಾಹುಃ ಕಟಸ್ತದ್ದಾಹ ಉಚ್ಯತೇ" (ಎಂದರೆ, ಎಲ್ಲ ಪಾಪಗಳಿಗೂ 'ವೇಂ' ಎಂದು ಹೆಸರು,

ಕಟವೆಂದರೆ ಸುಡುವುದು) ಎಂದು ವೇಂಕಟಶಬ್ದದ ತಾತ್ಪರ್ಯವನ್ನು ವಿವರಿಸಿತು. ಬ್ರಹ್ಮಾಂಡಪುರಾಣದಲ್ಲಿಯೂ "ಸರ್ವಪಾಪದಹೋ ಯಸ್ಮಾದ್ ವೇಂಕಟಾಚಲ ಇತ್ಯಭೂತ್" (ಎಲ್ಲ ಪಾಪಗಳನ್ನೂ ಸುಡುವುದರಿಂದಾಗಿ ಇದು ವೇಂಕಟಬೆಟ್ಟವೆನಿಸಿ ಕೊಂಡಿತು) ಎಂಬ ವಿವರಣೆಯಿದೆ. 'ವ್ಯಂಹಃ' (ವಿ + ಅಂಹಃ, ವಿವಿಧಾನಿ ಪಾಪಾನಿ) ಎಂಬ ಮಾತು ಪಾಪಗಳೆಂಬರ್ಥದಲ್ಲಿ ಋಗ್ವೇದದಲ್ಲೇ ಬರುವುದೆಂದೂ (10.126.8), ತೈತ್ತಿರೀಯಸಂಹಿತೆಯೂ ಈ ಮಾತನ್ನು ಇದೇ ಅರ್ಥದಲ್ಲಿ ಬಳಸುವುದೆಂದೂ (**ವ್ಯಂಹಃ ಪ್ರಾತಾರ್ಯಗ್ನೇ ಪ್ರತರಾನ್ ನ ಆಯುಃ**), ಆದುದರಿಂದ 'ವ್ಯಂ' ಮತ್ತು 'ಕಟ' ಎರಡೂ ಸೇರಿ, ಮೊದಲು 'ವ್ಯಂಕಟ'ವಾಗಿ ಅನಂತರ 'ವೇಂಕಟ'ವೆಂದು ಪ್ರಾಕೃತ ರೂಪವನ್ನು ತಳೆಯಿತೆಂದೂ ವಿದ್ವಾಂಸರು ವಾದಮಾಡುವುದಿದೆ. "ವ್ಯಂಹಃ ಕಟಯತಿ, ವ್ಯಂಹಃಕಟಃ ವ್ಯಂಕಟಃ" ಎಂದು ಅವರು ತೋರಿಸುವ ಹೆಜ್ಜೆಗಳು. ಹೀಗೆ ವೇಂಗಡವೆಂಬ ತಮಿಳುಮಾತಿಗೆ ವೇಂಕಟವೆಂಬ ಸಂಸ್ಕೃತಮೂಲವನ್ನು ಕಾಣಿಸುವುದು ಈ ವಾದದ ಉದ್ದೇಶ. ಆದರೆ ಮಾತಿನ ಹಳೆಯ ಪ್ರಯೋಗಗಳನ್ನು ಗಮನಿಸಿದರೆ ವೇಂಗಡವೆಂಬ ರೂಪವೇ ಹಳೆಯದೆಂದು ತೋರುತ್ತದೆ. ತೆಲುಗಿನಲ್ಲಿ ಇದು 'ವೆಂಗಳ'ವಾಗುತ್ತದೆ.

ಗೊಂದಲ ಇಷ್ಟರಲ್ಲೇ ಮೈದುಂಬುವುದಿಲ್ಲ. 'ಕಟಂ' ಎನ್ನುವ ಮಾತು ತಮಿಳು ಸಾಹಿತ್ಯದಲ್ಲಿ ಬಂಜರುಕಾಡು (ಶಿಲಪ್ಪದಿಕಾರಂ ವ್ಯಾಖ್ಯಾನಕಾರರ ಪ್ರಕಾರ, ಅರುಂಗುರಂ), ಬೆಟ್ಟದ ಇಳಿಜಾರು (ಮಲೈಚ್ಚಾರಲ್), ಓರಣವಿರದ ಕಗ್ಗಾಡು (ಪುರ್ವಣಿ ಕೊಂಡ ಬೂದಾರು ಕಡತ್ತಿಡ್ಡೈ, ನರ್ತಿನ್ನೈ, 48) ಎಂದು ಮೊದಲಾದ ಅರ್ಥಗಳನ್ನು ಹೊಂದಿದೆ. 'ವೇಂ' ಎಂದರೆ ಸುಡುವುದು. 'ವೇಂ' ಮತ್ತು 'ಕಟಂ' ಎರಡೂ ಕೂಡಿ 'ವೇಂಗಡ'ವಾದರೆ 'ಸುಡುಗಾಡು' ಎಂದರ್ಥವಾಗುತ್ತದೆ. ಈ ಅರ್ಥವನ್ನು ಸಮರ್ಥಿಸುವಂತೆ ತ್ರಿಕಾಂಡಶೇಷವು 'ಕಟ' ಎಂದರೆ 'ಸುಡುಗಾಡು' ಎಂಬರ್ಥವನ್ನೇ ಹೇಳುತ್ತದೆ (**ಪಂಚಾವಸ್ಥಃ ಕಟಃ ಸ್ಥಾಗಃ ಶ್ಮಶಾನಂ ತು ಶತಾನಕಮ್**)! ಪಾಪರೂಪಿಣಿಯಾದ ಗಂಗಮ್ಮನನ್ನು ಸುಡುವ ಸಂಭ್ರಮ ಈ ಚೌಕಟ್ಟಿನಲ್ಲಿ ಹೆಚ್ಚಿನ ಸ್ವಾರಸ್ಯವನ್ನು ಪಡೆದುಕೊಳ್ಳುತ್ತದೆಯಲ್ಲವೆ?

ಗಂಗಮ್ಮ ಮಾಯಾವಿನಿಯಾದರೆ, ಅವಳ ಸೋದರನೆಂದು ಪ್ರಸಿದ್ಧನಾದ ವೇಂಗಡದವನೂ ಮಾಯಾವಿಯೇ. ಅವನನ್ನು ವೈಕುಂಠನೆನ್ನುವುದು ಏತಕ್ಕೆ? ಮಾಯೆಗೆ ವಿಕುಂಠಾ ಎಂದು ಹೆಸರು (**ಕುಂಠತ್ಯನಯಾ ಕುಂಠ, ವಿವಿಧಾ ಕುಂಠಾ ಮಾಯಾ**), ಆದು ಯಾವನಲ್ಲಿದೆಯೋ ಅವನು ವೈಕುಂಠ (**ವಿಕುಂಠಾ ವಿದ್ಯತೇ ಅಸ್ಯ ವೈಕುಂಠಃ**). ವಿಷ್ಣುಸಹಸ್ರನಾಮಭಾಷ್ಯದಲ್ಲಿ 'ವೈಕುಂಠ' ಎಂಬ ಹೆಸರು ಬಂದಾಗ, ನಡೆಯುವ ದಾರಿಗೆ ಹಲವಾರು ಬಗೆಯ ಅಡ್ಡಿಗಳು ಯಾವನಿಂದ ಒದಗುತ್ತವೆಯೋ ಅವನು (**ವಿವಿಧಾ ಕುಂಠಾ ಗತೇಃ ಪ್ರತಿಹತಿಃ, ತಸ್ಯಾಃ ಕರ್ತಾ**) ಎಂದು ವಿವರಣೆಯಿದೆ. ಇದು ವಿಷ್ಣುವಿನ ಹಿರಿಮೆಯಲ್ಲಿ ಒಂದು ಅಂಶ. ಮಾಯಾವಿಯಾದವನ ಹೆಸರೇ ವೈಕುಂಠವಾಗಿದ್ದುದು ಬರುಬರುತ್ತ ಅವನ ನೆಲೆಯಾಯಿತು; ವ್ಯಕ್ತಿಯ ಹೆಸರು ಲೋಕದ ಹೆಸರಾಗಿ ಮಾರ್ಪಟ್ಟಿತು. ಭೂಮಿಯ ಮೇಲ್ಭಾಗದಲ್ಲಿ ಎಂಟುಕೋಟಿ ಯೋಜನಗಳನ್ನು ದಾಟಿ ಹೋದರೆ ಸತ್ಯಲೋಕ, ಸತ್ಯಲೋಕದ ಮೇಲ್ಗಡೆ ಭೂಮಿಯಿಂದ ಹದಿನೆಂಟು

ಯೋಜನಗಳಾಚೆ ಇರುವುದು ವೈಕುಂಠಲೋಕ—ಇದೇ ವಿಷ್ಣುವಿನ ಸ್ಥಾನ ಎಂದು ಪದ್ಮಪುರಾಣದ ನಿರ್ದೇಶನ (ಸ್ವರ್ಗಖಂಡ, ಆರನೆಯ ಅಧ್ಯಾಯ). ಇದು ಅಮೃತವಾದುದು, ಶಾಶ್ವತವಾದ ನಿತ್ಯವಾದ ಸ್ಥಾನ, ಮೋಕ್ಷವನ್ನು ಕೊಡುವಂಥದು, ಬ್ರಹ್ಮಾನಂದವನ್ನು ಒದಗಿಸುವ ನೆಲೆ ಎಂದು ಪುರಾಣಗಳಲ್ಲಿ ಬರುವ ಒಕ್ಕಣೆ.



ವೇಂಕಟೇಶ

ವೈಕುಂಠಕ್ಕೂ ವೇಂಕಟಕ್ಕೂ ಮಾತಿನಲ್ಲಿ ಹೋಲಿಕೆಯಿದೆ. ಕಲ್ಪನೆಯಲ್ಲೂ ನಂಟನ್ನು ಕಾಣಿಸುವ ಯತ್ನ ನಡೆದಿದೆ. ವಿಷ್ಣುವು ತನ್ನ ನೆಲೆಯಾದ ವೈಕುಂಠವನ್ನು ಬಿಟ್ಟು ಈ

ವೇಂಕಟಬೆಟ್ಟದ ಮೇಲೆ ನೆಲೆಸಿದನೆಂದು ಪುರಾಣಗಳ ಕಥೆ. ಅದನ್ನು ಸಿದ್ಧಪಡಿಸಲು ಹಲವಾರು ಕಲ್ಪನೆಗಳನ್ನು ಹೊರಹೊಮ್ಮಿಸಿವೆ, ಪುರಾಣಗಳು. ಈ ಕಲ್ಪನೆಗಳಿಗೂ ಕಥೆಗೂ ಮೂಲ ಎಲ್ಲಿಯದು? ಕಥೆಗಳನ್ನು ಕಾಣಿಸದೆ ಬರಿಯ ಕಲ್ಪನೆಯಷ್ಟನ್ನೇ ಉಳಿಸಿಕೊಂಡಿರುವ ಉಲ್ಲೇಖಗಳೂ ಇವೆ. ನಿದರ್ಶನಕ್ಕೆ, ಈಗ ವೇಂಗಡದ ಗುಡಿಯಲ್ಲಿ ದೇವರೆದುರು ದಿನವೂ ಒಪ್ಪಿಸುವ ಮಂತ್ರಪುಷ್ಪದಲ್ಲಿ ಸೇರಿಕೊಂಡಿರುವ ಈ ಶ್ಲೋಕ ಇಂಥದು—

ಮಾಯಾವೀ ಪರಮಾನಂದಂ ತ್ಯಕ್ತ್ವಾ ವೈಕುಂಠಮುತ್ತಮಮ್।
ಸ್ವಾಮಿಪುಷ್ಕರಿಣೀತೀರೇ ರಮಯಾ ಸಹ ಮೋದತೇ॥

ಮಾಯಾವಿಯಾದ ವಿಷ್ಣುವು ಉತ್ತಮವೂ ಪರಮಾನಂದವೂ ಆದ ವೈಕುಂಠವನ್ನು ಬಿಟ್ಟು, ಸ್ವಾಮಿಪುಷ್ಕರಿಣೀಕೊಳದ ದಂಡೆಯ ಮೇಲೆ (ಎಂದರೆ, ವೇಂಗಡಬೆಟ್ಟದ ಮೇಲೆ) ತನ್ನರಸಿ ಲಕ್ಷ್ಮಿಯೊಡನೆ ನೆಲೆಸಿದ್ದಾನೆ, ಎಂದು ಈ ಶ್ಲೋಕದ ತಾತ್ಪರ್ಯ. ಇದರ ಮೂಲವನ್ನು ಪ್ರಬಂಧಗಳಲ್ಲಿ ಕಾಣಬಹುದು.

ಇದೇ ಅರ್ಥವನ್ನೂ 'ಮಾಯಾವಿ'ಯೆಂಬ ಪದವನ್ನೂ ಅಳವಡಿಸಿಕೊಂಡಿರುವ ಪಾಶುರಗಳು ನಮ್ಮಾಳ್ವಾರರ ತಿರುವಾಯ್‌ಮೋಳಿಯಲ್ಲಿ ಸಿಗುತ್ತವೆ. ಒಂದು ಪಾಶುರದಲ್ಲಿ "ಎಲ್ಲರಿಗಿಂತ ಮಿಗಿಲಾದ ಈ ದೈವವು ತನ್ನ ನೆಲೆಯನ್ನು ಬಿಟ್ಟು ತಿರುವೇಂಗಡ ಬೆಟ್ಟದ ಮೇಲೆ ನೆಲೆಸಿದ್ದಾನೆ; ಈ ಬೆಟ್ಟವನ್ನು ಪೂಜಿಸಿದರೆ ಸಾಕು, ನಮ್ಮೆಲ್ಲ ಪಾಪಗಳೂ ದೂರವಾಗುತ್ತವೆ!" (**ಪರನ್ ಶೊನ್ನುಶೇರ್ ತಿರುವೇಂಗಡಮಲೈ ಒನ್ರುಮೇತೋಳ್ ನಮ್ ವಿನೈ ಓಯುಮೇ!**)—ಎಂದು ಭಾವಪರವಶರಾಗಿ ಹಾಡಿದ್ದಾರೆ. ಪುರಾಣದ ಕಥೆಗಳಿಗೆ ಸ್ಫೂರ್ತಿಯನ್ನು ಒದಗಿಸಿದ್ದು ಈ ಪಾಶುರವಿದ್ದೀತು. ಆದರೆ ನಮ್ಮಾಳ್ವಾರರು ಇದನ್ನು ನಡೆದ ಸಂಗತಿಯೆಂದಾಗಲಿ ಹಿನ್ನೆಲೆಯ ಕಥೆಗಳನ್ನಾಗಲಿ ಇಲ್ಲಿಯಾಗಲಿ ಬೇರೆಲ್ಲಿಯಾಗಲಿ ಹೇಳುವುದಿಲ್ಲ; ಅರ್ಚಾವತಾರದ ವೈಶಿಷ್ಟ್ಯವನ್ನು ಹೇಳಲೆಂದು ಈ ಕಲ್ಪನೆಯಷ್ಟೇ. ಈ ದೇವರನ್ನು ನಮ್ಮಾಳ್ವಾರರು ಮಾಯಾವಿಯೆಂದೇ ಕರೆದಿದ್ದಾರೆ (*ತಿರುವಾಯ್‌ಮೋಳಿ, 1. 5. 4*); ಅವನೇ ವೈಕುಂಠನಂತೆ, ನಿತ್ಯಸೂರಿಗಳಿಗೂ ಒಡೆಯನಂತೆ; ನನಗೂ ಒಡೆಯನೆಂದು ಅವರು ಬಿನ್ನವಿಸಿಕೊಂಡಿದ್ದಾರೆ (**ವಾನೋರ್ ಪೆರುಮಾನ್, ಮಾಮಾಯನ್, ವೈಕುಂದನ್, ಎಂಬೆರುಮಾನೇ!**). ವೈಕುಂಠವು ಅಪ್ರಾಕೃತ ಶರೀರವುಳ್ಳ ನಿತ್ಯಸೂರಿಗಳ ಬೀಡು; ಮಣ್ಣಿನ ಮೈಯುಳ್ಳ ನಮಗೆ ವೇಂಗಡಬೆಟ್ಟವೇ ವೈಕುಂಠ. ವೇಂಗಡವನ್ನು ವೈಕುಂಠವನ್ನಾಗಿ ಮಾರ್ಪಡಿಸಿದ್ದು ಅವನ ಮಹಾಮಾಯೆಯಲ್ಲವೆ? ಈ ಬೆಟ್ಟವನ್ನು ಭಾವಿಸಿಕೊಂಡರೇ ಪಾಪಗಳು ಚೆದುರಿಹೋಗುವುವೆಂದು ನಮ್ಮಾಳ್ವಾರರ ವಿಶ್ವಾಸ. ಪಾಪದ ದಾರಿಗೆ ಅಡ್ಡವಾಗಿ ನಿಂತು, ಮೇಲ್ತರದ ಗತಿಯನ್ನು ಒದಗಿಸುವುದೇ ವೈಕುಂಠ. ಎಂದಮೇಲೆ ವೇಂಕಟಕ್ಕೂ ವೈಕುಂಠಕ್ಕೂ ಸಾದೃಶ್ಯವಿಲ್ಲವೆ?

ಅಂತೂ, ವೈಕುಂಠವೆಂಬುದು ಹೇಗೆ ದೇವರಿಗೂ ದೇವರ ನೆಲೆಗೂ ಹೆಸರಾಗಿದೆಯೋ ಹಾಗೆಯೇ, ವೇಂಗಡವೆಂಬುದು ಬೆಟ್ಟಕ್ಕೂ ಬೆಟ್ಟದ ಮೇಲೆ ನಿಂತಿರುವ



ಪದ್ಮಾವತೀ

ದೈವಕ್ಕೂ ಹೆಸರು. ಬೆಟ್ಟದ ಒಡೆಯ (**ವೇಂಗಡಮುಡೈಯಾನ್**), ಬೆಟ್ಟದವನು (**ವೇಂಗಡತ್ತಾನ್**), ಬೆಟ್ಟದಲ್ಲಿ ನೆಲೆಸಿರುವವನು (**ವೇಂಗಡುತ್ತುರೈವಾರ್**)—ಎಂದು ಮೊದಲಾಗಿ ಈ ದೈವವನ್ನು ಕರೆದಿದ್ದಾರೆ; ಸಂಸ್ಕೃತದಲ್ಲಿ ವೇಂಕಟೇಶ್ವರ, ವೇಂಕಟಾಚಲಪತಿ ಎಂದಾಗುತ್ತದೆ. ಬೆಟ್ಟದ ಹೆಸರುಗಳನ್ನು ಹಿಡಿದು ಶೇಷಾದ್ರಿನಾಥ, ವೃಷಗಿರೀಶ, ಸಿಂಹಾದ್ರಿವಾಸ—ಎಂದು ಮೊದಲಾಗಿ ಕರೆಯುವುದುಂಟು; ಅಥವಾ ಬೆಟ್ಟದ ಹೆಸರನ್ನಷ್ಟೇ ಹೇಳಿ (ಶೇಷಾದ್ರಿ, ಶೇಷಗಿರಿ, ವೇಂಕಟಾಚಲ—ಇತ್ಯಾದಿ) ದೈವವನ್ನು ಸೂಚಿಸುವುದೂ ವಾಡಿಕೆಯಲ್ಲಿದೆ. 'ಶ್ರೀನಿವಾಸ' (ಎಂದರೆ, ಯಾವಾಗಲೂ ಲಕ್ಷ್ಮಿಯು ಅವನ ವಕ್ಷಸ್ಥಳದಲ್ಲಿ ವಾಸಮಾಡುವಳೆಂಬ ಕಲ್ಪನೆಯಿಂದ: **ನಿತ್ಯಂ ಶ್ರೀರಸ್ಯ ವಕ್ಷಸಿ**

ವಸತಿ ಇತಿ) ಎನ್ನುವ ಹೆಸರು ಈಚೆಗೆ ಬಳಕೆಗೆ ಬಂದಿದೆ. 'ಶ್ರೀ' ಎನ್ನುವುದು ಆ ಬೆಟ್ಟಕ್ಕೂ ಹೆಸರು; ಅದು ಶ್ರೀಗಿರಿ (**ತಿರುಮಲೆ**). ಅಲ್ಲಿ ನೆಲೆಸಿರುವವನೆಂದೂ ಅರ್ಥವಾಗುತ್ತದೆ: ಶ್ರೀಗಿರಿವಾಸನೇ ಶ್ರೀನಿವಾಸ; ಎಂದರೆ, ಬೆಟ್ಟದ ದೈವ ಎನ್ನುವುದೇ ಪ್ರಧಾನವಾದ ವಿವರ.

ಈ ಬೆಟ್ಟ ಮೇರುಪರ್ವತದ ಒಂದು ಭಾಗವೆಂದು ಭಕ್ತರ ಭಾವನೆ. ಮೇರು ಪರ್ವತದ ಈ ಭಾಗ ಭೂಮಿಯ ಮೇಲೆ ಬಿದ್ದುದಕ್ಕೆ ಪುರಾಣಗಳಲ್ಲಿ ವಿವರಣೆಗಳಿವೆ; ಕಥೆಗಳು ಸ್ವಾರಸ್ಯವಾಗಿವೆ. ಪೂರ್ವಘಟ್ಟಕ್ಕೆ ಸೇರಿದ ಈ ಬೆಟ್ಟಗಳ ಸಾಲನ್ನು ಆದಿಶೇಷನು ಮಲಗಿರುವಂತೆ ಕಲ್ಪಿಸಿಕೊಂಡಿರುವುದೂ ಇದೆ. ಏಳು ಹೆಡೆಗಳನ್ನು ಎತ್ತಿಹಿಡಿದಿರುವುದೇ ಏಳುಮಲೆಗಳ ವೇಂಗಡ; ಆದಿಶೇಷನ ತಲೆಯ ಭಾಗ. ನಡುಮೈಯ ಭಾಗ ಅಹೋಬಿಲ; ಕರ್ನೂಲು ಜಿಲ್ಲೆಯಲ್ಲಿ ನಂದ್ಯಾಲ್ ಬಳಿಯಿರುವ ನವನಾರಸಿಂಹಕ್ಷೇತ್ರ. ಬಾಲದ ತುದಿಯೆಂದರೆ ಶ್ರೀಶೈಲ; ಕರ್ನೂಲು ಜಿಲ್ಲೆಯಲ್ಲೇ ನಂದಿಕೊಟ್ಕೂರು ತಾಲೂಕಿಗೆ ಸೇರಿದಂತೆ ಇರುವ ಮಲ್ಲಿಕಾರ್ಜುನಕ್ಷೇತ್ರ. ಶೇಷನ ತಲೆಯ ಭಾಗವಾದುದ ರಿಂದ ವೇಂಗಡವು ಶೇಷಾಚಲ, ನಡುವಣ ಭಾಗ ಸಿಂಹಾಚಲ, ಬಾಲದ ಭಾಗ ವೃಷಭಾಚಲ—ಎಂಬ ವ್ಯವಹಾರವೂ ಇದೆ.



ಎರಡು


ಆಳ್ವಾರರು ಕಂಡ ವೇಂಗಡ

ಆಳ್ವಾರರು

ವೇಂಗಡವೆಂಬ ಬೆಟ್ಟದ, ವೇಂಗಡಮುಡೈಯನೆಂಬ ಬೆಟ್ಟದೊಡೆಯನ ಪ್ರಸ್ತಾಪ ಮೊಟ್ಟಮೊದಲಿಗೆ ಸ್ಪಷ್ಟವಾಗಿ ಬರುವುದು ಆಳ್ವಾರರ ತಮಿಳುಪ್ರಬಂಧಗಳಲ್ಲಿ. ಇದನ್ನು ಪ್ರಸ್ತಾಪಿಸುವ ಮೊದಲು ಆಳ್ವಾರರನ್ನೂ ಅವರ ಪ್ರಬಂಧಗಳನ್ನೂ ಕುರಿತು ನಾಲ್ಕು ಮಾತುಗಳನ್ನು ಹೇಳಬೇಕಾಗುತ್ತದೆ.

ತಮಿಳುಸಾಹಿತ್ಯದ ಪ್ರಾಚೀನಯುಗದಲ್ಲಿ ನಾಲ್-ಆಯಿರ (ಎಂದರೆ, ನಾಲ್ಕು ಸಾವಿರ) ಪಾಶುರಗಳನ್ನು (ಎಂದರೆ, ಪದ್ಯಗಳನ್ನು) ಒಳಗೊಂಡ ಪ್ರಬಂಧವಾಙ್ಮಯ ಮುಖ್ಯವಾದ ಒಂದು ಘಟ್ಟ. ಇದನ್ನು ಸಿದ್ಧಪಡಿಸಿದ ಕವಿಗಳನ್ನು ಆಳ್ವಾರರೆಂದು ಕರೆಯುವರು. 'ಆಳ್ವಾರ್' ಎಂಬ ತಮಿಳುಮಾತಿಗೆ, ಭಗವದನುಭವದಲ್ಲಿ ಆಳವಾಗಿ ಮುಳುಗಿರುವವರು ಎಂದು ಅರ್ಥ. ಆಳ್ವಾರರಲ್ಲಿ ಒಬ್ಬರಾದ ನಮ್ಮಾಳ್ವಾರರ 'ತಿರುವಾಯ್‌ಮೋಳಿ' ಎಂಬ ಪ್ರಬಂಧಕ್ಕೆ ವ್ಯಾಖ್ಯಾನ ಬರೆಯುತ್ತ ತಿರುಕ್ಕುರುಕೈಪ್ಪಿರಾನ್-ಪಿಳ್ಳಾನ್ ಎಂಬುವರು (ಕ್ರಿಸ್ತಾಬ್ದ 1122ರ ಸುಮಾರಿಗೆ), "ಇಡೀ ಜಗತ್ತಿನ ಹುಟ್ಟು, ಬೆಳವಣಿಗೆ ಮೊದಲಾದ ಎಲ್ಲವನ್ನೂ ತನ್ನ ಆಟವಾಗಿ ಉಳ್ಳ ಪರಮಾತ್ಮನನ್ನು ತಮ್ಮೊಳಗೆ ಆಳದಲ್ಲಿ ತಾವೇ ಅನುಭವಿಸಿ ಆಳ್ವಾರರು...." ಎಂದು ಮೊದಲಾಗಿ ಒಕ್ಕಣೆಸಿದ್ದಾರೆ (**ನಿಖಿಲಜಗದುದಯವಿಭವಾದಿ ಲೀಲನ್ ಆಯಿರುಂದ ಪರಮಪುರುಷನೈ ಉಳ್ಳಪಡಿಯೆ ಆಳ್‌ವಾರ್ ತಾಮ್ ತಮ್ಮುಡೈಯ ತಿರು ಉಳ್ಳತ್ತಾಲೇ ಅನುಭವಿತ್ತು**.....). ಇದೇ ಆಳ್ವಾರೆಂಬ ಮಾತಿನ ಮೊದಲ ಬಳಕೆಯೆಂದು ಕಾಣುತ್ತದೆ. ಇದು ನಮ್ಮಾಳ್ವಾರ್ ಎಂಬುವವರನ್ನು ಕುರಿತ ಪ್ರಯೋಗ; ಕಾಲಾನಂತರ ಇತರರಿಗೆ ಕೂಡ ಇದು ಸಂದಿತು. ಈಗ ಆಳ್ವಾರರೆಂದು ಹೆಸರಾಗಿರುವವರು ತಮ್ಮನ್ನು ಆಳ್ವಾರರೆಂದು ಕರೆದುಕೊಂಡಿಲ್ಲ. ಅವರವೆಂದು ಸಿದ್ಧವಾಗಿರುವ ಬರಹಗಳಲ್ಲೆಲ್ಲೂ ಆಳ್ವಾರೆಂಬ ಮಾತು ಬರುವುದಿಲ್ಲ.

ಶ್ರೀವೈಷ್ಣವಸಂಪ್ರದಾಯದಲ್ಲಿ ಮೂವರು ಆಚಾರ್ಯರು—ನಾಥಮುನಿಗಳು, ಯಾಮುನರು (ಕ್ರಿಸ್ತಾಬ್ದ 918-1038) ಮತ್ತು ರಾಮಾನುಜರು (1017-1137). ನಾಥಮುನಿಗಳಿಗಿಂತಲೂ ತುಂಬ ಹಿಂದೆ ಇದ್ದು ಭಕ್ತಿಪಂಥವನ್ನು ರೂಢಿಸಿ ವಿಶಿಷ್ಟಾದ್ವೈತಸಿದ್ಧಾಂತಕ್ಕೆ ಸಂಪ್ರದಾಯದ ಚೌಕಟ್ಟನ್ನು ಒದಗಿಸಿದವರು ಹನ್ನೆರಡು ಮಂದಿ ಆಳ್ವಾರರೆಂದು ಪ್ರತೀತಿ. ಮೂವರೂ ಆಚಾರ್ಯರು ಆಳ್ವಾರರನ್ನು ತುಂಬ ಗೌರವದಿಂದ



ಪಾಪವಿನಾಶನಂ

ಕಂಡುಕೊಂಡಿದ್ದಾರೆ. ಪ್ರಾಚೀನ ಸಂತರಾದ ಆಳ್ವಾರರ ಪ್ರಬಂಧಗಳು ನಾಥಮುನಿಗಳ ಕಾಲಕ್ಕೇ ನಷ್ಟವಾಗಿದ್ದುವೆಂದೂ, ನಾಥಮುನಿಗಳು ಆಕಸ್ಮಿಕವಾಗಿ ನಮ್ಮಾಳ್ವಾರರ 'ತಿರುವಾಯ್‌ಮೋಳಿ'(ಎಂದರೆ, ಸಿರಿ-ಬಾಯಿ-ನುಡಿ)ಯ ಕೆಲವು ಪದ್ಯಗಳನ್ನು ಕೇಳಿ, ಅದರಿಂದ ಪ್ರಭಾವಿತರಾಗಿ, ಕಷ್ಟಪಟ್ಟು ಇಡೀ ತಿರುವಾಯ್‌ಮೋಳಿಯ ಪಾಠವನ್ನು ಪಡೆದುಕೊಂಡರೆಂದೂ ಕಥೆಯಿದೆ. ನಾಥಮುನಿಗಳೇ ನಮ್ಮಾಳ್ವಾರರನ್ನೂ (ಇವರಿಗೆ ಶಠಕೋಪ, ಪರಾಂಕುಶ ಎಂದೂ ಹೆಸರುಗಳು), ತಿರುವಾಯ್‌ಮೋಳಿಯನ್ನೂ ಜನರ ಗಮನಕ್ಕೆ ತಂದವರು; ಬಳಕೆಯಿಂದ ಜಾರಿಹೋಗುತ್ತಿದ್ದ ವಾಙ್ಮಯವನ್ನು ಉಳಿಸಿದವರು. ತಿರುವಾಯ್‌ಮೋಳಿಯನ್ನು ಕುರಿತ ಅವರ ಒಂದು 'ತನಿಯನ್' ಪ್ರಸಿದ್ಧವಾಗಿದೆ. 'ತನಿಯನ್' ಎಂದರೆ ದೊಡ್ಡಗ್ರಂಥವೊಂದರ ತಾತ್ಪರ್ಯವನ್ನೂ ಹಿರಿಮೆಯನ್ನೂ ಸಂಗ್ರಹವಾಗಿ ಹೇಳುವ ಒಂದು ಸಂಸ್ಕೃತಶ್ಲೋಕ ಅಥವಾ ತಮಿಳುಪದ್ಯ. ಆ ಗ್ರಂಥವನ್ನು ಅಧ್ಯಯನ ಮಾಡುವ ಮೊದಲು ಈ 'ತನಿಯನ್' ಪಾಠವನ್ನು ಅಭ್ಯಾಸಮಾಡುವ ವಾಡಿಕೆಯಿದೆ. ನಾಥಮುನಿಗಳು ತಿರುವಾಯ್‌ಮೋಳಿಯನ್ನು ಕುರಿತು ಮಾಡಿದ ತನಿಯನ್ ಸಂಸ್ಕೃತದಲ್ಲಿದೆ—

ಭಕ್ತಾಮೃತಂ ವಿಶ್ವಜನಾನುಮೋದನಂ ಸರ್ವಾರ್ಥದಂ ಶ್ರೀಶಠಕೋಪವಾಙ್ಮಯಮ್।
ಸಹಸ್ರಶಾಖೋಪನಿಷತ್‌ಸಮಾಗಮಂ ನಮಾಮ್ಯಹಂ ದ್ರಾವಿಡವೇದಸಾಗರಮ್॥

"ಭಕ್ತಜನರಿಗೆ ಅಮೃತಪ್ರಾಯವಾದ, ಎಲ್ಲರ ಒಡಲನ್ನೂ ಹಿಗ್ಗುವಂತೆ ಮಾಡುವ, ಎಲ್ಲ ಬಯಕೆಗಳನ್ನೂ ಈಡೇರಿಸುವ ಈ ಮಾತುಗಳು ಶ್ರೀಶಠಕೋಪರ ಬಾಯಿಂದ ಬಂದುವು; ಸಾವಿರ ಕವಲುಗಳ ಉಪನಿಷತ್ತನ್ನು ಒಳಗೊಂಡಿರುವುದು, ತಮಿಳು ನುಡಿಯಲ್ಲಿ ವೇದವೆಂಬ ಸಮುದ್ರವೇ ಇದು!" ಹೀಗೆ ಅವರು ತಿರುವಾಯ್‌ಮೋಳಿಯನ್ನು ಹೊಗಳಿದ್ದಾರೆ. ವೇದವಾಙ್ಮಯಕ್ಕೂ ಪ್ರಬಂಧವಾಙ್ಮಯಕ್ಕೂ ಸಾಮರಸ್ಯವನ್ನು ಒದಗಿಸುವ ಕುತೂಹಲ ಇಲ್ಲಿ ಕಾಣುತ್ತದೆ.

ಬಳಕೆಯಿಂದ ತಪ್ಪಿ ನಷ್ಟವಾಗುತ್ತಿದ್ದ ನಮ್ಮಾಳ್ವಾರರ ತಿರುವಾಯ್‌ಮೋಳಿಯನ್ನು ನಾಥಮುನಿಗಳು ಉಳಿಸಿದಮೇಲೆ ಇದೇ ಆಳ್ವಾರರ ಇನ್ನೂ ಮೂರು ಬರಹಗಳನ್ನೂ (*ತಿರುವಿರುತ್ತಂ, ತಿರುವಾಶಿರಿಯಂ* ಮತ್ತು *ಪೆರಿಯ-ತಿರುವಂದಾದಿ*) ಉಳಿದ ಆಳ್ವಾರರ ಬರಹಗಳನ್ನೂ ಇತರರು ಕಂಡುಹಿಡಿದು ಉಳಿಸಿಕೊಂಡರು. ಒಟ್ಟು ಹನ್ನೆರಡು ಮಂದಿ ಆಳ್ವಾರರನ್ನು ಹೆಸರಿಸುತ್ತಾರೆ. ಇವರೆಲ್ಲ ಒಂದೇ ಕಾಲದಲ್ಲಿದ್ದವರಲ್ಲ, ಒಂದೇ ನಾಡಿನವರೂ ಅಲ್ಲ. ಎಲ್ಲರಿಗೂ ಸಮಾನವಾದ ವಿವರಗಳೆಂದರೆ ವಿಷ್ಣುಭಕ್ತಿ ಮತ್ತು ಪ್ರಬಂಧರಚನೆ. ಇವರನ್ನೆಲ್ಲ ಒಂದೆಡೆ ಕಲೆಹಾಕುವ ಸಾಹಸ ಯಾವಾಗ ನಡೆಯಿತೋ, ಯಾರು ಮಾಡಿದರೋ ತಿಳಿಯದು; ರಾಮಾನುಜರನಂತರ ನಡೆಯಿತೆಂದು ತೋರುತ್ತದೆ. ನಾಥಮುನಿಗಳು, ಯಾಮುನರು, ರಾಮಾನುಜರು—ಮೂವರೂ ವೈದಿಕ ಸಂಪ್ರದಾಯವನ್ನು ಎತ್ತಿಹಿಡಿದು ಸಂಸ್ಕೃತದಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ಇಲ್ಲೆಲ್ಲಿಯೂ ಯಾವ ಆಳ್ವಾರರ ಅಥವಾ ಯಾವ ಪ್ರಬಂಧದ ಪ್ರಸ್ತಾಪವೂ ಕಾಣಸಿಗುವುದಿಲ್ಲ. ನಾಥಮುನಿಗಳು ನಮ್ಮಾಳ್ವಾರರನ್ನು ಕುರಿತು ಒಂದು 'ತನಿಯನ್' ಬರೆದಮೇಲೆ, ಮುಂದಿನ ಆಚಾರ್ಯರಾದ ಯಾಮುನರು ನಮ್ಮಾಳ್ವಾರರೇ ಶ್ರೀವೈಷ್ಣವರ ಕುಲಪತಿಯೆಂದೂ, ಆದ್ಯನೆಂದೂ ಸ್ತೋತ್ರಮಾಡಿದರು—

ಆದ್ಯಸ್ಯ ನಃ ಕುಲಪತೇರ್ವಕುಲಾಭರಾಮಂ
ಶ್ರೀಮತ್ತದಂಘ್ರಿಯುಗಲಂ ಪ್ರಣಮಾಮಿ ಮೂರ್ಧ್ನಾ।

ನಮ್ಮಾಳ್ವಾರರು ಜಾತಿಯಲ್ಲಿ ಶೂದ್ರರಾದರೂ ಯಾಮುನರು ಅವರನ್ನು ತಮ್ಮ ಕುಲಪತಿಯೆಂದು ಗೌರವಿಸಿರುವುದು ಗಮನಾರ್ಹವಾದುದು. ಆದರೂ ಅವರಾಗಲೀ ಅವರನಂತರದ ಆಚಾರ್ಯರಾದ ರಾಮಾನುಜರಾಗಲೀ ತಿರುವಾಯ್‌ಮೋಳಿಗೆ ವಾಖ್ಯಾನವನ್ನು ಬರೆಯಲಿಲ್ಲ; ತಮ್ಮ ಗ್ರಂಥಗಳಲ್ಲಿ ಅದನ್ನು ಉಲ್ಲೇಖಿಸಲಿಲ್ಲ. ಯಾಮುನರಿಗೆ ಆ ಅಭಿಪ್ರಾಯವಿದ್ದಿತೆಂದೂ, ಅದನ್ನು ಮಾಡುವ ಮೊದಲೇ ತೀರಿಕೊಂಡದ್ದರಿಂದ, ಅದನ್ನು ಪೂರೈಸಲು ರಾಮಾನುಜರು ತಮ್ಮ ಶಿಷ್ಯ ತಿರುಕ್ಕುರು ಕೈಪ್ಪಿರಾನ್-ಪಿಳ್ಳಾನ್ ಎಂಬುವರಿಗೆ ವ್ಯಾಖ್ಯಾನ ಬರೆಯಲು ತಿಳಿಸಿದರೆಂದೂ ಕಥೆಯಿದೆ. ಇವರು ಆರುಸಾವಿರ ಪಡಿಗಳಲ್ಲಿ (ಆರ್ ಆಯಿರಪ್ಪಡಿ) ಬರೆದ ತಿರುವಾಯ್‌ಮೋಳಿವ್ಯಾಖ್ಯಾನವನ್ನು ರಾಮಾನುಜರು ಮೆಚ್ಚಿಕೊಂಡು ಅದನ್ನು 'ಭಗವದ್ವಿಷಯ'ವೆಂದು ಕರೆದರೆಂದೂ ಕಥೆ; ಇದರಲ್ಲಿ ನಿಜಾಂಶವೆಷ್ಟೋ ತಿಳಿಯದು. ಆಚಾರ್ಯರು ಮೂವರಲ್ಲಿ ಯಾರೂ

ತಮಿಳುಪ್ರಬಂಧಗಳ ಪರಿಚಯವನ್ನು ಅಷ್ಟು ಚೆನ್ನಾಗಿ ಪಡೆದಿದ್ದಿರಲಾರರು. ತಮ್ಮ ವೈದಿಕಸಂಪ್ರದಾಯದ ನಿಲುವನ್ನು ಪ್ರಬಂಧಗಳಿಂದ ಪುರಸ್ಕರಿಸುವ ಕುತೂಹಲವೂ ಅವರಿಗಿದ್ದಿರಲಾರದು. ನಾಥಮುನಿಗಳಿಗೆ ಇದು ಸಾಧ್ಯವೆಂಬ ಅಭಿಪ್ರಾಯ ಇದ್ದಿತು. ಮೂವರೂ ಆಚಾರ್ಯರಿಗೆ ಆಳ್ವಾರರ ವಿಚಾರದಲ್ಲಿ ತುಂಬ ಭಕ್ತಿ-ವಿಶ್ವಾಸಗಳೇನೋ ಇದ್ದುವು. ರಾಮಾನುಜರು ತಾವು ತೀರಿಕೊಳ್ಳುವ ಮೊದಲು ಎಪ್ಪತ್ತು-ನಾಲ್ಕು 'ಸಿಂಹಾಸನಾಧಿಪತಿ'ಗಳನ್ನು (ಆಚಾರ್ಯಪುರುಷರನ್ನು) ವ್ಯವಸ್ಥೆ ಮಾಡಿದರೆಂದು ಪ್ರತೀತಿ. ಇವರಲ್ಲಿ ನಾಲ್ವರು ಶಿಷ್ಯರು ಶ್ರೀಭಾಷ್ಯವನ್ನು ವೈದಿಕಸಂಪ್ರದಾಯದ ನೆಲೆಯಲ್ಲೇ ಬೋಧಿಸಬೇಕೆಂದೂ, ಉಳಿದ ಎಪ್ಪತ್ತು ಮಂದಿ ಆಳ್ವಾರರ ಪ್ರಬಂಧಗಳನ್ನು ಚೆನ್ನಾಗಿ ಅಭ್ಯಾಸಮಾಡಿ ಅದರಿಂದ ಸ್ಪಷ್ಟವಾಗುವಂತೆ ವಿಶಿಷ್ಟಾದ್ವೈತಸಿದ್ಧಾಂತವನ್ನು ನಾಡಿನಲ್ಲೆಲ್ಲ ಹರಡಬೇಕೆಂದೂ ಕಟ್ಟುಮಾಡಿದರಂತೆ. ಅವರ 'ಜ್ಞಾನಪುತ್ರ'ನೆಂದು ಹೆಸರಾದ ಶಿಷ್ಯ ತಿರುಕ್ಕುರು ಕೈಪ್ಪಿರಾನ್-ಪಿಳ್ಳಾನ್ ಮಾತ್ರ ಶ್ರೀಭಾಷ್ಯದ ಬೋಧನೆ, ಪ್ರಬಂಧಗಳ ಪ್ರಚಾರ ಎರಡನ್ನೂ ಕೈಗೊಳ್ಳುವಂತೆ ಅಪ್ಪಣೆ ಮಾಡಿದರಂತೆ. ಹೀಗೆ ಈ ಶಿಷ್ಯನೇ ತಿರುವಾಯ್ ಮೋಳಿಗೆ ವ್ಯಾಖ್ಯಾನ ಬರೆದದ್ದು. ಪ್ರಬಂಧಗಳಿಗೆ ವ್ಯಾಖ್ಯಾನ ಬರೆಯುವ ಕೆಲಸ ಇವನಿಂದಲೇ ಮೊದಲಾದದ್ದು.

ಇದು ಹೇಗಾದರೂ ಇರಲಿ. ಶ್ರೀವೈಷ್ಣವಸಂಪ್ರದಾಯದಲ್ಲಿ ಹನ್ನೆರಡು ಮಂದಿ ಆಳ್ವಾರರನ್ನು ಹೆಸರಿಸುವ ವಾಡಿಕೆಯಿದೆ. ಅವರು ಪೊಯ್‌ಗೈ (ಸಂಸ್ಕೃತದಲ್ಲಿ ಸರೋಯೋಗಿ), ಭೂತ (ಭೂತತ್ತಾಳ್ವಾರ್, ಭೂತಯೋಗಿ), ಪೇಯ್ (ಮಹತ್ ಅಥವಾ ಭ್ರಾಂತಯೋಗಿ) , ತಿರುಮಳಿಶೈ, ನಮ್ಮಾಳ್ವಾರ್ (ಶಠಕೋಪ), ಮಧುರಕವಿ, ಕುಲಶೇಖರ, ಪೆರಿಯಾಳ್ವಾರ್ (ವಿಷ್ಣುಚಿತ್ತ), ಗೋದೆ ಅಥವಾ ಆಂಡಾಳ್, ತೊಂಡರಡಿಪ್ಪೊಡಿ (ಭಕ್ತಾಂಘ್ರಿರೇಣು) , ತಿರುಪ್ಪಾಣ (ಯೋಗಿವಾಹನ) ಮತ್ತು ತಿರುಮಂಗೈ (ಪರಕಾಲ)—ಇವರೆಲ್ಲ ವಿಷ್ಣುವಿನ ಹಲವು ಆಭರಣಗಳ, ಆಯುಧಗಳ ಮನುಷ್ಯಾವತಾರಗಳೆಂದು ಶ್ರದ್ಧಾಳುಗಳ ನಂಬಿಕೆ. ಇವರ ಕಾಲಮಾನದ ಬಗ್ಗೆಯಾಗಲೀ, ಅನುಕ್ರಮದ ಬಗ್ಗೆಯಾಗಲೀ ಒಮ್ಮತವಿಲ್ಲ. ಇವರನ್ನು ಒಟ್ಟಿಗೆ ಕಲೆಸಿ ಪ್ರಸ್ತಾಪಮಾಡುವ ಪದ್ಧತಿಯನ್ನು 'ದಿವ್ಯಸೂರಿಚರಿತ್ರ'ವೆಂಬ ಗ್ರಂಥದಲ್ಲಿ ಮೊದಲು ಕಾಣುತ್ತೇವೆ. ಇದನ್ನು ಬರೆದ ಗರುಡವಾಹನಪಂಡಿತನು ರಾಮಾನುಜರ ಸಮಕಾಲಿಕನೆಂದು ಹೇಳುವುದಿದೆ; ಆದರೆ ಇದು ಖಚಿತವಲ್ಲ. ರಾಮಾನುಜರಂತೂ ಹನ್ನೆರಡು ಮಂದಿಯಿರಲಿ, ಒಬ್ಬ ಆಳ್ವಾರರನ್ನೂ ಎಲ್ಲಿಯೂ ಉಲ್ಲೇಖಿಸುವುದಿಲ್ಲ. ಇವರ ಕಾಲಮಾನವನ್ನು ಕುರಿತು ವೇದಾಂತದೇಶಿಕರು ತಮ್ಮ 'ಪ್ರಬಂಧಸಾರ'ದಲ್ಲಿ (ಸುಮಾರು ಕ್ರಿಸ್ತಾಬ್ದ 1330ರಲ್ಲಿ ಸಿದ್ಧವಾದುದೆಂದು ನಂಬಿಕೆ) ಪ್ರಸ್ತಾಪಮಾಡಿದ್ದಾರೆ. ಪ್ರತಿ ಆಳ್ವಾರರ ಅವತಾರಕಾಲವನ್ನು ಮಾಸ, ನಕ್ಷತ್ರ—ಮೊದಲಾದ ವಿವರಗಳೊಂದಿಗೆ ಕೊಟ್ಟಿದ್ದಾರೆ. ಈ ಎಣಿಕೆಗೆ ಆಧಾರವೇನೋ ತಿಳಿಯದು. ಆಳ್ವಾರರ ಕಾಲವನ್ನು ಕ್ರಿಸ್ತಾಬ್ದ ಮೂರನೆಯ ಶತಮಾನದಿಂದ ಎಂಟನೆಯ ಶತಮಾನದವರೆಗೆ ಎಂದು ಹೇಳುವವರಿದ್ದಾರೆ; ಐದರಿಂದ ಹತ್ತನೆಯ ಶತಮಾನದವರೆಗೆ ಎಂದು ಇನ್ನೊಂದು ಅಭಿಪ್ರಾಯ. ಕಡೆಯ ಆಳ್ವಾರರು


ಆಚಾರ್ಯರ ಕಾಲಕ್ಕೆ ಒಂದೆರಡು ಶತಮಾನಗಳಷ್ಟು ಹಿಂದಿನವರು ಎಂದು ಹೇಳ ಬಹುದು. ಈ ಹನ್ನೆರಡು ಆಳ್ವಾರರ ಪಟ್ಟಿಯಲ್ಲಿ ರಾಮಾನುಜರನ್ನು ಸೇರಿಸಿ ಹದಿಮೂರನೆಯ ಆಳ್ವಾರರು ಎಂದು ಕರೆಯುವ ವಾಡಿಕೆಯೂ ಇದೆ; ಆಳ್ವಾರರಲ್ಲಿ ಒಬ್ಬರಾದ ನಮ್ಮಾಳ್ವಾರರನ್ನು ಆಚಾರ್ಯರೆಂದೇ ಬಗೆದು ನಾಲ್ವರು ಆಚಾರ್ಯರೆಂದು ಹೇಳುವ ವಾಡಿಕೆಯೂ ಇದೆ.

ದಿವ್ಯಕ್ಷೇತ್ರಗಳು

ಈ ಆಳ್ವಾರರು ಬೇರೆಬೇರೆ ಕಾಲದವರು, ಬೇರೆಬೇರೆ ನಾಡಿನವರು, ಬೇರೆಬೇರೆ ಕುಲಗಳವರು, ಬೇರೆಬೇರೆ ವೃತ್ತಿಯವರು. ಅವರಲ್ಲಿ ಅರಸರು (ಕುಲಶೇಖರ), ನಾಯಕರು (ತಿರುಮಂಗೈ), ಅರ್ಚಕರು (ಪೆರಿಯಾಳ್ವಾರ್), ಸಾಮಂತರು (ನಮ್ಮಾಳ್ವಾರ್), ಯೋಗಿಗಳು (ಪೋಯ್ಗೆಯ್, ಭೂತ ಮತ್ತು ಪೇಯ್)—ಎಲ್ಲರೂ ಇದ್ದಾರೆ; ಬ್ರಾಹ್ಮಣರು, ಕ್ಷತ್ರಿಯರು, ಶೂದ್ರರು ಇದ್ದಾರೆ. ಅವರ ಪ್ರಬಂಧಗಳಲ್ಲಿ ಅವರ ವೃತ್ತಿ, ಪ್ರವೃತ್ತಿಗಳ ಪರಿಚಯವಾಗುತ್ತದೆ. ದಕ್ಷಿಣದೇಶದ ಬೇರೆಬೇರೆ ವಿಷ್ಣುಕ್ಷೇತ್ರಗಳಲ್ಲಿ ತಿರುಗಾಡಿ, ತಾವು ಅಲ್ಲಲ್ಲಿ ಕಂಡ ಸ್ವಾರಸ್ಯವನ್ನೆಲ್ಲ ಇವರು ಸೊಗಸಾಗಿ ಬಣ್ಣಿಸಿದ್ದಾರೆ. ಮುಖ್ಯ ಉದ್ದೇಶ, ಆಯಾ ಕ್ಷೇತ್ರಗಳಲ್ಲಿರುವ ವಿಷ್ಣುವಿನ ಅರ್ಚಾಮೂರ್ತಿಗಳ ಸ್ತೋತ್ರ; ಪ್ರಾಸಂಗಿಕವಾಗಿ ಕ್ಷೇತ್ರಪರಿಚಯವನ್ನೂ ಮಾಡಿಕೊಡುತ್ತಾರೆ. ಕೆಲಸವಿಲ್ಲದೆ ಊರೂರು ತಿರುಗುವುದೇ ಇವರ ಬಾಳಹವ್ಯಾಸವಾಗಿರಲಿಲ್ಲ; ತಂತಮ್ಮ ವೃತ್ತಿಗಳನ್ನು ನಿರ್ವಹಿಸಿ ಕೊಂಡು, ಬಿಡುವಾದಾಗ ಕ್ಷೇತ್ರಪರ್ಯಟನೆಯನ್ನು ಕೈಗೊಂಡಿದ್ದವರು.

ಶ್ರೀವೈಷ್ಣವಸಂಪ್ರದಾಯದಲ್ಲಿ ನೂರೆಂಟು ದಿವ್ಯಕ್ಷೇತ್ರಗಳು; ಇವನ್ನು ತಿರುಪತಿ ಗಳೆಂದೂ ಕರೆಯುತ್ತಾರೆ. ಇವುಗಳಲ್ಲಿ ಎರಡು ಈ ಲೋಕಕ್ಕೆ ಸಂಬಂಧಿಸಿದುವಲ್ಲ, ಕಲ್ಪನೆಯ ಲೋಕದವು—ಕ್ಷೀರಾಬ್ಧಿ ಮತ್ತು ಪರಮಪದ. ಒಂಬತ್ತು ಉತ್ತರಭಾರತ ದಲ್ಲಿರುವುವು—ಅಯೋಧ್ಯೆ, ನೈಮಿಶಾರಣ್ಯ, ಸಾಲಿಗ್ರಾಮ, ಬದರಿ, ದೇವಪ್ರಯಾಗ, ನಂದಪ್ರಯಾಗ, ದ್ವಾರಕೆ, ಗೋವರ್ಧನ ಮತ್ತು ಗೋಕುಲ. ಈ ಸ್ಥಳಗಳಿಗೆ ಮೊದಲ ಆಳ್ವಾರರು ಯಾರೂ ಹೋಗಲಿಲ್ಲ. ಉಳಿದವೆಲ್ಲ ದಕ್ಷಿಣದೇಶದವೇ. ಆ ಕಾಲದಲ್ಲಿ ದಕ್ಷಿಣದೇಶ ಹಲವಾರು ಅರಸೊತ್ತಿಗೆಗಳ ಆಡಳಿತದಲ್ಲಿ ಅಡಕವಾಗಿದ್ದಿತು. ಕಾವೇರಿ ಯಿಂದ ಕೆಳಗೆ ಸಮುದ್ರದವರೆಗೂ ಇರುವ ಪ್ರದೇಶ ಪಾಂಡ್ಯನಾಡು (ಪಾಂಡಿನಾಡು, ಎಂದರೆ, ಪಾಂಡ್ಯರ ಆಳ್ವಿಕೆಯಲ್ಲಿದ್ದುದು), ಕಾವೇರಿಯಿಂದ ದಕ್ಷಿಣಪೆನ್ನಾರ್‌ವರೆಗೆ ಚೋಳನಾಡು, ದಕ್ಷಿಣಪೆನ್ನಾರ್ ಮತ್ತು ಸ್ವರ್ಣಮುಖೀನದಿಯವರೆಗೆ ತೊಂಡೈನಾಡು ಅಥವಾ ತೋಂಡೈಮಂಡಲಂ (ಪಲ್ಲವರ ಆಡಳಿತಕ್ಕೆ ಒಳಪಟ್ಟ ಪ್ರದೇಶ), ತೊಂಡೈ ನಾಡಿಗೂ ಚೋಳನಾಡಿಗೂ ನಡುವೆ ಸಣ್ಣದೊಂದು ನಡುನಾಡು, ತೊಂಡೈನಾಡಿನ ಮೇಲೆ ಉತ್ತರ ಭಾಗದಲ್ಲಿ ವಡನಾಡು (ಅಥವಾ ವಡಗರ್‌ನಾಡು, ಬಡಗರ ದೇಶ)—ಹೀಗೆ ವಿಭಾಗವಿದ್ದಿತು. ಒಂದೊಂದು ನಾಡಿನಲ್ಲೂ ಹಲವು ದಿವ್ಯಕ್ಷೇತ್ರಗಳು. ಪಾಂಡ್ಯ

ನಾಡಿನಲ್ಲಿ ತಿರುಮಾಲಿರುಂಶೋಲೈ, ತಿರುಕ್ಕೋಟ್ಟಿಯೂರ್, ತಿರುಕ್ಕುರುಂಗುಡಿ —ಮೊದಲಾದ ಹದಿನೆಂಟು ಸ್ಥಳಗಳು; ಚೋಳನಾಡಿನಲ್ಲಿ ತಿರುವರಂಗಂ (ಎಂದರೆ, ಶ್ರೀರಂಗ), ತಿರುಕ್ಕುಡಂದೈ (ಕುಂಭಘೋಣ), ತಿರುಚ್ಚಿತ್ರಕೂಟಂ (ಚಿದಂಬರ), ತಂಜೈ (ಮಾಮಣಿಕ್ಕೋವಿಲ್), ತಿರುವಿಣ್ಣಗರ್—ಮೊದಲಾದ ನಲವತ್ತು ಸ್ಥಳಗಳು; ನಡು ನಾಡಿನಲ್ಲಿ ತಿರುಕ್ಕೋವಲೂರು ಮತ್ತು ತಿರುವೇಂದಿಪುರಂ; ತೊಂಡೈನಾಡಿನಲ್ಲಿ ವೇಂಕ, ಕಚ್ಚಿ ಅಥವಾ ಅತ್ತಿಗಿರಿ (ಕಂಚಿ ಅಥವಾ ಹಸ್ತಿಗಿರಿ), ವೆಳುಕ್ಕೈ, ಪಾಡಗಂ—ಮೊದಲಾದ ಇಪ್ಪತ್ತೆರಡು ಸ್ಥಳಗಳು; ವಡನಾಡಿನಲ್ಲಿ ವೇಂಗಡಂ (ಎಂದರೆ ವೇಂಕಟಾಚಲ, ತಿರುಮಲೆ), ಸಿಂಗವೇಳ್‌ಕುನ್ರಂ (ಅಹೋಬಿಲ)—ಎಂಬೆರಡು ಸ್ಥಳಗಳು; ಹೀಗೆ ಒಟ್ಟು ಎಂಬತ್ತುನಾಲ್ಕು ದಿವ್ಯಸ್ಥಳಗಳು ದಕ್ಷಿಣದಲ್ಲಿವೆ.



ಆಕಾಶಗಂಗೆಯಲ್ಲಿರುವ ಮೂರ್ತಿಗಳು

ಆಳ್ವಾರರೆಲ್ಲರೂ ಈ ಕ್ಷೇತ್ರಗಳನ್ನೆಲ್ಲ ಸಂದರ್ಶಿಸಲಿಲ್ಲ. ಈ ಎಂಬತ್ತುನಾಲ್ಕು ಸ್ಥಳಗಳನ್ನೂ ಕಂಡುಬಂದವರೆಂದರೆ ತಿರುಮಂಗೈ ಆಳ್ವಾರೊಬ್ಬರೇ. ಮೊದಲ ಆಳ್ವಾರರೆಂದು ಹೆಸರಾದ ಪೊಯ್ಗೈಯ್ ಆಳ್ವಾರರ ಕಾಲಕ್ಕೆ ಪ್ರಸಿದ್ಧವಾಗಿದ್ದ ಕ್ಷೇತ್ರಗಳು ಐದೇ ಎಂದು ತೋರುತ್ತದೆ; ಇವುಗಳನ್ನಷ್ಟೇ ಅವರು ಪ್ರಸ್ತಾಪಿಸಿದ್ದಾರೆ. ಭೂತತ್ತಾಳ್ವಾರರ ಕಾಲಕ್ಕೆ ಕ್ಷೇತ್ರಗಳ ಸಂಖ್ಯೆ ಹದಿನಾಲ್ಕಾಯಿತು (ಅವರು ಕಂಡದ್ದು ಹನ್ನೆರಡನ್ನೇ); ತಿರುಮಳೀಶೈ ಆಳ್ವಾರರ ಕಾಲಕ್ಕೆ ಇದು ಇಪ್ಪತ್ತುಮೂರಾಯಿತು. ಹೀಗೆ ಕಾಲಾನುಕ್ರಮದಲ್ಲಿ ದಿವ್ಯಕ್ಷೇತ್ರಗಳು ಹೆಚ್ಚಾದುವು. ಆಳ್ವಾರರೆಲ್ಲರೂ ಸಂದರ್ಶಿಸಿರುವ ಕ್ಷೇತ್ರಗಳು ಎರಡೇ: ವೇಂಗಡಂ (ತಿರುಮಲೆ) ಮತ್ತು ತಿರುವರಂಗಂ (ಶ್ರೀರಂಗ). ಈಚೆಗೆ ಬಂದ

ಆಳ್ವಾರರು (ಪೆರಿಯಾಳ್ವಾರ್, ನಮ್ಮಾಳ್ವಾರ್ ಮೊದಲಾದವರು) ಕಂಡು ಬಂದ ಸ್ಥಳಗಳಲ್ಲಿ ಇವೆರಡಲ್ಲದೆ ತಿರುಮಾಲಿರುಂಶೋಲೈ, ವೇಂಕ, ಪಾಡಗಂ, ತಿರುಕ್ಕುಂದೈ, ತಿರುಕ್ಕೋಟಿಯೂರ್, ತಿರುಕ್ಕಣ್ಣಪುರಂ—ಇವು ಮುಖ್ಯವಾದುವು. ಆಳ್ವಾರರು ಈ ಕ್ಷೇತ್ರಗಳನ್ನು ಸಂದರ್ಶಿಸಿದಾಗ ಕ್ಷೇತ್ರದ ವೈಶಿಷ್ಟ್ಯ, ಅಲ್ಲಿನ ನಿಸರ್ಗ, ಅಲ್ಲಿ ನೆಲೆ ಗೊಂಡಿರುವ ಅರ್ಚಾಮೂರ್ತಿ, ಈ ಮೂರ್ತಿಗೆ ಸಂಬಂಧಿಸಿದಂತೆ ನಡೆಯುತ್ತಿದ್ದ ಉತ್ಸವಗಳು, ಮೊದಲಾದ ವಿವರಗಳನ್ನೆಲ್ಲ ಒಳಗೊಂಡಂತೆ ಕವಿತೆಗಳನ್ನು ಅಥವಾ ಪಾಶುರಗಳನ್ನು ರಚಿಸಿದರು. ಇದನ್ನೇ ಪ್ರಬಂಧವೆಂದು ಕರೆಯುವುದು.

ಪ್ರಬಂಧಗಳಿಗೆ 'ತಿರುಮೋಳಿ', ಎಂದರೆ 'ಸಿರಿನುಡಿಗಳು' ಎಂಬ ವರ್ಣನೆಯೂ ಇದೆ. ಪೆರಿಯಾಳ್ವಾರರ, ಆಂಡಾಳ್‌ದೇವಿಯ, ಕುಲಶೇಖರರ ಮತ್ತು ತಿರುಮಂಗೈ ಯಾಳ್ವಾರರ ಪ್ರಬಂಧಗಳನ್ನು ಹೀಗೆಯೇ ಕರೆಯತ್ತಾರೆ. ಆದರೆ ನಮ್ಮಾಳ್ವಾರರ ಪ್ರಬಂಧಗಳಲ್ಲಿ ಒಂದು ಸಂಕಲನವನ್ನು 'ತಿರುವಾಯ್‌ಮೋಳಿ' (ಸಿರಿಬಾಯನುಡಿಗಳು) ಎಂದು ನಿರ್ದೇಶಿಸಲಾಗಿದೆ. ಎಂದರೆ ಬಾಯಿಂದ ಬಾಯಿಗೆ ಬಂದ ಕವಿತಾಸಂಗ್ರಹ, ಮೌಖಿಕಪರಂಪರೆಯದು. ಹೀಗೆ ಇದನ್ನು ನಿರ್ದೇಶಿಸಿರುವುದರಿಂದ, 'ತಿರುಮೋಳಿ' ಎನಿಸಿಕೊಳ್ಳುವ ಸಂಗ್ರಹಗಳನ್ನು ಮೊದಲಿಗೆ ತಾಳಪತ್ರಗಳಲ್ಲಿ ಬರೆದಿಟ್ಟಿದ್ದರೆಂದು ಊಹಿಸಲು ಅವಕಾಶವಿದೆ. ಖಚಿತವಾಗಿ ಹೀಗೇ ಎಂದು ಹೇಳುವುದು ಸಾಧ್ಯವಿಲ್ಲ ವಾದರೂ, ಪ್ರಾಚೀನ ಕವಿತೆಗಳನ್ನು ಈ ನಾಡಿನಲ್ಲಿ ಬರಹಕ್ಕೆ ಇಳಿಸಿರುವ ನಿದರ್ಶನ ಗಳುಂಟು. ನಾಥಮುನಿಗಳು ತಮ್ಮ ತನಿಯನ್‌ನಲ್ಲಿ ನಮ್ಮಾಳ್ವಾರರ ಸಂಗ್ರಹವನ್ನು 'ಶ್ರೀಶಠಕೋಪವಾಙ್ಮಯ' ಎಂದು ಕರೆದಿರುವುದು ಗಮನಾರ್ಹವಾಗಿದೆ. ಅದನ್ನು 'ದೇವಗಾನ' (ಎಂದರೆ ಸಾಮಗಾನದಂತೆ) ಅಥವಾ 'ಇಯಲ್', ಮತ್ತು 'ಮನುಷ್ಯಗಾನ' ಅಥವಾ 'ಇಶೈ' (ಎಂದರೆ ರಾಗ, ತಾಳಗಳನ್ನು ಅಳವಡಿಸಿ) ಎಂಬೆರಡು ಪದ್ಧತಿಗಳಲ್ಲಿ ಹಾಡುವ ಕ್ರಮವನ್ನೂ ಅವರೇ ನಿರ್ದೇಶಿಸಿದರೆಂದು ಪ್ರತೀತಿ. ಗಾನಪ್ರಧಾನವಾದ ಕೃತಿ ಗಳು ಮುಖ್ಯವಾಗಿ ಮೌಖಿಕಪರಂಪರೆಯವೇ. ಹಾಡುವ ಕ್ರಮ ಮೂಡುವ ಮೊದಲು, ಪದ್ಯಗಳನ್ನು ಬರೆದಿಟ್ಟಂತೆ ಸಾಹಿತ್ಯಪ್ರಧಾನವಾಗಿ ಉಳಿಸಿಕೊಂಡಿದ್ದರೆಂದು ತೋರುತ್ತದೆ.

ಪ್ರಬಂಧಗಳಲ್ಲಿ ವೇಂಗಡಬೆಟ್ಟ

ಹನ್ನೆರಡೂ ಆಳ್ವಾರರ ಕವಿತೆಗಳನ್ನೆಲ್ಲ ಕಲೆಹಾಕಿದರೆ ಮೊತ್ತ ನಾಲ್ಕುಸಾವಿರ ದಷ್ಟಾಗುತ್ತದೆ. ಆದುದರಿಂದಲೇ ಇದನ್ನು ತಮಿಳಿನಲ್ಲಿ 'ನಾಲ್‌ಆಯಿರ ಪ್ರಬಂಧಂ' ಎಂದು ಕರೆಯುವುದು. ಈ ಪ್ರಬಂಧಗಳಲ್ಲಿ ಕಾಣುವ ಕವಿತಾಮಾಧುರ್ಯ, ಕಲ್ಪನಾವಿಲಾಸ, ಭಕ್ತಿಯ ಪರಾಕಾಷ್ಠೆ—ಇವು ಮೇಲ್ತರನಾದುವು. ನಿಸರ್ಗವರ್ಣನೆಯಲ್ಲಿ ಅವರು ಎತ್ತಿದ ಕೈ. ಸ್ಥಳಗಳನ್ನು ಬಣ್ಣಿಸುವಾಗ ಕಣ್ಣಿಗೆ ಕಟ್ಟಿದಂತೆ ಕಾಣಿಸುತ್ತಾರೆ. ಅಲ್ಲಿರುವ ಅರ್ಚಾಮೂರ್ತಿಗಳನ್ನು ಭಕ್ತಿಯಿಂದ ಸ್ತುತಿಸಿ, ಅವುಗಳ ವರ್ಣನೆಯನ್ನೂ ಮಾಡುತ್ತಾರೆ. ಈ ಆಳ್ವಾರರಲ್ಲಿ ಮಧುರಕವಿಯಾಳ್ವಾರರೊಬ್ಬರು ಮಾತ್ರ ಯಾವ

ಸ್ಥಳವನ್ನೂ ವರ್ಣಿಸದೆ ತಮ್ಮ ಗುರುಗಳಾದ ನಮ್ಮಾಳ್ವಾರರನ್ನು ಸ್ತುತಿಸುತ್ತಾರೆ. ತೊಂಡರಡಿಪ್ಪೊಡಿಯಾಳ್ವಾರರು ಮೂರು ದಿವ್ಯದೇಶಗಳನ್ನಷ್ಟೇ ಬಣ್ಣಿಸುತ್ತಾರೆ—ತಿರುವರಂಗಂ (ಶ್ರೀರಂಗ), ತಿರುಪ್ಪಾಲ್‌ಕಡಲ್ (ಕ್ಷೀರಸಮುದ್ರ) ಮತ್ತು ತಿರುವಾಯ್‌ಪ್ಪಡಿ (ಗೋಕುಲ). ಇವುಗಳಲ್ಲಿ ತಿರುಪ್ಪಾಲ್‌ಕಡಲು ಕಲ್ಪನೆಯದು; ಗೋಕುಲದ ವಿಚಾರವು ಅವರು ಕಂಡದ್ದಲ್ಲ; ಕೇಳಿದ್ದು, ಊಹಿಸಿಕೊಂಡದ್ದು; ಶ್ರೀರಂಗವೊಂದೇ ಅವರ ನೇರವಾದ ಪರಿಚಯಕ್ಕೆ ಬಂದಿದ್ದುದು. ಉಳಿದ ಆಳ್ವಾರರು ಎಲ್ಲರೂ ಭಕ್ತಿಯಿಂದ ಹಾಡಿರುವ ಎರಡು ಅರ್ಚಾಮೂರ್ತಿಗಳೆಂದರೆ ವೇಂಗಡದ ದೇವರು ಮತ್ತು ತಿರುವರಂಗದ ದೇವರು. ನಾಲ್ಕುಸಾವಿರ ಪಾಶುರಗಳಲ್ಲಿ ತಿರುವರಂಗವನ್ನು ಕುರಿತದ್ದು 247, ವೇಂಗಡವನ್ನು ಕುರಿತದ್ದು 195. ಆಳ್ವಾರರಲ್ಲಿ ವೇಂಗಡದ ಸಂಖ್ಯೆಯನ್ನು ವಿಭಾಗಮಾಡಿದರೆ, ಪೊಯ್ಗೈ 10, ಭೂತ 9, ಪೇಯ್ 10, ತಿರುಮಳಿಶೈ 14, ನಮ್ಮಾಳ್ವಾರ್ 44, ಕುಲಶೇಖರ 11, ಪೆರಿಯಾಳ್ವಾರ್ 1, ಆಂಡಾಳ್ 16, ತಿರುಪ್ಪಾಣ 2, ಮತ್ತು ತಿರುಮಂಗೈ 63.

ಆಳ್ವಾರರು ವೇಂಗಡಬೆಟ್ಟಕ್ಕೆ ಅಡಿಗಡಿಗೆ ಹೋಗುತ್ತಿದ್ದರೆಂಬ ಉಲ್ಲೇಖವಿಲ್ಲ. ಆಳ್ವಾರರಲ್ಲಿ ಒಬ್ಬೊಬ್ಬರೂ ಒಂದೊಂದು ಬಾರಿ ಹೋಗಿದ್ದರೆಂದು ತೋರುತ್ತದೆ. ನಮ್ಮಾಳ್ವಾರರು ಮಟ್ಟಿಗೆ ಎರಡು ಬಾರಿ ಹೋಗಿದ್ದಂತೆ ಕಾಣುತ್ತದೆ. ಬೆಟ್ಟವಿದ್ದುದು ಆಳ್ವಾರರ ನಾಡಿನ ಮೇರೆಯಾಚೆ ಎಂಬುದನ್ನು ಮರೆಯಬಾರದು. ವಡನಾಡಿನಲ್ಲಿ ವೇಂಗಡವಿದ್ದುದು; ಅದು ತೀರ ಉತ್ತರದ ದಿಗ್ಭಾಗವಾಯಿತು. ಮೇಲಾಗಿ, ಕಾಡು ಕವಿದಿದ್ದ ಏಳು ಬೆಟ್ಟಗಳನ್ನು ದಾಟಿ ವೇಂಗಡದೊಡೆಯನನ್ನು ಕಾಣಬೇಕಾಗಿದ್ದಿತು. ದಾರಿ ದುಸ್ತರವಾಗಿದ್ದು, ಬೆಟ್ಟ ಎತ್ತರವಾಗಿದ್ದಿತು; ಹೋಗಿಬರುವುದು ಕಠಿಣವಾಗಿದ್ದಿತು. ಆದರೂ ಪ್ರಸಿದ್ಧವಾದ ದೈವವಾಗಿದ್ದುದರಿಂದ ಜನ ಸಾಹಸಮಾಡಿ ಬದುಕಿನಲ್ಲಿ ಒಮ್ಮೆಯಾದರೂ ಹೋಗಿಬರುತ್ತಿದ್ದರು. ಅದೂ ಶ್ರದ್ಧೆ ತೀವ್ರವಾಗಿದ್ದವರು ಮಾತ್ರ.

ಆಳ್ವಾರರೆಲ್ಲರೂ ಈ ಬೆಟ್ಟವನ್ನು ವೇಂಗಡವೆಂದೇ ಕರೆದಿದ್ದಾರೆ. ಪೇಯಾಳ್ವಾರರ ಪಾಶುರವೊಂದರಲ್ಲಿ ಮಾತ್ರ ತಿರುಮಲೆಯೆಂಬ ಹೆಸರು ಕಾಣಸಿಗುತ್ತದೆ. ಆದರೆ ಈ ಪಾಶುರವು ಪ್ರಕ್ಷಿಪ್ತವೆಂಬ ಅಭಿಪ್ರಾಯವೂ ಒಂದಿದೆ. ಬೆಟ್ಟದ ದೇವರನ್ನು ಆಳ್ವಾರರು ಎಲ್ಲರೂ ವೇಂಗಡದವನು (**ವೇಂಗಡವಾ, ವೇಂಗಡತ್ತಾನ್**), ವೇಂಗಡದೊಡೆಯ (**ವೇಂಗಡಮುಡೈಯಾನ್**), ವೇಂಗಡದಲ್ಲಿರುವ ದೇವರು (**ವೇಂಗಡತ್ತು ಮೇಯನ್**) ಎಂದೇ ಕರೆದಿದ್ದಾರೆ. ಬೆಟ್ಟಕ್ಕೆ ಈಗ ನಮಗೆ ತಿಳಿದಿರುವ ಶೇಷಾಚಲ, ಸಿಂಹಾಚಲ, ನಾರಾಯಣಾದ್ರಿ ಮೊದಲಾದ ಹೆಸರುಗಳು ಆಳ್ವಾರರಿಗೆ ತಿಳಿದಿರಲಿಲ್ಲ; ದೇವರ ಶ್ರೀನಿವಾಸ ಮೊದಲಾದ ಹೆಸರುಗಳೂ ತಿಳಿದಿರಲಿಲ್ಲ. ಆದರೆ ಈ ದೇವರು ವಿಷ್ಣುವೆಂಬ ವಿಚಾರದಲ್ಲಿ ಮಾತ್ರ ಆಳ್ವಾರರೆಲ್ಲರೂ ಒಮ್ಮತದವರು. ಆಳ್ವಾರರೆಲ್ಲ ವಿಷ್ಣುಭಕ್ತರು; ಪುರಾಣಗಳ ಪರಿಚಯವನ್ನು ಪಡೆದಿದ್ದವರು. ವೇಂಗಡದೊಡೆಯನನ್ನು ವಿಷ್ಣುವೆಂದೇ ಬಾಯಾರೆ ಕರೆದಿದ್ದಾರೆ, ಮನಸಾರೆ ನಂಬಿದ್ದಾರೆ. ಆ ಕಾಲಕ್ಕೆ ವೇಂಗಡವೇ ಸುಪ್ರಸಿದ್ಧವಾದ ವಿಷ್ಣುಕ್ಷೇತ್ರವಾಗಿದ್ದಿತೆಂದು ತಿಳಿದುಬರುತ್ತದೆ.

ಮೊದಲ ಆಳ್ವಾರರು (ಪೊಯ್ಗೈ, ಭೂತ, ಪೇಯ್ ಮತ್ತು ತಿರುಮಳೀಶೈ) ಹೆಚ್ಚಾಗಿ ಹೊಗಳಿರುವುದು ವೇಂಗಡವನ್ನೇ. ಈ ನಾಲ್ವರು ಆಳ್ವಾರರ ಒಟ್ಟು ಪಾಶುರಗಳು 517. ಅದರಲ್ಲಿ 73 ಪಾಶುರಗಳು ಪ್ರಸಿದ್ಧವಾಗಿದ್ದ ಕ್ಷೇತ್ರಗಳನ್ನು ಕುರಿತವು. ಇವುಗಳಲ್ಲಿ 39 ಪಾಶುರಗಳು ವೇಂಗಡದೊಡೆಯನಿಗೇ ಮೀಸಲಾದುವು. ಅನಂತರ ಶ್ರೀವೈಷ್ಣವರಿಗೆ ಅತ್ಯಂತ ಶ್ರದ್ಧಾಸ್ಪದವಾದ ಕ್ಷೇತ್ರ ಶ್ರೀರಂಗ(ತಿರುವರಂಗ)ವನ್ನು ಕುರಿತವು ಏಳೇ ಪಾಶುರಗಳು! ಎಂದರೆ, ಮೊದಲ ನಾಲ್ವರು ಆಳ್ವಾರರ ಸಮಯದಲ್ಲಿ (ಎಂದರೆ ನಾಲ್ಕೈದನೆಯ ಶತಮಾನಗಳಲ್ಲಿ) ವೇಂಗಡಬೆಟ್ಟದ ಹಿರಿಮೆ ಎಣೆಯಿಲ್ಲದಿದ್ದಿತು. ಪೇಯಾಳ್ವಾರರ ಕಾಲದಲ್ಲಿ ಹೆಸರಾದ ವಿಷ್ಣುಕ್ಷೇತ್ರಗಳು ಐದು—ವೇಂಗಡ, ತಿರುವರಂಗ, ತಿರುಕ್ಕೋವಲೂರು, ವಿಣ್ಣಗರ್ ಮತ್ತು ವೇಃಕ. ಅವರು ತಮ್ಮ ಮೊದಲ ತಿರುವಂದಾದಿಯಲ್ಲಿ ಕ್ಷೇತ್ರಗಳನ್ನು ಕುರಿತು ಪ್ರಸ್ತಾಪಿಸಿರುವುದು ಹನ್ನೊಂದೇ ಪಾಶುರ ಗಳಲ್ಲಿ (ತಿರುವಂದಾದಿಯಲ್ಲಿ ಒಟ್ಟು ನೂರು ಪಾಶುರಗಳಿವೆ). ಇದರಲ್ಲಿ ಎಂಟು ಪಾಶುರಗಳು ವೇಂಗಡವನ್ನು ಕುರಿತವು; ತಿರುವರಂಗವನ್ನು ಕುರಿತದ್ದು ಒಂದೇ. ಹಾಗೆಯೇ ಭೂತತ್ತಾಳ್ವಾರರ ನೂರು ಪಾಶುರಗಳ ಎರಡನೆಯ ತಿರುವಂದಾದಿಯಲ್ಲಿ ಕ್ಷೇತ್ರಗಳನ್ನು ಕುರಿತವು ಹದಿನೇಳು; ಅದರಲ್ಲಿ ವೇಂಗಡವನ್ನು ಕುರಿತವು ಏಳು. ಪೇಯಾಳ್ವಾರರ ಮೂರನೆಯ ತಿರುವಂದಾದಿಯಲ್ಲಿ (ನೂರು ಪಾಶುರಗಳು) ಕ್ಷೇತ್ರಗಳನ್ನು ಕುರಿತ ಹತ್ತೊಂಬತ್ತು ಪಾಶುರಗಳಲ್ಲಿ ಹತ್ತು ವೇಂಗಡವನ್ನು ಕುರಿತವು. ತಿರುಮಳೀಶೈ ಆಳ್ವಾರರ 216 ಪಾಶುರಗಳಲ್ಲಿ (ಇವು ನಾನ್ಮುಖನ್ ತಿರುವಂದಾದಿ ಮತ್ತು ತಿರುಚ್ಚಂದ ವಿರುತ್ತಂ ಎಂಬೆರಡು ಸಂಗ್ರಹಗಳಲ್ಲಿವೆ) ಇಪ್ಪತ್ತಾರು ಕ್ಷೇತ್ರಗಳನ್ನು ಕುರಿತವು; ಇವುಗಳಲ್ಲಿ ವೇಂಗಡವನ್ನು ಹಾಡುವುವು ಹದಿನಾಲ್ಕು ಪಾಶುರಗಳು.


ಎಂದರೆ, ಆ ಕಾಲಕ್ಕೆ ವೇಂಗಡ ಅಷ್ಟು ಪ್ರಖ್ಯಾತವಾಗಿದ್ದಿತು. ಆಳ್ವಾರರ ದೃಷ್ಟಿಯಲ್ಲಿ ಬೆಟ್ಟವೇ ಪವಿತ್ರವಾದುದು; ಅದರ ಮೇಲೆ ಮೂಡಿಕೊಂಡಿರುವ ವಿಷ್ಣು ಅರ್ಚಾ ಮೂರ್ತಿ. ಭಕ್ತರ, ಭಾವುಕರ ಉದ್ಧಾರವೇ ಮುಖ್ಯ ಉದ್ದೇಶವಾಗಿ ತಾನೇತಾನಾಗಿ ಅಲ್ಲಿ ತೋರಿಕೊಂಡಿದ್ದಾನೆಂದು ಅವರು ಬಗೆದಿದ್ದರು. ಈ ದೇವರ ಆಯುಧಗಳಾದ ಶಂಖ-ಚಕ್ರಗಳನ್ನು ಅವರು ಉಲ್ಲೇಖಿಸುತ್ತಾರೆ. ಧರಿಸಿರುವ ತುಳಸೀಮಾಲೆಯನ್ನು ಬಣ್ಣಿಸುತ್ತಾರೆ. ಉಳಿದಂತೆ ಮೂರ್ತಿಯ ವಿವರಣೆ ಕಡಮೆಯೇ. ಆದರೆ ಅವನೇ ರಾಮ, ಕೃಷ್ಣ, ಪದ್ಮನಾಭ, ದಾಮೋದರ ಎಂದು ಮೊದಲಾಗಿ ಕಾಣಿಸುತ್ತಾರೆ. ಸಮುದ್ರದ ಮೇಲೆ ಪವಡಿಸಿರುವ ನಾರಾಯಣನೇ ವೇಂಗಡದ ಮೇಲೆ ನಿಂತಿರುವ ದೈವ ಎಂದು ಅವರ ನಂಬುಗೆ. ಮೋಹಿನಿಯಾಗಿ ಅಸುರರನ್ನು ಮೋಸಗೊಳಿಸಿದ, ರಾಮನಾಗಿ ರಾವಣನನ್ನು ಕೊಂದ, ಕೃಷ್ಣನಾಗಿ ಅರ್ಜುನನ ಮಂಕನ್ನು ಕಳೆದ, ತ್ರಿವಿಕ್ರಮನಾಗಿ ಮೂರೂ ಲೋಕಗಳನ್ನು ಅಳೆದ ದೇವರು (ಮಾಲ್ ಅಥವಾ ನೆಡಿಯೋನ್, ಎಂದರೆ ವಿಷ್ಣು) ವೇಂಗಡವನ್ನು ತನ್ನ ನೆಲೆಯನ್ನಾಗಿ ಆರಿಸಿಕೊಂಡಿದ್ದಾ ನೆಂದು ಅವರ ವಿಶ್ವಾಸ. ಮನುಷ್ಯ ಮಾಡಿದ ಮೂರ್ತಿ ಅವನದ್ದೆಂದು ಯಾವ ಆಳ್ವಾರರೂ ಸೂಚಿಸಿಲ್ಲ. ಅವರ ಪ್ರಕಾರ, ಬೆಟ್ಟದ ಮೇಲಿರುವ ದೈವ ಸ್ವಯಂವ್ಯಕ್ತ.

ಮೊದಲಾಳ್ವಾರರು

ಪೊಯ್ಗೈ, ಭೂತ, ಪೇಯ್—ಈ ಮೂವರನ್ನು ಮೊದಲ ಆಳ್ವಾರರೆಂದು ಕರೆಯುವ ವಾಡಿಕೆ. ಅವರ ಕಾಲ ತುಂಬ ಹಿಂದಿನದು, ಸುಮಾರು ಎರಡುಸಾವಿರ ವರ್ಷಗಳಷ್ಟು. ಇವರ ಕಾಲಕ್ರಮವನ್ನು ಮೇಲೆ ಹೇಳಿದಂತೆ ಮೊದಲು ಸೂಚಿಸಿದವರು ರಾಮಾನುಜರ ಶಿಷ್ಯ ತಿರುವರಂಗತ್ತು ಅಮುದನಾರ್. ಅನಂತರ ವೇದಾಂತದೇಶಿಕರು. ಈ ಕ್ರಮವನ್ನೊಪ್ಪಿ ಅವರು ಹುಟ್ಟಿದ ಸ್ಥಳ, ಹುಟ್ಟಿದಾಗ ಇದ್ದ ತಿಥಿ, ನಕ್ಷತ್ರ ಮೊದಲಾದ ವಿವರಗಳನ್ನೆಲ್ಲ ಸೂಚಿಸಿದರು. ಪೊಯ್ಗೈಆಳ್ವಾರರು ಹುಟ್ಟಿದ್ದು ಕಚ್ಚಿಯಲ್ಲಿ, ಎಂದರೆ ಈಗಿನ ಕಾಂಚೀಪುರದಲ್ಲಿ. ಮೂವರಲ್ಲಿ ಇವರೇ ಹಿರಿಯರು. ಭೂತತ್ತಾಳ್ವಾರರು ಹುಟ್ಟಿದ್ದು ಮಾಮಲ್ಲೈ ಅಥವಾ ಕಡಲ್‌ಮಲ್ಲೈ, ಎಂದರೆ ಈಗ ಮದ್ರಾಸ್ ನೆರೆಯಲ್ಲಿ ಪ್ರಸಿದ್ಧವಾಗಿರುವ ಮಾಮಲ್ಲಪುರ (ಮಹಾಬಲಿಪುರ). ಇವರ ಕಾಲ ಇನ್ನಿಬ್ಬರದ್ದಕ್ಕೆ ನಡುವಣದ್ದು. ಪೇಯಾಳ್ವಾರರ ಹುಟ್ಟೂರು ಮಯಿಲೈ, ಎಂದರೆ ಈಗ ಮದ್ರಾಸ್ ನಗರದಲ್ಲೇ ಇರುವ ಮಯಿಲಾಪುರ. ಇವರೇ ಮೂವರಲ್ಲಿ ಕಿರಿಯವರು. ಮೂವರೂ ಒಂದೇ ನಾಡಿನವರು, ಒಂದೇ ಸಮಯದಲ್ಲಿ ಬದುಕಿದ್ದವರು; ಒಮ್ಮೆ ಕಲೆತಿದ್ದರೆಂದೂ ಕಥೆಯಿದೆ.

ಅವರ ತಾಯಿನಾಡು ತೊಂಡೈನಾಡು. ಅಲ್ಲಿಂದ ನಡುನಾಡನ್ನೂ ದಾಟಿ ವಡನಾಡಿಗೆ ಬಂದು ಅದರ ಅಂಚಿನಲ್ಲಿದ್ದ ವೇಂಗಡಬೆಟ್ಟವನ್ನು ಮುಟ್ಟುವುದು ಸುಲಭವೇನಾಗಿರಲಿಲ್ಲ. ಆಗ ವೇಂಗಡವೂ ಮಲೆನಾಡು, ಗುಡ್ಡಗಾಡು. ಆಳ್ವಾರರ ಪಾಶುರಗಳಲ್ಲಿ ವೇಂಗಡದ ವರ್ಣನೆ ಕಣ್ಣಿಗೆ ಕಟ್ಟುವಂತೆ ಬರುತ್ತದೆ. ಎತ್ತರವಾದ, ಕಡಿದಾದ ಬೆಟ್ಟಸಾಲು; ದಟ್ಟವಾದ ಕಾಡುಗಳು; ಬಿದಿರುಮೆಳೆಗಳ ನಡುವೆ ಆಡ್ಡಾಡುವ ಆನೆಗಳ ಹಿಂಡು; ಅದನ್ನು ಹಿಡಿಯಲು ಓಡಿಯಾಡುವ ಕಾಡುಜನ ಕುರವರು; ಅವರ ಓಡಿಯಾಟಕ್ಕೆ ಅಡ್ಡಿಯಾಗಿ ಕಾಣಿಸಿಕೊಳ್ಳುವ ಹೆಬ್ಬಾವುಗಳು; ಅಲ್ಲಲ್ಲಿ ತೋರಿಕೊಳ್ಳುವ ಹುಲಿ, ಚಿರತೆ ಮೊದಲಾದ ಕ್ರೂರಮೃಗಗಳು. ಇವನ್ನೆಲ್ಲ ಮೈಲಿಗಳ ದೂರ ತಾಳಿಕೊಂಡು ನಡೆದರೆ, ಬೆಟ್ಟವೇರಿ ಇಳಿದು ಬಸವಳಿದು ಮುಂದರಿದರೆ ವೇಂಗಡದೊಡೆಯನನ್ನು ಕಾಣಬಹುದು.

ಈ ದೇವರನ್ನು ಕಾಣುವ ತವಕ ಆಳ್ವಾರರನ್ನು ಅಲ್ಲಿಯವರೆಗೆ ನಡೆಸಿತು. ಕಷ್ಟಗಳನ್ನೆಲ್ಲ ಸಹಿಸಿಕೊಂಡು, ಗುಂಡಿಗೆ ಗಟ್ಟಿಮಾಡಿಕೊಂಡು, ದಾರಿ ಸವೆಸಿ, ದೇವರ ಮುಂದೆ ನಿಂತಾಗ ಅವರಿಗೊದಗಿದ ಸಮಾಧಾನವನ್ನು ಅವರ ಪಾಶುರಗಳಲ್ಲಿ ಕಾಣಬಹುದು. ಆಗ ಅವರ ದೃಷ್ಟಿಯಲ್ಲಿ ಬೆಟ್ಟದ ಸೊಬಗೇ ಎದ್ದುನಿಲ್ಲುವುದು. ತಣ್ಣನೆಯ ಬೆಟ್ಟಸಾಲು, ಸುಯ್ಯೆಂದು ಬೀಸುವ ತಂಗಾಳಿ, ಮರದೆಲೆಗಳ ಮೊರೆತ, ಮುಗಿಲಲ್ಲಿ ಕವಿದ ಕಾರ್ಮೋಡ, ಬೆಟ್ಟಗಾಡಿನ ಮೇಲೆಲ್ಲ ಹರಡಿಕೊಂಡು ಪರಿಮಳವನ್ನು ಸೂಸುವ ಬಗೆಬಗೆಯ ಹೂಗಿಡಗಳು, ಅಲ್ಲಲ್ಲಿ ಓಡುತ್ತ ಧುಮುಕುತ್ತ ಹರಿಯುವ ಝರಿಗಳು—ಈ ಚಿತ್ರ ಮನಸ್ಸಿನಲ್ಲಿ ಮೂಡಿಕೊಳ್ಳುತ್ತದೆ.



ಕಪಿಲತೀರ್ಥ ಮತ್ತು ಆಳ್ವಾರ್‌ತೀರ್ಥ

ಬೆಟ್ಟವಾಗಲೀ ಬೆಟ್ಟದ ನದಿಗಳಾಗಲೀ ಎಡೆಗಳಾಗಲೀ ಅಷ್ಟಾಗಿ ಈ ಆಳ್ವಾರರ ಮನಸೆಳೆಯಲಿಲ್ಲ. ಅವರ ಒಲುಮೆಯನ್ನು ಹೀರಿಕೊಂಡದ್ದು ಬೆಟ್ಟದ ಮೇಲೆ ನಿಂತ ದೈವ. ಈ ದೈವ ತನ್ನ ನೆಲೆಗೆ ಆರಿಸಿಕೊಂಡ ಬೆಟ್ಟ ಇದೆಂದು ಬೆಟ್ಟದ ಹಿರಿಮೆ ಅಷ್ಟೆ. ಆ ಆಳ್ವಾರರ ಕಾಲದಲ್ಲಿ ಕ್ಷೇತ್ರಮಾಹಾತ್ಮ್ಯೆಯ ಗೀಳು ಇನ್ನೂ ಬೆಳೆದಿರಲಿಲ್ಲವೇನೋ! ವೇಂಗಡದ ಮೇಲೆ ನಿಂತಿರುವ ದೇವರು ಮುಕ್ತಿಯನ್ನು ಕೊಡುವಂಥವನು (**ವಿಣ್ ಕೊಡುಕ್ಕುಮ್**), ಪಾಪಗಳನ್ನು ಕಳೆಯುವಂಥವನು, ಈ ಲೋಕಕ್ಕೂ ಮೇಲಿನ ಲೋಕಕ್ಕೂ ಒಡೆಯನಾದವನು. ಭಕ್ತರ ಹಿತಕ್ಕೆಂದು ತಾನಾಗಿ ಇಲ್ಲಿ ತೋರಿಕೊಂಡವನು. ಆಳ್ವಾರರು ಈ ದೈವವನ್ನು ಬಗೆಬಗೆಯಾಗಿ ಬಣ್ಣಿಸಿದ್ದಾರೆ. ಅವನು ವಿಷ್ಣುವೆಂದೇ (**ಮಾಲ್** ಅಥವಾ **ನೆಡುಮಾಲ್**) ಅವರ ನಂಬಿಕೆ. ಅವನೇ ಒಂದು ಕಾಲದಲ್ಲಿ ರಾಮನಾಗಿ ರಾವಣನನ್ನು ಕೊಂದವನು, ಇನ್ನೊಂದು ಕಾಲದಲ್ಲಿ ಕೃಷ್ಣನಾಗಿ ಬಿಳಿ ಶಂಖವನ್ನೂದಿ ಅರ್ಜುನನಿಗೆ ದಾರಿ ತೋರಿದವನು, ಮತ್ತೊಂದು ಕಾಲದಲ್ಲಿ ತ್ರಿವಿಕ್ರಮನಾಗಿ ಭೂಮಿಯನ್ನು ಅಳೆದವನು. ಅವನೇ ತಿರುವರಂಗದಲ್ಲಿ ಮಲಗಿರುವವನು, ತಿರುಕ್ಕೋಟ್ಟಿಯೂರಲ್ಲಿ ಕೂತವನು, ತಿರುನೀರ್‌ಮಲೈಯಲ್ಲಿ ನಡೆಯುವವನು; ತಿರುವೇಂಗಡದಲ್ಲಿ ನಿಂತಿದ್ದಾನೆ. ಅವನ ಎದೆಯ ಮೇಲೆ ಹೂಮಾಲೆಗಳ ನಡುವೆ ಚೆಂದುಟಿಗಳ ಲಕ್ಷ್ಮಿ ಬೆಳಗುತ್ತಿದ್ದಾಳೆ. ಅವನು 'ತಿರುವೇಂಗಡತ್ತು ಮೇಯನ್', ಸಿರಿವೇಂಗಡದೊಡೆಯ ನಾರಾಯಣ.

ಈ ದೈವವು ಅರ್ಚಾಮೂರ್ತಿಯಾಗಿ ನಿಂತಿರುವುದನ್ನು ನೋಡಿದರೆ ಅವರಿಗೆ

ಸಣ್ಣದೊಂದು ಗುಡ್ಡವೇ ಎದ್ದಿರುವಂತೆ ತೋರಿತು. ನೆಟ್ಟಗೆ ನಿಂತ ಎತ್ತರದ ವೇಂಗಡದವನ ಕರಿಮೈ, ಮೇಲೆ ಮೂಡಿಸಿದ ಚಂದನದ ಲೇಪ, ಇಳಿಬಿದ್ದ ಹೂಮಾಲೆಗಳು, ಕೊರಳಿಗೆ ಹಾಕಿದ ತಂಪಾದ ತುಳಸಿಯ ಮಾಲೆ, ಮೇಲೆ ಹೊದ್ದಿಸಿದ ಪಟ್ಟೆಉಡುಗೆ, ಅಡಿಗಳ ಮೇಲೆ ಇರಿಸಿದ ಹೂರಾಶಿ; ಕಾಡಿನ ಮರಗಳ ಮೇಲೆ ಹಾರಾಡಿ, ಹೂಗಳನ್ನು ಎರಚಾಡುವ ಕಪಿಗಳು. ದೂರದ ಊರುಗಳಿಂದೆಲ್ಲ ಜನ ಅಲ್ಲಿಗೆ ಬಂದು ನೆರೆಯುವರು. ಅದೂ, ಪಾರಸಿಯ ದಿನ (ಎಂದರೆ ಮುಕ್ಕೋಟಿ ದ್ವಾದಶಿಯಂದು) ಗುಜುಗುಜು ಗುಂಪು. ಜನರು ಅವನ ಸಾವಿರ ಹೆಸರುಗಳನ್ನು ಹೇಳುತ್ತ, ಕೈಗಳಲ್ಲಿ ಧೂಪ-ದೀಪ-ಹೂಗಳನ್ನು ಹಿಡಿದು ಬರುವರು. ಅವನ ಅಡಿಗಳ ಬಳಿ ಇವನ್ನೆಲ್ಲ ಇರಿಸಿ, ಮೈ ಇಡೀ ನೆಲಕ್ಕಾನಿಸಿ ಎರಗುವರು. ಹೂಮಾಲೆಗಳಿಂದ ಸಿಂಗರಿಸಿದ ಈ ದೈವದ ಮೈ ಎಲ್ಲರ ಒಡಲನ್ನೂ ಸೂರೆಗೊಳ್ಳುವುದು; ಬೆಟ್ಟವೇರಿ ಬಂದ ಭಕ್ತರನ್ನು ಮುಗಿಲಿಗೊಯ್ಯುವುದು.

ತಿರುಮಳೀಶೈಆಳ್ವಾರರು ನಾಲ್ಕನೆಯವರು; ಮೊದಲ ಮೂವರು ಆಳ್ವಾರರ ಅನಂತರ ಇದ್ದವರು, ಅವರಿಗೆ ಸಮಕಾಲಿಕರಾಗಿ ಕಿರಿಯರಾಗಿದ್ದಿರಬಹುದು. ಅವರ ಜನ್ಮಸ್ಥಳ ತಿರುಮಳೀಶೈ ಅಥವಾ ಮಹೀಸಾರಪುರ; ಮದ್ರಾಸಿಗೆ ಪಶ್ಚಿಮದಲ್ಲಿ ಸುಮಾರು ಹದಿನೈದು ಮೈಲಿ ದೂರದಲ್ಲಿರುವ ಊರು. ಈ ಊರಿನವರೆಂದೇ ಅವರು ತಿರುಮಳೀಶೈಪ್ಪಿರಾನ್ ಎಂದಾದರು. ಅವರ 'ನಾನ್ಮುಖನ್ ತಿರುವಂದಾದಿ' (96 ಪಾಶುರಗಳದ್ದು) ಮತ್ತು 'ತಿರುಚ್ಚಂದವಿರುತ್ತಂ' (120 ಪಾಶುರಗಳು)—ಎರಡನ್ನೂ ಕಲೆಸಿ ಪರಿಶೀಲಿಸಿದರೆ ಹದಿನಾರು ದಿವ್ಯಸ್ಥಳಗಳನ್ನು ಪ್ರಸ್ತಾಪಿಸಿದ್ದಾರೆ: ತಿರುವರಂಗಂ, ತಿರುವೇಂಗಡಂ, ತಿರುವಳ್ಳಿಕ್ಕೇಣಿ (ಮದ್ರಾಸಿನ ಹರವಿನಲ್ಲಿರುವ ಬಡಾವಣೆ), ತಿರುವೇಃಕ (ಕಾಂಚೀಪುರದ ನೆರೆಯಲ್ಲಿ), ಕುಂಭಕೋಣ ಮೊದಲಾದುವು. ಇವುಗಳಲ್ಲಿ ಹದಿನಾಲ್ಕು ಪಾಶುರಗಳು ವೇಂಗಡವನ್ನು ಕುರಿತವು. ಇಲ್ಲಿನ ವೇಂಗಡದ ಚಿತ್ರ ಮೊದಲ ಮೂವರು ಆಳ್ವಾರರು ಬಿಡಿಸಿದಂತೆಯೇ ಇದೆ. ಬೆಟ್ಟಸಾಲು, ಕಾಡು, ಬಿದಿರುಮೆಳೆ, ಹೂಬಳ್ಳಿ, ಝರಿಗಳು, ಕಾಡುಪ್ರಾಣಿಗಳು (ಆನೆ, ಸಿಂಹ, ಚಿರತೆ ಮೊದಲಾದುವು), ಕಪಿಗಳ ಹಿಂಡು ಇವೆಲ್ಲವನ್ನೂ ವಿವರಿಸಿ ಬಣ್ಣಿಸುತ್ತಾರೆ, ಈ ಆಳ್ವಾರರು. ಅವರೂ ಇಲ್ಲಿ ಆನೆಗಳು ಬಹುವಾಗಿ ಅಡ್ಡಾಡುವುದನ್ನು ಕಂಡರು.

ವೇಂಗಡಬೆಟ್ಟದ ಮೇಲೆ ನಿಂತಿರುವ ದೈವವನ್ನು ಇವರು 'ವೇಂಗಡದವನು' (**ವೇಂಗಡವಾ, ತಿರುವೇಂಗಡತ್ತಾನ್, ವಡವೇಂಗಡತ್ತಾನ್**) ಎಂದೇ ಕರೆಯುತ್ತಾರೆ. ಅವರ ದೃಷ್ಟಿಯಲ್ಲಿಯೂ ಈ ದೇವರು ವಿಷ್ಣುವಿನ ಅರ್ಚಾಮೂರ್ತಿಯೇ. ಲಕ್ಷ್ಮಿಯ ಗಂಡನೆಂದು (**ನೂಲಾಟ್ಟಿಕ್ಕೇಳ್ವನಾರ್**) ನಿರ್ದೇಶನ ಮಾಡುತ್ತಾರೆ. ಮೊದಲ ಮೂವರೂ ಆಳ್ವಾರರು ಈ ದೇವರಿಗೆ ಗುಡಿಯಿದ್ದುದನ್ನು ಉಲ್ಲೇಖಿಸುವುದಿಲ್ಲ. ನಾಲ್ಕನೆಯ ಇವರು ಗುಡಿಯಿರಲಿಲ್ಲವೆಂದು ಸ್ಪಷ್ಟಪಡಿಸುತ್ತಾರೆ. ಸುತ್ತಲೂ ದಟ್ಟವಾದ ಕಾಡಿದ್ದು, ದೇವರು ನಿಂತೆಡೆ ಮಾತ್ರ ಕಾಡನ್ನು ಕಡಿದು ನಡೆದಾಡಲು ಅನುವು ಮಾಡಿದ್ದರಂತೆ (**ಪರಿಂದು ಪಡುಕಾಡು ನಿರ್ಪ**). ಕಾಡನ್ನು ಕಡಿದು ತಾನೇ ಎಡೆಮಾಡಿಕೊಂಡದ್ದು ದೈವ ನಮ್ಮ

ಮೇಲೆ ತೋರಿರುವ ಕರುಣೆ ಎಂದು ಅವರು ಬಗೆದಿದ್ದಾರೆ. ಈ ಮೂರ್ತಿ ಎಲ್ಲರಿಗೂ ಎಲ್ಲೆಡೆಯೂ ಕಾಣುವಂತೆ ಇದ್ದಿತೆಂದು ಅವರ ಪಾಶುರವೊಂದರಲ್ಲಿ ಬರುವ ವಿವರ. ಸ್ವಾರಸ್ಯವಾದ ಈ ಪಾಶುರ (45) ಹೀಗಿದೆ—

ಪುರಿಂದು ಮಲರಿಟ್ಟುಪ್ಪುಂಡರೀಕಪಾದಮ್
ಪರಿಂದು ಪಡುಕಾಡು ನಿರ್ಪ-ತೆರಿಂದೆಂಗುಮ್
ತಾನೊಂಗಿ ನಿನ್ರಾನ್ ತಣ್ಣರುವಿ ವೇಂಗಡಮೇ
ವಾನೋರ್ಕುಂ ಮಣ್ಣೋರ್ಕುಂ ವೈಪ್ಪು

"ನಮ್ಮ ಹಿತಕ್ಕೆಂದು ನಮ್ಮ ಮೇಲೆ ಕರುಣೆ ತೋರಿ ಈ ದೈವವು ಕಾಡನ್ನು ಕಡಿದು, ತೆರವು ಮಾಡಿಕೊಂಡು ತನ್ನ ತಾವರೆಯಡಿಗಳನ್ನು ನೆಲದ ಮೇಲೂರಿ ನಿಂತಿದೆ. ಭಕ್ತರು ಆ ಅಡಿಗಳ ಮೇಲೆ ಹೂಗಳನ್ನು ಇರಿಸಿದ್ದಾರೆ. ಎತ್ತರವಾಗಿ ನಿಂತಿರುವ ಈ ಮೂರ್ತಿಯನ್ನು ಎಲ್ಲೆಡೆಗಳಿಂದಲೂ ಕಾಣಬಹುದು. ತಣ್ಣನೆಯ ಝರಿಗಳಿಂದ ತುಂಬಿರುವ ವೇಂಗಡವು ದೇವತೆಗಳಿಗೂ ಮಾನವರಿಗೂ ಬಳುವಳಿಯಂತಿದೆ"—ಇದು ಈ ಪಾಶುರದ ಭಾವ.

ಎಂದರೆ, ಗುಡಿಯಿರಲಿಲ್ಲವೆಂದೇ ತಾತ್ಪರ್ಯ. ತೆರೆದ ಮಂಟಪವೊಂದು ಇದ್ದಿರಬಹುದು. ದೇವರಿಗೆ ಗುಡಿಯನ್ನು ಕಟ್ಟುವುದು ಆ ಕಾಲದಲ್ಲಿ ಬಳಕೆಯಲ್ಲಿದ್ದ ಅಭ್ಯಾಸವೇ. ಆದರೆ ವೇಂಗಡದೊಡೆಯನಿಗೆ ಗುಡಿಯನ್ನು ಕಟ್ಟಿ, ಅವನ ಬೆಳಕನ್ನು ಗೋಡೆಗಳಿಂದ ಮುಚ್ಚಿರಲಿಲ್ಲ. ಯಾರಾದರೂ ಯಾವಾಗಲಾದರೂ ಎಲ್ಲಿಂದಲಾದರೂ ಈ ದೈವವನ್ನು ಕಂಡು, ತಾವೇ ಆ ಅಡಿಗಳ ಮೇಲೆ ಹೂಗಳನ್ನಿರಿಸಿ ಸಂತೋಷ ಪಟ್ಟುಹೋಗುವ ಅನುಕೂಲ ಈ ಆಳ್ವಾರರ ಕಾಲದಲ್ಲಿದ್ದಿತು. ಯಾವೊಂದು ನಿಯಮಿತವಾದ ಪೂಜಾವಿಧಾನ ಅಲ್ಲಿ ಜರುಗುತ್ತಿದ್ದಿತೆನ್ನಲು ಯಾವ ಆಧಾರವೂ ಇರದು. ಭಕ್ತರು ತಾವೇ ತಮಗೆ ತೋರಿದಂತೆ ಆರಾಧನೆ ಸಲ್ಲಿಸಿ ಹೋಗುತ್ತಿದ್ದರು.

ಬೆಟ್ಟದ ಮೇಲೆ ಆನೆಗಳು ಹಿಂಡುಹಿಂಡಾಗಿ ಅಲೆಯುತ್ತಿದ್ದುದನ್ನೂ ಕುರುವರೆಂಬ ಕಾಡುಜನ ಅವುಗಳ ಬೇಟೆಯಾಡುತ್ತಿದ್ದುದನ್ನೂ ಈ ನಾಲ್ವರೂ ಆಳ್ವಾರರು ತಿಳಿಸುತ್ತಾರೆ. ಕುರುವರೆಂಬುವರು ಆ ಪ್ರಾಂತ್ಯದಲ್ಲಿ ನೆಲೆಸಿದ್ದ ಹಳೆಯ ಜನ; ಕಾಡುಮೃಗಗಳನ್ನು ಬೇಟೆಯಾಡಿ, ಆನೆಗಳನ್ನು ಹಿಡಿದು ಪಳಗಿಸಿ ಬಳಸಿಕೊಳ್ಳುತ್ತಿದ್ದ ಜನ ಅವರು. ಈಗ ದಕ್ಷಿಣದೇಶದ ಎಲ್ಲ ರಾಜ್ಯಗಳಲ್ಲಿಯೂ ಕುರುವರ (ಕುರುಂಬ, ಕುರುಬ) ಹಿನ್ನೆಲೆ ಕಾಣಸಿಗುತ್ತದೆ. ಬೆಟ್ಟ-ಗುಡ್ಡ, ಕಾಡು-ಮೇಡುಗಳಲ್ಲಿ ಈಗಲೂ ಅವರ ಮೊದಲ ಇರವನ್ನೇ ಗಮನಿಸಬಹುದು. ಬೆಟ್ಟದ ಮೇಲೆ ಮೊದಲಿಗಿದ್ದ ವೆಡ್ಡರೆಂಬ ಆದಿವಾಸಿಗಳನ್ನು ಸೆಣೆಸಿ, ಪ್ರದೇಶವನ್ನೆಲ್ಲ ಆಕ್ರಮಿಸಿಕೊಂಡ ಇವರು ಕನ್ನಡನಾಡಿನಿಂದ ಅಲ್ಲಿಗೆ ಹೋದವರು. ಮೊದಲಿಗೆ ಅವರ ಗುಂಪಿಗೆ ಒಡೆಯನೆಂಬುವವನಿರಲಿಲ್ಲ. ಜಗಳಗಳು ತಲೆದೋರಿದಾಗ 'ಕೋಮಂದು ಕುರುಂಬಪ್ರಭು'ವೆಂಬುವನು ಜನಾಂಗಕ್ಕೆ ಧಣಿಯಾದ. ಯಾದವರಾಜರ ಸಂತತಿ ಆರಂಭವಾದುದು ಹೀಗೆಯೇ ಎಂದು ಹೇಳುತ್ತಾರೆ; ಇವನು

ಪಲ್ಲವನೆಂದೂ ಒಂದು ವಾದವುಂಟು. ಇದು ಹೇಗಾದರೂ ಇರಲಿ, ಕುರುವರಿಗೂ ಪಲ್ಲವರಿಗೂ ಸೆಣಸಾಟ ಶುರುವಾಗುವ ಮೊದಲಿನ ಚಿತ್ರ ಈ ನಾಲ್ವರು ಆಳ್ವಾರರ ಪಾಶುರಗಳಲ್ಲಿ ದೊರೆಯುತ್ತದೆ. ಬೇಟೆಗಾರರಾದ ಈ ಜನ (ಕುರುವರು) ಅಷ್ಟಿಷ್ಟು ಬೇಸಾಯವನ್ನೂ ಕಲಿತ ವಿವರವೂ ದೊರೆಯುತ್ತದೆ. 'ತಿನೈ' ಅಥವಾ 'ಕೊರ್ರ' ಎಂಬ ಬೆಳೆಯನ್ನು ಅವರು ಬೆಳೆಯುತ್ತಿದ್ದರಂತೆ.

ಅನಂತರದ ಆಳ್ವಾರರು

ಚೇರನಾಡಿನ ಕೊಲ್ಲಿನಗರ (ವಂಜಿಕ್ಕಳಂ) ಎಂಬಲ್ಲಿ ದೃಢವ್ರತರಾಜನ ಮಗನಾಗಿ ಹುಟ್ಟಿದ ಕೊಲ್ಲಿಕ್ಕಾವಲನ್ ಅಥವಾ ಕುಲಶೇಖರಆಳ್ವಾರರ ಕಾಲ ಕೊಂಚ ಆಮೇಲಿನದು. ಸ್ವಾಮಿಕಣ್ಣುಪಿಳ್ಳೆಯವರ ಎಣಿಕೆಯಂತೆ ಅವರ ಕಾಲ ಮೊದಲ ನಾಲ್ವರು ಆಳ್ವಾರರ ಕಾಲಕ್ಕಿಂತ ನಲವತ್ತು-ಐವತ್ತು ವರ್ಷಗಳು ಈಚೆಗೆ. ಇಷ್ಟು ಕಾಲಕ್ಕಾಗಲೇ ವೇಂಗಡದ ಮೇಲೆ ಕೆಲವು ಮಾರ್ಪಾಟುಗಳು ಮೂಡಿಕೊಂಡಿದ್ದಂತೆ ತೋರುತ್ತದೆ. ಈ ವೇಳೆಗಾಗಲೇ ತಿರುವರಂಗದಲ್ಲಿ ದೊಡ್ಡ ಗುಡಿಯಿದ್ದಿತು; ಅಲ್ಲಿ ಆಗಮಾನುಸಾರವಾಗಿ ಷಟ್ಕಾಲಪೂಜೆ ನಡೆಯುತ್ತಿದ್ದಿತು. ಆದರೆ ಇಂಥ ಗುಡಿಯನ್ನು ಅಥವಾ ಅಂಥ ಪೂಜೆಯನ್ನು ಕುಲಶೇಖರರು ವೇಂಗಡದಲ್ಲಿ ನೋಡಲಿಲ್ಲ. ತಂಬಕವೆಂಬ ಮರದ ಮತ್ತು ಸಂಪಿಗೆಮರದ ಬಳಕೆಯನ್ನು ಅವರ 'ಪೆರುಮಾಳ್ ತಿರುಮೋಳಿ' ಉಲ್ಲೇಖಿಸುವುದರಿಂದ ಮರದ ಗುಡಿ ಇದ್ದಿರಬಹುದೆಂದು ಕೆಲವರು ಊಹಿಸಿದ್ದಾರೆ. ಮರದ ದಿಮ್ಮಿಗಳಿಂದ, ಹಲಗೆಗಳಿಂದ ಕಟ್ಟಿದ ಗುಡಿಗಳು ಪ್ರಾಚೀನಕಾಲದಲ್ಲಿ ವಿಶೇಷವಾಗಿದ್ದುವು. ಆದರೆ ವೇಂಗಡದಲ್ಲಿ ಇಂಥದೊಂದು ಗುಡಿ ಮೂಡಿಕೊಂಡಿದ್ದಿತೇ ಎಂದು ನೇರವಾಗಿ ತಿಳಿಯುವುದಿಲ್ಲ. ವೇಂಗಡದಲ್ಲಿ 'ನೀಳ್‌ವಾಶಲ್' ಎಂದರೆ ನಿಡುಬಾಗಿಲು ಎಂಬುದರ ಪ್ರಸ್ತಾಪವೂ, ತಾವು ಮುಂದಿನ ಜನ್ಮದಲ್ಲಿ ವೇಂಗಡದೊಡೆಯನ ಗುಡಿಯ ಹೊಸ್ತಿಲಾಗಿ ಹುಟ್ಟಬೇಕೆಂಬ ಬಯಕೆಯ ಉಲ್ಲೇಖವೂ ಸಣ್ಣದೊಂದು ಗುಡಿ ಇದ್ದಿತೆಂದು ಸೂಚಿಸುತ್ತದೆ. ಅರ್ಚಕನು ನಿಡುಬಾಗಿಲಿನಿಂದ ಒಳಗೆ ಅರ್ಚನೆ ಮಾಡುತ್ತಿದ್ದನೆಂದೂ ಭಕ್ತರು ನಿಡುಬಾಗಿಲಿನ ಹೊರಗೆ ನಿಲ್ಲುತ್ತಿದ್ದರೆಂದೂ ಈ ಪಾಶುರ (*ವೇಂಗಡಕ್ಕೋನ್ 4, 3*) ತಿಳಿಯಪಡಿಸುತ್ತದೆ. ಇನ್ನಷ್ಟು ಸ್ಪಷ್ಟವಾಗಿ ಇನ್ನೊಂದು ಪಾಶುರ (9)—

ನೆಡಿಯಾನೇ ವೇಂಗಡವಾ ನಿನ್ ಕೋಯಿಲಿನ್ ವಾಶಲ್
ಅಡಿಯಾರುಂ ವಾನವರುಂ ಅರಂಬ್ಪೈಯರುಂ ಕಿಡಂದಿಯಂಗುಮ್
ಪಡಿಯಾಯ್‌ಕ್ಕಿಡಂದು ಉನ್ ಪವಳವಾಯ್ ಕಾಣ್ಬೇನೇ

—ಎಂದು ಅವರ ಬಯಕೆಯನ್ನು ತೋಡಿಕೊಳ್ಳುವಾಗ "ನಿನ್ನ ಗುಡಿಯ ಬಾಗಿಲು" ಎಂಬ ಮಾತುಗಳು ಬರುತ್ತವೆ. ಗುಡಿಯ ಬಾಗಿಲಿನ 'ಪಡಿ', ಎಂದರೆ ಹೊಸ್ತಿಲಾಗಿ ಮೂಡಿಕೊಂಡರೆ ವೇಂಗಡದವನ ಹವಳದಂತಿರುವ ಬಾಯನ್ನು ಎಡೆಬಿಡದೆ



ಉತ್ಸವಮೂರ್ತಿ

ನೋಡುತ್ತಿರಬಹುದೆಂಬ ಅವರ ಮನದಾಸೆ ಇಲ್ಲಿ ವ್ಯಕ್ತವಾಗಿದೆ. ಈಗಲೂ ಗುಡಿಯ ಹೊಸ್ತಿಲನ್ನು 'ಕುಲಶೇಖರಪ್ಪಡಿ' ಎಂದೇ ಕರೆಯುತ್ತಾರೆ.

ಕುಲಶೇಖರರ ಕಾಲಕ್ಕೆ ಮೂವತ್ತು-ನಲವತ್ತು ವರ್ಷಗಳನಂತರ ಪಾಂಡ್ಯದೇಶದಲ್ಲಿಯೇ ನಮ್ಮಾಳ್ವಾರರು ಇದ್ದರೆಂದು ಸ್ವಾಮಿಕಣ್ಣುಪಿಳ್ಳೆಯವರ ಎಣಿಕೆ. ಕಾರಿ ಮತ್ತು ಅಡಯ-ನಂಗೈ ಎಂಬ ಶೂದ್ರದಂಪತಿಗಳ ಮಗನಾಗಿ ತಿರುಕ್ಕುರುಕೈ (ಈಗಿನ ತಿನ್ನವೆಲ್ಲಿ ಜಿಲ್ಲೆ) ಎಂಬಲ್ಲಿ ಹುಟ್ಟಿದ ಇವರು ಪಾಂಡ್ಯರಾಜನ ಸಾಮಂತರಾಗಿ ಹರಯವನ್ನು ಕಳೆದರೆಂದು ಪ್ರತೀತಿ. ಶ್ರೀವೈಷ್ಣವಸಮುದಾಯದ ಕುಲಪತಿಯೆಂದು ಕೀರ್ತಿವೆತ್ತು, ಆಳ್ವಾರರಲ್ಲಿ ಆಚಾರ್ಯರೆಂದೂ ಆಚಾರ್ಯರಲ್ಲಿ ಆಳ್ವಾರರೆಂದೂ ಪರಿಗಣಿತರಾದ ಇವರು ವೇಂಗಡವನ್ನು ಕುರಿತು ನಲವತ್ತುನಾಲ್ಕು ಪಾಶುರಗಳನ್ನು ಹಾಡಿದ್ದಾರೆ.

ಶ್ರೀವೈಷ್ಣವಆಚಾರ್ಯರ (ನಾಥಮುನಿ, ಯಾಮುನ ಮತ್ತು ರಾಮಾನುಜ) ಗಮನವನ್ನೂ ಅಭಿಮಾನವನ್ನೂ ವೇಂಗಡ ಸೆಳೆದದ್ದು ಈ ಪಾಶುರಗಳ ಪ್ರಭಾವದಿಂದಲೇ. ವೇಂಗಡವು ನಿರ್ವಿವಾದವಾಗಿ ವೈಷ್ಣವಕ್ಷೇತ್ರವಾದದ್ದು ಈ ಆಳ್ವಾರರ ಸಮಯದಲ್ಲೇ.

ಆದರೆ ನಮ್ಮಾಳ್ವಾರರ ನಿಲುವು ಭಕ್ತಿಪಾರಮ್ಯದ್ದು, ಶರಣಾಗತಿಯದು. ಎಲ್ಲ ಮನುಷ್ಯನಿಗೂ ಸಮನಾಗಿ ಶರಣ್ಯನಾಗಿರುವ ದೈವ ವೇಂಗಡದೊಡೆಯ. ಮಹಾ ಮಾಯಾವಿಯೆಂದೂ (**ಮಾಮಾಯನ್**), ವೈಕುಂಠನಾಥನೆಂದೂ, ನಿತ್ಯಸೂರಿಗಳ ಸ್ವಾಮಿಯೆಂದೂ (**ವಾನೋರ್ ಪೆರುಮಾನ್**), ಎಲ್ಲ ಕಾಲಗಳಲ್ಲಿಯೂ ಎಲ್ಲರಿಗೂ (ಎಂದರೆ ದೇವತೆಗಳಿಗೂ ಮನುಷ್ಯರಿಗೂ) ಕಣ್ಣಾಗಿರುವ (ಎಂದರೆ ಅಷ್ಟು ಪ್ರಿಯವಾಗಿರುವ) ಈ ದೈವವು ತಂಪಾದ ವೇಂಗಡಬೆಟ್ಟದ ಮೇಲೆ ಕಾಣಿಸಿಕೊಂಡಿದೆಯೆಂದೂ—

ಕಣ್ಣಾವಾನೆನ್ರುಂ ವೇಣ್ಡೋರ್ ವಿಣ್ಣೋರ್ಕು
ತಣ್ಣಾರ್ ವೇಂಗಡವಿಣ್ಣೋರ್ ವೇರ್ಪನೇ

—ಎಂದು ಅವರು ಹಾಡಿದ್ದಾರೆ. ಅವರ ದೃಷ್ಟಿಯಲ್ಲಿ ಈ ಬೆಟ್ಟವೇ ಪವಿತ್ರವಾದುದು; ವೈಕುಂಠಕ್ಕೆ ಸಮನಾದುದು; ಒಂದು ರೀತಿಯಲ್ಲಿ ವೈಕುಂಠಕ್ಕೂ ಮಿಗಿಲಾದುದು. ಪಾಪಗಳನ್ನೆಲ್ಲ ಕಳೆಯುವ ಬೆಟ್ಟ (**ವೇಂ-ಗಡ**) ಇದು. ಹೆಡೆಯೆತ್ತಿ ಮಲಗಿದ ಹಾವಿನಂತೆ (**ಪೈತ್ತಪಾಂಬು ಅಣೈಯಾನ್**) ಇರುವ ಬೆಟ್ಟಸಾಲನ್ನು ಅವರು ಗುರುತಿಸಿದ್ದಾರೆ. ಆದಿಶೇಷನ ಕಲ್ಪನೆ, ಈ ಬೆಟ್ಟವನ್ನು ಶೇಷಾಚಲವೆಂದು ಕರೆಯುವ ವಾಡಿಕೆ—ಇವನ್ನು ಇಲ್ಲಿ ಕಾಣಬಹುದು. ಕಾರ್ಮುಗಿಲನ್ನು ಹೋಲುವ ಈ ಬೆಟ್ಟದ ಮೇಲೆ ನಿಂತಿರುವ ದೈವ ನಾರಾಯಣನೇ, 'ಪರಮನ್', ದೇವಾಧಿದೇವ, ಜಗತ್ಕಾರಣ, ಲಕ್ಷ್ಮೀರಮಣ. "ನನ್ನೊಡೆಯನೇ, ತಣ್ಣಗಿರುವ ವೇಂಗಡದಲ್ಲಿ ನಿಂತವನೇ" (**ಎಂದಾಯ್, ತಣ್ ತಿರುವೇಂಗಡತ್ತುಳ್ ನಿನ್ರಾಯ್**) ಎಂದು ಭಾವಪರವಶರಾಗಿ ಹಾಡುತ್ತಾರೆ, ಇವರು. ಮೂಲೋಕದ ದೊರೆ, ಇಂದೂ ಹಿಂದೆಯೂ ಮುಂದೆಯೂ ನಮ್ಮೆಲ್ಲರ ತಾಯಿತಂದೆಯಾಗಿರುವವನು, ಶ್ರೀದೇವಿಯನ್ನು ಒಡಲಲ್ಲೇ ಮೂಡಿಸಿಕೊಂಡವನು, ತನ್ನ ಕಾಲು ಹಿಡಿದ ಭಕ್ತಜನರನ್ನು ಕೈಹಿಡಿದೆತ್ತಿ ಮುಕ್ತಿಯನ್ನು ಕೊಡುವವನು; ಅನ್ಯದೈವವನ್ನು ಶರಣಾಗತರು ಬಗೆಯಬಾರದು ಎಂದು ಇವರು ನಿರ್ಧಾರದಿಂದ ಹೇಳುತ್ತಾರೆ.

ಮುಪ್ಪಡರುವ ಮೊದಲೇ ಪ್ರತಿಯೊಬ್ಬರೂ ವೇಂಗಡಬೆಟ್ಟವನ್ನೇರಿ ಅಲ್ಲಿ ನಿಂತಿರುವ ದೈವಕ್ಕೆ ಧೂಪ, ದೀಪ, ನೀರು, ಹೂಗಳಿಂದ ಪೂಜೆ ಸಲ್ಲಿಸಬೇಕೆಂದು ಇವರ ಆಗ್ರಹ (*ತಿರುವಾಯ್‌ಮೋಳಿ 3, 2*). ವೇಂಗಡಕ್ಕೆ ಬರುವವರು ತಮ್ಮನ್ನು ತಾವು ಮರೆಯಬೇಕಂತೆ, ತಮ್ಮ ದೊಡ್ಡಸ್ತಿಕೆಯನ್ನು ಕಟ್ಟಿಟ್ಟು ಬರಬೇಕಂತೆ, ಮೈಮರೆತು ಹಾಡುತ್ತ ಕುಣಿಯುತ್ತ ದೇವರೆದುರು ನಿಲ್ಲಬೇಕಂತೆ. ಇಲ್ಲಿ ಜಾತಿ-ಮತಗಳ ಒಡಕು ಇರದು, ದೇವತೆಗಳು-ಮನುಷ್ಯರೆಂಬ ಭೇದವೂ ಸಲ್ಲದು. ಈ ಪರಮನ ಮುಂದೆ ಜಡ-ಜೀವವೆಲ್ಲವೂ ಸಮನೇ. ಈ ವರ್ಣನೆಗಳನ್ನೆಲ್ಲ ಗಮನಿಸಿದರೆ ವೇಂಗಡಬೆಟ್ಟದ ಮೇಲೆ ಇದ್ದಿರಬಹುದಾದ ಗುಡಿಗೆ ಯಾರಾದರೂ ಯಾವ ಕಾಲದಲ್ಲಾದರೂ ಹೋಗಿ

ಬರುವ ಸೌಕರ್ಯ ಇದ್ದಿತೆಂದು ತೋರುತ್ತದೆ; ತಾವೇ ಪೂಜೆ ಮಾಡಿಬರುವ ಸೌಲಭ್ಯವೂ ಇದ್ದಂತೆ ಕಾಣುತ್ತದೆ. ಆ ಕಾಲಕ್ಕಿನ್ನೂ ಗುಡಿಯು ದೇವರನ್ನು ಒಳಗೆ ಮಾಡಿ ಭಕ್ತರನ್ನು ಹೊರಗೆ ದೂಡುವ ವ್ಯವಸ್ಥೆಯಾಗಿರಲಿಲ್ಲ!

ನಮ್ಮಾಳ್ವಾರರು ವೇಂಗಡದೊಡೆಯನ ಮೂರ್ತಿಯನ್ನು ಬಣ್ಣಿಸಿದ್ದಾರೆ. ಅವರ ದೃಷ್ಟಿಯಲ್ಲಿ ಇದು ನಿಸ್ಸಂದೇಹವಾಗಿ ವಿಷ್ಣುಮೂರ್ತಿಯೇ. ಶಂಖ, ಚಕ್ರ, ಶಾರ್ಙ್ಗಗಳನ್ನು ಧರಿಸಿದ ಈ ಮೂರ್ತಿ ತನ್ನ ಅಡಿದಾವರೆಗಳನ್ನು ಭಕ್ತರಿಗೆ ತೋರಿಸುತ್ತ ಶರಣಾಗತಿಯ ತತ್ತ್ವವನ್ನು ತಿಳಿಯಪಡಿಸುತ್ತಿದೆಯೆಂದು ಅವರು ಬಗೆದಿದ್ದಾರೆ. ಮೂರ್ತಿಯ ಎದೆಯ ಮೇಲೆ ಅಲರ್‌ಮೇಲ್‌ಮಂಗೈತಾಯಿ (ಎಂದರೆ, ವಕ್ಷಃಸ್ಥಲಲಕ್ಷ್ಮಿ) ಇರುವುದನ್ನು ಅವರು ಗಮನಿಸಿ ಅದನ್ನು ಉಲ್ಲೇಖಿಸಿದ್ದಾರೆ. ಮೂರ್ತಿಯ ಪಾದಗಳ ಮಹಿಮೆಯನ್ನೂ ಸೊಬಗನ್ನೂ ವಿವರಿಸಿದ್ದಾರೆ. ಮೂರ್ತಿ ಏಕಾಕಿಯಾಗಿದ್ದರೂ ಮೂವರೂ (ಬ್ರಹ್ಮ, ವಿಷ್ಣು, ಶಿವ) ಅದರಲ್ಲಿ ಅಡಗಿರುವುದನ್ನೂ, ಲಕ್ಷ್ಮಿ ಅಲ್ಲೇ ಕಲೆತಿರುವುದನ್ನೂ ಸೂಚಿಸಿದ್ದಾರೆ.

ಹೀಗೆ ಎಲ್ಲ ಆಳ್ವಾರರಿಗೂ ವೇಂಗಡದೊಡೆಯ ಅರ್ಚಾವತಾರ; ದೇವರು ಜನರ ಮೇಲೆ ಕರುಣೆಯಿಂದ ತಾನಾಗಿ ತೋರಿಕೊಂಡಿರುವ ರೂಪ. ಭಾವುಕರ ಭಾವನೆಗಳಿಗೆ ಅನುವಾಗಿಯೇ ದೇವರು ರೂಪ ತಳೆಯುವನೆಂದು ಪೊಯ್ಗೈಯ್ ಆಳ್ವಾರರ ವಿಶ್ವಾಸ. ಭಕ್ತರು ಅವರವರ ತಿಳಿವಳಿಕೆಗೆ ತಕ್ಕಂತೆ ಮೂರ್ತಿಯನ್ನು ಪೂಜಿಸಬೇಕೆಂದು ಅವರ ಸಲಹೆ—

ಅವರವರ್ ತಾಮ್‌ತಾಮ್ ಅರಿಂದವಾರೆತ್ತಿ
ಇವರಿವರೆಂಬುರುಮಾನ್ ಎನ್ರು.

ಯಾವ ದೇವರೆಂದು ಬಗೆದು ಉಪಾಸನೆಮಾಡಿದರೂ ಕಡೆಗೆ ಅದು ಮುಟ್ಟುವುದು ನಮ್ಮ ತಿರುಮಲನನ್ನೇ ಎಂದು ಅವರ ದೃಢವಾದ ನಿಶ್ಚಯ. ಆಳ್ವಾರರ ಕಾಲದಲ್ಲಿ ವೇಂಗಡದ ದೇವರಿಗೆ ಯಾವ ಬಗೆಯಲ್ಲಿ ನಿತ್ಯಾರ್ಚನೆ ನಡೆಯುತ್ತಿದ್ದಿತೋ ತಿಳಿಯಬರುವುದಿಲ್ಲ; ಕಡೆಗೆ, ನಿತ್ಯಾರ್ಚನೆ ನಡೆಯುತ್ತಿದ್ದಿತೇ ಎಂಬುದೂ ಸಂಶಯವೇ. ಆದರೆ ಆ ದೇವರಿಗೆ ನಡೆದುಕೊಳ್ಳುವರು ತಾವೇ ತಮಗೆ ತಿಳಿದಂತೆ ಪೂಜೆ ಸಲ್ಲಿಸಿ ಹೋಗುವ ವಾಡಿಕೆಯಿದ್ದಿತು. ದೇವರ ಹೆಸರುಗಳನ್ನು ಹಾಡುವುದು, ಮೂರ್ತಿಯ ಮುಂದೆ ದೀಪವಿಟ್ಟು, ಧೂಪ ಹಾಕಿ, ಮೂರ್ತಿಯ ಅಡಿಗಳನ್ನು ನೀರಿನಿಂದ ತೊಳೆದು, ಹೂಗಳನ್ನಿರಿಸಿ, ಗಂಧವನ್ನು ಪೂಸಿ ನಮಸ್ಕರಿಸುವುದು—ಇದರ ಪ್ರಸ್ತಾಪ ಅವರ ಪಾಶುರಗಳಲ್ಲಿ ಬೇಕಾದ ಹಾಗೆ ಬರುತ್ತದೆ. ಬಗೆಬಗೆಯ ಹೂಗಳ ದಂಡೆಗಳನ್ನು ಕಟ್ಟಿ ಅವುಗಳ ಮಾಲೆಯಿಂದ ಮೂರ್ತಿಯನ್ನು ಸಿಂಗರಿಸುವುದು ಇಲ್ಲಿ ಕಾಣಬರುವ ವಿವರವೇ. ಭಕ್ತರು ಸಲ್ಲಿಸುವ ಪೂಜೆಯೇ ಮುಖ್ಯವೆಂದು ಆಳ್ವಾರರು ನಂಬಿದ್ದರು. ವೃತ್ತಿಯಲ್ಲಿ ಅರ್ಚಕರಾದವರ ಪೂಜೆ ಅಲ್ಲಿ ನಡೆಯುತ್ತಿದ್ದ ಉಲ್ಲೇಖವಂತೂ ಮೊದಲ ಆಳ್ವಾರರ ಪಾಶುರಗಳಲ್ಲಿ ಸಿಗುವುದಿಲ್ಲ; ಮುಂದೆ ಅದು ಬಳಕೆಗೆ ಬಂದಿತೆನ್ನಲು

ಅವಕಾಶವಿದ್ದರೂ ಯಾವ ಆಳ್ವಾರರೂ ಅದನ್ನು ಮುಖ್ಯವೆಂದು ಗ್ರಹಿಸಲಿಲ್ಲ, ಅದರ ವಿಚಾರ ಹೇಳಲಿಲ್ಲ.



ಸನ್ನಿಧಿಮಾರ್ಗ

ಭಕ್ತರು ಸಲ್ಲಿಸುವ ಪೂಜೆಯ ಹಿನ್ನೆಲೆಯಲ್ಲಿರುವ ಭಾವನೆ, ಶ್ರದ್ಧೆಗಳು ಮುಖ್ಯವೆಂದು ಬೇರೆ ಹೇಳಬೇಕೆ? ಭಾವನೆಯ ಪ್ರಕಾರಗಳನ್ನೂ ಶ್ರದ್ಧೆಯ ಸ್ವರೂಪವನ್ನೂ ಆಳ್ವಾರರ ಪಾಶುರಗಳಲ್ಲಿ ವಿವರವಾಗಿ ಅರಿಯಬಹುದು. ವೇಂಗಡದ ದೈವ ನಮ್ಮಾಳ್ವಾರರ ಪಾಲಿಗೆ "ನನ್ನ ತಂದೆಯ ತಂದೆಯ ತಂದೆ", ಎಂದರೆ ಮಾನವ ಕೋಟಿಯ, ಜೀವಜಗತ್ತಿನ ಮೂಲಪುರುಷ. ವೇದಗಳೆಲ್ಲ ಹೊಗಳುವುದು ಇವನನ್ನೇ, ದೇವತೆಗಳೆಲ್ಲ ಆರಾಧಿಸುವುದು ಇವನನ್ನೇ. ಅವನನ್ನು ಕಲ್ಪಾಂತರಗಳವರೆಗೆ ಧ್ಯಾನಿಸಿದರೂ ಅವನ ಹಿರಿಮೆಯನ್ನೂ ರೂಪವನ್ನೂ ಅರಿತುಕೊಳ್ಳಲಾರೆವು; "ಸ್ವರ್ಗದ ಜೀವವೇ, ಭೂಮಿಯ ಉಸಿರೇ, ವೇಂಗಡದ ದೈವವೇ, ನಾಲ್ಕೂ ವೇದಗಳ ಸಾರವೇ, ನೀನಿರುವ ಎಡೆಯನ್ನು ಗುರುತಿಸುವವರು ಯಾರು?" (**ವಿಣ್ಣಗತ್ತಾಯ್, ಮಣ್ಣಗತ್ತಾಯ್, ವೇಂಗಡತ್ತಾಯ್, ನಾಲ್ವೇದಪ್ಪಣ್ಣಗತ್ತಾಯ್**)—ಎಂದು ಪೊಯ್ಗೆಯ್ ಅಚ್ಚರಿಪಡುತ್ತಾರೆ. "ದೇವರ ದೇವನೆಂದು ಬಗೆಯುವರು, ವೇಂಗಡದಲ್ಲಿರುವವನು ಇವನೇ, ಕಡಲಲ್ಲಿರುವವನು ಇವನೇ, ಅರಂಗದಲ್ಲಿ (ಎಂದರೆ ಶ್ರೀರಂಗದಲ್ಲಿ) ಇರುವವನು ಇವನೇ, ನಮ್ಮ ಒಳಗಿರುವವನೂ ಇವನೇ" (**ಮನತ್ತುಳ್ಳಾನ್, ವೇಂಗಡತ್ತಾನ್, ಮಾಕಡಲಾನ್... ಇರಂಗತ್ತುಳ್ಳಾನ್**)—ಎಂದು ಭೂತತ್ತಾಳ್ವಾರರ ನಂಬಿಕೆ. ವೇಂಗಡದ ಮೇಲೆ ನಿಂತು ಮುಕ್ತಿ

ಯನ್ನು ಮುಟ್ಟಲು ತಿರುಮಳೀಶೈಆಳ್ವಾರರು ಹವಣಿಸುತ್ತಾರೆ. "ವೇಂಗಡವನ್ನು ಬೆಟ್ಟ ವೆಂದು ಬಗೆದೆನೆ? ಇಲ್ಲ, ಬೆಟ್ಟವೆಂದು ಹಾಡಿದೆ! ಅದನ್ನು ಕಂಡು ಮುಕ್ತಿಗೆ ಏರುವ ಬಯಕೆ ಮೂಡಿತು" (**ವೇರ್ಪಂದು ವೇಂಗಡಂ ಪಾಡಿನೆನ್, ಏಡಾಕ್ಕಿ ನಿರ್ಕಿನ್ರೇನ್**)— ಎಂದು ಅವರ ಭಾವ. "ನಾನು ನಿನ್ನ ಬಳಿ ಬರಲು, ನೀನೇ ದಯೆತೋರಿ ನನ್ನ ಬಳಿ ಬರುವೆಯಲ್ಲ, ವೇಂಗಡದವನೇ! ನೀನು ವೇಂಗಡವನ್ನು ಸೇರಿ ನನ್ನ ಒಡಲೊಳಗೇ ಸೇರಿರುವೆ" (**ವೇಂಗಡವಾ, ಎನ್ನುಳ್ಳಂ ಪುಗಂದಾಯ್ ತಿರುವೇಂಗಡಮದನೈಚ್ಚೀನ್ರು**)— ಎಂದು ಸಮಾಧಾನಪಟ್ಟುಕೊಳ್ಳುತ್ತಾರೆ.

ವೇಂಗಡದ ದೈವವನ್ನು ಪೂಜಿಸುವ ತಾತ್ಪರ್ಯವನ್ನು ನಮ್ಮಾಳ್ವಾರರು ತಿಳಿಯ ಪಡಿಸುತ್ತಾರೆ—"ತಂಪಾಗಿರುವ, ಕಂಪುಳ್ಳ ತುಳಸಿಯ ಮಾಲೆಯನ್ನು ಧರಿಸಿರುವ ಅಮೃತವೇ, ನನ್ನೊಳಗೆ ನಿನ್ನ ನೆಲೆಯಿರಲೆಂದು ಬೇಡಿಕೊಳ್ಳುವೆ. ಆಗ ನನ್ನ-ನಿನ್ನೊಳಗೆ ಬರುವುದು-ಹೋಗುವುದೆಂಬುದಿಲ್ಲ! ಇಂದು, ಹಿಂದೆ, ಮುಂದೆ ಯಾವಾಗಲೂ ನೀನೆ ತಾಯಿ-ತಂದೆ, ನೀನೇ ಉಸಿರು! ಈಗ ನಿನ್ನನ್ನು ಪಡೆದೆ, ಇನ್ನು ನಿನ್ನನ್ನು ಬಿಡುವೆನೋ?" (*ಪೆರಿಯ ತಿರುವಂದಾದಿ 2, 6, 9, 10*)

ಕೊಂದಾರ್ ತಣ್ಣಂದುಳಾಯಿನಾಯ್ ಅಮುದೇ!
ಉನ್ನೈ ಎನ್ನುಳ್ಳೆ ಕುಳೈತ್ತ ಎಮ್
ಮ್ಯಂದಾ! ವಾನೇರೇ! ಇನಿ ಎಂಗುಪ್ಪೋಗಿನ್ರದೇ!
ಪೋಗಿನ್ರ ಕಾಲಂಗಳ್ ಪೋಯಕಾಲಂಗಳ್ ಪೋಗು ಕಾಲಂಗಳ್
ತಾಯ್‌ತಂದೈಯುಯಿರಾಗಿನ್ರಾಯ್
ಉನ್ನೈ ನಾನ್ ಅಡೈಂದೇನ್, ವಿಡುವೇನೋ?

ಇಂಥ ಭಾವಗಳ ಬುಗ್ಗೆಯನ್ನು ಚಿಮ್ಮಿಸಿದ ದೈವ ವೇಂಗಡದಲ್ಲಿ ನೆಲೆಗೊಂಡಿದೆ. ವೇಂಗಡವೆಂಬುದು ದಿಟವಾಗಿ ನಮ್ಮೊಡಲೇ, ಆ ದೈವವಿರುವುದು ನಮ್ಮೊಳಗೇ ಇದು ಆಳ್ವಾರರ ನಿಲುವು.

ಮೂರು

ಗುಡಿಯು ಮೂಡಿಕೊಂಡ ಬಗೆ

ಬೇಟೆಗಾರರ ದೇವರು

ಬೆಟ್ಟದ ಮೇಲೆ ಬಹುಕಾಲ ಗುಡಿಯಿರಲಿಲ್ಲವೆಂಬುದು ಮೊದಲ ಆಳ್ವಾರರ ಹಾಡುಗಳಲ್ಲೂ ಪುರಾಣಕಥೆಗಳಲ್ಲೂ ಸ್ಪಷ್ಟವಾಗುತ್ತದೆ. ಅದು ಯಾವಾಗ ಮೂಡಿ ಕೊಂಡಿತೆಂದು ನಿಖರವಾಗಿ ಹೇಳುವುದು ಕಷ್ಟ; ಹೇಗೆ ಎನ್ನುವ ವಿವರವೂ ಅಸ್ಪಷ್ಟವೇ. ಭವಿಷ್ಯ, ವರಾಹ, ಬ್ರಹ್ಮ, ಸ್ಕಾಂದ ಮೊದಲಾದ ಪುರಾಣಗಳಲ್ಲಿ ಸೇರಿಬಂದಿರುವ ವೇಂಕಟಾಚಲಮಾಹಾತ್ಮ್ಯಗಳಲ್ಲಿಯೂ 'ವೇಂಕಟಾಚಲ-ಇತಿಹಾಸಮಾಲಾ' ಎಂಬ ಗ್ರಂಥದಲ್ಲಿಯೂ 'ತಿರುಮಲೈಒಳಗು' ಎಂಬ ತಮಿಳುಗ್ರಂಥದಲ್ಲಿಯೂ ಅಷ್ಟಿಷ್ಟು ವಿವರಗಳು ದೊರಕುತ್ತವೆ. ಆದರೆ ಇವೆಲ್ಲ ಈಚಿನ ಪ್ರಬಂಧಗಳು. ಕಥೆಗಳೂ ಕಲ್ಪನೆಗಳೂ ತಥ್ಯಾಂಶವನ್ನು ಮೆಟ್ಟಿನಿಲ್ಲುತ್ತವೆ. ಕಥೆಗಳಿಗೂ ಮೂಲ ಇರಬೇಕಲ್ಲವೆ? ಕಲ್ಪನೆಗೂ ಒಂದು ಆಧಾರ ಇರಬೇಕಲ್ಲವೆ? ಮೂಲವನ್ನೂ ಆಧಾರವನ್ನೂ ಹೊರತೆಗೆದರೆ ತಥ್ಯಾಂಶದ ಇಣುಕುನೋಟವಾದರೂ ಆದೀತು. ಆದರೆ ಮೂಲಾ ಧಾರಗಳೂ ಕಲ್ಪನೆಯನ್ನೇ ಅವಲಂಬಿಸಬೇಕಾಗುತ್ತದೆ.

ಮೇಲೆ ಹೇಳಿದ ಗ್ರಂಥಗಳಲ್ಲಿ ಬೆಟ್ಟದ ಮೇಲೆ ಮೂರ್ತಿಯಿದ್ದುದನ್ನು ಮೊದಲು ಗುರುತಿಸಿದವನು ರಂಗದಾಸನೆಂಬ ಶೂದ್ರಭಕ್ತನೆಂದೂ ಭಾಗವತನೆಂದೂ ಹೇಳಿದೆ. ಇವನಿಗೆ ನೆರವಾದವನು ಗೋಪೀನಾಥನೆಂಬ ವೈಖಾನಸಬ್ರಾಹ್ಮಣನೆಂದೂ ವಿವರವಿದೆ. ಗೋಪೀನಾಥನು ಚೋಳಮಂಡಲದವನು; ಕೃಷ್ಣಭಕ್ತ. ಅವನಿಗೊಮ್ಮೆ ಕನಸಾಯಿತಂತೆ —ಕಲಿಯುಗದಲ್ಲಿ ವೇಂಗಡದ ದೇವರೇ ದೇವರು ಎಂದು. ಸರಿ, ಅವನು ವೇಂಗಡಬೆಟ್ಟಕ್ಕೆ ಯಾತ್ರೆ ಹೊರಟ. ಬೆಟ್ಟದ ಬುಡವನ್ನು ಸೇರಿದಾಗ ಅಲ್ಲಿ ರಂಗದಾಸನ ಪರಿಚಯವಾಯಿತು. ರಂಗದಾಸ ಆ ವೇಳೆಗಾಗಲೇ ಬೆಟ್ಟದ ಮೇಲಿನ ಮೂರ್ತಿಯನ್ನು ನೋಡಿಬಂದಿದ್ದ. ಈಗ ಗೋಪೀನಾಥನೊಡಗೂಡಿ ಬೆಟ್ಟವೇರಿ ಮತ್ತೆ ದೇವರ ಮುಂದೆ ಬಂದ. ಮೂರ್ತಿ ಮಂಡಿಯವರೆಗೆ ಹುತ್ತವೊಂದರಲ್ಲಿ ಹುದುಗಿಹೋಗಿದ್ದಿತು. ಇಬ್ಬರೂ ಸೇರಿ ಮೂರ್ತಿಯನ್ನು ಹೊರತೆಗೆದರು. ಕೃತಯುಗದಲ್ಲಿ ಶಂಖನೆಂಬ ರಾಜ ಮಾಡಿಸಿದ್ದ ಈ ಮೂರ್ತಿಯಲ್ಲಿ ದೇವರು ತಾನಾಗಿ ಶಕ್ತಿಯನ್ನು ತುಂಬಿ ಅದನ್ನು ದಿವ್ಯಮಂಗಳ ವಿಗ್ರಹವನ್ನಾಗಿಸಿದ್ದನಂತೆ. ಕಲಿಯುಗದಲ್ಲಿ ಅದು ಅರ್ಧಮರ್ಧ ಮಣ್ಣಿನೊಳಗೆ ಮರೆಯಾಗಿದ್ದಿತು. ಗೋಪೀನಾಥನೂ ರಂಗದಾಸನೂ ಅದನ್ನು ಹೊರತೆಗೆದ ಮೇಲೆ,

ಗೋಪೀನಾಥನು ವೈಖಾನಸನಾಗಿದ್ದುದರಿಂದ ಅದರ ಅರ್ಚನೆಗೆಂದು ಅಲ್ಲಿಯೇ ನಿಂತ; ರಂಗದಾಸನು ಪೂಜೆಗೆ ನೆರವಾಗುವೆನೆಂದು ಅವನೊಂದಿಗೆ ಉಳಿದುಕೊಂಡ. ಗೋಪೀನಾಥದೀಕ್ಷಿತನು ಭಾರದ್ವಾಜಗೋತ್ರದವನು. ಮುಂದೆ ಅವನಿಗೆ ಪೂಜೆಯಲ್ಲಿ ಸಹಾಯವಾಗಿ ಕೌಶಿಕಗೋತ್ರದ ಶ್ರೀನಿವಾಸದೀಕ್ಷಿತನೆಂಬ ಇನ್ನೊಬ್ಬ ವೈಖಾನಸ ಅರ್ಚಕನು ಸೇರಿಕೊಂಡ. ಇವರಿಬ್ಬರ ವಂಶದವರು ಇಂದಿಗೂ ಗುಡಿಯಲ್ಲಿ ಪೂಜೆ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಅವಿಚ್ಛಿನ್ನವಾಗಿ ನಡೆದುಕೊಂಡು ಬಂದ ಅರ್ಚಕ ಪರಂಪರೆ ಈ ಗುಡಿಯ ವೈಶಿಷ್ಟ್ಯ.

ಮುಂದಿನ ಹಂತದಲ್ಲಿ ಕಥೆ, ಗೋಪೀನಾಥನನ್ನು ಕೈಬಿಟ್ಟು ರಂಗದಾಸನ ಪ್ರಕರಣವನ್ನು ಎತ್ತಿಕೊಳ್ಳುತ್ತದೆ. ರಂಗದಾಸನು ತೀರಿಕೊಂಡು ತೋಂಡಮಾನ್ ಚಕ್ರವರ್ತಿಯಾಗಿ ಹುಟ್ಟಿದನಂತೆ. ರಂಗದಾಸನಾಗಿ ದೇವರಿಗೆ ಪುಷ್ಪಕೈಂಕರ್ಯವನ್ನು ಕೈಗೊಂಡಿದ್ದವನು ಈ ಜನ್ಮದಲ್ಲಿ ತೋಂಡಮಾನನಾಗಿ ದೇವರಿಗೆ ಗುಡಿ, ಗೋಪುರ, ಮಂಟಪ, ವಿಮಾನಗಳನ್ನು ಕಟ್ಟಿಸುತ್ತಾನೆ. ಬಿಡಿಯಾಗಿ ಕಾಡಿನಲ್ಲಿ ಅಡಗಿದ್ದ ದೈವಕ್ಕೆ ರಾಜಾಶ್ರಯವನ್ನು ಕಥೆ ಒದಗಿಸುತ್ತದೆ. ಈ ರಾಜನು ಚಂದ್ರವಂಶದವನೆಂದೂ, ನಾರಾಯಣವರ(ಅಥವಾ ನಾರಾಯಣವನ)ದಲ್ಲಿ ಆಳುತ್ತಿದ್ದನೆಂದೂ ವಿವರಗಳಿವೆ. ಇವನೊಮ್ಮೆ ಬೆಟ್ಟದ ಮೇಲೆ ಕಾಡಿನಲ್ಲಿ ಬೇಟೆಯಾಡುತ್ತಿದ್ದಾಗ, ಪಂಚವರ್ಣದ ಗಿಳಿಯೊಂದು ಅವನ ಮನಸೆಳೆಯಿತೆಂದೂ, ಅದರ ಬೆನ್ನಟ್ಟಿ ಇವನು ಶ್ಯಾಮಾಕವನವನ್ನು ಹೊಕ್ಕಾಗ, ಅಲ್ಲಿದ್ದ ಬೇಟೆಗಾರತಂಡದ ಒಡೆಯ ವಸುವೆಂಬುವನು ರಾಜನನ್ನು ಸ್ವಾಮಿಪುಷ್ಕರಿಣೀತೀರಕ್ಕೆ ಕರೆದೊಯ್ದು ಅಲ್ಲಿ ವಾಸಮಾಡುತ್ತಿದ್ದ ಪಂಚವರ್ಣದ ಗಿಳಿಯನ್ನು ತೋರಿಸಿದನೆಂದೂ ಕಥೆ. ಆದರೆ ಅಲ್ಲಿ ರಾಜನ ಗಮನವನ್ನು ಸೆಳೆದದ್ದು ಅಲ್ಲಿಯೇ ಇದ್ದ ವೇಂಗಡದೈವದ ಪುತ್ಥಳಿ. ಮಂಡಿಯವರೆಗೆ ಹುತ್ತದಲ್ಲಿ ಅಡಗಿ ನಿಂತಿದ್ದ ಈ ಮೂರ್ತಿಯನ್ನು ಕಂಡೊಡನೆ ಅವನಿಗೆ ಪೂರ್ವಜನ್ಮದ ನೆನಪು ಮರುಕಳಿಸಿ, ದೇವರಿಗೆ ಗುಡಿಯನ್ನು ಕಟ್ಟಿಸುವ ಮನಸ್ಸು ಮಾಡುತ್ತಾನೆ. ದೇವರಿದ್ದ ಕಡೆ ಕಾಡನ್ನು ಕಡಿಯಿಸಿ, ಗುಡಿಯೊಂದನ್ನು ಕಟ್ಟಿಸಿದ. ಬೇಟೆಗಾರರು ಪೂಜೆ ಮಾಡುತ್ತಿದ್ದ ಈ ದೇವರಿಗೆ ನಿತ್ಯಾರ್ಚನೆ ನಡೆಯುವಂತೆ ವ್ಯವಸ್ಥೆ ಮಾಡಿದ, ವರ್ಷಕ್ಕೊಮ್ಮೆ ಉತ್ಸವ (ಪುರಟ್ಟಾಶಿ-ಬ್ರಹ್ಮೋತ್ಸವ) ಜರಗುವಂತೆ ಮಾಡಿದ.

ತೋಂಡಮಾನನು ತೊಂಡಮಂಡಲದ ಅರಸ. ಭವಿಷ್ಯಪುರಾಣದ ಪ್ರಕಾರ, ಸುವೀರನೆಂಬ ರಾಜನ ಮಗ ಸುಧರ್ಮ; ಇವನ ಮಕ್ಕಳು ತೋಂಡಮಾನ್ ಮತ್ತು ಆಕಾಶರಾಜ ಎಂಬಿಬ್ಬರು. ವರಾಹಪುರಾಣದ ಪ್ರಕಾರ, ಮಿತ್ರವರ್ಮನೆಂಬ ತೊಂಡ ಮಂಡಲದ ರಾಜನು ಪಾಂಡ್ಯರಾಜಕುಮಾರಿ ಮನೋರಮೆಯನ್ನು ಮದುವೆಯಾಗಿ ಆಕಾಶರಾಜನನ್ನು ಪಡೆಯುತ್ತಾನೆ. ಆಕಾಶರಾಜನ ಹೆಂಡತಿ ಧಾರಿಣೀದೇವಿ. ಇವರಿಗೆ ವಸುದಾನನೆಂಬ ಮಗ, ಪದ್ಮಾವತಿಯೆಂಬ ಮಗಳು. ಪದ್ಮಾವತಿಯನ್ನು ತೋಂಡಮಾನ್ ಚಕ್ರವರ್ತಿ ಮದುವೆಯಾಗುತ್ತಾನೆ. ಆಕಾಶರಾಜನು ಪುತ್ರಕಾಮೇಷ್ಟಿಯಾಗಕ್ಕೆ ತೊಡಗಿ, ಬಂಗಾರದ ನೇಗಿಲಿನಿಂದ ಭೂಮಿಯನ್ನು ಉಳುವಾಗ ಬಂಗಾರದ ತಾವರೆಹೂವಲ್ಲಿ

ಮಲಗಿದ್ದ ಬಂಗಾರದಂತೆ ಹೊಳೆಯುವ ಹೆಣ್ಣುಮಗುವನ್ನು ಭೂಮಿಯಿಂದ ಪಡೆದು ಕೊಳ್ಳುತ್ತಾನೆ. ಪದ್ಮಾವತಿಯು ಆಕಾಶರಾಜನಿಗೆ 'ಭೂಜಾತೆ'; ಜನಕನಿಗೆ ಸೀತೆಯಿದ್ದಂತೆ. ಬಳಕೆಯಲ್ಲಿರುವ ಕಥೆಯ ಪ್ರಕಾರ ಲಕ್ಷ್ಮಿಯ ಅವತಾರವಾದ ಪದ್ಮಾವತಿ ಕೈಹಿಡಿಯುವುದು ವಿಷ್ಣುವಿನ ಅರ್ಚಾವತಾರವಾದ ವೇಂಕಟೇಶ್ವರನನ್ನು. ಇವರ ಮದುವೆ ನಡೆದದ್ದು ಈಗ ಮಂಗಾಪುರದ ಕಲ್ಯಾಣವೇಂಕಟೇಶ್ವರನ ಗುಡಿಯಿರುವ ಸ್ಥಳದಲ್ಲೇ ಎಂದು ಪ್ರತೀತಿ. ಇದು ಹಾಗಿರಲಿ, ತೋಂಡಮಾನನಿಗೂ ಆಕಾಶರಾಜನಿಗೂ ಇರುವ ಸಂಬಂಧ ಸ್ವಾರಸ್ಯವಾದುದು. ಇದರ ಹಿನ್ನೆಲೆಯಲ್ಲಿರುವುದು ತೊಂಡಮಂಡಲದ ವಿಚಾರ.

ತೊಂಡಮಂಡಲವೆನ್ನುವುದು ಪ್ರಾಂತ; ನಾರಾಯಣವರಂ (-ವನಂ) ಅದರ ರಾಜಧಾನಿ. ಉತ್ತರ-ಆರ್‌ಕಾಡು ಜಿಲ್ಲೆಯಲ್ಲಿ ಕಾರುವೆಟ್ಟಿ-ನಗರಕ್ಕೆ ಸೇರಿದಂತೆ ಈಗಲೂ ನಾರಾಯಣವರವಿದೆ. ಅರುಣಾನದಿಯ ದಂಡೆಯ ಮೇಲೆ, ಪುತ್ತೂರಿಗೆ ಪೂರ್ವದಲ್ಲಿ ಮೂರು ಮೈಲಿ ದೂರದಲ್ಲಿರುವ ಈ ಊರು ಒಂದು ಕಾಲಕ್ಕೆ ಪ್ರಸಿದ್ಧವಾದ ನಗರವಾಗಿದ್ದಿತೆಂದು ಇತಿಹಾಸ ಹೇಳುತ್ತದೆ. ಈಗಿರುವ ಊರಿಗೆ ದಕ್ಷಿಣದಿಕ್ಕಿನಲ್ಲಿ ಸುಮಾರು ಮೂರು ಮೈಲಿ ದೂರದಲ್ಲಿ 'ಆಕಾಶರಾಜಪುರಂ' (ಅಥವಾ ನಾರಾಯಣಪುರಿ) ಎಂಬ ಊರಿದ್ದ ಕುರುಹುಗಳಿವೆ. ಇಲ್ಲಿ 'ಆಕಾಶರಾಜುಕೋಟ' ಎನಿಸಿಕೊಳ್ಳುವ ಕೋಟೆಯನ್ನೂ ತೋರಿಸುತ್ತಾರೆ. ಎಂದಮೇಲೆ, ನಾರಾಯಣವರಂ ಕೇವಲ ಕಾಲ್ಪನಿಕ ನಗರವಲ್ಲ. ತೋಂಡಮಾನ್-ಚಕ್ರವರ್ತಿಯ ವಂಶದಲ್ಲಿ ನಾರಾಯಣರಾಜನೆಂಬ ರಾಜನೂ ಇದ್ದ. ಮಿಥಿಲೆಯ ಗೋವಶಂಬರಾಜನು ಈ ಕಡೆ ಬಂದಾಗ, ನಾರಾಯಣರಾಜನು ಅವನನ್ನು ಗೌರವದಿಂದ ಕಂಡು ತನ್ನ ರಾಜ್ಯದಲ್ಲಿ ಅರ್ಧಭಾಗವನ್ನು ಅವನಿಗೆ ಕೊಟ್ಟನೆಂದೂ, ಆ ರಾಜನು ಈ ರಾಜನ ನೆನಪಿಗಾಗಿ ಅದನ್ನು 'ನಾರಾಯಣವರ'ವೆಂದೇ ಕರೆದನೆಂದೂ ಪ್ರತೀತಿಯಿದೆ. ಗೋವಶಂಬರಾಜನ ನಾಲ್ಕನೆಯ ಮಗನೇ ಮಿತ್ರವರ್ಮನೆಂದೂ, ಅವನ ಮಗನೇ ಆಕಾಶರಾಜನೆಂದೂ, ಅವನೇ ವೇಂಕಟೇಶ್ವರನ ಮಾವ (ಪದ್ಮಾವತಿಯ ತಂದೆ) ನೆಂದೂ ವಿವರಗಳಿವೆ.

ನಾರಾಯಣವರವಾದ ಭಾಗ ಮೊದಲಿಗೆ ಕುರುಂಬರ ನೆಲೆಯಾಗಿದ್ದಿತು. ಆರ್‌ಕಾಡು (ಸಂಸ್ಕೃತದಲ್ಲಿ ಷಡರಣ್ಯ) ಮೊದಲಿಗೆ ದಟ್ಟವಾದ ಕಾಡುಪ್ರದೇಶ. ಪೂರ್ವಘಟ್ಟಕ್ಕೆ ಸೇರಿದ ಬೆಟ್ಟಸಾಲು ಇಲ್ಲಿ ಹಲವೆಡೆ ದಾರಿ ಮಾಡಿಕೊಡುತ್ತದೆ—ಕಲ್ಲೂರು, ಮೊಗಿಲಿ, ಸೈನಗುಂಟ ಇತ್ಯಾದಿ. ಈ ಕಣಿವೆಗಳಲ್ಲಿ ಕಲ್ಲೂರುಪಾಳ್ಯಂ ಈಗಿನ ಚಂದ್ರಗಿರಿಯ ನೆರೆಯಲ್ಲಿರುವ ಸ್ಥಳ. ಇಲ್ಲಿ ಮೊದಲಿಗೆ ಕುರುಂಬರೆಂಬ ಕಾಡುಜನ ವಾಸಮಾಡುತ್ತಿದ್ದರು. ಕನ್ನಡನಾಡಿನಿಂದ ವಲಸೆ ಬಂದ ಈ ಜನ ಅಲ್ಲಿಯೇ ಮೊದಲು ನೆಲೆಸಿದ್ದ ವೇಡರನ್ನು ಗೆದ್ದು ತಮ್ಮ ಒಡೆತನವನ್ನು ಗಳಿಸಿಕೊಂಡರು. ವೇಡರೆಂದರೆ ಬೇಡರು, ಬೇಟೆಗಾರರು; ಕುರುಂಬರು ಕುರುಬರು. ಇವರಲ್ಲದೆ ಅರುವಳರ್ ಎಂಬ ಆದಿವಾಸಿಗಳೂ, ಬರ್ಮದ ಕಡೆಯಿಂದ ಬಂದ ತಿರೈಯರ್ ಎಂಬ ಜನರೂ ಇಲ್ಲಿಯೇ ಇರುತ್ತಿದ್ದರು. ಇವರನ್ನೆಲ್ಲ ಗೆದ್ದು ತೋಂಡಮಾನ್-ಚಕ್ರವರ್ತಿ ಆ ಪ್ರದೇಶವನ್ನು ವಶಪಡಿಸಿಕೊಂಡ.

ಇತಿಹಾಸದ ಓರೆನೋಟದಲ್ಲಿ ತೋಂಡಮಾನ್ ಎಂಬುವನು ತಂಜಾವೂರಿನ ಅರಸ. ಕುಲೋತ್ತುಂಗ-ಚೋಳನ ದಾಸೀಪುತ್ರ; ಆದೊಂಡೈ ಎಂದು ಅವನ ಹೆಸರು. ಪಲ್ಲವರಿಗೂ ಚೋಳರಿಗೂ ಹಗೆತನ ಮೊದಲಾಗಿದ್ದಿತು. ಕುರುಂಬರು ತಮ್ಮತಮ್ಮೊಳಗೆ ಜಗಳವಾಡಿ ಪಲ್ಲವವಂಶದ ಕೋಮಂದು-ಕುರುಂಬ-ಪ್ರಭು ಎಂಬುವವನನ್ನು ತಮ್ಮ ಒಡೆಯನೆಂದು ಪಡೆದುಕೊಂಡಿದ್ದರು. ಆದೊಂಡೈ ಇವರ ಮೇಲೆ ಬಿದ್ದು, ಕುರುಂಬರ ಬಲವನ್ನು ಮೊಟಕುಮಾಡಿದ. ಆ ಪ್ರದೇಶವನ್ನೆಲ್ಲ ತನ್ನದಾಗಿ ಮಾಡಿಕೊಂಡು ಅದನ್ನು 'ಆದೊಂಡೈಮಂಡಲ'ವೆಂದು ಕರೆದ. ಇದೇ ಮುಂದೆ ತೊಂಡಮಂಡಲವಾಯಿತು. ಈ ತೊಂಡಮಂಡಲದ ಮುಖ್ಯವಾದ ಭಾಗ ವಡವೇಂಗಡ. ದಕ್ಷಿಣದಲ್ಲಿ ತಮಿಳು ಮಾತನಾಡುವ ಪ್ರಾಂತ್ಯಕ್ಕೂ, ಉತ್ತರದಲ್ಲಿ ಕನ್ನಡ-ತೆಲುಗು ಮಾತನಾಡುವ ಸೀಮೆಗೂ ನಡುವೆ ಇದ್ದ ಭಾಗ ಇದು. ಕ್ರಿಸ್ತಾಬ್ದ ಮೊದಲ ಶತಕದ ಸುಮಾರಿಗೆ ತೊಂಡಮಂಡಲವನ್ನು ಇಪ್ಪತ್ತುನಾಲ್ಕು ಕೋಟೆ(ಕೋಟ್ಟಂ)ಗಳಿಂದೂ ಎಪ್ಪತ್ತೈದು ನಾಡುಗಳಿಂದೂ ವಿಭಾಗ ಮಾಡಿದರು; ಇವುಗಳಲ್ಲಿ ತಿರುವೇಂಗಡಕ್ಕೋಟ್ಟಂ ಒಂದು. ತೋಂಡಮಾನನ ಹಿಂದೆ ಒಡೆಯನಾಗಿದ್ದ ಕೋಮಂದು-ಕುರುಂಬ-ಪ್ರಭುವೇ ಈ ವಿಭಾಗಮಾಡಿ, ಒಂದೊಂದು ವಿಭಾಗದಲ್ಲೂ ಒಂದೊಂದು ಕೋಟೆಯನ್ನು ಕಟ್ಟಿಸಿದ್ದನಂತೆ. ನಾಡಿಗೆ ವಡವೇಂಗಡವು ಗಡಿಯಾಗಿದ್ದುದರಿಂದ ತಿರುವೇಂಗಡಕ್ಕೋಟ್ಟಂ ಮುಖ್ಯವಾಯಿತು.

ನಾಡಿನ ಗಡಿಯಲ್ಲಿರುವ ಕೋಟೆಯನ್ನು ಕಾಯುವ ದೈವ ಪ್ರಬಲವಾಗಿಯೇ ಇರಬೇಕಲ್ಲವೆ? ತಂಜೆಯರಸ ಓಬಳನಾಥ-ಯಾದವರಾಯನ ಶಿಲಾಶಾಸನವೊಂದು ವೇಂಗಡದೊಡೆಯನ ಗುಡಿಯ ಮೊದಲ ಪ್ರಾಕಾರದಲ್ಲೇ ಇದೆ. ಇದರಲ್ಲಿ 'ವಡ ವೇಂಗಡವಾಣರ್‌ಕ್ಕು' ಎನ್ನುವ ಉಲ್ಲೇಖವೇ ಇದೆ. ಹಿಂದಿನಿಂದಲೂ ಈ ಗುಡಿಯ ದೇವರು ಅರಸರಿಗೂ ಆಡಳಿತ ನಡೆಸುವವರಿಗೂ ಅಚ್ಚುಮೆಚ್ಚಿನ ದೈವ. ಅರಸರು ಹಗರಣ ನಡೆಸಿ ಗೆದ್ದು ಬಂದೊಡನೆ ಈ ದೇವರಲ್ಲಿಗೆ ಬಂದು ಸೇವೆ ಸಲ್ಲಿಸಿ ಹೋಗುವ ವಾಡಿಕೆ ವಿಜಯನಗರದ ಅರಸರ, ಅದರಲ್ಲೂ ಕೃಷ್ಣದೇವರಾಯಮಹಾರಾಯನ, ಕಾಲದಲ್ಲೂ ಇದ್ದುದನ್ನು ಕಾಣುತ್ತೇವೆ. ಆಳ್ವಾರರಲ್ಲಿ ತೀರ ಹಳಬರಾದ ಪೊಯ್ಗೈ ಆಳ್ವಾರರು ಈ ದೇವರನ್ನು 'ಅಸುರರಿಗೆ ಪ್ರಿಯನೆನಿಸಿದವನು' (**ವೇಂಗಡಮೇ ಮೇಲ್ ಅಸುರರ್ ಎಮ್ಮನ್ರು ಮೂಲದಿಡಂ**) ಎಂದು ಬಣ್ಣಿಸಿರುವುದೂ ಈ ಬೆಟ್ಟವನ್ನು 'ಅಸುರರ ದೊರೆಯನ್ನು ಕೊಂದವನು ಆರಿಸಿಕೊಂಡ ಬೆಟ್ಟ' (**ವೇಂಗಡಮೇ ಮೇಲ್ ಅಸುರರ್ ಕೋವ್ ವೀಳಕ್ಕುಂಡುಕಂದಾನ್ ಕುನ್ರು**) ಎಂದು ಕರೆದಿರುವುದೂ, 'ಭೂಮಿಯನ್ನೆಲ್ಲ ತನ್ನ ಕಾಲಿಂದಲೇ ಅಳೆದವನು ಈ ಬೆಟ್ಟದ ಮೇಲೆ ನಿಂತಿರುವ'ನೆಂದು (**ಮಣ್ ಅಳಂದ ಶೀರಾನ್ ತಿರುವೇಂಗಡಂ**) ನಿರ್ದೇಶಿಸಿರುವುದೂ ಈ ದೇವತೆಯ ವೀರಸ್ವರೂಪವನ್ನು ಜನ ಹಿಂದಿನಿಂದ ಗ್ರಹಿಸಿದ್ದರೆನ್ನಲು ನಿದರ್ಶನಗಳು. ರಾವಣನನ್ನು ಕೊಂದ ರಾಮ, ಬಲಿಯನ್ನು ಮೆಟ್ಟಿದ ತ್ರಿವಿಕ್ರಮ, ಅಸುರರನ್ನು ಸಂಹರಿಸಿದ ಕೃಷ್ಣನೆಂದು ಎಲ್ಲ ಆಳ್ವಾರರೂ ಈ ದೇವರನ್ನು ಬಗೆದಿರುವುದನ್ನೂ ಗಮನಿಸಬೇಕು.

ಅರಸರ ಆಸಕ್ತಿ

ಬೇಟೆಗಾರರ ಅರ್ಚಾಮೂರ್ತಿಯಾಗಿ ಕಾಡೊಳಗೆ ನಿಂತಿದ್ದು, ಅನಂತರ ಅರಸರ ಆರಾಧ್ಯದೈವವಾದುದನ್ನು ತೋಂಡಮಾನ್-ಚಕ್ರವರ್ತಿಯ ಕಥೆ ಸೂಚಿಸುತ್ತದೆ. ಅರಸರು ಈ ಮೂರ್ತಿಯನ್ನು ಪಡೆದುಕೊಂಡಾಗ ಗುಡಿಯ ಕಲ್ಪನೆ ಮೂಡಿಬಂದಿತು. ಮೊದಲ ಆಳ್ವಾರರ ಕಾಲಕ್ಕೂ ಅಲ್ಲಿ ಗುಡಿಯಿದ್ದಿತೆನ್ನುವ ಸೂಚನೆಯಿಲ್ಲ. ಇತರ ಆಳ್ವಾರರ ಕಾಲದಲ್ಲಿ ತೆರೆದ ಮಂಡಪವಿದ್ದುದೂ (ತಿರುಮಳೀಶೈ), ಸಣ್ಣ ಗುಡಿಯಿದ್ದುದೂ (ಕುಲಶೇಖರ) ಊಹೆಗೆ ನಿಲುಕುತ್ತದೆ; ಸ್ಪಷ್ಟವಾದ ಉಲ್ಲೇಖವಿಲ್ಲ. ತಿರುವರಂಗ ಮೊದಲಾದ ಇತರೆಡೆಗಳಲ್ಲಿ ಗುಡಿಗಳನ್ನು ಬಣ್ಣಿಸುವ ಆಳ್ವಾರರೂ ವೇಂಗಡದ ಗುಡಿಯನ್ನು ಬಣ್ಣಿಸಲು ತೊಡಗಿಲ್ಲ. ಎಲ್ಲ ಆಳ್ವಾರರೂ ಬೆಟ್ಟವನ್ನೂ ಅದರ ಮೇಲೆ ನಿಂತಿರುವ ದೈವವನ್ನೂ ಬಣ್ಣಿಸುವಷ್ಟರಲ್ಲೇ ತೃಪ್ತರಾಗಿದ್ದಾರೆ. ಪ್ರಾಚೀನ ತಮಿಳು ವಾಙ್ಮಯವೂ ಪ್ರಸ್ತಾಪಿಸುವುದು ಬೆಟ್ಟ, ಮೇಲಿರುವ ಮೂರ್ತಿ, ಅಲ್ಲಿ ನಡೆಯುವ ಉತ್ಸವಗಳು—ಇಷ್ಟನ್ನೇ.

ಮೂರ್ತಿಗೊಂದು ಗುಡಿ ಇದ್ದಿರಬಹುದು. ಆದರೆ ಅದರ ಉಲ್ಲೇಖ ಒಂಬತ್ತನೆಯ ಶತಮಾನದವರೆಗೂ ನಮಗೆ ದೊರೆಯುವುದಿಲ್ಲ. ವೇಂಗಡದ ಗುಡಿಯು ಬೆಟ್ಟದ ತುದಿಯಲ್ಲಿ, ಕಾಡಿನ ನಡುವೆ ಇದ್ದು, ಬೇಟೆಗಾರರು ಮಾತ್ರ, ಕಾಡುಜನರು ಮಾತ್ರ, ಅಲ್ಲಿಗೆ ಹೋಗಿಬರಬಹುದಾಗಿದ್ದಿತು. ಅರಸರಾದವರು ಪರಿವಾರದೊಂದಿಗೆ ಆಗಾಗ ಕಾಲುಹಾದಿ ತುಳಿದು ಗುಡಿಗೆ ಬರುತ್ತಿದ್ದರೆಂದು ತೋರುತ್ತದೆ. ಸಾಮಾನ್ಯಜನರಿಗೆ ತುಂಬ ಪ್ರಯಾಸದ ಯಾತ್ರೆಯಾಗಿದ್ದಿರಬೇಕು; ಕಾಡುಗಳಲ್ಲಿ ದುಷ್ಟಮೃಗಗಳೂ ಇದ್ದು ಯಾತ್ರೆ ಭಯಾನಕವಾಗಿದ್ದಿರಬೇಕು. ವೇಂಗಡದೈವದ ಕೀರ್ತಿ ಎಲ್ಲೆಡೆಯೂ ಹರಡಿದ್ದರೂ ಅದರ ನೆಲೆಯನ್ನು ನೋಡಿಬಂದವರ ಸಂಖ್ಯೆ ಆ ಕಾಲದಲ್ಲಿ ತೀರ ಕಡಮೆಯಾಗಿದ್ದಿರಬೇಕು. ಹೋಗಿಬರಬೇಕೆಂಬ ಬಯಕೆಯಿದ್ದರೂ ಸಾಹಸಮಾಡುವ ಧೈರ್ಯ ಬಹುಜನರಿಗೆ ಇದ್ದಿರಲಾರದು. ಹೀಗಾಗಿ ಈ ದೇವರ ಪ್ರತಿನಿಧಿಯೆನಿಸುವ ಮೂರ್ತಿಯೊಂದನ್ನು ಬೆಟ್ಟದ ಕೆಳಗೆ ಊರಲ್ಲಿ ಇರಿಸಿಕೊಂಡರೆ ಬಹುಮಂದಿಯ ಬಯಕೆ ಈಡೇರುವುದೆಂದು ಜನನಾಯಕರು ಅಂದುಕೊಂಡಿದ್ದಿರಬೇಕು. ತಿರುಚ್ಚಾನೂರಿನಲ್ಲಿ ಕ್ರಿಸ್ತಾಬ್ದ 826ರ ಸುಮಾರಿಗೆ 'ವೇಂಗಡತ್ತು ಪೆರುಮಾನಡಿಗಳ' ಪ್ರತಿನಿಧಿಯಾಗಿ ಗುಡಿಯೊಂದಿದ್ದುದು ಶಾಸನದಿಂದ ತಿಳಿದುಬರುತ್ತದೆ.

ಬೆಟ್ಟದ ಕೆಳಗೆ ಗುಡಿ

ತಿರುಚ್ಚಾನೂರು, ಬೆಟ್ಟದಿಂದ ಸುಮಾರು ಹತ್ತು ಮೈಲಿ ದೂರದಲ್ಲಿರುವ ಊರು. ನಾವು ಪ್ರಸ್ತಾಪಿಸುವ ಕಾಲಕ್ಕೆ ತಿರುಪತಿ ಇನ್ನೂ ಕಾಣಿಸಿಕೊಂಡಿರಲಿಲ್ಲ; ಚಂದ್ರಗಿರಿಯೂ ಇರಲಿಲ್ಲ. ತಿರುಮಲೆಬೆಟ್ಟಕ್ಕೆ ಹತ್ತಿರದ ಊರೆಂದರೆ ತಿರುಚ್ಚಾನೂರೇ. ಸ್ವರ್ಣಮುಖೀ

ನದಿಯ ದಡದಲ್ಲಿರುವ ಈ ಊರು ಮೊದಲಿಗೆ ತುಂಬ ಪ್ರಸಿದ್ಧವಾಗಿದ್ದಿತು. ಈ ಊರವರೇ ಬೆಟ್ಟದ ಗುಡಿಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ತಿರುಚ್ಚಾನೂರಿಗೆ ಹಳೆಯ ಹೆಸರು ತಿರುಚ್ಚೋಕಿನೂರು ಎಂದು; ಇದರ ಅರ್ಥ 'ಯೋಗಿಯ ಊರು' ಎಂದು. ಇದರ ನೆನಪು ಇಂದಿಗೂ ಈ ಊರಿನ ಯೋಗಿ-ಮಲ್ಲಾವರಂ ಎಂಬ ಬಡಾವಣೆಯಲ್ಲಿ ಉಳಿದಿದೆ. ಇಲ್ಲಿ ಯೋಗಿಯೆಂದರೆ ಶಿವ. ಮೊದಲಿಂದ ಇದು ಶೈವಕ್ಷೇತ್ರವಾಗಿದ್ದಿತು. ಮುಂದೆ ತಿಪ್ಪಲಾದೀಶ್ವರಮುಡೈಯಾನ್ ಎಂಬ ಶಿವದೇವಾಲಯ ಹೆಸರುವಾಸಿಯಾಯಿತು; ಇದನ್ನು ಪರಾಶರೇಶ್ವರ (ಪಲಾದೀಶ್ವರ) ಎಂದೂ ಕರೆಯುತ್ತಾರೆ. ತಿರುಚ್ಚೋಕಿನೂರು ಬರುಬರುತ್ತ ತಿರುಚ್ಚುಕನೂರು ಆಯಿತು; ಶುಕಮಹರ್ಷಿ ಇಲ್ಲಿ ತಪಸ್ಸು ಮಾಡಿದ ಪ್ರತೀತಿ ಬೆಳೆಯಿತು. ಈಗ ತಿರುಚ್ಚಾನೂರು ಆಗಿದೆ; ಕೆಲವರ ಬಾಯಲ್ಲಿ ಚಿರತಾನೂರು ಕೂಡ ಆಯಿತು!

ಇಲ್ಲಿ ದೊರೆತಿರುವ ತುಂಬ ಹಳೆಯ ಶಾಸನವೆಂದರೆ ಕೋ-ವಿಜಯದಂತಿ ವಿಕ್ರಮವರ್ಮನೆಂಬ ಅರಸನು ಪಟ್ಟಕ್ಕೆ ಬಂದು ಐವತ್ತೊಂದು ವರ್ಷಗಳಾದಾಗ ಬರೆಯಿಸಿದ ಶಾಸನ. ಕಾಂಚೀಪುರದಿಂದ ಆಳುತ್ತಿದ್ದವನು ಪಲ್ಲವರಾಜ. ಇವನ ತಂದೆ ಪಲ್ಲವಮಲ್ಲನೆನಿಸಿದ ಇಮ್ಮಡಿ ನಂದಿವರ್ಮ, ತಾಯಿ ರಾಷ್ಟ್ರಕೂಟ ಅರಸುಗುವರಿ ರೇವಾದೇವಿ. ಇವನು ರಾಜ್ಯವಾಳಿದ ಕಾಲ ಕ್ರಿಸ್ತಾಬ್ದ 779 ರಿಂದ 830 ರವರೆಗೆ. ಇವನ ಮಡದಿ ಕದಂಬವಂಶದ ಅಗ್ಗಳನಿಮ್ಮಟಿ. ಈ ತಮಿಳುಶಾಸನದ ಸಮಯ ಕ್ರಿಸ್ತಾಬ್ದ 829 ಎನ್ನಬಹುದು. ಶಾಸನವು ಶೋಲನೂರಿನ ಉಲಗಪ್ಪೆರುಮಾನಾರ್ (ಇವನು ಪಲ್ಲವರಾಜನ ಸಾಮಂತನಾಗಿದ್ದವನು) ತಿರುಚ್ಚೋಕಿನೂರು-ತಿರುವೇಂಗಡತ್ತು ಪೆರುಮಾನಡಿಗಳ ಮೂರ್ತಿಗೆ ದೀಪ ಬೆಳಗಲು ನಿಧಿಯಾಗಿ ಮೂವತ್ತು ಕಳಂಜು ಬಂಗಾರವನ್ನು ಸಲ್ಲಿಸಿದುದನ್ನೂ, ತಿರುವೇಂಕಟಕೋಟೆಯಲ್ಲಿರುವ ಕುಡುವೂರುನಾಡಿಗೆ ಸೇರಿದ ತಿರುಚ್ಚೋಕಿನೂರ ಹಿರಿಯರು ಈ ಕೊಡುಗೆಯಿಂದ ಭೂಮಿಯನ್ನು ಕೊಂಡು ಈ ದಾನವನ್ನು ನಡೆಸಿಕೊಂಡು ಹೋಗುವ ವ್ಯವಸ್ಥೆ ಮಾಡಿದುದನ್ನೂ ತಿಳಿಸುತ್ತದೆ. ತಿರುವೇಂಗಡದ ದೇವರಮೂರ್ತಿಯನ್ನು ಈ ಶಾಸನದಲ್ಲಿ 'ತಿರುವಿಳಂಕೋಯಿಲ್-ಪೆರುಮಾನಡಿಗಳ್' ಎಂದು ಕರೆಯಲಾಗಿದೆ. ತಿರುವಿಳನ್ ಎಂದರೆ ಎಳೆಯ, ಕೋಯಿಲ್ ಎಂದರೆ ಗುಡಿ. ಪ್ರಧಾನವಾದ ಮೂರ್ತಿಗೆ ಪ್ರತಿನಿಧಿಯಾಗಿ ನಿಲ್ಲಿಸಿದ ಮೂರ್ತಿಯನ್ನು ಹೊಂದಿರುವ ಗುಡಿ ಎಂದು ತಾತ್ಪರ್ಯ. ಇದನ್ನು ತಿರುವೇಂಗಡತ್ತು ಪೆರುಮಾನಡಿಗಳನ್ನು 'ಪ್ರತಿನಿಧಿಸಲು' ಎಂದೇ ಶಾಸನವು ಹೇಳುವುದರಿಂದ, ಬೆಟ್ಟದ ಮೇಲಿನ ಗುಡಿಗೆ ಪ್ರತಿನಿಧಿಯಾಗಿ ತಿರುಚ್ಚೋಕಿನೂರಿನಲ್ಲಿ ಒಂದು ಗುಡಿಯಿದ್ದಿತೆಂದು ಸ್ಪಷ್ಟವಾಗುತ್ತದೆ. ಬೆಟ್ಟವನ್ನೇರಿ ಕಾಡಿನ ನಡುವೆ ನಡೆದುಹೋಗುವ ಸಾಹಸಮಾಡಲಾರದ ಮಂದಿ ಈ ಗುಡಿಗೆ ಬಂದು ಸೇವೆ ಸಲ್ಲಿಸಿ ಸಮಾಧಾನಪಟ್ಟುಕೊಂಡು ಹೋಗುತ್ತಿದ್ದರು.

ಈ ಶಾಸನಕ್ಕಿಂತ ಹಿಂದಿನ ಶಾಸನವೊಂದು ಬೆಟ್ಟದ ಮೇಲೇ ಗುಡಿಯ ಬಳಿಯೇ ದೊರೆಯಿತು. ಇದು ಕಲ್ಲುಹಲಗೆಯೊಂದರ ಮೇಲೆ ಬಿಡಿಯಾಗಿ ಕಡೆಯಿಸಿದ ಶಾಸನ; ಗುಡಿಯ ಗೋಡೆಯ ಮೇಲೆ ಮೂಡಿಸಿರುವುದಲ್ಲ. ಈ ಶಾಸನದಲ್ಲಿ, ವಿಜಯಾದಿತ್ಯ

ನೆಂಬ ರಾಜನು ಹುಟ್ಟಿದುದನ್ನು ತಿಳಿಸುವ ಸಂಸ್ಕೃತದ ಮಾತುಗಳಿವೆ; ಶಾಸನದ ಭಾಗಗಳು ತ್ರುಟಿತವಾಗಿರುವುದರಿಂದ ವಿವರಗಳು ಸ್ಪಷ್ಟವಾಗುವುದಿಲ್ಲ. ಬಾಣವಂಶದ ಸಾಮಂತರಾಜ ಇವನೆಂದೂ, ವಿಜಯದಂತವಿಕ್ರಮನೆಂಬ ಪಲ್ಲವರಾಜನಿಗೆ ಅಧೀನನಾಗಿದ್ದನೆಂದೂ ಇವನು ಹುಟ್ಟಿದ ವರ್ಷ ಕ್ರಿಸ್ತಾಬ್ದ 790 ಇರಬಹುದೆಂದೂ ಊಹಿಸಲಾಗಿದೆ. ಆ ಕಾಲಕ್ಕೆ ತಿರುವೇಂಗಡವು ವಡಗುಹಳ್ಳಿ—ಹನ್ನೆರಡುಸಾವಿರ ಎಂಬ ಸೀಮೆಗೆ ಸೇರಿದ್ದಿತು; ಈ ಸೀಮೆಯ ರಾಜನಾಗಿದ್ದವನು ಮಾವಳಿ-ಬಾಣರಾಯ (ವಿಜ್ಜಾಧರ). ವಿಜಯಾದಿತ್ಯನು ಇವನ ಮಗ ಇರಬೇಕು. ಬೆಟ್ಟದ ಮೇಲೆ ಭದ್ರವಾದ ಗುಡಿಯಿದ್ದಿದ್ದರೆ ಈ ಶಾಸನವನ್ನು ವಿಜಯಾದಿತ್ಯನ ತಂದೆ '....ಭೂಪಾಲ'ನು ಬಿಡಿಯಾಗಿ ಹೀಗೆ ಕಲ್ಲಮೇಲೆ ಕಡೆಯಿಸಿ ನಿಲ್ಲಿಸುತ್ತಿರಲಿಲ್ಲ. ಎಂದಮೇಲೆ, ಆ ಕಾಲಕ್ಕೆ ಅಲ್ಲಿ ಸರಿಯಾದ ಗುಡಿಯಿದ್ದುದು ಸಂದೇಹವೇ. ಈ ಶಾಸನವಾದಮೇಲೆ ನಮಗೆ ಬೆಟ್ಟದ ಮೇಲಾಗಲೀ ತಿರುಚ್ಚಾನೂರಿನಲ್ಲಾಗಲೀ ಮೇಲೆ ಹೇಳಿದ ಉಲಗಪ್ಪೆರುಮಾನಾರ ದಾನಶಾಸನದವರೆಗೆ ಬೇರಾವ ಶಾಸನವೂ ದೊರೆತಿಲ್ಲ. ಬೆಟ್ಟದ ಮೇಲೆ ದೊರೆತ ಮುಂದಿನ ಶಾಸನವೆಂದರೆ ಕ್ರಿಸ್ತಾಬ್ದ 970ರದ್ದು; ಸಾಮವೈರಾಣಿ ಕಡೆಯಿಸಿದುದು. ಅದು ಗುಡಿಯ ಮೊದಲ ಪ್ರಾಕಾರದಲ್ಲೇ ಗೋಡೆಯ ಮೇಲೆ ಮೂಡಿರುವ ಶಾಸನ. ಎಂದರೆ, ಆ ಕಾಲಕ್ಕೆ ಗುಡಿ ಮೂಡಿಕೊಂಡಿರಬೇಕು.

ಕ್ರಿಸ್ತಾಬ್ದ 790ರಿಂದ 970ರ ನಡುವೆ ಬೆಟ್ಟದ ಮೇಲಿನ ಗುಡಿಯ ವಿಚಾರವೇನೂ ತಿಳಿದುಬರುವುದಿಲ್ಲ. ತಿರುಚ್ಚೋಕಿನೂರಿನಲ್ಲಿದ್ದ 'ತಿರುವೇಂಗಡದ ಎಳೆಯ ದೇವರ ಗುಡಿ'ಯನ್ನು ಪ್ರಸ್ತಾಪಿಸುವ ಶಾಸನಗಳಿವೆ. ಬೆಟ್ಟದ ಮೇಲೆ ಗುಡಿಯಿದ್ದಿತೋ ಇಲ್ಲವೋ, ಅಲ್ಲಿ ಪೂಜೆ ನಡೆಯುತ್ತಿದ್ದಿತೋ ಇಲ್ಲವೋ, ಜನರು ಹೋಗಿಬರುತ್ತಿದ್ದರೋ ಇಲ್ಲವೋ ಯಾವುದೂ ಸ್ಪಷ್ಟವಾಗುವುದಿಲ್ಲ; ಆದರೆ ತಿರುಚ್ಚೋಕಿನೂರಿನ ಗುಡಿ ಪ್ರಸಿದ್ಧವಾಗುತ್ತಿದ್ದುದು ತಿಳಿದುಬರುತ್ತದೆ. ತಿರುವೇಂಗಡದ ದೇವರನ್ನೇ ಪ್ರತಿನಿಧಿಸುವ ದೇವರನ್ನು ಇಲ್ಲಿ ಇರಿಸಿದ್ದುದರಿಂದ, ಬೆಟ್ಟದ ಹಿರಿಮೆಯನ್ನೂ ಆ ದೈವದ ಮಹಿಮೆಯನ್ನೂ ಈ ಊರಿನ ತಿರುವಳಂಕೋಯಿಲ್ ಪಡೆದಿದ್ದಿತೆಂದು ಊಹಿಸಿಕೊಳ್ಳಬಹುದು.

ವಿಜಯಾದಿತ್ಯನದೇ ಇನ್ನೊಂದು ಶಾಸನ, ಬಹುಮಟ್ಟಿಗೆ ಕ್ರಿಸ್ತಾಬ್ದ 820ರದ್ದು, ತಿರುಚ್ಚಾನೂರಿನ ಪದ್ಮಾವತೀಗುಡಿಯಲ್ಲಿ ದೊರೆತಿದೆ. ಇದರಲ್ಲಿ ಮೂರು ಬೇರೆಬೇರೆ ಮೂರ್ತಿಗಳಿಗೆ ಸಲ್ಲಿಸುವ ಸೇವೆಯ ಪ್ರಸ್ತಾಪವಿದೆ. ಈ ಮೂರ್ತಿಗಳು ಕ್ರಮವಾಗಿ ತಿರುವಿಳಂಕೋಯಿಲ್-ಪೆರುಮಾನ್ ಅಡಿಗಳ್, ತಿರುಮಂತ್ರಶಾಲೈ-ಪೆರುಮಾನ್ ಅಡಿಗಳ್ ಮತ್ತು ತಿರುವೇಂಗಡತ್ತು-ಪೆರುಮಾನ್-ಅಡಿಗಳ್. ಮೊದಲನೆಯದರ ವಿಚಾರ ಮೊದಲೇ ಬಂದಿದೆಯಷ್ಟೆ. ಬೆಟ್ಟದ ಮೇಲಿರುವ ದೈವವನ್ನು ಪ್ರತಿನಿಧಿಸುತ್ತ ಊರಲ್ಲಿರುವ ಮೂರ್ತಿ ಅದು. ಮೇಲಿರುವುದು ಸ್ವಯಂವ್ಯಕ್ತ, ಆದರೆ ಇದು ಮನುಷ್ಯನಿರ್ಮಿತ. ಅದು ಯಾವುದೆಂಬುದು ಈಗ ತಿಳಿಯುವಂತಿಲ್ಲ. ಬಹುಶಃ ಈಗ ಬೆಟ್ಟದ ಗುಡಿಯಲ್ಲಿ ಗರ್ಭಗೃಹದಲ್ಲೇ ಇರಿಸಿರುವ ಮೂರ್ತಿಗಳಲ್ಲಿ ಒಂದಿರಬಹುದು. ಎರಡನೆಯದು ಶ್ರೀವೈಷ್ಣವಸಂಪ್ರದಾಯದ ಪ್ರಕ್ರಿಯೆಯೊಂದನ್ನವಲಂಬಿಸಿರುವ

ಮೂರ್ತಿ. ಆ ಕಾಲಕ್ಕೆ ಆಳ್ವಾರರ ಶರಣಾಗತಿಯ ತತ್ತ್ವ, ಅದರಲ್ಲೂ ನಮ್ಮಾಳ್ವಾರರ ಬೋಧನೆ, ಈ ಸಂಪ್ರದಾಯದವರ ಅಡಿಗಲ್ಲಾಗಿದ್ದಿತು. ಈ ಸಂಪ್ರದಾಯದವರಿಗೆ ಇನ್ನೂ ಶ್ರೀವೈಷ್ಣವರೆಂಬ ಹೆಸರು ಬಂದಿರಲಿಲ್ಲವೆಂದು ತೋರುತ್ತದೆ; ಆಗ ಅವರು ಪ್ರಸಿದ್ಧರಾಗಿದ್ದುದು ಎಂಬೆರುಮಾನಡಿಯಾರರೆಂದು (ಎಮ್-ಪೆರುಮಾನ್-ಅಡಿಯಾರ್, ಎಂದರೆ 'ನಮ್ಮ ದೇವರ ಭಕ್ತರು'). ಯಾವ ಜಾತಿಯವರಾದರೂ ಮೂಲತತ್ತ್ವವನ್ನು ಒಪ್ಪಿ, ಮೂಲಮಂತ್ರವನ್ನು ಆಚಾರ್ಯಪುರುಷರಿಂದ ಪಡೆದು, ಅವರಿಂದ ಮುದ್ರಾಂಕನ ಮಾಡಿಸಿಕೊಂಡು ಈ ಸಂಪ್ರದಾಯಕ್ಕೆ ಸೇರಬಹುದಾಗಿದ್ದಿತು; ಜಾತಿಮತಗಳ ಗಣನೆಯಿಲ್ಲದೆ ಅವರೆಲ್ಲರೂ ಎಂಬೆರುಮಾನಡಿಯಾರರೇ. ಒಂದು ಬಗೆಯ ಮತಾಂತರದ ಕೆಲಸವೇ ಇದು. ಸಂಪ್ರದಾಯದವರಲ್ಲಿ ಈ ಕೆಲಸದ ಮೇಲೆ ವಿಶ್ವಾಸ ಹೆಚ್ಚಾಗಿಯೇ ಇದ್ದಿತೆನ್ನಬಹುದು. ಈ ಕೆಲಸ ನಡೆಯುವುದು ಆ ಕಾಲಕ್ಕೆ ಗುಡಿಯಲ್ಲೇ ಆಗಿದ್ದಿತು. ಇಂಥ ಗುಡಿಗೆ ತಿರುಮಂತ್ರಶಾಲೆಯೆಂದು ಹೆಸರು. ತಿರು-ಮಂತ್ರವೆಂದರೆ 'ಓಂ ನಮೋ ನಾರಾಯಣಾಯ' ಎನ್ನುವ ಅಷ್ಟಾಕ್ಷರಮಂತ್ರ. ಈ ಮಂತ್ರದೀಕ್ಷೆಯನ್ನು ಪಡೆಯುವಾಗ ಇತರ ಸಂಸ್ಕಾರಗಳೂ ಈ ಗುಡಿಯ ದೇವರೆದುರೇ ನಡೆಯಬೇಕಾಗಿದ್ದಿತು. ಇದಕ್ಕಾಗಿ ಏರ್ಪಡಿಸಿಕೊಂಡ ವಿಗ್ರಹ ತಿರುಮಂತ್ರಶಾಲೈ-ಪೆರುಮಾನ್. ಇದೂ ಈಗ ಬೆಟ್ಟದ ಮೇಲಿನ ಗುಡಿಯಲ್ಲಿಯೇ ಸೇರಿರಬಹುದು. ಈಗ ತಿರುಚ್ಚಾನೂರಿನಲ್ಲಿ ತಿರುವಿಳಂಕೋಯಿಲೂ ಇಲ್ಲ, ತಿರುಮಂತ್ರಶಾಲೆಯೂ ಇಲ್ಲ. ಎರಡರ ಆಯುಸ್ಸೂ ಅಲ್ಪವಾಗಿದ್ದ ಸೂಚನೆಯಿದೆ.

ಬೆಟ್ಟದ ಮೇಲೆ ಮೂರ್ತಿ

ಶಾಸನ ಪ್ರಸ್ತಾಪಿಸುವ ಮೂರನೆಯ ಮೂರ್ತಿ ತಿರುಚ್ಚಾನೂರಿನಲ್ಲಿದ್ದುದಲ್ಲ. ಅದು ಬೆಟ್ಟದ ಮೇಲಿದ್ದ ಮೂಲಮೂರ್ತಿಯೇ: ತಿರುವೇಂಗಡತ್ತು ಪೆರುಮಾನ್. ಈ ಮೂರ್ತಿಯ ಹಿರಿಮೆಯಿಂದಲೇ ಇನ್ನೆರಡು ಮೂರ್ತಿಗಳ ಹಿರಿಮೆ ಮೂಡಿಬಂದದ್ದು. ಶಾಸನದ ಮಾತುಗಳಲ್ಲಿ ಮೊದಲೆರಡು ಮೂರ್ತಿಗಳಿಗೂ ಗುಡಿಗಳ ಸಂಬಂಧವಿರುವುದನ್ನು ಗಮನಿಸಬೇಕು—ತಿರುವಿಳಂಕೋಯಿಲ್ ಮತ್ತು ತಿರುಮಂತ್ರಶಾಲೆ. ಎರಡೂ ಬೇರೆಬೇರೆ ಗುಡಿಗಳೇ ಆಗಿದ್ದುವೋ, ಅಥವಾ ಒಂದೇ ಗುಡಿಯ ಎರಡು ಅಂಕಣಗಳಿದ್ದ ಸನ್ನಿಧಿಗಳೋ ಹೇಳುವುದು ಕಷ್ಟ. ಇದು ಏನಿದ್ದರೂ, ಒಂದು ಕೋಯಿಲ್, ಮತ್ತೊಂದು ಶಾಲೆ. ಆದರೆ ಮೂರನೆಯ ಮೂರ್ತಿಯನ್ನು ಹೆಸರಿಸುವಾಗ ಬೆಟ್ಟದ ಮೇಲಿರುವುದು ಎಂದಷ್ಟೇ ಇದೆ—'ತಿರುವೇಂಗಡತ್ತು'. ಎಂದರೆ, ಬೆಟ್ಟದ ಮೇಲೆ ಗುಡಿ ಇನ್ನೂ ಇರಲಿಲ್ಲವೆ? ಇದ್ದರೂ ಅಷ್ಟು ಪ್ರಸಿದ್ಧವಾಗಿರಲಿಲ್ಲವೆ? ಈ ಶಾಸನವಿರುವುದು ತಿರುಚ್ಚಾನೂರಿನಲ್ಲೇ; ಶಾಸನದಲ್ಲಿ ಬರುವ ದಾನವನ್ನು ನಡೆಸಿಕೊಂಡು ಹೋಗುವ ಹೊಣೆಯನ್ನು ಹೊತ್ತವರು 'ಊರ-ನಿಯೋಗ', ಎಂದರೆ ತಿರುಚ್ಚಾನೂರಿನ ಹಿರಿಯರೇ. ಬೆಟ್ಟದ ಮೇಲಿನ ಮೂರ್ತಿಗೆ ಸಲ್ಲಿಸಿದ ಕೈಂಕರ್ಯವೂ ಇವರ ಹೊಣೆಯೇ.

ಬೆಟ್ಟದ ದೇವರನ್ನು ಜನ ಮರೆತಿರಲಿಲ್ಲವೆಂಬುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ. ಪ್ರತಿನಿಧಿಗೆ ಎಷ್ಟೇ ಮನ್ನಣೆ ಸಲ್ಲಿಸಿದರೂ, ಮೂಲಮೂರ್ತಿಯನ್ನು ಮರೆಯಬಹುದೆ? ಬೆಟ್ಟದ ಮೇಲೆ ನಿಂತಿರುವ ದೇವರನ್ನು ಕಂಡುಬರುವ, ಅದಕ್ಕೆ ಸೇವೆ ಸಲ್ಲಿಸುವ ಬಯಕೆಗಳು ಜನರಲ್ಲಿ ಇದ್ದೇ ಇದ್ದುವು. ಬೆಟ್ಟವನ್ನೇರಿಹೋಗುವ ಸಾಹಸ, ಸ್ಥೈರ್ಯಗಳು ಸಾಲದವರು ತಿರುಚ್ಚಾನೂರಿಗೇ ಬರುತ್ತಿದ್ದರು. ಆದರೆ ಬರುಬರುತ್ತ ತಿರುಚ್ಚಾನೂರಿನ ಗುಡಿ ಕಳೆಗುಂದಿತು. ಕಾರಣವೇನೋ ಸ್ಪಷ್ಟವಾಗಿ ತಿಳಿದುಬರುವುದಿಲ್ಲ. ಪ್ರತಿನಿಧಿಮೂರ್ತಿಯ ಮಹಿಮೆಯಲ್ಲಿ ಜನರ ಶ್ರದ್ಧೆ ಬೇರೂರಲಿಲ್ಲವೋ? ತಿರುಚ್ಚಾನೂರು ಪ್ರಧಾನವಾಗಿ ಶೈವಕ್ಷೇತ್ರ, ಆಳರಸರು ಚೋಳರಾದಾಗ ಶೈವಧರ್ಮದವರದ್ದೇ ಮೇಲುಗೈಯಾಯಿತು; ವೈಷ್ಣವರ, ಎಂದರೆ ಎಂಬೆರುಮಾನಡಿಯಾರರ, ಸ್ಥಿತಿ ಸಂದಿಗ್ಧವಾಗಿದ್ದಿರಬಹುದು. ಹೀಗಾಗಿ ಅವರು ತಮ್ಮ ಧಾರ್ಮಿಕ ಕೇಂದ್ರವನ್ನು ಬೆಟ್ಟದ ಮೇಲೇ ಒಯ್ಯಲು ಮನಸ್ಸು ಮಾಡಿದರೋ? ತಿರುಮಂತ್ರ ಶಾಲೆಯಲ್ಲಿ ನಡೆಯುತ್ತಿದ್ದ ಮತಾಂತರದ ಕೆಲಸಕ್ಕೆ ಪ್ರಬಲವಾದ ವಿರೋಧ ಬಂದಿತೋ? ಅಥವಾ ಈ ವೇಳೆಗಾಗಲೇ, ಬೆಟ್ಟದ ದಾರಿ ಸುಗಮವೆನಿಸಿ ಬೆಟ್ಟದ ಮೇಲೇ ಜನರ ವಸತಿಯೊಂದು ಇರತೊಡಗಿತೋ? ಕಾರಣವೇನಿದ್ದರೂ, ಜನರ ಆಸಕ್ತಿ ತಿರುಚ್ಚಾನೂರಿನ ಗುಡಿಗಳನ್ನು ಬಿಟ್ಟು, ಬೆಟ್ಟದ ದೈವದ ಮೇಲೇ ಹರಿಯಿತು. ಆಗ ಬೆಟ್ಟವನ್ನೇರಿ ಹೋಗುವ ಮಂದಿಯೂ ಹೆಚ್ಚಾದರು, ಬೆಟ್ಟದ ಮೇಲೆ ಗುಡಿ-ಗೋಪುರಗಳೂ ಮೂಡಿಕೊಂಡವು.

ತಿರುಚ್ಚಾನೂರಿನ ರಾಜಕೀಯ ಪ್ರಾಬಲ್ಯವೇನೋ ಮುಂದುವರೆಯಿತು. ಬೆಟ್ಟದ ಮೇಲೆ ಮೂಡಿಕೊಂಡಿರಬಹುದಾದ ಗುಡಿಯನ್ನು ನೋಡಿಕೊಳ್ಳುತ್ತಿದ್ದವರು ತಿರುಚ್ಚಾನೂರಿನವರೇ. ಚೋಳರಾಜನಾಗಿದ್ದ ಮೊದಲನೆಯ ಪರಾಂತಕನ (ಮಧುರೆಯನ್ನು ಗೆದ್ದ ಪರಕೇಸರಿವರ್ಮ, 'ಮದಿರೈಕೊಂಡ ಕೋ-ಪರಕೇಸರಿಪನ್ಮಾರ್') ಕಾಲದ ಶಾಸನವೊಂದು ತಿರುಚ್ಚಾನೂರಿನಲ್ಲೇ ದೊರೆತಿದೆ. ಈ ದೊರೆಯು ಪಟ್ಟಕ್ಕೇರಿ ಇಪ್ಪತ್ತೊಂಬತ್ತು ವರ್ಷಗಳಾದಮೇಲೆ, ಎಂದರೆ ಕ್ರಿಸ್ತಾಬ್ದ 935ರಲ್ಲಿ, ಮಲೆನಾಡಿನ (ಎಂದರೆ, ಕೇರಳದ) ಕೋಡುಂಗೋಳೂರಾನ್ (ಎಂದರೆ ಕೋಡುಂಗೋಳೂರಿನವರು, ಈಗಿನ ಕ್ರಾಂಗನೂರಿನವನು) ಬೆಟ್ಟದ ಮೇಲಿನ ದೇವರೆದುರು ಸೂರ್ಯಚಂದ್ರರಿರುವರೆಗೂ ದೀಪವನ್ನು ಬೆಳಗಬೇಕೆಂದು ನಲವತ್ತು ಕಳಂಜುತೂಕದ ಅಪ್ಪಟ ಚಿನ್ನವನ್ನು ತಿರುಚ್ಚೋಕಿನೂರಿನ ಸಭೈಯಾರರಿಗೆ ದಾನ ಮಾಡುತ್ತಾನೆ. ದೇವರೆದುರು ದೀಪ ಉರಿಯಬೇಕಾದರೆ ಗುಡಿ ಇರಬೇಕಲ್ಲವೆ? ಈ ಕಾಲಕ್ಕೆ ಬೆಟ್ಟದ ಮೇಲಿನ ಗುಡಿಯಿದ್ದಿತೆನ್ನುವ ಸ್ಪಷ್ಟಸೂಚನೆ ಇಲ್ಲಿದೆ.

ಸಾಮವೈ ಕೊಡುಗೆ

ಇದೇ ಸಮಯದಲ್ಲಿ ಗುಡಿಯನ್ನು ಕುರಿತು ಆಳರಸರ ಆಸಕ್ತಿಯೂ ಹೆಚ್ಚುತ್ತಿದ್ದಿರ

ಬೇಕು. ಸಾಮವ್ಯೆ ಎಂಬಾಕೆಯ ಶಾಸನ, ಬೆಟ್ಟದ ಮೇಲಿನ ಗುಡಿಯ ವಿಸ್ತರಣೆಯಲ್ಲಿ ಮುಖ್ಯವಾದ ಘಟ್ಟ. ಈ ಶಾಸನದ ಕಾಲ ಕ್ರಿಸ್ತಾಬ್ದ 966 ಎನ್ನಲಾಗಿದೆ. ಸಾಮವ್ಯೆ— ಪಲ್ಲವ ಪೇರ್ಗಡೆಯ ಮಗಳು, ಮತ್ತು 'ಕಾಡವನ್ ಪೆರುಂದೇವಿ', ಎಂದರೆ ಕಾಡವನ ಹಿರಿಯರಸಿ. ಕಾಡವರೆಂದರೆ ಪಲ್ಲವರು; ಕಾಡನ್ನು ಕಡಿದು ಊರಾಗಿ ಮಾಡಿದವರು (ಕಾಡುವೆಟ್ಟಿಗಳ್). ಸಾಮವ್ಯೆ ಕೈಹಿಡಿದ 'ಶ್ರೀಕಾಡಪಟ್ಟಿಗಳ್' ದಂತಿಶಕ್ತಿವಿಟಂಕನೆಂಬುವನು; ಕಾಂಚೀಪುರದ ಅರಸರಾದ ಪಲ್ಲವರ ವಂಶದಲ್ಲಿ ಪಲ್ಲವಮಲ್ಲನೆಂದು ಹೆಸರಾದ ಇಮ್ಮಡಿ ನಂದಿವರ್ಮನ ಮೊಮ್ಮಗ, ವಿಜಯದಂತಿವರ್ಮನ (ಅಳಿದ ಕಾಲ ಕ್ರಿಸ್ತಾಬ್ದ 779-830) ಮಗ. ನಂದಿವರ್ಮನ ರಾಣಿ ರಾಷ್ಟ್ರಕೂಟದ ಅರಸುಗುವರಿ ರೇವಾದೇವಿ; ವಿಜಯದಂತಿವರ್ಮನ ಕೈಹಿಡಿದವಳು ಕದಂಬವಂಶದ ಅಗ್ಗಳನಿಮ್ಮಟಿ. ವಿಜಯದಂತಿವರ್ಮನ ಮೊದಲ ಮಗ ಶಕ್ತಿವಿಟಂಕ, ಎರಡನೆಯವ ಮುಮ್ಮಡಿ ನಂದಿವರ್ಮ, ಇಬ್ಬರ ನಡುವೆ ಹುಟ್ಟಿದವಳು ದಂತಿಶಕ್ತಿವಿಟಂಕಿ ಅಥವಾ ಲೋಕಮಹಾದೇವಿ; ಚೋಳರಾಜನಾದ ಮೊದಲನೆಯ ರಾಜರಾಜನ ರಾಣಿಯಾದವಳು. ಶಕ್ತಿವಿಟಂಕನು ತೊಂಡಮಂಡಲವನ್ನಾಳುತ್ತಿದ್ದ ಕರಿಕಾಲಚೋಳ ಅಥವಾ ಇಮ್ಮಡಿ ಆದಿತ್ಯ ಕೋ-ಪಾರ್ಥಿವೇಂದ್ರವರ್ಮನ ಸಾಮಂತನಾಗಿದ್ದವನು; ಹೆಚ್ಚೂ ಕಡಮೆ ಸ್ವತಂತ್ರನಾಗಿಯೇ ಇದ್ದನೆನ್ನಬಹುದು. ಸಾಮವ್ಯೆ ಬರೆಯಿಸಿದ ಶಾಸನವು ಕೋಪ್ಪಾತ್ರ ಮಹೇಂದ್ರ ಪನ್ಮಾರನ (ಎಂದರೆ, ಕೋ-ಪಾರ್ಥಿವೇಂದ್ರವರ್ಮನ) ಆಳ್ವಿಕೆ ಮೊದಲಾಗಿ ಹದಿನಾಲ್ಕನೆಯ ವರ್ಷ ನಡೆಯುತ್ತಿದ್ದಾಗ ಹೊರಟದ್ದು, ಎಂದರೆ ಕ್ರಿಸ್ತಾಬ್ದ 966ಕ್ಕೆ ಸಮನಾದ ವರ್ಷದಲ್ಲಿ.

ಆದರೆ ಈ ವಿಚಾರವಾಗಿ ಸ್ವಲ್ಪ ಗೊಂದಲವಿದೆ. ಮಹೇಂದ್ರವರ್ಮನ ಆಳ್ವಿಕೆ ಮೂವತ್ತುವರ್ಷಗಳು (600 ರಿಂದ 630ರ ವರೆಗೆ) ಎಂದೂ, ಹದಿನಾಲ್ಕನೆಯ ವರ್ಷ ನಡೆಯುತ್ತಿರುವಾಗ ಎಂದರೆ ಕ್ರಿಸ್ತಾಬ್ದ 614ಕ್ಕೆ ಸರಿಯಾಗುವುದೆಂದೂ ಅಭಿಪ್ರಾಯವಿದೆ.

ಏನಾದರಿರಲಿ, ಈ ಶಾಸನದಲ್ಲಿ ಬರುವ ಮುಖ್ಯ ವಿವರ, ಬೆಳ್ಳಿಯ ಮಣವಾಳಪ್ಪೆರುಮಾಳನನ್ನು ಮಾಡಿಸಿ ಮೂಲವರಿಗೆ ಕರ್ಮಾರ್ಚನೆಯಾದ ಮೇಲೆ ಈ ಮೂರ್ತಿಯನ್ನು ತಿರುವಿಳಂಕೋಯಿಲಿನಲ್ಲಿ ಪ್ರತಿಷ್ಠೆಮಾಡಿಸಿದುದು. ಶಾಸನವನ್ನು ಗುಡಿಯ ಮೊದಲ ಪ್ರಾಕಾರದಲ್ಲಿ ಉತ್ತರದ ಗೋಡೆಯ ಮೇಲೇ ಮೂಡಿಸಿರುವುದರಿಂದ ಆ ಕಾಲಕ್ಕೆ ಗರ್ಭಗುಡಿಯಂತೂ ಇದ್ದಿರಬೇಕೆಂಬುದು ಖಚಿತ. ತಿರುವಿಳಂಕೋಯಿಲೆಂದು ಶಾಸನದಲ್ಲಿ ಬರುವುದು ಈಗಿನ ಸ್ನಪನಮಂಡಪವೆಂದು ಹೇಳುತ್ತಾರೆ. ಇದಕ್ಕೂ ಗರ್ಭಗುಡಿಗೂ ನಡುವೆ ಶಯನಮಂಡಪವಿದೆ. ಶಾಸನ ಸಿದ್ಧವಾಗುವ ಕಾಲಕ್ಕೂ ಇದು ಇದ್ದಿರಬೇಕು. ತಿರುವಿಳಂಕೋಯಿಲೆಂಬುದು ವಿಶೇಷವಾದ ಸಂದರ್ಭದಲ್ಲಿ ಕಟ್ಟಿಸುವ ಮಂಟಪವೆಂದೂ ವಿವರಣೆಯಿದೆ. ಸಾಮವ್ಯೆ, ಬೆಳ್ಳಿಯ ಸಣ್ಣ ಮೂರ್ತಿಯೊಂದನ್ನು ಮಾಡಿಸಿ, ಅದನ್ನು ತಿರುವಾಭರಣಗಳಿಂದ ಅಲಂಕರಿಸಿ, ಬೆಟ್ಟದ ದೇವರಿಗೆ ಒಪ್ಪಿಸಬೇಕೆಂದು ಬಯಸಿ, ಈ ಮೂರ್ತಿಯ ಪ್ರತಿಷ್ಠೆಮಾಡಿಸಲು ಈ ತಿರುವಿಳಂಕೋಯಿಲನ್ನು ಕಟ್ಟಿಸಿದಂತೆ ತೋರುತ್ತದೆ. ಈ ವಿವರವನ್ನು ಹೇಳುವ ಮಾತುಗಳು—

ಶ್ರೀ ವೇಂಗಡತ್ತು ಎಳುಂದರುಳಿನಿನ್ರ ಪೆರುಮಾನಡಿಗಳುಕ್ಕು ಕರ್ಮಾರ್ಚನೈ ಕೊಂಡರುಳಿ ತಿರುವಿಳಂಕೋಯಿಲಿಲ್ ಎಳುಂದರುಳುವಿತ್ತ ವೆಳ್ಳಿತ್ತಿರು ಮೇನಿಯನ್.... (ಮುಂದೆ ಈ ಮೂರ್ತಿಗೆ ಮಾಡಿಸಿದ ಆಭರಣಗಳ ವಿವರಗಳಿವೆ) **....ಇತ್ತನ್ಯೆಯಂ ಕೊಂಡು ಅಭಷೇಕಮಂ ಶೆಯ್ದಿತ್ತು ಎಳುಂದರುಳುವಿತ್ತ ಮಣವಾಳಪ್ಪೆರುಮಾನುಕ್ಕು....**

ಬೆಳ್ಳಿಯಲ್ಲಿ ಮಾಡಿಸಿದ ಮಣವಾಳಪ್ಪೆರುಮಾಳೆಂಬ ಮೂರ್ತಿಗೆ ಹೀಗೆ ವಜ್ರ, ಮುತ್ತು, ಮಾಣಿಕ್ಯ, ಹವಳಗಳನ್ನೂ ಚಿನ್ನದಲ್ಲಿ ಮೂಡಿಸಿದ ಆಭರಣಗಳನ್ನೂ ನಾಯಕಮಾಣಿಕ್ಯವಿರುವ ಬೆಳ್ಳಿಯ ಪ್ರಭಾವಳಿಯನ್ನೂ ಸಮರ್ಪಿಸಿ ಅಭಿಷೇಕವನ್ನೂ ನಡೆಯಿಸಿ, ಪ್ರತಿಷ್ಠೆ ಮಾಡಿಸಿದುದು ತಿರುವಿಳಂಕೋಯಿಲಲ್ಲಿ—ಎಂದು ಇಲ್ಲಿ ಬರುವ ವಿವರ. ಇದರ ಆಧಾರದ ಮೇಲೆ ಪ್ರತಿಷ್ಠೆಯಾದುದು ಅಕ್ಷಯಸಂವತ್ಸರದ ಆಣಿ ಹದಿನಾರರಂದು ಬಹುಳತೃತೀಯಾ ಶುಕ್ರವಾರ ಶ್ರವಣನಕ್ಷತ್ರದಲ್ಲಿ ಎಂದು ಕೆಲವರ ಎಣಿಕೆ. ಇದು ಕ್ರಿಸ್ತಾಬ್ದ 966 ರ ಜೂನ್ ಎಂಟಕ್ಕೆ ಸರಿಯಾಗುತ್ತದೆ. ಕರ್ಮಾರ್ಚನೆಯೆಂದರೆ ಮೂಲವರಿಗೆ ದಿನವೂ ನಡೆಯುವ ಪೂಜೆ. ಗರ್ಭಗುಡಿಯಲ್ಲಿರುವ ದೇವರಿಗೆ ಇದು ನಡೆದ ಮೇಲೆ, ತಿರುವಿಳಂಕೋಯಿಲಿನಲ್ಲಿ ಮಣವಾಳಪ್ಪೆರುಮಾಳರಿಗೆ ವಿಧ್ಯುಕ್ತವಾಗಿ ಪ್ರತಿಷ್ಠೆಯ ಕೆಲಸ ನಡೆಯಿತು ಎಂದು ಹೇಳಿದೆ. ಗರ್ಭಗುಡಿಯಲ್ಲಿ ಈ ಕೆಲಸ ನಡೆಯಲಿಲ್ಲ; ನಡೆಯಲೂಬಾರದು, ಆಗಮದ ವಿಧಿಯಂತೆ. ಪ್ರತಿಷ್ಠೆಯ ಸಂಸ್ಕಾರವನ್ನು ಪಡೆಯದ ಕರ್ಮಾರ್ಚಾಮೂರ್ತಿ ಗರ್ಭಗೃಹದೊಳಗೆ ಬರುವಂತಿಲ್ಲ. ಅದಕ್ಕಾಗಿ ಬೇರೆ ಆಲಯವನ್ನು ಕಟ್ಟಿಸಬೇಕು, ಅಥವಾ ಇದ್ದ ಆಲಯಕ್ಕೆ ಸಂಪ್ರೋಕ್ಷಣೆ ನಡೆಸಿ ಇದಕ್ಕಾಗಿ ಸಿದ್ಧಪಡಿಸಬೇಕು. ಸಾಮವೈ ಬೇರೆ ಆಲಯವನ್ನು ಕಟ್ಟಿಸಿದಳೇ ಎನ್ನುವ ವಿವರ ಶಾಸನದಲ್ಲಿ ಬರುವುದಿಲ್ಲ. ಬಹುಶಃ ಪ್ರತಿಷ್ಠಾಕಾರ್ಯಕ್ಕಾಗಿ ಮಂಟಪವೊಂದನ್ನು ಕಟ್ಟಿಸಿದ್ದಿರಬಹುದು. ಅದು ಶಯನಮಂಟಪಕ್ಕೆ ಸೇರಿದಂತೆ ಇದ್ದಿರಬಹುದು. ಈಗಿನ ಶಯನಮಂಟಪ ಆಗ ಗರ್ಭಗುಡಿಗೆ ಮುಖಮಂಡಪವಾಗಿದ್ದಿರಬೇಕು. ಎಂದರೆ ಸಾಮವೈಕಾಲದ ಗುಡಿ ಗರ್ಭಗೃಹ, ಮುಖಮಂಡಪ ಮತ್ತು ಪ್ರದಕ್ಷಿಣಪಥಗಳನ್ನು ಮಾತ್ರ ಹೊಂದಿದ್ದಂತೆ ಕಾಣುತ್ತದೆ. ಮುಖಮಂಡಪದೆದುರು ತಿರುವಿಳಂಕೋಯಿಲ್ ಎದ್ದುಕೊಂಡಿದ್ದಿರಬಹುದು.

ಆಕೆ ಮಾಡಿಸಿದ ಮಣವಾಳಪ್ಪೆರುಮಾಳ್ ಬೆಳ್ಳಿಯ ಮೂರ್ತಿ; ಈಗ ಕೌತುಕ ಬೇರವೆನಿಸಿಕೊಳ್ಳುತ್ತದೆ. ಇದನ್ನು ಭೋಗಶ್ರೀನಿವಾಸನೆಂದೂ ಸರ್ವಾಧಿಕಬೇರವೆಂದೂ ಕರೆಯುತ್ತಾರೆ. ಇದನ್ನು ಗರ್ಭಗುಡಿಯಲ್ಲಿ ಮೂಲವರ ಎದುರೇ ಇರಿಸಿರುತ್ತಾರೆ. ಮೂಲವರಿಗೂ ಈ ಮೂರ್ತಿಗೂ ಬಂಗಾರದ ಸಂಬಂಧಸೂತ್ರವಿರುತ್ತದೆ; ಯಾವಾಗಲೂ ಈ ಸಂಬಂಧ ಹರಿಯುವುದಿಲ್ಲ. ಇದರ ಪ್ರಸ್ತಾಪ ಮುಂದೆ ಮತ್ತೆ ಬರುತ್ತದೆ. ಇದನ್ನು ಸಾಮವೈ ತಿರುವಿಳಂಕೋಯಿಲಿನಲ್ಲಿ ಪ್ರತಿಷ್ಠೆ ಮಾಡಿಸಿದಾಗಲೇ ಈ ಬಗೆಯ ಸಂಬಂಧಸೂತ್ರವನ್ನು ಏರ್ಪಡಿಸಿದರೆಂದು ತೋರುತ್ತದೆ. ಗರ್ಭಗುಡಿಯಿಂದ ತಿರುವಿಳಂಕೋಯಿಲಿನ ಹೊರಬಾಗಿಲ ತುದಿಯವರೆಗೆ (ಎಂದರೆ, ಈಗಿನ

ಬಂಗಾರುಬಾಗಿಲವರೆಗೆ) ಮೂರ್ತಿಯನ್ನು ತರುವಷ್ಟು ಉದ್ದವಿರುತ್ತದೆ—ಈ ಸಂಬಂಧ ಸೂತ್ರ. ಪ್ರತಿಷ್ಠೆಯಾದಮೇಲೆ ಮೂರ್ತಿಯನ್ನು ಗರ್ಭಗುಡಿಗೆ ಒಯ್ದು ಮೂಲವರ ಸಮೀಪದಲ್ಲಿ ಇರಿಸಿರಬೇಕು. ಈ ಮೂರ್ತಿಯ ಪ್ರತಿಷ್ಠೆಯಾದದ್ದು ಅಕ್ಷಯಸಂವತ್ಸರದ ಆಣೆ ಹದಿನಾರರ ಬಹುಳತದಿಗೆ, ಶುಕ್ರವಾರ, ಶ್ರವಣನಕ್ಷತ್ರವಿರುವಾಗ; ಎಂದರೆ ಜೂನ್ ತಿಂಗಳ ಎಂಟನೆಯ ದಿನದಂದು (ವರ್ಷ ಕ್ರಿ. ಶ. 966 ಅಥವಾ 614) ಎಂದು ಗುಡಿಯ ಪ್ರಥಮಾಚಾರ್ಯಪುರುಷರಲ್ಲಿ ಒಬ್ಬರಾದ ವೀರರಾಘವಾಚಾರ್ಯರ ಎಣಿಕೆ. ಈ ವಿಚಾರವಾಗಿ ಇರುವ ಸಂಶಯವನ್ನು ಈ ಮೊದಲೇ ಹೇಳಲಾಗಿದೆ. ಶಾಸನತಜ್ಞರು ಕ್ರಿಸ್ತಾಬ್ದ 614 ಎಂಬುದೇ ಸಮರ್ಪಕವೆಂದು ಒಪ್ಪಿಕೊಂಡಿದ್ದಾರೆ.

ಈ ಕೈಂಕರ್ಯವಲ್ಲದೆ ಆಕೆ ತಿರುಚ್ಚಾನೂರಿನ ಸಭೈಯಾರರಿಂದಲೂ 'ಮಠದಲ್ಲಿರುವ ಲಕ್ಷ್ಮಣನಂಬಿ'(**ಮಠಮುಡೈಯ ಇಲಕ್ಷ್ಮಣನಂಬಿ**)ಯಿಂದಲೂ ಭೂಮಿಗಳನ್ನು ದೇವರಿಗಾಗಿ ಕೊಂಡ ಪ್ರಸ್ತಾಪವು ಶಾಸನದಲ್ಲಿದೆ. ಈ ಲಕ್ಷ್ಮಣನಂಬಿ ಯಾರೆಂಬುದು ತಿಳಿದುಬರುವುದಿಲ್ಲ; ಅವನಿದ್ದ ಮಠ ಯಾವುದೆಂಬುದೂ ಖಚಿತವಾಗಿಲ್ಲ. ಆದರೆ ಬೆಟ್ಟದ ಮೇಲೆ ಮಠವೊಂದಿದ್ದುದು ಸ್ವಾರಸ್ಯವಾದ ವಿವರ. ಮಠವಿದ್ದುದಾದರೆ ಜನವಸತಿಯೂ ಇದ್ದಿರಬೇಕು. ಆದರೆ ಮಠವು ಬೆಟ್ಟದ ಮೇಲೇ ಇದ್ದಿತೆನ್ನುವ ಮಾತು ಶಾಸನದಲ್ಲಿ ಸ್ಪಷ್ಟವಾಗಿ ಬಂದಿಲ್ಲ; ಮಠದ ನಂಬಿಯ ಹೆಸರನ್ನು ತಿರುಚ್ಚಾನೂರಿನ ಸಭೈಯಾರರೊಂದಿಗೇ ಸೇರಿಸಿರುವುದರಿಂದ ಮಠವೂ ತಿರುಚ್ಚಾನೂರಿನಲ್ಲಿದ್ದುದೇ ಆಗಿರಬಹುದು. ಇನ್ನೂ ಒಂದು ವಿವರ ಶಾಸನದಲ್ಲಿದೆ. ಸಾಮವೈ ಬಯಸಿ ವ್ಯವಸ್ಥೆಮಾಡಿದ ಕೈಂಕರ್ಯವನ್ನೆಲ್ಲ 'ತಿರುವೇಂಗಡದ ಮಾಠಾಪತ್ಯ ಮಾಡುವವರು' (**ತಿರುವೇಂಗಡತ್ತು ಮಠಾಪತ್ತಿಯಂಶೇಯ್ದಾರೆಯಾಗಳುಂ....**) ನಡೆಸಬೇಕೆಂಬ ಸೂಚನೆಯೂ, ತಿರುಚ್ಚಾನೂರಿನ ಸಭೈಯಾರರು ಆಕೆ ಕೊಂಡ ಭೂಮಿಗೆ ತೆರಿಗೆ ಹೊರಿಸದಂತೆ ಕಾಪಾಡಬೇಕೆಂಬ ಆದೇಶವೂ ಶಾಸನದ ಕಡೆಯಲ್ಲಿ ಬಂದಿವೆ. ಎಂದರೆ, ಬೆಟ್ಟದ ಮೇಲಿನ ಗುಡಿಯ ನಿರ್ವಹಣೆಯನ್ನು ಯಾವುದೋ ಸಂಸ್ಥೆ ನೋಡಿಕೊಳ್ಳುತ್ತಿದ್ದುದೂ, ತಿರುಚ್ಚಾನೂರಿನ ಹಿರಿಯರು ಇದರ ಮೇಲ್ವಿಚಾರಕರಂತೆ ಇರುತ್ತಿದ್ದುದೂ ತೋರಿಬರುತ್ತವೆ. ಈ ಶಾಸನದಲ್ಲೂ, ಆಕೆಯ ಇನ್ನೊಂದು ಶಾಸನದಲ್ಲೂ, ಸಂಸ್ಥೆಯನ್ನು 'ಮಾಠಾಪತ್ಯ'ವೆಂದು ಕರೆದಿರುವುದರಿಂದ ಬೆಟ್ಟದ ಮೇಲೂ ಮಠವೊಂದು ಇದ್ದಿತೆಂಬ ಊಹೆಗೂ ಅವಕಾಶವಿದೆ. ಮೇಲೆ, 'ಮಠದಲ್ಲಿರುವ ನಂಬಿ'ಯೊಬ್ಬನ ಹೆಸರನ್ನು ಹೇಳಿರುವುದರಿಂದ ರಾಮಾನುಜರಿಗೆ ಹಿಂದೆ ಶ್ರೀವೈಷ್ಣವಸಂಪ್ರದಾಯದ ಮಠ ಆಗಿದ್ದೀತು.

ಶ್ರೀವೈಷ್ಣವರಕ್ಷೆ

ಸಾಮವೈ, ಶಾಸನವನ್ನು ಮುಗಿಸುವಾಗ ಶ್ರೀವೈಷ್ಣವರ ರಕ್ಷೆಯನ್ನು (**ಶ್ರೀವೈಷ್ಣವರ್ಗಳ್ ಇರಕ್ಷೈ**) ಬೇಡಿರುವುದನ್ನು ಗಮನಿಸಬೇಕು. ಅರಸುಗುವರಿಯಾದರೂ, ರಾಣಿಯಾದರೂ ಆಕೆ ಈ ಮಾತಿಗೆ ಮೊದಲು "ಈ ದಾನವನ್ನು ರಕ್ಷಿಸುವವರ

ಶ್ರೀಪಾದ ನನ್ನ ತಲೆಯ ಮೇಲೆ ಇರುವುದು" ಎಂದು ಬರೆಯಿಸಿದ್ದಾಳೆ. ಈ ದಾನವನ್ನು ರಕ್ಷಿಸುವ ಹೊಣೆ ಪೂಜ್ಯರಾದ ವ್ಯಕ್ತಿಗಳ ಪಾಲಿನದೇ ಆಗಿದ್ದಿರಬೇಕು; ಅವರೇ ಮಾಠಾಪತ್ಯವನ್ನು ಮಾಡುತ್ತಿದ್ದಿರಬೇಕು.

ಆಕೆಯ ಕಾಲಕ್ಕೆ, ಮಣವಾಳಪ್ಪೆರುಮಾಳ್ ಪ್ರತಿಷ್ಠೆಯಾದುದು ಕ್ರಿಸ್ತಾಬ್ದ 966ರಲ್ಲಿ ಎನ್ನುವುದಾದರೆ, ಶ್ರೀವೈಷ್ಣವಸಮಾಜದಲ್ಲಿ ಪ್ರಮುಖರಾಗಿದ್ದವರು ಯಾಮುನಾಚಾರ್ಯರು (ಆಳವಂದಾರರು). ಇವರ ಕಾಲ ಕ್ರಿಸ್ತಾಬ್ದ 918 ರಿಂದ 1008ರ ವರೆಗೆ. ನಮ್ಮಾಳ್ವಾರರು ತಿರುವೇಂಗಡದ ದೇವರನ್ನು ಕುರಿತು ಪಾಶುರಗಳನ್ನು ಹಾಡಿದುದರಿಂದ ಪ್ರಭಾವಿತರಾದ ನಾಥಮುನಿಗಳು ಯಾಮುನರ ಹಿರಿಯರು; ವೇಂಗಡಬೆಟ್ಟಕ್ಕೆ ಬಂದಿದ್ದವರು. ನಾಥಮುನಿಗಳಿಂದ ಪ್ರಭಾವಿತರಾದ ಯಾಮುನರೂ ಆಚಾರ್ಯರಾದ ಮೇಲೆ ಬೆಟ್ಟಕ್ಕೆ ಒಮ್ಮೆ ಬಂದಿದ್ದರು. ತಮ್ಮ ಮೊಮ್ಮಗ ತಿರುಮಲೆನಂಬಿಗೆ ಬೆಟ್ಟದ ಮೇಲೇ ದೇವರಿಗೆ ಕೈಂಕರ್ಯ ಮಾಡಿಕೊಂಡು ಇರಬೇಕೆಂದು ಸೂಚಿಸಿದ್ದರು. ಅದರಂತೆ ನಂಬಿಯು ದೇವರ ಅಭಿಷೇಕಕ್ಕೆ ಆಕಾಶಗಂಗೆಯಿಂದ ನೀರು ತರುವುದು, ದೇವರ ಅಲಂಕಾರಕ್ಕೆ ಹೂಗಳನ್ನು ತೋಟದಲ್ಲಿ ಬೆಳೆಸುವುದು—ಈ ಸೇವೆಯನ್ನು ಮಾಡಿಕೊಂಡು ಬೆಟ್ಟದ ಮೇಲೇ ಇರುತ್ತಿದ್ದನು. ಮುಂದೆ ರಾಮಾನುಜರು ಈ ನಂಬಿಯ (ತನ್ನ ಸೋದರಮಾವನ) ಬಳಿ ಒಂದು ವರ್ಷಕಾಲ ರಾಮಾಯಣದ ಅಂತರಾರ್ಥವನ್ನು ಬೆಟ್ಟದ ಮೇಲೇ ಕಲಿತರು.

ಸಾಮವ್ವೆ, ಬೆಳ್ಳಿಯ ಭೋಗಶ್ರೀನಿವಾಸನಮೂರ್ತಿಯನ್ನು ಮಾಡಿಸಿ ಶ್ರೀವೈಷ್ಣವರ ರಕ್ಷೆಯನ್ನು ಕೋರಿದ್ದು ಯಾಮುನರ ಕಾಲದಲ್ಲೇ ಎಂದಾಗುತ್ತದೆ. ಯಾಮುನರಿಗೆ ಮೊದಲು ವಿಷ್ಣುವಿನ ಭಕ್ತರು 'ವೈಷ್ಣವ'ರೆಂದು ಕರೆದುಕೊಳ್ಳುತ್ತಿದ್ದರು. ತಮಿಳಿನ 'ಎಂಬೆರುಮಾನ್-ಅಡಿಯಾರ್' ಎಂದರೆ ವಿಷ್ಣುವಿನ ಭಕ್ತರು ಎಂದೇ ಅರ್ಥ. ಸಾಮವ್ವೆಶಾಸನಕ್ಕೆ ಮೊದಲಿನ ಒಂದು ಶಾಸನದಲ್ಲಿ (ತಿರುಚ್ಚಾನೂರಿನಲ್ಲಿ ದೊರೆತಿರುವ ಈ ಶಾಸನ ಕ್ರಿಸ್ತಾಬ್ದ 935ರದ್ದು, ಮೇಲೆ ಹೇಳಿದ ಕೋಡುಂಗೋಳೂರಾನನ ದಾನವನ್ನು ಕುರಿತದ್ದು) 'ಎಂಬೆರುಮಾನಡಿಯಾರ್ ರಕ್ಷೈ' ಎಂದೇ ಇದೆ. ಯಾಮುನರು ಲಕ್ಷ್ಮಿಯನ್ನೂ (ಶ್ರೀ) ನಾರಾಯಣನನ್ನೂ ಒಟ್ಟಿಗೆ ಪೂಜೆಮಾಡಬೇಕೆಂದೂ, ಎರಡೂ ಕೂಡಿ ಒಂದೇ ತತ್ತ್ವವೆಂದೂ ಬೋಧಿಸಿದಮೇಲೆ, 'ಶ್ರೀವೈಷ್ಣವ'ರೆಂಬ ವ್ಯವಹಾರ ಮೊದಲಾಯಿತು. ಸಾಮವ್ವೆ ಯಾಮುನಾಚಾರ್ಯರ ಪ್ರಭಾವವನ್ನು ತಳೆದಿದ್ದಳೆಂದು ಹೇಳಬಹುದು. ಶ್ರೀವೈಷ್ಣವರಕ್ಷೆಯನ್ನು ಉಲ್ಲೇಖಿಸಿರುವ ಶಾಸನಗಳಲ್ಲಿ ಅವಳ ಶಾಸನವೇ ಮೊದಲನೆಯದು. ಯಾಮುನರ ಶಿಷ್ಯರು ಬೆಟ್ಟದ ಮೇಲೆ ಮಠವೊಂದನ್ನು ಕಟ್ಟಿಕೊಂಡು ಗುಡಿಯಲ್ಲಿ ಪೂಜೆಯನ್ನು ನಡೆಸುತ್ತಿದ್ದಿದ್ದರೆ ಸೋಜಿಗವೇನಲ್ಲ. ತಿರುಮಲೆನಂಬಿಯ ನಂದವನವಂತೂ ಇದ್ದೇ ಇದ್ದಿತು; ವನದಲ್ಲಿ ಮಠವೂ ಇದ್ದಿರಬಹುದು. ಆದರೆ ಹೀಗೆ ಹೇಳುವ ಮೊದಲು ಪ್ರತಿಷ್ಠೆಯಾದುದು ಕ್ರಿಸ್ತಾಬ್ದ 966 ರಲ್ಲಿ ಎಂದು ಖಚಿತವಾಗಬೇಕು. 614ರಲ್ಲಿ ಎಂದರೆ ಇದು ಯಾವುದೂ ಸರಿಯಾಗದು!

ಬೆಳ್ಳಿಯ ಮಣವಾಳಪ್ಪೆರುಮಾಳಿಗೆ ಸಾಮವ್ವೆ ಮಾಡಿಸಿಕೊಟ್ಟ ಆಭರಣಗಳ

ವಿವರಗಳು ಶಾಸನದಲ್ಲಿ ಬಂದಿವೆ. ಇಪ್ಪತ್ತುಮೂರು ವಜ್ರಗಳನ್ನೂ ಹದಿನಾರು ದೊಡ್ಡ ಮುತ್ತುಗಳನ್ನೂ ಎರಡು ನಾಯಕಮಾಣಿಕ್ಯಗಳನ್ನೂ ಅಳವಡಿಸಿದ ಕಿರೀಟ (**ತಿರುಮುಡಿ**); ಬಂಗಾರದ ಮಕರಕುಂಡಲಗಳು—ಎರಡೂ ಕಿವಿಗಳಿಗೆ; ಹದಿನಾಲ್ಕು ವಜ್ರಗಳನ್ನೂ ಮೂರು ಮಾಣಿಕ್ಯಗಳನ್ನೂ ಹ್ನನ್ನೊಂದು ದೊಡ್ಡ ಮುತ್ತುಗಳನ್ನೂ ಹಲವು ಸಣ್ಣ ಮುತ್ತುಗಳನ್ನೂ ಅಳವಡಿಸಿದ ನಾಲ್ಕೆಳೆ ಹಾರ (**ಮಾಲೈ**); ಬಂಗಾರದ ನಡುಪಟ್ಟಿ (**ಉದರಬಂಧನ**); ನಾಲ್ಕು ಮಾಣಿಕ್ಯಗಳುಳ್ಳ ಡಾಬು (**ತಿರುವರೈ ಪಟ್ಟಿಕೈ**); ಬಂಗಾರದ ತೋಳುಬಳೆಗಳು ಎರಡು (**ಬಾಹುವಲಯ**); ಎರಡು ಮಾಣಿಕ್ಯಗಳನ್ನು ಮೂಡಿಸಿದ ನಾಲ್ಕು ಬಳೆಗಳು (**ತಿರುಚ್ಚಂದಂ**); ಕತ್ತಿನಲ್ಲಿ ತೊಡಿಸಲು ನಾಲ್ಕು ಚಿನ್ನದ ಸರಗಳು (**ವಳೈಯಾಲ್**); ಕಾಲುಗಳಿಗೆ ಗಟ್ಟಿ ಚಿನ್ನದ ಎರಡು ಕಾಲಬಳೆಗಳು (**ಕಾರೈ**)—ಹೀಗೆ ಒಟ್ಟು ಐವತ್ತೆರಡು ಆಭರಣಗಳನ್ನು ಬಂಗಾರದಲ್ಲಿಯೇ ಮಾಡಿಸಿ ಮಣಿ, ಮುತ್ತು, ಮಾಣಿಕ್ಯ, ಹವಳಗಳನ್ನು ಕೂಡಿಸಿ ಒಪ್ಪಿಸಿದ್ದಾಳೆ. ಇವಲ್ಲದೆ ಒಂದು ದೊಡ್ಡ ನಾಯಕಮಾಣಿಕ್ಯವನ್ನು ಮೂಡಿಸಿದ ಬೆಳ್ಳಿಪ್ರಭಾವಳಿಯನ್ನೂ ಕೊಟ್ಟಿದ್ದಾಳೆ. ಈ ಎಲ್ಲ ಆಭರಣಗಳಿಗೆ ಬಳಸಲಾದ ಬಂಗಾರದ ಒಟ್ಟು ತೂಕ ನಲವತ್ತೇಳು ಕಳಂಜುಗಳು.

ಇಷ್ಟು ಬೆಲೆಬಾಳುವ ಆಭರಣಗಳನ್ನು ಆಕೆ ಯಾರ ವಶದಲ್ಲಿ ಇರಿಸಿ ಹೋದಳು? ಶಾಸನದಲ್ಲಿ ಬರುವ ಒಕ್ಕಣೆ 'ತಿರುವೇಂಗಡದಲ್ಲಿ ಮಾಠಾಪತ್ಯವನ್ನು ಮಾಡುವವರು (**ತಿರುವೇಂಗಡತ್ತು ಮಾಠಾಪತ್ತಿಯಂ ಶೇಯ್ವಾರ್...**) ಈ ದಾನವನ್ನು ನೋಡಿಕೊಳ್ಳತಕ್ಕದ್ದು' ಎಂದು. ತಿರುಚ್ಚಾನೂರಿನ ಸಭೈಯಾರರು ಆಕೆ ದಾನವಾಗಿ ಕೊಟ್ಟ ಭೂಮಿಯ ಮೇಲೆ ತೆರಿಗೆ ಹೊರಿಸದಂತೆ ನೋಡಿಕೊಳ್ಳಬೇಕೆಂದಷ್ಟೇ ಶಾಸನದಲ್ಲಿರುವ ನಿರ್ದೇಶನ. ಮಾಠಾಪತ್ಯವನ್ನೂ ಮಾಡುತ್ತಿದ್ದವರು ಬೆಟ್ಟದ ಮೇಲೇ ಇದ್ದಿರಬೇಕು. ಸಾಮವೈ ಈ ಆಭರಣಗಳನ್ನೆಲ್ಲ ಅವರ ವಶಕ್ಕೆ ಒಪ್ಪಿಸಿದ ಮೇಲೆ ಅವರು ಅವನ್ನೆಲ್ಲ ಕಾಪಾಡಿಕೊಳ್ಳಲು ವ್ಯವಸ್ಥೆಯೊಂದು ಇದ್ದಿರಬೇಕಲ್ಲವೆ? ಬೆಟ್ಟದ ಮೇಲೆ ಕಾಡಿನ ನಡುವೆ ಇರುತ್ತಿದ್ದ ಗುಡಿ ಸುಭದ್ರವಾಗಿಲ್ಲದಿದ್ದರೆ ಹೇಗೆ? ಗುಡಿಯನ್ನು ಹಗಲಿರುಳೂ ಕಾಯಲು ಸಮರ್ಥರಾದ ಸಿಬ್ಬಂದಿಯೂ ಇದ್ದಿರಬೇಕು ಅಲ್ಲವೆ?

ಇನ್ನೂ ಒಂದು ಸಮಸ್ಯೆ ತೋರಿಕೊಳ್ಳುತ್ತದೆ. ಸಾಮವೈ ಕೌತುಕಮೂರ್ತಿಯಾಗಿ ಮಣವಾಳಪ್ಪೆರುಮಾಳನನ್ನು ಮಾಡಿಸಿಕೊಟ್ಟಳೆಂದರೆ, ಅದು ಮೂಲವಿಗ್ರಹದ ಮೂರ್ತಿ ಲಕ್ಷಣಗಳನ್ನೇ ಹೊಂದಿರಬೇಕು. ಆದರೆ ಸಾಮವೈ ತಾನು ಮಾಡಿಸಿಕೊಟ್ಟ ಮೂರ್ತಿಗೆ ಸಲ್ಲಿಸಿರುವ ಆಭರಣಗಳಲ್ಲಿ, ಈಗ ಮೂಲವರಲ್ಲಿ ಕಾಣಿಸಿಗುವ ಶಂಖ, ಚಕ್ರ, ವಕ್ಷಃಸ್ಥಲಲಕ್ಷ್ಮಿ, ಕೌಸ್ತುಭ ಇವು ಯಾವುದರ ಪ್ರಸ್ತಾಪವೂ ಇಲ್ಲ. ಎಂದರೆ ಆಕೆ ಮಾಡಿಸಿಕೊಟ್ಟ ಕೌತುಕಬೇರದಲ್ಲಿ ಇವು ಇರಲಿಲ್ಲ ಎಂದು ಅರ್ಥವೆ? ಆ ಕಾಲದಲ್ಲಿ ಮೂಲವರ ಮೂರ್ತಿಯಲ್ಲೂ ಇವು ಇರಲಿಲ್ಲ ಎಂದು ಧ್ವನಿಯೆ? ಶಂಖ-ಚಕ್ರಗಳೇನೋ ಮೂಲಬೇರದಲ್ಲಿ ಕವಚಗಳು; ಮೊದಲು ಬರಿಗೈಗಳು ಇದ್ದುವು, ಆನಂತರ ಎಂದೋ ಶಂಖ-ಚಕ್ರಗಳು ಮೂಡಿಕೊಂಡು ಬಂದುವು ಎಂದು ಇತಿಹಾಸವೇ ಹೇಳುತ್ತದೆ. ಆದರೆ ವಕ್ಷಃಸ್ಥಲಲಕ್ಷ್ಮಿಯನ್ನು ಮೂರ್ತಿಯ ಮೇಲೆ ಯಾರೋ ಎಂದೋ ಕಡೆದಿಟ್ಟರು ಎಂದು

ಹೇಳುವುದು ದುಃಸಾಹಸವಾಗುತ್ತದೆ. ಮಣವಾಳಪ್ಪೆರುಮಾಳಮೂರ್ತಿಯಲ್ಲಿ ಶಂಖ-ಚಕ್ರಗಳು ಅವಿಭಾಜ್ಯ ಅಂಗಗಳು; ಅದು ಹದಿನಾರಾಣೆ ವಿಷ್ಣುವಿಗ್ರಹ. ಸಾಮವೈ ಹೇಳಿಕೇಳಿ ಶ್ರೀವೈಷ್ಣವರಕ್ಷೆಯನ್ನು ಬಯಸಿದವಳು. ಅವಳಿಗೆ ತುಂಬ ಹಿಂದೆಯೇ ಆಳ್ವಾರರು ತಮ್ಮ ಪಾಶುರಗಳಲ್ಲಿ ವೇಂಗಡದೊಡೆಯನನ್ನು ವಿಷ್ಣುವೆಂದೇ ಗ್ರಹಿಸಿದ್ದಾರೆ; ಮೂರ್ತಿಯ ಕೈಗಳಲ್ಲಿದ್ದ ಶಂಖ-ಚಕ್ರಗಳನ್ನೂ ಅವರು ಕಂಡಿದ್ದರ ಉಲ್ಲೇಖ ಪಾಶುರ ಗಳಲ್ಲೇ ಬರುತ್ತದೆ. ಎಂದರೇನಾಯಿತು, ಈಗ ನಾವು ಕಾಣುವ ಶಂಖ-ಚಕ್ರ-ಕವಚಗಳು ರಾಮಾನುಜರ ಕಾಲಕ್ಕೆ ಮೊದಲೇ ಇದ್ದುವು, ಇತಿಹಾಸದಲ್ಲಿ ಬರುವ ವಿವರ ಸರಿಯಾದುದಲ್ಲ ಎಂದಾಯಿತು. ಇನ್ನು ವಕ್ಷಃಸ್ಥಲಲಕ್ಷ್ಮಿಯ ವಿಚಾರ. ಇದು ಮೂಲವ ರಲ್ಲಿ ಬರಿಯ ಚಿಹ್ನೆಯಾಗಿದ್ದು, ಎದ್ದುಕಾಣುವಂತಿರಲಿಲ್ಲ ಎನ್ನಬೇಕಾಗುತ್ತದೆ. ಹಾಗಾಗಿ ಸಾಮವೈ ಮಣವಾಳಪ್ಪೆರುಮಾಳತಿರುಮೇನಿಯ ಮೇಲೆ ಇದನ್ನು ಅಲಂಕರಿಸುವ ಗೋಜಿಗೆ ಹೋಗಲಿಲ್ಲವೋ ಏನೋ. ಈ ವಿಚಾರವಾಗಿ ಏನನ್ನು ಹೇಳುವುದೂ ಕಷ್ಟ; ಏನು ಹೇಳಿದರೂ ಅದು ಊಹೆಯೇ!

ಬ್ರಹ್ಮೋತ್ಸವದ ವ್ಯವಸ್ಥೆ

ಇನ್ನೂ ಒಂದು ಸಮಸ್ಯೆ ಈ ಸಂದರ್ಭದಲ್ಲಿ ಎದ್ದುಕೊಳ್ಳುತ್ತದೆ. ತಾನು ಮಾಡಿಸಿದ ಬೆಳ್ಳಿ ಮಣವಾಳಪ್ಪೆರುಮಾಳಿಗೆ ಇಷ್ಟೊಂದು ಆಭರಣಗಳನ್ನು ತೊಡಿಸಿದಾಕೆ, ಗುಡಿಯ ಮೂಲವರಿಗೆ ಏನೊಂದೂ ಆಭರಣವನ್ನೂ ಒಪ್ಪಿಸಿದ ಉಲ್ಲೇಖ ಶಾಸನದಲ್ಲಿ ಬರುವುದಿಲ್ಲ. ಹೊಸದಾಗಿ ಮಾಡಿಸಿದ ಮೂರ್ತಿಯನ್ನು ಸಾಲಂಕೃತವಾಗಿ ದಾನಮಾಡ ಬೇಕು ಎಂದು ಉತ್ಸಾಹವಿರುವುದು ಸಹಜ. ಆದರೆ ನೆಪಕ್ಕಾದರೂ ಮೂಲವರಿಗೆ ಏನನ್ನಾದರೂ ಸಲ್ಲಿಸಬೇಕಲ್ಲ? ಆಳ್ವಾರರ ಪಾಶುರಗಳಲ್ಲಿ ಮೂಲವರ ವರ್ಣನೆ ಬರುವಾಗ ಬಿಳಿಮಲ್ಲಿಗೆ (**ವೆಣ್‌ಮಲ್ಲಿಕೈಯುಂ**), ತಣ್ಣಗಿರುವ ತುಳಸಿ (**ತಣ್‌ತುಳಾಯ್**) ಮೊದಲಾದ ಮಾಲೆಗಳಿಂದ ಸಿಂಗರಿಸುವರೆಂಬ ಪ್ರಸ್ತಾಪವಿದೆ; ದೇವರ ಮೈಗೆ ಚಂದನವನ್ನು ಬಳಿಯುತ್ತಿದ್ದ ಉಲ್ಲೇಖವಿದೆ; ರೇಷ್ಮೆವಸ್ತ್ರಗಳನ್ನು ಉಡಿಸುತ್ತಿದ್ದರೆಂಬ ಮಾತಿದೆ. ಉಳಿದಂತೆ ಆಭರಣಗಳನ್ನು ತೊಡಿಸುತ್ತಿದ್ದ ಸೂಚನೆಯಿಲ್ಲ. ಪೇಯಾಳ್ವಾರರ ಪಾಶುರವೊಂದೇನೋ ಬಂಗಾರದ ನಡುಪಟ್ಟಿಯನ್ನು (**ಪೊನ್ನಾಣುಮ್**) ಕಂಡಂತೆ ಹೇಳುತ್ತದೆ. ಆದರೆ ಈ ಪಾಶುರದ ಪ್ರಾಮಾಣ್ಯ ಸಂದಿಗ್ಧವಾದುದು (ಮೂರನೆಯ ತಿರುವಂದಾದಿ, 63). ಹೂಮಾಲೆಗಳಿಂದ ದೇವರನ್ನು ಅಲಂಕರಿಸುವುದು ವೇಂಗಡದ ದೇವರಿಗೆ ಮೊದಲಿಂದ ವಿಶಿಷ್ಟವಾದ ಪದ್ಧತಿ. ಈಗಲೂ ಹೂದಂಡೆಗಳಿಂದ ಪೂಲಂಗಿಸೇವೆಯೆಂಬುದು ಅಲ್ಲಿ ಹೆಸರಾದದ್ದೇ. ಪ್ರಬಲವಾದ ಈ ಪದ್ಧತಿಯು ಸಾಮವೈಯ ಕೈಯನ್ನು ತಡೆದಿರಬಹುದೆ? ಅಥವಾ ಮೂಲವರಿದ್ದ ಗುಡಿ ಸಾಕಷ್ಟು ಸುಭದ್ರವಾಗಿರಲಿಲ್ಲವೋ? ಸಾಮವೈ ತನ್ನ ಶಾಸನದಲ್ಲಿ ಹೇಳುವ ತಿರುವಿಳಂಕೋಯಿ ಲೆನ್ನುವುದು ಈಗ ಸ್ನಪನಮಂಡಪವಾಗಿದೆಯೆಂದು ಹೇಳಿದೆವು. ಮೊದಲಿಗೆ ಇದು

ಗರ್ಭಗುಡಿಯಿಂದ ಬೇರೆ ಇದ್ದಿತೆಂದೂ, ಇದು ಕಲ್ಲಿನ ಕಟ್ಟಡವಾಗಿದ್ದು ಒಳಗಿದ್ದ ಬೆಳ್ಳಿ ಮೂರ್ತಿಯನ್ನೂ ಅದಕ್ಕೆ ತೊಡಿಸಿದ್ದ ಆಭರಣಗಳನ್ನೂ ಸುರಕ್ಷಿತವಾಗಿರಿಸುವಷ್ಟು ಸುಭದ್ರವಾಗಿದ್ದಿತೆಂದೂ ಹೇಳಬಹುದು. ಗರ್ಭಗುಡಿಯನ್ನೂ ತಿರುವಿಳಂಕೋಯಿಲನ್ನೂ ಸೇರಿಸಿದಂತೆ ಒಂದು ಅಂಕಣ (ಈಗಿನ ಶಯನಮಂಡಪ) ಮುಂದೆ ಮೂಡಿಕೊಂಡಿರ ಬೇಕು. ಸಾಮವೈಶಾಸನವನ್ನು ನೋಡಿದರೆ ತಿರುವಿಳಂಕೋಯಿಲ್ ಪ್ರತ್ಯೇಕವಾದ ಗುಡಿಯಾಗಿದ್ದಿತೆಂದು ಊಹೆಗೆ ಅವಕಾಶವಿದೆ. ಈಗೇನೋ ಸಾಮವೈ ಮಾಡಿಸಿದ ಬೆಳ್ಳಿಯ ಮೂರ್ತಿ ಗರ್ಭಗುಡಿಯಲ್ಲೇ ಮೂಲವರ ಬಳಿಯಲ್ಲೇ ಇರುತ್ತದೆ. ಅದು ಹೊರಕ್ಕೆ ಬರುವಾಗಲೂ ಮೊದಲಿನ ತಿರುವಿಳಂಕೋಯಿಲಿನ ಹೊರ ಮೇರೆಯನ್ನು ದಾಟುವುದಿಲ್ಲ.

ಸಾಮವೈ ಬೆಟ್ಟದ ಮೇಲೆ ಏರ್ಪಡಿಸಿದ ಇನ್ನೊಂದು ಸೇವೆಯೆಂದರೆ ಪುರಟ್ಟಾಶಿ ತಿರುನಾಳ್ ಎನಿಸಿಕೊಳ್ಳುವ ಬ್ರಹ್ಮೋತ್ಸವ. ಬ್ರಹ್ಮೋತ್ಸವವೆನ್ನುವುದು ಈಚೆಗೆ ಬಂದ ಹೆಸರು. ಮೊದಲಿಗೆ ಅದು ತಿರುನಾಳ್ ('ದೊಡ್ಡ ದಿನ') ಅಷ್ಟೆ. ಪುರಟ್ಟಾಶಿ ಎಂಬ ತಮಿಳುಮಾಸದಲ್ಲಿ ಚಿತ್ತಿರೈ ಎಂದರೆ ಚಿತ್ತಾನಕ್ಷತ್ರ ಮೂಡಿಕೊಂಡಂದಿನಿಂದ ಮೊದಲು ಮಾಡಿ ಒಂಬತ್ತು ದಿನಗಳು (ಎಂದರೆ, ಶ್ರವಣನಕ್ಷತ್ರ ಬಂದಾಗ ಇರಬಹುದು) ನಡೆಯುವ ಉತ್ಸವ ಇದು. ದಿನವೂ ಎರಡು ಬಾರಿ ಉತ್ಸವ ನಡೆಯಬೇಕೆಂಬ ಮಾತು ಶಾಸನದಲ್ಲಿದೆ. ಇದು ತಾನು ಮಾಡಿಸಿಕೊಟ್ಟ ಬೆಳ್ಳಿಯ ಮಣವಾಳಪ್ಪೆರುಮಾಳನಿಗೇ ಮುಖ್ಯವಾಗಿ ನಡೆಯುವ ಉತ್ಸವವೆಂದು ವಿವರ ಕಾಣುತ್ತದೆ. ಉತ್ಸವವೆಂದರೆ ದೇವರನ್ನು ಹೊತ್ತು ಊರ ಸುತ್ತ ಮೆರವಣಿಗೆ ತರುವುದು ಎಂಬ ಹಿಂದಿನ ಸಂಪ್ರದಾಯವೇ. ಮೆರವಣಿಗೆಯಲ್ಲಿ ಬೆಳ್ಳಿಯ ಈ ಸಣ್ಣ ಮಣವಾಳಪ್ಪನನ್ನು ತರುತ್ತಿದ್ದರೋ ಅಥವಾ ಮೆರವಣಿಗೆಗೆಂದೇ ಬೇರೊಂದು ಉತ್ಸವಮೂರ್ತಿ ಇದ್ದಿತೋ ತಿಳಿದುಬಂದಿಲ್ಲ. ಈಗ ಉತ್ಸವಕ್ಕೆ ಮಲಯಪ್ಪನ್ ಎಂಬ ಉತ್ಸವಮೂರ್ತಿಯನ್ನು ಬಳಸುತ್ತಾರೆ; ಈ ಮೂರ್ತಿ ಬರುವ ಮೊದಲು ವೆಂಕಟತ್ತುರೈವಾರ್ ಎಂದು ಕರೆಸಿಕೊಳ್ಳುವ 'ಉಗ್ರಶ್ರೀನಿವಾಸ'ಮೂರ್ತಿಯನ್ನು ಬಳಸುತ್ತಿದ್ದರಂತೆ. ಈಗಲೂ ಈ ಮೂರ್ತಿಯನ್ನು ಗರ್ಭಗುಡಿಯಲ್ಲೇ ಇರಿಸಿದ್ದಾರೆ. ಆದರೆ ಈ ಮೂರ್ತಿ ಬಂದದ್ದು ಯಾವಾಗಲೋ? ಸಾಮವೈ ಒಪ್ಪಿಸಿದ ಮಣವಾಳಪ್ಪೆರುಮಾಳಿಗೂ ಮೊದಲೇ ಇದು ಇದ್ದಿತೋ?

ಜನರಿಗೆಲ್ಲ ಅಚ್ಚುಮೆಚ್ಚಾದ ವಡವೇಂಗಡವೇನೋ ಯಾವಾಗಲೂ ಉತ್ಸವಗಳಿಗೆ ಪ್ರಸಿದ್ಧವಾದದ್ದು. ಆಳ್ವಾರರ ಹಾಡುಗಳಲ್ಲಿ, ಮಾಮೂಲನಾರರ ಬರಹಗಳಲ್ಲಿ, ಮತ್ತು ಶಿಲಪ್ಪಧಿಕಾರದಲ್ಲಿ ಬೆಟ್ಟದ ಮೇಲೆ ನಡೆಯುತ್ತಿದ್ದ ಉತ್ಸವಗಳ ಉಲ್ಲೇಖವಿದೆ. ಆದರೆ ಈ ಉತ್ಸವಗಳು ಯಾವ ಬಗೆಯವು ಎಂಬುದು ಗೊತ್ತಾಗುವುದಿಲ್ಲ. ಬಹುಮಟ್ಟಿಗೆ ಕಾಡುಜನರ, ಬೇಟೆಗಾರರ ಉತ್ಸವಗಳಿರಬೇಕು. ಆಗೊಮ್ಮೆ ಈಗೊಮ್ಮೆ ಪಕ್ಕದ ಊರುಗಳಿಂದ, ಬೆಟ್ಟದ ಕೆಳಗಿನಿಂದ ಊರ ಜನ ಬಂದು ನೆರೆಯುತ್ತಿದ್ದರೆಂದು ತೋರುತ್ತದೆ. ಪೊಯ್ಗೈ ಆಳ್ವಾರರ ಪಾಶುರವೊಂದರಲ್ಲಿ 'ಪಾರಶಿನಾಳ್' (ಎಂದರೆ

ಮುಕ್ಕೋಟಿದ್ವಾದಶಿ) ಬೆಟ್ಟದ ಮೇಲೆ ವೈಭವದ ಉತ್ಸವ ನಡೆಯುತ್ತಿದ್ದಿತೆಂದೂ, ಅದಕ್ಕಾಗಿ ಬಹುಮಂದಿ ಯಾತ್ರಿಕರು ಸೇರುತ್ತಿದ್ದರೆಂದೂ, ಅವರು ಬರುವಾಗ ಹೂಮಾಲೆಗಳನ್ನೂ ಧೂಪದೀಪಗಳನ್ನೂ ಹೊತ್ತು ತರುತ್ತಿದ್ದರೆಂದೂ ಹೇಳಿದೆ (*ಮೊದಲನೆಯ ತಿರುವಂದಾದಿ, 82*). ಇಂಥ ಉತ್ಸವಗಳು ಸಾಮವೈಗೆ ಸ್ಫೂರ್ತಿಯನ್ನು ಒದಗಿಸಿರಬಹುದು. ಆದರೆ ಈಕೆ ಏರ್ಪಡಿಸಿದ ಉತ್ಸವಗಳು ಮುಖ್ಯವಾಗಿ ಊರ ಜನದ್ದು, ಆಗಮಗಳ ಜಾಡನ್ನು ಹಿಡಿದವು.

ಬೆಟ್ಟದ ಮೇಲೆ ಇಂಥ ಉತ್ಸವಗಳು ನಡೆಯಬೇಕೆಂದರೆ, ಬಹುಸಂಖ್ಯೆಯಲ್ಲಿ ಜನರು ನೆರೆಯಲೂ ಹತ್ತಾರು ದಿನ ಅಲ್ಲಿ ತಂಗಲೂ ಅನುಕೂಲ ಇದ್ದಿರಬೇಕಲ್ಲವೆ? ಎಂದಮೇಲೆ, ಬೆಟ್ಟದ ಊರು ಆ ವೇಳೆಗೆ ಸುಮಾರಾಗಿ ಬೆಳೆದಿರಬೇಕು; ಬೆಟ್ಟವನ್ನೇರಿ ಹೋಗುವ ದಾರಿಯೂ ಸುಮಾರಾಗಿ ಸುಲಭವಾಗಿದ್ದಿರಬೇಕು. ಜನರಿಗೆ ದಾರಿಯ ಆತಂಕ ಅಷ್ಟಾಗಿ ಇದ್ದಿರಲಾರದು. ತಿರುಚ್ಚಾನೂರಿನಿಂದ ಪ್ರತಿನಿಧಿಮೂರ್ತಿಯನ್ನು ಬೆಟ್ಟದ ಮೇಲಕ್ಕೆ ಸಾಗಿಸಿಬಿಟ್ಟರೆಂದೂ, ಜನರ ಒಲವು ಮತ್ತೆ ಬೆಟ್ಟದ ದೈವಕ್ಕೇ ತಿರುಗಿತೆಂದೂ ಊಹಿಸಿಕೊಳ್ಳಬಹುದು. ಈ ಪ್ರತಿನಿಧಿಮೂರ್ತಿಯಾಗಿ ತಿರುಚ್ಚಾನೂರಿನಲ್ಲಿದ್ದುದು ಈಗ ಯಾವುದೋ ಹೇಳಬರುವುದಿಲ್ಲ. ವೇಂಗಡದ ಗುಡಿಯಲ್ಲಿ ಹಲವಾರು ಮೂರ್ತಿಗಳಿವೆ. ಆದರೆ ಹಿಂದಿನಿಂದ ಇಂದಿನವರೆಗೂ ಜನರ ಆಸಕ್ತಿಯನ್ನೂ ಆದರವನ್ನೂ ಸೆಳೆದಿರುವುದು ಮೂಲಮೂರ್ತಿಯೇ. ಉಳಿದ ಯಾವ ಮೂರ್ತಿಗೂ ಅಲ್ಲಿ ಅಷ್ಟು ಪ್ರಾಶಸ್ತ್ಯವಿರದು. ಕಡೆಗೆ ಸಾಮವೈ ಒಪ್ಪಿಸಿದ ಬೆಳ್ಳಿಯ ಮೂರ್ತಿ ಮೂಲವರೆದುರೇ ಇದ್ದರೂ ಜನರ ಕಣ್ಣಿಗೆ ಬೀಳುವುದಿಲ್ಲ.



ನಾಲ್ಕು

ರಾಮಾನುಜರು ಕೈಗೊಂಡ ಕೆಲಸ

ತಿರುಮಲೆ-ನಂಬಿ

ವೇಂಗಡಬೆಟ್ಟದ ಹಿರಿಮೆಯನ್ನು ಕುರಿತು ಆಳ್ವಾರರು ಹಾಡಿ ಹೊಗಳಿದರಷ್ಟೆ? ಅವರಲ್ಲಿ ನಮ್ಮಾಳ್ವಾರರಂತೂ 'ಈ ದೈವವೇ ನಮ್ಮೆಲ್ಲರ ಕುಲದೈವ, ಇದರ ಕೈಂಕರ್ಯವನ್ನು ಕೈಗೊಳ್ಳುವುದೇ ನಮ್ಮೆಲ್ಲರ ಕರ್ತವ್ಯವಾಗಬೇಕು' ಎಂದು ಸಾರಿದರು; 'ಅಡಿಮೈ ಶೆಯ್ಯವೇಂಡುಂ ನಾಂ' ಎಂದರು. ಈ ಕರೆಯು ಕೈಗೂಡಿದುದು ತಿರುಮಲೆ-ನಂಬಿಯ ಬದುಕಿನಲ್ಲಿ.

ಶ್ರೀವೈಷ್ಣವಸಂಪ್ರದಾಯದಲ್ಲಿ ಮೂವರು ಆಚಾರ್ಯರು—ನಾಥಮುನಿಗಳು (ಜನನ ಕ್ರಿಸ್ತಾಬ್ದ 823), ಯಾಮುನರು (ಕ್ರಿಸ್ತಾಬ್ದ 918-1038), ರಾಮಾನುಜರು (ಕ್ರಿಸ್ತಾಬ್ದ 1017-1137). ನಾಥಮುನಿಗಳ ಹಿಂದೆ ಆಚಾರ್ಯರೆಂದು ಹೆಸರಾದವರು ನಮ್ಮಾಳ್ವಾರರು. ಇವರ ವಿಚಾರ ಹಿಂದೆಯೇ ಬಂದಿದೆ. ನಾಥಮುನಿಗಳು ಕುಂಭಕೋಣ ದಲ್ಲಿದ್ದಾಗ ಅಲ್ಲಿನ ಗುಡಿಯಲ್ಲಿ ಯಾರೋ ಗಾಯಕಭಕ್ತರು ನಮ್ಮಾಳ್ವಾರರ ತಿರುವಾಯ್ ಮೋಳಿಯಿಂದ ಹತ್ತು ಪಾಶುರಗಳನ್ನು ಹಾಡಿದಾಗ, ಈ ಪಾಶುರಗಳ ಶಬ್ದಸಂಪತ್ತಿ ಯನ್ನೂ ನಾದಮಾಧುರ್ಯವನ್ನೂ ಭಕ್ತಿಭಾವವನ್ನೂ ಕಂಡು ಮುಗ್ಧರಾಗಿ, ಈ ಆಳ್ವಾರರ ಇತರ ಪಾಶುರಗಳನ್ನು ಸಂಗ್ರಹಿಸುವ ಕೆಲಸದಲ್ಲಿ ತೊಡಗಿದರು. ಅವರ ಶ್ರಮದ, ಪ್ರಯತ್ನದ ಫಲವಾಗಿ ತಿರುವಾಯ್‌ಮೋಳಿ ಉಳಿದುಕೊಂಡಿತು. ಅದರ ಪಾಠವನ್ನೂ ಗಾನಕ್ರಮವನ್ನೂ ಅವರು ನಿಶ್ಚಯಿಸಿದರು. ಅಲ್ಲಿ ಬರುವ ವೇಂಗಡದ ಹಿರಿಮೆಯನ್ನು ನಾಥಮುನಿಗಳು ಅರಿತುಕೊಂಡು, ವೇಂಗಡಬೆಟ್ಟಕ್ಕೆ ಹೋಗಿಬಂದರು. ವೇಂಗಡಕ್ಕೂ ವೈಷ್ಣವ ಆಚಾರ್ಯರಿಗೂ ಸಂಬಂಧ ಒದಗಿದುದು ಹೀಗೆ.

ನಾಥಮುನಿಗಳು ನೆಲೆಸಿದ್ದು ಶ್ರೀರಂಗ(ತಿರುವರಂಗ)ದಲ್ಲಿ. ಅವರ ಕಾಲದಿಂದಲೂ ಅದು ಶ್ರೀವೈಷ್ಣವರ ಕೇಂದ್ರವಾಗಿ ಉಳಿದುಕೊಂಡಿದೆ. ನಾಥಮುನಿಗಳ ಶಿಷ್ಯರಲ್ಲಿ ಒಬ್ಬರಾದ ಮಣಕ್ಕಾಲ್-ನಂಬಿಯ ಪ್ರಭಾವದಿಂದ ಯಾಮುನರು ತಮ್ಮ ಪ್ರಾಪಂಚಿಕ ಸಂಪತ್ತನ್ನೂ ಕಾಮನೆಯನ್ನೂ ಬದಿಗಿರಿಸಿ ಭಗವದ್ಭಕ್ತರಾಗಿ, ನಾಥಮುನಿಗಳ ನಂತರ ಆಚಾರ್ಯರಾದರು. ಇವರು ನಾಥಮುನಿಗಳ ಮೊಮ್ಮಗನೆಂದು ಹೇಳುವುದಿದೆ. ಯಾಮುನರೂ ತಿರುವಾಯ್‌ಮೋಳಿಯನ್ನು ಮೆಚ್ಚಿಕೊಂಡಿದ್ದವರು. ಕೆಲವು ಶಿಷ್ಯರಿಗೆ ಅದನ್ನು ಪಾಠಹೇಳುತ್ತಲೂ ಇದ್ದರು. ಈ ಪಾಠವನ್ನು ಕೇಳುತ್ತಿದ್ದವರಲ್ಲಿ ಅವರ ಮೊಮ್ಮಗ

ತಿರುಮಲೆ-ನಂಬಿ ಒಬ್ಬರು. ವೇಂಗಡದ ವರ್ಣನೆಯ ಘಟ್ಟ ಬಂದಾಗ ತಿರುಮಲೆ-ನಂಬಿ ಭಾವಪರವಶರಾಗಿ, ತಾವು ವೇಂಗಡಬೆಟ್ಟದಲ್ಲೇ ನೆಲೆಸಿ ದೇವರ ಕೈಂಕರ್ಯವನ್ನು ನಡೆಸುವುದಾಗಿ ನಿರ್ಧರಿಸಿದರು. ಯಾಮುನರೂ ವೇಂಗಡಬೆಟ್ಟಕ್ಕೆ ಯಾತ್ರೆ ಹೋಗಿಬಂದಿದ್ದರು. ಅಲ್ಲಿ ದೇವರ ಪೂಜೆಗೆ ನೆರವಾಗಿ ತಮ್ಮವರು ಯಾರಾದರೂ ನಿಲ್ಲಬೇಕೆಂಬ ಬಯಕೆ ಅವರಿಗೂ ಇದ್ದಿತು. ಯಾಮುನರ ಆಶೀರ್ವಾದವನ್ನು ತಳೆದು



ರಾಮಾನುಜರು

ತಿರುಮಲೆ-ನಂಬಿ ವೇಂಗಡಬೆಟ್ಟಕ್ಕೆ ಹೊರಟಾಗ ಅವರಿಗೆ ಹದಿನಾಲ್ಕು-ಹದಿನೈದು ವರ್ಷ ವಯಸ್ಸು ಅಷ್ಟೆ ಎಂದು ಹೇಳುತ್ತಾರೆ.

ಬೆಟ್ಟದ ಮೇಲೆ, ಗೋಪೀನಾಥದೀಕ್ಷಿತನ ಕಾಲದಿಂದಲೂ ವೈಖಾನಸ ಅರ್ಚಕರು ದೇವರ ನಿತ್ಯಾರ್ಚನೆಯನ್ನು ನಡೆಸಿಕೊಂಡು ಬರುತ್ತಿದ್ದರು. ಸಾಮವೈ ಮಾಡಿಸಿಕೊಟ್ಟ ಬೆಳ್ಳಿಯ ಮಣವಾಳಪ್ಪೆರುಮಾಳಿಗೆ ದಿನವೂ ತಿರುಮಂಜನ (ಅಭಿಷೇಕ) ನಡೆಯಬೇಕಾಗಿದ್ದಿತು. ಇದಕ್ಕೆ ನೀರನ್ನು ಮೂರು ಮೈಲಿ ದೂರದ ಪಾಪವಿನಾಶತೀರ್ಥದಿಂದ ಹೊತ್ತು ತರಬೇಕಾಗಿದ್ದಿತು. ಕಾಡಿನ ದಾರಿ ಕಷ್ಟವಾಗಿದ್ದು ಅರ್ಚಕರಿಗೆ ತುಂಬ ತೊಂದರೆಯಾಗುತ್ತಿತ್ತು. ತಿರುಮಲೆ-ನಂಬಿ ಈ ಕೆಲಸವನ್ನು ತಾವು ವಹಿಸಿಕೊಂಡರು. ಮೊದಲು ಪಾಪವಿನಾಶತೀರ್ಥದಿಂದಲೇ ದಿನವೂ ಮುಂಜಾನೆ ಕೊಡ ನೀರನ್ನು ಹೆಗಲ ಮೇಲೆ ಹೊತ್ತು ತರುತ್ತಿದ್ದರು; ಆಮೇಲೆ ಹತ್ತಿರದ ಆಕಾಶಗಂಗೆಯಿಂದ ನೀರನ್ನು ತರುತ್ತಿದ್ದರು. ದೇವರ ಅಲಂಕಾರಕ್ಕೆ ಬೇಕಾಗುವ ಬಗೆಬಗೆಯ ಹೂಗಳನ್ನು ಬೆಳೆಸಲು ನಂದವನವನ್ನೂ ಏರ್ಪಡಿಸಿದರು. ಅವರು ಇರುತ್ತಿದ್ದ ಮನೆಯನ್ನೂ ಈಗಲೂ 'ತಿರುಮಲೆ-ನಂಬಿ ತಿರುಮಾಳಿಗೈ'ಯೆಂದು ಕರೆದು ಗೌರವಿಸುತ್ತಾರೆ. ದಕ್ಷಿಣ ಮಾಡರಸ್ತೆಯಲ್ಲಿ ಉತ್ತರಕ್ಕೆ ಮುಖಮಾಡಿರುವ ಈ ತಿರುಮಾಳಿಗೆ ಕಲ್ಲಿನ ಮಂಟಪ; ಗೋಡೆಗಳು ಮಣ್ಣಿನವು. ಗುಡಿಯಿಂದ ಉತ್ಸವ ಬಿಜಯಮಾಡಿದಾಗ ಮೊದಲು ನಿಲ್ಲುವುದು ಈ ತಿರುಮಾಳಿಗೆಯ ಮುಂದೆಯೇ. ವೇದಪಾರಾಯಣ, ಪ್ರಬಂಧಪಾರಾಯಣಗಳು ಈ ಸ್ಥಳದಿಂದಲೇ ಮೊದಲಾಗಬೇಕೆಂಬ ವಾಡಿಕೆ ನಡೆದುಬಂದಿದೆ. ತಿರುಮಲೆ-ನಂಬಿಯ ಸೋಟ್ಟೈ ಮನೆತನದವರೇ ತಿರುಮಲೆಯ ಗುಡಿಯಲ್ಲಿಯೂ ತಿರುಪತಿಯ ಗುಡಿಗಳಲ್ಲಿಯೂ ಮೊದಲ ಪ್ರಥಮಾಚಾರ್ಯಪುರುಷರೆನಿಸಿದವರು.

ತಿರುಮಲೆ-ನಂಬಿಯ ಸೋದರಿ ಭೂಪ್ಪಿರಾಟ್ಟಿ ಎಂಬಾಕೆಯ ಮಗನೇ ರಾಮಾನುಜಾಚಾರ್ಯರು. ರಾಮಾನುಜರು ತಮ್ಮ ಹರಯದಲ್ಲಿ ಒಂದು ವರ್ಷಕಾಲ ಬೆಟ್ಟದ ಮೇಲೇ ತಂಗಿ, ತಿರುಮಲೆ-ನಂಬಿಯಿಂದ ರಾಮಾಯಣದ ಅಂತರಾರ್ಥವನ್ನು ಅರಿತುಕೊಂಡರು. ಮುಂದೆ ರಾಮಾನುಜರು ಯಾಮುನರ ಕರೆಯನ್ನು ಮನ್ನಿಸಿ ಶ್ರೀರಂಗಕ್ಕೆ ಹೋಗಿ ಶ್ರೀವೈಷ್ಣವಸಮುದಾಯಕ್ಕೆ ಆಚಾರ್ಯರಾಗಿ ಎಂಬೆರುಮಾನಾರ್ (ನಮ್ಮ ಹಿರಿಯರು), ಮತ್ತು ಉಡೈಯವರ್ (ಒಡೆಯರು) ಎಂದು ಕರೆಯಿಸಿಕೊಂಡ ನಂತರ, ಎರಡನೆಯ ಬಾರಿ ವೇಂಗಡಬೆಟ್ಟಕ್ಕೆ ಬಂದರು. ಆಗ ಸೋದರಮಾವನಾದ ತಿರುಮಲೆ-ನಂಬಿ ರಾಮಾನುಜರನ್ನು ಗುಡಿಯ ಮರ್ಯಾದೆಯಿಂದ ಬರಮಾಡಿಕೊಂಡ ನೆಂದು ಕಥೆಯಿದೆ. ತಿರುಮಲೆ-ನಂಬಿ ರಾಮಾನುಜರನ್ನು 'ಮೊಳಕಾಲ ಮುರಿವಬೆಟ್ಟ' ವೆಂಬ ಕಡೆ ಎದುರ್ಗೊಂಡರೆಂದು ಹೇಳುತ್ತಾರೆ. ಇಲ್ಲಿ ದೋವ-ಭಾಷ್ಯಕಾರ ಸನ್ನಿಧಿಯೆಂಬ ಗುಡಿಯನ್ನು ಕಟ್ಟಿಸಿದ್ದಾರೆ. ರಾಮಾನುಜರಿಗೂ ಬೆಟ್ಟದ ಗುಡಿಗೂ ಸಂಪರ್ಕ ಒದಗಿಬಂದ ಬಗೆ ಇದು. ತಿರುಮಲೆ-ನಂಬಿ ಈ ನಂಟಿಗೆ ಕಾರಣರಾದವರು. ತಿರುಮಲೆ ನಂಬಿಯ ಎರಡನೆಯ ಮಗ ತಿರುಕ್ಕುರುಕ್ಕೈಪ್ಪಿರಾನ್-ಪಿಳ್ಳಾನ್ ರಾಮಾನುಜರ 'ಜ್ಞಾನ ಪುತ್ರ'ರೆಂದು ಹೆಸರಾಗಿ ತಿರುವಾಯ್‌ಮೋಳಿಗೆ ವ್ಯಾಖ್ಯಾನವನ್ನು ಬರೆದರು. ಇವರು

ಹುಟ್ಟಿದ್ದು ವೇಂಗಡಬೆಟ್ಟದ ಮೇಲೇ, ಕ್ರಿಸ್ತಾಬ್ದ 1062ರಲ್ಲಿ. ರಾಮಾನುಜರು ಯಾಮುನರ ಮಗ ತಿರುವರಂಗಪ್ಪೆರುಮಾಳ್-ಅರೈಯರ್ ಎಂಬುವರ ಬಳಿ ಪ್ರಬಂಧಗಳನ್ನು ಓದಿದರೆಂದೂ, ಯಾಮುನರು ತಮಗೆ ಮಾಡಿದ ಆದೇಶವನ್ನು ತಮ್ಮ ಜ್ಞಾನಪುತ್ರ ತಿರುಕ್ಕುರುಕ್ಕೈಪ್ಪಿರಾನ್-ಪಿಳ್ಳಾನ್‌ರಿಂದ ಕೈಗೂಡಿಸಿ ತಿರುವಾಯ್‌ಮೋಳಿಗೆ ವ್ಯಾಖ್ಯಾನವನ್ನು ಬರೆಸಿದರೆಂದೂ ಹೇಳುತ್ತಾರೆ.

ಹೀಗೆ ನಮ್ಮಾಳ್ವಾರರು ವೇಂಗಡದಲ್ಲಿ ಕಂಡ ಕನಸು ತಿರುಮಲೆ-ನಂಬಿಯ ಮತ್ತು ರಾಮಾನುಜರ ಕಾಲದಲ್ಲಿ ನನಸಾಯಿತು. ಮೂವರು ಆಚಾರ್ಯರೂ, ಶ್ರೀವೈಷ್ಣವ ಸಮುದಾಯದ ನಾಯಕರೂ ಶ್ರೀರಂಗವನ್ನೇ ತಮ್ಮ ಕಾರ್ಯಕ್ಷೇತ್ರದ ಕೇಂದ್ರವೆಂದು ಬಗೆದುಕೊಂಡಿದ್ದರೂ, ವೇಂಗಡದ ಬಗ್ಗೆ ಅವರಿಗೆಲ್ಲ ವಿಶೇಷವಾದ ಅಭಿಮಾನವಿದ್ದಿತು. ಶ್ರೀರಂಗ, ಕಾಂಚೀಪುರ, ತಿರುವೇಂಗಡ—ಇವು ಮೂರೂ ಅವರ ಸಾಮಾಜಿಕ, ಆಧ್ಯಾತ್ಮಿಕನೆಲೆಗಳಾಗಿದ್ದುವು.

ರಾಮಾನುಜರ ಪ್ರವೇಶ

ಶ್ರೀರಂಗವನ್ನೂ ಅಲ್ಲಿನ ಗುಡಿಯನ್ನೂ ಅದಕ್ಕೆ ಸಂಬಂಧಿಸಿದವರ ಚರಿತ್ರೆಯನ್ನೂ ತಿಳಿಯಹೇಳುವ 'ಕೋಯಿಲ್-ಒಳಗು' ಎಂಬ ತಮಿಳುಗ್ರಂಥ ಬಳಕೆಗೆ ಬಂದಮೇಲೆ, ಅದೇ ಧಾಟಿಯಲ್ಲಿ ವೇಂಗಡದ ಕಥೆಯನ್ನು ಹೇಳುವ 'ತಿರುಮಲೈ-ಒಳಗು' ಎಂಬ ಗ್ರಂಥ ಸಿದ್ಧವಾಯಿತು. ಮಣಿಪ್ರವಾಳಶೈಲಿಯಲ್ಲಿರುವ ಈ ತಮಿಳುಗ್ರಂಥ ಹದಿನಾರನೆಯ ಶತಮಾನದ ಸುಮಾರಿಗೆ ಸಿದ್ಧವಾಯಿತೆಂದು ತೋರುತ್ತದೆ. ಇದರಲ್ಲಿ ರಾಮಾನುಜರ ಕಾಲದಿಂದ ತಿರುವೇಂಕಟ-ರಾಮಾನುಜ-ಜೀಯರ್, ಎಂದರೆ ಕ್ರಿಸ್ತಾಬ್ದ 1544ರ ಸುಮಾರಿಗೆ, ಇಲ್ಲಿನವರೆಗೆ ಇತಿಹಾಸವೆಂಬಂಥ ವಿವರಗಳಿವೆ. ಹೀಗೆಯೇ 'ವೇಂಕಟಾಚಲ-ಇತಿಹಾಸಮಾಲಾ' ಎಂಬ ಸಂಸ್ಕೃತಗ್ರಂಥವೂ ಬಳಕೆಗೆ ಬಂದಿತು. ಇವೆರಡೂ ಗ್ರಂಥಗಳಲ್ಲಿ ಬೆಟ್ಟದ ಮೇಲೆ ರಾಮಾನುಜರು ಮಾಡಿದ ಕೆಲಸಗಳನ್ನು ವಿವರಿಸುವ ಭಾಗವೇ ಪ್ರಧಾನವಾದುದು. ಈ ಗ್ರಂಥಗಳಿಗೆ ಎಷ್ಟರಮಟ್ಟಿನ ಪ್ರಾಮಾಣ್ಯವನ್ನು ಹಚ್ಚಬಹುದೋ ಕಾಣೆವು. ಇತಿಹಾಸದ ವಿವರಗಳು ಹಲವೆಡೆ ದೂರಿಕೊಂಡು ಬಂದರೂ, ಬಹುಮಟ್ಟಿಗೆ ಪ್ರತೀತಿಗಳನ್ನೂ ನಂಬುಗೆಗಳನ್ನೂ ಕಥೆಗಳನ್ನೂ ಅವಲಂಬಿಸಿದಂತೆ ತೋರುತ್ತದೆ. ರಾಮಾನುಜರು ಬೆಟ್ಟದ ಮೇಲೆ ಮಾಡಿದ ಕೆಲಸಗಳನ್ನು ಕುರಿತು ಶಾಸನಗಳು ಯಾವುವೂ ಇಲ್ಲ. ಇದನ್ನು ಉಲ್ಲೇಖಿಸುವ ಇತರ ಪ್ರಾಚೀನಗ್ರಂಥಗಳೂ ಇಲ್ಲ.

ಮೇಲೆ ಹೇಳಿದ ಎರಡು ಗ್ರಂಥಗಳಲ್ಲಿ, ರಾಮಾನುಜರು ಕೈಗೊಂಡ ಕೆಲಸಗಳಲ್ಲಿ ವೇಂಗಡದ ದೈವವು ವೈಷ್ಣವವೆಂದು ನಿರ್ಧರಿಸಿದುದು ಮುಖ್ಯವೆಂದು ಬಂದಿದೆ. ಆ ಕಾಲಕ್ಕೆ ಬೆಟ್ಟದ ದೇವರು ವೈಷ್ಣವವೋ ಶೈವವೋ ಎಂಬ ವಿಚಾರದಲ್ಲಿ ವಿವಾದವಿದ್ದಿತಂತೆ. ದೇವರ ವಿಗ್ರಹದಲ್ಲಿ ಯಾವ ಆಯುಧವೂ ಇರದೆ, ಮೂರ್ತಿಶಿಲ್ಪದಲ್ಲಿ ಖಚಿತವಾದ ಯಾವ ಸಂಕೇತವೂ ಇರದಿರುವುದು ಈ ವಿವಾದಕ್ಕೆ ಎಡೆಮಾಡಿ



ಉತ್ಸವಬೇರ

ಕೊಟ್ಟಿದ್ದಿತು. ವೈಷ್ಣವರು ಇದು ವಿಷ್ಣುಮೂರ್ತಿಯೆಂದೂ ಶೈವರು ಸುಬ್ರಹ್ಮಣ್ಯನೆಂದೂ ಜಗಳವಾಡುತ್ತಿದ್ದರಂತೆ. ಜಗಳದ ತೀರ್ಪಿಗಾಗಿ ಆಗ ಅಲ್ಲಿನ ರಾಜ ಘಟ್ಟಿಗ ಯಾದವರಾಯನು ರಾಮಾನುಜರನ್ನು ಕರೆಯಿಸಿಕೊಂಡನಂತೆ. ರಾಮಾನುಜರು ಬಂದು, ಎರಡೂ ಪಕ್ಷಗಳ ವಾದಗಳನ್ನು ಕೇಳಿ, ಒಂದು ಪರಿಹಾರವನ್ನು ಸೂಚಿಸಿದರು— ನಿತ್ಯಾರ್ಚನೆ ಮುಗಿದ ಮೇಲೆ ರಾತ್ರಿ ದೇವರೆದುರು ಶೈವ ಆಯುಧಗಳನ್ನೂ ವೈಷ್ಣವ ಆಯುಧಗಳನ್ನೂ ಇರಿಸುವುದೆಂದೂ, ಗುಡಿಯ ಬಾಗಿಲನ್ನು ಭದ್ರಪಡಿಸಿ ಕಾಯುವು ದೆಂದೂ, ಬೆಳಗ್ಗೆ ನೋಡಿದಾಗ ದೇವರು ಯಾವ ಆಯುಧಗಳನ್ನು ಧರಿಸಿರುವುದೋ ಅದರ ಆಧಾರದಮೇಲೆ ಮೂರ್ತಿಯ ಶೈವ ಅಥವಾ ವೈಷ್ಣವಸ್ವರೂಪವನ್ನು ನಿರ್ಧರಿಸುವುದೆಂದೂ ಅವರ ಸಲಹೆ. ಇದರಂತೆ ಮರುದಿನ ಬೆಳಗ್ಗೆ ಗರ್ಭಗುಡಿಯ ಬಾಗಿಲನ್ನು ತೆರೆದಾಗ ಮೂರ್ತಿಯ ಕೈಗಳಲ್ಲಿ ಶಂಖ-ಚಕ್ರಗಳಿದ್ದುವಂತೆ. ಮೂರ್ತಿ ವೈಷ್ಣವವೆಂದು ಖಚಿತವಾಯಿತು. ಈ ಕಥೆಯಲ್ಲಿ ಬರುವ ಒಂದು ವಿವರ ಸ್ವಾರಸ್ಯವಾಗಿದೆ. ಆ ರಾತ್ರಿ ಗುಡಿಯ ಬಾಗಿಲನ್ನು ಭದ್ರಪಡಿಸಿರುವಾಗ, ಶೇಷಾಂಶರಾದ

ರಾಮಾನುಜರು ಹಾವಿನ ರೂಪವನ್ನು ತಳೆದು ಗಂಗಾದ್ವಾರದ ಮೂಲಕ (ಎಂದರೆ ಅಭಿಷೇಕ ಮಾಡಿದ ನೀರು ಗರ್ಭಗುಡಿಯಿಂದ ಹೊರಗೆ ಹೋಗುವ ನಾಳದ ಮೂಲಕ) ಗರ್ಭಗುಡಿಯನ್ನು ಯಾರಿಗೂ ತಿಳಿಯದಂತೆ ಹೊಕ್ಕು ದೇವರ ಕೈಗಳಲ್ಲಿ ಶಂಖ-ಚಕ್ರ ಗಳನ್ನು ಮೂಡಿಸಿದರಂತೆ! ಈ ವಿವರ ರಾಮಾನುಜರಿಗೆ ಅಪಚಾರವೆಂದು ಬೇರೆ ಹೇಳಬೇಕೆ?


ಇಂಥ ಕಥೆಗಳನ್ನು ನಾವು ಕಡೆಗಾಣಿಸಿದರೂ, ರಾಮಾನುಜರು ಬೆಟ್ಟಕ್ಕೆ ಬಂದಿದ್ದುದು ದಿಟ; ಅವರ ಪ್ರಭಾವ ಗುಡಿಯ ಸ್ವರೂಪದ ಮೇಲೂ ನಿರ್ವಹಣೆಯ ಮೇಲೂ ಮೂಡಿದುದು ದಿಟ. ರಾಮಾನುಜರ ಸೋದರಮಾವ ತಿರುಮಲೆ-ನಂಬಿ ಬೆಟ್ಟದ ಮೇಲೇ ಇರುತ್ತಿದ್ದುದನ್ನೂ, ರಾಮಾನುಜರು ಅಲ್ಲಿಗೆ ಹೋಗಿ ಅವರ ಬಳಿ ರಾಮಾಯಣದ ಅಂತರಾರ್ಥವನ್ನು ಅರಿತುಕೊಂಡಿದ್ದನ್ನೂ ಈಗಾಗಲೇ ಹೇಳಿದ್ದೇವೆ. ಎರಡನೆಯ ಬಾರಿ ರಾಮಾನುಜರು ಬೆಟ್ಟಕ್ಕೆ ಬಂದುದು ಅವರು ಆಚಾರ್ಯರಾದ ಮೇಲೆ. ಇನ್ನೊಂದು ಬಾರಿಯೂ ಅವರು ಬಂದಿದ್ದಂತೆ ತೋರುತ್ತದೆ. ಮೇಲೆ ಹೇಳಿದ ಕಥೆಗೆ ಏನಾದರೂ ಆಧಾರವಿದೆಯೋ, ಇದ್ದರೆ ರಾಮಾನುಜರು ಎರಡನೆಯ ಬಾರಿ ಬಂದಾಗಲೋ ಮೂರನೆಯ ಬಾರಿ ಬಂದಾಗಲೋ—ಎಂಬುದು ತಿಳಿಯುವುದಿಲ್ಲ. ಎರಡನೆಯ ಬಾರಿ ಬಂದಾಗ ಎಂದು ಪ್ರತೀತಿಯಿದೆ. ಮೂರನೆಯ ಬಾರಿ ಬಂದಾಗ ಅವರಿಗೆ ನೂರೆರಡರ ಮುಪ್ಪೆಂದೂ ಆಗಲೇ ಅವರು ತಿರುಪತಿಯನ್ನು ಸ್ಥಾಪಿಸಿ ಗೋವಿಂದರಾಜನ ಪ್ರತಿಷ್ಠೆಮಾಡಿದರೆಂದೂ ಹೇಳುತ್ತಾರೆ. ಇದು ಹೇಗಾದರೂ ಇರಲಿ. ವಿಗ್ರಹದ ಸ್ವರೂಪದ ಬಗ್ಗೆ ಮತ್ತೆಮತ್ತೆ ಕೋಲಾಹಲ ನಡೆಯುತ್ತಿದ್ದಂತೆ ಸೂಚನೆ. ತಿರುಚ್ಚಾನೂರು ಶೈವಕ್ಷೇತ್ರವಾಗಿ, ಶೈವರ ಪ್ರಾಬಲ್ಯ ಅಲ್ಲಿ ಹೆಚ್ಚಿದಮೇಲೆ, ವೇಂಗಡವು ತಿರುಚ್ಚಾನೂರು ಸಭೈಯಾರರ ಆಡಳಿತಕ್ಕೇ ಒಳಪಟ್ಟಿದ್ದಿತ್ತಾಗಿ ಈ ಗೊಂದಲಕ್ಕೆ ಕಾರಣವಿದ್ದೇ ಇದ್ದಿತು. ತಿರುಚ್ಚಾನೂರಿನಲ್ಲಿ ತಿರುವಿಳಂಕೋಯಿಲ್ ಮತ್ತು ತಿರುಮಂತ್ರ ಶಾಲೆ ಎರಡೂ ಕಣ್ಣುಮುಚ್ಚಿ, ವೈಷ್ಣವರು ತಮ್ಮ ಕೇಂದ್ರವನ್ನು ಬೆಟ್ಟದ ಮೇಲೇ ಒಯ್ದಮೇಲೆ ಇಲ್ಲಿದ್ದ ವಿವಾದ ಬೆಟ್ಟಕ್ಕೂ ಏರಿತು. ಈ ಕೋಲಾಹಲಕ್ಕೆ ಆಧಾರಗಳನ್ನು ಮುಂದೆ ಪರಿಶೀಲಿಸುತ್ತೇವೆ. ತಾತ್ಪರ್ಯ—ಮೂರ್ತಿಯನ್ನು ಖಚಿತವಾಗಿ ವಿಷ್ಣುವೆಂದು ತೀರ್ಮಾನಿಸಿದವರು ರಾಮಾನುಜರು ಎಂದು.

ರಾಮಾನುಜರು ಈ ಸಂದರ್ಭದಲ್ಲಿ ಬೆಟ್ಟಕ್ಕೆ ಬಂದಾಗ ಅಲ್ಲಿ ಒಡೆಯನಾಗಿದ್ದವನು ಘಟ್ಟಿಗ-ಯಾದವರಾಯನೆಂದು ಮೇಲೆ ಹೇಳಿದ ಗ್ರಂಥಗಳಲ್ಲಿ ಬರುತ್ತದೆ. ನಾರಾಯಣ ವರದಲ್ಲಿ ಅವನು ಇರುತ್ತಿದ್ದುದಾಗಿಯೂ ಇಮ್ಮಡಿ ಕುಲೋತ್ತುಂಗಚೋಳನ ಅಧೀನನಾಗಿ ಆಳುತ್ತಿದ್ದುದಾಗಿಯೂ ವಿವರಗಳಿವೆ. ಚೋಳರಾಜರು ಶೈವಪಕ್ಷಪಾತಿಗಳು. ಅವರ ಒತ್ತಾಸೆಯಿಂದ ತಿರುಚ್ಚಾನೂರಿನಲ್ಲಿ ತಿಪ್ಪಲಾದೀಶ್ವರ (ಪರಾಶರೇಶ್ವರ) ದೇವಾಲಯ ಪ್ರಸಿದ್ಧವಾಯಿತು. ತಿರುಪತಿಗೆ ಪೂರ್ವದಿಕ್ಕಿನಲ್ಲಿ ಇಪ್ಪತ್ತು ಮೈಲಿಗಳಷ್ಟು ದೂರವಿರುವ ಕಾಳಹಸ್ತಿ (ತಿರುಕ್ಕಾಳತ್ತಿಉಡೈಯಾರ್) ದೊಡ್ಡ ಕ್ಷೇತ್ರವಾಯಿತು. ಮೊದಲನೆಯ ರಾಜರಾಜನಿಗೆ 'ಶಿವಪಾದಶೇಖರ'ನೆಂಬ ಬಿರುದೇ ಇದ್ದಿತು. ಈಗ ತಿರುಚ್ಚಾನೂರಿಗೆ

ದಕ್ಷಿಣದಲ್ಲಿ ಸ್ವರ್ಣಮುಖೀನದಿಯ ದಂಡೆಯ ಮೇಲಿರುವ ಮೂಡ್ಲಪೂಡಿ, ಅವನ ಹೆಸರಿನಲ್ಲಿ ಶಿವಪಾದಶೇಖರನಲ್ಲೂರು ಎಂದು ಹೆಸರಾಗಿದ್ದಿತು. ಚೋಳರಾಜರ ಶಾಸನಗಳು 'ಶ್ರೀಮಾಹೇಶ್ವರರಕ್ಷೈ' ಎಂದು ಮುಗಿಯುವುದು ವಾಡಿಕೆಯಾಯಿತು. ಹೀಗಿದ್ದರೂ ಅವರು ವೈಷ್ಣವವಿರೋಧಿಗಳಾಗಿದ್ದರೆನ್ನುವುದಕ್ಕೆ ಸಾಕಷ್ಟು ಆಧಾರವಿಲ್ಲ; ಸಾಮವೈ-ಶಾಸನವೇ ನಿದರ್ಶನ. ಈ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿರುವ ಕೋಪ್ಪಾತ್ರ-ಮಹೇಂದ್ರ-ಪನ್ಮಾರ್ (ಇಮ್ಮಡಿ ಪರಾಂತಕ, ಸುಂದರಚೋಳ)ನ ಅಧೀನನಾಗಿದ್ದವನು. ಮೊದಲನೆಯ ರಾಜರಾಜನು (ಪಟ್ಟವೇರಿದ ವರ್ಷ ಕ್ರಿಸ್ತಾಬ್ದ 985) ತಂಜಾವೂರಿನಲ್ಲಿ ಬೃಹದೀಶ್ವರದೇವಾಲಯವನ್ನು ಕಟ್ಟಿಸಿದವನು; 'ಶಿವಪಾದಶೇಖರ'ನೆಂಬ ಬಿರುದನ್ನು ಹೊತ್ತಿದ್ದವನು; ಹಲವಾರು ಶಿವಾಲಯಗಳನ್ನು ಊರ್ಜಿತಗೊಳಿಸಿದವನು. ಆದರೂ ಅವನ ಹೆಂಡತಿ ಉಲಗಮಾದೇವಿ (ಲೋಕಮಹಾದೇವಿ, ದಂತಿಶಕ್ತಿವಿಟಂಕಿ) ವೇಂಗಡದ ದೇವರಿಗೆ ನಂದಾವಿಳಕ್ಕು (ನಂದಾದೀಪ) ಉರಿಯುವ ವ್ಯವಸ್ಥೆ ಮಾಡಿದಳು. ಈ ಶಾಸನ, ಬೆಟ್ಟದ ಮೇಲಿನ ಗುಡಿಯ ಮುಕ್ಕೋಟಿ ಪ್ರದಕ್ಷಿಣೆಯಲ್ಲಿ ಪಶ್ಚಿಮದ ಗೋಡೆಯ ಮೇಲಿದೆ. ಇದೇ ರಾಜನು ಪಟ್ಟಕ್ಕೆ ಬಂದು ಹದಿನಾರು ವರ್ಷಗಳಾದಮೇಲೆ ಇಮ್ಮಡಿ ಪರಾಂತಕನ ರಾಣಿ (ಚೇರರಾಜನ ಮಗಳು, 'ಚೇರ್‌ಮನಾಳ್ ಮಗಳಾರ್') ಪರಾಂತಕ-ದೇವಿ-ಅಮ್ಮನ್ ವೇಂಗಡದ ದೇವರಿಗೆ ಆರು ಮಾಣಿಕ್ಯಗಳನ್ನೂ ನಾಲ್ಕು ವಜ್ರಗಳನ್ನೂ ಇಪ್ಪತ್ತೆಂಟು ಮುತ್ತುಗಳನ್ನೂ ಮೂಡಿಸಿ, ಐವತ್ತೆರಡು ಕಳಂಜು ತೂಕದ ಬಂಗಾರದಲ್ಲಿ ಮಾಡಿಸಿದ 'ಪಟ್ಟಂ' (ಎಂದರೆ ತಲೆಯ ಮೇಲೆ ಕಟ್ಟುವ ಪಟ್ಟಿ)ಯನ್ನು ಒಪ್ಪಿಸಿದ ಶಾಸನವು ಗುಡಿಯ ಮೊದಲ ಪ್ರಾಕಾರದಲ್ಲೇ ಇದೆ. ರಾಜರು ವೇಂಗಡದೈವನ ವಿರೋಧಿಗಳಾಗಿರಲಿಲ್ಲವೆನ್ನುವುದಕ್ಕೆ ಇನ್ನೇನು ಬೇಕು? ಅವರ ಆದರವೇನೂ ಅಷ್ಟಾಗಿ ಇರಲಿಲ್ಲ , ನಿಜ.

ಯಾದವರಾಯರು

ಚೋಳರ ಆಡಳಿತದಲ್ಲಿ ಅವರಿಗೆ ಅಧೀನರಾಗಿ ತೊಂಡಮಂಡಲವನ್ನಾಳುತ್ತಿದ್ದ ಯಾದವರಾಯರು ಬೆಟ್ಟದ ದೈವಕ್ಕೆ ಭಕ್ತಿಯಿಂದ ನಡೆದುಕೊಂಡವರು; ವೈಷ್ಣವ ಪಕ್ಷಪಾತಿಗಳೆಂದರೂ ಸಲ್ಲುತ್ತದೆ. ಆದರೆ ಅವರು ಕಾಳಹಸ್ತಿಯ ದೇವರಿಗೂ ನಡೆದು ಕೊಳ್ಳುತ್ತಿದ್ದರೆನ್ನಿ. ಇವರ ಕಾಲದಲ್ಲಿ ತೊಂಡಮಂಡಲವನ್ನು 'ಜಯನ್‌ಕೊಂಡ ಚೋಳ ಮಂಡಲ'ವೆಂದು ಕರೆಯುತ್ತಿದ್ದರು; ಜಯನ್‌ಕೊಂಡ-ಚೋಳನೆಂದರೆ ಮೊದಲನೆಯ ರಾಜರಾಜ. ಈ ಮಂಡಲದ ಹರವು ಈಗಿನ ಚಿತ್ತೂರು ಮತ್ತು ನೆಲ್ಲೂರು ಜಿಲ್ಲೆಗಳ ಕೆಲವು ತಾಲೂಕುಗಳನ್ನೊಳಗೊಂಡಿದ್ದಿತು (ಮುಖ್ಯವಾಗಿ ವೇಂಕಟಗಿರಿ, ಚಂದ್ರಗಿರಿ, ಕಾಳಹಸ್ತಿ, ತಿರುಪತಿ). ಯಾದವರಾಯರಲ್ಲಿ ಘಟ್ಟಿಗ ಅಥವಾ ಘಟ್ಟಿದೇವನೆಂಬುವನ ಕಾಲ ಇಮ್ಮಡಿ ಕುಲೋತ್ತುಂಗ ಚೋಳನ ಕಾಲಕ್ಕೆ (ಕ್ರಿಸ್ತಾಬ್ದ 1123-1146) ಸಮನಾಗಿದ್ದರೆ ರಾಮಾನುಜರ ಮುಪ್ಪಿನಲ್ಲಿ ಇವನು ರಾಜನಾಗಿದ್ದಿರಬೇಕು. ಅವನ ಕಾಲದಲ್ಲಿ



ಗರುಡನ ಆಲಯ

ರಾಮಾನುಜರು ಬೆಟ್ಟವನ್ನೇರಿ ಬಂದಿರುವುದು ಸಾಧ್ಯ. ಆದರೆ ಶೈವರಿಗೂ ವೈಷ್ಣವರಿಗೂ ನಡೆದ ವಿವಾದದಲ್ಲಿ ತೀರ್ಪಿಗಾಗಿ ಈ ರಾಜನು ರಾಮಾನುಜರನ್ನು ಕರೆಸಿಕೊಂಡಿದ್ದನೆಂಬ ಕಥೆಗೆ ಆಧಾರವಿಲ್ಲ. ಶೈವರಿಗೂ ವೈಷ್ಣವರಿಗೂ ಬೆಟ್ಟದ ಮೇಲೆ ಯಾವ ಕಾಲದಲ್ಲಾಗಲೀ ವಿವಾದ ನಡೆಯಿತೆಂಬುದು ಯಾವ ಶಾಸನದಲ್ಲೂ ನೇರವಾಗಿಯಾಗಲೀ ಓರೆಯಾಗಿ ಯಾಗಲೀ ಕಾಣಿಸುವುದಿಲ್ಲ. ಶತಮಾನಗಳನಂತರ ತಲೆಯೆತ್ತಿಕೊಂಡ ಕಲ್ಪನೆ ಇದು.

ರಾಮಾನುಜರು ಬದುಕಿದ್ದಾಗ ಚೋಳರಾಜರಾಗಿದ್ದವರು ಮೊದಲನೆಯ ರಾಜೇಂದ್ರಚೋಳ (ಗಂಗೈಕೊಂಡಚೋಳ, ಕ್ರಿಸ್ತಾಬ್ದ 1011-1045), (ಎಂದರೆ ಮೊದಲನೆ ರಾಜರಾಜನ ಹಿರಿಯ ಮಗ), ಮೊದಲನೆಯ ರಾಜಾಧಿರಾಜ (ಜಯಂ ಗೊಂಡಚೋಳ, ಕ್ರಿಸ್ತಾಬ್ದ 1018-1052), ಇಮ್ಮಡಿ ರಾಜೇಂದ್ರಚೋಳ ಅಥವಾ ಮೊದಲನೆಯ ಕುಲೋತ್ತುಂಗಚೋಳ, (1070-1122), ಮತ್ತು ಇಮ್ಮಡಿ ಕುಲೋತ್ತುಂಗ

ಚೋಳ (1123-1146). ಇವರೆಲ್ಲ ಶೈವಪಕ್ಷಪಾತಿಗಳಾದರೂ, ವೈಷ್ಣವವಿರೋಧಿಗಳೆಂಬ ಸೂಚನೆ ಶಾಸನಗಳಲ್ಲಿ ಕಾಣಬರುವುದಿಲ್ಲ.


ನಿದರ್ಶನಗಳು ಅವರು ವೈಷ್ಣವವಿರೋಧಿಗಳಾಗಿರಲಿಲ್ಲವೆಂದೇ ಸ್ಪಷ್ಟಪಡಿಸುತ್ತವೆ. ಮೊದಲನೆಯ ರಾಜೇಂದ್ರಚೋಳನು ಪಟ್ಟವೇರಿದ ಏಳನೆಯ ದಿನವೇ, ವೇಂಗಡದ ಗುಡಿಯಲ್ಲಿ ಕರ್ತವ್ಯಲೋಪವೊಂದರ ವಿಚಾರಣೆ ನಡೆಯಿತು. ದೇವರೆದುರು ಇಪ್ಪತ್ತನಾಲ್ಕು ದೀಪಗಳನ್ನು ಉರಿಸುವಂತೆ ಭಕ್ತರು ವ್ಯವಸ್ಥೆಮಾಡಿ ಅದಕ್ಕೆ ಸಾಕಾಗುವ ಹಣವನ್ನು ತಿರುಮುಂಡಿಯಂ ಸಭೈಯಾರರ ವಶಕ್ಕೆ ಒಪ್ಪಿಸಿದ್ದರು. ಆದರೆ ಗುಡಿಯಲ್ಲಿ ಎರಡೇ ದೀಪಗಳು ಉರಿಯುತ್ತಿದ್ದುವು. ಈ ಆಪಾದನೆ ಮೂಡಿಕೊಂಡಾಗ, ರಾಜನ ಆಣತಿಯಂತೆ ಕೊರ್ರಮಂಗಲ-ಮುಡೈಯಾನ್ ಎಂಬ ಅಧಿಕಾರಿಯು ಸಭೈಯಾರರನ್ನೂ ಗುಡಿಯ ಅರ್ಚಕರನ್ನೂ ಕರೆಸಿ ವಿಚಾರಣೆ ನಡೆಸಿ, ಸಭೈಯಾರರು ತಪ್ಪಿತಸ್ಥರೆಂದು ನಿರ್ಧರಿಸಿದನು. ದೀಪದಾನಕ್ಕೆಂದು ಅವರಲ್ಲಿಟ್ಟ ಮೂಲನಿಧಿಯನ್ನೂ ಗುಡಿಯ ನಿಧಿಯನ್ನೂ ಗುಡಿಯ ಭಂಡಾರಕ್ಕೇ ಸಲ್ಲಿಸತಕ್ಕುದೆಂದೂ, ನಂದಾವಿಳಕ್ಕು ಮತ್ತು ಕರ್ಪೂರವಿಳಕ್ಕು ಸೇರಿಸಿ ಎಲ್ಲ ದೀಪಗಳನ್ನೂ ಸೂರ್ಯಚಂದ್ರರಿರುವರೆಗೂ ದೇವರೆದುರು ಉರಿಸತಕ್ಕುದೆಂದೂ ತೀರ್ಪನ್ನಿತ್ತು, ಈ ದಾನಕ್ಕೆ ಅಗತ್ಯವಾದ ತುಪ್ಪವನ್ನು ತಿರುಚ್ಚಾನೂರಿನಿಂದ ತಿರುಮಲೆಯ ಗುಡಿಗೆ ಒಯ್ಯುವ ವ್ಯವಸ್ಥೆಯನ್ನೂ ಮಾಡಿದನು. ಇದರ ವಿಚಾರವಾಗಿ ವಿವರವಾದ ಶಾಸನವು ಗುಡಿಯ ಮೊದಲ ಪ್ರಾಕಾರದ ಉತ್ತರ ಗೋಡೆಯ ಮೇಲಿದೆ. ಮೊದಲನೆಯ ಕುಲೋತ್ತುಂಗ ಚೋಳನು (ರಾಜಕೇಸರಿ ಪನ್ಮಾರ್) ತಿರುಮಲೆಯ ದೇವರಿಗೆ ಹಾಲು-ಮೊಸರುಗಳ ಸೇವೆಯನ್ನು ಸಲ್ಲಿಸಿದ ಶಾಸನವೂ ಗುಡಿಯಲ್ಲಿದೆ.

ರಾಮಾನುಜರಿಗೆ ಚೋಳರಾಜರಿಂದ ಆತಂಕ ಒದಗಿತು ಎಂಬಂತೆಯೇ ಬೆಟ್ಟದ ಮೇಲೆ ಶೈವ-ವೈಷ್ಣವ ವಿರಸವಿದ್ದಿತು ಎಂಬುದೂ ಬರಿಯ ಕಥೆಯೆಂದು ತೋರುತ್ತದೆ. ಇವೆರಡು ಪ್ರಸಂಗಗಳಿಗೂ ಇತಿಹಾಸದ ಆಧಾರ ಸಾಲದು. ಮತಧರ್ಮಗಳ ಛಲ ಹದಿನಾಲ್ಕು-ಹದಿನೈದನೆಯ ಶತಮಾನಗಳಲ್ಲಿ ಹೆಚ್ಚಾದಾಗ ಇಂಥ ಕಥೆಗಳು ಮೂಡಿ ಕೊಂಡಿರಬೇಕು. ಆದರೆ ಬೆಟ್ಟದ ಮೇಲೆ ರಾಮಾನುಜರಿಗೆ ವಿರೋಧವಿರಲಿಲ್ಲ ಎನ್ನಲಾಗುವುದಿಲ್ಲ ; ಅವರು ಅಲ್ಲಿ ಕೈಗೊಂಡ ಕೆಲಸಗಳೆಲ್ಲ ಕೈಗೂಡಿದುವು ಎನ್ನಲೂ ಸಾಧ್ಯವಿಲ್ಲ. ನಿದರ್ಶನಕ್ಕೆ, ರಾಮಾನುಜರು ಪಾಂಚರಾತ್ರಪೂಜಾವಿಧಾನಕ್ಕೆ ಮನವೊಲಿದಿದ್ದವರು; ಅವರ ಸಂಬಂಧವಿದ್ದ ಎಲ್ಲ ದೇವಾಲಯಗಳಲ್ಲೂ ಇದೇ ಪೂಜಾಪದ್ಧತಿಯನ್ನು ಬಳಕೆಗೆ ತಂದರೆಂದು ಹೇಳಬಹುದು. ಆದರೆ ಬೆಟ್ಟದ ಮೇಲೆ ತುಂಬ ಹಿಂದಿನಿಂದ ಬಳಕೆಯಲ್ಲಿದ್ದುದು ವೈಖಾನಸಸಂಪ್ರದಾಯದ ಪೂಜೆ. ರಾಮಾನುಜರು ಇದನ್ನು ಬದಲಿಸಲು ಪ್ರಯತ್ನಿಸಿರಬೇಕು, ಆದರೆ ಸಫಲರಾಗಲಿಲ್ಲ. ಇಂದಿಗೂ ವೈಖಾನಸಪೂಜೆಯೇ ಇಲ್ಲಿ ನಡೆಯುತ್ತಿರುವುದು. ಅವರ ಸೋದರಮಾವ ತಿರುಮಲೆ-ನಂಬಿ ಅಲ್ಲಿನ ಪೂಜಾಪದ್ಧತಿಯಲ್ಲಿ ಕೈ ಹಾಕಲಿಲ್ಲ ; ತಿರುಮಂಜನಕ್ಕೆ ನೀರು ತರುವ ತಮ್ಮ ಕೆಲಸದಿಂದ ತೃಪ್ತರಾದರು. ಮುಂದೆ ಬೆಟ್ಟದ ಗುಡಿಯಲ್ಲಿ ರಾಮಾನುಜರ,

ಅವರ ಅನುಯಾಯಿಗಳ, ಅವರ ಕೆಲವು ಪ್ರಕ್ರಿಯೆಗಳ ಪ್ರಭಾವ ವಿಶೇಷವಾಗಿ ಒದಗಿತು; ಆದರೆ ವೈಖಾನಸಪೂಜೆ ಕದಲಲಿಲ್ಲ. ಹಾಗೆಯೇ ಆಳ್ವಾರರ ಸನ್ನಿಧಿ, ರಾಮಾನುಜರಿಗೆ ಪ್ರಿಯವಾಗಿದ್ದುದು, ಅಲ್ಲಿ ಸೇರಲಿಲ್ಲ. ಪ್ರಬಂಧಪಾರಾಯಣ ಅವರ ಕಾಲದಲ್ಲಿ ಅಲ್ಲಿ ನಡೆಯುವುದಾಗಲಿಲ್ಲ.

ದೇವರಿಗೆ ವೈಷ್ಣವದೀಕ್ಷೆ

ಹೀಗೆ ರಾಮಾನುಜರಿಗೆ ಬೆಟ್ಟದ ಗುಡಿಯಲ್ಲಿ ಸ್ವಲ್ಪ ವಿರೋಧವಿದ್ದಿತಾದರೂ ಅವರು ಅಲ್ಲಿ ಮಾಡಿದ ಕೆಲಸ ಬಹುಮುಖವಾದುದು, ಗುಡಿಯ ಪ್ರಖ್ಯಾತಿ ಹಿಗ್ಗಲು ನೆರವಾದುದು. 'ತಿರುಮಲೈಒಳಗು'ವಿನಲ್ಲಿ ರಾಮಾನುಜರು ಇಲ್ಲಿ ಕೈಗೊಂಡ ಕೆಲಸಗಳ ಪಟ್ಟಿ ಬರುತ್ತದೆ. ದೈವವನ್ನು ವಿಷ್ಣುವಿನ ಅರ್ಚಾಮೂರ್ತಿಯೆಂದು ತೀರ್ಮಾನಿಸಿದುದು;



ಬಂಗಾರಬಾಗಿಲು

ದೇವರ ಕೈಗಳಿಗೆ ಶಂಖ-ಚಕ್ರಗಳನ್ನು ಅಳವಡಿಸಿದುದು; ಮೂರ್ತಿಯ ವಕ್ಷಃಸ್ಥಲದಲ್ಲಿ ಅಲರ್‌ಮೇಲ್‌ಮಂಗೈ ಎಂಬ ವ್ಯೂಹಲಕ್ಷ್ಮಿಯ ಪ್ರತೀಕವನ್ನು ಮೂಡಿಸಿದುದು; ಗರ್ಭಗುಡಿಯ ಮೇಲಿರುವ ಆನಂದನಿಲಯವೆಂಬ ವಿಮಾನದ ನಾಲ್ಕೂ ಕಡೆ

ಆಗಮಕ್ಕನುಸಾರವಾಗಿ ವರಾಹ, ನರಸಿಂಹ, ವೈಕುಂಠನಾಥ ಮತ್ತು ವೇಂಕಟೇಶರನ್ನು ನಿಲ್ಲಿಸಿದುದು; ಅನಂತ, ಗರುಡ, ವಿಷ್ವಕ್ಸೇನ ಮತ್ತು ದ್ವಾರಪಾಲಕರನ್ನು ಅವರವರ ಸ್ಥಾನಗಳಲ್ಲಿ ಮೂಡಿಸಿದುದು; ಶುಕ್ರವಾರದ ಅಭಿಷೇಕ(ತಿರುಮಂಜನ)ವನ್ನು ವ್ಯವಸ್ಥೆ ಮಾಡಿದುದು; ಮೂರ್ತಿಯ ಹಣೆಯಲ್ಲಿ ಮೇಲೆ ಊರ್ಧ್ವಪುಂಡ್ರವನ್ನು ಹಚ್ಚುವ ಬಳಕೆಯನ್ನು ತಂದುದು; ಉಗ್ರಶ್ರೀನಿವಾಸರೆಂಬ ಉತ್ಸವಮೂರ್ತಿಗೆ ಬದಲಾಗಿ ಮಲಯಪ್ಪನೆನಿಸಿಕೊಳ್ಳುವ ಈಗಿನ ಉತ್ಸವಮೂರ್ತಿಯನ್ನು ದೇವಿಯರೊಡನೆ ಬಳಕೆಗೆ ತಂದುದು; ಪಾರಮೇಶ್ವರಸಂಹಿತೆಯಲ್ಲಿ ಹೇಳಿರುವಂತೆ ದೇವರ ನಿತ್ಯಾರ್ಚನೆಯನ್ನು ಏಕಾಂಗಿಯ ನೆರವಿನಿಂದ ನಿರ್ವಹಿಸಲು ಶ್ರೀವೈಷ್ಣವಸಂನ್ಯಾಸಿಯೊಬ್ಬರನ್ನು ನೇಮಿಸಿದುದು; ತಿರುಚ್ಚಾನೂರಿನಲ್ಲಿ ನಡೆಯುತ್ತಿದ್ದ ಬ್ರಹ್ಮೋತ್ಸವವನ್ನು ಬೆಟ್ಟದ ಮೇಲೆ ನಡೆಯುವಂತೆ ಏರ್ಪಡಿಸಿದುದು; ನಂದವನವನ್ನು ಪ್ರೋತ್ಸಾಹಿಸಿದುದು—ಇವೆಲ್ಲ ಈ ಪಟ್ಟಿಯಲ್ಲಿ ಸೇರಿವೆ. ಇವುಗಳಲ್ಲಿ ಎಷ್ಟು ರಾಮಾನುಜರ ಕಾಲದಲ್ಲೇ ಆದುವೋ ಸ್ಪಷ್ಟವಾಗುವುದಿಲ್ಲ. ಕೆಲವು ವಿವರಗಳನ್ನು (ಆನಂದನಿಲಯವಿಮಾನ, ಶುಕ್ರವಾರದ ತಿರುಮಂಜನ, ಊರ್ಧ್ವಪುಂಡ್ರ, ವ್ಯೂಹಲಕ್ಷ್ಮಿ ಮೊದಲಾದುವು) ಪ್ರತ್ಯೇಕವಾಗಿ ಮತ್ತೆ ಎತ್ತಿಕೊಳ್ಳಬೇಕಾಗುತ್ತದೆ.

ಬೆಟ್ಟದ ದೇವರನ್ನು ವಿಷ್ಣುವೆಂದು ನಿರ್ಧರಿಸಿದವರು ಅವರೇ ಎನ್ನುವುದು ಅಷ್ಟು ಸರಿಯಾಗುವುದಿಲ್ಲ. ಅವರ ಕಾಲಕ್ಕೆ ಬಹುಮುಂಚೆಯೇ ಅದು ವಿಷ್ಣುವಿನ ಅರ್ಚಾವತಾರವೆಂದು ಪ್ರಖ್ಯಾತವಾಗಿದ್ದಿತು; ಆಳ್ವಾರರೆಲ್ಲ ಈ ಮೂರ್ತಿಯನ್ನು ಹೀಗೆಯೇ ಬಗೆದಿರುವುದು. ಶಿಲಪ್ಪದಿಕಾರದಲ್ಲಿಯೇ ವೇಂಗಡವು ವಿಷ್ಣುವಿನ ಬೆಟ್ಟ (**ನೇಡಿಯೋನ್ ಕುನ್ರಂ**) ಎಂಬ ವರ್ಣನೆಯಿದೆ. ಈ ವಿಚಾರವಾಗಿ ಯಾವ ಕಾಲಕ್ಕೂ ಯಾರಿಗೂ ಸಂದೇಹ ವಿದ್ದಂತೆ ತೋರುವುದಿಲ್ಲ. ರಾಮಾನುಜರ ಕಾಲಕ್ಕೆ ತಿರುಚ್ಚಾನೂರಿನಲ್ಲಿ ಬಲಗೊಳ್ಳುತ್ತಿದ್ದ ಶೈವಪಕ್ಷಪಾತಿಗಳು ಕೂಡ ವೇಂಗಡವನ್ನು ತಮ್ಮ ಕ್ಷೇತ್ರವೆಂದು ಬಗೆದಿದ್ದರ ಸೂಚನೆ ಎಲ್ಲೂ ಕಾಣುವುದಿಲ್ಲ. ರಾಮಾನುಜರ ಸೋದರಮಾವ ತಿರುಮಲೆ-ನಂಬಿಯೇ ಗುಡಿಯಲ್ಲಿ ಕೆಲಸಮಾಡುತ್ತಿದ್ದರೆಂದಮೇಲೆ ಅದು ವಿಷ್ಣುಕ್ಷೇತ್ರವಲ್ಲವೆಂದು ಯಾರು ಬಗೆದಿದ್ದಾರು? ಮೂರ್ತಿಯ ಪ್ರತಿಮಾಲಕ್ಷಣದಲ್ಲಿ ಕೆಲವು ಅವೈಷ್ಣವವೆನ್ನಬಹುದಾದ ವಿವರಗಳಿವೆ, ನಿಜ; ಪೂಜಾಪದ್ಧತಿಯಲ್ಲಿಯೂ ಅಂಥವೇ ಕೆಲವು ವಿವರಗಳಿವೆ. ಇವುಗಳ ವಿಚಾರವಾಗಿ ನಾವು ಮತ್ತೊಂದೆಡೆ ಹೇಳಬೇಕಾದುದಿದೆ. ಆದರೆ ಇಷ್ಟರಿಂದ ಶೈವರು ಈ ವಿಗ್ರಹವನ್ನು ತಮ್ಮದೆಂದುಕೊಂಡು ವೈಷ್ಣವರೊಂದಿಗೆ ಸೆಣೆಸಿದರೆನ್ನುವುದು ತಪ್ಪು. ಇಂಥ ವಿರಸ ಇದ್ದುದಕ್ಕೆ ಯಾವ ಆಧಾರವೂ ದೊರೆಯುವುದಿಲ್ಲ. ರಾಮಾನುಜರು ಈ ಮೂರ್ತಿ ವಿಷ್ಣುವೆಂದು ನಿರ್ಧರಿಸಬೇಕಾದ ಅಗತ್ಯವಿರಲಿಲ್ಲ. ಶಂಖ-ಚಕ್ರಗಳು ದೇವರ ಕೈಗಳಲ್ಲಿದ್ದುದೂ ತುಂಬ ಹಿಂದಿನ ಮಾತು; ಆಳ್ವಾರರ ಪಾಶುರಗಳಲ್ಲಿಯೇ ಇದೆ. ರಾಮಾನುಜರು ಹೊಸದಾಗಿ ಶಂಖ-ಚಕ್ರಗಳನ್ನು ಮೂಡಿಸಬೇಕಾಗಿರಲಿಲ್ಲ.

ನಂದವನಗಳು

ಬೆಟ್ಟದ ಮೇಲೆ ಹೂದೋಟವನ್ನು (ನಂದವನವನ್ನು) ರಾಮಾನುಜರ ಸೋದರ ಮಾವ ತಿರುಮಲೆ-ನಂಬಿಯೇ ಏರ್ಪಡಿಸಿಕೊಂಡಿದ್ದರು; ಇದು ಯಾಮುನರ ಸೂಚನೆ ಎಂದೂ ಹೇಳುವುದಿದೆ. ಬೆಟ್ಟದ ಈ ದೇವರನ್ನು ಹೂಮಾಲೆಗಳಿಂದ ಅಲಂಕರಿಸುವ ಪದ್ಧತಿ ತುಂಬ ಹಳೆಯದು. ಹತ್ತಾರು ಹೂದೋಟಗಳು ನಂಬಿಗಳ ಕಾಲಕ್ಕೆ ಮೊದಲೇ ಇದ್ದಿರಬಹುದು. ತಿರುಮಲೆ-ನಂಬಿ ಬದುಕಿದ್ದಾಗ, ರಾಮಾನುಜರು ಎರಡು ಬಾರಿ ಬೆಟ್ಟದ ಮೇಲೆ ಬಂದಿದ್ದರೆಂದು ಪ್ರತೀತಿ. ಅವರು ಬಂದಾಗ ನಂಬಿಯ ನಂದವನ ಚೆನ್ನಾಗಿಯೇ ಇದ್ದಿರಬೇಕು. ರಾಮಾನುಜರು ಮೂರನೆಯ ಬಾರಿ ಬಂದಾಗ, ನಂದವನವನ್ನು ನೋಡಿಕೊಳ್ಳುವವರಿಲ್ಲದೆ ಹಾಳಾಗಿದ್ದಿರಬಹುದು. ತಿರುಮಲೆ-ನಂಬಿಯ ಮೊಮ್ಮಗ ತೋಳಪ್ಪ-ತಾತಾಚಾರ್ಯನನ್ನು ರಾಮಾನುಜರು ನಂದವನವನ್ನು ಮತ್ತೆ ಊರ್ಜಿತಗೊಳಿಸಿ ದೇವರಿಗೆ ಹೂಗಳನ್ನು ಒಪ್ಪಿಸುವಂತೆ ಏರ್ಪಣೆ ಮಾಡಿದರೆಂದು ವಿವರವಿದೆ. ರಾಮಾನುಜರು ತಮ್ಮ ಶಿಷ್ಯ ಅನಂತಸೂರಿ (ಆನಂದಾಳ್ವಾನ್) ಎಂಬುವನನ್ನೂ ಬೆಟ್ಟದ ಮೇಲೇ ನಿಂತು ಹೂದೋಟವನ್ನು ಮಾಡುವಂತೆ ನೇಮಿಸಿದರು.

ಮುಂದೆ ನಂದವನಗಳ ಸಂತಾನ ಹೆಚ್ಚಿತು. ಬರುಬರುತ್ತ ಗುಡಿಯಲ್ಲಿ ಉತ್ಸವಗಳು ಹೆಚ್ಚಿದುವು; ಉತ್ಸವಮೂರ್ತಿಗಳು ಹೆಚ್ಚಿದುವು. ಬೆಟ್ಟದ ದೇವರಿಗೆ ಹೂಗಳ ಅಲಂಕಾರವೇ ಪ್ರಿಯವೆಂದು ಮೊದಲೇ ಹೇಳಿದೆವಷ್ಟೆ. ಈಗ ಗುಡಿಯಲ್ಲಿ ಹೂಗಳ ಬಳಕೆ ದಿನವೂ ಹೆಚ್ಚಿತು; ವಿಶೇಷಸಂದರ್ಭಗಳಲ್ಲಂತೂ ಕೇಳುವಂತೆಯೇ ಇಲ್ಲ. ಇಷ್ಟೊಂದು ಹೂವು ಒದಗಬೇಕಾದರೆ ನಂದವನಗಳ ಅಗತ್ಯ ಇದ್ದದ್ದೇ. ಬೆಟ್ಟಕ್ಕೆ ಬಂದ ಭಕ್ತರೂ ಅರಸರೂ ಅಧಿಕಾರಿಗಳೂ ಈ ಅಗತ್ಯವನ್ನು ಮನಗಂಡು ನಂದವನಗಳ ವ್ಯವಸ್ಥೆ ಮಾಡತೊಡಗಿದರು; ಹೂದೋಟಗಳ ನಿರ್ವಹಣೆಗೆ ನಿಧಿ, ಭೂಮಿ, ಗ್ರಾಮ ಇವುಗಳನ್ನು ಬಿಟ್ಟುಕೊಟ್ಟರು. ಬೆಟ್ಟದ ಮೇಲಿನ ತೋಟಗಳಲ್ಲಿ ದವನ, ಮರುಗ, ತುಳಸಿಗಳು ಮಾತ್ರವಲ್ಲದೆ ಗುಲಾಬಿಯಂತಿರುವ ಶೆಂಗುಳನೂರ್ ಎಂಬ ಕೆಂಬಣ್ಣದ ತಾವರೆಹೂಗಳನ್ನು ವಿಶೇಷವಾಗಿ ಬೆಳೆಸಿದವರು.

ಹೂತೋಟಗಳಲ್ಲಿ ಕೆಲಸ ಮಾಡುತ್ತಿದ್ದ ಭಕ್ತರಲ್ಲಿ ಶಾತ್ತಾದ ಶ್ರೀವೈಷ್ಣವರು ಹೆಚ್ಚು ಸಂಖ್ಯೆಯಲ್ಲಿದ್ದವರು. ಇವರನ್ನು ದಾಸ-ನಂಬಿಗಳೆಂದೂ ಕರೆಯುವ ವಾಡಿಕೆಯಿದ್ದಿತು. ಹೂಮಾಲೆಗಳನ್ನು ಸಿದ್ಧಪಡಿಸಿ ಅಲಂಕಾರಸೇವೆಗೆ ಒಪ್ಪಿಸುವುದೇ ಇವರು ಕೈಗೊಂಡ ಸೇವೆ. ಅವರ ಅನುಕೂಲಕ್ಕಾಗಿ ತೋಟದ ನಡುವೆ ಮಂಡಪವೊಂದನ್ನೂ ದಾನಿಗಳು ಕಟ್ಟಿಸಿಕೊಡುವರು. ಈ ಮಂಡಪಗಳೇ ಮಠಗಳಾಗಿ ಮುಂದೆ ಮಾರ್ಪಟ್ಟುವು. ಹೀಗಾಗಿ ಬೆಟ್ಟದ ಮೇಲೆ ನಂದವನಗಳಿಗೂ ಮಠಗಳಿಗೂ ಮೊದಲಿನಿಂದ ನಂಟು. ನಂದವನದ ನಿರ್ವಹಣೆ ಮಠದ ಒಡೆಯನ ಹೊಣೆ. ಈ ಸಂದರ್ಭದಲ್ಲಿ ದೇಶಾಂತರಿಗಳೆಂಬುವರ ಪಾತ್ರವನ್ನು ಗಮನಿಸಬೇಕು. ಬೆಟ್ಟದ ಮೇಲೇ ನೆಲೆಸಿದ್ದವರ ಸಂಖ್ಯೆ ಕಡಮೆಯಾಗಿದ್ದುದು ಸಹಜವೇ; ಅಲ್ಲಿ ನೆಲೆಸಲು ಅನುಕೂಲ ಕಡಮೆ. ಗುಡಿ ಬೆಳೆಯತೊಡಗಿದಾಗ ಅಲ್ಲೇ


ನೆಲೆಸಬೇಕಾದವರು ಹೆಚ್ಚಾದರು. ಹೊರಗಿನಿಂದ ಬೆಟ್ಟಕ್ಕೆ ಬಂದು ಅಲ್ಲಿಯೇ ಗುಡಿಯ ಕೈಂಕರ್ಯದಲ್ಲಿ ನಿಲ್ಲುವವರಿಗೆ ದೇಶಾಂತರಿಗಳೆಂದು ಹೆಸರು. ಇವರನ್ನು 'ಶೀಯರ್' ಎಂದು ಕರೆಯುವುದೂ ಇದ್ದಿತು. ಇವರಲ್ಲಿ ಪ್ರಧಾನನಾದವನು 'ಜೀಯರ್' ಎನಿಸಿಕೊಳ್ಳುತ್ತಿದ್ದ.

ಬೆಟ್ಟದ ಮೇಲೆ ಜೀಯರ್‌ಮಠವೆಂಬುದೊಂದಿದೆ; ಅದನ್ನು ಜೀಯಂಗಾರ್ ಮಠವೆಂದೂ ಕರೆಯುವುದುಂಟು. ಶ್ರೀವೈಷ್ಣವಸಂಪ್ರದಾಯದ ಈ ಮಠವು ರಾಮಾನುಜರಿಂದಲೇ ಮೊದಲಾಯಿತೆಂದು ನಂಬಿಕೆ. ಮೇಲೆ ಹೇಳಿದ ವೇಂಕಟಾಚಲ-ಇತಿಹಾಸಮಾಲೆಯ ಪ್ರಕಾರ, ರಾಮಾನುಜರು ಬೆಟ್ಟದ ಗುಡಿಯಲ್ಲಿ ಅರ್ಚನೆಯನ್ನು ನಿರ್ದೇಶಿಸಲು, ಅರ್ಚಕರ ಮೇಲ್ವಿಚಾರಣೆ ನಡೆಸಲು ಶ್ರೀವೈಷ್ಣವಸಂನ್ಯಾಸಿಯೊಬ್ಬನನ್ನು ನೇಮಿಸಿದರು. ಈ ಜೀಯರ್‌ಮಠದ ಪ್ರತೀತಿಯಂತೆ, ರಾಮಾನುಜರು ಈ ಮಠವನ್ನು ಬೆಟ್ಟದ ಮೇಲೆ ಆಂಜನೇಯನ ಗುಡಿಯ ಎದುರು ಕ್ರಿಸ್ತಾಬ್ದ 1047ರಲ್ಲಿ ಸ್ಥಾಪಿಸಿದರು; ಅದನ್ನು ನೋಡಿಕೊಳ್ಳಲು ತಮ್ಮ ಶಿಷ್ಯ ಅಪ್ಪನ್-ಶಠಕೋಪ-ರಾಮಾನುಜ-ಜೀಯರ್ ಎಂಬುವರನ್ನು ನೇಮಿಸಿದರು. ಇವರು ತಮಗೆ ನೆರವಾಗಲು ಅಳಗಿಯ-ಮಣವಾಳ-ರಾಮಾನುಜ-ಜೀಯರನ್ನು ನೇಮಿಸಿಕೊಂಡರು. ಮುಂದೆ ಮಠದ ಪರಂಪರೆಯಲ್ಲಿ ತಿರುವೇಂಕಟ-ರಾಮಾನುಜ-ಜೀಯರ್, ಎಂಬೆರುಮಾನಾರ್-ಜೀಯರ್, ಶಠಕೋಪ-ರಾಮಾನುಜ-ಜೀಯರ್, ಶ್ರೀರಂಗ-ರಾಮಾನುಜ-ಜೀಯರ್ ಮೊದಲಾದವರ ಹೆಸರುಗಳು ಬರುತ್ತವೆ. ಆದರೆ ರಾಮಾನುಜರ ಕಾಲದಲ್ಲೇ ಮಠವು ಮೂಡಿಕೊಂಡಿತೇ ಎನ್ನುವುದು ಸಂದಿಗ್ಧವಾಗಿದೆ. ಈ ಮಠವು ಮೊದಲಾದುದು ವಿಜಯನಗರದ ಅರಸರು ಶ್ರೀವೈಷ್ಣವಧರ್ಮವನ್ನು ಪರಿಗ್ರಹಿಸಿ ಪ್ರೋತ್ಸಾಹಿಸಿದಾಗಲೇ ಎನ್ನಬಹುದು.

ದಕ್ಷಿಣದೇಶದಲ್ಲಿ ಹೊಯ್ಸಳವಂಶದವರ ಆಳ್ವಿಕೆ ಕೊನೆಗೊಂಡು ವಿಜಯನಗರ ಸಾಮ್ರಾಜ್ಯವು ತಲೆಯೆತ್ತಿಕೊಳ್ಳುತ್ತಿರುವಾಗ, ಈ ಎರಡೂ ಅರಸೊತ್ತಿಗೆಗಳಿಗೆ ಅಧೀನನಾಗಿ ಈ ಕಡೆ ಆಳುತ್ತಿದ್ದ ಶ್ರೀರಂಗನಾಥ-ಯಾದವರಾಯನ ಕಾಲದಲ್ಲಿ, ಎಂದರೆ ಕ್ರಿಸ್ತಾಬ್ದ 1337-38ರ ಸುಮಾರಿಗೆ, ಅವನ ಪ್ರಧಾನಿಯಾಗಿದ್ದ ಇಮ್ಮಡಿ 'ರಾಹುತ್ತ ರಾಯನ್' ಮಾದಪ್ಪನ್-ಸಿಂಗಯ್ಯ ದಣ್ಣಾಯಕನು ವೇಂಗಡಬೆಟ್ಟದ ಮೇಲೂ (ತಿರುಮಲೆಯಲ್ಲಿ) ಕೆಳಗಿನ ತಿರುಪತಿ ಊರಲ್ಲಿಯೂ ಅರಿಶಿಣಾಲಯಂ-ನಂದವನ-ಮಠವನ್ನೂ ವಣ್-ಶಠಕೋಪನ್-ನಂದವನಮಠವನ್ನೂ ಏರ್ಪಡಿಸಿದನೆಂದು ಶಾಸನವಿದೆ. ಶಾಸನದಲ್ಲಿ ಕಾಣಿಸಿರುವ ವಿವರಗಳು: ಮಠಗಳ ಹಕ್ಕುಬಾಧ್ಯತೆ ದಣ್ಣಾಯಕನದೇ; ಆದರೆ ಮಠದ ಆಡಳಿತವನ್ನು ನೋಡಿಕೊಳ್ಳಲೆಂದು ನೇಮಿಸಿದ ಜೀಯರ್ ತಮ್ಮ ಉಸಿರಿರುವವರೆಗೂ ಮಠದಲ್ಲಿಯೇ ನೆಲೆಸಿರಬಹುದು; ಅವರು ತೀರಿಕೊಂಡಾಗ ಮಠವು ದಣ್ಣಾಯಕನ ವಶಕ್ಕೇ ಹಿಂದಕ್ಕೆ ಬರುವುದು; ಆ ಸಂದರ್ಭದಲ್ಲಿ, ಗುಡಿಯ ನಿರ್ವಾಹಕರಾದ ಸ್ಥಾನತ್ತಾರರು ಗುಡಿಯಲ್ಲಿ ಸೇವೆ ಸಲ್ಲಿಸಲು ದೇಶಾಂತರಿಯೊಬ್ಬನನ್ನು ಜೀಯರಾಗಿ ನೇಮಿಸಬೇಕು; ನೇಮಕಗೊಳ್ಳುವಾಗ ಈ ದೇಶಾಂತರಿಯು ಗುಡಿಯ ಶ್ರೀಭಂಡಾರಕ್ಕೆ ನಾನ್ನೂರು ಪಣಗಳನ್ನು ಸಲ್ಲಿಸತಕ್ಕದ್ದು. ಹೀಗೆ ಹೊರಗಿನ ನಾಡವರು

ಬೆಟ್ಟಕ್ಕೆ ಬಂದು ದೇವರ ಊಳಿಗದಲ್ಲಿ ನಿಲ್ಲುವ ಪದ್ಧತಿ ಹದಿಮೂರನೆಯ ಶತಮಾನದ ಕಡೆಯ ಭಾಗದಲ್ಲಿ ಆರಂಭವಾಯಿತೆಂದು ಕಾಣುತ್ತದೆ.

ಮೊದಲು ಏರ್ಪಟ್ಟ ಎರಡು ಮಠಗಳಲ್ಲಿ ಅರಿಶಿಣಾಲಯಂ-ನಂದವನ-ಮಠವನ್ನು ನೋಡಿಕೊಳ್ಳುತ್ತಿದ್ದ ದೇಶಾಂತರಿ ಮುಲ್ಲೈ ತಿರುವೇಂಕಟ ಜೀಯರ್ ಕ್ರಮೇಣ ಗುಡಿಯ ನಿರ್ವಾಹದಲ್ಲೂ ಒಂದು ಪಾತ್ರವನ್ನು ಪಡೆದುಕೊಂಡರು. ನಿತ್ಯಾರ್ಚನೆಯು ವೈಖಾನಸಪದ್ಧತಿಯಲ್ಲಿ ನಡೆಯುತ್ತಿದ್ದುದರಿಂದ ಅದರಲ್ಲಿ ಅವರ ಕೈವಾಡ ಏನೂ ಇರದಿದ್ದರೂ, ಉತ್ಸವಸಂದರ್ಭಗಳಲ್ಲಿ ಅವರ ಸೇವೆ ಇರುತ್ತಿದ್ದಿತು. ನಂದವನ-ಮಠಗಳು ವೈಖಾನಸರಲ್ಲದ ಶ್ರೀವೈಷ್ಣವಸಂಪ್ರದಾಯದವು. ಈ ಎರಡು ಮಠಗಳಲ್ಲದೆ ತಿರುಮಳೀಶೈಪ್ಪಿರಾನ್ ಮಠ, ಪೇರರುಳಾಳನ್ ಮಠ, ಅಳಗಿಯ-ಮಣವಾಳ-ಮಠ ಮೊದಲಾದುವು ಎದ್ದುಕೊಂಡಂದು ಬೆಟ್ಟದ ಮೇಲೆ ಉತ್ಸವಗಳು ಹೆಚ್ಚಾದುವು.



ವೇಂಗಡದೊಡೆಯನ ಒಂದು ಹಳೆಯ ಚಿತ್ರ

ಉತ್ಸವಗಳನ್ನು ಏರ್ಪಡಿಸುವುದು, ಅವುಗಳ ನಿರ್ವಾಹಕ್ಕೆ ನಿಧಿಯನ್ನು ಕೊಡುವುದು, ಭೂಮಿಯನ್ನು ದಾನಮಾಡುವುದು ಇವನ್ನೆಲ್ಲ ಈ ಮಠಗಳ ಅನುಯಾಯಿಗಳು ಮಾಡತೊಡಗಿದರು. ಒಂದೆರಡು ಶತಮಾನಗಳಲ್ಲಿ ಬೆಟ್ಟದ ಮೇಲೆ ವರ್ಷಕ್ಕೆ ನಾನ್ನೂರಕ್ಕೂ ಮೀರಿ ಉತ್ಸವಗಳು ಜರುಗತೊಡಗಿದುವು!

ಕೋಯಿಲ್–ಕೆಳ್ವಿ

ವಿಜಯನಗರದ ಅರಸ ಇಮ್ಮಡಿ ಹರಿಹರನ ಅಪ್ಪಣೆಯನ್ನು ಪಡೆದು ಅರಿಶಿಣಾಲಯಂ-ನಂದವನ-ಮಠದ ಮುಲ್ಲೈ-ತಿರುವೇಂಕಟ-ಜೀಯರು ಗುಡಿಯಲ್ಲಿ ಮಾಶಿ-ತಿರುನಾಳ್ ಉತ್ಸವವನ್ನು ನಡೆಸುವ ಏರ್ಪಾಟು ಮಾಡಿದುದು ಕ್ರಿಸ್ತಾಬ್ದ 1387ರ ಶಾಸನವೊಂದರಲ್ಲಿ ಬಂದಿದೆ. ಇವರಿಗೂ ಗುಡಿಯ ಪೂಜಾಪದ್ಧತಿಗೂ ಏನೂ ಸಂಬಂಧ ವಿದ್ದಂತೆ ತೋರುವುದಿಲ್ಲ. ಆದರೆ ಅವರ ನಂತರ ಅಧಿಕಾರಕ್ಕೆ ಬಂದ ಕೆಲವು ಜೀಯರುಗಳನ್ನು 'ಕೋಯಿಲ್-ಕೆಳ್ವಿ' (ಎಂದರೆ, ಗುಡಿಯಲ್ಲಿ ಕೆಲಸಮಾಡುವವರು) ಎಂದು ಕರೆಯಲಾಗಿದೆ. ಇವರಲ್ಲಿ ಒಬ್ಬರಾದ ಅನುಸಂಧಾನಂ-ತಿರುವೇಂಕಟ-ಜೀಯರನ್ನು 'ಪೆರಿಯ (ಹಿರಿಯ) ಕೋಯಿಲ್-ಕೆಳ್ವಿ' ಎಂದು ನಿರ್ದೇಶಿಸಿರುವುದನ್ನು ನೋಡಿದರೆ, ಅವರಿಗೆ ನೆರವಾಗಲು ಇನ್ನೊಬ್ಬ ಕಿರಿಯ ಜೀಯರೂ ಇದ್ದಿರಬೇಕೆನಿಸುತ್ತದೆ. ಎಂದರೆ ಗುಡಿಯಲ್ಲಿ ಈ ಜೀಯರ್ ನಿರ್ವಹಿಸುತ್ತಿದ್ದ ಕೆಲಸದ ಹೊರೆ ಹೆಚ್ಚಾಗಿಯೇ ಇದ್ದಿತೆನ್ನಬಹುದು. ಶ್ರೀವೈಷ್ಣವಸಂಪ್ರದಾಯದ ಆಚಾರ್ಯಪುರುಷರೇ ವಿಜಯನಗರದರಸರ ಕುಲಪುರೋಹಿತರಾಗಿದ್ದವರು. ಈ ರಾಜಪುರೋಹಿತರ ಪ್ರಭಾವದಿಂದ, ಅವರ ಒತ್ತಾಸೆಯಿಂದ ಮಠದ ಹೆಗ್ಗಳಿಕೆ ಬೆಳೆಯಿತು. ಕೃಷ್ಣದೇವರಾಯ ಮಹಾರಾಯನ ಕಾಲದಲ್ಲಿ ಮಠಾಧಿಪತಿಗಳಾಗಿದ್ದ ಕೋಯಿಲ್-ಕೆಳ್ವಿ ರಾಮಾನುಜ ಜೀಯರನ್ನು "ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯ"ರೆಂದೂ "ಪರಮಹಂಸ-ಪರಿವ್ರಾಜಕ"ರೆಂದೂ ಶಾಸನ ಪ್ರಸ್ತಾಪಿಸುತ್ತದೆ. ಬಿಡಿಸಂನ್ಯಾಸಿಗಳಿಗಾಗಿ ಆರಂಭವಾದ ಸಂಸ್ಥೆ ಹೀಗೆ ದೊಡ್ಡ ಮಠವಾಗಿ ನಿಂತಿತು.

ಬೆಟ್ಟದ ಮೇಲಿನ ಮಠಗಳು ನಿರ್ವಹಿಸುತ್ತಿದ್ದ ಕೆಲಸಗಳು ಹಲವು. ಗುಡಿಯಲ್ಲಿ ಕೈಂಕರ್ಯ ಒಂದು ಪಾಲು, ಉಳಿದವು ಮೂರು ಪಾಲು. ನಂದವನದ ಹೊಣೆಗಾರಿಕೆ, ದೇಶಾಂತರಿಗಳ ಯೋಗಕ್ಷೇಮವಿಚಾರಣೆ, ಅರಸರ ಆದೇಶದಂತೆ ಮತ್ತು ದಾನಶಾಸನಗಳ ವಿಧಿಯಂತೆ ಸಾಮಾನು ಸರಂಜಾಮನ್ನು ಗುಡಿಯ ಉಗ್ರಾಣಕ್ಕೆ ಮುಟ್ಟಿಸುವುದು, ವಿಶೇಷ ಸಂದರ್ಭಗಳಲ್ಲಿ ಉತ್ಸವದ ವಿಧಿಯನ್ನು ಗೊತ್ತುಪಡಿಸುವುದು, ಶ್ರೀವೈಷ್ಣವ ಧರ್ಮದ ಪ್ರಚಾರ, ಇವೆಲ್ಲ ಮಠಗಳ ಕಾರ್ಯವ್ಯಾಪ್ತಿಯಲ್ಲೇ ಸೇರುತ್ತವೆ. ರಾಮಾನುಜರ ಕಾಲದಲ್ಲಿ ಶ್ರೀವೈಷ್ಣವಸಾಮುದಾಯವು, ಶಾತ್ತಿನವರು (ಎಂದರೆ, ವೇದಾಧಿಕಾರವುಳ್ಳವರು) ಮತ್ತು ಶಾತ್ತಾದವರು (ಅಂಥ ಅಧಿಕಾರವಿಲ್ಲದವರು) ಎಂಬೆರಡು ಪಂಗಡಗಳನ್ನೊಳಗೊಂಡಿದ್ದಿತು. ನಂದನವನದಲ್ಲಿ ಪುಷ್ಪಮಾಲಾಕೈಂಕರ್ಯ

ವನ್ನು ಕೈಗೊಂಡಿದ್ದ ದಾಸ-ನಂಬಿಗಳು ಶಾತ್ತಾದವರೇ. ಮಠವನ್ನು ನೋಡಿಕೊಳ್ಳುತ್ತಿದ್ದ ವರು ಶಾತ್ತಿನವರು. ಬೆಟ್ಟದ ಮೇಲಿನ ಗುಡಿಯಲ್ಲಿ ಎರಡೂ ಪಂಗಡದವರಿಂದ ಸೇವೆ ಸಲ್ಲುವ ವ್ಯವಸ್ಥೆ ಮಾಡಿದವರು ರಾಮಾನುಜರೆಂದು ಪ್ರತೀತಿ; ರಾಮಾನುಜರು ಶಾತ್ತಾದವರಿಗೆ ಕೈಂಕರ್ಯಾವಕಾಶವನ್ನು ಕಲ್ಪಿಸಿಕೊಟ್ಟರು. ಆದರೆ ಗುಡಿಯ ಇತಿಹಾಸ ದಲ್ಲಿ ಇದೇನು ಹೊಸವಿಚಾರವಲ್ಲ. ಮೊದಲಿಗೆ ಈ ದೇವರಿಗೆ ನಡೆದುಕೊಳ್ಳುತ್ತಿದ್ದವರೆಲ್ಲ ಕಾಡುಜನರು, ಬೇಟೆಗಾರರು. ಬ್ರಾಹ್ಮಣನಾದ ಗೋಪೀನಾಥದೀಕ್ಷಿತನಿಗೆ ಈ ದೇವರನ್ನು ತೋರಿಸಿಕೊಟ್ಟವನು ಶೂದ್ರನಾದ ರಂಗದಾಸನಲ್ಲವೆ? ವಿಗ್ರಹವನ್ನು ಹುತ್ತದಿಂದ ಹೊರಕ್ಕೆ ತಂದುದು ಅವರಿಬ್ಬರೂ ಕೂಡಿಯೇ ಅಲ್ಲವೆ? ಗೋಪೀನಾಥನು ದೇವರ ಅರ್ಚನೆಗೆಂದು ಅಲ್ಲೇ ನಿಂತಾಗ, ಅವನಿಗೆ ನೆರವಾದವನೂ ರಂಗದಾಸನೇ. ತುಂಬ ಹಿಂದಿನ ಕಾಲದಿಂದ ಈ ದೇವರೆದುರು ಜಾತಿ-ಮತಗಳ ಭೇದವಿಲ್ಲ. ಮೇಲು-ಕೀಳು ಎಂಬ ಸಾಮಾಜಿಕ ಎಣಿಕೆ ಅಲ್ಲಿ ಸಲ್ಲುವುದು ವಾಡಿಕೆಯಲ್ಲ. ಇದು ರಾಮಾನುಜರಿಗೆ ಸ್ಫೂರ್ತಿಯನ್ನು ಒದಗಿಸಿದ್ದರೂ ಇದ್ದೀತು.

ತಿರುಪತಿಯ ವಿಹಾರ

ರಾಮಾನುಜರ ಸಾಧನೆಗಳಲ್ಲಿ ಪ್ರಸಿದ್ಧವಾದುದು ಬೆಟ್ಟದ ಕೆಳಗೆ ತಿರುಪತಿ ಊರಿನ ವ್ಯವಸ್ಥೆ. ರಾಮಾನುಜರು ಈ ಊರನ್ನು ತಮ್ಮ ನೂರೆರಡು ವರ್ಷಗಳ ಮುಪ್ಪಿನಲ್ಲಿ, ಕ್ರಿಸ್ತಾಬ್ದ 1130ರ ಸುಮಾರಿಗೆ, ಕಟ್ಟಿದರೆಂದು ಪ್ರತೀತಿಯಿದೆ. ಈ ಊರನ್ನು ಕಟ್ಟಬೇಕಾಗಿ ಬಂದ ಹಿನ್ನೆಲೆಯನ್ನು ಸ್ವಲ್ಪ ಗಮನಿಸಬೇಕು. ಆ ಕಾಲಕ್ಕೆ ಬೆಟ್ಟದ ಕೆಳಗಿನ ಊರೆಂದರೆ ತಿರುಚ್ಚಾನೂರೇ. ಬೆಟ್ಟವನ್ನೇರುವ ಯಾತ್ರಿಕರು ತಿರುಚ್ಚಾನೂರಿನಲ್ಲಿ ಹತ್ತು ಮೈಲಿ ದೂರ ನಡೆದು ಬೆಟ್ಟದ ಬಳಿ ಬರಬೇಕಾಗುತ್ತಿದ್ದಿತು; ಅಲ್ಲಿಂದ ಗುಡಿಗೆ ಮತ್ತೆ ಆರೇಳು ಮೈಲಿಗಳ ಕಾಡುದಾರಿ, ಬೆಟ್ಟಗಳ ನಡುವೆ. ಇಷ್ಟು ಕಷ್ಟವನ್ನು ಎದುರಿಸುವ ಸಾಹಸ ಮಾಡದ ಯಾತ್ರಿಕರು ತಿರುಚ್ಚಾನೂರಿನಲ್ಲೇ ಇರುತ್ತಿದ್ದ ತಿರುವಿಳಂಕೋಯಿಲಿನ ವೇಂಗಡದ ದೇವರಿಗೇ ಕೈಮುಗಿದು, ಹರಕೆ ಒಪ್ಪಿಸಿ ಹಿಂದಿರುಗುತ್ತಿದ್ದರು; ಅವರಿಗೆ ಬೇರೆ ಉಪಾಯವಿರಲಿಲ್ಲ. ಆದರೆ ಕ್ರಿಸ್ತಾಬ್ದ 1000ರ ವೇಳೆಗೆ ಈ ತಿರುವಿಳಂ ಕೋಯಿಲಿನ ದೇವರು ಬೆಟ್ಟವನ್ನೇರಿ ಮರೆಯಾಗಿದ್ದರು. ತಿರುವಿಳಂಕೋಯಿಲು ಪಾಳುಬೀಳುತ್ತಿತ್ತು. ಇದಕ್ಕೆ ಕಾರಣ, ತಿರುಚ್ಚಾನೂರಿನಲ್ಲಿ ವಾಸಮಾಡುತ್ತಿದ್ದ ಶ್ರೀವೈಷ್ಣವ ಸಮುದಾಯಕ್ಕೆ ಆತಂಕಪರಿಸ್ಥಿತಿ ತಲೆದೋರಿದುದು. ತಿರುಚ್ಚಾನೂರು ಶೈವಕ್ಷೇತ್ರವಾಗಿ, ಅಲ್ಲಿನ ತಿಪ್ಪಾಲಾದೀಶ್ವರಮುಡೈಯಾನ್ ಪ್ರಬಲನಾಗುತ್ತಿದ್ದ; ಅರಸರು ಶೈವಧರ್ಮವನ್ನು ನಂಬಿಕೊಂಡು ಅದನ್ನು ಪ್ರೋತ್ಸಾಹಿಸುತ್ತಿದ್ದವರು. ಇದರಿಂದ ಶ್ರೀವೈಷ್ಣವರ ತಿರುಮಂತ್ರ ಶಾಲೆಯ ಕೆಲಸ ಕಠಿನವಾಯಿತು. ಸಾಮಾಜಿಕವಾಗಿ ಅವರ ಬಲ ಕಡಮೆಯಾಯಿತು. ತಮ್ಮ ಕಾರ್ಯಕ್ಷೇತ್ರವನ್ನು ರೂಢಿಸಿಕೊಳ್ಳಲೆಂದು ಬೆಟ್ಟದ ಮೇಲೇ ದೃಷ್ಟಿಯನ್ನು ಹರಿಸತೊಡಗಿದರು. ಹೀಗಾಗಿ ತಿರುಮಂತ್ರಶಾಲೆಯ ಬಾಗಿಲು ಮುಚ್ಚಿತು. ತಿರುವಿಳಂ

ಕೋಯಿಲಿನ ಭಾಗ್ಯ ಬದಲಾಯಿತು. ಆದರೆ ಬೆಟ್ಟದ ಮೇಲೆ ಹೆಚ್ಚುಕಾಲ ವಾಸ ಮಾಡುವುದು ಸಾಧ್ಯವಿರದೆ, ಶ್ರೀವೈಷ್ಣವಸಮುದಾಯವು ಬೆಟ್ಟದ ಕೆಳಗೇ ಮತ್ತೊಂದು ಕೇಂದ್ರವನ್ನು ಏರ್ಪಡಿಸಿಕೊಳ್ಳಲು ತವಕಪಡುತ್ತಿತ್ತು.

ತಿರುಚ್ಚಾನೂರನ್ನು ಬಿಟ್ಟರೆ ಆಗ ಬೆಟ್ಟದ ಬಳಿ ಇದ್ದ ಇನ್ನೊಂದು ಹಳ್ಳಿಯೆಂದರೆ ಕೋಟ್ಟೂರು ಎಂಬುದು. ಇದು ಬೆಟ್ಟದ ಪಕ್ಕದಲ್ಲಿಯೇ ಇದ್ದಿತು. ಶ್ರೀವೈಷ್ಣವರಲ್ಲಿ ಕೆಲವರು ಇಲ್ಲಿ ನೆಲೆಸತೊಡಗಿದರು. ಈ ಹಳ್ಳಿಯ ದಕ್ಷಿಣಭಾಗದಲ್ಲಿ ಪಾರ್ಥಸಾರಥಿ ಸ್ವಾಮಿಯ ಗುಡಿಯೊಂದನ್ನು ಕಟ್ಟಿಕೊಂಡರು. ಗುಡಿಯ ಸುತ್ತಮುತ್ತ ಶ್ರೀವೈಷ್ಣವರ ವಸತಿ ಬೆಳೆಯಿತು. ರಾಮಾನುಜರು ತಮ್ಮ ತೀರ ಮುಪ್ಪಿನಲ್ಲಿ , ಎಂದರೆ ತೀರಿಕೊಳ್ಳಲು ಕೆಲವು ವರ್ಷಗಳ ಮೊದಲು, ಬೆಟ್ಟದ ಗುಡಿಗೆ ಬಂದಿದ್ದಾಗ ಈ ಪರಿಸ್ಥಿತಿ ಅವರ ಗಮನಕ್ಕೆ ಬಂದಿತು. ಕೋಟ್ಟೂರನ್ನು ಬಲಪಡಿಸಲು ಮನಸ್ಸು ಮಾಡಿದರು. ಅದಕ್ಕೆ ಸರಿಯಾಗಿ ಆಗ ಸಂದರ್ಭವೊಂದು ಅವರಿಗೆ ನೆರವಾಯಿತಂತೆ. ಚಿದಂಬರವು ಶೈವಕ್ಷೇತ್ರವಾದರೂ ಅಲ್ಲಿ ಗೋವಿಂದರಾಜನೆಂಬ ವಿಷ್ಣುವಿನ ಸನ್ನಿಧಿಯೂ ಇದೆ. ಚೋಳರಾಜರು ಚಿದಂಬರದ ಹಿರಿಮೆಗೆ ಟೊಂಕ ಕಟ್ಟಿದ್ದವರು. ಒಬ್ಬ ರಾಜನು ವಿಷ್ಣುವಿನ ನೆಲೆ ಸಮುದ್ರವಾದುದರಿಂದ (ಅವನು 'ಕ್ಷೀರಸಾಗರಶಯನ'ನಲ್ಲವೆ?) ಗೋವಿಂದರಾಜನನ್ನು ಸಮುದ್ರದಲ್ಲಿ ಇರಿಸಬೇಕೆಂದು ಅಪ್ಪಣೆ ಮಾಡಿದನೆಂದೂ, ಅರ್ಚಕರು ಗುಟ್ಟಾಗಿ ಆ ಮೂರ್ತಿಯನ್ನು ಅಲ್ಲಿಂದ ಹೊರತಂದು ವೇಂಗಡಬೆಟ್ಟದ ಕಡೆ ಹೊರಟರೆಂದೂ, ಬೆಟ್ಟದ ಕೆಳಗೆ ರಾಮಾನುಜರು ಈ ಮೂರ್ತಿಯನ್ನು ಕೋಟ್ಟೂರಿನಲ್ಲಿ ಪಾರ್ಥಸಾರಥಿಯ ನೆರೆಯಲ್ಲಿ ಪ್ರತಿಷ್ಠೆಮಾಡಿದರೆಂದೂ ಕಥೆಯಿದೆ. ಈ ಕಥೆಗೆ ಎಷ್ಟು ಕಾಲೋ ತಿಳಿಯದು. ಬಹುಶಃ ವಸ್ತುಸ್ಥಿತಿಗೂ ಕಥೆಗೂ ಸಂಬಂಧ ತೀರ ಹಗುರಾದುದು. ರಾಮಾನುಜರು ಗೋವಿಂದರಾಜನ ಮೂರ್ತಿಗೆ ನೆಲೆಯನ್ನು ಒದಗಿಸ ಬೇಕಾಗಿಬಂದಿತೆಂಬುದು ಕಥೆಯ ತಾತ್ಪರ್ಯ.

ರಾಮಾನುಜರಿಗೆ ಗೋವಿಂದರಾಜನ ಮೂರ್ತಿಯನ್ನು (—ಇದು ಶ್ರೀರಂಗದಲ್ಲಿರುವಂತೆ ಮಲಗಿರುವ ವಿಷ್ಣು—) ಕೋಟ್ಟೂರಿನಲ್ಲಿ ಪ್ರತಿಷ್ಠೆಮಾಡಬೇಕೆನಿಸಿದಾಗ ಊರಿನಲ್ಲಿದ್ದ ಗುಡಿಯೊಂದೇ, ಪಾರ್ಥಸಾರಥಿಯದು. ಆ ಗುಡಿಯ ಆವರಣದೊಳಗೇ ಇನ್ನೊಂದು ಆಲಯವನ್ನು ಕಟ್ಟಿಸಿ ರಾಮಾನುಜರು ಗೋವಿಂದರಾಜನನ್ನು ಮೂಡಿಸಿದರು. ಈ ಆಲಯದ ಪ್ರತಿಷ್ಠೆ ಕ್ರಿಸ್ತಾಬ್ದ 1130ರ ಫೆಬ್ರುವರಿ ತಿಂಗಳ 24ನೆಯ ದಿನದಂದು (ಸೌಮ್ಯಸಂವತ್ಸರದ ಫಾಲ್ಗುಣಹುಣ್ಣಿಮೆಯಂದು). ಗುಡಿಯ ಸುತ್ತಲೂ ರಾಜಬೀದಿಗಳನ್ನು ಏರ್ಪಡಿಸಿ ಅದನ್ನು ಶ್ರೀವೈಷ್ಣವರ ವಸತಿಗೆಂದು ಗೊತ್ತುಮಾಡಿದರು; ಇದು 'ರಾಮಾನುಜಪುರ'ವೆನಿಸಿಕೊಂಡಿತು. ರಾಮಾನುಜರು ಕೋಟ್ಟೂರೆಂಬ ಹೆಸರನ್ನೂ ಮಾರ್ಪಡಿಸಿ 'ತಿರುಪತಿ'ಯೆಂಬ ತಮಿಳುಹೆಸರನ್ನು ಬಳಕೆಗೆ ತಂದರು. ಬೆಟ್ಟದ ಮೇಲಿನ ಗುಡಿಯ ಅರ್ಚಕರೂ ಪರಿಚಾರಕರೂ ಶ್ರೀವೈಷ್ಣವ-ಆಚಾರ್ಯಪುರುಷರೂ ಇಲ್ಲಿಯೇ ವಾಸಮಾಡಬೇಕೆಂದು ಅಪ್ಪಣೆ ಮಾಡಿದರಂತೆ. ಬೆಟ್ಟದ ಮೇಲೆ ವಾಸಮಾಡುವುದು ತುಂಬ ಕಷ್ಟವೆನಿಸಿದ್ದ ಕಾಲ ಅದು. ಇದಲ್ಲದೆ, ಯಾತ್ರಿಕರಿಗೂ ಈ ಊರು ಅನುಕೂಲ

ವಾಯಿತು. ದೂರದಿಂದ ಬಂದವರು ಒಂದು ರಾತ್ರಿ ಇಲ್ಲಿ ತಂಗಿದ್ದು ಮರುದಿನ ಮುಂಜಾನೆ ಬೆಟ್ಟದ ಬದಿಯಲ್ಲಿದ್ದ ಆಳ್ವಾರ್‌ತೀರ್ಥದಲ್ಲಿ (ಚಕ್ರತೀರ್ಥದಲ್ಲಿ) ಮಿಂದು ಬೆಟ್ಟವೇರುವುದು ಪದ್ಧತಿಯಾಯಿತು. ಹೀಗೆ ತಿರುಪತಿ ಬೆಳೆದುಬಂದಾಗ, ತಿರುಚ್ಚಾನೂರು ಯಾತ್ರಿಕರ ದೃಷ್ಟಿಯಿಂದ ಹಿಂದೆ ಬಿದ್ದಿತು.

ಗೋವಿಂದರಾಜನ ಆಲಯವನ್ನು ರಾಮಾನುಜರು ಸ್ಥಾಪಿಸಿದರೂ, ಸ್ವಲ್ಪ ಕಾಲದವರೆಗೆ ಹೆಸರಾಗಿದ್ದುದು ಮೊದಲಿನ ಪಾರ್ಥಸಾರಥಿಯೇ. ಆದರೆ ಬರುಬರುತ್ತ



ವರದರಾಜಸ್ವಾಮಿ

ಪಾರ್ಥಸಾರಥಿಯ ಪ್ರಾಬಲ್ಯ ಕಡಮೆಯಾಗಿ, ಕಡೆಗೆ ಅವನ ಪೂಜೆಯೇ ನಿಂತಿತು. ಇದಕ್ಕೆ ಕಾರಣವೇನೋ ತಿಳಿಯುವುದಿಲ್ಲ. ಪಾರ್ಥಸಾರಥಿಯ ಮೂರ್ತಿ ಊನವಾಗಿದೆ ಯೆಂದು ಹೇಳಿ ಆಲಯವನ್ನು ಮುಚ್ಚಿಬಿಟ್ಟರು; ಈಗಲೂ ಅಲ್ಲಿ ಪೂಜೆಯಿಲ್ಲ. ಪಾರ್ಥಸಾರಥಿಯ ಉತ್ಸವಮೂರ್ತಿಯೇ ಈಗ ಗೋವಿಂದರಾಜನ ಉತ್ಸವಮೂರ್ತಿ ಯಾಗಿದೆಯೆಂದು ಹೇಳುವುದೂ ಉಂಟು. ಗುಡಿಯಲ್ಲಿ ಹೀಗೆ ಏಕವೀರನಾಗಿ ಉಳಿದವನು ಗೋವಿಂದರಾಜನೇ. ಊರಿಗೆ ಗೋವಿಂದರಾಜಪಟ್ಟಣವೆಂಬ ಹೆಸರೂ ಬಂದಿತು. ಹದಿಮೂರನೆಯ ಶತಮಾನದಿಂದ ಮುಂದೆ ದಾನಶಾಸನಗಳೆಲ್ಲವೂ ಗೋವಿಂದರಾಜನಿಗೆಂದೇ ಸಿದ್ಧವಾದುವು; ಪಾರ್ಥಸಾರಥಿಯನ್ನು ಕಾಣಿಸುವುದೇ ಇಲ್ಲ.

ಆದರೆ ಮುಂದೆ ಒಂದೆರಡು ಶತಮಾನಗಳವರೆಗೆ ಗೋವಿಂದರಾಜನ ಗುಡಿ ಯಾಗಲೀ ತಿರುಪತಿಯ ಊರಾಗಲೀ ಪ್ರಸಿದ್ಧವಾದಂತೆ ಕಂಡುಬರುವುದಿಲ್ಲ. ಅದಕ್ಕೆ ಮೊದಲು ಈ ಗುಡಿಯ ಅಭಿವೃದ್ಧಿಗೆಂದು ಮನಸ್ಸು ಮಾಡಿದ ಅರಸ ವೀರನರಸಿಂಹ-ಯಾದವರಾಯನೊಬ್ಬನೇ. ತಿರುಪತಿಯ ಹೆಚ್ಚಳ ಮೊದಲಾದುದು ಸಾಳುವ ನರಸಿಂಹ ಚಂದ್ರಗಿರಿಯಲ್ಲಿ ವಾಸಮಾಡತೊಡಗಿದಾಗ ಎನ್ನಬಹುದು. ವಿಜಯನಗರದ ಅರಸರು (ಕೃಷ್ಣದೇವರಾಯ, ಅಚ್ಯುತರಾಯ ಮೊದಲಾದವರು) ತಿರುಪತಿಗೆ ಭಕ್ತರಂತೆ ಬಂದ ಉಲ್ಲೇಖವಿಲ್ಲ. ಕೆಲವು ಅಧಿಕಾರಿಗಳೇನೋ ಅಷ್ಟಿಷ್ಟು ಸೇವೆ ಸಲ್ಲಿಸುತ್ತಿದ್ದರು. ತಿರುಪತಿಯ ಗುಡಿ ಬೆಳೆದದ್ದು ನಿಧಾನವಾಗಿ. ರಾಮಾನುಜರು ಗೋವಿಂದರಾಜನನ್ನು ಪ್ರತಿಷ್ಠೆಮಾಡಿದ್ದು 1130ರಲ್ಲಿ; ಗುಡಿಗೆ ಒಳಗೋಪುರ ಎದ್ದುದು 1220ರಲ್ಲಿ; ಸನ್ನಿಧಿಯ ಮುಂದೆ ಮಂಟಪ ಕಾಣಿಸಿಕೊಂಡುದು 1494ರಲ್ಲಿ; ನೀರಾಳಿ ಮಂಟಪದ ಕಾಲ 1506; ಲಕ್ಷ್ಮೀದೇವಿಮಂಟಪವಾದುದು 1542ರಲ್ಲಿ; ಗೋವಿಂದರಾಜನ ದ್ವಾರ ಪಾಲಕರು ನಿಂತುದು 1549ರಲ್ಲಿ; ಮಹಾಗೋಪುರ ಮೂಡಿಕೊಂಡುದು 1628ರಲ್ಲಿ.

ರಾಮಾನುಜರು ಬರುವ ಮೊದಲೇ ಇದ್ದ ಪಾರ್ಥಸಾರಥಿಯ ಪೂಜೆ ನಡೆಯುತ್ತಿದ್ದುದು ವೈಖಾನಸಪದ್ಧತಿಯಲ್ಲಿ. ರಾಮಾನುಜರು ಪ್ರತಿಷ್ಠೆಮಾಡಿದ ಗೋವಿಂದ ರಾಜನ ಪೂಜೆಯೂ ಇದೇ ಪದ್ಧತಿಯಲ್ಲಿ ನಡೆಯಲು ಮೊದಲಾಯಿತು. ಬೆಟ್ಟದ ಮೇಲೇನೋ ವೈಖಾನಸರ ಬಲ ಪ್ರಾಚೀನಕಾಲದಿಂದ ಉಳಿದುಬಂದಿದ್ದಿತು; ಅಲ್ಲಿನ ಪದ್ಧತಿಯನ್ನು ಕದಲಿಸಲು ರಾಮಾನುಜರಿಗೆ ಬಹುಶಃ ಇಷ್ಟವಿರಲಿಲ್ಲ. ಆದರೆ ತಾವೇ ಪ್ರತಿಷ್ಠೆ ಮಾಡಿದ ಗೋವಿಂದರಾಜನ ಪೂಜೆಯೂ ಅದೇ ಪದ್ಧತಿಯಲ್ಲಿ ನಡೆಯಲು ಹೇಗೆ ಸಮ್ಮತಿಸಿದರೋ ಕಾಣೆವು. ಇಲ್ಲಿ ಒಂದು ಸ್ವಾರಸ್ಯವಾದ ವಿವರವಿದೆ. ತಿರುಚ್ಚಾನೂರಿನ ತಿರುವಿಳಂಕೋಯಿಲೂ ತಿರುಮಂತ್ರಶಾಲೆಯೂ ಪಾಂಚರಾತ್ರ ಪದ್ಧತಿಯವಾಗಿದ್ದುವು. ಬೆಟ್ಟದ ಮೇಲಿನ ಗುಡಿಯ ವೈಖಾನಸಪದ್ಧತಿಗೂ ತಿರುಚ್ಚಾ ನೂರಿನ ಗುಡಿಗಳ ಪಾಂಚರಾತ್ರಪದ್ಧತಿಗೂ ಒಡಂಬಡಿಕೆ ಇಲ್ಲದೆ ತಿಕ್ಕಾಟಗಳು ಜರುಗು ತ್ತಿದ್ದುದು ತಿರುಚ್ಚಾನೂರಿನ ಗುಡಿಗಳು ಕಳೆಗುಂದುವುದಕ್ಕೆ ನೆರವಾಯಿತೆಂದು ತೋರು ತ್ತದೆ. ರಾಮಾನುಜರು ಇದನ್ನು ಗಮನಿಸಿ, ಕೆಳಗಿನ ಗುಡಿಯು ಪಾಂಚರಾತ್ರಪದ್ಧತಿಯನ್ನು ಅನುಸರಿಸಿದರೆ ತಿರುಪತಿಗೂ ತಿರುಮಲೆಗೂ ಹೊಂದಾಣಿಕೆ ತಪ್ಪಿ, ತಿರುಪತಿಯ

ಪ್ರಾಶಸ್ತ್ಯ ಮರೆಯಾದೀತೆಂದು ಭಾವಿಸಿರಬಹುದು. ಮೇಲಾಗಿ, ಕೆಳತಿರುಪತಿಯ ಗೋವಿಂದರಾಜನ ಗುಡಿಯ ನಿರ್ವಹಣೆಯು ಮೇಲುತಿರುಮಲೆಯ ಗುಡಿಯ ಅಧಿಕಾರಿಗಳ ಹೊಣೆಯೇ ಆಗಿರುವಂತೆ ವ್ಯವಸ್ಥೆಯಿದ್ದಿತು. ಈಗಲೂ ಹಾಗೆಯೇ ಇದೆ.

ಭಾಷ್ಯಕಾರಸನ್ನಿಧಿ

'ಗುರುಪರಂಪರೆ'ಯೆಂಬ ಶ್ರೀವೈಷ್ಣವಸಂಪ್ರದಾಯದ ಆಕರಗ್ರಂಥದ ಪ್ರಕಾರ ರಾಮಾನುಜರು ತೀರಿಕೊಂಡ ತರುಣದಲ್ಲೇ ಅವರ ಶಿಷ್ಯರು ಅವರ ಪ್ರತಿಕೃತಿಗಳನ್ನು ಅವರ ಸಂಬಂಧತಳೆದ ಹಲವು ಸ್ಥಳಗಳಲ್ಲಿ ಮೂಡಿಸಿ ರಾಮಾನುಜಸನ್ನಿಧಿಗಳನ್ನು (ಭಾಷ್ಯಕಾರಸನ್ನಿಧಿಗಳೆಂದು ಕರೆಯುತ್ತಾರೆ) ಏರ್ಪಡಿಸಿದರು. ರಾಮಾನುಜರು ಹುಟ್ಟಿದೂರಾದ ಶ್ರೀಪೆರುಂಬೂದೂರಿನಲ್ಲಿ ಮುದಲಿಯಾಂಡಾನ್ ಎಂಬ ಶಿಷ್ಯನೂ, ಅವರು ಬೆಳೆದು ವಿದ್ಯಾಭ್ಯಾಸಮಾಡಿ ಯತಿಗಳಾದ ಕಾಂಚೀಪುರದಲ್ಲಿ ನಡಾದೂರ್ ಆಳ್ವಾರ್ ಎಂಬ ಶಿಷ್ಯನೂ, ಅವರು ಆಚಾರ್ಯರಾಗಿ ಮೆರೆದ ಶ್ರೀರಂಗದಲ್ಲಿ ಅವರ ಜ್ಞಾನಪುತ್ರನೆಂದು ಹೆಸರಾಗಿದ್ದ ತಿರುಕ್ಕುರುಕ್ಕೈಪ್ಪಿಳ್ಳಾನ್ ಎಂಬ ಶಿಷ್ಯನೂ, ಅವರ ನೆರವಿನಿಂದಲೇ ಮೈದಳೆದ ತಿರುಪತಿಯಲ್ಲಿ ಪಿಳ್ಳೈ-ತಿರುಮಲೆ-ನಂಬಿಯೆಂಬುವರೂ ರಾಮಾನುಜರ ಸನ್ನಿಧಿಗಳನ್ನು ಏರ್ಪಡಿಸಿದರೆಂಬುದು ಇಲ್ಲಿ ಬರುವ ವಿವರ. ಬೆಟ್ಟದ ಕೆಳಗೆ ತಿರುಪತಿಯಲ್ಲೊಂದು, ಬೆಟ್ಟವನ್ನು ಹತ್ತುವಾಗ 'ಮೊಳಕಾಲಮುರಿವ' ಬೆಟ್ಟದ ತುದಿಯಲ್ಲಿ 'ದೋವಭಾಷ್ಯಕಾರಸನ್ನಿಧಿ'ಯೆಂಬುದೊಂದು, ಬೆಟ್ಟದ ಮೇಲೆ ವೇಂಗಡದೊಡೆಯನ ಸನ್ನಿಧಿಯಲ್ಲಿ ಒಂದು—ಹೀಗೆ ಮೂರು ರಾಮಾನುಜಸನ್ನಿಧಿಗಳಿವೆ. ಇವು ಮೂರೂ ಒಂದೇ ಕಾಲದಲ್ಲಿ ಏರ್ಪಟ್ಟವೆಂದು ಪ್ರತೀತಿ.

ಆದರೆ ತಿರುಪತಿಯಲ್ಲಿ ಗೋವಿಂದರಾಜನ ಆಲಯಕ್ಕೇ ಸೇರಿದಂತೆ, ತಿರುಮಲೆ ನಂಬಿಯ ಸನ್ನಿಧಿಯ ಪಕ್ಕದಲ್ಲೇ ಅದಕ್ಕೆ ಹೊಂದಿಕೊಂಡಂತೆಯೇ ಇರುವ ರಾಮಾನುಜ ಸನ್ನಿಧಿಯು ಕ್ರಿಸ್ತಾಬ್ದ 1220ರ ಸುಮಾರಿಗೆ ಮೂಡಿಕೊಂಡಂತೆ ತಿಳಿದುಬರುತ್ತದೆ. ಬೆಟ್ಟದ ಮೇಲೆ ಗುಡಿಯ ವಿಮಾನಪ್ರದಕ್ಷಿಣದಲ್ಲಿ ಎಡಭಾಗದ ಪ್ರಾಕಾರಕ್ಕೆ ಸೇರಿಕೊಂಡಿರುವ ರಾಮಾನುಜಸನ್ನಿಧಿಯ ಉಲ್ಲೇಖ ನಮಗೆ ಮೊದಲು ತಿಳಿಯುವುದು ಕ್ರಿಸ್ತಾಬ್ದ 1476ರಲ್ಲಿಯೇ. 'ಮೊಳಕಾಲಮುರಿವ' ಬೆಟ್ಟದ ತುದಿಯಲ್ಲಿರುವ 'ದೋವ ಭಾಷ್ಯಕಾರಸನ್ನಿಧಿ' 1485ರ ಸುಮಾರಿಗೆ ಕಾಣಿಸಿಕೊಂಡಿತು. ರಾಮಾನುಜರು ಬೆಟ್ಟದ ಮೇಲೆ ಎರಡನೆಯ ಬಾರಿ ಬಂದಾಗ ಅವರು ಶ್ರೀರಂಗದಲ್ಲಿ ಆಗಲೇ ಆಚಾರ್ಯರಾಗಿ ಆರಿಸಲ್ಪಟ್ಟಿದ್ದರೆಂದೂ, ಈ ಸ್ಥಳದಲ್ಲಿ ಅವರ ಸೋದರಮಾವ ತಿರುಮಲೆ-ನಂಬಿಯು ಅವರನ್ನು ಗುಡಿಯ ಮರ್ಯಾದೆಗಳೊಂದಿಗೆ ಎದುರ್ಗೊಂಡರೆಂದೂ ಪ್ರತೀತಿಯಿದೆ. ವೇಂಗಡದ ಗುಡಿಯಲ್ಲಿರುವ ರಾಮಾನುಜಸನ್ನಿಧಿಯಲ್ಲಿ ಶ್ರೀವೈಷ್ಣವರು ಶಾತ್ತುಮುರೈ ನಡೆಸಿ ತೀರ್ಥ-ಪ್ರಸಾದವನ್ನು ಪಡೆದುಕೊಳ್ಳುವುದುಂಟು; ಕೆಲವೊಂದು ಉತ್ಸವಸಂದರ್ಭಗಳಲ್ಲಿ ಇಲ್ಲಿನ ರಾಮಾನುಜರಿಗೆ ಮರ್ಯಾದೆ ದೊರೆಯುವುದಿದೆ. ಆದರೆ ಇಲ್ಲಿ

ಪ್ರತ್ಯೇಕವಾದ ಪೂಜೆಯೆಂಬುದಾಗಲೀ ನೈವೇದ್ಯಸಮರ್ಪಣೆಯಾಗಲೀ ನಡೆಯುವ ವಾಡಿಕೆಯಿಲ್ಲ. ವೇಂಗಡದ ದೇವರಿಗೆ ಒಪ್ಪಿಸಿದ ನೈವೇದ್ಯದಲ್ಲಿ ಒಂದು ಭಾಗ ಇಲ್ಲಿಗೆ ಬರುತ್ತದೆ ಅಷ್ಟೆ. ಕೆಳಗಣ ತಿರುಪತಿಯಲ್ಲಿ ರಾಮಾನುಜರ ಸನ್ನಿಧಿ ಮಾತ್ರವಲ್ಲದೆ ಆಳ್ವಾರರ ಸನ್ನಿಧಿಗಳೂ ತಿರುಮಲೆ-ನಂಬಿಯ ಸನ್ನಿಧಿಯೂ ಇದ್ದು ಎಲ್ಲರಿಗೂ ವಿಶೇಷವಾದ ಮರ್ಯಾದೆ ದೊರೆಯುತ್ತದೆ.

ಬೆಟ್ಟದ ಗುಡಿಯಲ್ಲಿ ಆಳ್ವಾರರಿಗಾಗಲೀ ನರಸಿಂಹನನ್ನು ಬಿಟ್ಟು ಇತರ ದೇವತೆಗಳಿಗಾಗಲೀ ಬೇರೆಯಾಗಿ ಎಡೆಯಿಲ್ಲದಿರುವಾಗ, ರಾಮಾನುಜರಿಗೊಂದು ಸನ್ನಿಧಿಯಿರುವುದು ಗುಡಿಯ ಮೇಲೆ ಅವರು ಬೀರಿರಬಹುದಾದ ಪ್ರಭಾವವನ್ನು ಸೂಚಿಸುತ್ತದೆ. ಆದರೆ ರಾಮಾನುಜರು ಕಾಲವಾದನಂತರ ಮುನ್ನೂರನಲವತ್ತು ವರ್ಷಗಳಷ್ಟು ಸಮಯ ಹಿಡಿಸಿತು ಈ ಪ್ರಭಾವವನ್ನು ಗುರುತಿಸುವುದಕ್ಕೆ ಎಂದರೆ ಸೋಜಿಗವಾಗುತ್ತದೆ.




ಐದು

ಇತಿಹಾಸದ ಇಣುಕುನೋಟ

ಕಾಲುದಾರಿಗಳಿಂದ ಹೆದ್ದಾರಿಗೆ

ವೇಂಗಡದ ದೇವರನ್ನೂ ಗುಡಿಯನ್ನೂ ಕುರಿತು ಭಕ್ತರಿಗೆಂದು ಸಿದ್ಧವಾದ ಕಥೆಗಳಿವೆ; ಪುರಾಣಗಳಲ್ಲಿ ಮಾಹಾತ್ಮ್ಯೆಯನ್ನು ಹೇಳುವ ಪ್ರಕರಣಗಳಿವೆ. ಇವುಗಳಲ್ಲಿ ಇತಿಹಾಸದ ಆಸರೆ ಅಷ್ಟಿಷ್ಟು ಇರುತ್ತದೆ. ಆದರೆ ಕಲ್ಪನೆಯ ಹರವೂ ಹೊರೆಯೂ ಹೆಚ್ಚಾಗಿದ್ದು, ದಿಟವೆಂಬ ಸಂಗತಿಗಳು ಬಹುಮಟ್ಟಿಗೆ ಮಸುಕಾಗಿಬಿಡುತ್ತವೆ. ಕಾಲಕಾಲಕ್ಕೆ ಕಲ್ಪನೆಯ ನೆಲೆಯೂ ಬದಲಾಗುತ್ತ ಬಂದು, ವಿಚಾರ ತೀರ ಸಂದಿಗ್ಧವಾಗುವುದು ಸಹಜ. ವೇಂಗಡದ ವಿಚಾರದಲ್ಲಿ ಐತಿಹಾಸಿಕವೇ ಎಂಬಂಥ ಬರಹಗಳು ಮೊದಲಿಂದ ಬೇರೂರಿ ಬರಲಿಲ್ಲ; ಅದಕ್ಕೆ ಕಾರಣವೂ ಇರಲಿಲ್ಲವೆನ್ನಿ. ಅದೇನು ರಾಜಕೀಯ ಹಗರಣಗಳ ಕೇಂದ್ರವಾಗಿರಲಿಲ್ಲ ; ಅಲ್ಲೇನು ಅರಸೊತ್ತಿಗೆಗಳು ತಲೆಯೆತ್ತಿಕೊಳ್ಳಲಿಲ್ಲ ; ಅಥವಾ ವ್ಯಾಪಾರ-ಉದ್ದಿಮೆಗಳ ಸ್ಥಳವಲ್ಲ. ಮುಖ್ಯವಾಗಿ ಇದೊಂದು ಕ್ಷೇತ್ರ; ಭಕ್ತರಿಗೂ ಭಾವುಕರಿಗೂ ಹಿತವೆನಿಸುವ ತಾಣ. ಸಾವಿರಾರು ವರ್ಷಗಳಿಂದಲೂ ಇದರ ಹಿರಿಮೆ ಇಷ್ಟೇ. ಆದುದರಿಂದ ಭಕ್ತರ ಭಾವನೆಗಳಿಗೆ ಪುಟವಿಡುವ, ಅವರ ಶ್ರದ್ಧೆಯನ್ನು ಕುದುರಿಸುವ ಕಲ್ಪನೆಗಳು ಹುಲುಸಾಗಿ ಬೆಳೆದುಕೊಂಡಿದ್ದರೆ ಆಶ್ಚರ್ಯವಿಲ್ಲ. ಈ ಸ್ಥಳದ ಜಾನಪದನೆಲೆ ಆಳವಾದುದು. ಹಲವರು ಅರಸರೂ ಅಧಿಕಾರಿಗಳೂ ಈ ದೇವರಿಗೆ ನಡೆದುಕೊಂಡರು ದಿಟ, ಅವರ ಕೊಡುಗೆಗಳಿಂದ ಗುಡಿ ಬೆಳೆದುದೂ ದಿಟ. ಆದರೆ ಅವರಿಗಿಂತ ಹೆಚ್ಚಾಗಿ ಈ ದೇವರಿಗೆ ಒಲಿದುಕೊಂಡವರು ಸಾಮಾನ್ಯಜನರು. ಈ ಗುಡಿಯು ಇಂದು ಜಗತ್ತಿನಲ್ಲೇ ಅತ್ಯಂತ ಹೆಚ್ಚಿನ ಸಂಪತ್ತುಳ್ಳ ಧರ್ಮಸಂಸ್ಥೆಗಳಲ್ಲಿ ಒಂದಾಗಿದೆ. ಈ ಸಂಪತ್ತಿನಲ್ಲಿ ಅಳರಸರ ಕೊಡುಗೆ ತೀರ ಅಲ್ಪವೆಂದೇ ಹೇಳಬೇಕು. ಸಾವಿರಾರು ವರ್ಷಗಳಿಂದ ಭಕ್ತರು, ಯಾತ್ರಿಕರು, ಆರ್ತರು, ಅರ್ಚಕರು, ಬೆಲೆವೆಣ್ಣುಗಳು, ವ್ಯಾಪಾರಿಗಳು, ಸಣ್ಣಪುಟ್ಟ ಅಧಿಕಾರಿಗಳು—ಹೀಗೆ ಸಾಮಾನ್ಯಜನರ ಅಷ್ಟಿಷ್ಟು ಕೊಡುಗೆಗಳೇ ಕೂಡಿಕೊಂಡು ಇಷ್ಟು ಸಂಪತ್ತು ಹೆಚ್ಚಿರುವುದು. ಅವರ ಆದರ, ಔದಾರ್ಯ, ಆಸಕ್ತಿ, ಉತ್ಸಾಹಗಳೇ ಗುಡಿಯ ಹಿರಿಮೆಗೆ ಮೂಲಾಧಾರ. ಎಂದಮೇಲೆ, ಅರಸರ ಅಧಿಕಾರದ ಏರಿಳಿತವನ್ನು ಅವಲಂಬಿಸಿದ ಇತಿಹಾಸ ಈ ಗುಡಿಯ ಕಥೆಯನ್ನು ಕಾಣಿಸುವುದು ಹೇಗೆ?

ಆದರೂ ಇತಿಹಾಸದ ಹೆದ್ದಾರಿಯಲ್ಲಿ ಈ ಗುಡಿಯ ಹಿರಿಮೆಯು ಹಬ್ಬಿದ್ದ



ತಿಮ್ಮಪ್ಪನ ಒಂದು ಹಳೆಯ ಚಿತ್ರ

ಕಾಲುದಾರಿ ಕೆಲವು ಶತಮಾನಗಳು ಹಾದುಹೋಯಿತು. ಕೆಲವು ಅರಸೊತ್ತಿಗೆಗಳು ಈ ಗುಡಿಯನ್ನು ಬೆಳೆಸಲು ಶ್ರಮಿಸಿದುವು. ಆದುದರಿಂದ ಇತಿಹಾಸದ ಇಣುಕು ನೋಟವನ್ನಾದರೂ ಪಡೆದುಕೊಂಡರೆ, ಗುಡಿಯು ಬೆಳೆದುಬಂದ ದಾರಿಯನ್ನು ಗುರುತಿಸಲು ನೆರವಾದೀತು. ಹೆಸರಾದ ಹಲವು ಅರಸರೂ ಅಧಿಕಾರಿಗಳೂ ಮತ್ತಿತರ ಹಿರಿಯರೂ ಈ ದೇವರಿಗೆ ಕೈಂಕರ್ಯಗಳನ್ನು ಕೈಗೊಂಡು, ಅವುಗಳ ನೆನಪನ್ನೂ ಕಲ್ಲಿನ

ಮೇಲೆ ಕಡೆಯಿಸಿ ಉಳಿಸಿದ್ದಾರೆ. ಈ ಗುಡಿಗೆ ಸಂಬಂಧಪಟ್ಟ ಶಾಸನಗಳು ನೂರಾರು ಇವೆ. ತುಂಬ ಹಿಂದಿನದೆನ್ನಬಹುದಾದ ಶಾಸನ ಕ್ರಿಸ್ತಾಬ್ದ 790ರಲ್ಲಿ ಸಿದ್ಧವಾದುದು. ವಿಜಯಾದಿತ್ಯನೆಂಬ ಬಾಣವಂಶದ ಅರಸನು ಹುಟ್ಟಿದುದನ್ನು ತಿಳಿಸುವ ಈ ಶಾಸನ ಬಿಡಿಯಾಗಿ ನಿಂತಿದ್ದು, ಗುಡಿಯ ಬಳಿ ದೊರೆಯಿತು. ವಿವರಗಳು ಅಳಿಸಿಹೋಗಿವೆ. ಗುಡಿಯು ಇರದಿದ್ದ ಕಾಲದ ಶಾಸನ ಇದು. ಮುಂದೆ ನಮಗೆ ಸಿಕ್ಕಿರುವ ಶಾಸನ ಕ್ರಿಸ್ತಾಬ್ದ 829ರದ್ದು; ಆದರೆ ಇದು ದೊರತದ್ದು ಬೆಟ್ಟದ ಕೆಳಗೆ ತಿರುಚ್ಚಾನೂರಿನಲ್ಲಿ. ವೇಂಗಡದ ದೇವರ ಪ್ರತಿನಿಧಿಯೆಂಬ ಮೂರ್ತಿಯನ್ನು ಈ ಊರಿನ ತಿರುವಿಳಂ ಕೋಯಿಲಲ್ಲಿ ಇರಿಸಿದುದನ್ನು ತಿಳಿಸುವ ಈ ಶಾಸನದಿಂದ ನಮಗೆ ತಿಳಿಯುವುದು ಬೆಟ್ಟದ ದೇವರನ್ನು ಊರಿಗೆ ತಂದಿದ್ದ ಕಾಲ ಒಂದು ಇದ್ದಿತೆನ್ನುವುದು.

ಅದಾದ ಮೇಲೆ, ಮುಂದಿನ ಶಾಸನ ಕ್ರಿಸ್ತಾಬ್ದ 956ರದ್ದು; ಪಲ್ಲವ ಕಾಲದರಸಿ ಸಾಮವ್ವೆ ನಿಲ್ಲಿಸಿದ್ದು. ಬೆಟ್ಟದ ಹಿರಿಮೆ ಕೆಳಗಿನ ಊರಿನಿಂದ ಬೆಟ್ಟದ ಮೇಲಕ್ಕೇ ಹಿಂದಿರುಗಿದ ಕಥೆಯನ್ನು ಇದು ಹೇಳುತ್ತದೆ. ಈ ನಡುವೆ ಕ್ರಿಸ್ತಾಬ್ದ 945ರ ಶಾಸನವೊಂದು (ಒಂದನೆಯ ಪರಾಂತಕನ ಕಾಲದ್ದು) ಬೆಟ್ಟದ ಮೇಲಿನ ಗುಡಿಯಲ್ಲಿ ನಂದಾದೀಪವೊಂದನ್ನು ಉರಿಸುವ ಏರ್ಪಾಡನ್ನು ಪ್ರಸ್ತಾಪಿಸಿದೆ. ಎಂದಮೇಲೆ ಒಂದು ನಂದಾದೀಪದಿಂದ ಬೆಳಗುವಷ್ಟು ಸಣ್ಣ ಗುಡಿ ಆಗಲೇ ಇದ್ದಿರಬೇಕು. ಸಾಮವ್ವೆ, ಮಣವಾಳಪ್ಪೆರುಮಾಳೆಂಬ ಬೆಳ್ಳಿಯ ಮೂರ್ತಿಯನ್ನು ಮಾಡಿಸಿ ಅದನ್ನು ಗುಡಿಯೆದುರು ತಿರುವಿಳಂಕೋಯಿಲಲ್ಲಿ ಇರಿಸಿದಳೆಂದು ಆಕೆಯ ಶಾಸನ ತಿಳಿಸುತ್ತದೆ. ತಿರುವಿಳಂ ಕೋಯಿಲು ಮಂಟಪವೇ ಆಗಿದ್ದರೂ ಗುಡಿಯನ್ನು ನೋಡಿಕೊಳ್ಳುವ ವ್ಯವಸ್ಥೆ ಸಣ್ಣದಾಗಿ ಯಾದರೂ ಶುರುವಾಗಿದ್ದಿರಬೇಕು. ಹೀಗೆ ಗುಡಿಯ ಭಾಗ್ಯ ನೂರೈವತ್ತು ವರ್ಷಗಳಲ್ಲಿ ಬದಲಾದ ಸೂಚನೆ ಕಂಡುಬರುತ್ತದೆ. ಭಕ್ತರನ್ನರಸಿಕೊಂಡು ಬೆಟ್ಟದಿಂದ ಕೆಳಗಿಳಿದು ಊರ ನಡುವೆ ಬಂದ ವೇಂಗಡದ ದೇವರನ್ನು ಭಕ್ತರು ಮತ್ತೆ ಮೇಲೇರಿಸಿ ಅಲ್ಲಿಯೇ ತಾವು ನೆರೆಯುವ ಹವಣಿಕೆ ಮಾಡಿದರು.

ಯಾದವರಾಯರು

ಈ ಅವಧಿಯಲ್ಲಿ ಆ ಕಡೆ ಒಡೆತನಮಾಡುತ್ತಿದ್ದವರು ಯಾದವರಾಯರೆಂಬ ಅರಸರು. ಇವರು ಮೊದಲಿಗೆ ಪಲ್ಲವರಾಜರಿಗೂ, ಅನಂತರ ಚೋಳಚಕ್ರವರ್ತಿಗಳಿಗೂ ಸಾಮಂತರಾಗಿ ಆಳುತ್ತಿದ್ದವರು. ಅವರ ಆಳ್ವಿಕೆಯಲ್ಲಿದ್ದ ತೋಂಡಮಂಡಲದಲ್ಲಿ ಈಗಿನ ನೆಲ್ಲೂರು ಮತ್ತು ಚಿತ್ತೂರು ಜಿಲ್ಲೆಗಳ ಹಲವು ಭಾಗಗಳು ಸೇರಿದ್ದುವು. ವೇಂಗಡದ ಬೆಟ್ಟ, ನೆರೆಯ ಊರುಗಳು, ಸುತ್ತಮುತ್ತಲ ಪ್ರದೇಶವೆಲ್ಲ ಈ ತೋಂಡಮಂಡಲದ ಹರವಿನಲ್ಲಿ ಸೇರಿದ್ದುವು. ಇವರ ರಾಜಧಾನಿಯು ಗೋದಾವರೀನದಿಯ ದಂಡೆಯ ಮೇಲಿದ್ದ ವೇಂಗಿ. ಇವರು ಚಂದ್ರವಂಶದವರು, ಚಾಳುಕ್ಯರೊಂದಿಗೆ ಹತ್ತಿರದ ನಂಟನ್ನು ಪಡೆದಿದ್ದವರು. ಯಾದವರಾಯರ ಆಸಕ್ತಿಯಿಂದಲೇ ವೇಂಗಡದ ಗುಡಿ ಬೆಳೆದದ್ದು.

ಅವರ ಆಸಕ್ತಿಯಲ್ಲಿ ಮೊದಲು ಚೋಳರೂ ಅನಂತರ ಅವರನ್ನು ಸೋಲಿಸಿ ಒಡೆತನವನ್ನು ಪಡೆದ ಪಾಂಡ್ಯರಾಜರೂ ಪಾಲುಗೊಂಡರು.

ಯಾದವರಾಯರಲ್ಲಿ ಮೊಟ್ಟಮೊದಲು ನಮ್ಮ ಗಮನಕ್ಕೆ ಬರುವ ದೊರೆ ಘಟ್ಟಿದೇವ ಅಥವಾ ಘಟ್ಟಿಗ. ಇವನಿಗೆ 'ವೀರಮಂಗಲಂ ಕುಲೋತ್ತುಂಗ-ಚೋಳ-ಯಾದವರಾಯ'ನೆಂಬ ಬಿರುದಿದ್ದುದನ್ನು ನೋಡಿದರೆ ಇವನು ಮುಮ್ಮಡಿ ಕುಲೋತ್ತುಂಗನ ಸಾಮಂತನಾಗಿದ್ದನೆಂದು ತೋರುತ್ತದೆ. ಇವನು ಆಳಿದ ಅವಧಿ ಕ್ರಿಸ್ತಾಬ್ದ 1184 ರಿಂದ 1227ರವರೆಗೆ ಎಂದು ಹೇಳುತ್ತಾರೆ. ವೇಂಕಟಾಚಲ-ಇತಿಹಾಸ ಮಾಲೆಯ ಪ್ರಕಾರ, ರಾಮಾನುಜರನ್ನು ವೇಂಗಡಬೆಟ್ಟಕ್ಕೆ ಕರೆಸಿಕೊಂಡವನು ಘಟ್ಟಿ ದೇವನೇ. ಅವನ ಕಾಲವೂ ಈ ಕಥೆಯೂ ಸಾಕಷ್ಟು ಆಧಾರದ ಮೇಲೆ ನಿಲ್ಲುವುದಿಲ್ಲ. ಅವನು ವೇಂಗಡದ ದೇವರಿಗೆ ನಡೆದುಕೊಂಡಂತೆ ಕಾಣುವುದಿಲ್ಲ. ಅವನ ದಾನಶಾಸನಗಳೆಲ್ಲ ಕಾಳಹಸ್ತಿ, ಗುಡಿಮಲ್ಲಂಗಳಿಗೆ ಸಂಬಂಧಿಸಿದುವು. ಯಾದವರಾಯರಲ್ಲಿ ವೇಂಗಡದ ನಂಟನ್ನು ಮೊದಲು ಉಲ್ಲೇಖಿಸಿರುವವನು 'ಚಂದ್ರಕುಲತಿಲಕ'ನೆಂದೂ 'ಚಾಳುಕ್ಯನಾರಾಯಣ'ನೆಂದೂ ಹೆಸರಾದ ತಿರುಕ್ಕಾಳತ್ತಿದೇವ. ಇವನ ಆಳ್ವಿಕೆಯ ಕಾಲವನ್ನು ಶಾಸನಗಳ ಮೇಲೆ ನಿರ್ಧರಿಸುವುದಾದರೆ ಕ್ರಿಸ್ತಾಬ್ದ 1191ರಿಂದ 1246ರವರೆಗೆ ಎನ್ನಬೇಕಾಗುತ್ತದೆ. ಇವನು ಆಳುತ್ತಿದ್ದ ಸೀಮೆ ಕಾಳಹಸ್ತಿಯಿಂದ ತಿರುವಣ್ಣಾಮಲೆಯವರೆಗೂ ಹರಡಿದ್ದಿತು. ಅವನ ಪ್ರಶಸ್ತಿಗಳಿಂದ ಅವನು ಶೂರನೆಂದೂ ರಸಿಕನೆಂದೂ ಪಂಡಿತನೆಂದೂ ಊಹಿಸಿಕೊಳ್ಳಬಹುದು: 'ಸಕಲಭುವನಮಂಡಲೈಕಾಶ್ರಯ', 'ಸಮಸ್ತ ವಿದ್ಯೋದ್ಯಾನಮತ್ತಕಲಕಂಠ', 'ವಿದ್ವಜ್ಜನೋತ್ತಮ', 'ಸಕಲಗುಣಸಂಗ್ರಾಮ' ಎಂಬ ಬಿರುದುಗಳು ಅವನವು. 'ಗೋದಾವರೀವಲ್ಲಭ'ನೆಂದೂ 'ಕಾಳಹಸ್ತೀಶಚರಣಾರವಿಂದ ಮಧುಕರ'ನೆಂದೂ ತನ್ನನ್ನು ಕರೆದುಕೊಂಡಿದ್ದಾನೆ. ಅವನು 'ವೇಂಟರಿಪಾಲಕ'ನಂತೆ; ಎಂದರೆ ಬೇಟೆಗಾರರ ಒಡೆಯನೆಂದರ್ಥ. ಅವನ ಒಲವು ಕಾಳಹಸ್ತಿಯ ದೇವರ ಮೇಲೆ. ಅಷ್ಟಲ್ಲದೆ 'ಪೀಡಾರದೇವೀಲಬ್ಧವರಪ್ರಸಾದ' ಅವನು; ಪೀಡಾರಿಯೆಂಬ ದಕ್ಷಿಣದೇಶದ ಗ್ರಾಮದೇವತೆಯ ಒಕ್ಕಲು ಎಂದು ತೋರುತ್ತದೆ. ಅವನ ದಾನಗಳು ವೇಂಗಡವಲ್ಲದೆ, ಕಾಂಚೀಪುರದ ವಿಷ್ಣುದೇವಾಲಯ, ತಕ್ಕೋಲದ ಶಿವಾಲಯ, ತಿರುವಣ್ಣಾಮಲೆಯ ಗುಡಿಗಳಿಗೂ ಸಂದಿವೆ; ಕಾಳಹಸ್ತಿಯ ದೇವರಿಗಂತೂ ಸರಿಯೇ ಸರಿ. ಇವನ ಇಬ್ಬರು ಹೆಂಡತಿಯರೂ (ಪುಡೋಲಿ ಮಹಾದೇವಿ ಮತ್ತು ಚಾಳುಕ್ಕಿಕುಲ-ಮಾದೇವಿ) ಕಾಳಹಸ್ತಿಯ ಒಡೆಯನಿಗೇ (ತಿರುಕ್ಕಾಳತ್ತಿಉಡೈಯಾರ್) ನಡೆದುಕೊಳ್ಳುತ್ತಿದ್ದವರು. ಆ ಕಾಲಕ್ಕೆ ವೇಂಗಡ, ಕಾಳಹಸ್ತಿ, ಕಾಂಚೀಪುರ ಇವು ಆಗಲೇ ಹೆಸರಾದ ಕ್ಷೇತ್ರಗಳಾಗಿದ್ದುವು; ತಿರುವಣ್ಣಾಮಲೆಯೂ ಗುಡಿಮಲ್ಲವೂ ಪ್ರಸಿದ್ಧಿಗೆ ಬರುತ್ತಿದ್ದುವು.


ತಿರುಕ್ಕಾಳತ್ತಿದೇವನು ಶೈವಶ್ರದ್ಧಾಳುವಾಗಿದ್ದವನು. ಅವನ ಆಳ್ವಿಕೆಯ ಕಡೆಗಾಲದಲ್ಲೇ ಅವನ ಗಮನವು ವೇಂಗಡದ ಕಡೆಗೆ ಹರಿದುದು; ಅದೂ ಆ ಗುಡಿಯ ಸ್ಥಾನತ್ತಾರರು ಇವನ ನೆರವನ್ನು ಕೋರಿಕೊಂಡಾಗಲೇ. ಕ್ರಿಸ್ತಾಬ್ದ 1209ರ ಸುಮಾರಿಗೆ ಸಿದ್ಧವಾದ ಇವನ ಶಾಸನವೊಂದು ಗುಡಿಯ ಒಳಗೋಪುರದ ಅಧಿಷ್ಠಾನದಲ್ಲಿ

ಮೂಡಿಕೊಂಡಿದೆ. ಕುಡವೂರುಗ್ರಾಮದ ನಾಲ್ಕೂ ಕಡೆಯ ಗಡಿಗಳೊಳಗೆ ಸೇರಿರುವ ಹೊಲ-ಗದ್ದೆಗಳನ್ನೆಲ್ಲ ತೆರಿಗೆಯಿಲ್ಲದಂತೆ ಮಾಡಿ, 'ತಿರುವೇಂಗಡಮುಡೈಯಾನ್ ಕೋಯಿಲಿ'ಗೆ ದೇವದಾನವಾಗಿ ಬಿಟ್ಟುದನ್ನು ಈ ಶಾಸನ ತಿಳಿಸುತ್ತದೆ. ಇಡೀ ಗ್ರಾಮವನ್ನೇ ಗುಡಿಗೆ ದಾನಮಾಡಿದನೆಂದರೆ ಗುಡಿ ಆಗಲೇ ಪ್ರಸಿದ್ಧವಾಗಿರಬೇಕು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ನೆರೆಯುತ್ತಿದ್ದಿರಬೇಕು. ಅಷ್ಟಲ್ಲದೆ, ಗುಡಿಗೆ ಸ್ಥಾನತ್ತಾರರೂ ಇದ್ದರೆಂದಮೇಲೆ ಗುಡಿಯ ಆಡಳಿತವ್ಯವಸ್ಥೆ ಅಚ್ಚುಕಟ್ಟಾಗಿದ್ದಿರಬೇಕು. ಮಹಾಜನರು ಗುಡಿಗೆ ಭೂಮಿ, ತೋಟ, ಹಣ ಎಲ್ಲವನ್ನೂ ಸಲ್ಲಿಸುತ್ತ ಹಲವಾರು ಉತ್ಸವಗಳನ್ನೂ ಸೇವೆಗಳನ್ನೂ ಏರ್ಪಡಿಸುತ್ತಿದ್ದರೆಂದೂ, ಈ ಕಾರಣದಿಂದ ಗುಡಿಗೆ ಸುಮಾರು ಸಂಪತ್ತು ಇದ್ದಿತೆಂದೂ ಊಹಿಸಿಕೊಳ್ಳಬಹುದು. ಇಲ್ಲವಾದರೆ ಸ್ಥಾನತ್ತಾರರು ಇರುವ ಕಾರಣ ವೇನು? ಶಾಸನ ಮೂಡಿಕೊಂಡಿರುವ ಸ್ಥಳವನ್ನು ಗಮನಿಸಿದರೆ, ಗುಡಿಗೆ ಮೊದಲ ಆವರಣವೂ ಒಳಗೋಪುರವೂ ಇದ್ದಿತೆನ್ನುವುದು ಸ್ಪಷ್ಟವಾಗುತ್ತದೆ.

ಈ ಸಂದರ್ಭದಲ್ಲಿ ಇನ್ನೊಂದು ಸ್ವಾರಸ್ಯವಾದ ಅಂಶ ಎದ್ದುಕೊಳ್ಳುತ್ತದೆ. ತಿರುಕ್ಕಾಳತ್ತಿದೇವನ ಮಗ ವೀರರಾಕ್ಷಸನೆಂಬುವನು (ಇವನಿಗೆ ಸಿಂಗಪಿಳ್ಳೆಯೆಂಬ ಹೆಸರೂ ಇದ್ದಿತು). ಈ ದೇವರ ಹಿರಿಮೆಯನ್ನು ತಂದೆಗಿಂತ ಮೊದಲೇ ಅರಿತುಕೊಂಡಿದ್ದ, ತಿರುಕ್ಕಾಳತ್ತಿದೇವನ ದಾನಶಾಸನಕ್ಕೆ ಸುಮಾರು ಹದಿನಾರು ವರ್ಷಗಳು ಮೊದಲೇ (ಕ್ರಿಸ್ತಾಬ್ದ 1193ರಲ್ಲಿ) ತಿರುವೇಂಗಡದೊಡೆಯನಿಗೆ 'ತಿರುಮಂತ್ರಪ್ಪೋನಕ'ವನ್ನು ವ್ಯವಸ್ಥೆ ಮಾಡಿದ ಶಾಸನ ವೀರರಾಕ್ಷಸನದು ದೊರೆತಿದೆ. ಈ ಶಾಸನ, ಗುಡಿಯ ಕಟ್ಟಡದೊಳಗೆ ಮೂಡಿಕೊಂಡು ಬಂದಿಲ್ಲ; ಬಿಡಿಯಾಗಿ ಕಲ್ಲುಹಲಗೆಯೊಂದರ ಮೇಲೆ ಇದೆ ಅಷ್ಟೆ. ಎಂದರೆ, ಆ ಕಾಲಕ್ಕೆ ಇನ್ನೂ ಗೋಪುರವಾಗಲೀ ಪ್ರಾಕಾರವಾಗಲೀ ಎದ್ದುಕೊಂಡಿರಲಿಲ್ಲ ವೆಂದರ್ಥವೆ? ಗರ್ಭಗುಡಿಯಿದ್ದುದೂ, ಅದರೆದುರು ತಿರುವಿಳಂಕೋಯಿಲಿದ್ದುದೂ ಸಾಮವೈ-ಶಾಸನದಿಂದಲೇ ತಿಳಿದುಬರುತ್ತದೆ. ಇದು ಕ್ರಿಸ್ತಾಬ್ದ 966ರ ಮಾತು. ವೀರರಾಕ್ಷಸನ ಕಾಲಕ್ಕೂ ಅಷ್ಟೇ ಇದ್ದಿರಬೇಕು. ಆದರೆ ತಿರುಕ್ಕಾಳತ್ತಿದೇವನ ಗಮನ ಅದರ ಕಡೆ ಹರಿಯುವ ವೇಳೆಗೆ, ಎಂದರೆ ಹದಿನೈದು-ಹದಿನಾರು ವರ್ಷಗಳಲ್ಲಿ, ಪ್ರಾಕಾರ ಮತ್ತು ಗೋಪುರಗಳನ್ನು ಕಟ್ಟಿಸಿರಬೇಕು; ಜನರೇ ಇದರ ಹೊಣೆಯನ್ನು ಹೊತ್ತುಕೊಂಡಿರಬೇಕು. ಪ್ರಾಕಾರವನ್ನಾಗಲೀ ಗೋಪುರವನ್ನಾಗಲೀ ಯಾವ ಅರಸನೂ ಕಟ್ಟಿಸಿದ ಉಲ್ಲೇಖವಿಲ್ಲ. ತಿರುಕ್ಕಾಳತ್ತಿದೇವನ ಶಾಸನದಲ್ಲಿ 'ತಿರುಮಲೆತ್ತಾ(ನತ್ತಾ)ರ್' (ತಿರುಮಲೆಯ ಸ್ಥಾನತ್ತಾರರು) ಎಂಬ ಮಾತು ಬರುತ್ತದೆ. ತಿರುವೇಂಗಡಬೆಟ್ಟಕ್ಕೆ ತಿರುಮಲೆಯೆಂಬ ಹೆಸರು ಬಳಕೆಗೆ ಬರುತ್ತಿದ್ದಿತೆನ್ನಲು ಇದು ನೆರವಾಗುತ್ತದೆ. ವೇಂಗಡವೂ ಬೆಟ್ಟವೇ, ಮಲೆಯೆಂದರೂ ಬೆಟ್ಟವೇ. ಬೆಟ್ಟವೆಂದಲ್ಲದೆ ಈ ಕ್ಷೇತ್ರಕ್ಕೆ ಬೇರಾವ ಹೆಸರೂ ವಾಡಿಕೆಯಲ್ಲಿರಲಿಲ್ಲ. ಶಾಸನದಲ್ಲಿ ಬೆಟ್ಟದ ದೇವರನ್ನು 'ವೇಂಗಡ ದೊಡೆಯ' (**ತಿರುವೇಂಗಡಮುಡೈಯಾನ್**) ಎಂದೇ ಕರೆಯಲಾಗಿದೆ.

ಗುಡಿಗೆ ಬಂಗಾರದ ವಿಮಾನ

ಯಾದವರಾಯರ ವಂಶದಲ್ಲಿ ತುಂಬ ಹೆಸರಾದವನು ವೀರನರಸಿಂಗ. ಇವನ ಆಳ್ವಿಕೆಯ ಕಾಲ ಸುಮಾರು ಐವತ್ತೇಳು ವರ್ಷಗಳಷ್ಟು ದೀರ್ಘವಾದುದು; ಕ್ರಿಸ್ತಾಬ್ದ 1262 ರವರೆಗೂ ಇವನು ಆಳುತ್ತಿದ್ದವನು. ಈ ಅವಧಿಯಲ್ಲಿ ಮೂರು ರಾಜವಂಶಗಳು



ದ್ವಾರಪಾಲಕರು

ತೋಂಡಮಂಡಲದ ಮೇಲೆ ಅಧಿಕಾರ ಮಾಡಿದುವು. ವೀರನರಸಿಂಗನು ಮೂವರು ಚೋಳರಾಜರಿಗೂ (ಮುಮ್ಮಡಿ ಕುಲೋತ್ತುಂಗ, ಮುಮ್ಮಡಿ ರಾಜರಾಜ ಮತ್ತು ಮುಮ್ಮಡಿ ರಾಜೇಂದ್ರ), ತೆಲುಗು-ಪಲ್ಲವ ರಾಜನೊಬ್ಬನಿಗೂ (ವೀರಗಂಡಗೋಪಾಲ), ಒಬ್ಬ ಪಾಂಡ್ಯಚಕ್ರವರ್ತಿಗೂ (ಜಟಾವರ್ಮ-ಸುಂದರಪಾಂಡ್ಯ) ಸಾಮಂತನಾಗಿದ್ದನೆಂದು ತಿಳಿದುಬರುತ್ತದೆ. ಹೆಸರಿಗೆ ಸಾಮಂತನಾಗಿದ್ದರೂ, ಹೆಚ್ಚೂ ಕಡಮೆ ಸ್ವತಂತ್ರನಾಗಿಯೇ

ತೋಂಡಮಂಡಲದ ಒಂದು ಭಾಗವನ್ನು ವೀರನರಸಿಂಗನು ಆಳುತ್ತಿದ್ದನು. ಇವನ ಆಳ್ವಿಕೆಗೆ ಒಳಪಟ್ಟ ನಾಡಿನಲ್ಲಿ ಕಾಳಹಸ್ತಿ, ವೇಂಗಡ, ತಿರುಪತಿ, ತಿರುವೆಟ್ರಿಯೂರು, ಕಾರುವೆಟ್ಟಿನಗರ (ಕಾರ್ವೇಟಿನಗರ)—ಇವು ಮುಖ್ಯಸ್ಥಳಗಳಾಗಿದ್ದುವು. ಮುಮ್ಮಡಿ ರಾಜರಾಜನ ಕಾಲದಲ್ಲಿ (ಕ್ರಿಸ್ತಾಬ್ದ 1216ರಿಂದ 1248ರವರೆಗೆ) ವೀರನರಸಿಂಗನ ಬಲ ಹೆಚ್ಚಿತು. ನಡುವೆ ತೆಲುಗು-ಪಲ್ಲವರಾಜ ವೀರಗಂಡಗೋಪಾಲನ ಅಧೀನನಾಗಿ ಒಂದೆರಡು ವರ್ಷ ಇರಬೇಕಾಯಿತು. 1250ರ ಸುಮಾರಿಗೆ ಪಾಂಡ್ಯಚಕ್ರವರ್ತಿಯು ವೀರಗಂಡಗೋಪಾಲನನ್ನು ಕೊಂದು, ಮುಮ್ಮಡಿ ರಾಜೇಂದ್ರಚೋಳನನ್ನು ಕಾಂಚೀಪುರದಿಂದ ಓಡಿಸಿ, ಸುಮಾರು ಇಡೀ ದಕ್ಷಿಣದೇಶವನ್ನೇ ತನ್ನ ವಶಪಡಿಸಿಕೊಂಡಮೇಲೆ ವೀರನರಸಿಂಗನು ಪಾಂಡ್ಯರಾಜನ ಸಾಮಂತನಾದ. ವೀರನರಸಿಂಗನು ಬದುಕಿರುವ ವರೆಗೂ ಅವನಿಗೆ ಅಧಿರಾಜನಾಗಿದ್ದವನು ಜಟಾವರ್ಮ ಸುಂದರಪಾಂಡ್ಯನೇ. ಇವನ ವಿಚಾರ ಮುಂದೆ ಬರುತ್ತದೆ.

ವೀರನರಸಿಂಗನು ವೇಂಗಡದ ದೇವರಿಗೆ ಉತ್ಸಾಹದಿಂದ ಕೈಂಕರ್ಯವನ್ನು ಸಲ್ಲಿಸಿದ ಅರಸರಲ್ಲಿ ಮೊದಲನೆಯವನು. ಬೆಟ್ಟದ ಮೇಲಿನ ಗುಡಿಯಲ್ಲಿ ಹೊರಗಣ ಪಡಿಕ್ಕಾವಲಿಗೋಪುರದ ಕೆಳಗೋಡೆಯ ಮೇಲಿರುವ ಸಣ್ಣ ಶಾಸನವೊಂದು ಅವನು ಮಾಡಿದ ದೊಡ್ಡ ಸೇವೆಯನ್ನು ತಿಳಿಸುತ್ತದೆ. ನಾಲ್ಕೇ ಸಾಲುಗಳಿರುವ ಈ ಸಂಸ್ಕೃತ ಶಾಸನವು ವೀರನರಸಿಂಗನು ವೇಂಗಡದಲ್ಲಿ ತನ್ನನ್ನು ಬಂಗಾರದಲ್ಲಿ ತೂಗಿಸಿಕೊಂಡು, ತನ್ನ ತೂಕಕ್ಕೆ ಸಮನಾದ ಬಂಗಾರದಿಂದ ವೇಂಗಡದ ಬೆಟ್ಟವು ದೇವತೆಗಳ ಬೆಟ್ಟಕ್ಕೆ (ಸುರಗಿರಿಗೆ, ಎಂದರೆ ಮೇರುಪರ್ವತಕ್ಕೆ) ಸಮನಾಗುವಂತೆ ಮಾಡಿದನು ಎಂದು ಹೇಳುತ್ತದೆ—

ಶ್ರೀಮಾನ್ ವೀರನೃಸಿಂಹದೇವನೃಪತಿಃ ಕೃತ್ವಾ ತುಲಾರೋಹಣಂ
ಚಕ್ರೇ ವೇಂಗಡಭೂಧರಂ ಸುರಗಿರೇಸ್ತುಲ್ಯಂ ತುಲಾಕಾಂಚನೈಃ।

ಶಾಸನದ ಮಾತು ಇಷ್ಟೇ. ವೇಂಗಡದ ಬೆಟ್ಟವನ್ನು ಸುರಗಿರಿಯಂತೆ ಮಾಡಿದುದು ಹೇಗೆಂಬ ವಿವರಗಳು ದೊರೆಯುವುದಿಲ್ಲ. ಬಂಗಾರದ ಮಾತು ಬರುವುದರಿಂದ, ಗರ್ಭಗುಡಿಯ ಮೇಲೆ ವಿಮಾನವನ್ನು ಕಟ್ಟಿಸಿ ಅದಕ್ಕೆ ಬಂಗಾರದ ಕವಚವನ್ನು ತೊಡಿಸಿದನೆಂದು ತಿಳಿದುಕೊಳ್ಳಬಹುದು. ಏಕೆಂದರೆ ಇದಾದ ಹತ್ತಾರು ವರ್ಷಗಳಲ್ಲೇ ಜಟಾವರ್ಮ-ಸುಂದರಪಾಂಡ್ಯನು ವಿಮಾನದ ಮೇಲೆ ಬಂಗಾರದ ಕಲಶವನ್ನು ಮೂಡಿಸಿದ ಉಲ್ಲೇಖವಿದೆ. ಗರ್ಭಗುಡಿಯ ಮೇಲೆ ಗಾರೆಗಚ್ಚಿನ ವಿಮಾನ ಮೊದಲೇ ಇದ್ದಿತೋ, ಅಥವಾ ವೀರನರಸಿಂಗನೇ ಅದನ್ನು ಕಟ್ಟಿಸಿದನೋ ಹೇಳುವುದು ಕಷ್ಟ. ಬಹುಮಟ್ಟಿಗೆ ಅವನ ಕಾಲದಲ್ಲೇ ವಿಮಾನವು ಎದ್ದುಕೊಂಡಿರಬೇಕು. ಈ ಶಾಸನದ ಕಾಲ, ಎಂದರೆ ವೀರನರಸಿಂಗನು ತುಲಾಭಾರ ತೂಗಿಸಿಕೊಂಡು ಬಂಗಾರದ ವಿಮಾನವನ್ನು ಬೆಳಗಿಸಿದ ವರ್ಷ, ಕ್ರಿಸ್ತಾಬ್ದ 1250 ಎಂದು ಹೇಳಬಹುದು. ಈ ಸುಮಾರಿನಲ್ಲೇ (ವೀರನರಸಿಂಗನು ಪಟ್ಟವೇರಿ ನಲವತ್ತು ವರ್ಷಗಳಾದಮೇಲೆ, ಎಂದರೆ,

1249ರಲ್ಲಿ) ಈ ಅರಸನ ಅನುಮತಿಯನ್ನು ಪಡೆದು ತಿರುಪ್ಪುಲ್ಲಾಣೆದಾಸರ್ ಎಂಬ ದೇಶಾಂತರಿಯು (ಹೊರವೂರಿನಿಂದ ವಲಸೆಬಂದವನು) ಗರ್ಭಗುಡಿಯನ್ನು ದುರಸ್ತಿ ಮಾಡಿಸಿದನೆಂಬ ಶಾಸನವೊಂದು ಬೆಟ್ಟದ ಗುಡಿಯ ಮೊದಲ ಪ್ರಾಕಾರದ ಉತ್ತರ ಭಾಗದ ಗೋಡೆಯ ಮೇಲಿದೆ. ಆ ಕಾಲಕ್ಕೆ ಗರ್ಭಗುಡಿಯು ಶಿಥಿಲವಾಗಿದ್ದಿತೆಂದೂ, ಅದನ್ನು ಭದ್ರಪಡಿಸುವ ಅಗತ್ಯ ಇದ್ದಿತೆಂದೂ ಊಹಿಸಿಕೊಳ್ಳಬಹುದು.

ಗರ್ಭಗುಡಿಯನ್ನು ಮತ್ತೆ ಅಚ್ಚುಕಟ್ಟಾಗಿ ಕಟ್ಟಿಸಿದವನು ಯಾವ ಅರಸನೂ ಅಲ್ಲ; ಒಬ್ಬ ಭಕ್ತ, ಯಾತ್ರಿಕ. ಈ ದೇಶಾಂತರಿಯು ಗರ್ಭಗುಡಿಯಿದ್ದ ಸ್ಥಿತಿಯನ್ನು ನೋಡಿ, ಅದನ್ನು ಸರಿಪಡಿಸಬೇಕೆಂದು ಮನಸ್ಸುಮಾಡಿ, ತನ್ನ ಬಯಕೆಯನ್ನು ಅರಸನೆದುರು (ನಾಯನಾರ್ ವೀರನರಸಿಂಗ ದೇವರ್) ಹೇಳಿಕೊಂಡನೆಂದೂ, ಅರಸನು ಇದಕ್ಕೊಪ್ಪಿ ನಿರೂಪವೊಂದನ್ನು (ತಿರುಮುಖಂ) ಗುಡಿಯ ಸ್ಥಾನತ್ತಾರರಿಗೆ ಕಳುಹಿಸಿದನೆಂದೂ, ಅನಂತರ ಗರ್ಭಗುಡಿ (ಕೋಯಿಲಾಳ್ವಾರ್) ಮತ್ತು ಅದರ ಸುತ್ತ ಇದ್ದ ಗುಡಿ (ಕೋಯಿಲ್)ಗಳ ದುರಸ್ತಿಗೆ ದೇಶಾಂತರಿಯು ತೊಡಗಿದನೆಂದೂ ಶಾಸನದ ಸಂದರ್ಭ ಸೂಚಿಸುತ್ತದೆ. ಮೊದಲು ಗರ್ಭಗುಡಿಯಲ್ಲಿ ಮತ್ತು ಸುತ್ತಣ ಗುಡಿಯಲ್ಲಿ ಮೂಡಿ ಕೊಂಡಿದ್ದ ಶಿಲಾಶಾಸನಗಳನ್ನೆಲ್ಲ ಮೊದಲ ಪ್ರಾಕಾರದ ಹೊರಗೋಡೆಯ ಮೇಲೆ ಉತ್ತರಮೂಲೆಯಲ್ಲಿ ಮತ್ತೆ ಪ್ರತಿಮಾಡಿಸಿ ಮೂಡಿಸುವ ಕೆಲಸವನ್ನೂ ಸ್ಥಾನತ್ತಾರರು ಕೈಗೊಂಡ ಪ್ರಸ್ತಾಪ ಶಾಸನದಲ್ಲಿದೆ. ಎಂದರೆ ಈಗ ನಾವು ನೋಡುವ ಗುಡಿಯ ಒಳಭಾಗವೆಲ್ಲ ಕ್ರಿಸ್ತಾಬ್ದ 1249ರಲ್ಲಿ ಸಿದ್ಧವಾಯಿತು. ಆ ವೇಳೆಗಾಗಲೇ ವಿಮಾನವಿದ್ದಿದ್ದರೆ ದುರಸ್ತಿಯ ಕೆಲಸ ಅಷ್ಟು ಸರಾಗವಾಗಿ ಆಗುತ್ತಿರಲಿಲ್ಲ. ಗರ್ಭಗುಡಿಯ ದುರಸ್ತಿಯಾದ ಮೇಲೆ, ಅದರ ಸುತ್ತ ಮುಕ್ಕೋಟಿಪ್ರದಕ್ಷಿಣೆಯೂ ಸಿದ್ಧವಾದಮೇಲೆ, ಎರಡನ್ನೂ ಕೂಡಿಸಿಕೊಂಡು ಸೂರು ಸಿದ್ಧವಾದಾಗ ಅದರ ಮೇಲೆ ಅರಸನು ವಿಮಾನವನ್ನು ಕಟ್ಟಿಸಿದನೆನ್ನಬಹುದು. ವಿಮಾನದ ಗಾರೆಗಚ್ಚಿನ ಕಟ್ಟಡದ ಕೆಲಸ ಮುಗಿದಮೇಲೆ, ಅದನ್ನು ಬಂಗಾರದ ತಗಡುಗಳಿಂದ ಹೊದಿಸುವ ಕೆಲಸ ಮೊದಲಾಗಿರಬೇಕು. ಇವೆಲ್ಲ ಮುಗಿಯುವುದಕ್ಕೆ ಕೆಲವು ವರ್ಷಗಳು ಹಿಡಿಸಿರಬೇಕು. ಬಂಗಾರದ ವಿಮಾನ ಎದ್ದುಕೊಂಡಮೇಲೇ ಪಾಂಡ್ಯರಾಜನು ಕ್ರಿಸ್ತಾಬ್ದ 1262ರ ಸುಮಾರಿಗೆ ಬಂಗಾರದ ಕಲಶವನ್ನು ಏರಿಸಿರಬೇಕು.

ಇದಕ್ಕೆ ಮೊದಲೇ, ಕ್ರಿಸ್ತಾಬ್ದ 1217ರಷ್ಟು ಹಿಂದೆಯೇ, ದೇವರೆದುರು ಎರಡು ನಂದಾದೀಪಗಳನ್ನು ಉರಿಸಲು ದಿನವೂ ಬೇಕಾಗುವ ತುಪ್ಪವನ್ನು ಒದಗಿಸಲು ಅವನು ಅರವತ್ತುನಾಲ್ಕು ಹಸುಗಳನ್ನೂ ಎರಡು ಹೋರಿಗಳನ್ನೂ ಗುಡಿಗೆ ದಾನಮಾಡಿದ್ದನು. ಈ ಕೈಂಕರ್ಯದಲ್ಲಿ ಅವನ ಅರಸಿ ಯಾದವರಾಯ-ನಾಚ್ಚಿಯಾರ್ ಪಾಲುಗೊಂಡಿದ್ದಳು. ಈ ಅರಸಿಯು ತಿರುಪತಿಯ ಗೋವಿಂದರಾಜನಿಗೂ (ಗೋವಿಂದಪ್ಪೆರುಮಾಳ್) ಇದೇ ಬಗೆಯಾಗಿ ಒಂದು 'ತಿರುನಂದಾವಿಳಕ್ಕು' ದಿನವೂ ಉರಿಯಲೆಂದು ಮೂವತ್ತೆರಡು ಹಸುಗಳನ್ನೂ ಒಂದು ಹೋರಿಯನ್ನೂ ದಾನವಾಗಿ ಕೊಟ್ಟ ಶಾಸನವಿದೆ. ಆಕೆಯೇ ಅಲ್ಲಿ ಒಂದು ಬ್ರಹ್ಮೋತ್ಸವವೂ ನಡೆಯುವಂತೆ ವ್ಯವಸ್ಥೆ ಮಾಡಿದಳು. ಪೈಂಡಪಳ್ಳಿಯ


ಅರ್ಧಭಾಗ ಮೊದಲೇ ವೇಂಗಡದ ಗುಡಿಗೆ ದೇವದಾನವಾಗಿ ಕೊಡಲ್ಪಟ್ಟಿದ್ದಿತು; ಈಗ ಅದರ ಇನ್ನೊಂದರ್ಧಭಾಗ ತಿರುಪತಿಯ ಗೋವಿಂದರಾಜನ ಗುಡಿಗೆ ಸೇರಿತು. ಹೀಗೆ ವೀರನರಸಿಂಗನ ಅರಸಿಯು ತಿರುಮಲೆ-ತಿರುಪತಿಗಳ ನಂಟನ್ನು ಹೆಚ್ಚಿಸಿದಳು. ತಿರುಚ್ಚಾನೂರು ಕಳೆಗುಂದಿ ಹಿಂದೆ ಸರಿಯತೊಡಗಿದಾಗ ತಿರುಪತಿ ತಲೆಯೆತ್ತಿಕೊಂಡಿತು. ಯಾದವರಾಯರ ಕಾಲದಲ್ಲಿ ಅದು ಪ್ರಮುಖವಾದ ಶ್ರೀವೈಷ್ಣವಕ್ಷೇತ್ರವಾಗಿದ್ದು ತಿರುಮಲೆಯೊಂದಿಗೆ ಅದರ ಸಂಬಂಧ ಬೆಳೆಯತೊಡಗಿತು. ಮೊದಲಿಗೆ ತಿರುಪತಿ ಗ್ರಾಮವು 'ತಿರುನಾಮತ್ತುಕ್ಕಾಣಿ'ಯಷ್ಟೇ ಆಗಿದ್ದುದು ಮುಂದೆ ತಿರುವೇಂಕಟನಾಥ-ಯಾದವರಾಯನ ಕಾಲದಲ್ಲಿ ಸರ್ವಮಾನ್ಯವಾಯಿತು. ಹಲವು· ಶ್ರೀವೈಷ್ಣವ ಸಂಪ್ರದಾಯದ ಸನ್ನಿಧಿಗಳೂ ಉತ್ಸವಗಳೂ ಸೇವೆಗಳೂ ಅಲ್ಲಿ ಮೂಡಿಕೊಂಡು ಬಂದುವು.

ಜಟಾವರ್ಮ-ಸುಂದರಪಾಂಡ್ಯ

ವೀರನರಸಿಂಗನ ಕಾಲದಲ್ಲಿ ತಲೆಯೆತ್ತಿಕೊಂಡ ತೆಲುಗು-ಪಲ್ಲವರಾಜರು ನೆಲ್ಲೂರಿನ ಕಡೆ ಆಳುತ್ತಿದ್ದವರು. ಭಾರದ್ವಾಜಗೋತ್ರದ ಮುಕ್ಕಂಟಿ-ಕಾಡುವೆಟ್ಟಿ ಮನೆತನದ ದೋರಪರಾಜು ಎಂಬ ಪಾಳ್ಳೇಗಾರನ ಮಗ ಯಮ್ಮರಾಜು ತನ್ನನ್ನು 'ಶ್ರೀಮನ್-ಮಹಾಮಂಡಲೇಶ್ವರ-ನಂದಿವರ್ಮಮಹಾರಾಜ'ನೆಂದು ಕರೆದುಕೊಂಡು ಕ್ರಿಸ್ತಾಬ್ದ 1102ರಲ್ಲಿ ಅರಸೊತ್ತಿಗೆಯನ್ನು ಆರಂಭಮ್ಮಾಡಿದನು. ಈ ವಂಶದಲ್ಲಿ ಹೆಸರಾದವನು ವೀರಗಂಡ-ಗೋಪಾಲ. ಮೊದಲಿಗೆ ಚೋಳರಿಗೆ ಅಧೀನವಾಗಿದ್ದ ಈ ಅರಸೊತ್ತಿಗೆ ಇವನ ಕಾಲದಲ್ಲಿ ಸ್ವತಂತ್ರವಾಯಿತು. ಇವನು ಏಳೆಂಟು ವರ್ಷಗಳು ಒಡೆತನಮಾಡಿದ ಮೇಲೆ, 1250ರಲ್ಲಿ, ಪಾಂಡ್ಯಚಕ್ರವರ್ತಿಯಾದ ಜಟಾವರ್ಮ-ಸುಂದರಪಾಂಡ್ಯನು ಇವನನ್ನು ಕೊಂದು ಯಾದವರಾಯರ ಮೇಲೆ ಒಡೆತನವನ್ನು ಪಡೆದುಕೊಂಡನು. ಯಾದವರಾಯ-ವೀರನರಸಿಂಗನೂ ಈ ವೀರಗಂಡ-ಗೋಪಾಲನ ಅಧೀನನಾಗಿ ಒಂದೆರಡು ವರ್ಷ ಇರಬೇಕಾಯಿತು; ಆ ಕಾಲಕ್ಕೆ ಚೋಳರಾಜರ ಸ್ಥಿತಿ ಅಷ್ಟು ಸುಭದ್ರವಾಗಿರಲಿಲ್ಲ. ವೀರಗಂಡ-ಗೋಪಾಲನು ದುಷ್ಟನಾಗಿದ್ದನೆಂದು ಪಾಂಡ್ಯ ರಾಜನ ಶಾಸನ ತಿಳಿಸುತ್ತದೆ. ವೀರಗಂಡ-ಗೋಪಾಲನನ್ನು ಕೊಂದಮೇಲೆ ತೆಲುಗು-ಪಲ್ಲವ ಅರಸೊತ್ತಿಗೆಯು ಪಾಂಡ್ಯರಾಜನ ಅಧೀನವಾಗಿ ವೀರಗಂಡ-ಗೋಪಾಲನ ತಮ್ಮ ವಿಜಯಗಂಡ-ಗೋಪಾಲನ ವಶಕ್ಕೆ ಬಂದಿತು.

ಮುಂದೆ ಮೂವತ್ತೈದು ವರ್ಷಗಳ ಕಾಲ ತೆಲುಗು-ಪಲ್ಲವಅರಸನಾಗಿ ಮೆರೆದವನು ಇವನೇ. ಇವನನ್ನು ಶಾಸನಗಳು 'ನಾಯನಾರ್' ಎಂದೂ 'ತ್ರಿಭುವನಚಕ್ರವರ್ತಿ' ಎಂದೂ ಕರೆದಿವೆ. ಇವನೂ ಇವನ ಅರಸಿಯರೂ ವೇಂಗಡದ ದೇವರಿಗೆ ಹಲವಾರು ಕೈಂಕರ್ಯಗಳನ್ನು ಸಲ್ಲಿಸಿದ ಶಾಸನಗಳಿವೆ; ದುರ್ದೈವದಿಂದ ಶಾಸನಗಳ ಪಾಠ ಪೂರ್ತಿಯಾಗಿ ಉಳಿದುಬಂದಿಲ್ಲ. ಕೈಂಕರ್ಯಗಳು ಏನೆಂಬುದು ತಿಳಿಯುವುದಿಲ್ಲ.

ಒಂದು ಶಾಸನ ಮಾತ್ರ ಅರಸಿಯು (ದೇವಿಯಾರ್) ದೇವರೆದುರು ಮೂರು ದೀಪಗಳನ್ನು ಉರಿಸುವ ಸಲುವಾಗಿ ಮೂವತ್ತು ಹಸುಗಳನ್ನು ಗುಡಿಗೆ ಕೊಟ್ಟಳೆಂದು ತಿಳಿಸುತ್ತದೆ. ವಿಜಯಗಂಡ-ಗೋಪಾಲನ ಅರಮನೆಯಲ್ಲಿ ಊಳಿಗಮಾಡುತ್ತಿದ್ದ ಅಮ್ಮಯ್ಯಪ್ಪನ್ (ಅಣ್ಣನ್....ಪೆರುಮಾಳ್‌ಪ್ರಿಯನ್) 'ನಂದಾವಿಳಕ್ಕು'ಕ್ಕೆಂಕರ್ಯಕ್ಕೆಂದು ಮೂವತ್ತುಮೂರು ಹಸುಗಳನ್ನೂ ಒಂದು ಹೋರಿಯನ್ನೂ ಗುಡಿಗೆ ಕೊಟ್ಟ ಶಾಸನವೂ ಒಂದಿದೆ. ಅಂತೂ ಈ ತೆಲುಗು-ಪಲ್ಲವಅರಸನ ಕಾಲದಲ್ಲಿ ಬೆಟ್ಟದ ಗುಡಿಯಲ್ಲಿ



ತಿರುಮಲರಾಯ-ಮಂಟಪ

ನಂದಾದೀಪಗಳನ್ನು ಉರಿಸುವ ಕೈಂಕರ್ಯ ತುಂಬ ಬಳಕೆಯಲ್ಲಿದ್ದಿತೆಂದು ಕಾಣುತ್ತದೆ. ಶಾಸನಗಳಲ್ಲೆಲ್ಲ 'ಶ್ರೀವೈಷ್ಣವರಕ್ಷೆ'ಯ ಮಾತಿದೆ. ರಾಮಾನುಜರ ಪ್ರಭಾವ ಬಲಗೊಳ್ಳು

ತ್ತಿದ್ದ ಕಾಲ ಅದು. ವೀರನರಸಿಂಗನಾದಮೇಲೆ ಬಂದ ಯಾದವರಾಯರೂ ಈ ಪ್ರಭಾವಕ್ಕೆ ಒಳಗಾದವರೇ.

ವೀರನರಸಿಂಗನ ಮೇಲೆ ಅಧಿಕಾರಮಾಡುತ್ತಿದ್ದ ವೀರಗಂಡ-ಗೋಪಾಲನು ಸತ್ತಮೇಲೆ ಅಧಿಕಾರವು ವಿಜಯಗಂಡ-ಗೋಪಾಲನಿಗೆ ಹಾಯದೆ ಪಾಂಡ್ಯರಾಜ ನಲ್ಲಿಯೇ ಉಳಿಯಿತು. ಪಾಂಡ್ಯರಾಜರು ಕಾವೇರಿನದಿಯ ದಕ್ಷಿಣಭಾಗದಲ್ಲಿ ಮಧುರೆ ಯಿಂದ ಆಡಳಿತ ನಡೆಸುತ್ತಿದ್ದವರು. ಜಟಾವರ್ಮ-ಸುಂದರಪಾಂಡ್ಯನು (ಇವನಿಗೆ ವಳುದಿ ಸುಂದರ-ಮಾರನ್ ಎಂಬ ಹೆಸರೂ ಇದ್ದುದಾಗಿ ಶಾಸನದಿಂದ ತಿಳಿದು ಬರುತ್ತದೆ) ಪಟ್ಟಕ್ಕೆ ಬಂದುದು ಕ್ರಿಸ್ತಾಬ್ದ 1250ಕ್ಕೆ ಕೊಂಚ ಮೊದಲು. ಪಟ್ಟಕ್ಕೆ ಬಂದೊಡನೆ ಕೇರಳವನ್ನು ಗೆದ್ದು, ಕಾಂಚೀಪುರದಿಂದ ಮುಮ್ಮಡಿ ರಾಜೇಂದ್ರ ಚೋಳನನ್ನು ಓಡಿಸಿ, ತೆಲುಗು-ಪಲ್ಲವರನ್ನು ಸದೆಬಡಿದು ಹೆಚ್ಚೂ ಕಡಮೆ ಇಡೀ ದಕ್ಷಿಣದೇಶವನ್ನೆಲ್ಲ ವಶಪಡಿಸಿಕೊಂಡನು. ಅವನ ಪ್ರಶಸ್ತಿಗಳನ್ನು ನೋಡಿ: 'ಕೇರಳವಂಶ ನಿರ್ಮೂಲನ', 'ಚೋಳ-ಕುಲ-ಶೈಲ-ಕುಲಿಶ' (ಚೋಳರ ವಂಶವೆಂಬ ಬಂಡೆಗೆ ಸಿಡಿಲುಪೆಟ್ಟು), 'ಕಾಠಕಕರಿ-ಕೂಟಪಾಲಕ' (ಪಲ್ಲವರಾಜನಾದ ಕಾಡವಕೋಪ್ಪೆರುಂಜಿಂಗ ನೆಂಬ ಆನೆಗೆ ಬೇನೆಯಂತಾದವನು), 'ವೀರಗಂಡ-ಗೋಪಾಲ-ವಿಪಿನ-ದಾವದಹನ' (ತೆಲುಗು-ಪಲ್ಲವರಾಜ ಆಂಧ್ರೇಶ್ವರ ವೀರಗಂಡಗೋಪಾಲನೆಂಬ ಕಾಡಿಗೆ ಕಿಚ್ಚಿನಂತಿರು ವವನು), 'ಗಣಪತಿ-ಹರಿಣ-ಶಾರ್ದೂಲ' (ಉತ್ಕಲದ ಕಾಕತೀಯರ ರಾಜ ಗಣಪತಿ ಯೆಂಬ ಜಿಂಕೆಗೆ ಹುಲಿಯಂತಿರುವವನು), 'ಕರ್ನಾಟಕರಾಜ-ವಿದ್ರಾವಣ' (ಕನ್ನಡ ನಾಡಿನ ರಾಜ ಹೊಯ್ಸಳ-ವೀರಸೋಮೇಶ್ವರನನ್ನು ಬೆದರಿಸಿದವನು), 'ಲಂಕಾಪುರೀ-ಲುಠನ-ದ್ವಿತೀಯರಾಮ' (ಶ್ರೀಲಂಕೆಯನ್ನು ಸೋಲಿಸಿದ ಎರಡನೆಯ ರಾಮ) ಮೊದ ಲಾದುವು. ಇವೆಲ್ಲ ಸೀಮೆಗಳನ್ನು ಅವನು ಗೆದ್ದುಕೊಂಡನಾದರೂ, ಆಯಾ ಅರಸರಿಗೇ ಆಳ್ವಿಕೆಗಳನ್ನು ವಹಿಸಿಕೊಟ್ಟು ತಾನು ಸಂಪ್ರದಾಯದಂತೆ ಬಂದ ಮಧುರೆಯ ರಾಜ್ಯವನ್ನು ಮಾತ್ರ ನೋಡಿಕೊಳ್ಳುತ್ತಿದ್ದನು. ಅವನ ಅಧೀನರೆಂತಾದ ಅರಸರು ಹೆಸರಿಗೆ ಮಾತ್ರ ಸಾಮಂತರು ಅಷ್ಟೇ. ವೀರಗಂಡ-ಗೋಪಾಲನನ್ನು ಅವನು ಕೊಂದಮೇಲೆ, ಅವನ ಅಧೀನರಾಗಿದ್ದ ಯಾದವರಾಯನೂ ಶಂಬುವರಾಯನೂ ತಾವಾಗಿ ಈ ಪಾಂಡ್ಯರಾಜನ ಅಧಿಕಾರವನ್ನು ಒಪ್ಪಿಕೊಂಡರು. ಇವನ ಅಧಿಕಾರವು ಕ್ರಿಸ್ತಾಬ್ದ 1275ರವರೆಗೂ ಮುಂದರಿಯಿತು.

ಜಟಾವರ್ಮ-ಸುಂದರಪಾಂಡ್ಯನು ತನ್ನ ಜೈತ್ರಯಾತ್ರೆಯನ್ನು ಮುಗಿಸಿ ನೆಲ್ಲೂರಿ ನಿಂದ ಕಾಂಚೀಪುರಕ್ಕೆ ವೀರಾಭಿಷೇಕಕ್ಕಾಗಿ ಬರುವಾಗ ದಾರಿಯಲ್ಲಿ ವೇಂಗಡದೊಡೆಯನ ದರ್ಶನಕ್ಕೆಂದು ಬೆಟ್ಟವೇರಿ ಬಂದನು. ಬೆಟ್ಟದ ಮೇಲೆ ಯಾದವರಾಯ-ವೀರನರ ಸಿಂಗನು ಗರ್ಭಗುಡಿಯ ಮೇಲ್ಭಾಗದಲ್ಲಿ ವಿಮಾನವೊಂದನ್ನು ಕಟ್ಟಿಸಿ ಅದಕ್ಕೆ ಬಂಗಾರದ ಹೊದಿಕೆಯನ್ನು ಸಿದ್ಧಪಡಿಸಿದ್ದನು. ಅದನ್ನು ನೋಡಿದ ಪಾಂಡ್ಯರಾಜನು ವಿಮಾನದ ಮೇಲೆ ಬಂಗಾರದ ಕಲಶವನ್ನು (ಹೇಮಕಲಶ) ಸ್ಥಾಪಿಸಿದನೆಂದು ಶಾಸನವಿದೆ. ಶಾಸನವೇನೋ, ಈ ಬಂಗಾರದ ಕಲಶದ ಹೊಳಪಿಗಿಂತ ಅರಸನ ಮೈಕಾಂತಿಯೇ

ಹೆಚ್ಚಿನದೆಂದು ಅರಸನ ಹಿರಿಮೆಯನ್ನು ಹಾಡುತ್ತದೆ. ಕಲಶವು ವಿಮಾನದ ಮೇಲ್ಭಾಗದಲ್ಲಿರುವ ವಿವರವಾದುದರಿಂದ ಯಾದವರಾಯನಿಗಿಂತ ಪಾಂಡ್ಯರಾಜನ ಹೆಚ್ಚಳವನ್ನು ಸೂಚಿಸಲೆಂದೇ ಸಿದ್ಧವಾಗಿರಬಹುದು. ಈ ರಾಜನಿಗೆ ದೈವಭಕ್ತಿ ಅಷ್ಟಾಗಿ ಇದ್ದ ಕುರುಹುಗಳು ಶಾಸನಗಳಲ್ಲಿ ಕಾಣುವುದಿಲ್ಲ. ಬಹುಮಟ್ಟಿಗೆ ತನ್ನ ಪ್ರತಾಪವನ್ನು ಕೊಚ್ಚಿಕೊಳ್ಳಲೆಂದೇ ಹೊರಟ ಶಾಸನಗಳು ಅವನವು. ವಿಮಾನದ ಮೇಲೆ ಕಲಶವನ್ನು ಮೂಡಿಸಿದುದನ್ನು ತಿಳಿಸುವ ಶಾಸನವೂ ಈ ಬಗೆಯದೇ. ಗುಡಿಯಲ್ಲಿ ಮುಕ್ಕೋಟಿ-ಪ್ರದಕ್ಷಿಣೆಯ ಉತ್ತರ ಗೋಡೆಯಲ್ಲಿರುವ ಅವನ ಇನ್ನೊಂದು ಶಾಸನ 'ತ್ರಿಭುವನ ಚಕ್ರವರ್ತಿಗಳಾದ ಶ್ರೀ ಸುಂದರ-ಪಾಂಡ್ಯದೇವರು ತಿರುವೇಂಕಟ(ಮುಡೈಯಾನ)ನಿಗೆ' ಏನನ್ನೋ ಸಲ್ಲಿಸಿದುದನ್ನು ಹೇಳುತ್ತದೆ; ಸೇವೆಯ ವಿವರ ಅಳಿಸಿಹೋಗಿದೆ.


ಕನ್ನಡನಾಡಿನ ನಂಟು

ಯಾದವರಾಯರ ವಂಶದಲ್ಲಿ ವೀರನರಸಿಂಗನ ಅನಂತರ ಹೆಸರು ಪಡೆದು ಆಳಿದ ಅರಸನೆಂದರೆ ತಿರುವೇಂಕಟನಾಥ-ಯಾದವರಾಯ. ಇವನು ತೋಂಡಮಂಡಲದ ಉತ್ತರ ಭಾಗವನ್ನು (ಎಂದರೆ ಈಗಿನ ಚಿಂಗಲಪೇಟೆ, ಉತ್ತರ ಆರ್ಕಾಡು, ಚಿತ್ತೂರು ಜಿಲ್ಲೆಗಳು) ಪಾಂಡ್ಯಅರಸರಿಗೆ ಅಧೀನನಾಗಿ ಆಳುತ್ತಿದ್ದನು. ಆದರೆ ಮಾಲಿಕ್-ಕಾಫೂರನು ಕ್ರಿಸ್ತಾಬ್ದ 1301ರಲ್ಲಿ ಪಾಂಡ್ಯರಾಜ್ಯವನ್ನು ಮುರಿದಾಗ, ಕನ್ನಡ ನಾಡಿನ ಹೊಯ್ಸಳರಾಜರು ತೋಂಡಮಂಡಲವನ್ನು ವಶಪಡಿಸಿಕೊಂಡರು; ಯಾದವರಾಯರು ಅವರ ಸಾಮಂತರಾಗಿರಲು ಸಮ್ಮತಿಸಿದರು. ತಿರುವೇಂಕಟನಾಥ ಮತ್ತು ಶ್ರೀರಂಗನಾಥ ಇಬ್ಬರೂ ಯಾದವರಾಯರು ಹೊಯ್ಸಳರ ಮೇಲಧಿಕಾರವನ್ನು ಒಪ್ಪಿಕೊಂಡಿದ್ದವರೇ. ಹೊಯ್ಸಳರು ಚೋಳರೊಂದಿಗೂ ಪಾಂಡ್ಯರೊಂದಿಗೂ ಹಲವಾರು ಹಗರಣಗಳಲ್ಲಿ ಸಹಕರಿಸಿ ಪ್ರಬಲರಾಗಿದ್ದವರು; ತಿರುವಣ್ಣಾಮಲೆಯು ಹೊಯ್ಸಳರಾಜನಾಗಿದ್ದ ಮುಮ್ಮಡಿ ವೀರಬಲ್ಲಾಳನ ಪ್ರಾಂತವೇ ಆಗಿದ್ದಿತು. ದೂರದ ಮಧುರೆಯಿಂದ ಆಳುತ್ತಿದ್ದ ಪಾಂಡ್ಯರಾಜರಿಗೆ ಉತ್ತರದ ತೋಂಡಮಂಡಲದ ಮೇಲೆ ಹಿಡಿತ ಅಷ್ಟಾಗಿ ಇರಲಿಲ್ಲ. ವೀರಬಲ್ಲಾಳನ ಕಣ್ಣು ತೋಂಡಮಂಡಲದ ಉತ್ತರಭಾಗದ ಮೇಲೆ ಬಿದ್ದಿತು. ಆ ಸಮಯಕ್ಕೆ ಸರಿಯಾಗಿ ಮುಸಲ್ಮಾನರ ದಾಳಿಯಿಂದ ಪಾಂಡ್ಯರ ಆಡಳಿತ ಕೈಜಾರಿಹೋಯಿತು. ವೀರಬಲ್ಲಾಳನು ಉತ್ತರ ತೋಂಡಮಂಡಲದ ಮೇಲೆ ನುಗ್ಗಿದ; ತಿರುವೇಂಕಟನಾಥ-ಯಾದವರಾಯನು ಅವನಿಗೆ ಶರಣಾಗಿ ಕಾಣಿಕೆ ಕೊಡಲೊಪ್ಪಿದ; ಈ ಕಾಣಿಕೆಗೆ 'ಬಲ್ಲಾಳ ದೇವರ್-ವರಿ'ಯೆಂದು ಹೆಸರಾಯಿತು.

ಹೊಯ್ಸಳವಂಶದ ದೊರೆಗಳಿಗೆ ಪ್ರಧಾನಿಗಳಾಗಿ ನೆರವಾದವರು ದಣ್ಣಾಯಕನ ಕೋಟೆ-ಪಾಳ್ಳೇಗಾರರು. ಈಗಿನ ಕೊಯಮತ್ತೂರು ಜಿಲ್ಲೆಯಲ್ಲಿ ಸತ್ಯಮಂಗಲ ತಾಲೂಕಿಗೆ ಸೇರಿದಂತಿದೆ ದಣ್ಣಾಯಕನ ಕೋಟೆ. ಅಲ್ಲಿನ ಪಾಳ್ಳೇಗಾರರು ಹೊಯ್ಸಳ ದೊರೆಗಳಿಗೆ ನಡೆದುಕೊಳ್ಳುತ್ತಿದ್ದವರು. ಇವರಲ್ಲಿ ಪೆರುಮಾಳ್-ದೇವ ಎಂಬುವನು

ಹೊಯ್ಸಳರಾಜ ಮುಮ್ಮಡಿ ನರಸಿಂಹನಿಗೆ ಪ್ರಧಾನಿಯಾಗಿದ್ದವನು. ಇವನ ಮಗ ಮಾದಪ್ಪನೂ (ಮಾಧವ) ಇದೇ ರಾಜನಿಗೆ ಪ್ರಧಾನಿಯಾದ. ಮಾದಪ್ಪನ ಮಗ ವೀರ-ಚಿಕ್ಕ-ಕೇತಯನು ಮುಮ್ಮಡಿ ವೀರ-ಬಲ್ಲಾಳನ ಸಾಮಂತನಾಗಿ ಈಗಿನ ಮೈಸೂರು ಜಿಲ್ಲೆಯಲ್ಲಿ ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿಯಲ್ಲಿ 'ಪದಿನಾಲ್ಕು ನಾಡು' ಎಂಬ ಸೀಮೆಯನ್ನು ಆಳುತ್ತಿದ್ದನು. ಇದು ಕ್ರಿಸ್ತಾಬ್ದ 1323ರ ಸುಮಾರಿನ ಮಾತು. ಮಾದಪ್ಪನ ಎರಡನೆಯ ಮಗ, ಚಿಕ್ಕ-ಕೇತಯನ ತಮ್ಮ, ಸಿಂಗಯ್ಯ-ದಣ್ಣಾಯಕನು ಯಾದವರಾಯ ತಿರುವೇಂಕಟನಾಥನಿಗೆ ಸೇನಾನಿಯಾಗಿದ್ದನು; ಯಾದವರಾಯನ ಪ್ರಧಾನಿಯಾಗಿದ್ದ ರೇಚಯ್ಯನು ತೀರಿಕೊಂಡಮೇಲೆ ಸಿಂಗಯ್ಯನೇ ಪ್ರಧಾನಿಯಾದನು. ರೇಚಯ್ಯನ ಮಗಳನ್ನು ಯಾದವರಾಯನು ಮದುವೆಯಾಗಿದ್ದನು. ರೇಚಯ್ಯನ ವಿಚಾರವಾಗಿ ಸಿಂಗಯ್ಯನಿಗೆ ತುಂಬ ಆದರವಿದ್ದಿತು; ರೇಚಯ್ಯನೂ ದಣ್ಣಾಯಕನ ಕೋಟೆ-ಮನೆತನಕ್ಕೆ ಸೇರಿದ್ದವನೇ.

ಸಿಂಗಯ್ಯನು ಪ್ರಧಾನಿಯಾದಮೇಲೆ, ಯಾದವರಾಯನು ತಿರುವೇಂಗಡ ದೊಡೆಯನಿಗೆ ಇಲ್ಲತ್ತೂರು-ನಾಡಿನಲ್ಲಿದ್ದ ಪೊಂಗಳೂರು ಎಂಬ ಗ್ರಾಮವನ್ನು ಸರ್ವ



ಮಹಾದ್ವಾರ

ಮಾನ್ಯವಾಗಿ ದಾನಮಾಡುವಂತೆ ಪ್ರೇರಿಸಿದನು. ದೇವರಿಗೆ ಅಡಿ-ತಿರುನಾಳ್-ಉತ್ಸವ ವನ್ನು ನಡೆಸಲೂ ರೇಚಯ್ಯ-ದಣ್ಣಾಯಕನ ಹೆಸರಿನಲ್ಲಿ ಸಿಂಗಯ್ಯನು ಏರ್ಪಡಿಸಿದ ಸಂಧಿಯೊಂದನ್ನು ನಿರ್ವಹಿಸಲೂ ಈ ದಾನ ನೆರವಾಗಬೇಕೆಂದು ಶಿಲಾಶಾಸನ, ತಾಮ್ರಶಾಸನಗಳು ಹೊರಟುವು. ಗುಡಿಯ ಒಳಗೋಪುರ-ಪ್ರಾಕಾರದ ಹೊರಗೋಡೆ

ಯೊಂದರ ಮೇಲೆ ಶಿಲಾಶಾಸನವಿದೆ. ಸಿಂಗಯ್ಯನು ರೇಚಯ್ಯನ ಹೆಸರಿನಲ್ಲಿ ಏರ್ಪಡಿಸಿದ ಸಂಧಿಯನ್ನು 'ಸಿತಕರಗಂಡನ್‌ಸಂಧಿ' ಎಂದು ಕರೆಯಲಾಗಿದೆ. 'ಸಿತಕರ ಗಂಡ'ನೆನ್ನುವುದು ದಣ್ಣಾಯಕನ ಬಿರುದುಗಳಲ್ಲೊಂದು. ಸಿಂಗಯ್ಯನು ದಾನವಾಗಿ ಕೊಡಿಸಿದ ಪೊಂಗಳೂರಿಗೆ ''ಸಿಂಗಣ-ನಲ್ಲೂರು' ಎಂದೇ ಹೆಸರಾಯಿತು.

ಸಿಂಗಯ್ಯನ ಕೈಂಕರ್ಯ ಕೆಳತಿರುಪತಿಗೂ ಸಂದಿತು. ಅಲ್ಲಿ ಗೋವಿಂದರಾಜನ ಗುಡಿಗೆ ಹೊಂದಿಕೊಂಡಂತೆ ತಿರುಮಂಗೈ-ಆಳ್ವಾರ್ ಸನ್ನಿಧಿ ಮತ್ತು ವೀರ-ನರಸಿಂಗ-ಪೆರುಮಾಳ್ ಸನ್ನಿಧಿಗಳಿದ್ದುವು. ತಿರುಮಂಗೈ-ಆಳ್ವಾರರ ಸನ್ನಿಧಿಯೇನೋ ಗೋವಿಂದ ರಾಜನ ನೆರೆಯಲ್ಲಿಯೇ ಇದೆ. ವೀರ-ನರಸಿಂಗ-ಪೆರುಮಾಳ್ ಸನ್ನಿಧಿ ಈಗ ಕಾಣುವು ದಿಲ್ಲ , ಎಲ್ಲಿದ್ದಿತೋ ತಿಳಿಯುವುದಿಲ್ಲ ; ಯಾರು ಅದನ್ನು ಏರ್ಪಡಿಸಿದರೋ ಅದೂ ತಿಳಿಯದು. ವೀರನರಸಿಂಗ-ಯಾದವರಾಯನೇ ತನ್ನ ಹೆಸರಿನಲ್ಲಿ ವಿಷ್ಣುವಿನ ಒಂದು ಸನ್ನಿಧಿಯನ್ನು ಸ್ಥಾಪಿಸಿದ್ದಿರಬಹುದು; ಯಾದವ-ನಾರಾಯಣನ ಗುಡಿಯಿರುವಂತೆ. ಅಥವಾ ಅವನ ಮಗ ನರಸಿಂಗ-ತಿರುಕ್ಕಾಳತ್ತಿದೇವನು ತಂದೆಯ ಹೆಸರಿನಲ್ಲಿ ಏರ್ಪಡಿ ಸಿರಬಹುದು. ಅಂತೂ ತಿರುವೇಂಗಡದ ಗುಡಿಗೆ ದಾನವಾಗಿ ಕೊಟ್ಟ ಗ್ರಾಮದ ಆದಾಯ ದಿಂದ, ತಿರುಪತಿಯ ಈ ಎರಡೂ ಸನ್ನಿಧಿಗಳಲ್ಲಿಯೂ ದಿನವೂ 'ತಿರುಪ್ಪೋನಕ'ಗಳನ್ನು ನೀಡಿ, ಮೂವತ್ತೆರಡು ಮಂದಿ ಶ್ರೀವೈಷ್ಣವರಿಗೆ ಅನ್ನದಾನ ಮಾಡಬೇಕೆಂಬ ವಿವರವೂ ಶಾಸನದಲ್ಲಿದೆ. ಕೆಳತಿರುಪತಿಯಲ್ಲಿ ಸಿಂಗಯ್ಯನ ಪ್ರಯತ್ನದ ಫಲವಾಗಿ 'ಸಿತಕರಗಂಡನ್-ಮಠ'ವೆಂಬ ಶ್ರೀವೈಷ್ಣವಮಠವೊಂದು ಎದ್ದುಕೊಂಡಿತು. ಬೆಟ್ಟದ ಮೇಲೂ ಇದೇ ಹೆಸರಿನ ಮಠವೊಂದನ್ನು ಅವನು ಏರ್ಪಡಿಸಿದನಂತೆ. ಸಿಂಗಯ್ಯನು ತಿರುವೇಂಕಟನಾಥ-ಯಾದವರಾಯನ ಕಾಲದಲ್ಲಿ ಸೇನಾನಿಯಾಗಿದ್ದು ಮುಂದೆ ಮಹಾಪ್ರಧಾನಿಯಾಗಿ ಶ್ರೀರಂಗನಾಥ-ಯಾದವರಾಯನಿಗೆ ನೆರವಾಗಿ ಕೆಲವು ವರ್ಷಗಳ ನಂತರ ಮುಮ್ಮಡಿ ವೀರಬಲ್ಲಾಳನಿಗೆ ಪ್ರಧಾನಿಯಾಗಿ ಕೆಲಸವನ್ನು ನಿರ್ವಹಿಸುತ್ತಿದ್ದಂತೆ ತಿಳಿದುಬರುತ್ತದೆ. ಶಾಸನಗಳಲ್ಲಿ 'ಶ್ರೀಮನ್ ಮಹಾಪ್ರಧಾನಿ ಇಮ್ಮಡಿ ರಾಹುತ್ತರಾಯನ್ ಮಾದಪ್ಪನ್-ಸಿಂಗಯ್ಯ-ದಣ್ಣಾಯಕ'ನೆಂಬ ಒಕ್ಕಣೆ ಕಾಣಬರುತ್ತದೆ. ವೀರಬಲ್ಲಾಳನು ಕ್ರಿಸ್ತಾಬ್ದ 1347ರ ಸುಮಾರಿಗೆ ತೀರಿಕೊಂಡಮೇಲೆ ಇವನು ಸ್ವತಂತ್ರವಾಗಿಯೇ ಆಳತೊಡಗಿದನು.

ಸಿಂಗಯ್ಯನು ಶ್ರೀವೈಷ್ಣವಧರ್ಮಕ್ಕೆ ಒಲಿದಿದ್ದವನೆನ್ನುವುದು ಸ್ಪಷ್ಟವಾಗಿದೆ. ಬೆಟ್ಟದ ಮೇಲೂ ಕೆಳಗೂ ಶ್ರೀವೈಷ್ಣವಮಠಗಳನ್ನು ಊರ್ಜಿತಗೊಳಿಸಿದವನು ಇವನೇ. ಮುಂದೆ ಗುಡಿಯ ನಿರ್ವಹಣೆಯಲ್ಲಿ ಪ್ರಧಾನವಾದ ಪಾತ್ರವನ್ನು ವಹಿಸಿದ ಅರಿಶಿಣಾಲಯಂ-ನಂದವನಮಠ ಮತ್ತು ವಣ್-ಶಠಕೋಪನ್-ನಂದವನಮಠ ಎರಡೂ ಇವನ ಉತ್ತೇಜನದಿಂದಲೇ ಮೂಡಿಕೊಂಡವು. ಅರಿಶಿಣಾಲಯಂ-ನಂದವನಮಠದ ಜೀಯರು ತಿರುವೇಂಗಡದೊಡೆಯನಿಗೆ ನಿತ್ಯಕೈಂಕರ್ಯದಲ್ಲಿ ತೊಡಗಬೇಕೆಂದೂ, ಅವರು ಬದುಕಿರುವವರೆಗೂ ಮಠದಲ್ಲಿ ವಾಸಿಸಬೇಕೆಂದೂ, ಅವರು ತೀರಿಕೊಂಡನಂತರ ಮಠದ ಹಕ್ಕುಬಾಧ್ಯತೆಗಳು ದಣ್ಣಾಯಕನಿಗೇ ಮರಳಬೇಕೆಂದೂ, ಆಗ ತಿರುವೇಂಗಡ ದೊಡೆಯನ ಕೈಂಕರ್ಯಕ್ಕೆ ದೇಶಾಂತರಿಯೊಬ್ಬನನ್ನು ನೇಮಿಸುವರೆಂದೂ ವಿವರಗಳು

ಬೆಟ್ಟದ ಮೇಲಿನ ಗುಡಿಯ ಮೊದಲ ಗೋಪುರ-ಪ್ರಾಕಾರದಲ್ಲಿ ಇವೆ. ವೈಖಾನಸ-ಅರ್ಚನೆಯೇ ಬೇರೂರಿ ಬಲವಾದ ಈ ಗುಡಿಯಲ್ಲಿ ಪಾಂಚರಾತ್ರಸಂಪ್ರದಾಯದ ಶ್ರೀವೈಷ್ಣವ ಜೀಯರ ಪಾತ್ರವನ್ನೂ ಅಳವಡಿಸಿದವನು ಸಿಂಗಯ್ಯ. ರಾಮಾನುಜರ ಪ್ರಭಾವವನ್ನು ಪ್ರತಿಬಿಂಬಿಸುವ ಕೆಲವು ಪದ್ಧತಿಗಳು ಬೆಟ್ಟದ ಗುಡಿಯಲ್ಲಿ ಬಳಕೆಗೆ ಬಂದುದು ಇವನ ಆದೇಶದಿಂದಲೇ.

ಸಾಮಾನ್ಯವಾಗಿ ಗುಡಿಯಲ್ಲಿ ನಡೆಯುವ ಪೂಜೆ ಅರ್ಚಕರಿಗೆ ಬಿಟ್ಟದ್ದು; ಸೇವೆಗಳು, ಉತ್ಸವಗಳು, ದಾನಗಳು ಮುಂತಾದ ವಿವರಗಳನ್ನೂ ಗುಡಿಯ ಆದಾಯ ವ್ಯಯಗಳನ್ನೂ ನೋಡಿಕೊಳ್ಳುವವರು ಸ್ಥಾನತ್ತಾರರು. ಸ್ಥಾನತ್ತಾರರು ಲೌಕಿಕರು, ಊರ ಮಹಾಜನರು. ಗುಡಿಯ ಆಡಳಿತವೆಲ್ಲ ಅವರ ನಿರ್ಧಾರಕ್ಕೆ ಬಿಟ್ಟದ್ದು. ಮೊದಲಿನ ಯಾದವರಾಯರ ಕಾಲದಲ್ಲಿ ಗುಡಿಯ ಆಡಳಿತದಲ್ಲಿ ಅರಸರು ಕೈ ಹಾಕುತ್ತಿರಲಿಲ್ಲ; ಸ್ಥಾನತ್ತಾರರೇ ಸ್ವತಂತ್ರವಾಗಿ ನಿರ್ವಹಿಸುತ್ತಿದ್ದರು. ಆದರೆ ತಿರುವೇಂಕಟನಾಥ-ಯಾದವರಾಯ ಮತ್ತು ಶ್ರೀರಂಗನಾಥ-ಯಾದವರಾಯರ ಕಾಲದಲ್ಲಿ ಸ್ಥಾನತ್ತಾರರು ಅರಸರ (ಎಂದರೆ, ಅವರ ಪ್ರಧಾನಿಗಳ) ಆದೇಶವನ್ನು ಅನುಸರಿಸಿ ಆಡಳಿತವನ್ನು ನೋಡಿಕೊಳ್ಳುವುದು ವಾಡಿಕೆಯಾಯಿತು; ಅರಸನ 'ತಿರುಮುಗಂ' (ಎಂದರೆ, ಶ್ರೀಮುಖ, ನಿರೂಪ) ಒಂದು ಕಟ್ಟುಪಾಡಾಯಿತು. ಆ ಕಾಲದ ಶಾಸನಗಳಿಂದ ಇದು ತಿಳಿದು ಬರುತ್ತದೆ. ಅರಸರ ಕೋರಿಕೆಯನ್ನು ಸ್ಥಾನತ್ತಾರರು ಮೀರುವಂತಿರಲಿಲ್ಲ, ಎದುರಿಸುವಂತಿರಲಿಲ್ಲ. ಮೇಲಾಗಿ, ಅರಸರ, ಅವರ ಅಧಿಕಾರಿಗಳ ಆಸಕ್ತಿಯಿಂದ ಗುಡಿಯಲ್ಲಿ ಉತ್ಸವಗಳೂ ಸಂಧಿಗಳೂ ಸೇವೆಗಳೂ ಮಂಟಪಗಳೂ ಸಂಪತ್ತೂ ಬೆಳೆಯುತ್ತಿರುವಾಗ ಸ್ಥಾನತ್ತಾರರು ಅರಸರನ್ನೂ ಅವರ ಅಧಿಕಾರಿಗಳನ್ನೂ ಎದುರು ಹಾಕಿಕೊಳ್ಳುವುದು ಹೇಗೆ? ಗುಡಿ ಬೆಳೆಯಬೇಕು, ಅದರ ವೈಭವ ಹೆಚ್ಚಬೇಕೆಂಬುದೇ ಸ್ಥಾನತ್ತಾರರ ಕಾತರವಲ್ಲವೆ?

ಇನ್ನು, ಗುಡಿಯಲ್ಲಿನ ಸಂಪ್ರದಾಯವನ್ನು ಊಹಿಸಿಕೊಳ್ಳುವುದು ಅರ್ಚಕರ ಪಾಡು. ಸ್ಥಾನತ್ತಾರರಿಗೂ ಅದಕ್ಕೂ ಸಂಬಂಧವಿಲ್ಲ. ಅರಸರು ಪಾಂಚರಾತ್ರಪದ್ಧತಿಗೆ ಒಲಿದಿದ್ದ ಶ್ರೀವೈಷ್ಣವಧರ್ಮವನ್ನು ಗ್ರಹಿಸಿದಾಗ, ಇತರ ಪಾಂಚರಾತ್ರಗುಡಿಗಳಲ್ಲಿ (ಶ್ರೀರಂಗ, ಕಂಚಿ ಮೊದಲಾಗಿ) ಬಳಕೆಯಲ್ಲಿದ್ದ ಹಲವು ಆಚಾರಗಳನ್ನೂ ಉತ್ಸವಗಳನ್ನೂ ಬೆಟ್ಟದ ಗುಡಿಯಲ್ಲೂ ತರಬೇಕೆಂದು ಆಸೆಬಟ್ಟುದು ಸಹಜ; ಶ್ರೀರಂಗದ ಕೋಯಿಲಿನಲ್ಲಿ, ಉತ್ಸವಸಂದರ್ಭಗಳಲ್ಲಿ ಕಾಣುತ್ತಿದ್ದ ವೈಭವವನ್ನು ಅವರು ಅರಿತಿದ್ದರು. ಆದರೆ ಈ ಗುಡಿಯ ಅರ್ಚಕರು ವೈಖಾನಸರು; ಹಿಂದಿನಿಂದಲೂ ಬಂದ ಸಂಪ್ರದಾಯವನ್ನು ತಪ್ಪಿಸದೆ, ಮಾರ್ಪಡಿಸದೆ ನಡೆಸಿಕೊಂಡು ಹೋಗುವುದು ಅವರ ಹಟ. ಅರಸರ ಬಯಕೆ ಮತ್ತು ಅರ್ಚಕರ ಹಟ—ಇದರ ನಡುವೆ ಸ್ಥಾನತ್ತಾರರು ಕೊಂಚ ಪರದಾಡಬೇಕಾಯಿತು. ಕಡೆಗೆ ಅರಸರ ಕಡೆ ಸ್ಥಾನತ್ತಾರರು ಒಲಿದುದರಲ್ಲಿ ಆಶ್ಚರ್ಯವೇನಿಲ್ಲ. ಅರ್ಚಕರು ವಿಧಿಯಿಲ್ಲದೆ ಕೆಲವು ಮಾರ್ಪಾಟುಗಳನ್ನು ಒಪ್ಪಿಕೊಳ್ಳಬೇಕಾಯಿತು.

ನಿದರ್ಶನವಾಗಿ, ಗುಡಿಯಲ್ಲಿ ಉತ್ಸವಮೂರ್ತಿ ಸೇರಿದುದನ್ನು ಹೇಳಬಹುದು. ವೇಂಗಡದ ಗುಡಿಯಲ್ಲಿ ಧ್ರುವಬೇರ ನಿಂತಿರುವುದು ಒಂಟಿಯಾಗಿ; ಈ ಗುಡಿಯನ್ನು 'ಏಕಬೇರಾಲಯ'ವೆಂದೇ ಕರೆಯುತ್ತಾರೆ. ವಿಷ್ಣುವೆಂದಾದರೂ, ಬಿಡಿಯಾಗಿ ಲಕ್ಷ್ಮಿಯಾಗಲೀ ಮತ್ತಾವ ಮೂರ್ತಿಯಾಗಲೀ ಇಲ್ಲ. ಗುಡಿಯಲ್ಲಿ ನಿತ್ಯವಿಧಿಗಳು ನಡೆಯುವಾಗ ಕೆಲವು ಇತರ ಬೇರಗಳು (ಸ್ನಪನ, ಬಲಿ, ಕೊಲುವು, ಉತ್ಸವ ಇತ್ಯಾದಿ) ಬೇಕಾಗುತ್ತವೆ. ಇಂಥ ಪ್ರಯೋಜನಕ್ಕಾಗಿಯೇ ಬೆಳ್ಳಿಯ ಮಣವಾಳಪ್ಪೆರುಮಾಳನ್ನು ಮಾಡಿಸಿಕೊಟ್ಟುದು. ಹೀಗೆ ಇತರ ಬೇರಗಳನ್ನು ಮಾಡಿಸುವಾಗ ಅವೆಲ್ಲ ಧ್ರುವಬೇರದ (ಎಂದರೆ, ಮೂಲವರ) ಪ್ರತಿಕೃತಿಯೇ ಆಗಿರಬೇಕೆನ್ನುವುದು ಆಗಮದ ವಿಧಿ. ಸಾಮವೈ ಮಾಡಿಸಿಕೊಟ್ಟ ಮೂರ್ತಿ ಹೀಗೆಯೇ ಇದ್ದಿತು; ಅದೂ ಮೂಲವರಂತೆ ಒಂಟಿ ಮೂರ್ತಿಯೇ. ಆದರೆ ಈಗ ಗುಡಿಯಲ್ಲಿ ಉತ್ಸವಮೂರ್ತಿಯೆಂದು ಪ್ರಸಿದ್ಧವಾಗಿರುವ 'ಮಲೆಯಪ್ಪಸ್ವಾಮಿ' ಒಂಟಿಯಾಗಿಲ್ಲ; ಶ್ರೀದೇವಿ-ಭೂದೇವಿಯರೆಂಬ ಇಬ್ಬರು ನಾಚ್ಚಿಯಾರರೊಡನೆ ಇರುವ ಮೂರ್ತಿ ಅದು. ಇಂಥ ಮೂರ್ತಿಗಳ ಆಗತ್ಯ ಪಾಂಚರಾತ್ರಸಂಪ್ರದಾಯದ ಪೂಜಾಪದ್ಧತಿಯಲ್ಲಿದೆ; ವೈಖಾನಸರಿಗೆ ಅದರ ಆಗತ್ಯವಿಲ್ಲ, ಮೇಲಾಗಿ ಮೊದಲಿನಿಂದ ಈ ಮೂರ್ತಿ ಇರದಿದ್ದ ಮೇಲೆ ಈಗ ಅದು ಮೂಡಿಕೊಳ್ಳಬೇಕಾದ ಕಾರಣವೂ ಅವರಿಗೆ ಕಾಣಲಿಲ್ಲ.

ಶ್ರೀರಂಗನಾಥ ಯಾದವರಾಯನ ಕಾಲದಲ್ಲಿ ಈ ಉತ್ಸವಮೂರ್ತಿ ಬೆಟ್ಟದ ಗುಡಿಯನ್ನು ಸೇರಿತು. ಆ ಗುಡಿಯಲ್ಲಿ ವರದರಾಜಸನ್ನಿಧಿಯ ಉತ್ತರಭಾಗದ ಗೋಡೆಯ ಮೇಲೆ ಮೂಡಿರುವ ಶಾಸನವೊಂದು (ಕಾಲ: ಕ್ರಿಸ್ತಾಬ್ದ 1339) ಈ ಮೂರ್ತಿಯನ್ನೂ ನಾಚ್ಚಿಯಾರರನ್ನೂ (ಎಂದರೆ, ದೇವಿಯರನ್ನೂ) ಚೇದಿರಾಯನ ಹೂಮಂಟಪದಲ್ಲಿ (ತಿರುಪ್ಪೂಮಂಡಪಂ) ಕೂಡಿಸಿ ವಿಶೇಷವಾದ ಉತ್ಸವವೊಂದನ್ನು ನಡೆಸಬೇಕೆಂಬ ಕಟ್ಟಳೆಯನ್ನು ಹೇಳುತ್ತದೆ. ಶಾಸನವು ಮೂರ್ತಿಯನ್ನು 'ಮಲೈಕ್ಕಿನಿಯ ನಿನ್ರಪೆರುಮಾಳ್' (ಎಂದರೆ, ಬೆಟ್ಟವು ಬಾಗಿರುವೆಡೆ ನಿಂತ ದೇವರು) ಎಂದು ಕರೆದಿದೆ. ನಾರಾಯಣಗಿರಿಯ ನೆರೆಯಲ್ಲಿ ಬೆಟ್ಟವೊಂದರ ಇಳಿಜಾರಿನಲ್ಲಿ ಈ ಮೂರು ಮೂರ್ತಿಗಳೂ (ಇಬ್ಬರು ನಾಚ್ಚಿಯಾರರು, ಶ್ರೀನಿವಾಸ) ದೊರೆತುವೆಂದು ಕಥೆಯಿದೆ. ಆದರೆ ಇದು ಪಾಂಚರಾತ್ರಮೂರ್ತಿಗಳೆಂಬುದು ಸ್ಪಷ್ಟವಾಗುತ್ತದೆ. ತಿರುಚ್ಚಾನೂರಿನಲ್ಲಿ ತಿರುವಿಳಂಕೋಯಿಲ್ ನಡೆಯುತ್ತಿರುವಾಗ ಅಲ್ಲಿದ್ದ ಮೂರ್ತಿಗಳು ಇವಿದ್ದಾವು; ತಿರುವಿಳಂಕೋಯಿಲೂ ತಿರುಮಂತ್ರಶಾಲೆಯೂ ಪಾಂಚರಾತ್ರಸಂಪ್ರದಾಯಕ್ಕೆ ಸೇರಿದ್ದುವು. ಆಗ ಇಲ್ಲಿ ಈ ಮೂರ್ತಿಯನ್ನು ಬೆಟ್ಟದ ದೇವರ ಪ್ರತಿನಿಧಿಯೆಂದು (ಮಲೆಯಪ್ಪನೆಂದು) ಪೂಜೆಮಾಡುತ್ತಿದ್ದರು. ಆದರೆ ಕಾಲಕ್ರಮದಲ್ಲಿ ಶ್ರೀವೈಷ್ಣವರು ತಿರುಚ್ಚಾನೂರನ್ನು ಬಿಡುವ ಮನಸ್ಸುಮಾಡಿ, ತಿರುವಿಳಂಕೋಯಿಲನ್ನು ಮುಚ್ಚಿದಾಗ ಅಲ್ಲಿದ್ದ ಈ ಮಲೆಯಪ್ಪನನ್ನು ಬೆಟ್ಟದಮೇಲೆ ತಂದರು. ಅದನ್ನು ಗುಡಿಯಲ್ಲಿ ಸೇರಿಸಲು ವೈಖಾನಸ-ಅರ್ಚಕರು ಒಪ್ಪದಿರಲು ಬೆಟ್ಟದ ಮೇಲೇ ಬೇರೆಲ್ಲಿಯೋ ಅದಕ್ಕೊಂದು ನೆಲೆಯನ್ನು ಕಾಣಿಸಿದ್ದರು. ಈಗ ಯಾದವರಾಯರೂ ಅವರ ಪ್ರಧಾನಿ ಸಿಂಗಯ್ಯ-

ದಣ್ಣಾಯಕನೂ ಪಾಂಚರಾತ್ರಪದ್ಧತಿಗೆ ಒಲಿದ ಶ್ರೀವೈಷ್ಣವರಾಗಿದ್ದುದರಿಂದ ಮಲೆಯಪ್ಪ ವೇಂಗಡದೊಡೆಯನ ಗುಡಿಯನ್ನು ಸೇರುವುದು ಸಾಧ್ಯವಾಯಿತು. ಅರ್ಚಕರು ವಿರೋಧಿಸಿದ್ದಿರಬೇಕು; ಅರಸರ ಆಶಯವನ್ನರಿತ ಸ್ಥಾನತ್ತಾರರು ವಿರೋಧವನ್ನು ಬದಿಗೊತ್ತಿರಬೇಕು.

ಉತ್ಸವಗಳು, ನಿಮಂದನಗಳು

ಸಿಂಗಯ್ಯನ ಕಾಲದಲ್ಲಿ ಮೊಳಕೆಗೊಂಡು ಮುಂದೆ ಚಿಗುರೊಡೆದ ಇನ್ನೊಂದು ವಿವರವನ್ನೂ ಇದೇ ಸಂದರ್ಭದಲ್ಲಿ ಪ್ರಸ್ತಾಪಿಸಬಹುದು. ಮೊದಲಿಗೆ ಬೆಟ್ಟದ ಗುಡಿಯಲ್ಲಿ ನಡೆಯುತ್ತಿದ್ದ ಉತ್ಸವಗಳು ಕೆಲವೇ—ಎರಡು ಬ್ರಹ್ಮೋತ್ಸವಗಳು, ಮುಕ್ಕೋಟಿ-ದ್ವಾದಶೀ ಉತ್ಸವ, ಸಂಕ್ರಮಣಸಂದರ್ಭಗಳಲ್ಲಿ (ವಿಷು, ಅಯನ) ಉತ್ಸವಗಳು. ವೈಖಾನಸಪದ್ಧತಿಯಲ್ಲಿ ಉತ್ಸವಗಳ ಹೆಚ್ಚಳವಿಲ್ಲ; ಪಾಂಚರಾತ್ರಪದ್ಧತಿಯಲ್ಲಾದರೋ ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವಗಳು ನಡೆಯುತ್ತಿರಬೇಕು, ದೇವರು ವೈಭವದಿಂದ ಬೀದಿಗಳಲ್ಲಿ ಬಿಜಯಮಾಡಬೇಕು, ಹಾಗೆ ಮಾಡುವಾಗ ವೇದಪಾರಾಯಣದ ಜೊತೆ ಆಳ್ವಾರರ ತಮಿಳುಪ್ರಬಂಧಗಳನ್ನೂ ಹಾಡುವ ಅವಕಾಶವಿರಬೇಕು. ಕಡೆಯ ಯಾದವರಾಯರ ಕಾಲದಲ್ಲಿ ಉತ್ಸವಗಳು ಹೆಚ್ಚಿದುವು, ಉತ್ಸವಗಳನ್ನು ನಡೆಸಲು ನಿಧಿಯೂ ಸೇರಿತು. ಪವಿತ್ರೋತ್ಸವ, ಕಲ್ಯಾಣೋತ್ಸವ, ದೋಲೋತ್ಸವ (ಊಂಜಲ್), ಮೃಗಯಾವಿಹಾರೋತ್ಸವ (ಬೇಟೆಗೆ ಹೊರಡುವುದು) (ಪಾಡಿಯೆವೇಟ್ಟೈ), ತೆಪ್ಪೋತ್ಸವ (ತಿರುಪ್ಪಳಿಪ್ಪಡಂ), ಫಲೋತ್ಸವ ಮೊದಲಾದ ಪ್ರಾಸಂಗಿಕ ಉತ್ಸವಗಳೂ, ಪಂಚಾಂಗದ ದಿನಗಳನ್ನೂ ವಿಶೇಷ ತಿಥಿಗಳನ್ನೂ ಅನುಸರಿಸಿದ ಉತ್ಸವಗಳೂ ಆಚರಣೆಗೆ ಬಂದುವು. ಉತ್ಸವಸಂದರ್ಭಗಳಲ್ಲಿಯೂ ನಿತ್ಯಸಂಧಿಗಳಲ್ಲಿಯೂ ದೇವರಿಗೆ ಸಮರ್ಪಿಸಿ ನೆರೆದ ಭಕ್ತರಿಗೂ, ಮುಖ್ಯವಾಗಿ ಶ್ರೀವೈಷ್ಣವರಿಗೂ, ವಿತರಣೆ ಮಾಡುವ ಬಗೆಬಗೆಯ ಭಕ್ಷ್ಯಭೋಜ್ಯಗಳೂ ಬಳಕೆಗೆ ಬಂದುವು.

ಮುಂದೆ ಒಂದೆರಡು ಶತಮಾನಗಳಲ್ಲಿ ದೇವರಿಗೆ ಒಪ್ಪಿಸುವ ತಿಂಡಿ-ತಿನಿಸುಗಳ ಪಟ್ಟಿ ಬಹುದೊಡ್ಡದಾಗಿ ಬೆಳೆಯಿತು. ಆದರೆ ಇದರ ಅವತರಣಿಕೆ ನಾವು ಈಗ ಪರಿಶೀಲಿಸುತ್ತಿರುವ ಕಾಲಕ್ಕೇ ಸೇರಿದುದು. ದೇವರಿಗೆ ಕೆಲವು ನಿರ್ದಿಷ್ಟಸಮಯಗಳಲ್ಲಿ ಪೂಜೆ ಸಲ್ಲಿಸಿ ನೈವೇದ್ಯವನ್ನು ಒಪ್ಪಿಸುವುದು ಎಲ್ಲ ದೇವಾಲಯಗಳಲ್ಲೂ ಇದೆ. ಇದಕ್ಕೆ 'ಸಂಧಿ' ಎಂದು ಹೆಸರು. ಉದಯಕಾಲ (ಮುಂಜಾನೆ), ಅರುಣೋದಯ (ಬೆಳಗು), ಮಧ್ಯಾಹ್ನ (ನಡುಹಗಲು), ಸಂಧ್ಯಾ (ಸಂಜೆ) ಮತ್ತು ಅರ್ಧಯಾಮ (ರಾತ್ರಿ) ಎಂಬ 'ಸಂಧಿ'ಗಳು ಹೆಸರಾದವು. ವೇಂಗಡದ ಗುಡಿಯಲ್ಲಿ ಸುಪ್ರಭಾತ (ಎಂದರೆ, ಉದಯಕಾಲ), ತಿರುವಡಿ-ವಿಳಕ್ಕಿನ-ಪೊಳುದು (ಎಂದರೆ, ದೇವರ ಪಾದಗಳನ್ನು ತೊಳೆಯುವ

ಸಂದರ್ಭ, ಆಗಲೇ ತೋಮಾಲಸೇವೆಯೆಂಬ ಹೂಮಾಲೆಗಳ ಅಲಂಕಾರ ನಡೆಯುವುದು), ರಾತ್ರಿ (ಅರ್ಧಯಾಮ)—ಇವುಗಳು ಮೊದಲಿಗೆ ಸಂಧಿಗಳು; ಬರುಬರುತ್ತ ಸಂಧಿಗಳ ಸಂಖ್ಯೆ ಬೆಳೆಯಿತು. ಸಂಧಿಯ ಸಮಯದಲ್ಲಿ ದೇವರಿಗೆ ಒಪ್ಪಿಸುವ ನೈವೇದ್ಯಗಳಿಗಾಗಿ ಭಕ್ತರು ಭೂಮಿಯನ್ನು, ನಿಧಿಯನ್ನು ದಾನಮಾಡುವ ವಾಡಿಕೆ ಇಲ್ಲಿ ಬಹುಕಾಲದಿಂದ ಬಂದಿದೆ.

ಯಾವ ಬಗೆಯ ನೈವೇದ್ಯವನ್ನು ಒಪ್ಪಿಸಬೇಕು, ನಿವೇದನವಾದ ಮೇಲೆ ಪ್ರಸಾದವನ್ನು ಹೇಗೆ ಯಾರಿಗೆ ವಿತರಣೆಮಾಡಬೇಕು ಎಂಬ ವಿವರಗಳನ್ನೂ ಶಾಸನಗಳಲ್ಲಿ ಕಾಣಿಸಿರುವುದಿದೆ. ಮೊದಲಿಗೆ ತೀರ ಸರಳವಾದ ನೈವೇದ್ಯವಿದ್ದುದು ಭಕ್ತರ ಚಾಪಲ್ಯದಿಂದ ಜಟಿಲವಾದ, ಬಾಯಲ್ಲಿ ನೀರೂರಿಸುವಂಥ 'ಅವಸರ'ಗಳ ಪಟ್ಟಿಯಾಯಿತು. 'ಸಂಧಿ'ಯಲ್ಲಿ ಪೂಜೆಗಿಂತ ತಿಂಡಿಯೇ ಮುಖ್ಯವಾಯಿತು; ಕಡೆಕಡೆಗೆ ಸಂಧಿಯೆಂಬ ಮಾತಿಗೆ ನೈವೇದ್ಯದ ಬಗೆಯೆಂದೇ ಅರ್ಥವೂ ನಿಂತಿತು. ವೇಂಗಡದ ಗುಡಿಯಲ್ಲಿ ಉತ್ಸವಸಂದರ್ಭಗಳಲ್ಲೂ ಸಂಧಿಗಳಲ್ಲೂ ದೇವರಿಗೆಂದು ಸಿದ್ಧಪಡಿಸುವ ತಿಂಡಿ-ತಿನಿಸುಗಳನ್ನು ನೋಡಿ: ಅತಿರಸ, ಅಪ್ಪಂ, ಚರು, ಎಳ್ಳುಂಡೆ, ಇಡ್ಡಲಿ, ದೋಸೆ, ಪಟ್ಟಣಂದೋಸೆ, ಕಡಲೆಶುಂಡಲ್, ಪರುಪ್ಪುವಿಯಲ್, ಕುಣುಕ್ಕು, ಮನೋಹರಪಡಿ, ಪೊಂಗಲ್‌ಪಡಿ, ರಾಜಾನ್ನ-ತಿರುಪ್ಪೋನಕಂ, ತೇನ್‌ತಲೈ, ಪೋರಿ-ವಿಳಂಗಾಯ್, ತಳಿಗೈ-ತಿರುಪ್ಪಾವಡೈ, ತಿರುಪ್ಪಣ್ಯಾರಂ (ವಡೈಪರುಪ್ಪು), ಉಳುಂದ-ಓಗರೈ, ಸುಖಿಯನ್, ತಿರುಕ್ಕಣಾಮಡೈ (ಮನೋಹರಂ), ತಿರುಚ್ಚೀವಿಕೈಪ್ಪಡಿ, ವಗೈಪ್ಪಡಿ ಇತ್ಯಾದಿ. ಉತ್ಸವಗಳು ಜನಪ್ರಿಯವಾಗಲು ಇನ್ನೇನು ಬೇಕು? ಸಿಂಗಯ್ಯನ ಕಾಲದಲ್ಲಿ ವರ್ಷವಿಡೀ ಉತ್ಸವಗಳ ಸುರಿಮಳೆಯೇ; ದಿನಕ್ಕೊಂದು ಉತ್ಸವ ಎಂಬಂತಾಯಿತು. ಬರುಬರುತ್ತ, ಇನ್ನೂರು ಮುನ್ನೂರು ವರ್ಷಗಳು ಕಳೆಯುವಲ್ಲಿ ವರ್ಷದ ಮುನ್ನೂರ ಅರವತ್ತೈದು ದಿನಗಳಿಗೆ ನಾನ್ನೂರಮೂವತ್ತು ಉತ್ಸವಗಳು ಸಿದ್ಧವಾದುವು! ಉತ್ಸವವೆಂದರೆ ಜನ ಬಂದು ನೆರೆಯಲು ಕರೆ. ಹೀಗಾಗಿ ಬೆಟ್ಟದ ಗುಡಿಯಲ್ಲಿ ಜನರು ಬರುವುದೂ ನೆರೆಯುವುದೂ ಎಡೆಬಿಡದೆ ನಡೆಯುವಂತಾಯಿತು.

ಉತ್ಸವಗಳೂ ಸೇವೆಗಳೂ ಸಂಧಿಗಳೂ ಹೆಚ್ಚಿದಂತೆಲ್ಲ ಆಡಳಿತದ ಹೊಣೆಯೂ ಹೊರೆಯೂ ಹೆಚ್ಚಿದುವು. ಸ್ಥಾನತ್ತಾರರ ಸ್ವಾತಂತ್ರ್ಯವು ಅರಸರ, ಅವರ ಪ್ರಧಾನಿಯ, ಆಸಕ್ತಿಯಿಂದ ಸ್ವಲ್ಪ ಮಟ್ಟಿಗೆ ಮೊಟುಕಾಯಿತೆಂದು ಹೇಳಿದೆವಷ್ಟೆ. ದಾನಶಾಸನಗಳನ್ನು ಪಡೆಯುವುದು, ಗುಡಿಯ ಆಡಳಿತವನ್ನು ಮೇಲಿಂದ (ಎಂದರೆ, ದೂರದಿಂದ) ನೋಡಿಕೊಳ್ಳುವುದು, ಮೊದಲಾಗಿ ಸ್ಥೂಲವಾದ ಆಡಳಿತ ಅವರದ್ದಾಯಿತು. ಗುಡಿಯ ದಿನದಿನದ ವ್ಯವಹಾರವನ್ನು ನೋಡಿಕೊಳ್ಳಲು 'ಅಧಿಕಾರಿ'ಯೊಬ್ಬ ಕಾಣಿಸಿಕೊಂಡ. ಸ್ಥಾನತ್ತಾರರು ಜನರ ಪ್ರತಿನಿಧಿಯಾದರೆ, 'ಅಧಿಕಾರಿ' ಅರಸನ ಪ್ರತಿನಿಧಿಯೆಂಬಂತಾಯಿತು; ಲೌಕಿಕವ್ಯವಹಾರವೆಲ್ಲ ಅವನ ಆಣತಿಯಂತೆ ನಡೆಯುವುದಾಯಿತು. ಗುಡಿಯಲ್ಲಿ ಜರುಗುವ ಪೂಜೆ ಹಿಂದಿನಿಂದ ಬಂದ ವೈಖಾನಸ-ಅರ್ಚಕರ ಹೊಣೆ. ಆದರೆ ಅರಸರ ಅನುರಾಗ ಶ್ರೀವೈಷ್ಣವಧರ್ಮದಲ್ಲಿದ್ದುದರಿಂದ, ಗುಡಿಯೊಳಗಣ

ಪೂಜೆಯಲ್ಲಿ ಪಾಲ್ಗೊಳ್ಳಲು 'ಕೋಯಿಲ್-ಕೆಲ್ವಿ'ಗಳೂ, ನೆರವಾಗಲು ನಂಬಿಯಾರರೂ ಕಾಣಿಸಿಕೊಂಡರು. ಉಳಿದಂತೆಯೂ ಬರುಬರುತ್ತ ಗುಡಿಯ ಸಿಬ್ಬಂದಿ ಬೆಳೆಯಿತು. ಆದಾಯ-ವೆಚ್ಚದ ಲೆಕ್ಕವಿಡುವ ತಿರುನಿನ್ರ-ಊರ-ಉಡೈಯಾನ್, ಈ ಲೆಕ್ಕದ ಮೇಲ್ವಿಚಾರಣೆ ನಡೆಸುವ ಪೆರಿಯ-ಕಣಕ್ಕು-ಪಿಳ್ಳೈ, ದಾಖಲೆಗಳನ್ನು ಸಿದ್ಧಪಡಿಸುವ ಕರಣಿಕರು, ಗುಡಿಯ ಉಗ್ರಾಣವನ್ನು ನೋಡಿಕೊಳ್ಳುವ ಶಾಲೈಯಾರರು, ಅಡುಗೆ ಮಾಡುವ ತೇವಯ್ಯಾಳರು, ಅಡುಗೆಗೆ ಕಟ್ಟಿಗೆಯನ್ನು ಒದಗಿಸುವ ಶಿಂಗಮಾರರು, ಅಡುಗೆಗಾಗಿ ಮಡಕೆಗಳನ್ನು ಮಾಡುವ ಕುಮ್ಮಾರಸ್ವರೂಪರು (ಕುಂಬಾರರು), ಧಾನ್ಯಗಳನ್ನು ಒದಗಿಸುವ ಶಿರ್ರುಪಿಳ್ಳೆಯರು, ಪರಿಚಾರಿಕೆ ಮಾಡುವ ಕೈ-ಕ್ಕೋಳರು, ಗುಡಿಯ ಕಟ್ಟಡಗಳನ್ನು ನೋಡಿಕೊಳ್ಳುವ ತಿರುಪ್ಪಣಿ-ಪಿಳ್ಳೆಯರು, ಕಾವಲು ಕಾಯುವ ಪಡಿಕ್ಕಾವಲಿಗಳು, ದೇವರ ಆಭರಣವನ್ನು ಮಾಡುವ ಮತ್ತು ಸರಿಪಡಿಸುವ ಆಚಾರತ್ತಾರರು ಇವರೇ ಮೊದಲಾಗಿ ಸಿಬ್ಬಂದಿ ಬಹುಮುಖವಾಗಿ ಬೆಳೆಯತೊಡಗಿತು.

ಆದಿವಣ್-ಶಠಕೋಪಸ್ವಾಮಿ

ಸಿಂಗಯ್ಯನ ಪ್ರೇರಣೆಯಿಂದ ತಿರುವೇಂಕಟನಾಥ-ಯಾದವರಾಯನು ಬೆಟ್ಟದ ಕೆಳಗಿನ ತಿರುಪತಿಗ್ರಾಮವನ್ನು ಬೆಟ್ಟದ ದೇವರಿಗೆ ಸರ್ವಮಾನ್ಯವಾಗಿ ಒಪ್ಪಿಸಿದನಷ್ಟೆ. ಆಗ ಯಾದವರಾಯರ ಮೇಲೆ ಹೊಯ್ಸಳ-ಅರಸರ ಅಧಿಕಾರವಿದ್ದುದು ಈ ಶಾಸನದಲ್ಲಿ ಬರುವ 'ವಲ್ಲಾಳದೇವರ್-ವರಿ' (ಎಂದರೆ, 'ಬಲ್ಲಾಳದೇವರ ತೆರಿಗೆ': ಮುಮ್ಮಡಿ ವೀರಬಲ್ಲಾಳನಿಗೆ ಉಲ್ಲೇಖ ಇಲ್ಲಿದೆ) ಎಂಬ ಮಾತಿನಿಂದ ತಿಳಿಯುತ್ತದೆ. ಸಿಂಗಯ್ಯನೂ ಯಾದವರಾಯರೂ ಕೆಳತಿರುಪತಿಯ ಹಿರಿಮೆಯನ್ನು ಮೂಡಿಸಲು ಶ್ರಮಿಸಿದರು; ರಾಮಾನುಜರು ಈ ಕೆಲಸವನ್ನು ಆಗಲೇ ಕೈಗೊಂಡಿದ್ದು ತಮ್ಮ ಶಿಷ್ಯರಿಗೆ ಇದನ್ನು ವಹಿಸಿದ್ದರು. ತಿರುಪತಿಯಲ್ಲೂ ಬೆಟ್ಟದ ಮೇಲೂ ಶ್ರೀವೈಷ್ಣವಮಠಗಳಿದ್ದುವು. ಸಿಂಗಯ್ಯನು 'ಸಿತಕರಗಂಡನ್-ಮಠ'ವನ್ನು ಏರ್ಪಡಿಸಿದ ವಿಚಾರವನ್ನು ಈಗಾಗಲೇ ಹೇಳಿದೆ. ಈ ಮಠದ ವಿಚಾರವಾಗಿ ಹೊರಟ ಶಾಸನದಲ್ಲಿ 'ವಣ್-ಶಠಕೋಪನ್ ನಂದವನ'ದ ಪ್ರಸ್ತಾಪವೂ ಇದೆ. ಈ ಮಠವು ಮುಂದೆ ಕೆಳತಿರುಪತಿಯಲ್ಲೂ ಬೆಟ್ಟದ ಮೇಲೂ ತುಂಬ ಪ್ರಭಾವಶಾಲಿಯಾಯಿತು. ಈ ಮಠದ ಮೂಲಪುರುಷರಾದ ಆದಿವಣ್-ಶಠಕೋಪ-ಸ್ವಾಮಿ ಕನ್ನಡನಾಡಿನವರು; ಅವರು ಹುಟ್ಟಿದ್ದು ಮೇಲುಕೋಟೆಯಲ್ಲಿ (ತಿರುನಾರಾಯಣಪುರದಲ್ಲಿ), ಓದಿದ್ದು ಕಾಂಚೀಪುರದಲ್ಲಿ , ಸಂನ್ಯಾಸಿಯಾದದು ಅಹೋಬಲದಲ್ಲಿ (ನೇರವಾಗಿ ಲಕ್ಷ್ಮೀನರಸಿಂಹನ ಸಮಕ್ಷಮದಲ್ಲೇ ಎಂದು ಪ್ರತೀತಿ), ಮಠವನ್ನು ಮೊದಲು ಸ್ಥಾಪಿಸಿದ್ದು ಕೆಳತಿರುಪತಿಯಲ್ಲಿ , ಅನಂತರ ಬೆಟ್ಟದ ಮೇಲೆ. ಇವರ ಬದುಕು ತುಂಬ ದೀರ್ಘವಾಗಿದ್ದು ಸಿಂಗಯ್ಯನನ್ನೂ ಅವರು ಕಂಡಿದ್ದರು, ವಿಜಯನಗರದ ಅರಸ ಕೃಷ್ಣದೇವರಾಯನನ್ನೂ ಕಂಡಿದ್ದರು!

ರಾಮಾನುಜರ ಶಿಷ್ಯಪರಂಪರೆ ಎರಡು ಕವಲುಗಳಲ್ಲಿ ಉಳಿದುಬಂದಿತು—ಸಮಾಶ್ರಯಣಪರಂಪರೆ, ಗ್ರಂಥಪರಂಪರೆ ಎಂದು. ಸಮಾಶ್ರಯಣಪರಂಪರೆಯ ಉದ್ದೇಶ ಶ್ರೀವೈಷ್ಣವಧರ್ಮವನ್ನು ಉಳಿಸುವುದು, ಶ್ರೀವೈಷ್ಣವಸಮುದಾಯವನ್ನು ಬೆಳೆಸುವುದು. ಇನ್ನೊಂದು ಪರಂಪರೆಯ ಉದ್ದೇಶ ಶ್ರೀವೈಷ್ಣವಸಿದ್ಧಾಂತವನ್ನು ಪ್ರತಿಪಾದಿಸುವುದು. ಸಮಾಶ್ರಯಣಪರಂಪರೆಯು ರಾಮಾನುಜರ ಶಿಷ್ಯ ಎಂಬಾರ್ (ಗೋವಿಂದ) ಎಂಬುವರಿಂದಲೂ, ಗ್ರಂಥಪರಂಪರೆಯು ಕಿಡಾಂಬಿ-ಆಚ್ಚಾನ್ (ಪ್ರಣತಾರ್ತಿಹರ) ಎಂಬುವರಿಂದಲೂ ಮೊದಲಾದುವು. ಸಮಾಶ್ರಯಣಪರಂಪರೆಯಲ್ಲಿ ಪರಾಶರಭಟ್ಟ, ವೇದಾಂತಿ ನಂಜೀಯರ್, ವಡಕ್ಕು-ತಿರುವೀಧಿಪಿಳ್ಳೆ, ಶ್ರೀರಂಗೇಶ್ವರ ಮೊದಲಾದವರು ಬಂದು, ಇಮ್ಮಡಿ ಕೇಶವ ಎಂಬ ಆಚಾರ್ಯರಿಂದ ಆಶ್ರಮವನ್ನೂ ಉಪದೇಶವನ್ನೂ ಸ್ವೀಕರಿಸಿದವರು ಆದಿವಣ್-ಶಠಕೋಪ-ಜೀಯರ್; ಇವರಿಗೆ ಶ್ರೀನಿವಾಸನೆಂದೂ ಹೆಸರಿದ್ದಿತು. ಇವರು ಮೇಲುಕೋಟೆಯ ಕಿಡಾಂಬಿ ಕೇಶವಾಚಾರ್ಯರ ಮಗ. ಇವರ ಪರಮಗುರುಗಳ ಹೆಸರೂ ಶ್ರೀನಿವಾಸನೆಂದೇ (ಕಮಲಾವಾಸನೆಂಬ ಹೆಸರೂ ಅವರಿಗಿದ್ದಿತು). ಅವರು ವೇಂಗಡದೊಡೆಯನ ಭಕ್ತರು. ಆದಿವಣ್-ಶಠಕೋಪ-ಸ್ವಾಮಿಗಳು ಕಾಂಚೀಪುರದಲ್ಲಿ ಘಟಿಕಾಶತಂ-ಅಮ್ಮಾಳ್ (ವರದವಿಷ್ಣು) ಎಂಬ ಪ್ರಸಿದ್ಧವಿದ್ವಾಂಸರಲ್ಲಿ ವಿದ್ಯಾರ್ಜನೆ ಮಾಡಿದರು. ಸಿಂಗಯ್ಯ-ದಣ್ಣಾಯಕನೆ ಇವರನ್ನು ಕೆಳತಿರುಪತಿಗೆ ಕರೆಸಿಕೊಂಡಂತೆ ತೋರುತ್ತದೆ. ಇವರ ಕಾಲದ ವಿಚಾರವಾಗಿ ಕೊಂಚ ಗೊಂದಲವಿದೆ. 'ಗುರುಪರಂಪರೆ'ಯ ಪ್ರಕಾರ, ಕ್ರಿಸ್ತಾಬ್ದ 1378ರಿಂದ 1460ರವರೆಗೆ ಇವರ ಜೀವಿತ. ಆದರೆ ಈ ಅವಧಿ ಇತರ ವಿವರಗಳಿಗೆ ಸರಿಹೊಂದುವುದಿಲ್ಲ. ಇವರು ಪ್ರಖ್ಯಾತಿಗೆ ಬಂದುದೇನೋ ಸಾಳುವ-ನರಸಿಂಹನ ಕಾಲದಲ್ಲಿ (ಕ್ರಿಸ್ತಾಬ್ದ 1445-1504); ಆದರೆ ಸಿಂಗಯ್ಯ-ದಣ್ಣಾಯಕನ ಕಡೆಗಾಲದಲ್ಲಿ ಇವರು ಹರಯವನ್ನಾದರೂ ಮುಟ್ಟಿರಬೇಕು. ಸಿಂಗಯ್ಯನು ಮಠವನ್ನು ಏರ್ಪಡಿಸಿ ಅದನ್ನು ಇವರಿಗೆ ಒಪ್ಪಿಸಿದನೆಂದಮೇಲೆ ಇವರು ಆಗಲೇ ಅಷ್ಟಿಷ್ಟು ಹೆಸರನ್ನೂ ಪಡೆದಿರಬೇಕು. ಅರವತ್ತು ವರ್ಷಗಳು ಮಠದ ಒಡೆಯರಾಗಿದ್ದು ಕಡೆಗಾಲದಲ್ಲಿ ಮೇಲುಕೋಟೆಗೇ ಹಿಂದಿರುಗಿದರೆಂದು ಹೇಳುವುದಿದೆ.

ಅಂತೂ, ಬೆಟ್ಟದ ಗುಡಿಯಲ್ಲಿ ಕನ್ನಡನಾಡಿನ ಈ ಇಬ್ಬರ ಪ್ರಭಾವ ಇಷ್ಟು ಹಿಂದೆಯೇ ಮೂಡಿಕೊಂಡು ಬಂದಿದೆ—ತೆರಕಣಾಂಬಿಯ ದಣ್ಣಾಯಕ, ಮೇಲುಕೋಟೆಯ ಸ್ವಾಮಿಗಳು. ಮುಂದೆ ಗುಡಿಯ ಹಿರಿಮೆಗೆ ದುಡಿದ ಸಾಳುವ ಅರಸರೂ ಕನ್ನಡದವರೇ. ಯಾದವರಾಯರು ಹೊಯ್ಸಳ-ವೀರಬಲ್ಲಾಳನಿಗೆ ಅಧೀನರಾಗಿ ಆಳುತ್ತಿದ್ದರು. ಹೊಯ್ಸಳವಂಶವು ಕಳೆಗುಂದಿ ಸಾಳುವ ಅರಸರು ಮೇಲೆ ಬಂದಾಗ, ವಿಜಯನಗರಸಾಮ್ರಾಜ್ಯವು ಮೈದಳೆದಾಗ ಅವರ ಅಧೀನರಾಗಿ ಉಳಿದರು. ಯಾದವರಾಯರಲ್ಲಿ ಕಡೆಯವನು ಹೋಬಳ. ಇವನ ಕಾಲ ತಿಳಿದುಬರುವುದಿಲ್ಲ. ಬೆಟ್ಟದ ದೇವರಿಗೆ ವೈಕುಂಠ-ಹಸ್ತವೆಂಬ ಆಭರಣವನ್ನು ಮಾಡಿಸಿಕೊಟ್ಟನೆಂಬ ಶಾಸನ ಗುಡಿಯ ಮೊದಲ ಪ್ರಾಕಾರದ ದಕ್ಷಿಣಗೋಡೆಯ ಮೇಲಿದೆ. ಶಾಸನ ಸಣ್ಣದು; ಎರಡೇ ಸಂಸ್ಕೃತ ಶ್ಲೋಕಗಳನ್ನೊಳಗೊಂಡಿರುವುದು; ಗ್ರಂಥಮಿಶ್ರಿತ ತಮಿಳುಲಿಪಿಯಲ್ಲಿದೆ—

ವೈಕುಂಠಮಮುಷ್ಯ ವೇಂಕಟಗಿರೇರೇವೇತಿ ಶೌರೇರಯಂ
ಪಾಣಿರ್ದರ್ಶಯತೇ ಕಥಂ ಬತ (ಇ)ತಿ ಶ್ಲಾಘಾಮಮೋಘಾಮಿವ।
(ಭಕ್ತ್ಯಾ) ಹೋಬಳಯಾದವಾಖ್ಯಮದಿಶತ್ ತಸ್ಮೈ ಗುಣೈರ್ಧನ್ಯೋ
ಹೋಬಳಭೂಪತಿರ್ಜನಮನಸ್ಸಂತೋಷಣಂ ಭೂಷಣಮ್ ॥

'ಈ ವೇಂಕಟವೆಂಬ ಬೆಟ್ಟವೇ ವೈಕುಂಠವೆಂದು ತೋರಿಸುತ್ತಿರುವ ಶೌರಿಯ (ವಿಷ್ಣುವಿನ) ಬಲಗೈಯು (ವರದಹಸ್ತ) ಈ ದೊರೆಯು ಒಪ್ಪಿಸಿದ ಭೂಷಣದಿಂದ ಜನರ ಮನಸ್ಸನ್ನು ಸಂತೋಷಪಡಿಸುವುದೆ'ಂದು ಈ ಶಾಸನದ ತಾತ್ಪರ್ಯ. ಇದೇ ದೊರೆಯ ಇನ್ನೊಂದು ಶಾಸನವೂ ಅಲ್ಲಿಯೇ ಕಾಣುತ್ತದೆ. ತಮಿಳುಭಾಷೆಯಲ್ಲಿರುವ ಈ ಶಾಸನದಲ್ಲಿ ದೊರೆಯು ತನ್ನನ್ನು ಯೋ(ಓ)ಬಳನಾಥನೆಂದು ಕರೆದುಕೊಂಡು, ತಾನು ತಂಜೆಯ ಯಾದವ ಅರಸನೆಂದು (ತಂಜೈ ಯಾದವರ್ಕೋನ್) ನಿರ್ದೇಶಿಸಿಕೊಂಡಿದ್ದಾನೆ. ಬೆಟ್ಟದ ಮೇಲೆ ಹಲವು ಹೂದೋಟಗಳಿವೆಯೆಂದೂ, ಸೊಗಸಾದ ಕಂಪನ್ನು ಸೂಸುವ 'ಮರು' ಗಿಡಗಳು ಋತುಗಳಿಗನುಸಾರವಾಗಿ ಬೆಳೆಯುವುವೆಂದೂ ಈ ಶಾಸನದ ವಿವರ. ಬಡಗಿನ ವೇಂಗಡದ ದೇವರಿಗೆ (ವಡವೇಂಗಡವಾರ್ಕ್ಕು) 'ತಿರುಕ್ಕೈಮಲರ್'ನ್ನು ಸಮರ್ಪಿಸಿದುದನ್ನು ತಿಳಿಸುವುದು ಈ ಶಾಸನದ ಉದ್ದೇಶ. 'ಹೋಬಳ' (ಅಥವಾ 'ಓಬಳ') ಎನ್ನುವುದು ಅಹೋಬಲ ಎನ್ನುವುದರ ರೂಪಾಂತರ. ಅಹೋಬಲವೂ ವೇಂಗಡದಂತೆಯೇ ಪ್ರಸಿದ್ಧವಾದ ಕ್ಷೇತ್ರ; ಆದೇ ಬೆಟ್ಟಸಾಲಿನಲ್ಲಿರುವುದು. ವಣ್-ಶಠ ಕೋಪ-ಸ್ವಾಮಿಗಳು ಅಹೋಬಲಮಠವನ್ನು ಸ್ಥಾಪಿಸಿದಮೇಲಂತೂ ಶ್ರೀವೈಷ್ಣವಶ್ರದ್ಧಾಳುಗಳಿಗೆ ಈ ಕ್ಷೇತ್ರದ ಮೇಲೆ ಆದರ ಹೆಚ್ಚಿತು. ಅಹೋಬಲಕ್ಷೇತ್ರದ ದೈವವಾದ ನರಸಿಂಹನೂ ಅವರ ಆದರಕ್ಕೆ ಪಾತ್ರನಾದ. ವೇಂಗಡಬೆಟ್ಟದ ಮೇಲೆ ನರಸಿಂಹನ ಮೂರ್ತಿಗಳು ಕಾಣಿಸಿಕೊಂಡುದು ವಣ್-ಶಠಕೋಪ-ಸ್ವಾಮಿಗಳ ಪ್ರಭಾವದಿಂದಲೇ ಎಂದು ತೋರುತ್ತದೆ. ಇದರ ವಿಚಾರ ಬೇರೊಂದು ಸಂದರ್ಭದಲ್ಲಿ ಬರಬೇಕಾಗುತ್ತದೆ.

ವೇದಾಂತದೇಶಿಕರು

ಈ ನಡುವೆ ದಕ್ಷಿಣದೇಶದ ಧಾರ್ಮಿಕಪ್ರಪಂಚದಲ್ಲಿ ಧ್ರುವತಾರೆಯಂತೆ ಬೆಳಗಿದವರು 'ವೇದಾಂತದೇಶಿಕ'ರೆಂದು ಹೆಸರಾದ ವೇಂಕಟನಾಥರು (ಕ್ರಿಸ್ತಾಬ್ದ 1268-1369). ಇವರ ಹೆಸರಿನ ಹಿನ್ನೆಲೆಯಲ್ಲಿ ಇವರು ಬೆಟ್ಟದ ದೇವರ ಅನುಗ್ರಹದಿಂದಲೇ ಆ ದೈವದ ಘಂಟಾವತಾರವಾಗಿ ಮೈದಳೆದರೆನ್ನುವ ನಂಬಿಕೆಯಿದೆ. ರಾಮಾನುಜರ 'ಗ್ರಂಥಪರಂಪರೆ'ಯಲ್ಲಿ ಇವರ ಸ್ಥಾನ ಹಿರಿಮೆಯದು. ಇವರ ವ್ಯಾಖ್ಯಾನಗಳು, ಸ್ವತಂತ್ರಗ್ರಂಥಗಳು, ಪ್ರವಚನಗಳು ಶ್ರೀವೈಷ್ಣವಸಿದ್ಧಾಂತವನ್ನು ರೂಢಿಸಿದುವು; ಇವರ ಪರ್ಯಟನೆಯಿಂದಾಗಿ ಶ್ರೀವೈಷ್ಣವಧರ್ಮ ಹಲವೆಡೆ ಹರಡಿತು.

ಇವರು ಕೈಗೊಂಡ ಧಾರ್ಮಿಕಕೆಲಸಗಳಲ್ಲಿ ಎರಡು ಮುಖ್ಯವಾದುವು—ಆಳ್ವಾರರ

ತಮಿಳುಪ್ರಬಂಧಗಳನ್ನು ಎತ್ತಿಹಿಡಿದುದು, ದೇವಾಲಯಗಳಲ್ಲಿ ಪಾಂಚರಾತ್ರಪದ್ಧತಿಯ ಪೂಜೆಯನ್ನು ಪ್ರತಿಪಾದಿಸಿದುದು. ರಾಮಾನುಜರಿಗೆ ಎರಡೂ ವಿಚಾರಗಳಲ್ಲಿ ಆಸಕ್ತಿ ಯಿದ್ದಿತಾದರೂ, ಅವರ ಸಿದ್ಧಾಂತನಿರೂಪಣೆಯ ಕೆಲಸದ ನಡುವೆ ಈ ವಿಚಾರಗಳಿಗೆ ಅಷ್ಟಾಗಿ ಗಮನ ಕೊಡಲಿಲ್ಲವೆಂದು ತೋರುತ್ತದೆ. ತಮಗೆ ಸಾಧ್ಯವಾದಷ್ಟು ಪಾಂಚರಾತ್ರ ಪೂಜೆಯನ್ನೇನೋ ಬಳಕೆಗೆ ತಂದರು. ಆದರೆ ಆ ಪೂಜೆಯ ಪ್ರತಿಪಾದನೆಯನ್ನು ದೇಶಿಕರಿಗೆ ಬಿಟ್ಟರು. ಯಾಮುನರಾದ ಮೇಲೆ ಪಾಂಚರಾತ್ರಪದ್ಧತಿಯನ್ನು ಕಾಪಾಡಿ ದವರು ದೇಶಿಕರೇ ಎಂದು ಹೇಳಬಹುದು. ಅವರ 'ಪಾಂಚರಾತ್ರರಕ್ಷಾ' ಎಂಬ ಬರಹ ಪ್ರಭಾವಶಾಲಿಯಾಯಿತು.

ಅವರು ತಾವು ನೋಡಿದ ಕ್ಷೇತ್ರಗಳಲ್ಲಿ ಅರ್ಚಾಮೂರ್ತಿಯನ್ನು ಹಾಡಿ ಹೊಗಳಿ ಪಾಂಚರಾತ್ರಪದ್ಧತಿಯ ಮೂಲಸ್ತಂಭವನ್ನು ಬೇರೂರಿಸಿದರು. ಇನ್ನು ತಮಿಳು ಪ್ರಬಂಧಗಳು ವೇದಕ್ಕೆ ಸಮಾನವಾದುವೆಂದೂ, ಗುಡಿಗಳಲ್ಲಿ ಪಾಶುರಗಳನ್ನು ಹಾಡುವ 'ಅಧ್ಯಯನೋತ್ಸವ'ಸಂಪ್ರದಾಯಕ್ಕೆ ಔಚಿತ್ಯವಿದೆಯೆಂದೂ ಸಿದ್ಧಪಡಿಸಿದರು. ಆಳ್ವಾರರನ್ನು ಗುಡಿಗಳಲ್ಲಿ ಪೂಜಾರ್ಹರೆಂದು ಮೂಡಿಸುವುದು ಇವರ ಕಾಲದಿಂದಲೇ ವಿಶೇಷವಾಗಿ ಬಳಕೆಗೆ ಬಂದಿತು. ಅಂತೂ ಇವರ ಪ್ರಭಾವ, ನಾಡಿನಲ್ಲೆಲ್ಲ ಹಿರಿದಾಗಿ ಹಬ್ಬಿತು.

ಇವರ ಹುಟ್ಟೂರು ಕಾಂಚೀಪುರವೆಂದೂ, ವಿಹಾರಭೂಮಿ ವೇಂಗಡಬೆಟ್ಟ ವೆಂದೂ, ವಾಸಸ್ಥಳ ಶ್ರೀರಂಗವೆಂದೂ ಅವರ ಮಗ ನಾಯನಾಚಾರ್ಯರು ನೆನೆಸಿ ಕೊಂಡಿದ್ದಾರೆ. ಮೂರು ಕಡೆಗಳಲ್ಲಿ ಅವರ ಪ್ರಭಾವ ಹೆಚ್ಚಾಗಿ ಮೂಡಿತು. ರಾಮಾನುಜರು ಸಿದ್ಧಾಂತಪ್ರತಿಪಾದನೆಗೆಂದು ಎಪ್ಪತ್ತುನಾಲ್ಕು ಮಂದಿ 'ಸಿಂಹಾಸನಾಧಿ ಪತಿ'ಗಳೆಂಬ ಶಿಷ್ಯರನ್ನು ವ್ಯವಸ್ಥೆಮಾಡಿದರಂತೆ. ಅವರಲ್ಲಿ ಒಬ್ಬರು ಪುಂಡರೀಕಾಕ್ಷರೆಂಬ ಸೋಮಯಾಜಿಗಳು. ಇವರ ಮಗ ಅನಂತಸೂರಿಯು ದೇಶಿಕರ ತಂದೆ. ದೇಶಿಕರ ತಾಯಿ ತೋತಾರಮ್ಮ. ಕಾಂಚೀಪುರದ ಶ್ರೀವೈಷ್ಣವ-ಆಚಾರ್ಯಪೀಠಾಧಿಪತಿಗಳಾಗಿದ್ದ ಆತ್ರೇಯ-ರಾಮಾನುಜರ (ವಾದಿ-ಹಂಸಾಂಬುದ) ಸೋದರಿ. ಈ ಆತ್ರೇಯ-ರಾಮಾನುಜರ ಹಿಂದೆ ಕಾಂಚೀಪುರದ ಪೀಠಾಧಿಪತಿಗಳಾಗಿದ್ದ ನಡಾದೂರ್-ಅಮ್ಮಾಳ್ (ವಾತ್ಸ್ಯ-ವರದ) ದೇಶಿಕರಿಗೆ ಆರಂಭದ ಸ್ಫೂರ್ತಿಯನ್ನು ಒದಗಿಸಿದರು. ಮುಂದೆ ತಮ್ಮ ಸೋದರಮಾವ ಆತ್ರೇಯ-ರಾಮಾನುಜರಲ್ಲಿಯೇ ಶಾಸ್ತ್ರವಿದ್ಯಾಭ್ಯಾಸ ನಡೆಯಿತು. ಅನಂತರ ತಿರುವಹೀಂದ್ರಪುರದಲ್ಲಿ ಹದಿನೈದು ವರ್ಷಗಳು ಅಧ್ಯಯನ-ಅಧ್ಯಾಪನ-ಗ್ರಂಥ ರಚನೆಗಳಲ್ಲಿ ತೊಡಗಿದ್ದರು. ಕಾಂಚೀಪುರದ ಆಚಾರ್ಯಪೀಠ ತೆರವಾದಾಗ ಇವರಿಗೆ ಅಲ್ಲಿಂದ ಕರೆಬಂದಿತು. ಇವರ ಪ್ರತಿಭೆಯನ್ನು ಗಮನಿಸಿ ಶ್ರೀರಂಗದ ಶ್ರೀವೈಷ್ಣವ ಸಮುದಾಯವು ಇವರನ್ನು ಅಲ್ಲಿಗೆ ಕರೆಸಿಕೊಂಡಿತು. ಆ ಕಾಲಕ್ಕೆ ರಾಮಾನುಜ ಸಂಪ್ರದಾಯದಲ್ಲಿ ಕಾಂಚೀಪುರದ ಪೀಠ ಮತ್ತು ಶ್ರೀರಂಗದ ಪೀಠಗಳ ನಡುವೆ ಅಷ್ಟಾಗಿ ಹೊಂದಾಣಿಕೆಯಿರಲಿಲ್ಲವೆಂದು ಕಾಣುತ್ತದೆ. ಎರಡೂ ಪೀಠಗಳು ಒಟ್ಟಿಗೆ ಕೂಡಿದ್ದು ದೇಶಿಕರ ಹಿರಿಮೆಯಿಂದಲೇ. ಅಂತೂ ಶ್ರೀರಂಗದಲ್ಲಿ ಅವರು ಆಚಾರ್ಯರಾಗಿರುವಾಗ ಮುಸಲ್ಮಾನರ ದಾಳಿ ಈ ಕ್ಷೇತ್ರದ ಮೇಲೆರಗಲು, ದೇಶಿಕರು ಶ್ರೀರಂಗವನ್ನು ಬಿಟ್ಟು

ಕನ್ನಡನಾಡಿನ ಸತ್ಯಾಗಾಲದಲ್ಲಿ ನೆಲೆಸಿದರು. ಶ್ರೀರಂಗದಲ್ಲಿ ಪರಿಸ್ಥಿತಿ 1365ರ ಸುಮಾರಿಗೆ ನೆಮ್ಮದಿಯಾದ ಮೇಲೆ ಅವರು ಶ್ರೀರಂಗಕ್ಕೆ ಹಿಂದಿರುಗಿದರು.

ಶ್ರೀರಂಗದಲ್ಲಿ ಅಧ್ಯಯನೋತ್ಸವವು ತಪ್ಪಿಹೋಗಿದ್ದುದನ್ನು ಇವರು ಮತ್ತೆ ಬಳಕೆಗೆ ತಂದರೆಂದು ಅವರ ಶಿಷ್ಯ ಬ್ರಹ್ಮತಂತ್ರ-ಪರಕಾಲರು ಹೇಳಿದ್ದಾರೆ (**ಶ್ರೀರಂಗೇऽಧ್ಯಯನೋತ್ಸವಂ ಪ್ರತಿಹತಂ ಭೂಯಃ ಪ್ರತಿಷ್ಠಾಪಯನ್**). ಮುಸಲ್ಮಾನರು ಶ್ರೀರಂಗವನ್ನು ಮುತ್ತುವ ಮೊದಲೇ, ಶ್ರೀರಂಗದ ಗುಡಿಯಲ್ಲಿ ತಮಿಳುಪ್ರಬಂಧಗಳನ್ನು ದೇವರೆದುರು ವೈದಿಕಮಂತ್ರಗಳಿಗೆ ಸಮನಾಗಿ ಹಾಡುವುದನ್ನು ವಿರೋಧಿಸುವ ಜನರಿದ್ದರು; ಅವರ ಪ್ರಭಾವದಿಂದಾಗಿ ಪ್ರಬಂಧಪಾರಾಯಣವೇ ಮುಖ್ಯವಾದ ವಿವರವಾಗಿ ಉಳ್ಳ ಅಧ್ಯಯನೋತ್ಸವವು ನಿಂತಿದ್ದಿತು. ಮುಸಲ್ಮಾನರ ಆತಂಕ ಅಡಗಿದಮೇಲೂ ಪ್ರಬಂಧಗಳ ಸ್ಥಾನ-ಮಾನಗಳನ್ನು ಕುರಿತು ವಿವಾದವಿದ್ದೇ ಇದ್ದಿತು. ದೇಶಿಕರು ಪ್ರಬಂಧಪಾರಾಯಣಕ್ಕೆ ಇದ್ದ ವಿರೋಧವನ್ನು ಪರಿಹರಿಸಿದರು. ಪಾಂಚರಾತ್ರಪದ್ಧತಿಯು ಪ್ರಬಲವಾಗಿದ್ದ ಶ್ರೀರಂಗದಲ್ಲಿಯೇ ಪ್ರಬಂಧಗಳಿಗೆ ಇಷ್ಟು ವಿರೋಧವಿದ್ದಿತೆಂದರೆ ವೈಖಾನಸಪದ್ಧತಿಯ ವೇಂಗಡಬೆಟ್ಟದ ಗುಡಿಯಲ್ಲಿ ಕೇಳುವಂತೆಯೇ ಇಲ್ಲ. ದೇಶಿಕರ ಪ್ರಭಾವವು ಬೆಟ್ಟದ ಮೇಲಿದ್ದ ಶ್ರೀವೈಷ್ಣವಸಮುದಾಯದ ಮೇಲೂ ಇದ್ದಿತು. ಅವರೂ ಗುಡಿಯಲ್ಲಿ ದೇವರೆದುರು ಆಳ್ವಾರರ ಪ್ರಬಂಧಗಳನ್ನು ಹಾಡುವ ಅವಕಾಶಕ್ಕಾಗಿ ಹಾತೊರೆಯುತ್ತಿದ್ದರು; ಆದರೆ ಅರ್ಚಕರು ಬಿಡಗೊಡಲಿಲ್ಲ.

ಪ್ರಬಂಧಪಾರಾಯಣದ ಉತ್ಸಾಹಿಗಳಿಂದ 1360ರಲ್ಲಿ, ಎಂದರೆ ದೇಶಿಕರು ಬದುಕಿದ್ದಾಗಲೇ, ಒಂದು ಪ್ರಯತ್ನ ನಡೆಯಿತು. ಬ್ರಹ್ಮೋತ್ಸವದ ಸಮಯದಲ್ಲಿ, ಉತ್ಸವವು ಗುಡಿಯೊಳಗೆ ಹೋಗುವ ಮೊದಲು, ಉತ್ಸವದೆದುರು ನಮ್ಮಾಳ್ವಾರರ 'ತಿರುವಾಯ್‌ಮೋಳಿ'ಯನ್ನು ಶ್ರೀವೈಷ್ಣವರು ಹಾಡಿದರು. ಆದರೆ ಇದು ಗುಡಿಯ ಹೊರಬಾಗಿಲಿನ ಆಚೆಯೇ ನಡೆದದ್ದು! ಈ ಕೈಂಕರ್ಯಕ್ಕೆ ದಾನ 'ತಿರುಪ್ಪೋನಕ'ವನ್ನು ನೀಡಿದವನು ಚೊಯ್ಯೂರ್-ಕೋಟ್ಟೆಯ ಕುಲತಿಲಕ-ಚತುರ್ವೇದಿ-ಮಂಗಲದ ಚೋಳ-ಚೇದಿರಾಯನೆಂದು ಶಾಸನವಿದೆ. ಇದರ ಹಿನ್ನೆಲೆಯಲ್ಲಿ ಒಂದು ವಿವರವನ್ನು ನಾವು ಗಮನಿಸಬೇಕು. ಶ್ರೀರಂಗದ ಗುಡಿಯ ಕಥೆಯನ್ನು ಹೇಳುವ 'ಕೋಯಿಲ್ ಒಳಗು'ವಿನ ಪ್ರಕಾರ, ಮುಸಲ್ಮಾನರ ದಾಳಿಯ ಸೂಚನೆ ಬಂದಾಗ ಶ್ರೀರಂಗದ ಗುಡಿಯಿಂದ ಉತ್ಸವಮೂರ್ತಿಯನ್ನು ಗುಟ್ಟಾಗಿ ಹೊರಗೊಯ್ದು ವೇಂಗಡಬೆಟ್ಟದ ಮೇಲಿನ ಗುಡಿಯ ಹೊರ ಆವರಣದಲ್ಲಿ ಹತ್ತಾರು ವರ್ಷ ಇರಿಸಿದ್ದರು. ಕ್ರಿಸ್ತಾಬ್ದ 1340-1350ರ ಸುಮಾರಿಗೆ ಶ್ರೀರಂಗನಾಥ-ಯಾದವರಾಯನು ಈ ಮೂರ್ತಿಗಾಗಿ ಮಂಟಪವೊಂದನ್ನು ಕಟ್ಟಿಸಿದನು; ಇದೇ ಈಗಿನ 'ರಂಗನಾಯಕನ ಮಂಟಪ'. ಮತ್ತೆ ಈ ಮೂರ್ತಿ ಶ್ರೀರಂಗಕ್ಕೆ ಹಿಂದಿರುಗಿದುದು ಕ್ರಿಸ್ತಾಬ್ದ 1365ರ ಸುಮಾರಿಗೆ. ಅಲ್ಲಿಯವರೆಗೆ ರಂಗನಾಥನ ಸನ್ನಿಧಿಯಲ್ಲಿ ಪೂಜೆಗೆ ನೆರವಾದವನು ಬೆಟ್ಟದ ಮೇಲೇ ಹುಟ್ಟಿಬೆಳೆದ ತಿರುಮಲೈ-ಆಂಡಾನ್ ಎಂಬುವನು.

ಇವನು ನಮ್ಮಾಳ್ವಾರರ ತಿರುವಾಯ್‌ಮೋಳಿಯನ್ನು ಹಾಡುವುದಲ್ಲಿ ತುಂಬ

ಗಟ್ಟಿಗ; ಇವನಿಗೆ 'ತಿರುವಾಯ್‌ಮೋಳಿಪಿಳ್ಳೈ' ಎಂದೇ ಹೆಸರಿದ್ದಿತು. ಇವನ ಅಜ್ಜ ನಮ್-ಪಿಳ್ಳೈ-ಲೋಕಾಚಾರ್ಯನು ಕೆಳತಿರುಪತಿಯಲ್ಲಿ ತಿರುವಾಯ್‌ಮೋಳಿಯ ಪಾರಾಯಣವನ್ನು ಕ್ರಿಸ್ತಾಬ್ದ 1253ರಷ್ಟು ಹಿಂದೆಯೇ ವ್ಯವಸ್ಥೆ ಮಾಡಿದ್ದವನು. ಬೆಟ್ಟದ ಮೇಲಿನ ಗುಡಿಯಲ್ಲಿ ಹೊರಬಾಗಿಲಿನ ಮೇಲೆ ಇನ್ನೂ ಗೋಪುರ ಎದ್ದಿರಲಿಲ್ಲ (ಅದು ಎದ್ದುದು ಸಾಳುವ-ನರಸಿಂಹನ ಕಾಲದಲ್ಲಿ—ಸುಮಾರು ನೂರು ವರ್ಷಗಳ ನಂತರ), ಪ್ರಾಕಾರವೂ ಇರಲಿಲ್ಲ. ತಲೆಬಾಗಿಲು ಮಂಟಪದಂತಿದ್ದಿತು. ಅಲ್ಲಿ ಮಲಯಪ್ಪ ಸ್ವಾಮಿಯನ್ನು ಕೂರಿಸಿ, ತಿರುವಾಯ್‌ಮೋಳಿಯನ್ನು ಹಾಡಲಾಯಿತು. ಶ್ರೀರಂಗದಲ್ಲಿ ಪದ್ಧತಿಯಿದ್ದಂತೆ, ಬೆಟ್ಟದ ಮೇಲೂ ರಂಗನಾಥನ ಉತ್ಸವಮೂರ್ತಿಯೆದುರು ತಿರುವಾಯ್‌ಮೋಳಿಯ ಹಾಡಿಕೆ ನಡೆಯುತ್ತಿದ್ದಿರಬೇಕು. ಆದರೆ ಉತ್ಸವಮೂರ್ತಿಯಿದ್ದ 'ರಂಗನಾಯಕನ ಮಂಟಪ' ಆಗ ವೇಂಗಡದ ಗುಡಿಯ ಹೊರಗೇ ಇದ್ದಿತು; ಆದುದರಿಂದ ಇದಕ್ಕೆ ವೈಖಾನಸರ ಅಥವಾ ಇತರ ಶ್ರೀವೈಷ್ಣವರ ವಿರೋಧವೇನಿರಲಿಲ್ಲ. ಗುಡಿಯೊಳಗೆ ಪ್ರಬಂಧಗಳ ಪಾರಾಯಣವು ಕ್ರಿಸ್ತಾಬ್ದ 1476ರವರೆಗೂ ಸಾಗಿಬರಲಿಲ್ಲ. ಆದರೆ ಆಳ್ವಾರರ ಪ್ರಬಂಧಗಳು ಉಪನಿಷತ್ತಿಗೆ ಸಮಾನವಾದುವೆಂದು ಪ್ರತಿಪಾದಿಸಿದ ದೇಶಿಕರ ಪ್ರಭಾವ ಹರಡಿಕೊಳ್ಳುತ್ತಿದ್ದಿತ್ತು.

ದೇಶಿಕರಿಗೂ ವೇಂಗಡದ ಬೆಟ್ಟಕ್ಕೂ ನಂಟು ಇದ್ದಿತೆಂಬ ಪ್ರತೀತಿಯಿದೆ. ಲೋಕವನ್ನೆಲ್ಲ ಉಂಟುಮಾಡಿ, ಕೆಲಸ ಮುಗಿಯಲಿಲ್ಲವೆಂದುಕೊಂಡು ವೇಂಗಡ-ಬೆಟ್ಟದ ಮೇಲೆ ಬಂದು ನಿಂತನಂತೆ ದೇವರು; ಆದರೂ ಕೆಲಸ ಮುಗಿಯಲಿಲ್ಲವೆಂದುಕೊಂಡು ವೇಂಕಟನಾಥನೆಂಬ ಗುರುವಾಗಿ ಇಳಿದುಬಂದನಂತೆ—

ವೇಂಗಡಮಾಮಲೈ ಮೇವಿ,
ಪಿನ್ನುಂ ವೆನ್ರಿಪುಹಳ್ ತಿರುವೇಂಗಡನಾಥನೆಳುಂ ಗುರುವಾಯ್ ನಿನ್ರು

—ಹೀಗೆ ಅವರ ಮಗ ನಾಯನಾಚಾರ್ಯರು ಹೇಳುತ್ತಾರೆ ('ಪಿಳ್ಳೆಯಂದಾದಿ'). ಅವರು ಬೆಟ್ಟದ ದೇವರ ಘಂಟಾವತಾರವೆಂದು ನಂಬಿಕೆ ಪ್ರಬಲವಾಗಿದ್ದಿತು; ಈ ಎಣಿಕೆ ಅವರಿಗೂ ಇದ್ದಿತೆಂದು ತೋರುತ್ತದೆ. ಅವರು ತಮ್ಮ ಕ್ಷೇತ್ರಪರ್ಯಟನೆಯ ಸಂದರ್ಭದಲ್ಲಿ ಘಟಿಕಾಚಲವನ್ನು ನೋಡಿದನಂತರ, ತಿರುಚ್ಚಾನೂರಿಗೆ ಬಂದು ಪದ್ಮಾವತಿಯ (ಅಲರ್‌ಮೇಲ್‌ಮಂಗತ್ತಾಯಾರರ) ದರ್ಶನ ಮಾಡಿ ಕೆಳತಿರುಪತಿಗೆ ಬಂದರೆಂದೂ, ಅಲ್ಲಿಂದ ಬೆಟ್ಟವೇರಿದರೆಂದೂ ತಿಳಿದುಬರುತ್ತದೆ. ಬೆಟ್ಟವನ್ನು ನೋಡಿದ ಮೇಲೆ ಉತ್ತರದೇಶದ ಯಾತ್ರೆಯನ್ನು ಕೈಗೊಂಡು, ಹಿಂದಿರುಗಿ ಬರುವಾಗ ಮತ್ತೆ ಬೆಟ್ಟದ ದೇವರ ದರ್ಶನ ಮಾಡಿದರೆಂದೂ, ಹೀಗೆ ದೇಶಿಕರು ಬೆಟ್ಟಕ್ಕೆ ಬಂದುದು ಎರಡು ಬಾರಿಯೆಂದೂ ಹೇಳುತ್ತಾರೆ. ಈ ಸಮಯದಲ್ಲಿ 'ದಯಾಶತಕ'ವೆಂಬ ಸ್ತೋತ್ರವನ್ನು ಅವರು ರಚಿಸಿದರು. ಕಬ್ಬಿನ ರಸವು ಸುರಿದು ಗಟ್ಟಿಯಾಗಿ ಸಕ್ಕರೆಯಾದಂತೆ ದೇವರ ಅನುಕಂಪವು ವೇಂಗಡಬೆಟ್ಟವಾಗಿದೆಯೆಂದು ಈ ಶತಕದ ಮೊದಲ ಶ್ಲೋಕ ಹೇಳುತ್ತದೆ—

ಪ್ರಪದ್ಯೇ ತಂ ಗಿರಿಂ ಪ್ರಾಯಃ ಶ್ರೀನಿವಾಸಾನುಕಂಪಯಾ।
ಇಕ್ಷ್ವಾಸಾರಸ್ವಮತ್ಯೇವ ಯನ್ಮೂರ್ತ್ಯಾ ಶರ್ಕರಾಯಿತಮ್॥

ರಾಮಾನುಜರು ವೇಂಗಡದೊಡೆಯನನ್ನು 'ಶ್ರೀನಿವಾಸ'ನೆಂದೇ ಕರೆದರು. ಅವರ 'ಶ್ರೀಭಾಷ್ಯ'ದ ಮಂಗಳಶ್ಲೋಕವು ಹೀಗಿದೆ—

ಅಖಿಲಭುವನಜನ್ಮಸ್ಥೇಮಭಂಗಾದಿಲೀಲೇ
ವಿನತವಿವಿಧಭೂತವ್ರಾತರಕ್ಷೈಕದೀಕ್ಷೇ।
ಶ್ರುತಿಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ
ಭವತು ಮಮ ಪರಸ್ಮಿನ್ ಶೇಮುಷೀ ಭಕ್ತಿರೂಪಾ॥

ಎಲ್ಲ ಲೋಕಗಳ ಹುಟ್ಟು ಉಳಿವು ಅಳಿವುಗಳೆಂಬ ಆಟದಲ್ಲಿ ತೊಡಗಿದ್ದು, ಶರಣೆಂದು ಬರುವ ಎಲ್ಲ ಪ್ರಾಣಿಗಳನ್ನು ಕಾಪಿಡುವುದೊಂದನ್ನೇ ಕೈಗೊಂಡು, ವೇದಗಳ ತಲೆಯಮೇಲೆ ಬೆಳಗುತ್ತಿರುವ ಬ್ರಹ್ಮನೇ ಶ್ರೀನಿವಾಸನೆಂದು ಅವರು ಬಗೆದಿದ್ದರು. ದೇಶಿಕರು 'ಶ್ರೀನಿವಾಸ'ನೆಂಬ ಹೆಸರನ್ನೇ ಆದರದಿಂದ ಕಂಡುಕೊಂಡು 'ದಯಾಶತಕ'ವನ್ನು ಹೀಗೆ ಆರಂಭಿಸಿದ್ದಾರೆ. ವೇಂಗಡದ ದೇವರ ಹೆಂಡತಿಯೆಂದು ಪ್ರಸಿದ್ಧಳಾದ ಲಕ್ಷ್ಮಿಯು ದೇವರ ದಯೆಯ ಸ್ವರೂಪವೇ; ಆಕೆಯ ಮೂಲಕವೇ ನಾವು ದೇವರನ್ನು ಅನುಭವಿಸುವುದು ಸಾಧ್ಯ ಎಂಬ ಭಾವವು ಈ ಸ್ತೋತ್ರಮಾಲಿಕೆಯಲ್ಲಿ ಹರಿದು ಬಂದಿದೆ.

'ದಯಾಶತಕ'ವಲ್ಲದೆ ಇವರು ತಮಿಳಿನಲ್ಲಿ 'ವೇಂಗಡತ್ತಾನ'ನನ್ನು ಕುರಿತು ಸುಪ್ರಭಾತವೊಂದನ್ನು ರಚಿಸಿದ್ದಾರೆ. ಇದರಲ್ಲಿ ದೇವತೆಗಳ ತಲೆಮಣಿಯಂತಿರುವ ಈ ಏಳುಮಲೆಗಳೊಡೆಯನು ತುಳಸಿಯ ವನಮಾಲೆಯನ್ನು ಧರಿಸಿ, ಮಣಿ-ಮುಡಿಯನ್ನು (ಎಂದರೆ, ಕಿರೀಟವನ್ನು) ತೊಟ್ಟು, ಮುಗುಳ್ನಗೆ ನಗುತ್ತ ಕಾರ್ಮುಗಿಲಬಣ್ಣದವನಾಗಿ (**ಕರುಮುಹಿಲ್‌ವಣ್ಣನ್**) ನಿಂತಿರಲು ವೈದಿಕರು ವೇದಮಂತ್ರಗಳನ್ನು ಪಠಿಸುತ್ತ ಕೈಗಳಲ್ಲಿ ಚಂದನವನ್ನು ಹಿಡಿದು (**ಇರುಕರತ್ತಾಲೇಂದಿ ಮಣಿಂ ಕಮಳುಂ ಶಾಂದಮುಂ**) ಬಾಗಿಲಲ್ಲಿ ನಿಂತಿರುವ (**ವೇದನಾವರುನ್ ವಾಶಲಿಲ್ ಕೈತೊಳುದು**) ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ಬಣ್ಣಿಸಿದ್ದಾರೆ.

ಇಷ್ಟನ್ನು ಬಿಟ್ಟು ವೇಂಗಡದ ಗುಡಿಗೂ ದೇಶಿಕರಿಗೂ ನೇರವಾದ ಸಂಬಂಧ ಏನೂ ಇದ್ದಂತೆ ಕಾಣುವುದಿಲ್ಲ. ದೇಶಿಕರಿಗೆ ಪ್ರಿಯವಾಗಿದ್ದ ಪ್ರಬಂಧಪಾರಾಯಣ ಮತ್ತು ಗುಡಿಯೊಳಗೆ ಆಳ್ವಾರರ ಸನ್ನಿಧಿ—ಎರಡೂ ಬೆಟ್ಟದ ಗುಡಿಯಲ್ಲಿ ಮೂಡಿ ಬರಲಿಲ್ಲ. ಪ್ರಬಂಧಪಾರಾಯಣವೇನೋ ಅವರ ಜೀವಿತಕಾಲದಲ್ಲಲ್ಲದಿದ್ದರೂ ಮುಂದೆ ಬಳಕೆಗೆ ಬಂದಿತು. ಆದರೆ ಆಳ್ವಾರರ ಸನ್ನಿಧಿ ಅಲ್ಲಿ ಇಂದಿಗೂ ಒದಗಿಬಂದಿಲ್ಲ. ಕೆಳತಿರುಪತಿಯಲ್ಲಿ ಕೊಂಚಮಟ್ಟಿಗೆ ದೇಶಿಕರ ಪ್ರಭಾವ ಮೂಡಿಬಂದಿತು. ಅವರ ಶಿಷ್ಯರಾಗಿದ್ದ ಬ್ರಹ್ಮತಂತ್ರ-ಸ್ವಾಮಿಗಳು ಮೊದಲು ಕಾಂಚೀಪುರದಲ್ಲೂ ಅನಂತರ ತಿರುಪತಿಯಲ್ಲೂ ತಮ್ಮ ಮಠವನ್ನು ಸ್ಥಾಪಿಸಿದರು. ಮುಂದೆ ಮೈಸೂರಿಗೆ ಬಂದ ಈ

ಮಠ ಪರಕಾಲಮಠವೆಂದು ಪ್ರಸಿದ್ಧವಾಗಿದೆ. ದೇಶಿಕರ ಪರಂಪರೆಯು ಅವರ ಮಗ ನಾಯನಾಚಾರ್ಯ (ವರದ-ನಾಥ), ಅವರ ಶಿಷ್ಯ ಘಟಿಕಾಶತಂ-ಅಮ್ಮಾಳ್ (ವರದ-ವಿಷ್ಣು) ಇವರ ಮೂಲಕ ಆದಿ-ವಣ್-ಶಠಕೋಪ-ಜೀಯರರವರೆಗೆ ಸಾಗಿತು. ಆದಿ-ವಣ್-ಶಠಕೋಪ-ಜೀಯರರ ಕಾಲಕ್ಕೆ ಸಿಂಗಯ್ಯ-ದಣ್ಣಾಯಕನ ನೆರವಿನಿಂದ ಮಠವು ಬೆಟ್ಟದ ಮೇಲೂ ಕಾಣಿಸಿಕೊಂಡಿತು. ಅಲ್ಲಿಂದ ಮುಂದೆ ದೇಶಿಕರ ಭಾವನೆಗಳಿಗೆ ಅಲ್ಲಿಯೂ ಸ್ವಲ್ಪಮಟ್ಟಿಗೆ ಆದರ ದೊರೆಯಿತು. ಸಂಪ್ರದಾಯದವರ ನಂಬಿಕೆಯಂತೆ ದೇಶಿಕರು ಎರಡನೆಯ ಬಾರಿ ಬೆಟ್ಟದ ಮೇಲೆ ಬಂದಿದ್ದಾಗ ಗುಡಿಯ ಆಗುಹೋಗು ಗಳನ್ನು ನೋಡಿಕೊಳ್ಳಲು ಮೊದಲ ಬ್ರಹ್ಮತಂತ್ರಸ್ವಾಮಿಯನ್ನು ನೇಮಿಸಿದರು; ಅವರಾದ ಮೇಲೆ ಪೇರಾರುಳಾಳನ್-ಅಪ್ಪೈ (ಎರಡನೆಯ ಬ್ರಹ್ಮತಂತ್ರ ಸ್ವಾಮಿಗಳಾದವರು) ಗುಡಿಯ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. ಆದರೆ ಇದಕ್ಕೆ ಸಾಕಷ್ಟು ಸಮರ್ಥನೆ ದೊರೆಯುವುದಿಲ್ಲ. ಪೇರಾರುಳಾಳನ್ ಎಂಬುವರು ಬೆಟ್ಟದ ಮೇಲೆ ಪ್ರಖ್ಯಾತರಾಗಿದ್ದ ಗುರುಗಳೆಂಬುದೇನೋ ದಿಟವೇ.



ಆರು

ಸಾಳುವರ ಅಭ್ಯುದಯದಲ್ಲಿ ಗುಡಿಯ ವೈಭವ

ಸಾಳುವ ಅರಸರು

ಯಾದವರಾಯರಾದಮೇಲೆ ಈ ಕಡೆ ಹೆಸರಾದವರು, ಪ್ರಬಲರಾದವರು, ಬೆಟ್ಟದ ಹಿರಿಮೆಗೆ ನೆರವಾದವರು, ಸಾಳುವವಂಶದ ದೊರೆಗಳು. ಇದು ಕನ್ನಡನಾಡಿನ ಮನೆತನವೇ. ಅವರಿಗಿದ್ದ ಬಿರುದುಗಳನ್ನು ನೋಡಿ: 'ಕಟ್ಟಾರಿ-ಸಾಳುವ', 'ಮೇದಿನೀ-ಮೀಸರಗಂಡ', 'ಬಿರುದೆಂತೆಂಬರ ಗಂಡ', 'ಹೊಸ ಬಿರುದರ ಗಂಡ', 'ಗಂಡರ ಗಂಡ', 'ಗಂಡಭೇರುಂಡ'. ಕನ್ನಡದವರೆಂದು ಬೇರೆ ಹೇಳಬೇಕೆ? ಈ ವಂಶದ ಹಿನ್ನೆಲೆಯಲ್ಲಿ ಚಂದ್ರನನ್ನು ಮೊದಲುಮಾಡಿಕೊಂಡು ಪುರೂರವಸ್ಸು, ಆಯು, ನಹುಷ, ಯಯಾತಿ, ಪೂರುಗಳ ಮೂಲಕ, ಗಟ್ಟಿನೆಲದ ಮೇಲೆ ನಿಲ್ಲುವವನು ಸಾಳುವ-ಗುಂಡಯ್ಯದೇವ-ಮಹಾರಾಜನೆಂಬುವನು. ಸಾಳುವದೊರೆಗಳ ಹೆಸರಿಗೆ ಬಲವಾಗಿ ಮತ್ತೆಮತ್ತೆ 'ಮಹಾರಾಜ' ಎಂದು ಬರುತ್ತದೆ; ಆದರೆ ಇವರು ದಿಟವಾಗಿ ಮಹಾರಾಜರಲ್ಲ, ಸಾಮಂತರು ಅಷ್ಟೆ. 'ಮಹಾಮಂಡಲೇಶ್ವರ' ಎಂದು ಬರುವ ಪ್ರಶಸ್ತಿಯೇ ಉಚಿತವಾದುದು. ಚಂದ್ರಗಿರಿರಾಜ್ಯ, ಅದರ ನೆರೆನಾಡು ಇವುಗಳ ಮೇಲೆ ಒಡೆತನ ನಡೆಸುತ್ತಿದ್ದ ಇವರು ಮೊದಲನೆಯ ಹರಿಹರ, ಮೊದಲನೆಯ ಬುಕ್ಕ ಇವರಿಗೆ ನಡೆದುಕೊಳ್ಳುತ್ತಿದ್ದರು.

ಗುಂಡಯ್ಯದೇವನಿಗೆ 'ಸಾಳುವ' ಎನ್ನುವ ಹೆಸರು ಬಂದುದು ಹೇಗೆಂಬುದು ತಿಳಿಯದು; 'ಸಾಳುವ' ಎಂದರೆ ಖಚಿತವಾಗಿ ಏನೆಂಬುದೂ ತಿಳಿಯದು. ಸಾಳುವ ಎನ್ನುವ ಕನ್ನಡಮಾತಿನ ಸಂಸ್ಕೃತರೂಪವೇ ಸಾಳ್ವ ಎಂದು ತೋರುತ್ತದೆ. ಸಂಸ್ಕೃತ ಕೋಶಗಳಲ್ಲಿ 'ಸಾಳುವ' ಎಂಬ ಮಾತು ಕಾಣಿಸಿಕೊಳ್ಳುವುದಿಲ್ಲ. 'ಸಾಳ್ವ' ಎನ್ನುವುದೂ ಸ್ಪಷ್ಟವಾದ ಅರ್ಥವಿರುವ ಪದವೇನಲ್ಲ. ಪಕ್ಷಿವಿಶೇಷ, ಒಂದು ಪ್ರದೇಶ, ಅದರ ಜನರು ಎಂದು ಹೇಳುತ್ತಾರಷ್ಟೆ. ಕನ್ನಡನಾಡಿನ ರಾಜರ ಬಿರುದು-ಬಾವಲಿಗಳಲ್ಲಿ 'ಸಿಂಹ-ಶರಭ-ಸಾಳ್ವ-ಗಂಡಭೇರುಂಡ' ಎನ್ನುವ ಒಕ್ಕಣೆಯನ್ನು ಕಾಣುತ್ತೇವೆ. ಪೌರಾಣಿಕ ನೆಲೆಯಲ್ಲಿ ಆಶ್ಚರ್ಯಕರವಾದ ಸಾಮರ್ಥ್ಯಗಳುಳ್ಳ ಮೃಗಪಕ್ಷಿಗಳು ಇವು. ಆನೆಯೇ ಬಲಶಾಲಿಯಾದರೆ ಆನೆಯನ್ನೂ ಬೆದರಿಸಬಲ್ಲುದು ಸಿಂಹ; ಸಿಂಹವನ್ನು ಸೆಣೆಸಿ ಸದೆಬಡಿಯಬಲ್ಲ ಶರಭ ಎಂಟು ಕಾಲುಗಳಿರುವ ವಿಚಿತ್ರಪ್ರಾಣಿ; ಶರಭವನ್ನೂ

ಕಾಡಿಸುವ ಶಕ್ತಿಯಿರುವುದು ಸಾಳ್ವ ಎಂಬ ಅದ್ಭುತಪಕ್ಷಿಗೆ; ಇವೆಲ್ಲವನ್ನೂ ಸಾಹಸದಲ್ಲೂ ಸಾಮರ್ಥ್ಯದಲ್ಲೂ ಮೀರಿಸುವುದು ಗಂಡಭೇರುಂಡ. ನರಸಿಂಹಾವತಾರದಲ್ಲಿ ವಿಷ್ಣುವಿನ ಉಗ್ರತೆಯನ್ನು ಇಳಿಸಲು ಶಿವನು ಶರಭಾವತಾರ ಮಾಡಿದನಂತೆ; ಶರಭೇಶ್ವರನ ಆಟಾಟೋಪವನ್ನು ಹತ್ತಿಕ್ಕಲು ವಿಷ್ಣು ಸಾಳ್ವನಾದ; ವಿಷ್ಣುವಿನ ಗುಂಡಿಗೆಯನ್ನು ಮುದುಡಿಸಲು ಶಿವನು ಗಂಡಭೇರುಂಡೇಶ್ವರನಾದನಂತೆ. ಶೈವ-ವೈಷ್ಣವಮತಗಳ ಅನುಯಾಯಿಗಳ ನಡುವೆ ನಡೆಯುತ್ತಿದ್ದ ಪೈಪೋಟಿ ಈ ಕಥೆಗೆ ಮೂಲವೆಂಬುದನ್ನು ಯಾರಾದರೂ ತಿಳಿದುಕೊಂಡಾರು. ಇದು ಹೇಗಾದರೂ ಇರಲಿ, ಎದುರಾಳಿಗಳ ಮೇಲೆ ರಣಹದ್ದಿನಂತೆ ಎರಗಿ, ಅವರನ್ನು ಕಾಡಿ ಓಡಿಸಬಲ್ಲವನು ಎಂಬರ್ಥದಲ್ಲಿ ಸಾಳುವನೆಂಬ ಹೆಸರು ಗುಂಡಯ್ಯನಿಗೋ ಅವನ ಅನಂತರ ಮಂಡಲೇಶ್ವರನಾದ ಮಂಗಿದೇವನಿಗೋ ಬಂದಿರಬೇಕು.

ಈ ಮನೆತನದಲ್ಲಿ ಹಲವು ಕವಲುಗಳಿವೆ, ಹಲವಾರು ಮಂದಿ ಹೆಸರಾಗಿದ್ದಾರೆ. ಬೆಟ್ಟದ ಗುಡಿಯನ್ನು ಬೆಳೆಸಲು ಈ ಸಾಳುವವಂಶದವರು ಬಗೆಬಗೆಯಾಗಿ ನೆರವಾಗಿದ್ದಾರೆ. ಮಂಟಪಗಳೂ ಗೋಪುರಗಳೂ ಕೊಳಗಳೂ (ಕೋನೇರಿಗಳೂ) ಕಾಣಿಸಿಕೊಳ್ಳತೊಡಗಿದುದು ಇವರ ಕಾಲದಿಂದಲೇ. ಈ ಮನೆತನದ ಮೂಲಪುರುಷ ಗುಂಡಯ್ಯನೆಂದೆವಲ್ಲ, ಇವನ ಕಾಲ ತಿಳಿಯುವುದಿಲ್ಲ. ಬಹುಶಃ ಮೊದಲನೆಯ ಹರಿಹರನ ಕಾಲದಲ್ಲಿ (ಎಂದರೆ, ಕ್ರಿಸ್ತಾಬ್ದ 1336 ರಿಂದ 1344 ರವರೆಗೆ) ಇದ್ದಿರಬಹುದು. ಆ ವೇಳೆಗಾಗಲೇ ಮುಸಲ್ಮಾನರು ದಕ್ಷಿಣದೇಶದ ಮೇಲೆ ದಾಳಿಮಾಡತೊಡಗಿದ್ದರು (1310 ಮತ್ತು 1328 ರಲ್ಲಿ). ಅಲ್ಲಲ್ಲಿ ಪ್ರಬಲರಾಗಿ ಪ್ರದೇಶಗಳನ್ನು ವಶಪಡಿಸಿಕೊಂಡು ಆಳತೊಡಗುತ್ತಿದ್ದರು. ಹರಿಹರನ ಅನಂತರ ವಿಜಯನಗರದ ಅರಸನಾದ ಮೊದಲನೆಯ ಬುಕ್ಕರಾಯನು ಈ ಆತಂಕವನ್ನೆದುರಿಸಲು ಮನಸ್ಸು ಮಾಡಿದಾಗ, ಅವನ ಮಗ ವೀರ-ಕುಮಾರ ಕಂಪನ-ಒಡೆಯನು ಮಧುರೆಯ ಸುಲ್ತಾನನ್ನು ಸೆಣೆಸಿ ಅಲ್ಲಿ ಅವನ ಆಳ್ವಿಕೆಯನ್ನು ಕೊನೆಗಾಣಿಸಿದನು. ಇವನಿಗೂ 'ಮಹಾಮಂಡಲೇಶ್ವರ', 'ಅರಿರಾಯ-ವಿಭಾಳ', 'ಭಾಷೆಗೆ ತಪ್ಪುವ ರಾಯರ ಗಂಡ' ಎಂಬ ಅಚ್ಚಕನ್ನಡಬಿರುದು ಗಳಿದ್ದುವು. ಇವನಿಗೆ ಸಮರದಲ್ಲಿ ನೆರವಾದವನು 'ಮಹಾಮಂಡಲೇಶ್ವರ', 'ಮೇದಿನೀ ಮೀಸರಗಂಡ' ಸಾಳುವ ಮಂಗಿದೇವ-ಮಹಾರಾಜ.

ಜೊತೆಗೂಡಿ ಸಮರದಲ್ಲಿ ಜಯಪಡೆದು ಹಿಂದಿರುಗಿದಮೇಲೆ ಬುಕ್ಕರಾಯನೂ ಮಂಗಿದೇವನೂ ಬೆಟ್ಟದ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಬುಕ್ಕರಾಯನು ದೇವರಿಗೆ ಹೊಸದೊಂದು ಬ್ರಹ್ಮೋತ್ಸವವನ್ನು ವ್ಯವಸ್ಥೆಮಾಡಿ, ದಿನವೂ ತಿರುಪ್ಪೋನಕ ನೈವೇದ್ಯಕ್ಕೆ 'ಸಂಧಿ'ಯೊಂದನ್ನು ಏರ್ಪಡಿಸಿದನು. ಈ 'ಸಂಧಿ'ಗೆ ಮುಂದೆ 'ಬುಕ್ಕರಾಯ ಸಂಧಿ' ಎಂದೇ ಹೆಸರಾಯಿತು. ಅವನ ಸಾಮಂತನಾಗಿದ್ದ ಮಂಗಿದೇವನು ದೇವರಿಗೆ ಮಾಡಿದ ಕೈಂಕರ್ಯವನ್ನು ಹೇಳುವ ಮೊದಲು, ಮಂಗಿದೇವನು ಯಾರೆಂಬುದನ್ನು ಹೇಳಬೇಕು. ಮಂಗಿದೇವನನ್ನು ಮಂಗುದೇವ, ಮಂಗದೇವ ಎಂದೂ ಕರೆಯುವುದಿದೆ. ಗುಂಡಯ್ಯದೇವನ ಆರು ಮಂದಿ ಮಕ್ಕಳಲ್ಲಿ ಇವನು ಐದನೆಯವನು. ಇವನೇ

ಗುಂಡಯ್ಯನಾದಮೇಲೆ ಚಂದ್ರಗಿರಿರಾಜ್ಯದ ಮಂಡಲೇಶ್ವರನಾದವನು; ಬುಕ್ಕರಾಯನಿಗೆ ಅಚ್ಚುಮೆಚ್ಚಾಗಿ, ವೀರಕಂಪನ-ಒಡೆಯನಿಗೆ ಗೆಳೆಯನಾಗಿ ಪ್ರಭಾವಶಾಲಿಯಾದವನು.

ಮಂಗಿದೇವ-ಸುವರ್ಣಶಿಖರ

ಬೆಟ್ಟದ ಮೇಲಿನ ಗುಡಿಯ ಒಳಗೋಪುರದ ಕೆಳಗೋಡೆಯ ಮೇಲೆ ಇವನ ಶಾಸನವೊಂದಿದೆ. ಇದು ತೆಲುಗುಭಾಷೆಯಲ್ಲೂ ತಮಿಳಿನಲ್ಲೂ ಬೇರೆಬೇರೆಯಾಗಿ ಮೂಡಿಕೊಂಡಿದೆ. ಶಾಸನದಲ್ಲಿ ಕಾಣಿಸಿರುವ ಕಾಲ ಶಕವರ್ಷ 1281, ವಿಕಾರಿ ಸಂವತ್ಸರದ ಆಷಾಢಮಾಸದಲ್ಲಿ ಶುಕ್ಲಪಕ್ಷದ ನವಮೀ; ಇದು ಕ್ರಿಸ್ತಾಬ್ದ 1359ರ ಜುಲೈ ತಿಂಗಳ ಐದನೆಯ ದಿನಕ್ಕೆ ಸರಿಯಾಗುತ್ತದೆ. "ಮಹಾಮಂಡಲೇಶ್ವರ ಮೀಸರ ಗಂಡ ಮಂಗಿದೇವ ಮಹಾರಾಜನು ತಿರುಮಲೆಯ ದೇವರಿಗೆ ಬಂಗಾರದ ಶಿಖರವನ್ನು ಎತ್ತಿಸಿದನು" (**....ತಿರುಮಲದೇವರಕು....ಸುವರ್ಣಾದಿ ಸಿಖರಮುನು ಎತಿಂಚಿನು**) ಎಂಬ ಒಕ್ಕಣೆಯಷ್ಟೇ ತೆಲುಗುಶಾಸನದಲ್ಲಿ ಕಾಣುವುದು. ತಮಿಳುಶಾಸನದಲ್ಲಿ "ಗರ್ಭಗುಡಿಯನ್ನು ಹೊನ್ನುಮಾಡಿಸಿ, ಅದರ ಮೇಲೆ ಹೊನ್ನಿನ ಕಲಶವನ್ನು ಮೂಡಿಸಿದನು" (**....ತಿರುಮಲೈಯಿಲ್ ಕೋಯಿಲಾಳ್ವಾರ್ ಪೊನ್ನುಂಮೆ( )ದು ಪೊರ್ಕೂಟ (ಮುಂ) ವೈತ್ತಾ(ರ್)ಂದ ಧರ್ಮ....**) ಎಂಬ ವಿವರವಿದೆ. ಬೆಟ್ಟವನ್ನು 'ತಿರುಮಲೆ'ಯೆಂದೇ ಎರಡೂ ಶಾಸನಗಳಲ್ಲಿ ಕರೆದಿರುವುದನ್ನು ಗಮನಿಸಬೇಕು; ವೇಂಗಡವೆಂಬ ಹೆಸರು ಬರುಬರುತ್ತ ಹಿಂದಕ್ಕೆ ಸರಿದು 'ತಿರುಮಲೆ'ಯೆನ್ನುವುದು ವಾಡಿಕೆಗೆ ಬರುತ್ತಿದ್ದಿತು. ಆದರೆ ಶಾಸನದಲ್ಲಿ ಉಲ್ಲೇಖಿಸಿರುವಂತೆ ಮಂಗಿದೇವನು ಕೈಗೊಂಡ ಕೆಲಸ ಯಾವುದು?

'ಸುವರ್ಣಾದಿ ಸಿಖರ'ವೆಂದರೆ, 'ಪೊರ್ಕೂಟ'ವೆಂದರೆ, ಬಂಗಾರದ ಶಿಖರ. ಅದನ್ನು ಜಟಾವರ್ಮ-ಸುಂದರಪಾಂಡ್ಯನು ಕ್ರಿಸ್ತಾಬ್ದ 1265ರ ಸುಮಾರಿಗೇ (ಎಂದರೆ, ತೊಂಬತ್ತನಾಲ್ಕು ವರ್ಷಗಳಷ್ಟು ಹಿಂದೆಯೇ) ಮಾಡಿಸಿರಲಿಲ್ಲವೆ? 'ಹೇಮಕಲಶೋಪ ಸ್ಥಾಪಿ(ತಂ)' ಎಂದು ಅವನ ಶಾಸನವೇ ಇದೆಯಲ್ಲ? ತಮಿಳುಶಾಸನದಲ್ಲಿ ಬರುವ ಹೆಚ್ಚಿನ ವಿವರ ಗರ್ಭಗುಡಿಯನ್ನು (ಕೋಯಿಲ್ ಆಳ್ವಾರ್) ಹೊನ್ನುಮಾಡಿಸಿದುದು. ಈ ಮಾತಿಗೆ ಅರ್ಥ, ಗುಡಿಯ ಮೇಲಣ ವಿಮಾನವನ್ನು ಬಂಗಾರದ ತಗಡುಗಳಿಂದ (ತಾಮ್ರದ ತಗಡುಗಳಿಗೆ ಬಂಗಾರದ ಮೆರಗು ಹಾಕಿ) ಹೊದಿಸುವುದು. ಆದರೆ ಈ ಕೆಲಸವೂ ಮೊದಲೇ ಆಗಿದ್ದಿತಲ್ಲವೆ? ವೀರನರಸಿಂಗ-ಯಾದವರಾಯನು ತುಲಾಭಾರ ತೂಗಿಸಿಕೊಂಡು ಅದರ ಚಿನ್ನದಿಂದ ವೇಂಗಡದ ಗುಡಿಯನ್ನು (ಎಂದರೆ, ವಿಮಾನವನ್ನು) ಬಂಗಾರವನ್ನಾಗಿಸಿದನೆಂದು ಶಾಸನವಿಲ್ಲವೆ?


ಈ ಮೂರೂ ಶಾಸನಗಳು ತೀರ ಸಂಗ್ರಹವಾಗಿರುವುದರಿಂದ, ವಿವರಗಳು ಏನೂ ಇರದಿರುವುದರಿಂದ, ವಿಷಯವು ಸ್ಪಷ್ಟವಾಗುವುದಿಲ್ಲ. ವೀರನರಸಿಂಗ-ಯಾದವರಾಯನ ಶಾಸನದಲ್ಲಿ ತುಲಾಭಾರದ ಬಂಗಾರವನ್ನು ಹೇಗೆ ಬಳಸಿದನೆಂದಾಗಲೀ, ಹೇಗೆ ಬಳಸಬೇಕೆಂದು ಅವನ ಆಶಯವಿದ್ದಿತೆಂದಾಗಲೀ ಹೇಳಿಲ್ಲ;

ವಿಮಾನವೆಂಬ ಮಾತು ಬಂದಿಲ್ಲ , ಕಡೆಗೆ ಗುಡಿಯ ಪ್ರಸ್ತಾಪವೂ ಇಲ್ಲ. ಅಲ್ಲಿರುವುದು ವೇಂಗಡಬೆಟ್ಟವೆಂದಷ್ಟೇ (**ಚಕ್ರೇ ವೇಂಕಟಭೂಧರಂ ಸುರಗಿರೇಸ್ತುಲ್ಯಂ ತುಲಾಕಾಂಚನೈಃ**). ಒಗಟನ್ನು ನಾವು ಬಿಡಿಸಬೇಕಾಗುತ್ತದೆ. 'ಸುರಗಿರಿ'ಯೆಂದರೆ ಪುರಾಣಪ್ರಸಿದ್ಧವಾದ ಬಂಗಾರದ ಬೆಟ್ಟ, ಮೇರು. ಇಲ್ಲಿ ಬಂಗಾರದ ವಿಮಾನದ ಧ್ವನಿಯನ್ನು ಕಾಣುವುದು ಸಾಧ್ಯ, ಸಹಜ. ಗುಡಿಯ ವಿಮಾನವು ಮೇರುಪರ್ವತದ ಪ್ರತೀಕವೆಂದೇ ಆಗಮಗಳ ಎಣಿಕೆ. 'ವೇಂಕಟಭೂಧರ'ವೆಂದರೆ ವೇಂಗಡಬೆಟ್ಟವೂ ಆಗಬಹುದು, ಬೆಟ್ಟದ ಮೇಲಿನ ಗುಡಿಯೂ ಆಗಬಹುದು, ಗುಡಿಯ ಮೇಲೆ ಬೆಟ್ಟದ ಶಿಖರದಂತಿರುವ ವಿಮಾನವೂ ಆಗಬಹುದು. ಮಂಗಿದೇವನೇ ಮೊಟ್ಟಮೊದಲ ಬಾರಿಗೆ ಬಂಗಾರದ ವಿಮಾನವನ್ನೂ ಕಲಶವನ್ನೂ ಮೂಡಿಸಿದನೆನ್ನುವುದಕ್ಕಿಂತ ಮೊದಲೇ ಇದ್ದ ವಿಮಾನವನ್ನೂ ಕಲಶವನ್ನೂ ಮತ್ತೆ ಮೆರೆಯಿಸಿದನೆನ್ನುವುದು ಸರಿಯಾಗುತ್ತದೆ. ಸುಮಾರು ನೂರು ವರ್ಷಗಳ ಹಿಂದೆ ಸಿದ್ಧವಾದ ಬಂಗಾರದ ಕಟ್ಟಡ (ವಿಮಾನದ ಹೊದಿಕೆಯಾಗಿ, ತಾಮ್ರದ ತಗಡುಗಳನ್ನು ಅಳವಡಿಸಿ ಬಂಗಾರದ ಮೆರುಗು ಹಾಕಿಸಿದ್ದುದು) ಮಂಗಿದೇವನ ಕಾಲಕ್ಕೆ ಮಾಸಿಹೋಗಿದ್ದಿರಬೇಕು, ತಗಡುಗಳು ಸಡಿಲವಾಗಿಹೋಗಿದ್ದಿರಬೇಕು; ಕಲಶವೂ ಜಾರಿಹೋಗಿದ್ದಿರಬೇಕು. ಮಂಗಿದೇವನು ಇವೆಲ್ಲವನ್ನೂ ಸರಿಪಡಿಸಿ, ಬಂಗಾರದ ಮುಲಾಮನ್ನು ಮತ್ತೆ ಮೂಡಿಸಿದನೆಂದು ಊಹಿಸಿಕೊಳ್ಳಬೇಕು. ಮಂಗಿದೇವನು 'ಸುವರ್ಣಾದಿ ಶಿಖರ'ವನ್ನು 'ಎತ್ತಿಸಿದ'ನೆಂದು ಹೇಳಿರುವುದು ಈ ಅರ್ಥದಲ್ಲಿಯೇ ಇರಬೇಕು.

ಮಂಗಿದೇವನ ಗೆಳೆಯನಾಗಿದ್ದ ವೀರಕುಮಾರ ಕಂಪನ-ಒಡೆಯನ ಬಳಿ 'ಪೇರ್ಗಡೆ'(ಎಂದರೆ, ಹೆಗ್ಗಡೆ)ಯಾಗಿದ್ದವನೊಬ್ಬನು ಮಂಗಿದೇವನಂತೆಯೇ ಬೆಟ್ಟದ ಗುಡಿಗೆ ಒಂದು ಸೇವೆಯನ್ನು ಸಲ್ಲಿಸಿದ ಉಲ್ಲೇಖವಿದೆ. ಪಡಿಕ್ಕಾವಲಿಗೋಪುರದ ಕೆಳಗಡೆ ಗೋಡೆಯ ಮುಂಭಾಗದಲ್ಲಿರುವ ಈ ಶಾಸನವು ಕ್ರಿಸ್ತಾಬ್ದ 1368ರದ್ದು. ದೇವರೆದುರು ಬೆಳಗುವ ನಂದಾವಿಳಕ್ಕು (ಎಂದರೆ, ತುಪ್ಪದ ದೀಪ) ಯಾವಾಗಲೂ ಇರುವಂತೆ ನೆರವಾಗಲು ಇಪ್ಪತ್ತೆಂಟು ಹಸುಗಳನ್ನೂ ಒಂದು ಹೋರಿಯನ್ನೂ ಈತನು ಗುಡಿಗೆ ದಾನ ಮಾಡಿದ್ದಾನೆ. ವೀರಕುಮಾರ ಕಂಪನ-ಒಡೆಯನ ಕಾಲದಲ್ಲಿ ಮುಸಲ್ಮಾನರ ದಾಳಿಗೆ ದಕ್ಷಿಣದ ಕ್ಷೇತ್ರಗಳೆಲ್ಲವೂ ಬೆದರಿದ್ದುವು. ಶ್ರೀವೈಷ್ಣವರ ಒಲುಮೆಯ ಗುಡಿಯಾದ ಶ್ರೀರಂಗದಲ್ಲಂತೂ ಈ ಭೀತಿ ಹೆಚ್ಚಾಗಿಯೇ ಇದ್ದಿತು; ಅದಕ್ಕೆ ಕಾರಣವೂ ಇದ್ದಿತು. ಆದುದರಿಂದ ಅಲ್ಲಿನ ಅರ್ಚಕರೂ ಆಚಾರ್ಯಪುರುಷರೂ ಶ್ರೀವೈಷ್ಣವಸಮುದಾಯದ ಮಹಾಜನರೂ ರಂಗನಾಥನ ಉತ್ಸವವಿಗ್ರಹವನ್ನು ಅಲ್ಲಿಂದ ವೇಂಗಡಬೆಟ್ಟಕ್ಕೆ ಸಾಗಿಸಿ, ಅಲ್ಲಿ ವೇಂಗಡದೊಡೆಯನ ಗುಡಿಯ ನೆರೆಯಲ್ಲಿಯೇ ಅದಕ್ಕೊಂದು ನೆಲೆಯನ್ನು ಏರ್ಪಡಿಸಿ ನಿತ್ಯಪೂಜೆಯನ್ನು ನಡೆಸುತ್ತಿದ್ದರು.

ಈ ವಿವರವು ಶ್ರೀರಂಗದ ಗುಡಿಯ ಕಥೆಯಾದ 'ಕೋಯಿಲ್-ಒಳಗು'ವಿನಲ್ಲಿ ಬರುತ್ತದೆ; ಶಾಸನಗಳಿಂದ ವಿವರವು ತಿಳಿಯುವುದಿಲ್ಲ , ಈ ಪ್ರಸಂಗದ ಸೂಚನೆಯೂ ಕಾಣಿಸಿಗುವುದಿಲ್ಲ. ಮುಸಲ್ಮಾನರ ದಾಳಿಯ ಆತಂಕ ತಪ್ಪಿದಮೇಲೆ ರಂಗನಾಥನ ಮೂರ್ತಿಯು ಶ್ರೀರಂಗಕ್ಕೆ ಹಿಂದಿರುಗಿತು. ಹಿಂದಿರುಗಿಸುವ ಕೆಲಸದಲ್ಲಿ ಆಸಕ್ತಿವಹಿಸಿ

ಆಗಮಾಡಿಸಿದವನು ಗೋಪಣನೆಂಬ ದಂಡನಾಯಕನೆಂಬ ಉಲ್ಲೇಖವೂ ಇದೆ. ವೇದಾಂತದೇಶಿಕರು, ಈ ಕೆಲಸವನ್ನು ಮಾಡಿದವನೆಂದು ಗೋಪಣನನ್ನು ಹೊಗಳಿರುವ ಒಂದು ಶ್ಲೋಕವೂ ಸಿಗುತ್ತದೆ. ರಂಗನಾಥನ ಉತ್ಸವಮೂರ್ತಿಯು ಬೆಟ್ಟವನ್ನು ಕ್ರಿಸ್ತಾಬ್ದ 1368ರಲ್ಲಿ ಬಿಟ್ಟಿತೆಂದೂ ಶ್ರೀರಂಗವನ್ನು 1371ರಲ್ಲಿ ಮುಟ್ಟಿತೆಂದೂ ಹೇಳುವುದಿದೆ. ರಂಗನಾಥಮೂರ್ತಿ ಬೆಟ್ಟದ ಮೇಲಿದ್ದುದರಿಂದ ಶ್ರೀವೈಷ್ಣವಸಮುದಾಯವೂ ಬಂದು ಅಲ್ಲಿ ಮೂಡಿಕೊಂಡಿತು. ಅರಸರೂ ಅಧಿಕಾರಿಗಳೂ ಶ್ರೀವೈಷ್ಣವಧರ್ಮದ ಮೇಲೆ ಅಭಿಮಾನವುಳ್ಳವರಾದುದರಿಂದ ಬೆಟ್ಟದ ಮೇಲಣ ಗುಡಿಯಲ್ಲಿ ಶ್ರೀವೈಷ್ಣವಸಂಪ್ರದಾಯಗಳ ಪ್ರಭಾವ ಒದಗಿಬಂದಿತು. ಗುಡಿಯ ಮತ್ತು ಅಲ್ಲಿನ ಪೂಜಾಪದ್ಧತಿಗಳ ಸ್ವರೂಪವೇ ಸುಮಾರಾಗಿ ಮಾರ್ಪಟ್ಟಿತು. ಈ ಮಾರ್ಪಾಡಿನಲ್ಲಿ ಸಾಳುವದೊರೆಗಳ ಪಾತ್ರ ಸಣ್ಣದೇನಲ್ಲ.



ರಂಗನಾಥಸ್ವಾಮಿ

ಮುಲ್ಲೈ-ತಿರುವೇಂಕಟಜೀಯರ್

ತಿರುಪತಿಯವರಾದ ಮುಲ್ಲೈ-ತಿರುವೇಂಕಟ-ಜೀಯರ್ (1375-1491) ಇಮ್ಮಡಿ ಹರಿಹರನ ಆಶ್ರಯವನ್ನು ಪಡೆದಿದ್ದ ಶ್ರೀವೈಷ್ಣವರು. ಬೆಟ್ಟದ ಮೇಲೆ ಅರಿಶಿಣಾಲಯಂ-ನಂದವನವೆಂಬ ಹೂದೋಟವನ್ನು ನೋಡಿಕೊಳ್ಳುತ್ತಿದ್ದರು; ಇವರು ಬೆಟ್ಟದ ಮೇಲೂ ಕೆಳತಿರುಪತಿಯಲ್ಲೂ ಪೆರಿಯ-ಜೀಯರ್ (ಜೀಯಂಗಾರ್) ಮಠವನ್ನು ಏರ್ಪಡಿಸಿದರು. ತಿರುಮಲೆಯ ಮೇಲೆ ಅವರಿಗಿದ್ದ ಆದರವನ್ನು ಅರಿತುಕೊಳ್ಳಬೇಕೆಂದರೆ ಅವರ ದಾನಧರ್ಮಗಳನ್ನು ನೋಡಬೇಕು. ಬೆಟ್ಟದ ಮೇಲಿನ ಗುಡಿಯ ಶ್ರೀಭಂಡಾರಕ್ಕೆ ಒಂದುನೂರು ಪಣಗಳನ್ನು ಸಲ್ಲಿಸಿ ಹರಿಹರರಾಯನ ಹೆಸರಿನಲ್ಲಿ ಮಾಶಿ-ತಿರುನಾಳ್ ಉತ್ಸವವನ್ನು ನಡೆಸಿ, ಅದಕ್ಕೆ ಬೇಕಾಗುವ ಅಮುದಪಡಿ, ಶಾತ್ತುಪ್ಪಡಿ ಮೊದಲಾದುವು ಶ್ರೀಭಂಡಾರದಿಂದ ಒದಗಬೇಕೆಂದು ಹೇಳುವ ಒಂದು ಶಿಲಾಶಾಸನ ಅವರದ್ದು ಬೆಟ್ಟದ ಗುಡಿಯಲ್ಲಿ ಒಳಪ್ರಾಕಾರದಲ್ಲಿರುವ ವರದರಾಜ-ಸನ್ನಿಧಿಯ ಉತ್ತರಗೋಡೆಯ ಮೇಲಿದೆ. ಮತ್ತೆ ಮಾರ್ಗಳಿಮಾಸದಲ್ಲಿ ಮಲೈಕ್ಕಿನಿಯ-ನಿನ್ರ-ಪೆರುಮಾಳ್ ಮತ್ತು ನಾಚ್ಚಿಮಾರರ (ಎಂದರೆ, ಉತ್ಸವಮೂರ್ತಿಗಳ) ಎದುರು 'ತಿರುವೋಲಕಂ' ಸಮರ್ಪಣೆಗಾಗಿ ಒಂದುಸಾವಿರ ಮತ್ತು ಇನ್ನೂರು ಪಣಗಳನ್ನು ಗುಡಿಯ ಶ್ರೀಭಂಡಾರಕ್ಕೆ ಸಲ್ಲಿಸಿದರು.

ಈ ಪೆರಿಯ-ಜೀಯರ್ ಮಠವೂ ಅದರ ಬೆಂಬಲದಿಂದ ನಡೆದುಬಂದ ದಾನಧರ್ಮಗಳೂ ಕೆಳತಿರುಪತಿಯ ಹೆಗ್ಗಳಿಕೆಯನ್ನು ರೂಢಿಸಲು ನೆರವಾದುವು. ತಿರುಮಲೆಗೂ ತಿರುಪತಿಗೂ ಅಷ್ಟಾಗಿ ಹೊಂದಾಣಿಕೆ ಇರದಿದ್ದುದು ಸಹಜವೇ. ತಿರುಮಲೆಯಲ್ಲಿ ಅರ್ಚಕರು ವೈಖಾನಸಸಂಪ್ರದಾಯದವರು; ತಿರುಪತಿಯಲ್ಲಿ ಪ್ರಬಲರಾಗುತ್ತಿದ್ದವರು ಪಾಂಚರಾತ್ರಪದ್ಧತಿಯವರು. ರಾಮಾನುಜರು ಆದರಿಸಿದ ಆಚಾರಗಳೂ ಉತ್ಸವಗಳೂ ಬೆಟ್ಟದ ಮೇಲೆ ಸುಲಭವಾಗಿ ಮೂಡಿಕೊಳ್ಳುವಂತಿರಲಿಲ್ಲ. ತಿರುಪತಿಯು ಪ್ರಬಲವಾಗಿ, ಅಲ್ಲಿನ ಶ್ರೀವೈಷ್ಣವಸಮುದಾಯ ಪ್ರಭಾವಶಾಲಿಯಾಗಬೇಕೆನ್ನುವ ತವಕ ತಿರುಪತಿಯ ಮಹಾಜನರಿಗಿದ್ದುದು ಆಶ್ಚರ್ಯವೇನಲ್ಲ.

ಮುಂದಿನ ಶಾಸನಗಳಲ್ಲಿ ತಿರುಪತಿಯ ಗೋವಿಂದ-ಪೆರುಮಾಳ್ ಹೆಚ್ಚುಹೆಚ್ಚಾಗಿ ಕಾಣಿಸಿಕೊಳ್ಳುತ್ತಾನೆ. ತಿರುಪತಿಯ ಶ್ರೀವೈಷ್ಣವರಲ್ಲಿ ಒಬ್ಬರಾದ ಪೆರುಮಾಳ್-ಕೊಲ್ಲಿಕಾವಲಿದಾಸರ್ ತಿರುಪತಿಯ ಗೋವಿಂದ-ಪ್ಪೆರುಮಾಳಿಗೆ (ಎಂದರೆ, ಗೋವಿಂದ ರಾಜಸ್ವಾಮಿಗೆ) ತನ್ನ ಹೆಸರಿನಲ್ಲಿ ದಿನವೂ ತಿರುಪ್ಪೋನಕವೊಂದನ್ನು ಸಲ್ಲಿಸಲು ತಿರುಮಲೆಯ ಶ್ರೀಭಂಡಾರಕ್ಕೆ ಒಂದುಸಾವಿರ ಪಣಗಳನ್ನು ಕೊಟ್ಟ ಶಾಸನವೊಂದಿದೆ; ಇದು ಕ್ರಿಸ್ತಾಬ್ದ 1382ರ ಮಾತು. ಈ ಪೆರುಮಾಳನ ಹಿರಿಯರೊಬ್ಬರು ಕೊಲ್ಲಿಕಾವಲಿ ದಾಸರೆಂದು ಹೆಸರಾಗಿ, ಮುಮ್ಮಡಿ ರಾಜರಾಜನ ಕಾಲದಲ್ಲಿ (1216-1248) ತಿರುಮಲೆಯ ಗುಡಿಯ ನಿರ್ವಾಹಕರಲ್ಲೊಬ್ಬರಾಗಿದ್ದರು. ಇವರು ಇತರ ಮೂವರು ನಿರ್ವಾಹಕರೊಂದಿಗೆ ಚೋಳರಾಜನಿಗೆ ಮನವಿಯೊಂದನ್ನು ಸಲ್ಲಿಸಿ ತಿರುಪತಿಯ

ಗುಡಿಯಲ್ಲಿದ್ದ ತಿರುಮಂಗೈ-ಆಳ್ವಾರರ ಸನ್ನಿಧಿಗೆ ಪೂಜೆ ನಡೆಸಲು ತಿರುಚಾನೂರಿನ ಪೂರ್ವದಲ್ಲಿ ಕೊತ್ತಕ್ಕಾಲ್ವಾಯ್ ಎಂಬ ಹಳ್ಳಿಯೊಂದನ್ನು ರಾಜನಿಂದ ಪಡೆದಿದ್ದರು. ಎಂದರೆ ತಿರುಪತಿಯ ಮೇಲಿನ ಆದರ ಪೆರುಮಾಳ್-ಕೊಲ್ಲಿಕಾವಲಿದಾಸರಿಗೆ ವಂಶಾನುಗತವಾಗಿದ್ದಿತು. ಈ ವಂಶದಲ್ಲಿ ಮುಂದೆ ಬಂದ ತಿರುಕ್ಕಲಿಕನ್ಯದಾಸರ್, ರಾಮಾನುಜಯ್ಯನ್, ಅಳಗಪ್ಪಿರಾನಾರ್ ಮೊದಲಾದವರು ತಿರುಪತಿಯನ್ನು ಮಹಾ ಕ್ಷೇತ್ರವನ್ನಾಗಿ ಮಾರ್ಪಡಿಸಲು ಶ್ರಮಿಸಿದರು. ತಿರುಕ್ಕಲಿಕನ್ಯದಾಸರು (ಇವರ ಹೆಸರು ವರದರಾಜನೆಂದು, ಪೆರಿಯ-ಪೆರುಮಾಳ್-ದಾಸರೆಂದೂ ಕರೆಯುತ್ತಿದ್ದರು), ಅವರ ತಮ್ಮ ಶಠಕೋಪದಾಸರು (ನರಸಿಂಹರಾಯ-ಮುದಲಿಯಾರರೆಂದು ಇವರ ಹೆಸರು) ಇಬ್ಬರೂ ಹಲವಾರು ದಾನಧರ್ಮಗಳನ್ನು ತಿರುಪತಿಯ ಗುಡಿಗೆ ಸಂಬಂಧಿಸಿದಂತೆ ನಡೆಸಿದ್ದಾರೆ. ಇದರ ವಿಚಾರ ಮುಂದೆ ಬರುತ್ತದೆ.


ಮಲ್ಲಣ-ಮಾಧವದಾಸ

ಮಂಗಿದೇವನ ಕೈಂಕರ್ಯವಾದಮೇಲೆ ಬೆಟ್ಟದ ಗುಡಿಯ ಬೆಳವಣಿಗೆಗೆ ನೆರವಾದವರಲ್ಲಿ ಮಲ್ಲಣ-ಮಾಧವದಾಸನೆಂಬ (ಮಲ್ಲಂಡೈಯರ್) ಮಂತ್ರಿಯು ಮುಖ್ಯನಾದವನು. ಇವನು ಹೇಮಲಂಬಿಸಂವತ್ಸರದ (ಶಕವರ್ಷ 1339) ಸಿಂಹಮಾಸದಲ್ಲಿ ಶುದ್ಧದ್ವಾದಶಿಯಂದು (ಎಂದರೆ, ಕ್ರಿಸ್ತಾಬ್ದ 1417ರ ಆಗಸ್ಟ್ ತಿಂಗಳ 25ನೆಯ ದಿನ) ತಿರುಮಲೆಯ ಮೇಲೆ 'ತಿರುಮಹಾಮಣಿಮಂಡಪ'ವನ್ನು ಕಲ್ಲಿನ ತಳಪಾಯ (ಕಲ್-ದಾರಂ), ಸೊಗಸಾದ ಗಾರೆಗಚ್ಚಿನ ನೆಲ (ತಿರುಮುತ್ತಿನಡಂದಲ್), ಕೆಳಗಿನಿಂದ ಮೇಲಿನವರೆಗೆ ಕೆತ್ತನೆಯ ಕೆಲಸ, ಇಳಿಜಾರುವ ಸೂರು (ಮೇಯಕ್ಕಲ್)—ಇವುಗಳನ್ನೆಲ್ಲ ಒಳಗೊಂಡಂತೆ ಕಟ್ಟಿಸಿಕೊಟ್ಟನು. ಇದನ್ನು ಹೇಳುವ ಶಾಸನವು ಬೆಟ್ಟದ ಗುಡಿಯ ಮೊದಲ ಪ್ರಾಕಾರದಲ್ಲಿ ಯಾಗಶಾಲೆಯ ಬಳಿಯಿದೆ. ತಿರುಮಹಾಮಣಿ-ಮಂಟಪವೆಂಬುದು ವೈಕುಂಠದಲ್ಲಿರುವ ಸಭಾಭವನವೆಂದು ಪುರಾಣಪ್ರಸಿದ್ಧಿ. ವೇಂಗಡವು ವೈಕುಂಠವೆಂಬ ನಂಬಿಕೆ ಅಗಲೇ ಜನರಲ್ಲಿ ಬೇರೂರಿದ್ದಿತು. ಹೋಬಳ-ಯಾದವರಾಯನು 'ವೇಂಗಡಬೆಟ್ಟವೇ ವೈಕುಂಠವೆಂದು ದೇವರ ವರದಹಸ್ತವೇ ತೋರಿಸುತ್ತಿದೆ' ಯೆಂದು ತನ್ನ ಶಾಸನದಲ್ಲಿ ಬಣ್ಣಿಸಿರುವುದನ್ನು ತಿಳಿದೆವಷ್ಟೆ? ಬೆಟ್ಟವು ಆದಿಶೇಷನೇ ಎನ್ನುವ ನಂಬಿಕೆ ಇದಕ್ಕೆ ಪೂರಕವಾಗಿದ್ದಿತು. ಸಾಳುವರ ಕಾಲಕ್ಕೆ ಹಿಂದೆಯೇ ಸಿದ್ಧವಾದ ಶಾಸನವೊಂದು ಬೆಟ್ಟದ ಕೆಳಗೆ ಅಲಿಪಿರಿ(ಅಡಿಪಡಿ)ಯಲ್ಲಿರುವ ಪೆರಿಯಾಳ್ವಾರರ ಗುಡಿಯಲ್ಲಿದೆ. ಇದರಲ್ಲಿ ಪೂವೈನಗರನಿವಾಸಿಯಾದ ಕಾಮವಿಲ್ಲಿ ಎಂಬಾತನು ತನ್ನ ತಾಯಿಯ ಹೆಸರಿನಲ್ಲಿ 'ಸರ್ಪಗಿರಿಯಪ್ಪ'ನಿಗೆ ಕೊಳವೊಂದನ್ನು ಕಟ್ಟಿಸಿದ ಉಲ್ಲೇಖವಿದೆ. ಬೆಟ್ಟವು ಆದಿಶೇಷ, ವೇಂಗಡವು ವೈಕುಂಠ ಎಂಬ ಕಲ್ಪನೆಯಿದ್ದಮೇಲೆ ತಿರುಮಹಾಮಣಿ ಮಂಟಪವಿರಬೇಡವೇ?

ದೇವರಸನ ಮಗನೂ ಗೋಪೀನಾಥಯ್ಯಗಳ ಶಿಷ್ಯನೂ ಆಗಿದ್ದ ಈ ಮಲ್ಲಣನು

ಇಮ್ಮಡಿ ಹರಿಹರನ ಕಾಲದಲ್ಲಿ ಹೊನ್ನಾವರದಲ್ಲಿದ್ದುಕೊಂಡು ಹೈವೆ ಎಂಬ ಕನ್ನಡ ರಾಜ್ಯವನ್ನಾಳುತ್ತಿದ್ದು, ಆಮೇಲೆ ಬಾರಕೂರು-ನಗರದಿಂದ ತುಳುನಾಡು, ಹೈವೆ, ಕೊಂಕಣಸೀಮೆಗಳನ್ನೆಲ್ಲ ನೋಡಿಕೊಳ್ಳುತ್ತಿದ್ದು, ಇಮ್ಮಡಿ ದೇವರಾಯನ ಕಾಲದಲ್ಲಿ ಮಹಾಪ್ರಧಾನ ಮಲ್ಲಣ-ಒಡೆಯನಾದನು. ಅವನು ಈಗ ಒಡೆಯನಾಗಿದ್ದುದು ಚಂದ್ರಗಿರಿರಾಜ್ಯಕ್ಕೆ. ಈ ಹೊಸ ಕಾರುಬಾರನ್ನು ಕೈಕೊಂಡಾಗ ವೇಂಗಡದ ದೇವರಿಗೆ ನೈವೇದ್ಯ, ನಿತ್ಯದೀಪಗಳ ವ್ಯವಸ್ಥೆ ಮಾಡಿದನು. ಇದನ್ನು ತಿಳಿಸುವ ಶಾಸನವು ಅವನನ್ನು 'ಅಮಾತ್ಯಶೇಖರ'ನೆಂದು ಕರೆದಿದೆ—

ಶ್ರೀಮದ್ವೇಂಕಟನಾಥಾಯ ಮಲ್ಲಣಾಮಾತ್ಯಶೇಖರಃ
ನೈವೇದ್ಯಂ ದೀಪದಾನಾನ (ಪ್ಯ) ನಲ್ಪೀಯಾನಕಲ್ಪಯತ್



ಗೋಪುರ—ಒಂದು ನೋಟ

ಇದು ಗುಡಿಯಲ್ಲಿ ಬಂಗಾರುಬಾಗಿಲಿನ ದಕ್ಷಿಣಕ್ಕೆ ಗೋಡೆಯ ಮೇಲೆ ಮೂಡಿ ಕೊಂಡಿರುವ ಶಿಲಾಶಾಸನ. ದೇವರಿಗೆಂದೇ ಬಿಟ್ಟಿದ್ದ ಪಾಡಿ ಎಂಬ ಹಳ್ಳಿಯಲ್ಲಿ ಕೆಲವು ನೀರಾವರಿ ಯೋಜನೆಗಳನ್ನು ಕೈಗೊಂಡುದನ್ನು ತಿಳಿಸುವ ಶಾಸನವೂ ಒಂದಿದೆ. ದೇವರಿಗೆ ದಿನವೂ ತನ್ನ ಹೆಸರಿನಲ್ಲಿ ಒಪ್ಪಿಸಬೇಕಾದ ತಿರುಪ್ಪೋನಕ, ಎರಡು ಮೊರಗಳ (ಮರಕ್ಕಳ್) ಅಕ್ಕಿ, ಒಂದು 'ಉಳಕ್ಕು' ತುಪ್ಪ, ಒಂದು ಹಿಡಿ ಮೆಣಸು, ಉಪ್ಪು, ಮೊಸರು, ಕಾಯಿಪಲ್ಲೆ ಮೊದಲಾದ ವಿವರಗಳನ್ನೂ ಈ ಶಾಸನ ಪಟ್ಟಿಮಾಡಿದೆ.

ನಿತ್ಯದೀಪಕ್ಕೆ ಬೇಕಾಗುವ ತುಪ್ಪವನ್ನು ಒದಗಿಸಲು ಮಲ್ಲಣನು ಎಂಬತ್ತೆರಡು ಹಸುಗಳನ್ನು ಗುಡಿಗೆ ದಾನಮಾಡಿದನು. ಪ್ರಭಾವಶಾಲಿಯಾದ ಅಧಿಕಾರಿಯಾಗಿದ್ದುದರಿಂದ ದೇವಮಾನ್ಯವೆಂದು ಬಿಟ್ಟ ಗ್ರಾಮಗಳಲ್ಲಿ ಭೂಮಿಗೆ ನೀರು ಹಾಯಿಸುವುದು, ಕೆಟ್ಟು ಹೋಗಿದ್ದ ನಾಲೆಗಳನ್ನು ಸರಿಪಡಿಸುವುದು, ಹೊಸದಾಗಿ ಕಾಲುವೆಗಳನ್ನು ತೋಡಿ ಸುವುದು ಮುಂತಾದ ಕೆಲಸಗಳನ್ನು ಮಾಡುವುದು ಅವನಿಗೆ ಸುಲಭವಾಯಿತು. ಇವನು ಕ್ರಿಸ್ತಾಬ್ದ 1444ರವರೆಗೂ ಚಂದ್ರಗಿರಿರಾಜ್ಯದಲ್ಲಿಯೇ ವಾಸಮಾಡುತ್ತಿದ್ದಂತೆ ತಿಳಿದು ಬರುತ್ತದೆ.

ಇಮ್ಮಡಿ ದೇವರಾಯ

ಇಮ್ಮಡಿ ದೇವರಾಯನೂ (ಆಳ್ವಿಕೆಯ ಕಾಲ ಕ್ರಿಸ್ತಾಬ್ದ 1419ರಿಂದ 1445ರ ವರೆಗೆ) ಬೆಟ್ಟದ ದೇವರ ವಿಚಾರದಲ್ಲಿ ತುಂಬ ಆದರವನ್ನು ತಳೆದಿದ್ದವನು. ಕ್ರಿಸ್ತಾಬ್ದ 1429ರ ಡಿಸೆಂಬರ್ ಐದನೆಯ ದಿನದಂದು ಈ ಅರಸನು ಬೆಟ್ಟವನ್ನೇರಿ ಬಂದು, ದೇವರ ದರ್ಶನ ಮಾಡಿ, ಎರಡು ಸಾವಿರಕ್ಕೂ ಮೀರಿ ಹೊನ್ನುಗಳನ್ನು ಹರಿವಾಣ ಗಳಲ್ಲಿಟ್ಟು ದೇವರಿಗೆ ಒಪ್ಪಿಸಿದನು. ಈ ಸಂದರ್ಭದಲ್ಲಿ ಅವನು ಬರೆಯಿಸಿದ ಕನ್ನಡ ಭಾಷೆಯ ತೆಲುಗುಲಿಪಿಯ ಶಾಸನವು ಗುಡಿಯಲ್ಲಿ ಬಂಗಾರುಬಾಗಿಲ ಮೇಲೆ ಮೂಡಿನಿಂತಿದೆ. "ಶ್ರೀಮತು ತಿರುಮಲೆ ದೇವರಿಗೆ ಶ್ರೀಮನ್ ಮಹಾರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪ ದೇವರಾಯ-ಮಹಾರಾಯರು ಪೊಡವಟ್ಟು ಕೊಟ್ಟ ಧರ್ಮಶಾಸನ" ಎಂಬ ಒಕ್ಕಣೆ ಇಲ್ಲಿನದು. ಗುಡಿಗಾಗಿ ಮೂರು ಹಳ್ಳಿಗಳನ್ನು ಸರ್ವಮಾನ್ಯವಾಗಿ ಬಿಟ್ಟುದನ್ನೂ, ಆಶ್ವಯುಜಮಾಸದಲ್ಲಿ "ಪುನರ್ವಸೂನಕ್ಷತ್ರ ಆದಿಯಾಗಿ ಸ್ವಾತಿನಕ್ಷತ್ರ ತೀರ್ಥವಾಗಿ" (ಎಂದರೆ, ಸ್ವಾತೀನಕ್ಷತ್ರವಿರುವ ದಿನ ತೀರ್ಥವರಿ ಎಂಬ ವಿಧಿಯನ್ನು ನಡೆಯಿಸಿ) ಒಂದು ಉತ್ಸವವು (ತಿರುನಾಳ್) ನಡೆಯಬೇಕೆಂಬುದನ್ನೂ ಈ ಶಾಸನ ತಿಳಿಸುತ್ತದೆ.

ಇದಾದ ಸುಮಾರು ಹತ್ತುವರ್ಷಗಳಲ್ಲಿ ತಿರುಪತಿಯ ಶ್ರೀವೈಷ್ಣವರಲ್ಲೊಬ್ಬರಾದ ಮುದಲಿಯಾರ್ ತಿರುಕ್ಕಲಿಕನ್ಯದಾಸರ್-ಅಳಗಪ್ಪಿರಾನಾರ್ ಎಂಬುವರು ಉಡೈಯಾರ್-ದೇವಣ-ಉಡೈಯಾರಿಗೆ (ಎಂದರೆ, ದೇವರಾಯ-ಮಹಾರಾಯನಿಗೆ) ಮನವಿಯೊಂದನ್ನು ಸಲ್ಲಿಸಿ ದೇವರೆದುರು ವೇದಪಾರಾಯಣ ನಡೆಯುವ ವ್ಯವಸ್ಥೆ ಮಾಡಿದರು. "ತಿರು ವೇಂಗಡದೊಡೆಯನಿಗೆ ಸಕಲವಾದ ವೈಭವಗಳಿದ್ದರೂ" (**திருவேங்கடம்உடை ஆனுக்கு சகலமான் வைபோகங்களும் உண்டா[யிரு]க்க**) ವೇದಪಾರಾಯಣವೊಂದು ತಪ್ಪಿಹೋಗಿರುವುದರಿಂದ ದೇವರಾಯನು ಅದನ್ನು ಮತ್ತೆ ಬಳಕೆಗೆ ತರಲು ನೆರವಾಗ ಬೇಕೆಂದು ಕೋರಿ, ಈ ಮುದಲಿಯಾರೇ ಬೇಕಾದ ವ್ಯವಸ್ಥೆಯನ್ನು ಮಾಡುತ್ತಾರೆ. ವೈಕುಂದ-ವಲ-ನಾಡಿಗೆ ಸೇರಿದ್ದ ಕೊಟ್ಟಾಲಸ್ಥಳದ ಸಿದ್ದಕ್ಕುಟ್ಟೈ (ಶ್ರೀನಿವಾಸಪುರಗ್ರಾಮ) ಎಂಬ ಅಗ್ರಹಾರದಲ್ಲಿ ನೆಲೆಸಿದ್ದ ಇಪ್ಪತ್ತುನಾಲ್ಕು ಮಂದಿ ಮಹಾಜನರಿಗೆ ಕೊಟ್ಟ

ದಾನಶಾಸನದಲ್ಲಿ, ಅವರು ತಿರುಕ್ಕುಡವೂರು-ನಾಡಿಗೆ ಸೇರಿದಂತಿದ್ದ ವೇಂಗಡದ ಗುಡಿಯಲ್ಲಿ ದೇವರೆದುರು ದಿನವೂ ತಮ್ಮಲ್ಲಿ ಇಬ್ಬರನ್ನು ಕಳುಹಿಸಿ ವೇದಪಾರಾಯಣವನ್ನು ಮಾಡತಕ್ಕದ್ದೆಂಬ ಕಟ್ಟಳೆಯಿದೆ. ತಿರುಕ್ಕುಡವೂರು-ನಾಡು, ವೈಕುಂದ-ವಲ-ನಾಡು ಎರಡೂ ಪ್ರದೇಶಗಳಿಗೆ ಸೇರಿದ ದೇವದಾನ (ತಿರುವಿಡೈಯಾಟ್ಟಂ) ಗ್ರಾಮಗಳ ಜನರು ಬೆಟ್ಟದ ಮೇಲೆ ಗುಡಿಯೆದುರು ಸ್ವಾಮಿಪುಷ್ಕರಿಣಿ ಎಂಬ ಕೊಳದ ದಂಡೆಯ ಮೇಲೆ ಉತ್ತಾನದ್ವಾದಶಿಯಂದು (ಕ್ರಿಸ್ತಾಬ್ದ 1433ರ ಅಕ್ಟೋಬರ್ 25ರಂದು) ಮಾಡಿಕೊಂಡ ಒಪ್ಪಂದವನ್ನೂ ಶಾಸನ ವಿವರಿಸುತ್ತದೆ.

ಇಮ್ಮಡಿ ದೇವರಾಯನ ಕಾಲದಲ್ಲೇ ನಡೆದ ಇನ್ನೊಂದು ದಾನ ಮುಖ್ಯವಾದುದು. ಕ್ರಿಸ್ತಾಬ್ದ 1430ರ ಜುಲೈ ಒಂದರಂದು ವೇಂಗಡಬೆಟ್ಟದ ದೇವರಿಗೆ ರತ್ನಗಳನ್ನು ಮೂಡಿಸಿದ ಬಂಗಾರದ 'ಪಟ್ಟ'(—ಹಣೆಯ ಮೇಲೆ ಧರಿಸುವ ಒಡವೆ—)ವೊಂದನ್ನು 'ಶ್ರೀಗಿರಿ-ಯಂತೇಶ್ವರ'ನು ಸಮರ್ಪಿಸಿದುದನ್ನು ಬಂಗಾರಬಾಗಿಲಿನ ಉತ್ತರಭಾಗದಲ್ಲಿ ಕೊಪ್ಪರದ (ಎಂದರೆ, ಹುಂಡಿಯ) ಎದುರುಗೋಡೆಯ ಮೇಲಿರುವ ಶಾಸನ ತಿಳಿಸುತ್ತದೆ. ಈ ದಾನಿಯು ಯಾರೆಂಬುದರ ವಿಚಾರವಾಗಿ ಸ್ವಲ್ಪ ಗೊಂದಲವಿದೆ. ಈ ಶಾಸನವು ಅವನನ್ನು "ವಿಸ್ಸಣ-ದೇವರಾಯ-ತನಯ"ನೆಂದು ನಿರ್ದೇಶಿಸುತ್ತದೆ; ಎಂದರೆ ಇಮ್ಮಡಿ ದೇವರಾಯನ ಮಗ. ಆದರೆ ಇತರ ಆಕರಗಳಿಂದ ಅವನು ಇಮ್ಮಡಿ ದೇವರಾಯನ ತಮ್ಮನೆಂದೂ, ಅವನ ಇನ್ನೊಂದು ಹೆಸರು ಪ್ರತಾಪದೇವರಾಯನೆಂದೂ, ಉತ್ತರ-ಆರ್‌ಕಾಡು ಜಿಲ್ಲೆಯಲ್ಲಿ ಮರಕತನಗರಪ್ರಾಂತದಲ್ಲಿ ಆಳುತ್ತಿದ್ದನೆಂದೂ, 'ಶ್ರೀಗಿರಿ-ಭೂಪಾಲ'(ಶ್ರೀಗಿರೀಶ್ವರ)ನೆಂದು ಪ್ರಸಿದ್ಧನಾಗಿದ್ದನೆಂದೂ ತಿಳಿದುಬರುತ್ತದೆ. ನಿಖರವಾಗಿ ಏನನ್ನು ಹೇಳುವುದೂ ಕಷ್ಟ. ದೇವರಾಯನ ಮಗನೆಂಬ ಅಭಿಪ್ರಾಯವೇ ಸರಿಯಾದುದೆಂದೂ, ಶ್ರೀಗಿರೀಶ್ವರನು ದೇವರಾಯನು ತೀರಿಕೊಳ್ಳುವುದಕ್ಕೆ ಮೊದಲೇ ತೀರಿಕೊಂಡುದರಿಂದ ಶ್ರೀಗಿರಿಯ ಮಗ (ದೇವರಾಯನ ಮೊಮ್ಮಗ) ಮಲ್ಲಿಕಾರ್ಜುನನು ದೇವರಾಯನಾದ ಮೇಲೆ ಪಟ್ಟಕ್ಕೆ ಬಂದನೆಂದೂ ಹೇಳುವುದಿದೆ.

ಇದು ಹೇಗಾದರೂ ಇರಲಿ. ಬೆಟ್ಟದ ದೇವರ ಆಭರಣಗಳಲ್ಲಿ ಮುಖ್ಯವಾದ 'ಪಟ್ಟ'ವನ್ನು ಮಾಡಿಸಿದುದು ಪ್ರಧಾನವಾದ ಸೇವೆ—

ಪಟ್ಟಂ ನೂತ್ನಸುವರ್ಣರತ್ನರುಚಿರಂ ವೇಂಕಟಾದ್ರಿಪ್ರಭೋಃ ಪ್ರಾದಾತ್

ಎನ್ನುತ್ತದೆ ಶಾಸನ. ಈ ಪಟ್ಟವು ನೂತನವಾದುದೆಂದು ಇಲ್ಲಿನ ಒಕ್ಕಣೆ. ಎಂದರೆ ಹಳೆಯ ಪಟ್ಟವು ಶಿಥಿಲವಾದುದರಿಂದ ಶ್ರೀಗಿರಿಯು ಹೊಸದಾಗಿ ಇದನ್ನು ಮಾಡಿಸಿ ಕೊಟ್ಟನೆಂದು ಅರ್ಥ. ಚೋಳವಂಶದ ಅರಸಿ ಪರಾತಂಕದೇವಿ-ಅಮ್ಮನು ತಿರುವೇಂಗಡ ದೇವರಿಗೆ ಸುಮಾರು ನಾನ್ನೂರೈವತ್ತು ವರ್ಷಗಳ ಹಿಂದೆ ಮಾಡಿಸಿಕೊಟ್ಟ 'ಪಟ್ಟ'ದ ವಿಚಾರ ಹಿಂದೆಯೇ ಬಂದಿದೆ. ದೇವರಿಗೆ ಆವರೆಗೆ ಬಂಗಾರದ 'ಪಟ್ಟ' ಮತ್ತು ಬಂಗಾರದ ವರದಹಸ್ತ-ಕವಚ—ಇವೆರಡೇ ಆಭರಣಗಳು.

ಆ ಸುಮಾರಿಗೆ ಬೆಟ್ಟದ ಮೇಲೆ ಪಾಪನಾಶತೀರ್ಥದಲ್ಲಿ ನಂದವನವನ್ನು

ನೋಡಿಕೊಳ್ಳುತ್ತ, 'ಪಾಪನಾಶಾಶ್ರಮ'ದಲ್ಲಿ ವಾಸಮಾಡುತ್ತಿದ್ದ ರಾಮದಾಸನೆಂಬುವನು ಗುಡಿಯ ಶ್ರೀಭಂಡಾರಕ್ಕೆ ಒಂದುಸಾವಿರ ಪಣಗಳನ್ನು ಸಲ್ಲಿಸಿ ವೇಂಗಡದೊಡೆಯನಿಗೆ ದಿನವೂ ತಿರುಪ್ಪೋನಕವೊಂದನ್ನು ಒಪ್ಪಿಸುವ ವ್ಯವಸ್ಥೆಮಾಡಿದನೆನ್ನುವ ಶಾಸನಗಳು ಗುಡಿಯ ಮೊದಲ ಪ್ರಾಕಾರದಲ್ಲಿವೆ. ಸ್ಥಾನತ್ತಾರರು ಅವನಿಗೆ ಬರೆಯಿಸಿಕೊಟ್ಟ ಶಾಸನ ತಮಿಳಿನಲ್ಲೂ, ಅವನು ತಾನೇ ಬರೆಯಿಸಿದ ಶಾಸನ ಸಂಸ್ಕೃತದಲ್ಲೂ ಇವೆ. ಕ್ರಿಸ್ತಾಬ್ದ 1451ರ ಸುಮಾರಿಗೆ ಸಿದ್ಧವಾದ ಈ ಶಾಸನಗಳಲ್ಲಿ ಬರುವ ರಾಮದಾಸರು ಯಾರೆಂಬುದು ಸ್ಪಷ್ಟವಾಗುವುದಿಲ್ಲ. ಮುಂದೆ ಗುಡಿಯ ವಿಚಾರಣಕರ್ತರಾಗಿ ಕಾಣಿಸಿ ಕೊಂಡ ಹಾಥೀರಾಮಜೀ-ಮಠ(ಅಥವಾ ಮಹಂತರ ಮಠ)ದವರ ಮೂಲಪುರುಷನು ಈ ರಾಮದಾಸನೆಂದು ಒಂದು ಊಹೆಯಿದೆ.

ಪಾಪನಾಶತೀರ್ಥವು ಗುಡಿಯಿಂದ ಮೂರು ಮೈಲುಗಳಷ್ಟು ದೂರವಿರುವ ಜಲಪಾತ ಮತ್ತು ಕೊಳ. ರಾಮಾನುಜರ ಸೋದರಮಾನವಾದ ತಿರುಮಲೆ ನಂಬಿಯು ದೇವರ ತಿರುಮಂಜನಕ್ಕೆ ದಿನವೂ ನೀರನ್ನು ಹೊತ್ತು ತರುತ್ತಿದ್ದುದು ಇಲ್ಲಿಂದಲೇ ಎಂದು ಪ್ರತೀತಿ. ಆದರೆ ಈ ರಾಮದಾಸರ ಕಾಲದವರೆಗೆ ಪಾಪನಾಶತೀರ್ಥವಾಗಲೀ ಅದರ ಬಳಿಯಿದ್ದ ಆಶ್ರಮವಾಗಲೀ ನಮ್ಮ ಗಮನಕ್ಕೆ ಬರುವುದಿಲ್ಲ. ಬೆಟ್ಟದ ಮೇಲೆ ಭಕ್ತರಿಗೆ ಪ್ರಿಯವೆನಿಸಿದ, ಪವಿತ್ರವೆನಿಸಿದ ತಾಣ ಒಂದೇ, ಗುಡಿ. ಈಗಲೂ ಬಹುಮಟ್ಟಿಗೆ ಹೀಗೆಯೇ ಇದೆಯೆನ್ನಿ. ಆದರೆ ಮಹಂತರ ಅಧಿಕಾರ ಬೇರೂರಿಕೊಂಡಂದಿನಿಂದ ಬೆಟ್ಟದ ಮೇಲೆ ಪಾಪನಾಶ (ಪಾಪವಿನಾಶ), ಆಕಾಶಗಂಗೆ, ತುಂಬುರುತೀರ್ಥ, ಅಂತರಗಂಗೆ ಮೊದಲಾದ ಮೂವತ್ತು ಕ್ಷೇತ್ರಗಳನ್ನು ಜನರೆದುರು ಕಾಣಿಸತೊಡಗಿದರು. ಭಕ್ತರನ್ನು ಆಕರ್ಷಿಸಿ ಅವರ ಕೊಡುಗೆಗಳನ್ನು ಸೆಳೆದುಕೊಳ್ಳುವ ಅಗತ್ಯವೂ ಉತ್ಸಾಹವೂ ಮಹಂತರಿಗೆ ಇದ್ದಿತಷ್ಟೆ. ಗುಡಿಯ ಎದುರಿಗಿದ್ದ ಸ್ವಾಮಿಪುಷ್ಕರಿಣಿಯ ಉಲ್ಲೇಖ ಬರುವುದೇ ಈ ಸಮಯಕ್ಕೆ ಮೊಟ್ಟಮೊದಲಾಗಿ; ದೇವರಾಯ-ಮಹಾರಾಯನ ಕಾಲದಲ್ಲಿ ಗುಡಿಯಲ್ಲಿನ ವೇದಪಾರಾಯಣ ವ್ಯವಸ್ಥೆ ನಡೆದಾಗ. ಅದಕ್ಕೆ ಮೊದಲು ಸ್ವಾಮಿಪುಷ್ಕರಿಣಿಯ ಪ್ರಸ್ತಾಪ ಎಲ್ಲಿಯೂ ಬರುವುದಿಲ್ಲ; ಬರಿಯ ಒಂದು ಕೆರೆಯಂತಿದ್ದುದು ಬರುಬರುತ್ತ 'ತೀರ್ಥ'ವೆನಿಸಿತು.

ಸಾಳುವ-ನರಸಿಂಹ

ಇಮ್ಮಡಿ ದೇವರಾಯ-ಮಹಾರಾಯನು ತೀರಿಕೊಂಡು ಅವನ ಮೊಮ್ಮಗ (?) ಮಲ್ಲಿಕಾರ್ಜುನನು ಪಟ್ಟವೇರಿದ ಮೇಲೆ ವಿಜಯನಗರದ ಸಂಗಮವಂಶದ ಭಾಗ್ಯ ಇಳಿಮುಖವಾಯಿತು. ಅರಸನಿಗಿಂತ ಅಮಾತ್ಯರೇ ಪ್ರಬಲರಾದರು. ಈ ಸಂದರ್ಭದಲ್ಲಿ ಮೇಲೆಬಂದವನು ಸಾಳುವ-ನರಸಿಂಹ; ಮಂಗಿದೇವ-ಮಹಾರಾಜನ ಮೊಮ್ಮಗನಾಗಿದ್ದ ಮುಮ್ಮಡಿ ಗುಂಡಯ್ಯನ ಮಗ. ಈ ಮನೆತನದವರು ಮೊದಲು ಕಲ್ಯಾಣಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದವರು, ನರಸಿಂಹನ ಕಾಲದಲ್ಲಿ ಚಂದ್ರಗಿರಿಗೆ

ಬದಲಾಯಿಸಿದರು. ಈಗಿನ ದಕ್ಷಿಣ ಮತ್ತು ಉತ್ತರ-ಆರ್‌ಕಾಡು ಜಿಲ್ಲೆಗಳ ಒಡೆತನ ನರಸಿಂಹನ ಪಾಲಿಗೆ ಬಂದಿದ್ದಿತು. ವಿಜಯನಗರದ ಸಂಗಮವಂಶದ ಮಲ್ಲಿಕಾರ್ಜುನನು ಅರಸನಾದಾಗ ಸಾಳುವ-ನರಸಿಂಹನು 'ಮಹಾಮಂಡಲೇಶ್ವರ'ನಾಗಿದ್ದವನು 'ಮಹಾಪ್ರಧಾನಿ'ಯಾದ.

ಇವನು ವಿಜಯನಗರದ ಅರಸನಾಗಿದ್ದ ಮಲ್ಲಿಕಾರ್ಜುನನನ್ನು ಮೂಲೆಗೊತ್ತಿ ತಾನೇ ಅರಸನಾದನೆಂದೂ ವಿಜಯನಗರದ ಸಾಳುವವಂಶದ ಆಳ್ವಿಕೆ ಅವನಿಂದಲೇ ಮೊದಲಾಯಿತೆಂದೂ ಒಂದು ಅಭಿಪ್ರಾಯ ಬೇರೂರಿದೆ. ಶಾಸನಗಳಲ್ಲಿ ಬರುವ 'ಸಾಳುವ-ನರಸಿಂಗದೇವ-ಮಹಾರಾಜ', 'ಸಾಳುವ-ನರಸಿಂಹರಾಜ-ಒಡೆಯರು', 'ಸಾರ್ವಭೌಮ' ಮೊದಲಾದ ಒಕ್ಕಣೆಯನ್ನು ನೋಡಿದರೆ ಇಂಥ ಅಭಿಪ್ರಾಯ ಬರುವುದು ಸಾಧ್ಯ. ಆದರೆ ದಿಟವಾಗಿ ಅವನು ತನ್ನ ಬದುಕಿನುದ್ದಕ್ಕೂ ಅರಸನ ಪ್ರಧಾನಿಯಾಗಿದ್ದವನಷ್ಟೆ. 'ಮಹಾರಾಜ', 'ಒಡೆಯರು', 'ಸಾರ್ವಭೌಮ' ಮೊದಲಾದ



ಮಲಯಪ್ಪಸ್ವಾಮಿ

ವಿಶೇಷಣಗಳು ಉಪಚಾರದ ಮಾತುಗಳಷ್ಟೆ; ಶಾಸನಗಳ ಒಕ್ಕಣೆ ಹೀಗಿರುವುದು ಸಂಪ್ರದಾಯ. ಆದರೆ ಮಲ್ಲಿಕಾರ್ಜುನನ ಆಡಳಿತದ ಅವಧಿಯಲ್ಲಿ ತುಂಬ ಪ್ರಬಲನೂ ಪ್ರಭಾವಶಾಲಿಯೂ ಆಗಿದ್ದವನು ಸಾಳುವ-ನರಸಿಂಹನೇ. ಅವನ ಮಗ ಇಮ್ಮಡಿ ನರಸಿಂಹನು (ಕುಮಾರ-ನರಸಯ್ಯ) ವಿಜಯನಗರದ ಸಂಗಮಮನೆತನವನ್ನು ಕೊನೆಗಾಣಿಸಿ ತಾನೇ ಸಿಂಹಾಸವನ್ನೇರಿದನು; ಇದಕ್ಕೆ ಸಾಳುವ-ನರಸಿಂಹನ ಪ್ರಾಬಲ್ಯ ನೆರವಾಯಿತು.

ಸಾಳುವ-ನರಸಿಂಹನ ಕಾಲ ಕ್ರಿಸ್ತಾಬ್ದ 1445 ರಿಂದ 1504 ರವರೆಗೆ ಎನ್ನಬಹುದು. ಮಹಾಮಂಡಲೇಶ್ವರನಾಗಿ, ಪ್ರಧಾನಿಯಾಗಿ, ದಂಡನಾಯಕನಾಗಿ ಚಂದ್ರಗಿರಿಯಲ್ಲೇ ಇರುತ್ತಿದ್ದನಾಗಿ, ಅವನಿಗೂ ನೆರೆಯ ವೇಂಗಡಬೆಟ್ಟದ ಗುಡಿಗೂ ನಿಕಟವಾದ ನಂಟು ಬೆಳೆಯಿತು. ಇವನ ಮುತ್ತಜ್ಜ ಮಂಗಿದೇವನು ಆ ದೇವರಿಗೆ ನಡೆಸಿದ ಕೈಂಕರ್ಯವನ್ನು ಯಾರೂ ಮರೆತಿರಲಿಲ್ಲ, ಮರೆಯುವಂತೆಯೂ ಇರಲಿಲ್ಲ. ಸಾಳುವ-ನರಸಿಂಹನಿಗೆ ಇದು ಸ್ಫೂರ್ತಿಯನ್ನು ಒದಗಿಸಿರಬೇಕು. ತಾನೂ ವೇಂಗಡದ ದೇವರಿಗೆ ಆದರದಿಂದ ಸೇವೆ ಸಲ್ಲಿಸಿದ. ತಾನು ಮಾತ್ರವಲ್ಲದೆ, ತನ್ನ ಮಡದಿ, ಮಕ್ಕಳು, ಅಧಿಕಾರಿಗಳು, ಆಚಾರ್ಯಪುರುಷರು, ಊರಹಿರಿಯರು, ಊಳಿಗದವರು ಎಲ್ಲರೂ ದೇವರಿಗೆ ತಮ್ಮ ಕೈಲಾದ ಕೈಂಕರ್ಯವನ್ನು ಸಲ್ಲಿಸುವಂತೆ ಅವನು ಪ್ರೇರಿಸಿದಂತೆ ತೋರುತ್ತದೆ. ಅವನ ಕಾಲದಲ್ಲಿ ಗುಡಿ ಬೆಳೆಯಿತು. ಗುಡಿಯ ಸಂಪತ್ತು ಹೆಚ್ಚಿತು; ಉತ್ಸವಗಳು ಹೆಚ್ಚಾದವು; ಗೋಪುರಗಳೂ ಮಂಟಪಗಳೂ ಕೋನೇರಿಗಳೂ ನಂದವನಗಳೂ ಹೆಚ್ಚುಹೆಚ್ಚಾಗಿ ಕಾಣಿಸಿಕೊಂಡವು. ಬೆಟ್ಟದ ಮೇಲಿನ ಗುಡಿಯಲ್ಲದೆ, ಕೆಳಗಿನ ತಿರುಪತಿ ಪ್ರಬಲವಾಗಲು ಸಾಳುವ-ನರಸಿಂಹನು ನೇರವಾಗಿ ನೆರವಾದನು. ತಿರುಪತಿಯ ಶ್ರೀವೈಷ್ಣವಸಮುದಾಯ ತನ್ನ ಪ್ರಭಾವವನ್ನು ಬೆಟ್ಟದ ಗುಡಿಯಲ್ಲಿ ಬೇರೂರಿಸಲು ಈ ಕಾಲದಲ್ಲಿ ಸಾಧ್ಯವಾಯಿತು.

ದೇವರ ಗುಡಿಯ ಎದುರಿಗೆ ಒಂದು ಪಕ್ಕದಲ್ಲಿದ್ದ ಸ್ವಾಮಿಪುಷ್ಕರಿಣಿಯೆಂಬ ಕೊಳದ ಉಲ್ಲೇಖ ಬಂದಿತಷ್ಟೆ. ಈ ಕೊಳದ ನಡುವೆ ವಸಂತಮಂಟಪವನ್ನು ಸಾಳುವ-ನರಸಿಂಹನು ತನ್ನ ಧರ್ಮವಾಗಿ ಕಟ್ಟಿಸಿದನೆಂದು ಕ್ರಿಸ್ತಾಬ್ದ 1468ರ ಶಾಸನವೊಂದಿದೆ (**ತಿರುಕ್ಕೋನೇರಿಯಿಲ್ ತಮ್ಮುಡೈಯ ಧರ್ಮಮಾಹ ಕಟ್ಟುವಿತ್ತ ವಸಂತಮಂಡ ಪತ್ತಿಲ್**.....). ಶಾಸನದಲ್ಲಿ ಸ್ವಾಮಿಪುಷ್ಕರಿಣಿಯೆಂಬ ಮಾತು ಬಂದಿಲ್ಲ. ಮೂವತ್ತಾರು ವರ್ಷಗಳಷ್ಟು ಮೊದಲು ಮೂಡಿಕೊಂಡ ಒಂದು ಶಾಸನದಲ್ಲಿ ಈ ಹೆಸರು ಸ್ಪಷ್ಟವಾಗಿ ಬಂದಿದ್ದಿತು. ಬಹುಶಃ ಸಾಳುವ-ನರಸಿಂಹನ ಕಾಲಕ್ಕೆ ಇನ್ನೂ ಇದು ವಾಡಿಕೆಗೆ ಬಂದಿರಲಿಲ್ಲವೆಂದು ತೋರುತ್ತದೆ; ಅವನು ಇದನ್ನು 'ತಿರು-ಕ್ಕೋನೇರಿ' (ಶ್ರೀ-ಪುಷ್ಕರಿಣಿ) ಯೆಂದೇ ಕರೆದಿದ್ದಾನೆ. ಇದರ ನಡುವೆ ಕಟ್ಟಿಸಿದ ಮಂಟಪ (ನೀರಾಳಿಮಂಡಪ ಅಥವಾ ವಸಂತಮಂಟಪ) ಕೋಡೈ-ತಿರುನಾಳ್ ಎಂಬ ಸಂದರ್ಭದಲ್ಲಿ ನಡೆಯುವ ತೆಪ್ಪೋತ್ಸವ (ತಿರುಪ್ಪಳಿ-ಓಡತ್ತಿರುನಾಳ್) ದಲ್ಲಿ ಉತ್ಸವಮೂರ್ತಿಗಳನ್ನು ಇಲ್ಲಿ ಕೂರಿಸಿ ಆರಾಧನೆ ನಡೆಸುವುದಕ್ಕಾಗಿ. ಎಂದರೆ, ತೆಪ್ಪೋತ್ಸವವನ್ನೂ ಸಾಳುವ-ನರಸಿಂಹನೇ ವ್ಯವಸ್ಥೆ ಮಾಡಿದನೆನ್ನಬಹುದು.

ಅದಲ್ಲದೆ ದೋಲೋತ್ಸವ (ಅನ್ನ-ಉಂಜಲ್-ತಿರುನಾಳ್) ಮಂಟಪದಲ್ಲಿ ಉಯ್ಯಾಲೆಯ ಮೇಲೆ ಉತ್ಸವಮೂರ್ತಿಗಳನ್ನು ಕೂರಿಸಿ ನಡೆಸುವ ಐದು ದಿನಗಳ ಪೂಜೆಯನ್ನೂ ಇವನೇ ಏರ್ಪಡಿಸಿದನೆಂಬ ಶಾಸನವೂ ಇದೆ. ಅದಕ್ಕಾಗಿ ದೊಮ್ಮರಪಟ್ಟಿ ಎಂಬ ಹಳ್ಳಿಯನ್ನೇ ದೇವದಾನವಾಗಿ ಗುಡಿಗೆ ಬಿಟ್ಟುಕೊಟ್ಟನು (1473ರಲ್ಲಿ). ಹೀಗೆ ಹಲವಾರು ಉತ್ಸವಗಳನ್ನೂ, ಆ ಉತ್ಸವಸಂದರ್ಭಗಳಲ್ಲಿ ಬಗೆಬಗೆಯಾದ ನೈವೇದ್ಯ ಗಳನ್ನೂ ಏರ್ಪಡಿಸಿ ಹತ್ತಾರು ಹಳ್ಳಿಗಳನ್ನು ಗುಡಿಗೆ ದಾನಮಾಡಿದುದು ಅವನ ಶಾಸನಗಳಲ್ಲಿ ಕಾಣಸಿಗುತ್ತದೆ. ಅವನ ಕಾಲದಲ್ಲಿ ವರ್ಷದ ನೂರ ಐವತ್ತುಮೂರು ದಿನಗಳು ಬೆಟ್ಟದ ಮೇಲೆ ಉತ್ಸವಸಂದರ್ಭಗಳಾದುವು. ಇವುಗಳಲ್ಲಿ ಏಳು ಬ್ರಹ್ಮೋತ್ಸವಗಳು ಸೇರುತ್ತವೆ; ಒಂದೊಂದು ಬ್ರಹ್ಮೋತ್ಸವವೂ (ತಿರುಕ್ಕೋಡಿ-ತಿರುನಾಳ್) ಹದಿಮೂರು ದಿನಗಳು ವಿಜೃಂಭಣೆಯಿಂದ ನಡೆಯುವ ಉತ್ಸವ. ಕೋಡ್ಯೆ-ತಿರುನಾಳ್ ಎನ್ನುವುದು ಬೇಸಗೆಯಲ್ಲಿ ನಡೆಯುವ ಇಪ್ಪತ್ತು ದಿನಗಳ ಉತ್ಸವ. ಐದು ದಿನಗಳ ದೋಲಾಮಹೋತ್ಸವ (ಉಂಜಲ್-ಉತ್ಸವಂ) ಚಿತ್ತಿರೈ ತಿಂಗಳಿನಲ್ಲಿ ನಡೆಯು ವುದು. ಇವಲ್ಲದೆ ಸಂಕ್ರಾಂತಿಗಳು, ಯುಗಾದಿ, ದೀಪಾವಳಿ, ಮುಕ್ಕೋಟಿದ್ವಾದಶಿ, ಶ್ರೀಜಯಂತಿ, ರಾಮನವಮಿ, ವಸಂತಪೂರ್ಣಿಮೆ, ತಿರುಕಾರ್ತಿಕೈ ಮೊದಲಾಗಿ ಹಲವು ಹಬ್ಬಗಳೂ ಸೇರಿಕೊಂಡು ಬಂದುವು. ಸಾಳುವ-ನರಸಿಂಹನ ನಂಟನಾದ ಮಲ್ಲಯದೇವ ಮಹಾರಾಜನು ಕ್ರಿಸ್ತಾಬ್ದ 1465ರಲ್ಲಿ ಪವಿತ್ರೋತ್ಸವವೆಂಬ ಐದು ದಿನಗಳ ಹೊಸ ಉತ್ಸವವನ್ನು ಏರ್ಪಡಿಸಿದನು.

ಉತ್ಸವವೆಂದರೆ ದೇವರಿಗೆ ಬಗೆಬಗೆಯ ತಿಂಡಿತಿನಿಸುಗಳು ನೈವೇದ್ಯವಾಗಿ ಸಲ್ಲಬೇಕು. ಅನಂತರ ಪ್ರಸಾದವೆಂದು ನೆರೆದ ಭಕ್ತರಿಗೆಲ್ಲ ವಿತರಣೆಯಾಗಬೇಕು. ಬೆಟ್ಟದ ಮೇಲೆ ವಸತಿಗೆ ಅನುಕೂಲ ಕಡಮೆಯಾಗಿದ್ದ ಆ ಕಾಲದಲ್ಲಿ ಗುಡಿಯ ಪ್ರಸಾದವೇ ಯಾತ್ರಿಕರ ಆಧಾರ. ಆದುದರಿಂದಲೇ ದಾನಿಗಳು ತಂತಮ್ಮ ಕೊಡುಗೆಯ ಪ್ರಮಾಣ ವನ್ನೂ ವೈವಿಧ್ಯವನ್ನೂ ಹೆಚ್ಚಿಸಿದರು; ದಾನಿಗಳೂ ಹೆಚ್ಚಿದರು. ಸಾಳುವ-ನರಸಿಂಹನು ಮಾತ್ರವಲ್ಲದೆ, ಅವನ ಅಧಿಕಾರಿಗಳೂ ತಿರುಪತಿಯ ವರ್ತಕರೂ ಮಹಾಜನರೂ ಮಠಗಳ ಜೀಯರುಗಳೂ ಗುಡಿಯಲ್ಲಿ ಲೆಕ್ಕ ಬರೆಯುವವರೂ ಗುಡಿಯ ದುರಸ್ತಿಗೆಂದು ನೇಮಕಗೊಂಡವರೂ ಈ ಅನ್ನದಾನಕ್ಕೆ ತಂತಮ್ಮ ಶಕ್ತಿಯಿದ್ದಂತೆ ನೆರವಾದರು. ಸಾಳುವ-ನರಸಿಂಹನ ಅಧಿಕಾರ ನಡೆಯುತ್ತಿದ್ದಾಗ ಗುಡಿಗೆ ಸೇರಿಕೊಂಡ ದೇವ ದಾನಗ್ರಾಮಗಳ ಸಂಖ್ಯೆ ಇಪ್ಪತ್ತಾರು. ದಾನದ ವ್ಯವಸ್ಥೆಗೆಂದು ಗುಡಿಯ ಶ್ರೀಭಂಡಾರಕ್ಕೆ ಸಂದ ಪಣಗಳು 1,15,605. ಗುಡಿಯಲ್ಲಿ ದಿನವೂ ಸುಮಾರು ಒಂದು ಸಾವಿರದ ಐನೂರು ಜನ ಯಾತ್ರಿಕರಿಗೆ ಪ್ರಸಾದ ವಿತರಣೆಯಾಗುತ್ತಿದ್ದಿತು. ಉತ್ಸವಸಂದರ್ಭಗಳಲ್ಲಿ ದಿನವೊಂದಕ್ಕೆ ಸುಮಾರು ನಾಲ್ಕುಸಾವಿರ ಜನರು ಗುಡಿಯಲ್ಲಿ ಹೊಟ್ಟೆತುಂಬುವಷ್ಟು ಪ್ರಸಾದವನ್ನು ಪಡೆಯುವ ಸೌಲಭ್ಯವಿದ್ದಿತು. ಪ್ರಸಾದವು ಉಚಿತವಾಗಿ ದೊರೆಯುತ್ತಿದ್ದಿ ತೆನ್ನುವುದನ್ನು ಗಮನಿಸಬೇಕು; ಹಣಕೊಟ್ಟು ಪ್ರಸಾದವನ್ನು ಕೊಳ್ಳಬೇಕಾದ ಕೆಟ್ಟಕಾಲ ಇನ್ನೂ ಒದಗಿರಲಿಲ್ಲ!

ಬಂದ ಯಾತ್ರಿಕರಿಗೆ ಉಣಬಡಿಸುವ ವ್ಯವಸ್ಥೆ 'ರಾಮಾನುಜ-ಕೂಟ'ದ್ದು. ಇದನ್ನು ಸಾಳುವ-ನರಸಿಂಹನು ಏರ್ಪಡಿಸಿ ಅದರ ಮೇಲ್ವಿಚಾರಣೆಯನ್ನು ಕಂದಾಡೈ-ರಾಮಾನುಜ-ಅಯ್ಯ (ಅಯ್ಯಂಗಾರ್) ಎಂಬುವವನಿಗೆ ವಹಿಸಿದ್ದನು. ಇದು ತಿರುಮಲೆಯಲ್ಲಿ ಮಾತ್ರವಲ್ಲದೆ, ಕೆಳತಿರುಪತಿಯಲ್ಲಿಯೂ ಇದ್ದಿತು. ಈ ಕಂದಾಡೈ-ರಾಮಾನುಜ-ಅಯ್ಯನ ವಿಚಾರ ಸ್ವಲ್ಪ ಹೇಳಬೇಕು. ಏಕೆಂದರೆ, ಸಾಳುವ-ನರಸಿಂಹನ ಕಾಲದಲ್ಲಿ ಅವನಷ್ಟು ಪ್ರಭಾವಶಾಲಿಯಾದ, ಪ್ರಬಲನಾದ ವ್ಯಕ್ತಿ ಬೇರೊಬ್ಬ ಇರಲಿಲ್ಲವೆಂದರೆ ಉತ್ಪ್ರೇಕ್ಷೆಯ ಮಾತಲ್ಲ. ಅವನ ಪ್ರಭಾವ ಸಾಳುವ-ನರಸಿಂಹನ ಮೇಲೆ ಮಾತ್ರವಲ್ಲದೆ, ಗುಡಿಯ ಸ್ಥಾನತ್ತಾರರ ಮೇಲೂ, ಊರ ಮಹಾಜನರ ಮೇಲೂ ಮೂಡಿದ್ದಿತು. ಹಲವಾರು ಶಾಸನಗಳು ಸಾಳುವ-ನರಸಿಂಹನ ಮತ್ತು ಈತನ ಹೆಸರುಗಳಲ್ಲಿ ಕಲೆತು ಬಂದಿವೆ. ಇವನಿಂದಾಗಿ ಬೆಟ್ಟದ ಗುಡಿಯಲ್ಲಿ ಹಲವು ಮಾರ್ಪಾಟುಗಳು ಒದಗಿದವು. ಕೆಳತಿರುಪತಿ ಪ್ರಬಲವಾಯಿತು.

ಪ್ರಸಾದದ ಮಾರಾಟ

ಸಾಳುವ-ನರಸಿಂಹನು ಬೆಟ್ಟದ ಮೇಲಿನ ವ್ಯವಹಾರಗಳಲ್ಲಿ ನಂಬಿದ್ದುದು ಇಬ್ಬರನ್ನು—ಕಂದಾಡೈ-ರಾಮಾನುಜ-ಅಯ್ಯನ್ ಮತ್ತು ಹಸ್ತಿಗಿರಿ-ಅಯ್ಯನ್ (ಅಥವಾ ಹಸ್ತಿಗಿರಿದಾಸರ್). ಹಸ್ತಿಗಿರಿ-ಅಯ್ಯನ್ ಬೆಟ್ಟದ ಮೇಲೆ ಒಂದು ಧರ್ಮಸತ್ರವನ್ನು ನಡೆಸುತ್ತಿದ್ದನು; ಸಾಳುವ-ನರಸಿಂಹನೇ ಏರ್ಪಡಿಸಿದ 'ರಾಮಾನುಜನ್-ನಂದವನ'ವೆಂಬ ಹೂದೋಟವನ್ನು ನೋಡಿಕೊಳ್ಳುತ್ತಿದ್ದನು. ಕಂದಾಡೈ-ರಾಮಾನುಜ-ಅಯ್ಯನ್ ಕೂಡ ತಿರುಮಲೆಯ ಮೇಲೆ ಕೆಂದಾವರೆಗಳನ್ನು (ಶೆಂಕಳುನಿರ್) ಬೆಳೆಸುವ ನಂದವನವನ್ನು ನೋಡಿಕೊಳ್ಳುತ್ತಿದ್ದನು. ಈತನು ತಿರುಮಲೆಯವನಲ್ಲ, ದೇಶಾಂತರಿ (ಎಂದರೆ, ಹೊರಗಿನಿಂದ ಬಂದವನು); ಇವನ ಸ್ಥಳ ತೊಂಡಮಂಡಲವೆಂದು ಉಲ್ಲೇಖವಿದೆ. ಇವನು ತಿರುಮಲೆಗೆ ಬಂದುದು ಯಾವಾಗ, ಸಾಳುವ-ನರಸಿಂಹನ ಗೆಳೆತನವನ್ನು ಗಳಿಸಿದುದು ಹೇಗೆ ಎಂದು ವಿಚಾರಗಳು ಗೊತ್ತಾಗುವುದಿಲ್ಲ. ಇವನ ತಂದೆತಾಯಿಯರ ಹೆಸರಾಗಲೀ ಗೋತ್ರಸೂತ್ರಗಳಾಗಲೀ ಶಾಸನಗಳಲ್ಲಿ ಬಂದಿಲ್ಲ. ತಾನು ಕಾಂಚೀಪುರದ ಆಳಗಿಯ ಮಣವಾಳ ಜೀಯರ (ಕ್ರಿಸ್ತಾಬ್ದ 1420-1468) ಶಿಷ್ಯನೆಂದೇನೋ ಹೇಳಿಕೊಂಡಿದ್ದಾನೆ. ಅವರಲ್ಲಿ ಶಿಷ್ಯವೃತ್ತಿಮಾಡಿದಮೇಲೆ ಕೋಯಿಲ್ (ಶ್ರೀರಂಗ), ಪೆರುಮಾಳ್ ಕೋಯಿಲ್ (ಕಾಂಚೀಪುರ) ಮೊದಲಾದ ನೂರೆಂಟು ಶ್ರೀವೈಷ್ಣವ 'ತಿರುಪತಿ'ಗಳನ್ನು (ದಿವ್ಯಸ್ಥಳಗಳನ್ನು) ನೋಡಿಕೊಂಡು, ತಿರುಮಲೆಗೆ ಬಂದು ನೆಲೆಸಿದಂತೆ ತೋರುತ್ತದೆ. ಮೇಲೆ ಹೇಳಿದ ನಂದವನವನ್ನು ನೋಡಿಕೊಳ್ಳುತ್ತಿದ್ದ, ಅಲ್ಲಿ ಕೆಲಸಮಾಡುತ್ತಿದ್ದ ದಾಸನಂಬಿಗಳಿಗೆ ಗುರುಗಳಂತೆ ಇದ್ದವನು. ಕ್ರಿಸ್ತಾಬ್ದ 1467ರಿಂದ ಮುಂದೆ ಸಿದ್ಧವಾದ ಶಾಸನಗಳಲ್ಲಿ ಈತನ ಪ್ರಾಬಲ್ಯದ ಸೂಚನೆಗಳು ಸಿಗುತ್ತವೆ. ಆದರೆ

ಆರೇಳು ವರ್ಷಗಳಲ್ಲಿ ಈ ಪ್ರಾಬಲ್ಯ ಕುಂದಿತೆಂದು ತೋರುತ್ತದೆ. ಸಾಳುವ-ನರಸಿಂಹನು ಬೆಟ್ಟದ ಮೇಲೆ ಹಲವಾರು ಬಗೆಯ ಪ್ರಸಾದಗಳನ್ನು ವ್ಯವಸ್ಥೆ ಮಾಡಿದನಷ್ಟೆ. ಈ ಪ್ರಸಾದಗಳನ್ನು ಯಾತ್ರಿಕರಿಗೆ, ಭಕ್ತರಿಗೆ ಹಂಚಲು ಹಸ್ತಿಗಿರಿ-ಅಯ್ಯನ್ ನಡೆಸುತ್ತಿದ್ದ ಧರ್ಮಸತ್ರ, ಮತ್ತು ಕಂದಾಡೆ-ರಾಮಾನುಜ-ಅಯ್ಯನ 'ರಾಮಾನುಜಕೂಟ' ಎಂಬ ಎರಡು ಸಂಸ್ಥೆಗಳು ಮುಂದೆ ಬಂದುವು. ಧರ್ಮಸತ್ರಕ್ಕೆ ಇಪ್ಪತ್ತು ಪ್ರಸಾದಗಳನ್ನು ಗುಡಿಯಿಂದ ಕೊಟ್ಟರೆ ರಾಮಾನುಜಕೂಟಕ್ಕೆ ಹತ್ತೂವರೆ ಪ್ರಸಾದಗಳಷ್ಟೇ ಬರುತ್ತಿದ್ದುದು. ಎಂದರೆ, ಮೊದಲಿಗೆ ರಾಮಾನುಜಕೂಟದ ಪ್ರಭಾವ ಎಷ್ಟಿದ್ದಿತು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ರಾಮಾನುಜಕೂಟದಲ್ಲಿ ಪ್ರಸಾದ ವಿತರಣೆಯಾಗುತ್ತಿದ್ದುದು ಶಾತ್ತಾದ ಶ್ರೀವೈಷ್ಣವರಿಗೆ ಮಾತ್ರ. ಇವರು ಕಂದಾಡೆ-ರಾಮಾನುಜ-ಅಯ್ಯನ ಶಿಷ್ಯರು. ಆದರೆ ಹಸ್ತಿಗಿರಿ-ಅಯ್ಯನ ಧರ್ಮಸತ್ರದಲ್ಲಿ ಜಾತಿಮತಗಳ ಎಣಿಕೆಯಿಲ್ಲದೆ ಎಲ್ಲರಿಗೂ ಪ್ರಸಾದವು ದಕ್ಕುತ್ತಿದ್ದಿತು.

ಆದರೆ ರಾಮಾನುಜಕೂಟವು ಹಲವು ಉತ್ಸವಸಂದರ್ಭಗಳಲ್ಲಿ ಬಂದ ಪ್ರಸಾದದಲ್ಲಿ ಒಂದು ಭಾಗವನ್ನು (ಅಪ್ಪಂ, ಅತಿರಸ, ಪಾಯಸ ಇತ್ಯಾದಿ) ಮಾರಿ ಹಣವನ್ನು ಗಳಿಸುವ ಪದ್ಧತಿಯನ್ನು ಮೊದಲುಮಾಡಿತೆಂದು ಗುಡಿಯ ಪ್ರಥಮಾಚಾರ್ಯಪುರುಷರಲ್ಲಿ ಒಬ್ಬರಾಗಿದ್ದ ವೀರರಾಘವಾಚಾರ್ಯರು ಹೇಳುತ್ತಾರೆ. ಇದರಿಂದಾಗಿ ಸಾಳುವ-ನರಸಿಂಹನೂ ಇತರ ದಾನಿಗಳೂ ಬೇಸರಗೊಂಡರೆನ್ನುವುದು ಸಹಜವೇ. ಬೆಟ್ಟದ ಗುಡಿಗೆ ಅರಸರೂ ಅಧಿಕಾರಿಗಳೂ ಶ್ರೀಮಂತರೂ ಜನಸಾಮಾನ್ಯರೂ ಎಡೆಬಿಡದೆ, ಉದಾರವಾಗಿ ಮಾಡಿದ ದಾನಧರ್ಮಗಳಿಂದಾಗಿ ದೇವರಿಗೆಂದು ದಿನವೂ ಹಲವಾರು ಸಂಧಿಗಳಲ್ಲಿ ಸಲ್ಲಿಸುವ ನೈವೇದ್ಯವು ವೈವಿಧ್ಯದಿಂದಲೂ ಪ್ರಮಾಣದಿಂದಲೂ ಪ್ರಸಿದ್ಧಿಯನ್ನು ಪಡೆಯಿತು. ಸಿದ್ಧವಾದ ಎಲ್ಲ ನೈವೇದ್ಯವನ್ನೂ ಪ್ರಸಾದವಾಗಿ ಹಂಚಿಬಿಡುವುದು ಕಷ್ಟವಾಯಿತು; ಯಾತ್ರಿಕರ ಅಗತ್ಯಕ್ಕಿಂತ ಬಹುಹೆಚ್ಚು ಪ್ರಮಾಣದಲ್ಲಿ ಅಡುಗೆಯಾಗುತ್ತಿದ್ದಿತು. ಆದುದರಿಂದ ಗುಡಿಯ ಆಡಳಿತವನ್ನು ನೋಡಿಕೊಳ್ಳುವವರು, ನಾಲ್ಕು ದಿನ ಇರುವಂಥ ಭಕ್ಷ್ಯಭೋಜ್ಯಗಳನ್ನು ಮಾಡಿದರೆ ಯಾತ್ರಿಕರು ತಮ್ಮೊಡನೆ ಅದನ್ನೊಯ್ಯಬಹುದೆಂದು ಆಲೋಚನೆ ಮಾಡಿ ಅಂಥ ನಿಮಂದನಗಳನ್ನೇ ಮಾಡಿಸತೊಡಗಿದರು. 'ಉಂಡೂ ಹೋದ, ಕೊಂಡೂ ಹೋದ' ಎನ್ನುವ ಪರಿಸ್ಥಿತಿಯಲ್ಲಿ, ಪ್ರಸಾದವನ್ನು ಹಣ ಕೊಟ್ಟು, ಕೊಂಡು, ಊರಿಗೆ ಒಯ್ಯುವ ಕೆಟ್ಟಚಾಳಿ ಯಾತ್ರಿಕರಲ್ಲಿ ಬಳಕೆಗೆ ಬಂದಿತು.

ಹೀಗೆ ಹಣವನ್ನು ಗಳಿಸಬೇಕೆಂಬ ಕಾತರ ರಾಮಾನುಜಕೂಟಕ್ಕೆ ಕಾಣಿಸಿಕೊಂಡುದು ಆಶ್ಚರ್ಯವಲ್ಲ. ರಾಮಾನುಜಕೂಟ ವ್ಯಾಪಾರಸಂಸ್ಥೆಯಾಗಿ ಮಾರ್ಪಟ್ಟಿತು. ಅಲ್ಲಿ ಉಚಿತವಾಗಿ ಪ್ರಸಾದ ಪಡೆಯುವ ಶಾತ್ತಾದ ಶ್ರೀವೈಷ್ಣವರು ಬಹುಸಂಖ್ಯೆಯಲ್ಲಿ ಇರದಿದ್ದ ಕಾರಣ, ಅದಕ್ಕೆ ನಿಗದಿಯಾಗಿ ಬರುತ್ತಿದ್ದ ಪ್ರಸಾದದಲ್ಲಿ ಸುಮಾರುಭಾಗ ಮಾರಾಟವಾಗುತ್ತಿದ್ದಿತು. ಇದರಲ್ಲಿ ಕಂದಾಡೆ-ರಾಮಾನುಜ-ಅಯ್ಯನ ಪಾತ್ರ ಹಿರಿದಾದುದು. ರಾಮಾನುಜಕೂಟದ ಶಿಷ್ಯಪರಂಪರೆಯನ್ನೂ ಆತನು ಏರ್ಪಡಿಸಿದ್ದ

ನೆಂದು ತೋರುತ್ತದೆ. ಆದರೆ ರಾಮಾನುಜಕೂಟದ ವಹಿವಾಟು ಮಹಾಜನರಿಗಾಗಲೀ ಯಾತ್ರಿಕರಿಗಾಗಲೀ ದಾನಿಗಳಿಗಾಗಲೀ ಸರಿತೋರದೆ ಕೆಲಕಾಲಾನಂತರ ರಾಮಾನುಜ ಕೂಟ ಕಣ್ಮರೆಯಾಯಿತು.

ಕಂದಾಡೆ-ಅಯ್ಯನ ಕಾರುಬಾರು

ಮಹಾಪ್ರಧಾನಿ ಸಾಳುವ-ನರಸಿಂಹನ ಗಮನವನ್ನು ಕಂದಾಡೆ-ರಾಮಾನುಜ-ಅಯ್ಯನ್ ಇನ್ನೊಂದು ಬಗೆಯಾಗಿಯೂ ಸೆಳೆದುಕೊಂಡನು. ಗುಡಿಯ ಆಡಳಿತದಲ್ಲಿ ಪೊರ್-ಭಂಡಾರವೆಂಬ ವಿಭಾಗದಲ್ಲಿ ದೇವರ ಆಭರಣಗಳು, ಬಂಗಾರ, ಬೆಳ್ಳಿ ಉಪಕರಣಗಳು, ಬೆಲೆಬಾಳುವ ವಸ್ತ್ರಗಳು ಇವನ್ನೆಲ್ಲ ಕಾಪಾಡಿಕೊಂಡು ಬರುತ್ತಿದ್ದರು. ಆಭರಣಗಳಲ್ಲಿ ರಿಪೇರಿಯಾಗಬೇಕಾದ ಅಗತ್ಯವಿದ್ದರೆ, ಅದಕ್ಕಾಗಿ ಬೇಕಾಗುವ ಹಣವನ್ನು ಒದಗಿಸುವ ಮಾರ್ಗವಿರಲಿಲ್ಲ. ಕಂದಾಡೆ-ರಾಮಾನುಜ-ಅಯ್ಯನು ಇದನ್ನರಿತು ಯೋಜನೆಯೊಂದನ್ನು ಮಹಾಪ್ರಧಾನಿಯ ಮುಂದಿರಿಸಿದನು. ತನ್ನ ರಾಮಾನುಜಕೂಟದಲ್ಲಿ ಪ್ರಸಾದವನ್ನು ಮಾರಿ ಬಂದ ಹಣದಲ್ಲಿ ಒಂದು ಭಾಗವನ್ನು ಈ ಕೆಲಸಕ್ಕಾಗಿ ಒದಗಿಸಬಹುದೆಂದೂ, ಬೇರೆ ವೆಚ್ಚವಿಲ್ಲದೆ ಆಭರಣಗಳು ಸರಿಪಡಿಸುವುದಾದೀತೆಂದೂ ಆ ಯೋಜನೆ. ಸಾಳುವ-ನರಸಿಂಹನಿಗೆ ಇದು ಒಪ್ಪಿಗೆಯಾಗಿ ಕಂದಾಡೆ-ರಾಮಾನುಜ-ಅಯ್ಯನನ್ನೇ ಪೊರ್-ಭಂಡಾರದ ನಿರ್ವಾಹಕನನ್ನಾಗಿ ನೇಮಿಸಿದ. ಗುಡಿಯ ಆಡಳಿತದಲ್ಲಿ ಅವನಿಗೆ ನೇರವಾದ, ಆಳವಾದ ಪಾತ್ರವೊಂದು ಒದಗಿಬಂದಿತು. ರಾಮಾನುಜಕೂಟಕ್ಕೆ ತನ್ನ ಶಿಷ್ಯಪರಂಪರೆಯನ್ನು ಅವನು ಆಯೋಜಿಸಿದ್ದಂತೆಯೇ ಪೊರ್-ಭಂಡಾರಕ್ಕೂ ತನ್ನದೇ ಶಿಷ್ಯಪರಂಪರೆ ಆದೀತೆಂದು ಆಲೋಚಿಸಿದ್ದನು.

ಹೀಗೆ ಆಡಳಿತದಲ್ಲಿ ಮರ್ಯಾದೆಯ ಹುದ್ದೆ ಕೈಗೂಡಿದಾಗ ಅವನ ತಲೆ ತಿರುಗಿತು. ಕ್ರಿಸ್ತಾಬ್ದ 1495ರಲ್ಲಿ ಅವನು ಮಾಡಿದ ಒಂದು ಏರ್ಪಾಟು ಇದನ್ನು ತೋರಿಸುತ್ತದೆ. ಕೋಡ್ಯೆ-ತಿರುನಾಳ್ ಸಂದರ್ಭದಲ್ಲಿ ಮಲಯಪ್ಪಸ್ವಾಮಿಯು ಉತ್ಸವದಲ್ಲಿ ಗುಡಿಯ ವಿಮಾನಪ್ರದಕ್ಷಿಣೆಯಲ್ಲಿ ಬಿಜಯಮಾಡಿಸುತ್ತಿರುವಾಗ, ದೇವರೆದುರು ನಾಲ್ವರು ದೇವದಾಸಿಯರು (ಎಂಪೆರುಮಾನಡಿಯಾರರು) ತನ್ನನ್ನು ಹೊಗಳುವ ತಮಿಳು ಹಾಡುಗಳನ್ನು (ಉಲಾ) ಹಾಡಬೇಕೆಂದೂ, ಈ ಸೇವೆಗಾಗಿ ಅವರಿಗೆ 'ಪರಿವಟ್ಟ' (ಮರ್ಯಾದೆಯ ಕುರುಹಾಗಿ ತಲೆಗೆ ವಸ್ತ್ರ ಸುತ್ತುವುದು) ಸಮರ್ಪಣೆಗೆಂದು ಇಪ್ಪತ್ತು ಪಣಗಳ ದಾನವನ್ನು ಮಾಡಿರುವುದಾಗಿಯೂ ಅವನ ಒಂದು ಶಾಸನದಲ್ಲಿ ಒಕ್ಕಣೆಯಿದೆ. ಬೆಟ್ಟದ ಗುಡಿಯಲ್ಲಿ ದೇವದಾಸಿಯರು ಕಾಣಿಸಿಕೊಂಡದ್ದು ಹೀಗೆ. ದಾನಿಯ ಹಿರಿಮೆಯನ್ನು ದೇವರೆದುರು ಎಲ್ಲರೆದುರು ಹಾಡಿ ಸಂಭಾವನೆಯನ್ನು ಪಡೆಯುವ ಪದ್ಧತಿಯನ್ನು ಈತನು ಮೂಡಿಸಲೆತ್ನಿಸಿದನು. ಆದರೆ ಇದು ಯಾರಿಗೂ ಹಿಡಿಸದೆ, ಈ ಪದ್ಧತಿ ಬೆಳೆಯಲೂ ಇಲ್ಲ ; ಇವನು ತೀರಿಕೊಂಡಮೇಲೆ ಪದ್ಧತಿ ನಿಂತೂ ಹೋಯಿತು.

ಹೀಗೆಯೇ, ಅವನ ಅಹಂಕಾರವನ್ನು ಅರಿತುಕೊಳ್ಳಲು ಇನ್ನೊಂದು ಏರ್ಪಾಟನ್ನು ನೋಡಿ. ತನ್ನ ಹುಟ್ಟುಹಬ್ಬದ ದಿನ ವೇಂಗಡದೊಡೆಯನಿಗೆ ಒಂದು ತಿರಿಪ್ಪೋನಕವನ್ನು ಸಲ್ಲಿಸಿದ ಮೇಲೆ, ಅದನ್ನು ಬೆಟ್ಟದಿಂದ ಕೆಳಗೆ ತಂದು, ಬೆಟ್ಟದ ಕೆಳಗೆ ಗೋದಾದೇವಿಯು (ಶೂಡಿಕ್ಕುಡುತ್ತ-ನಾಚ್ಚಿಯಾರ್) ಅದನ್ನು ಎದುರುಗೊಂಡು, ಮೆರವಣಿಗೆಯಲ್ಲಿ ತಿರುಪತಿಯ ಗೋವಿಂದರಾಜನ ಸನ್ನಿಧಿಗೆ ಬರಮಾಡಿಕೊಂಡು ದೇವರು ಉಯ್ಯಾಲೆಯ ಮೇಲೆ ಓಲಗದಲ್ಲಿರುವಾಗ ಅದನ್ನು ಒಪ್ಪಿಸಬೇಕೆಂದು ವಿಧಿಸುವ ಶಾಸನವಿದೆ. ಇದಕ್ಕಾಗಿ ಆತನು ಗುಡಿಯ ಶ್ರೀಭಂಡಾರಕ್ಕೆ ಐದುಸಾವಿರ ನರ್‌ಪಣಗಳನ್ನು ಸಲ್ಲಿಸುತ್ತಾನೆ.

ಹೀಗೆ ಸ್ವಾಭಿಮಾನದ ಮುದ್ದೆಯಾಗಿದ್ದ ಈತನ ಕಾಲದಲ್ಲಿ , ಸಾಳುವ-ನರಸಿಂಹನ ಬೆಂಬಲದಿಂದ ಕೆಳತಿರುಪತಿಯ ಹಿರಿಮೆ ಹೆಚ್ಚಿತು; ಬೆಟ್ಟದ ಮೇಲೆ ಪ್ರಬಂಧ ಪಾರಾಯಣ ಬಳಕೆಗೆ ಬಂದಿತು; ಹಲವಾರು ಹೊಸಪದ್ಧತಿಗಳು ಕಾಣಿಸಿಕೊಂಡುವು. ಅವನ ದಾನಧರ್ಮಗಳಲ್ಲಿ ತಿರುಪತಿಯ ಗೋವಿಂದರಾಜನನ್ನೂ ತಪ್ಪದೆ ಸೇರಿಸುತ್ತಾನೆ. ಅವನು ತಿರುಪತಿಯಲ್ಲಿ ಕಟ್ಟಿಸಿದ ಕುಲಶೇಖರ ಆಳ್ವಾರರ ಗುಡಿಗೆ ಬೆಟ್ಟದ ಗುಡಿಯ ಸ್ಥಾನತ್ತಾರರೇ ಇಲಮಂಡೈಯಂ ಕೂರೈಕ್ಕಾಲ್‌ನಲ್ಲಿದ್ದ ಭೂಮಿಗಳನ್ನು ಸರ್ವಮಾನ್ಯವಾಗಿ ಬಿಟ್ಟುಕೊಡುತ್ತಾರೆ. ಇವನ ಬಯಕೆಯಿಂದ ಸಾಳುವ-ನರಸಿಂಹನು ತಿರುಪತಿಯಲ್ಲಿ ರಾಮನ ಗುಡಿಯನ್ನು (ಪೆರಿಯ ರಘುನಾಥನ ಗುಡಿ) ಹೊಸದಾಗಿ ಕಟ್ಟಿಸಿಕೊಡುತ್ತಾನೆ; ಹಲವಾರು ಉತ್ಸವಗಳು ತಿರುಮಲೆಯ ಮೇಲೂ ಕೆಳತಿರುಪತಿಯಲ್ಲೂ ಒಂದೇ ತೆರನಾಗಿ ನಡೆಯುವ ಪದ್ಧತಿಯನ್ನು ಮೂಡಿಸುತ್ತಾನೆ.

ತಮಿಳುಪ್ರಬಂಧಗಳ ಪಾರಾಯಣವು ತಿರುಮಲೆಯಲ್ಲಿ ನಡೆಯಲು ಅಡ್ಡಿಯಿದ್ದು ದನ್ನು ಹಿಂದೆಯೇ ಹೇಳಿದ್ದೇವಲ್ಲವೆ? ಕಂದಾಡೆ-ರಾಮಾನುಜ-ಅಯ್ಯನ ಕಾಲದಲ್ಲಿ ಇದು ಕೈಗೂಡಿತು. ಕೆಳತಿರುಪತಿಯಲ್ಲಿ ಕ್ರಿಸ್ತಾಬ್ದ 1254ರಷ್ಟು ಹಿಂದೆಯೇ ತಿರುಮೋಳಿಯ ಪಾರಾಯಣವು ನಡೆಯುತ್ತಿದ್ದಿತು. ಆದರೆ ಬೆಟ್ಟದ ಮೇಲೆ ಪ್ರಬಂಧಪಾರಾಯಣವು ಸ್ಥಿರವಾಗಿ ನಿಂತದ್ದು ಕ್ರಿಸ್ತಾಬ್ದ 1468ರ ತರುವಾಯ. ಇದನ್ನು ಮಾಡಿದವನು ಕಂದಾಡೆ-ರಾಮಾನುಜ-ಅಯ್ಯನೇ ಎಂದು ಹೇಳಬಹುದು. ಅವನು ಪೊರ್‌ಭಂಡಾರದ ನಿರ್ವಾಹಕನಾಗಿ ಅಧಿಕಾರವನ್ನು ವಹಿಸಿಕೊಂಡ ತರುಣದಲ್ಲಿ, ಬೆಟ್ಟದ ಮೇಲೆ ತಿರುಮನೇರಿ ಸೀಮೆಯಲ್ಲಿ ಕೊಳದ ನಡುವೆ ಮಂಟಪವೊಂದನ್ನು ಕಟ್ಟಿಸಿ, ಪುಷ್ಪಯಾಗದ ದಿನ ಮಲಯಪ್ಪನನ್ನು ಅಲ್ಲಿಗೆ ಬಿಜಯಮಾಡಿಸುವ ಏರ್ಪಾಡು ಮಾಡಿದನು. ಈ ಸಂದರ್ಭದಲ್ಲಿ ಶ್ರೀಭಂಡಾರದಿಂದ ಗುಡಿಯ ಸೇವಕರಿಗೆ 'ತಿರುಕ್ಕೈವಳಕ್ಕಂ' ಎಂದು ಹಣವನ್ನು ಸಂಭಾವನೆಯಾಗಿ ಕೊಡುವ ವಿವರ ಈ ಏರ್ಪಾಟಿನಲ್ಲಿ ಸೇರಿದ್ದಿತು. ಸಂಭಾವನೆಗೆಂದು ಪಟ್ಟಿಮಾಡಿರುವವರಲ್ಲಿ ಪ್ರಬಂಧಪಾರಾಯಣ ಮಾಡುವವರೂ ಸೇರಿದ್ದಾರೆ. ಇವರನ್ನು 'ಅನುಸಂಧಾನ'ದವರೆಂದು ಕರೆಯಲಾಗಿದೆ. ಹೀಗೆ ಪ್ರಬಂಧ ಗಳನ್ನು ಹಾಡುವವರು ಗುಡಿಯ ಸಿಬ್ಬಂದಿಯಲ್ಲಿ ಸೇರಿದಂತಾಯಿತು. ಕಂದಾಡೆ-ರಾಮಾನುಜ-ಅಯ್ಯನು ಶಾತ್ತಾದ ಶ್ರೀವೈಷ್ಣವಶಿಷ್ಯರನ್ನು ಈ ಸೇವೆಗಾಗಿ ಸಿದ್ಧಪಡಿಸಿದ್ದನು; ಅವರಿಗೆ ಈಗ ಗುಡಿಯಲ್ಲಿ ನೇರವಾದ ಅವಕಾಶ ದೊರೆತಂತಾಯಿತು.

ಗುಡಿಯ ಸಿಬ್ಬಂದಿ


ಕ್ರಿಸ್ತಾಬ್ದ 1496ರಲ್ಲಿ ಸಿದ್ಧವಾದ ಈ ಶಾಸನದಿಂದ ಆ ಕಾಲಕ್ಕೆ ಗುಡಿಯ ಸಿಬ್ಬಂದಿ ಹೇಗಿದ್ದಿತೆಂಬುದು ತಿಳಿದುಬರುತ್ತದೆ. 'ತಿರುಕ್ಕೈವಳಕ್ಕಂ'ಗೆಂದು ಪಟ್ಟಿ ಮಾಡಿರುವುದು ಹೀಗಿದೆ—ಸ್ಥಾನತ್ತಾರರು (ಎಂದರೆ, ಗುಡಿಯ ಮೇಲ್ವಿಚಾರಕರು), ಪೊರ್-ಭಂಡಾರಂ (ಚಿನ್ನ-ಬೆಳ್ಳಿ ಒಡವೆಗಳನ್ನು ಕಾಪಿಟ್ಟುಕೊಳ್ಳುವವರು, ಸರಿಪಡಿಸುವವರು), ತಿರುಪ್ಪಣಿಪ್ಪಿಳ್ಳೈ (ಕಟ್ಟಡಗಳನ್ನು ಅಚ್ಚುಕಟ್ಟಾಗಿ ನೋಡಿಕೊಳ್ಳುವವರು), ಲಚ್ಚಿನೈಕಾರರ್ (ಪ್ರಬಂಧಗಳನ್ನು ಓದುವವರು), ಕಂಗಾಣಿಪ್ಪಾನ್ (ವಾಹನಗಳನ್ನು ಹೊರುವವರು), ಅಧಿಕಾರಿ, ಪಚ್ಚ ಡಿಕ್ಕಾರರ್, ತಿರುವೇಂಕಟಪಿಚ್ಚನ್ (ಗುಡಿಯಲ್ಲಿ ದೀಪ ಹಚ್ಚುವವರು), ವಿಣ್ಣಪ್ಪಂ ಸೇಯ್ವಾರ್ (ಬೇರೆಬೇರೆ ಉತ್ಸವಸಂದರ್ಭಗಳಲ್ಲಿ ವಿಧಿಗಳು ಆರಂಭವಾಗುವ ಮೊದಲು ವಿಜ್ಞಾಪನೆ ಮಾಡಿಕೊಳ್ಳುವವರು), ತೇವೈಯಾಳ್ (ಅಡುಗೆಯವರು), ಶಾತ್ತಾದ-ಏಕಾಂಗಿ-ಶ್ರೀವೈಷ್ಣವರು, ಶಿಂಗಮುರೈಯಾನ್ (ಅಡುಗೆಗೆ ಕಟ್ಟಿಗೆ ಒದಗಿಸುವವರು), ತಿರುವೇಟ್ಟುವಗೈ (ಡಂಗುರ-ಸಾರುವವರು), ಕೈಕ್ಕೋಳರ್ (ಊಳಿಗದವರು), ತಿರುಪ್ಪಣಿಯಾಳ್ (ಕಟ್ಟಡದ ಕೆಲಸ ಮಾಡುವವರು), ನಟ್ಟುವರ್ (ನಾಟ್ಯ ಕಲಿಸುವವರು) ಮತ್ತು ಮುಟ್ಟುಕ್ಕಾರರ್ (ತಾಳ ಹಿಡಿಯುವವರು), ಎಂಪೆರುಮಾನಡಿಯಾರ್ (ದೇವದಾಸಿಯರು), ದೋಲ-ನಾಗಸ್ವರಕಾರರ್ (ಓಲಗದವರು, ಡೋಲು ಬಾರಿಸುವವರು, ನಾಗಸ್ವರ ನುಡಿಸುವವರು), ಪಾಡುವಾರ್ (ಹಾಡುವವರು), ಪಣಿಮುರೈ (ಚಿನ್ನ-ಬೆಳ್ಳಿ ಕೆಲಸ ಮಾಡುವ, ಕೆತ್ತನೆ ಕೆಲಸ ಮಾಡುವ ಕುಶಲಕರ್ಮಿಗಳು), ತಿರುವೀಧಿಮುನೇಯರ್ (ಬೀದಿ ಗುಡಿಸುವವರು), ಕುವಯರ್ (ಮಡಕೆಗಳನ್ನು ಮಾಡುವವರು), ಶಿಪ್ಪಿಯರ್ (ಶಿಲ್ಪಿಗಳು), ವಾಶಲ್-ಕೊಲ್ಲರ್ (ಬಾಗಿಲು ಕಾಯುವವರು), ಉವಚ್ಚನ್ (ಸಣ್ಣ ಮೃದಂಗ ಬಾರಿಸುವವರು) ಇತ್ಯಾದಿ. ಈ ಪಟ್ಟಿಯಲ್ಲಿ ಅರ್ಚಕರನ್ನು ಸೇರಿಸದೆ ಇರುವುದು ಸ್ವಾರಸ್ಯವಾಗಿದೆ.

ತಿರುಪತಿಯವರು

ಕಂದಾಡೆ-ರಾಮಾನುಜ-ಅಯ್ಯನು ತಿರುಮಲೆಯಲ್ಲಿ ತಿರುಪತಿಯ ಶ್ರೀವೈಷ್ಣವರ ಪ್ರಭಾವವನ್ನು ಮೂಡಿಸಲು ಕೈಗೊಂಡ ಕೆಲಸಗಳಲ್ಲಿ ಅವನಿಗೆ ನೆರವಾದವರು ಶಠಕೋಪದಾಸರ್-ನರಸಿಂಹರಾಯ-ಮುದಲಿಯಾರ್, ಕುಮಾರ-ತಾತಯ್ಯಂಗಾರ್ ಮತ್ತು ಪಶಿಂಡಿ-ವೇಂಕಟತ್ತುರೈವಾರ್. ನರಸಿಂಹರಾಯ ಮುದಲಿಯಾರ್ ಎಂಬುವರು ತಿರುಪತಿಯಲ್ಲಿ ವಾಸಮಾಡುತ್ತಿದ್ದ ಶ್ರೀವೈಷ್ಣವರು; ಇವರ ತಂದೆ ಶಠಕೋಪದಾಸರು ತಿರುಮಲೆಯ ಗುಡಿಯ ನಿರ್ವಾಹಕರಲ್ಲಿ ಒಬ್ಬರಾಗಿದ್ದ ತಿರುಕ್ಕಲಿಕನ್ಯದಾಸರ ತಮ್ಮ. ತಿರುಕ್ಕಲಿಕನ್ಯದಾಸರ ಹಿರಿಯರು ಮುಮ್ಮಡಿ ರಾಜರಾಜನ ಕಾಲದಲ್ಲಿ ಗುಡಿಯ

ನಿರ್ವಾಹಕರಾಗಿದ್ದ ಕೊಲ್ಲಿಕಾವಲಿದಾಸರು. ಹೀಗೆ ಅವರಿಗೆ ಮನೆತನದಲ್ಲಿಯೇ ಗುಡಿಯೊಡನೆ ನಂಟು ಬೆಳೆದಿದ್ದಿತು.

ನರಸಿಂಹರಾಯ ಮುದಲಿಯಾರು ಮಾಡಿದ ಹಲವಾರು ದಾನಧರ್ಮಗಳು ಬಹುವಾಗಿ ತಿರುಪತಿಯ ಗೋವಿಂದರಾಜನ ಗುಡಿಗೇ ಸಂದುವು. ತಿರುಪತಿಯಲ್ಲಿ ಇವರು ತಿರುಮಂಗೈ-ಆಳ್ವಾರರಿಗೆ ಸನ್ನಿಧಿಯೊಂದನ್ನು ಏರ್ಪಡಿಸಿ, ಪ್ರತಿವರ್ಷವೂ ಈ ಆಳ್ವಾರರ ಮತ್ತು ರಾಮಾನುಜರ ತಿರುನಕ್ಷತ್ರದಂದು 'ಶಾತ್ತುಮುರೈ'-ಉತ್ಸವವನ್ನು ನಡೆಸಲು ವ್ಯವಸ್ಥೆ ಮಾಡಿದರು. ಕ್ರಿಸ್ತಾಬ್ದ 1476ರಲ್ಲಿ ಹನ್ನೆರಡು ಮಂದಿ ಆಳ್ವಾರರ ತಿರುನಕ್ಷತ್ರಗಳಲ್ಲಿ ವೇಂಕಟೇಶನಿಗೂ ಬೆಟ್ಟದ ಗುಡಿಯಲ್ಲಿರುವ ರಾಮಾನುಜರಿಗೂ ಕೆಲವು ನಿಮಂದನಗಳನ್ನು ಏರ್ಪಡಿಸಿ ಆಳ್ವಾರರ ಪಾಶುರಗಳನ್ನು ಅವರಿಗೆ ಕೇಳಿಸುವ ಸಲುವಾಗಿ ಗುಡಿಯ ಶ್ರೀಭಂಡಾರಕ್ಕೆ ಐದುಸಾವಿರದ ಇನ್ನೂರು ಪಣಗಳನ್ನು ಸಲ್ಲಿಸಿದರು. ತಿರುಪತಿಯಲ್ಲಿ ರಾಮನ ಗುಡಿಯೊಂದನ್ನು ಕಟ್ಟಿಸಿ ಅಲ್ಲಿ ರಾಮಾನುಜರ ಮೂರ್ತಿಯನ್ನು ಪ್ರತಿಷ್ಠೆ ಮಾಡಿಸಿದರು. ತಿರುಪತಿಯಲ್ಲಿರುವ ರಾಮಾನುಜರ ಸನ್ನಿಧಿಗೆ ದಿನವೂ ತಳಿಗೆಯೊಂದನ್ನು ಸಮರ್ಪಿಸಲೆಂದು ಒಂದುಸಾವಿರದ ಇನ್ನೂರು ಪಣಗಳನ್ನು ಬೆಟ್ಟದ ಗುಡಿಗೆ ಸಲ್ಲಿಸಿದರು. ಅವರ ಕೆಲವು ಧರ್ಮಗಳು 'ತಿರುಪತಿಯ ರಾಮಾನುಜಕೂಟದ ನಿರ್ವಾಹಕ ಕಂದಾಡೆ-ರಾಮಾನುಜ-ಅಯ್ಯಂಗಾರ'ನ ಹೆಸರಿನಲ್ಲೇ ಇವೆ; ತಿರುಪತಿಯ ಗೋವಿಂದರಾಜನಿಗೆ ದಿನವೂ ಕಂದಾಡೆ–ಅಯ್ಯಂಗಾರ ಹೆಸರಿನಲ್ಲಿ ಒಂದು ಅತಿರಸಪ್ಪಡಿ ಒಪ್ಪಿಸುವ ಏರ್ಪಾಟು ಮಾಡಿದನು.



ತಾಳ್ಳಪಾಕಂ ಆರ (ಸಂಕೀರ್ತನ-ಭಂಡಾರ)

'ತಿರುವೇಂಕಟಮಾಹಾತ್ಮ್ಯ'

ಕುಮಾರ-ತಾತಯ್ಯಂಗಾರ್ ರಾಮಾನುಜರ ಸೋದರಮಾವ ತಿರುಮಲೆ-ನಂಬಿಯ ವಂಶದವನು; ಶೊಟ್ಟೈ-ತಿರುಮಲೆ-ನಂಬಿ (ತಿರುವೇಂಕಟ-ತಾತಯ್ಯಂಗಾರ್) ಎಂಬುವವರ ಮಗ; ತೋಳಪ್ಪರ್ ಅಯ್ಯಂಗಾರೆಂಬ ಪ್ರಸಿದ್ಧ ವ್ಯಕ್ತಿಯ ತಮ್ಮ. ಇವನ ಗೋತ್ರ ಶಠಮರ್ಷಣವೆಂದೂ ಸೂತ್ರ ಆಪಸ್ತಂಬವೆಂದೂ ವಿವರಗಳಿವೆ. ಇವನೂ ತಿರುಪತಿಯಲ್ಲೇ ವಾಸಮಾಡುತ್ತಿದ್ದನು. ಕ್ರಿಸ್ತಾಬ್ದ 1475ರ ಶಾಸನವೊಂದರಿಂದ, ಇವನು ಕಾಕತೀಯರಾಜ್ಯವನ್ನು ಕಟ್ಟಿ ಪಾಂಡ್ಯರಾಜನನ್ನು ಸೋಲಿಸಿ ಹತ್ತಾರು ಬಿರುದುಗಳನ್ನು ಪಡೆದುಕೊಂಡ ನರಸಿಂಹನಾಯಕ (ನರಸಿಂಹದೇವ) ಮತ್ತು ಅವನ ತಮ್ಮ ಕೇಸಯನಾಯಕ—ಇವರಿಬ್ಬರ ಆಚಾರ್ಯನೆಂದು ತಿಳಿದುಬರುತ್ತದೆ. ಬೆಟ್ಟದ ಗುಡಿಯ ಮೊದಲ ಗೋಪುರದ ಉತ್ತರಕ್ಕೆ ಪ್ರಾಕಾರದ ಮೇಲೆ ಮೂಡಿಕೊಂಡಿರುವ ನರಸಿಂಹನಾಯಕನ ಶಾಸನದಲ್ಲಿ ಬೆಟ್ಟದ ದೇವರನ್ನು 'ವೃಷಾಚಲಪತಿ'ಯೆಂದು ಕರೆಯಲಾಗಿದೆ. ಈ ದೇವರಿಗೆ ಹೊಸ ಹೆಸರು ಇದು. 'ವೃಷ'ವೆಂದರೆ ಧರ್ಮ. ಧರ್ಮದೇವತೆಯು ಈ ಬೆಟ್ಟದ ಮೇಲೆ ತನ್ನ ಶ್ರೇಯಸ್ಸಿಗಾಗಿ ತಪಸ್ಸುಮಾಡಿದಳೆಂದು ಈ ಬೆಟ್ಟಕ್ಕೆ ವೃಷಾಚಲವೆಂದು ಹೆಸರು ಬಂದಿತೆಂದು 'ವೇಂಕಟಾಚಲಮಾಹಾತ್ಮ್ಯ'ಯಲ್ಲಿ ಹೇಳಿದೆ; ಇಡೀ ಬೆಟ್ಟಕ್ಕೆ ಕೃತಯುಗದಲ್ಲಿ ಈ ಹೆಸರಿದ್ದಿತೆಂದು ಇಲ್ಲಿ ಬರುವ ವಿವರ.

ಈ 'ವೇಂಕಟಾಚಲಮಾಹಾತ್ಮ್ಯ'ಯನ್ನು ಬರೆದವನೂ ತಿರುಪತಿಯ ಶ್ರೀವೈಷ್ಣವನೇ; ಕಂದಾಡೆ-ರಾಮಾನುಜ-ಅಯ್ಯನ ಮತ್ತು ಕುಮಾರ-ತಾತಯ್ಯಂಗಾರನ ಗೆಳೆಯ; ಪಶಿಂಡಿ ವೇಂಕಟತ್ತುರೈವಾರ್. ಇವನಿಗೆ ಜೀಯರ್-ರಾಮಾನುಜ-ಅಯ್ಯನ್ ಎಂದೂ ಹೆಸರಿದ್ದಿತು. ಇವನು ತಿರುಪತಿಯಲ್ಲೂ ತಿರುಮಲೆಯ ಮೇಲೂ ಇರುತ್ತಿದ್ದ ಪಂಡಿತನೆಂದು ತಿಳಿದುಬರುತ್ತದೆ. ರಸಿಕನೂ ಆಗಿದ್ದಿರಬೇಕು; ಆಕಾಶಗಂಗೆಯ ಬಳಿ (ಗುಡಿಗೆ ಮೂರು ಮೈಲಿ ದೂರದಲ್ಲಿ) ವನಭೋಜನಕ್ಕೆ ವ್ಯವಸ್ಥೆಮಾಡಿದ ಶಾಸನವೊಂದು ಅವನ ಹೆಸರಿನಲ್ಲಿದೆ. ಇದರ ಸಂದರ್ಭ ಆತನೇ ಏರ್ಪಡಿಸಿದ ಅಧ್ಯಯನೋತ್ಸವವಾದ 'ತಣ್ಣೇರ್ಮುದು' ಎಂಬ ಉತ್ಸವ. ಆಗ ದೇವರಿಗೆ ತಿರುಪ್ಪಾವಡೈ, ಅಪ್ಪಂ ಮೊದಲಾದ ಭಕ್ಷ್ಯ-ಭೋಜ್ಯಗಳನ್ನು ಒಪ್ಪಿಸಲು ಗುಡಿಗೆ ಎರಡು ಸಾವಿರ ಪಣಗಳನ್ನು ಈತ ದಾನಮಾಡಿದ್ದಾನೆ.

ಮತ್ತು ಇದೇ ಸಂದರ್ಭದಲ್ಲಿ ತನ್ನದೇ ಕೃತಿಯಾದ 'ತಿರುವೇಂಕಟಮಾಹಾತ್ಮ್ಯ' ('ವೇಂಕಟಾಚಲಮಾಹಾತ್ಮ್ಯ')ಯನ್ನು ದೇವರ ಅನುಮತಿಯಿಂದ ಓದಿಸಬೇಕೆಂದೂ ಈ ಶಾಸನದ ಒಂದು ವಿಧಿ. ಎಂದರೆ ಈ ಗ್ರಂಥವು ಕ್ರಿಸ್ತಾಬ್ದ 1491ರ ಮೊದಲೇ ಸಿದ್ಧವಾದುದು. ಈ ಗ್ರಂಥವೇನೋ ಮೂಲದಲ್ಲಿ ಉಳಿದುಬಂದಿಲ್ಲ; ಆದರೆ ಶಾಸನದಲ್ಲಿರುವ ಒಕ್ಕಣೆಯನ್ನು ನೋಡಿದರೆ, ಹಲವು ಪುರಾಣಕಥೆಗಳ ಸಂಕಲನವೆಂದು ತೋರುತ್ತದೆ. ಈಗ ಬೆಟ್ಟದ ದೇವರನ್ನು ಕುರಿತು ಬಳಕೆಯಲ್ಲಿರುವ ಕಥೆಗಳಿಗೆಲ್ಲ ಈ 'ತಿರುವೇಂಕಟಮಾಹಾತ್ಮ್ಯ'ಯೇ ಆಕರವೆಂದು ಹೇಳಬಹುದು. ವೇಂಗಡದ ದೇವರು

ಪುರಾಣಪ್ರಸಿದ್ಧನಾದ ಅರ್ಚಾವತಾರವೆಂದು ಸಾಧಿಸಿ, ಜನರ ಒಲವನ್ನು ಶ್ರೀವೈಷ್ಣವ ಸಂಪ್ರದಾಯದ ಕಡೆ ತಿರುಗಿಸುವುದು ಈ ಗ್ರಂಥದ ಉದ್ದೇಶವಾಗಿದ್ದಿತೆಂದು ಹೇಳಬಹುದು.

ಬೆಟ್ಟಕ್ಕೆ 'ವೃಷಾಚಲ'ವೆನ್ನುವ ಹೆಸರಿನಂತೆಯೇ 'ಶೇಷಾಚಲ'ವೆನ್ನುವ ಇನ್ನೊಂದು ಹೆಸರೂ ಈ ಗ್ರಂಥದಿಂದಲೇ ಬಳಕೆಗೆ ಬಂದಿತು. ಇದು ದ್ವಾಪರಯುಗದ ಹೆಸರಂತೆ. ಆದಿಶೇಷನಿಗೂ ವಾಯುವಿಗೂ ಸೆಣಸಾಟ ಒದಗಿದಾಗ ಮೇರುಪರ್ವತವನ್ನು ಹಾರಿಸಿ ಕೊಂಡು ಹೋಗಲು ವಾಯುವು ಹವಣಿಸಲು ಆದಿಶೇಷನು ಅದರ ಸುತ್ತ ಸುತ್ತಿಕೊಂಡನಂತೆ; ಒಂದು ಶಿಖರ ವಾಯುವಿನ ಬೀಸಾಟಕ್ಕೆ ಸಿಕ್ಕು ಭೂಮಿಯ ಮೇಲೆ ಬಿದ್ದು ವೇಂಗಡಬೆಟ್ಟವಾಯಿತಂತೆ. 'ಶೇಷಾಚಲ' ಅಥವಾ 'ಶೇಷಾದ್ರಿ' ಎನ್ನುವುದು ಸಾಳುವ-ನರಸಿಂಹನ ಒಂದು ಶಾಸನದಲ್ಲಿ ಬರುತ್ತದೆ. ಬೆಟ್ಟವನ್ನು ಹತ್ತಿ ಹೋಗುವಾಗ ಅಲಿಪಿರಿಯ ಬಳಿಯಿರುವ ಹಳೆಯ ಗುಡಿಯೊಂದರಲ್ಲಿ ಕಾಣುವ ಶಾಸನ ಕ್ರಿಸ್ತಾಬ್ದ 1485ರದ್ದು. "ಗುಂಡ ಕ್ಷಿತಿಪತಿಯ ತನಯನಾದ ನೃಸಿಂಹ ಸಾರ್ವಭೌಮನು ಶೇಷಾದ್ರಿಯನ್ನು ಹತ್ತುವ ದಾರಿಯಲ್ಲಿ (ಎಂದರೆ, ಸೋಪಾನ ಮಾರ್ಗದಲ್ಲಿ, **ಶೇಷಾದ್ಯಾರೋಹವೀಥ್ಯಾಂ**) ಶ್ರೀನೃಸಿಂಹಪ್ರತಿಷ್ಠೆಯನ್ನು ಮಾಡಿದನು" ಎಂದು ಸಂಸ್ಕೃತದಲ್ಲಿ ಸ್ರಗ್ಧರಾವೃತ್ತದ ಶ್ಲೋಕವು ತಿಳಿಸುತ್ತದೆ. ಇದನ್ನು ಈಗ 'ದೋವ-ಲಕ್ಷ್ಮೀ ನರಸಿಂಹ'ನೆಂದು ಕರೆಯುತ್ತಾರೆ.

ಬೆಟ್ಟದ ಮೇಲೆ ನರಸಿಂಹನ ಪೂಜೆಯ ಪ್ರಸ್ತಾಪ ಬಂದಿರುವುದು ಇದೇ ಮೊದಲು. ಇದಾದ ಎಂಟು ವರ್ಷಗಳ ಮೇಲೆ (ಎಂದರೆ, 1493ರಲ್ಲಿ) ಬೆಟ್ಟದ ಗುಡಿಯ ಮೊದಲಾವರಣದೊಳಗೇ ನರಸಿಂಹನ ಸನ್ನಿಧಿಯಿರುವುದರ ಉಲ್ಲೇಖ ಬರುತ್ತದೆ. ಕುಣಕ್ಕುಂಟೆಯ ದಾತ್ತಿರಾಜನ ಮಗ ತಮ್ಮಯ್ಯನೆನ್ನುವ ಬ್ರಾಹ್ಮಣನು 'ವೇಂಗಡದೊಡೆಯನ ಗುಡಿಯಲ್ಲಿರುವ ಅಳಗಿಯ ಸಿಂಗರಿಗೆ' (**ತಿರುವೇಂಗಡ ಮುಡೈಯಾನ್ ಸನ್ನಿಧಿಯಿಲ್ ಅಳಗಿಯಸಿಂಗರ್ಕು**) ಧನುರ್ಮಾಸದಲ್ಲಿ (ತಿರುಪ್ಪಳ್ಳಿ ಎಳುಚ್ಚಿ) ಮೂವತ್ತು ತಿರುಪ್ಪೋನಕಗಳನ್ನೂ, ಇನ್ನಿತರ ಹತ್ತು ದಿನಗಳಲ್ಲಿ (ಶ್ರೀಜಯಂತಿ, ವಸಂತಪೂರ್ಣಿಮಾ, ರಾಮನವಮಿ, ಏಳು ತಿರುಕ್ಕೋಡಿ ತಿರುನಾಳುಗಳಲ್ಲಿ ಏಳನೆಯ ದಿನಗಳಂದು) ಹತ್ತು ಅತಿರಸಪಡಿಗಳನ್ನೂ ಸಲ್ಲಿಸುವ ಏರ್ಪಾಟು ಮಾಡುತ್ತಾನೆ. ಗುಡಿಯೊಳಗಿರುವ ಮೂರ್ತಿ ಯೋಗಾನರಸಿಂಹ; ಸಾಳುವ-ನರಸಿಂಹ ಪ್ರತಿಷ್ಠೆ ಮಾಡಿಸಿದುದು ಲಕ್ಷ್ಮೀನರಸಿಂಹ. ತಮ್ಮಯ್ಯನ ಶಾಸನ ತಮಿಳಿನಲ್ಲಿರುವುದರಿಂದ ಮೂರ್ತಿಯನ್ನು ತಮಿಳುಹೆಸರಿನಲ್ಲಿ ಅಳಗಿಯ ಸಿಂಗರ್ ಎಂದು ಕರೆಯಲಾಗಿದೆ; ಸಾಳುವನ ಶಾಸನ ಸಂಸ್ಕೃತದಲ್ಲಿರುವುದರಿಂದ 'ಶ್ರೀನೃಸಿಂಹ' ಎಂದು ಕರೆಯಲಾಗಿದೆ.

ತಮ್ಮಯ್ಯನ ಮೇಲಿನ ಶಾಸನದಲ್ಲಿ ಅವನ ಆಚಾರ್ಯನೆಂದು ವಣ್-ಶಠ ಕೋಪ-ಜೀಯರನ್ನು ಹೆಸರಿಸಲಾಗಿದೆ. ಈ ಜೀಯರು ಕನ್ನಡನಾಡಿನ ಮೇಲುಕೋಟೆಯಲ್ಲಿ ಹುಟ್ಟಿ, ಕಾಂಚೀಪುರದಲ್ಲಿ ಓದಿ, ಅಹೋಬಲದಲ್ಲಿ ಮಠವನ್ನು ಸ್ಥಾಪಿಸಿದವರು; ಇವರ ವಿಚಾರ ಹಿಂದೆಯೇ ಬಂದಿದೆ. ಅಹೋಬಲದ ದೇವರು ನರಸಿಂಹ.

ವಣ್-ಶಠಕೋಪ-ಜೀಯರು ತಿರುಪತಿಯಲ್ಲಿ ಕೆಲಕಾಲ ನೆಲೆಸಿದ್ದರು. ಅಲ್ಲಿ ಶ್ರೀವೈಷ್ಣವರ ನಡುವೆ ಅವರ ಇಷ್ಟದೈವವಾದ ನರಸಿಂಹನ ಪೂಜೆ ಬಳಕೆಗೆ ಬಂದಿತು. ಅಲ್ಲಿಂದ ನರಸಿಂಹನು ಕ್ರಿಸ್ತಾಬ್ದ 1485ರಲ್ಲಿ ಸಾಳುವ ನರಸಿಂಹನ ಕೈಹಿಡಿದು ಬೆಟ್ಟದ ಮೆಟ್ಟಲುಗಳನ್ನೇರತೊಡಗಿ, ಸುಮಾರು ಎಂಟು ವರ್ಷಗಳ ಮೇಲೆ ಬೆಟ್ಟದ ಮೇಲೆ ಗುಡಿಯನ್ನು ಸೇರಿ ಕುಳಿತನು.



ಏಳು

ತಾಳ್ಳಪಾಕದವರು ಸಲ್ಲಿಸಿದ ಸೇವೆ

ಅಣ್ಣಮಾಚಾರ್ಯರು

ಸಾಳುವ-ನರಸಿಂಹನು ಬೆಟ್ಟದ ಮೇಲೆ ಮಾಡಿದ ಹಲವು ಒಳ್ಳೆಯ ಕೆಲಸಗಳಲ್ಲಿ ಒಂದು ಎಂದರೆ ತಾಳ್ಳಪಾಕದ ಕವಿಗಳನ್ನು ಅಲ್ಲಿಗೆ ಕರೆಸಿಕೊಂಡುದು. ಈ ಮನೆತನದ ಕವಿಗಳು ನಾಲ್ಕು ತಲೆಮಾರುಗಳವರೆಗೆ ಬೆಟ್ಟದ ಗುಡಿಗೆ ಹಲವಾರು ದಾನ-ಧರ್ಮ ಗಳನ್ನು ನಡೆಸಿರುವುದಲ್ಲದೆ, ಆ ದೇವರ ವಿಚಾರವಾಗಿ ಸೊಗಸಾದ ಮತ್ತು ವಿಪುಲವಾದ ಭಕ್ತಿಸಾಹಿತ್ಯವನ್ನು ಸಿದ್ಧಪಡಿಸಿದ್ದಾರೆ. ಗುಡಿಯ ಆಡಳಿತದ ಗೊಡವೆಗೆ ಹೋಗದೆ, ತಮ್ಮ ಪಾಡಿಗೆ ತಾವು ದೇವರಿಗೆ ಸಂಕೀರ್ತನಸೇವೆಯನ್ನು ಸಲ್ಲಿಸುತ್ತ ಬಾಳನ್ನು ಕಳೆದವರು ಅವರು. ಅವರಲ್ಲಿ ಹಿರಿಯರಾದ ಅಣ್ಣಮಾಚಾರ್ಯರು ಸಾಳುವ-ನರಸಿಂಹನ ವಿಶ್ವಾಸ ವನ್ನು ಗಳಿಸಿಕೊಂಡಿದ್ದವರು; ಕಂದಾಡೆ-ರಾಮಾನುಜ-ಅಯ್ಯನ ಕಾರುಬಾರು ಬೆಟ್ಟದ ಮೇಲೆ ನಡೆಯುತ್ತಿದ್ದಾಗ ಅಲ್ಲಿಯೇ ಇದ್ದವರು. ಆದರೂ ಯಾವ ಶಾಸನದಲ್ಲಿಯೂ ಅವರ ಉಲ್ಲೇಖ ಬರುವುದಿಲ್ಲ. ಎಂದರೆ, ಅವರ ಕೈಂಕರ್ಯ ಅಷ್ಟು ಗುಟ್ಟಾಗಿ ನಡೆಯಿತು. ಗುಡಿಯೊಂದಿಗೆ ಅವರ ಮನೆತನದ ನಂಟು ಕ್ರಿಸ್ತಾಬ್ದ 1432ರ ಸುಮಾರಿಗೆ ಶುರುವಾದುದು ಅವರ ಮರಿಮಗ ತಿರುವೆಂಗಳಪ್ಪನವರೆಗೆ, ಸುಮಾರು 1554ರ ವರೆಗೆ, ನೂರಿಪ್ಪತ್ತು ವರ್ಷಗಳಿಗೆ ಮೀರಿ ಸಾಗಿಬಂದಿತು.

ವೇಂಗಡದೊಡೆಯನ ಕಿವಿಗೆ ಆಳ್ವಾರರ ಪ್ರಬಂಧಗಳು ಬೀಳುವ ಮೊದಲೇ ಅಣ್ಣಮಾಚಾರ್ಯರ ಕೀರ್ತನೆಗಳು ಬಿದ್ದುವು. ಪ್ರಬಂಧಗಳಿಗೆ ಆ ಗುಡಿಯಲ್ಲಿ ನೆಲೆ ದೊರಕುವ ಮೊದಲೇ ಇವರ ಕೀರ್ತನೆಗಳಿಗೆ ಆಶ್ರಯ ದೊರಕಿತು. ಗುಡಿಯ ಮೊದಲ ಆವರಣದಲ್ಲಿ ಈಗ ಗರ್ಭಗುಡಿಯನ್ನು ಅಡಗಿಸಿಕೊಂಡಿರುವ ಕಟ್ಟಡಕ್ಕೆ ಹೊಂದಿ ಕೊಂಡಂತೆಯೆ, ತಿರುಮಹಾಮಣಿಮಂಟಪದಲ್ಲಿರುವ ಕೊಪ್ಪರದ (ಹುಂಡಿ) ಎದುರು 'ಸಂಕೀರ್ತನ-ಭಂಡಾರ'ವೆನಿಸಿಕೊಳ್ಳುವ ಕೋಣೆಯಿದೆ. ಇದನ್ನು 'ತಾಳ್ಳಪಾಕಂ-ಅರ' ಎಂದೂ 'ತಾಳ್ಳಪಾಕಂವಾರಿ ಕೊಟ್ಟು' ಎಂದೂ ಜನರು ಕರೆಯುತ್ತಾರೆ. ಇದಕ್ಕೆ ಕಾರಣ, 'ಸಂಕೀರ್ತನ-ಭಂಡಾರ'ದಲ್ಲಿ ತಾಳ್ಳಪಾಕಕವಿಗಳ ಕೀರ್ತನೆಗಳನ್ನೆಲ್ಲ ಕಾಪಾಡಿಕೊಂಡು ಬಂದಿರುವುದು. ಸುಮಾರು ಎರಡುಸಾವಿರ ತಾಮ್ರದ ಹಲಗೆಗಳ ಮೇಲೆ ಈ ಕವಿಗಳ ಕೃತಿಗಳನ್ನು ಕಡೆಯಿಸಿ ಇಲ್ಲಿ ಜೋಪಾನಪಡಿಸಿಕೊಂಡಿದ್ದಾರೆ. ತಾಮ್ರದ ಈ ಹಸ್ತಪ್ರತಿಗಳು ಅಣ್ಣಮಾಚಾರ್ಯರ ಮಗನ ಕಾಲದಲ್ಲಿ ಸಿದ್ಧವಾದುವೆಂದು ತಿಳಿದು ಬರುತ್ತದೆ.

'ಸಂಕೀರ್ತನ-ಭಂಡಾರ'ವು ಕ್ರಿಸ್ತಾಬ್ದ 1452ರ ಸುಮಾರಿಗೆ ಮೂಡಿಕೊಂಡು ಬಂದಿತು. ದೇವರ ಮಗ್ಗುಲಲ್ಲೇ ತಾಳ್ಲಪಾಕದವರ ಕೃತಿಗಳು ಇರತೊಡಗಿದುದು ಆ ಕಾಲದಿಂದ. ಇದೇ ಕವಿಗಳ ಇಂಥವೇ ತಾಮ್ರಗ್ರಂಥಗಳನ್ನು ಅಹೋಬಲದ ನರಸಿಂಹಸ್ವಾಮಿಯ ಗುಡಿಯಲ್ಲಿಯೂ ಕಾಪಾಡಿಕೊಂಡು ಬಂದಿದ್ದಾರೆ. ಆ ಗ್ರಂಥಗಳಲ್ಲಿಯೂ ವೇಂಗಡದ ದೇವರ ಅಂಕಿತವೇ ಕಾಣಸಿಗುತ್ತದೆ.



ಅಣ್ಣಮಾಚಾರ್ಯರು

ತೊಡಗಿದಮೇಲೆ ದಿನವೂ ಮುಂಜಾನೆ ಸ್ವಾಮಿಪುಷ್ಕರಿಣಿಯಲ್ಲಿ ಮಿಂದು, ಬಟ್ಟೆ ಒಣಗುವ ಮೊದಲೇ ಕೀರ್ತನೆಗಳನ್ನು ರಚಿಸಿ, ಗುಡಿಗೆ ಬಂದು ದೇವರ ಮುಂದೆ ಆ ಕೀರ್ತನೆಗಳನ್ನು ಹಾಡಿ ಒಪ್ಪಿಸುವುದು ಅವರ ಪರಿಪಾಟ. ಹೀಗೆ ಅವರಿಂದ ಹರಿದುಬಂದು ಕೀರ್ತನೆಗಳ ಸಂಖ್ಯೆ ಮೂವತ್ತೆರಡು ಸಾವಿರವಂತೆ! ಆದರೆ ಈಗ ನಮಗೆ ದೊರಕಿರುವುದು ಸುಮಾರು ಹನ್ನೆರಡು ಸಾವಿರವಷ್ಟೆ.

ಇವಲ್ಲದೆ ದ್ವಿಪದಿರಾಮಾಯಣವನ್ನೂ, ತೆಲುಗುಭಾಷೆಯಲ್ಲಿ ಹನ್ನೆರಡು ಶತಕಗಳನ್ನೂ, ಸಂಸ್ಕೃತದಲ್ಲಿ 'ವೇಂಕಟಾದ್ರಿಮಾಹಾತ್ಮ್ಯ'ವನ್ನೂ ರಚಿಸಿದ್ದಾರೆಂದು ಪ್ರತೀತಿ. ಗುಡಿಯ 'ಸಂಕೀರ್ತನಭಂಡಾರ'ದಲ್ಲಿ ಅವರ 'ಅಧ್ಯಾತ್ಮಸಂಕೀರ್ತನಲು', 'ಶೃಂಗಾರ ಸಂಕೀರ್ತನಲು' ಮತ್ತು 'ಶೃಂಗಾರಮಂಜರಿ' ಎಂಬ ಮೂರು ಸಂಕಲನಗಳು ಸೇರಿ ಬಂದಿವೆ. ಅವರ ದ್ವಿಪದಿರಾಮಾಯಣ ಈಗ ದೊರೆಯುವುದಿಲ್ಲ ; ತೆಲುಗುಭಾಷೆಯ ಹನ್ನೆರಡು ಶತಕಗಳಲ್ಲಿ ಒಂದು ಶತಕ ಮಟ್ಟಿಗೆ ಉಳಿದುಬಂದಿದೆ. ಸಂಸ್ಕೃತದಲ್ಲಿ 'ಸಂಕೀರ್ತನಲಕ್ಷಣ' ಎಂಬ ಗ್ರಂಥವನ್ನು ಅವರು ಬರೆದಿದ್ದರೆಂದೂ ಅವರ ಮೊಮ್ಮಗ ಚಿನ್ನತಿರುಮಲಯ್ಯನು ಇದನ್ನು ತೆಲುಗುಭಾಷೆಯಲ್ಲಿ ಅನುವಾದ ಮಾಡಿದನೆಂದೂ ತಿಳಿದುಬರುತ್ತದೆ. ಅವರ 'ವೇಂಕಟೇಶ್ವರಶತಕಮು' (ಶೃಂಗಾರವೃತ್ತಪದ್ಯಾಲಶತಕಮು) ಎಂಬ ಕೃತಿಯಲ್ಲಿ ವೇಂಗಡದೊಡೆಯನ ಮತ್ತು ಅಲರ್‌ಮೇಲ್‌ಮಂಗತ್ತಾಯಾರರ (ಎಂದರೆ, ಪದ್ಮಾವತಿಯ) ಪ್ರೇಮವ್ಯಾಪಾರವನ್ನು ಬಣ್ಣಿಸಿದ್ದಾರೆ. 'ಶೃಂಗಾರಸಂಕೀರ್ತನ'ಗಳಲ್ಲಿ ವೇಂಗಡದೊಡೆಯನೇ ನಾಯಕನೆಂದೂ, ಕವಿಯು ತನ್ನನ್ನು ನಾಯಕಿಯೆಂದೂ ಭಾವಿಸಿಕೊಂಡು ಇಬ್ಬರ ನಡುವೆ ನಡೆಯಬೇಕಾದ ಪ್ರೇಮವ್ಯವಹಾರಗಳನ್ನು ನೆಪಮಾಡಿಕೊಂಡು ತನ್ನಲ್ಲಿ ದೇವರ ಅನುಗ್ರಹವು ಮೂಡಿಬರಬೇಕೆಂದು ಕಾತರಪಡುತ್ತಾರೆ. 'ತಿರುವೇಂಕಟಪತಿ'ಯನ್ನು ಅರಸದ ಬದುಕು, ವರಿಸದ ಬದುಕು, ಬರಡಾದುದು; ಅವನನ್ನು ಅರಸಿ, ವರಿಸಿ ಸೇವೆಮಾಡುವುದೇ ಬದುಕಿನ ಗುರಿಯಾಗಬೇಕು. ಇದು ಅವರ 'ಶೃಂಗಾರಸಂಕೀರ್ತನ'ಗಳ ತಾತ್ಪರ್ಯ. 'ಅಪ್ಪನ' (ಎಂದರೆ, ವೇಂಗಡದೊಡೆಯನ) ಕರುಣೆ ತನ್ನ ಮೇಲೆ ಕಾಣಿಸಿಕೊಂಡು ತಾನು ಧನ್ಯನಾದೆನೆಂದು 'ಶೃಂಗಾರಮಂಜರಿ'ಯಲ್ಲಿ ಹೇಳಿಕೊಂಡಿದ್ದಾರೆ. ಅಣ್ಣಮಾಚಾರ್ಯರ ಕೃತಿಗಳಲ್ಲಿ ವೇಂಗಡದ ದೇವರ ಅಂಕಿತವೇ ಕಾಣಸಿಗುತ್ತದೆ.

ಅವರ ಕಾಲದಲ್ಲಿ ಬೆಟ್ಟದ ದೇವರು ವಿಷ್ಣುವೋ, ಶಿವನೋ, ಶಕ್ತಿಯೋ, ಭೈರವನೋ, ವೀರಭದ್ರನೋ, ಜಿನನೋ, ಬೋಧಿಸತ್ತ್ವನೋ ಎಂದು ವಾದವಿವಾದಗಳಿದ್ದಂತೆ ತೋರುತ್ತದೆ. ಇದನ್ನು ಅವರು ತಮ್ಮೊಂದು ಸಂಕೀರ್ತನದಲ್ಲಿ (ಬೌಳಿರಾಗ) ಪ್ರಸ್ತಾಪಿಸಿದ್ದಾರೆ. ಯಾರೇನೆಂದುಕೊಂಡರೆ ಅವನೇ ಈ ದೈವ. ಈ ವೇಂಕಟಪತಿಯನ್ನು ವಿಷ್ಣು, ಬ್ರಹ್ಮ, ಶಿವ, ಆದಿಭೈರವ, ಶಕ್ತಿ ಎಂದಷ್ಟೇ ತಿಳಿಯುವವರು ಅಲ್ಪಬುದ್ಧಿಯವರು. ದಿಟವಾಗಿ ಅವನು ಪರತತ್ತ್ವ ಎಂಬುದು ಅವರ ನಿಲುವು

ಎಂತಮಾತ್ರಮುನನೆವ್ವರುದಲಂಚಿನ
ಅಂತಮಾತ್ರಮೇ ನೀವು
ಅಂತರಾಂತರಮು ಲೆಂಚಿ ಚೂಡಬಂಡಂತೇ
ನಿಪ್ಪಟಿಯನ್ನಟ್ಲು ॥ಪ॥

ಕೊಲುತುರು ಮಿಮು ವೈಷ್ಣವುಲು
ಕೂರಿಮಿತೋ ವಿಷ್ಣುಡನಿ
ಪಲುಕುದುರು ಮಿಮು ವೇದಾಂತುಲು
ಪರಬ್ರಹ್ಮಂಬನುಚು
ತಲತುರು ಮಿಮು ಶೈವುಲು ತಗಿನ
ಭಕ್ತುಲನು ಶಿವುಡನುಚು
ಅಲರಿ ಪೊಗಡುದುರು ಕಾಪಾಲಿಕುಲು
ಆದಿಭೈರವುಡನುಚು ॥೧॥ ಎಂತ॥

ಸರಿ ನೆನ್ನುದುರು ಶಾಕ್ತೇಯುಲು
ಶಕ್ತಿರೂಪು ನೀವನುಚು
ದರಿಶಿನಮುಲು ಮಿಮು ನಾನಾ ವಿಧುಲನು
ತಲಪುಲ ಕೊಲದುಲು ಭಜಿಂತುರು
ಸಿರುಲ ಮಿಮ್ಮುನೆಯಲ್ಪಬುದ್ಧಿ ದಲ-
ಚಿನವಾರಿಕಿನಲ್ಪಂಬವುದುವು
ಗರಿಮಲ ಮಿಮುನೇ ಘನಮನಿ ತಲಚಿನ
ಘನಬುದ್ಧುಲಕು ಘನುಡು ॥೨॥ ಎಂತ॥

ನೀವಲನಗೋರಿತೇ ಲೇದು ಮರಿ
ನೀರುಕೊಲದಿ ತಾಮೆರಪು
ಅವಲ ಭಾಗೀರಥಿ ದರಿಬಾವುಲ
ಆ ಜಲಮೇ ಪೂರಿನಯಟ್ಲು,
ಶ್ರೀವೇಂಕಟಪತಿ ನೀವೈತೇ ಮಮು
ಜೇಕೊನಿಪುನ್ನ ದೈವಮನಿ
ಯೀವಲ ನೇನೀ ಶರಣನಿಯೆದನು
ಯಿದಿಯೇ ಪರತತ್ವಮು ನಾಕು ॥೩॥ ಎಂತ॥

ಇದೇ ತಾತ್ಪರ್ಯವನ್ನು ತಿಳಿಯಹೇಳುವ, ಇನ್ನಷ್ಟು ವ್ಯಾಪಕವಾದ ಅಣ್ಣಮಾಚಾರ್ಯರದ್ದೇ ಸಂಸ್ಕೃತರಚನೆಯೊಂದಿದೆ. ಸಾಮಂತರಾಗದ್ದು—

ಬ್ರುವಂತಿ ಬೌದ್ಧಾ ಬುದ್ಧ ಇತಿ
ಸ್ತುವಂತಿ ಭಕ್ತಾಃ ಸುಲಭ ಇತಿ ॥೧॥ ಬ್ರುವಂತಿ॥

ಗದಂತಿ ಕಿಲ ಸಾಂಖ್ಯಾಸ್ತ್ವಾಂ ಪುರುಷಂ
ಪದವಾಕ್ಯಜ್ಞಾಃ ಪದಮಿತಿ ಚ।
ವಿದಂತಿ ತ್ವಾಂ ವೇದಾಂತಿನಃ ಸದಾ
ಬ್ರಹ್ಮ ಸತ್ಪರಮಿತಿ ಚ ॥೨॥ ಬ್ರುವಂತಿ॥

ಜಪಂತಿ ಮೀಮಾಂಸಕಾಸ್ತ್ವಾಂ ಚ
ವಿಪುಲಕರ್ಮಣೋ ವಿಭವ ಇತಿ।
ಲಸಂತಿ ನಯಸಕಲಾಃ ಸತತಂ
ಕೃಪಾಳು ಕರ್ತಾ ಕೇವಲಮಿತಿ ಚ ॥೩॥ ಬ್ರುವಂತಿ॥

ಭಣಂತಿ ವೇಂಕಟಪತಯೇ ಮುನಯಃ
ಅಣಿಮಾದಿಪ್ರದಂ ಅತುಲಮಿತಿ।
ಗುಣವಂತಂ ನಿರ್ಗುಣಂ ಪುನರಿತಿ
ಗೃಣಂತಿ ಸರ್ವೇ ಕೇವಲಮಿತಿ ಚ ॥೪॥ ಬ್ರುವಂತಿ॥

ವೇಂಗಡದೊಡೆಯನು ಬೌದ್ಧರು ಹೇಳುವ ಬುದ್ಧನೇ, ಸಾಂಖ್ಯರ ಪುರುಷನೇ, ವೈಯಾಕರಣಿಗಳ ಪದವೇ, ವೇದಾಂತಿಗಳ ಬ್ರಹ್ಮವೇ, ಮೀಮಾಂಸಕರಿಗೆ ಕರ್ಮವೇ (ವೇದೋಕ್ತವಿಧಿ), ಯೋಗಿಗಳಿಗೆ ಸಕಲಸಿದ್ಧ; ಭಕ್ತರಿಗೆ ಅತಿ ಸುಲಭ; ಅವನು ಸಗುಣನೂ ಹೌದು, ನಿರ್ಗುಣನೂ ಹೌದು. ಎಲ್ಲರಿಗೂ ಅವನು ಎಲ್ಲವೂ! ಹೀಗೆ ಅವರು ಈ ದೇವರನ್ನು ಗುರುತಿಸಿರುವುದರ ಹಿನ್ನೆಲೆ ಹದಿಮೂರನೆಯ ಶತಮಾನದ ಭಕ್ತಕವಿ ಬಿಲ್ವಮಂಗಲ ಲೀಲಾಶುಕನ ಸುಪ್ರಸಿದ್ಧವಾದ ಶ್ಲೋಕ (ಕೃಷ್ಣಕರ್ಣಾಮೃತದಲ್ಲಿ)—

ಯಂ ಶೈವಾಃ ಸಮುಪಾಸತೇ ಶಿವ ಇತಿ
ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ
ಕರ್ತೇತಿ ನೈಯಾಯಿಕಾಃ।
ಅರ್ಹನ್ನಿತ್ಯಥ ಜೈನಶಾಸನರತಾಃ
ಕರ್ಮೇತಿ ಮೀಮಾಂಸಕಾಃ
ಸೋಽಯಂ ವೋ ವಿದಧಾತು ವಾಂಛಿತಫಲಂ
ತ್ರೈಲೋಕ್ಯನಾಥೋ ಹರಿಃ ॥ (ಶ್ರೀದೇವಕೀನಂದನಃ)

ಇದನ್ನು ಬೇಲೂರಿನ ಒಂದು ಶಾಸನವೂ ಉದ್ಧರಿಸಿದೆ. ಲೀಲಾಶುಕನು ಕೃಷ್ಣನನ್ನು ಆದಿಶಕ್ತಿಯೆಂದೂ ಕಂಡುಕೊಂಡಿರುವುದು ಸ್ವಾರಸ್ಯವಾಗಿದೆ; ವೇಂಕಟೇಶ್ವರನನ್ನು 'ಬಾಲಾ'(ಬಾಲಾಜಿ)ಯೆಂದು ಹೇಳುವುದರ ಹಿನ್ನೆಲೆಯನ್ನೂ ಇದೇ ಕವಿಯ ಇನ್ನೊಂದು ಶ್ಲೋಕದಲ್ಲಿ ಕಾಣಬಹುದು—

ಲಾವಣ್ಯವೀಚೀರಚಿತಾಂಗಭೂಷಾಂ
ಭೂಷಾಪದಾರೋಪಿತಪುಣ್ಯಬರ್ಹಾಮ್।
ಕಾರುಣ್ಯಧಾರಾಳಕಟಾಕ್ಷಮಾಲಾಂ
ಬಾಲಾಂ ಭಜೇ ವಲ್ಲವವಂಶಲಕ್ಷ್ಮೀಮ್॥

ಅಣ್ಣಮಾಚಾರ್ಯರಿಗೆ ಪುರಾಣಗಳ ಪರಿಚಯವೂ, ತಮಿಳುಪ್ರಬಂಧಗಳ ಜ್ಞಾನವೂ ವಿಶೇಷವಾಗಿದ್ದುದು ಅವರ ಕೃತಿಗಳಿಂದ ತಿಳಿದುಬರುತ್ತದೆ. ಅವರಿಗೆ 'ದ್ರಾವಿಡಾಗಮ-ಸಾರ್ವಭೌಮ'ನೆಂಬ ಹೆಸರು ಬಂದಿದ್ದಿತು. ಆದಿ-ವಣ್-ಶಠಕೋಪ ಸ್ವಾಮಿಗಳ ಬಳಿ ಕಲಿಯುವಾಗ ಪ್ರಬಂಧಗಳ ಪರಿಚಯವನ್ನು ಪಡೆದುಕೊಂಡಿರಬೇಕು. ಪಶಿಂಡಿ ವೇಂಕಟತ್ತುರೈವಾರರ ಸಮಕಾಲಿಕರಾಗಿ, ಅವರ ಪರಿಚಯವನ್ನು ಹೊಂದಿದ್ದು, ಅವರ 'ತಿರುವೇಂಕಟಮಾಹಾತ್ಮ್ಯ'ದ ವಿವರಗಳನ್ನು ತಮ್ಮ ಕೃತಿಗಳಲ್ಲಿ ಕಾಣಿಸಿದ್ದಾರೆಂದು ತೋರುತ್ತದೆ. ಅಣ್ಣಮಾಚಾರ್ಯರು ತೆಲುಗು, ಸಂಸ್ಕೃತ ಎರಡೂ ಭಾಷೆಗಳಲ್ಲಿ ಸಾಮರ್ಥ್ಯವನ್ನು ಪಡೆದಿದ್ದವರು; ತೆಲುಗಿನಂತೆಯೇ ಸಂಸ್ಕೃತವೂ ಅವರ ಕವಿತೆಯ ಸರಸಮಾಧ್ಯಮವಾಗಿ ಬಂದಿದೆ. ಸಾಹಿತ್ಯದ ಸಿದ್ಧಿ ಅವರ ಒಂದು ಮುಖವಾದರೆ ಸಂಗೀತದ ಸಾಧನೆ ಇನ್ನೊಂದು ಮುಖ. ಅವರ ಕೃತಿಗಳಲ್ಲಿ ಕಾಣುವ ಸಂಗೀತ ಸೊಗಸಾದುದು. ಅವರ ಸಾಹಿತ್ಯವು ಯೋಗ, ವೈರಾಗ್ಯ, ಶೃಂಗಾರ, ಭಕ್ತಿ ಎಲ್ಲವನ್ನೂ ಸಮರಸವಾಗಿಸಿ ನಾರಿಕೇಳಪಾಕವನ್ನು ಒದಗಿಸಿದರೆ, ಅವರ ಸಂಗೀತವು ರಾಗ, ಭಾವ, ತಾಳಗಳನ್ನು ಕೂಡಿಸಿ ದ್ರಾಕ್ಷಾಪಾಕವನ್ನು ಸಿದ್ಧಪಡಿಸಿದೆ. ಭಕ್ತಿಯ ಬಲವೂ ಕಾವೂ ಇದ್ದರೆ ಸಾಹಿತ್ಯವೂ ಉತ್ತಮವಾಗುತ್ತದೆ, ಸಂಗೀತವೂ ಸೊಗಸಾಗುತ್ತದೆ ಎನ್ನುವುದಕ್ಕೆ ಅಣ್ಣಮಾಚಾರ್ಯರು ನಿದರ್ಶನ. ಅವರ ಕೃತಿಗಳಲ್ಲಿನ ಸಾಹಿತ್ಯ ಸರಳವಾಗಿದ್ದು ಯತಿ ಪ್ರಾಸಗಳ ಕಟ್ಟುಪಾಡನ್ನು ಮೀರದೆ, ಸುಲಭವಾಗಿ ಅರ್ಥವು ಹೊರಹೊಮ್ಮುವಂತೆ ಅವರ್ತಗಳನ್ನು ಅಡಕಮಾಡಿಕೊಂಡಿದೆ. ಅವರಿಗೆ 'ಪದಕವಿತಾಪಿತಾಮಹ'ನೆಂಬ ಬಿರುದು ಬಂದುದು ಕಾರಣವಿಲ್ಲದೆ ಅಲ್ಲ.

ಇನ್ನು, ಸಂಗೀತದಲ್ಲಿ ಅವರ ಪ್ರತಿಭೆಯನ್ನು ಜನರು ಅರಿತುಕೊಂಡು ಅವರನ್ನು 'ಸಂಕೀರ್ತನಾಚಾರ್ಯ'ರೆಂದು ಕರೆದರು. ಅವರ ಸಂಗೀತಜ್ಞಾನವು ಮೇಲ್ತರನಾದುದು; ಕ್ಷೇತ್ರಯ್ಯನಿಗೂ ತ್ಯಾಗರಾಜರಿಗೂ ಅವರ ಸಂಗೀತಸಾಹಿತ್ಯವು ಆದರ್ಶವಾಯಿತು, ಪ್ರೇರಕವಾಯಿತು, ಸ್ಫೂರ್ತಿಯನ್ನೂ ನೆರವನ್ನೂ ಚೌಕಟ್ಟನ್ನೂ ಒದಗಿಸಿತು. ಆದರೆ ಅಣ್ಣಮಾಚಾರ್ಯರಿಗೆ ಶಿಷ್ಯಪರಂಪರೆಯಿರಲಿಲ್ಲವಾಗಿ ಅವರ ಸಂಗೀತದ ಸ್ವರೂಪವು ಸ್ಪಷ್ಟವಾಗಿ ತಿಳಿಯುವಂತಿಲ್ಲ. ಅವರ ಕೃತಿಗಳಲ್ಲಿ ರಾಗಗಳನ್ನೇನೋ ಸೂಚಿಸಿದ್ದಾರೆ. ಆದರೆ ಹಲವು ಈಗ ಬಳಕೆಯಲ್ಲಿಲ್ಲದ ರಾಗಗಳು: ಅಬಲೀ, ಅಮೃತಸಿಂಧು, ಗೀತವಾಟ, ಭಲ್ಲಾಟಿ, ಸಾಮವರಾಳಿ, ಪಳಮಂಜರಂ, ಬೌಳಿರಾಮಕ್ರಿಯ, ಕೊಂಡ ಮಲಹರಿ, ಮುಖಾರಿ, ಪಂತು, ದೇಶಲಂ, ನಾರಣೀ, ಮೊದಲಾದುವು. ಈಗಿನ ರಾಗಗಳ ಹೆಸರುಗಳೂ ಅವರ ಕಾಲದಲ್ಲಿ ಬೇರೆಯಾಗಿದ್ದಂತೆ ಕಾಣುತ್ತದೆ: ನಮ್ಮ ಮೋಹನ ಅವರಿಗೆ ರೇಗುಪ್ತಿಯಾಗಿದ್ದಂತೆ. ಕೀರ್ತನೆಗಳಲ್ಲಿ ಪಲ್ಲವಿ, ಅನುಪಲ್ಲವಿ,

ಚರಣಗಳು ಎಂಬ ವಿಭಜನೆಗೆ ಇವರೇ ಕಾರಣವಾದರೆಂದು ಹೇಳಬಹುದು. ಸಂಗೀತವನ್ನು ಜನಪ್ರಿಯವಾಗಿಸಲು ಅವರು ಚಂದಮಾಮಹಾಡುಗಳು, ಗೊಬ್ಬಿಲ್ಲು, ಲಾಲಿ, ಜೋಜೋ, ಉಯ್ಯಾಲೆಪದಗಳು, ಸೋಬಾನೆಪದಗಳು, ಮಂಗಳ, ಆರತಿ, ಪವ್ವಳಿಂಪು (ಮಲಗಿಸಲು ಹಾಡುವ ಹಾಡುಗಳು), ಸುವ್ವಿ ಸುವ್ವ ಹಾಡುಗಳು ಮೊದಲಾದ ಪ್ರಕಾರಗಳನ್ನು ಬಳಸಿಕೊಂಡರು. ಹಳೆಯ ಹಾಡುಗಳ ಧಾಟಿಯಾಗಿದ್ದು ಆ ಕಾಲಕ್ಕೇ ಮರೆಯಾಗುತ್ತಿದ್ದ ಏಲುತುಮ್ಮೇದ ಪದ, ಗೊಬ್ಬಿಪದ, ಚಂದಮಾಮ ಪದಗಳನ್ನು ಅವರು ಉಳಿಸಿದರು. ಆದರೆ ಅವರ ಸಂಕೀರ್ತನಗಳನ್ನು ಹಾಡುವ ಪದ್ಧತಿ ಮರೆಯಾಗಿಬಿಟ್ಟಿತು.

ಕನ್ನಡನಾಡಿನ ಸಂತರೂ ಕರ್ನಾಟಕಸಂಗೀತದ ಪಿತಾಮಹರೂ ಆದ ಪುರಂದರ ದಾಸರು ಅಣ್ಣಮಾಚಾರ್ಯರನ್ನು ಬೆಟ್ಟದ ಮೇಲೆ ಕಂಡಿದ್ದರೆಂಬ ಕಥೆಯಿದೆ. ಇದು ನಿಜವಾದರೆ, ಅವರು ಭಜನಪದ್ಧತಿಯನ್ನು ಕನ್ನಡನಾಡಿನಲ್ಲಿ ಹರಡುವುದಕ್ಕೆ ಅಣ್ಣಮಾಚಾರ್ಯರಿಂದ ಸ್ಫೂರ್ತಿಯನ್ನು ಪಡೆದರು ಎನ್ನಬಹುದು. ಪುರಂದರದಾಸರೂ ಅಣ್ಣಮಾಚಾರ್ಯರೂ ಮಾಳವೀರಾಗದಲ್ಲಿಯೇ 'ಶರಣು ಶರಣು' ಎಂದೇ ಆರಂಭ ವಾಗುವ ಕೃತಿಗಳನ್ನು ರಚಿಸಿರುವುದು ಗಮನಿಸಬೇಕಾದ ಸಂಗತಿ. ಪುರಂದರದಾಸರು ಕನ್ನಡನಾಡಿನಲ್ಲಿ ದಾಸಕೂಟವನ್ನು ಎತ್ತಿನಿಲ್ಲಿಸಿದರೆಂದರೆ ಅಣ್ಣಮಾಚಾರ್ಯರು ಆ ಕಡೆ ಭಜನಕೂಟವನ್ನು ಕಟ್ಟಿದರು. ನೆರೆದವರೆಲ್ಲ ಭಾವಪರವಶರಾಗಿ ಕಲೆತು ಹಾಡುವಂಥ ಭಜನೆಗಳನ್ನು ಅಣ್ಣಮಾಚಾರ್ಯರು ರಚಿಸಿದ್ದಾರೆ; ಪುರಂದರದಾಸರವೂ ಇಂಥ ಕೃತಿಗಳಿವೆ. ಇಬ್ಬರೂ ಸಂಗೀತರಸಿಕರಾದರೂ ಸಂಗೀತಶಾಸ್ತ್ರಜ್ಞರಾದರೂ (ಅಣ್ಣಮಾ ಚಾರ್ಯರ ಸಂಸ್ಕೃತದ 'ಸಂಕೀರ್ತನಲಕ್ಷಣ' ಶಾಸ್ತ್ರಗ್ರಂಥವೇ) ಸಂಗೀತವನ್ನು ಸಭೆಗಳಲ್ಲಿ ಪಾಮರರಸಿಕರೆದುರು ವಿನಿಕೆಮಾಡುವುದರಲ್ಲಿ ಉತ್ಸಾಹತೋರದೆ, ದೇವರೆದುರು ಒಪ್ಪಿಸುವ ಪದ್ಧತಿಯನ್ನು ಅವರು ಮೆಚ್ಚಿಕೊಂಡಿದ್ದರು. ಆದುದರಿಂದಲೇ ಇವರಿಬ್ಬರ ಕೃತಿಗಳು 'ಕಚೇರಿ'ಗಾಯನಕ್ಕೆ ಅಷ್ಟಾಗಿ ಒಗ್ಗುವುದಿಲ್ಲ; ಭಜನೆಗೆ ತುಂಬ ಚೆನ್ನಾಗಿ ಹೊಂದಿಕೊಳ್ಳುತ್ತವೆ. ಅವರ ಕೃತಿಗಳಲ್ಲಿ ನಾವು ಕಾಣುವುದು ಸಾಹಿತ್ಯದ ಸೊಬಗನ್ನು, ಭಾವದ ಬಂಧುರತೆಯನ್ನು; ಸಂಗೀತವು ಸರಳವಾದ ಮಾಧ್ಯಮವಾಗಿ ಎಷ್ಟು ಬೇಕೋ ಅಷ್ಟು. ಈಚೆಗೆ ವಿಜಯರಾಘವಾಚಾರ್ಯರೂ, ವೇಟೂರಿ ಪ್ರಭಾಕರಶಾಸ್ತ್ರಿಗಳೂ, ರಾಳ್ಲಪಲ್ಲಿ ಅನಂತಕೃಷ್ಣಶರ್ಮರೂ ಅಣ್ಣಮಾಚಾರ್ಯರ ಕೀರ್ತನೆಗಳಿಗೆ ಸಂಗೀತದ ನೆಲೆಯನ್ನು ಮಾಡಿಕೊಟ್ಟು, ಅದರ ಸಾಹಿತ್ಯಕ್ಕೆ ಸ್ವರಮಟ್ಟು ಹಾಕಿ, ಕೀರ್ತನೆಗಳ ಗೀತಸ್ವರೂಪವನ್ನು ನಿಶ್ಚಯಪಡಿಸಲೆತ್ನಿಸಿದ್ದಾರೆ.

ಅಣ್ಣಮಾಚಾರ್ಯರನ್ನು ಕುರಿತು ಹಲವಾರು ಕಥೆಗಳು ಬಳಕೆಯಲ್ಲಿವೆ. ತಮ್ಮ ಹದಿನಾರನೆಯ ವಯಸ್ಸಿನಲ್ಲಿ ವೇಂಗಡದೊಡೆಯನು ಅವರಿಗೆ ಕನಸಿನಲ್ಲಿ ಕಾಣಿಸಿ ಕೊಂಡನಂತೆ. ಅವರು 'ಇಪ್ಪಡಿಟು ಕಲಗಂಟಿ' ಎಂಬ ಭೂಪಾಲರಾಗದ ಕೀರ್ತನೆ ಯನ್ನೂ 'ಸಂದೇಹಮು ಎಕ್ಕಡ ಲೇದು' ಎಂಬ ಪಾಡಿರಾಗದ ಕೀರ್ತನೆಯನ್ನೂ ಒಡನೆಯೇ ರಚಿಸಿದರಂತೆ. ಅಲ್ಲಿಂದಲೇ ಅವರ ವಾಗ್ಗೇಯಕಾರಜೀವನ ಮೊದಲಾಯಿ

ತೆಂದು ವಿವರ. ಅನಂತರ ತಿರುವೇಂಗಡಬೆಟ್ಟಕ್ಕೆ ಹೋಗುವ ಮನಸ್ಸು ಮಾಡಿ, ಹೊರಟು, ಬೆಟ್ಟದ ತಪ್ಪಲನ್ನು ಮುಟ್ಟಿ, ಬೆಟ್ಟವೇರತೊಡಗಿದರಂತೆ. ಬೆಟ್ಟವನ್ನೇರುವಾಗ ಅವರ ಕಾಲುಗಳಲ್ಲಿ ಜೋಡು ಇದ್ದುವು; ಮೆಟ್ಟಿಲುಗಳು ಕಠಿನವಾಗಿ ಕಂಡುವು; ಆಯಾಸವಾಗಿ ಮಲಗಿದರು. ನಿದ್ರೆಯಲ್ಲಿ ಅಲರ್‌ಮೇಲ್‌ಮಂಗತ್ತಾಯಾರಳು (ಪದ್ಮಾವತಿ) ಕಾಣಿಸಿಕೊಂಡು ವೇಂಗಡಬೆಟ್ಟವು ವೈಕುಂಠಕ್ಕೆ ಸಮನಾದುದೆಂದೂ ಬರಿಗಾಲಲ್ಲಿ ನಡೆದೇ ಅದನ್ನೇರಬೇಕೆಂದೂ ತಿಳಿಸಿದಳಂತೆ. ಅದರಂತೆ, ಅಣ್ಣಮಾಚಾರ್ಯರು ಜೋಡುಗಳನ್ನು ಮೆಟ್ಟದೆ ಸರಾಗವಾಗಿ ಏಳೂ ಬೆಟ್ಟಗಳನ್ನೇರಿ ನಾರಾಯಣಗಿರಿಯ ಮೇಲೆ ವೇಂಗಡದೊಡೆಯನನ್ನು ಕಣ್ಣಾರೆ ಕಂಡರಂತೆ.



ಅಣ್ಣಮಾಚಾರ್ಯರು

ಇವರ ಕವಿತಾಪ್ರೌಢಿಮೆಯನ್ನು ಕಂಡು ಸಾಳುವ-ನರಸಿಂಹನು (ಅಥವಾ ಕಡಪ ಜಿಲ್ಲೆಯಲ್ಲಿ ಟಂಗಟೂರಿನ ಒಡೆಯನೊಬ್ಬನು) ಇವರನ್ನು ತನ್ನ ಆಸ್ಥಾನದಲ್ಲಿರಿಸಿ ಕೊಂಡನಂತೆ. ತನ್ನ ಹಿರಿಮೆಯನ್ನು ಹೊಗಳುವ ಹಾಡುಗಳನ್ನು ರಚಿಸಬೇಕೆಂದು ಅಣ್ಣಮಾಚಾರ್ಯರನ್ನು ಈ ಅರಸನು ಕೇಳಿಕೊಳ್ಳಲು, ಅವರು ತಾವು ನರಸ್ತುತಿ ಮಾಡಲಾರೆವೆಂದು ನಿರಾಕರಿಸಿಬಿಟ್ಟರಂತೆ. ಅರಸನು ಸಿಟ್ಟಿಗೆದ್ದು ಅವರನ್ನು ಪೆನಗೊಂಡೆಯಲ್ಲಿ ಸೆರೆಮನೆಗೆ ದೂಡಿಸಿದನಂತೆ. ಆಗಲೇ ಅವರು ಮುಖಾರಿರಾಗದ 'ಆಕಟಿ ವೇಲಲ' ಎಂಬ ಕೀರ್ತನೆಯನ್ನು ರಚಿಸಿದ್ದು ಎಂದು ಹೇಳುತ್ತಾರೆ. ಸೆರೆಮನೆಯಲ್ಲಿ ಬಹುಬಗೆಯಾದ ಬವಣೆಗಳನ್ನು ಅನುಭವಿಸಿದರೂ ತಮ್ಮ ನಿಷ್ಠೆಯನ್ನು ಕೈಬಿಡದ ಇವರ ವಿಚಾರವಾಗಿ ಒಡೆಯನಿಗೆ ಆದರವುಂಟಾಗಿ, ಅವರನ್ನು ಸೆರೆಮನೆಯಿಂದ ಹೊರಮಾಡಿ ತನ್ನ ತಪ್ಪಿಗಾಗಿ ಅವರ ಕ್ಷಮೆಯನ್ನು ಬೇಡಿದನಂತೆ. ಅವರು ಅವನನ್ನು ಮನ್ನಿಸಿದರಾದರೂ, ತಮಗೆ ಇನ್ನು ಲೌಕಿಕಸಂಬಂಧ ಇರಬಾರದೆಂದು ನಿಶ್ಚಯಿಸಿ, ಕಡೆಯ ತನಕ ವಿರಕ್ತರಾಗಿದ್ದುಬಿಟ್ಟರೆಂದು ಇನ್ನೊಂದು ಕಥೆ.

ಪೆದ್ದ-ತಿರುಮಲಾಚಾರ್ಯ

ಅಣ್ಣಮಾಚಾರ್ಯರ ಕೃತಿಗಳಲ್ಲಿ ವೈರಾಗ್ಯ ಕಾಣುವುದಾದರೂ, ಅವರೇನು ಸಂನ್ಯಾಸಿಗಳಲ್ಲ ; ಗೃಹಸ್ಥರೇ. ಅವರಿಗೆ ಇಬ್ಬರು ಮಡದಿಯರು. ಒಬ್ಬಳು ತಿಮ್ಮಕ್ಕ ಅಥವಾ ತಿರುಮಲಮ್ಮ. ಈಕೆ ಕವಯಿತ್ರಿ, 'ಸುಭದ್ರಾಕಲ್ಯಾಣ'ವೆಂಬ ದ್ವಿಪದಿಕಾವ್ಯವನ್ನು ತೆಲುಗಿನಲ್ಲಿ ರಚಿಸಿದ್ದಾಳೆ. ಇನ್ನೊಬ್ಬಳು ಅಕ್ಕಲಮ್ಮ ಅಥವಾ ಅಕ್ಕಾಂಬಾ. ತಿಮ್ಮಕ್ಕನ ಮಗ ನರಸಿಂಹಕವಿ. ಅಕ್ಕಲಮ್ಮನ ಮಗ ಪೆದ್ದ (ಅಥವಾ ಪೆರಿಯ) ತಿರುಮಲಾಚಾರ್ಯ; ಈ ಮಗನಲ್ಲದೆ ತಿರುಮಲಾಂಬಾ ಮತ್ತು ನರಸಮ್ಮ ಎಂಬ ಇಬ್ಬರು ಹೆಣ್ಣುಮಕ್ಕಳೂ ಈಕೆಗಿದ್ದರು. ಈ ಮಕ್ಕಳಲ್ಲಿ ನರಸಿಂಹಕವಿಯು ಅರಸರ ಆಸ್ಥಾನದಲ್ಲಿ , ಸಭೆಗಳಲ್ಲಿ ತನ್ನ ಕವಿತ್ವದಿಂದಲೂ ವಾದಕುಶಲತೆಯಿಂದಲೂ ಹೆಸರಾದನು; 'ವರ್ಣಪದ್ಧತಿ' ಎಂಬ ಗ್ರಂಥವೊಂದು ಅವನದೆಂದು ಹೇಳುತ್ತಾರೆ. ಆದರೆ ತಂದೆಯ ಸಂಕೀರ್ತನ ಮನೋಧರ್ಮವು ಊರ್ಜಿತವಾದುದು ಪೆದ್ದ-ತಿರುಮಲಾಚಾರ್ಯನಲ್ಲಿ. ಇವನನ್ನು ಪೆದ್ದ-ತಿರುಮಲೈಯ್ಯಂಗಾರು ಎಂದು ಕರೆಯುವುದುಂಟು. ತನ್ನ ಕೃತಿಗಳಲ್ಲಿ ತನ್ನನ್ನು ಅಣ್ಣಯ್ಯ, ತಿಮ್ಮನಾರ್ಯ, ತಿಮ್ಮಯ್ಯ, ತಿರುಮಲಾರ್ಯ ಎಂದು ಮೊದಲಾಗಿ ಕರೆದುಕೊಂಡಿದ್ದಾನೆ. ತಂದೆಯು ಈ ಮಗನಿಗೆ ದಿನವೂ ಒಂದು ಕೀರ್ತನೆಯನ್ನು ರಚಿಸಿ ವೇಂಗಡದ ದೇವರೆದುರು ಅದನ್ನು ಒಪ್ಪಿಸಬೇಕೆಂದು ಕಟ್ಟುಮಾಡಿದ್ದರಂತೆ. ಆದುದರಿಂದ ಇವನು ಕೂಡ ತಂದೆಯಂತೆಯೇ ವಾಗ್ಗೇಯಕಾರನೂ ಸಂಕೀರ್ತನಾಚಾರ್ಯನೂ ಆದನು. ಇವನ ಹೆಸರಿನಲ್ಲಿ 'ಶೃಂಗಾರಸಂಕೀರ್ತನಲು', 'ವೈರಾಗ್ಯವಚನ ಮಾಲಿಕಾಪದ್ಯಾಲ ಶತಕಮು', 'ನೀತಿಸೀಸಪದ್ಯಶತಕಮು', 'ಸುದರ್ಶನರಗಳೆ', 'ಉದಾಹರಣಮು'(ವೇಂಕಟೇಶೋದಾಹರಣಮು), 'ಶೃಂಗಾರವೃತ್ತಪದ್ಯಾಲ ಶತಕಮು',

'ಶೃಂಗಾರದಂಡಕಮು', 'ಚಕ್ರವಾಳಮಂಜರಿ' ಎಂಬ ಕೃತಿಗಳಿವೆ. ಇವೆಲ್ಲವೂ ತಿರುವೇಂಗಡದೊಡೆಯನಿಗೇ ಅಂಕಿತವಾದುವು. ಇವುಗಳಲ್ಲಿ ಕೆಲವು ತನ್ನ ತಂದೆಯ ಕವಿತಾಶೈಲಿಯನ್ನೇ ಅನುಸರಿಸಿದುವು. ಕೆಲವು ಹೊಸಪ್ರಕಾರಗಳಲ್ಲಿ ಮಾಡಿದ ಪ್ರಯೋಗಗಳು. ತನ್ನ ಒಂದು ಶಾಸನದಲ್ಲಿ ತನ್ನ ಕವಿತೆಯು ಜೇನಿನಂತೆ ಸಿಹಿಯಾದುದೆಂದು ಹೇಳಿಕೊಂಡಿದ್ದಾನೆ.

ಈತನು ಅನುಕೂಲಪರಿಸ್ಥಿತಿಯಲ್ಲಿದ್ದನೆಂದು ತೋರುತ್ತದೆ. ಗುಡಿಗೆ ಹಲವಾರು ಹಳ್ಳಿಗಳನ್ನೇ ದಾನವಾಗಿ ಕೊಟ್ಟಿದ್ದಾನೆ. ಗುಡಿಯ ಬಳಿಯಿರುವ ಸ್ವಾಮಿಪುಷ್ಕರಿಣಿಯ ಸುತ್ತ ಕಲ್ಲಿನ ಸೋಪಾನಗಳನ್ನೇ ಕಟ್ಟಿಸಿ, ಸುತ್ತಲೂ ಅಂಕಣ, ಪ್ರದಕ್ಷಿಣಮಂಟಪಗಳನ್ನು ಕಟ್ಟಿಸಿ, ನಡುವೆ ನೀರಾಳಿಮಂಟಪವನ್ನೂ ಕಟ್ಟಿಸಿದನೆಂಬ ಶಾಸನವಿದೆ. ಆದರೆ ಮೊದಲೇ ಇದ್ದ ನೀರಾಳಿಮಂಟಪವನ್ನು ದುರಸ್ತಿಮಾಡಿಸಿದನೆಂದು ಇನ್ನೊಂದು ಶಾಸನ ಸೂಚಿಸುತ್ತದೆ. ನೀರಾಳಿಮಂಟಪವೇನೋ ಆಗಲೇ ಇದ್ದುದನ್ನು ನಾವು ನೋಡಿದ್ದೇವಷ್ಟೆ. ಸ್ವಾಮಿ



ಅಣ್ಣಮಾಚಾರ್ಯರು

ಪುಷ್ಕರಿಣಿಯನ್ನು ಅವನ ಶಾಸನಗಳು (1535ರವು) 'ಹಳೆಯ ಕೊಳ' (ತೆಲುಗಿನಲ್ಲಿ 'ಪೂರ್ವಮೈನ ಕೋನೇರಿ', ತಮಿಳಿನಲ್ಲಿ 'ಪಳಕ್ಕೋನೇರಿ') ಎಂದೇ ಕರೆದಿರುವುದು ಸ್ವಾರಸ್ಯವಾಗಿದೆ. ಈ ಕೊಳದ ಮೇಲಿರುವ ವರಾಹಸ್ವಾಮಿ (ಶಾಸನದಲ್ಲಿ 'ಭೂವರಾಹ') ಗುಡಿಗೆ ಪ್ರಾಕಾರವನ್ನೂ ಪ್ರದಕ್ಷಿಣಮಂಟಪವನ್ನೂ ಕಟ್ಟಿಸಿದನು. ಇವೆಲ್ಲವನ್ನೂ ತನ್ನ ಸ್ವಂತ ವೆಚ್ಚದಿಂದಲೇ ಮಾಡಿಸಿದುದಾಗಿ ಶಾಸನವು ಸ್ಪಷ್ಟಪಡಿಸುತ್ತದೆ. ಗುಡಿಯಲ್ಲಿ ಆಣಿ-ಬ್ರಹ್ಮೋತ್ಸವವೊಂದನ್ನು ಏರ್ಪಡಿಸಿ, ವನಭೋಜನ ಮೊದಲಾದ ಅಂಗಗಳನ್ನೂ ವ್ಯವಸ್ಥೆಮಾಡಿದನು. ಗರ್ಭಗುಡಿಯ ಮಗ್ಗುಲಲ್ಲಿ ತನ್ನ ತಂದೆ ಅಣ್ಣಮಾಚಾರ್ಯರ ಕೀರ್ತನೆಗಳನ್ನು ಕಾಪಿಡಲು 'ಸಂಕೀರ್ತನ-ಭಂಡಾರ'ವನ್ನು ಇವನೇ ಏರ್ಪಡಿಸಿದನೆಂದು ತೋರುತ್ತದೆ.

ಕ್ರಿಸ್ತಾಬ್ದ 1530ರ ಇವನ ಶಾಸನವೊಂದು ಅಚ್ಯುತರಾಯ-ಮಹಾರಾಯನು ವ್ಯವಸ್ಥೆ ಮಾಡಿದ ಬ್ರಹ್ಮೋತ್ಸವದಲ್ಲಿ ಒಂದು ದಿನ 'ಸಂಕೀರ್ತನ-ಭಂಡಾರ'ದೆದುರು ಒಂದು ಪಡಿ(ಅತಿರಸ-ಪಡಿ)ಯನ್ನು ಸಲ್ಲಿಸಬೇಕೆಂದು ವಿಧಿಸುತ್ತದೆ. ಎಂದಮೇಲೆ, ಅವನೇ ಅದನ್ನು ಹೊಸದಾಗಿ ಕಟ್ಟಿಸಿರಬೇಕು. ಅಣ್ಣಮಾಚಾರ್ಯರ ಕೀರ್ತನೆಗಳನ್ನು ತಾಮ್ರದ ಹಲಗೆಗಳ ಮೇಲೆ ಕಂಡರಿಸಿದವನು ಇವನೇ ಎಂಬುದೂ ತಿಳಿದು ಬರುತ್ತದೆ.

ಅವನ ಕಾಲದಲ್ಲಿ ವಿಜಯನಗರಸಾಮ್ರಾಜ್ಯವನ್ನು ಆಳುತ್ತಿದ್ದವನು ಅಚ್ಯುತರಾಯ-ಮಹಾರಾಯ. ಅವನು ಪಟ್ಟಕ್ಕೆ ಬಂದುದು ಕ್ರಿಸ್ತಾಬ್ದ 1529ರಲ್ಲಿ. ಅವನು ಪಟ್ಟವೇರಿದ ಸಂದರ್ಭದಲ್ಲಿ ದೇವರಿಗೆ ಬ್ರಹ್ಮೋತ್ಸವವನ್ನು ವ್ಯವಸ್ಥೆಮಾಡಿರಬೇಕು. ಈ ಸಂದರ್ಭದಲ್ಲೇ 'ಸಂಕೀರ್ತನ-ಭಂಡಾರ'ವೂ ಸಿದ್ಧವಾಗಿರಬೇಕು. ಆದರೆ ಪೆದ್ದ-ತಿರುಮಲಾಚಾರ್ಯನು ಅದನ್ನು ಕಟ್ಟಿಸಿದನೆನ್ನುವುದಕ್ಕೆ ಶಾಸನದ ಆಧಾರವೇನೂ ಇಲ್ಲ. ಮೊದಲೇ ಇದ್ದ ಕೋಣೆಯೊಂದನ್ನು 'ಸಂಕೀರ್ತನ-ಭಂಡಾರ'ವಾಗಿ ಮಾರ್ಪಡಿಸಿದ್ದರೂ ಇರಬಹುದು. ಏನಾದರಾಗಿರಲಿ, ಈ ಭಂಡಾರವನ್ನು ಶ್ರೀವೈಷ್ಣವರು ನೋಡಿಕೊಳ್ಳುತ್ತಿದ್ದರೆನ್ನುವ ಮಾತು ಶಾಸನದಲ್ಲಿ ಬರುತ್ತದೆ. ಪೆದ್ದ-ತಿರುಮಲಾಚಾರ್ಯನು ಗುಡಿಯ 'ಸಂಕೀರ್ತನಾಚಾರ್ಯ'ನೆಂದು ಹೆಸರಾದರೂ ದೇವರೆದುರು ಸಂಕೀರ್ತನಸೇವೆಯನ್ನು ಈ ವೈಷ್ಣವರೇ ನಡೆಸುತ್ತಿದ್ದರೆಂದು ಊಹೆಯಿದೆ; ಅವರಿಗೆ ಸಲ್ಲಿಸಬೇಕಾದ ಸಂಭಾವನೆಯ ಪ್ರಸ್ತಾಪವಿದೆ. ಅಣ್ಣಮಾಚಾರ್ಯರ ಕಾಲದಿಂದಲೂ ದೇವರಿಗೆ ಸಂಕೀರ್ತನಸೇವೆ ಮಾಡುವ ಅವಕಾಶ (ಅಥವಾ ಹಕ್ಕು) ಈ ವಂಶದವರದ್ದೇ ಆಗಿದೆ; ಈಗಲೂ ಗುಡಿಯಲ್ಲಿ ತಾಳ್ಲಪಾಕದವರ ಕೀರ್ತನೆಗಳನ್ನು ಏಕಾಂತಸೇವೆಯ ಸಂದರ್ಭದಲ್ಲಿ ಹಾಡುವವರು ಈ ಮನೆತನಕ್ಕೆ ಸೇರಿದವರೇ.

ಪೆದ್ದ-ತಿರುಮಲಾಚಾರ್ಯನಿಗೆ ಶ್ರೀವೈಷ್ಣವಧರ್ಮದ ಮೇಲೆ ಇದ್ದ ಅಭಿಮಾನ ತನ್ನ ತಂದೆಗಿಂತಲೂ ಹೆಚ್ಚಿನದಾಗಿದ್ದಿತು. ಅವನು 'ಆಚಾರ್ಯ'ನೂ ಆಗಿದ್ದು, ತಿರುಪತಿಯ 'ಕುಲಶೇಖರಪುರ' ಎಂಬ ಬಡಾವಣೆಯಲ್ಲಿ ವಾಸಮಾಡುತ್ತಿದ್ದ ಶಾತ್ತಾದ-ಶ್ರೀವೈಷ್ಣವರಿಗೆ ಗುರುವಾಗಿದ್ದನು. 'ವೇದಮಾರ್ಗಪ್ರತಿಷ್ಠಾಪನಾಚಾರ್ಯ' ಎಂಬ ಬಿರುದನ್ನೂ ಹೊತ್ತಿದ್ದನು. ತಿರುಪತಿಯ ಅಂಚಿನಲ್ಲಿದ್ದ ಆಳ್ವಾರ್-ತೀರ್ಥದ ಮೇಲೆ

ಮಂಟಪವೊಂದನ್ನು ಕಟ್ಟಿಸಿ ಅದರಲ್ಲಿ ಲಕ್ಷ್ಮೀನಾರಾಯಣಪ್ಪೆರುಮಾಳನ್ನು ಪ್ರತಿಷ್ಠೆ ಮಾಡಿಸಿದನು; ನಮ್ಮಾಳ್ವಾರರ ರಥೋತ್ಸವವನ್ನೂ 'ಶಾತ್ತುಮುರೈ'ವಿಧಿಯನ್ನೂ ವ್ಯವಸ್ಥೆ ಮಾಡಿದನು.

ಅಲಮೇಲುಮಂಗಾಪುರ

ಪೆದ್ದ-ತಿರುಮಲಾಚಾರ್ಯನ ದಾನಧರ್ಮಗಳು ಕ್ರಿಸ್ತಾಬ್ದ 1546ರ ಈಚೆಗೆ ಕಾಣಬರುವುದಿಲ್ಲ. ಅವನ ಮಕ್ಕಳು ಚಿನ್ನ-(ಶಿರು-)ತಿರುಮಲಯ್ಯಂಗಾರು, ಚಿನ್ನನ್ನ (ತಿರುವೇಂಗಳನಾಥ) ಇವರು ಪ್ರಸಿದ್ಧಿಗೆ ಬರುತ್ತಾರೆ. ಚಿನ್ನ-ತಿರುಮಲಯ್ಯನು (ಚಿನ್ನ ತಿಮ್ಮಯ್ಯನು) ಹಿರಿಯ ಮಗ. ಇವನೂ ತನ್ನ ತಂದೆಯಂತೆ, ತಾತ ಅಣ್ಣಮಾಚಾರ್ಯರಂತೆ ವಾಗ್ಗೇಯಕಾರ, 'ಸಂಕೀರ್ತನಾಚಾರ್ಯ'. ಇವನೂ ಅಧ್ಯಾತ್ಮಸಂಕೀರ್ತನೆಗಳನ್ನೂ ಶೃಂಗಾರಸಂಕೀರ್ತನೆಗಳನ್ನೂ ರಚಿಸಿದ್ದಾನೆ. ತಾತ ಅಣ್ಣಮಾಚಾರ್ಯರ ಕವಿತೆಗಳು ವಾಣಿಯ ವೀಣೆಯೆಂದೂ, ತಂದೆ ಪೆದ್ದ-ತಿರುಮಲಾಚಾರ್ಯನ ಕವಿತೆಗಳು ಫಣಿಯ (ಎಂದರೆ, ಆದಿಶೇಷನ) ತಲೆಯ ಮೇಲಿನ ಮಣಿಯನ್ನೂ ನಾಚಿಸುವಂಥದೆಂದೂ ಅವನು ಬಣ್ಣಿಸಿರುವುದು ಅವನ 'ಅಷ್ಟಭಾಷಾ-ದಂಡಕ'ದಲ್ಲಿ ಕಡೆಗೆ ಕಾಣಬರುತ್ತದೆ. 'ಅಷ್ಟಭಾಷಾ-ದಂಡಕ'ವನ್ನು ಅವನು ಬರೆದದ್ದು ಸಂಸ್ಕೃತ ಮತ್ತು ಏಳು ಪ್ರಾಕೃತ ಭಾಷೆಗಳ ಮೇಲೆ ತನಗಿದ್ದ ಒಡೆತನವನ್ನು ಸಿದ್ಧಪಡಿಸುವುದಕ್ಕಾಗಿ. ವೇಂಗಡದೊಡೆಯನ ಸ್ತುತಿರೂಪವಾಗಿರುವ ಈ ಗ್ರಂಥವನ್ನು ಕ್ರಿಸ್ತಾಬ್ದ 1537ರಲ್ಲಿ ತಾಮ್ರಫಲಕಗಳ ಮೇಲೆ ಕಂಡರಿಸಲಾಯಿತು. ಇದರಿಂದಾಗಿ ಇವನಿಗೆ 'ಅಷ್ಟಭಾಷಾಕವಿಚಕ್ರವರ್ತಿ'ಯೆಂಬ ಪ್ರಶಸ್ತಿ ದೊರಕಿತು.

ತನ್ನ ತಾತನು ಸಂಸ್ಕೃತದಲ್ಲಿ ಬರೆದಿದ್ದ 'ಸಂಕೀರ್ತನಲಕ್ಷಣ'ವೆಂಬ ಶಾಸ್ತ್ರಗ್ರಂಥವನ್ನು ಇವನು ತೆಲುಗುಭಾಷೆಗೆ ಅನುವಾದ ಮಾಡಿದನು. ಭಗವದ್ಗೀತೆಯನ್ನು ತೆಲುಗು ವಚನರೂಪವಾಗಿ 'ಆಂಧ್ರವೇದಾಂತ'ವೆಂಬ ಹೆಸರಿನಲ್ಲಿ ಬರೆದನೆಂದೂ, ಹರಿವಂಶವನ್ನು ದ್ವಿಪದಪದ್ಧತಿಯಲ್ಲಿ ರಚಿಸಿದನೆಂದೂ ಹೇಳುತ್ತಾರೆ. ಅವನ 'ಹರಿವಂಶ'ವೇನೋ ಈಗ ಕಾಣಸಿಗುವುದಿಲ್ಲ ; 'ಆಂಧ್ರವೇದಾಂತ'ವನ್ನು ಅವನೂ ಅವನ ತಂದೆಯೂ ಸೇರಿ ಬರೆದರೆಂದು ಒಂದು ಅಭಿಪ್ರಾಯವಿದೆ. ಕ್ರಿಸ್ತಾಬ್ದ 1540ರ ವೇಳೆಗೆ ಇವನು ಪ್ರಸಿದ್ಧನಾಗಿದ್ದುದು, 'ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯ', 'ಶ್ರೀರಾಮಾನುಜ ಸಿದ್ಧಾಂತಸ್ಥಾಪನಾಚಾರ್ಯ', 'ವೇದಾಂತಾಚಾರ್ಯ', 'ಕವಿತಾರ್ಕಿಕಕೇಸರಿ' ಮೊದಲಾದ ಅವನ ಬಿರುದುಗಳಿಂದ ಸ್ಪಷ್ಟವಾಗುತ್ತದೆ. ತನ್ನ ಹಿರಿಮೆ ವೇದಾಂತದೇಶಿಕರ ಹಿರಿಮೆಯಂತೆ ಎಂದು ಅವನ ಹೆಮ್ಮೆಯಾಗಿದ್ದಂತೆ ತೋರುತ್ತದೆ; ಈ ಬಿರುದುಗಳೆಲ್ಲ ಸಾಮಾನ್ಯವಾಗಿ ವೇದಾಂತದೇಶಿಕರಿಗೆ ಸಂದಿದ್ದುವು.

ಇವನು ಕೈಗೊಂಡ ಕೈಂಕರ್ಯಗಳಲ್ಲಿ ಮುಖ್ಯವಾದುದು 'ಕಲ್ಯಾಣವೇಂಕಟೇಶ್ವರ'ನ ಗುಡಿಯ ಜೀರ್ಣೋದ್ಧಾರ. ಬೆಟ್ಟದ ಕೆಳಗೆ ಚಂದ್ರಗಿರಿ-ಊರಿನ ಬಳಿ, ತಿರುಪತಿಯಿಂದ

ಪಶ್ಚಿಮಕ್ಕೆ ಏಳು ಮೈಲು ದೂರದಲ್ಲಿ ಅಲಮೇಲುಮಂಗಾಪುರ (ಮಂಗಾಪುರ)ವೆಂಬ ಸಣ್ಣಗ್ರಾಮವಿದೆ; ಇಲ್ಲಿರುವ ಕಲ್ಯಾಣವೇಂಕಟೇಶ್ವರನ ಗುಡಿಯು ಮೊನ್ನೆಮೊನ್ನೆಯವರೆಗೆ ಪಾಳು ಬಿದ್ದಿದ್ದಿತು. ಅಲ್ಲಿನ ಗರ್ಭಗುಡಿಯಲ್ಲಿ ಸುಮಾರು ಒಂಬತ್ತು ಅಡಿ ಎತ್ತರದ ಭವ್ಯವಾದ ವೇಂಕಟೇಶ್ವರನ ಮೂರ್ತಿಯಿದೆ. ಆದರೆ ಎಡ ಕಟಿಹಸ್ತದ ಒಂದೆರಡು ಬೆರಳುಗಳು ಮುರಿದಿರುವುದರಿಂದ ಅದರ ಪೂಜೆ ನಿಂತುಹೋಗಿದ್ದಿತು. ಈಚೆಗೆ ತಿರುಮಲೆ-ತಿರುಪತಿ ದೇವಸ್ಥಾನದ ಆಡಳಿತದವರು ಈ ಸ್ಥಳವನ್ನು ಜೀರ್ಣೋದ್ಧಾರ ಮಾಡಿಸಿ, ಯಾತ್ರಿಕರು ಅಲ್ಲಿಗೂ ಹೋಗಿಬರುವಂತೆ ಪ್ರೇರಿಸುತ್ತಿದ್ದಾರೆ.

ಆದರೆ ಚಿನ್ನ-ತಿರುಮಲಯ್ಯಂಗಾರ ಕಾಲದಲ್ಲೂ ಇದು ಪಾಳುಬಿದ್ದಿದ್ದ ದೇಗುಲವೇ ಆಗಿದ್ದಿತು. ಅವರೂ ಕ್ರಿಸ್ತಾಬ್ದ 1540ರಲ್ಲಿ ಇದನ್ನು ಜೀರ್ಣೋದ್ಧಾರ ಮಾಡಿಸಿದರೆಂಬ ಶಾಸನವಿದೆ; ಮತ್ತೆ ಪಾಳುಬಿದ್ದಿತು. ಈ ಗುಡಿಯನ್ನು ಯಾರು, ಯಾವಾಗ ಕಟ್ಟಿಸಿದರೋ ಸರಿಯಾಗಿ ತಿಳಿದುಬರುವುದಿಲ್ಲ. ವೇಂಕಟೇಶ್ವರನಿಗೂ ಅಲುಮೇಲುಮಂಗತ್ತಾಯಾರಿಗೂ (ಎಂದರೆ, ಪದ್ಮಾವತಿಗೂ) ಮದುವೆಯಾದ ಸಂದರ್ಭದಲ್ಲಿ ಕಟ್ಟಿಸಿದ ಗುಡಿಯೆಂದು ಪ್ರತೀತಿ; ಆದುದರಿಂದಲೇ ಇಲ್ಲಿನ ದೇವರ ಹೆಸರು ಕಲ್ಯಾಣ ವೇಂಕಟೇಶ್ವರನೆಂದು ವಿವರಣೆ. ಇದು ವಿಕಲ್ಪನದೀತೀರದಲ್ಲಿದ್ದ ಗುಡಿಯೆಂದು 'ಸ್ಕಾಂದ ಪುರಾಣೋಕ್ತಮೈನ ಶ್ರೀವೇಂಕಟೇಶ್ವರಮಾಹಾತ್ಮ್ಯ'ಯಲ್ಲಿ ಹೇಳಿದೆಯೆಂದು ಚಿನ್ನ ತಿರುಮಲಯ್ಯಂಗಾರರ ತಿಳಿವಳಿಕೆ; ಶಾಸನದಲ್ಲಿ ಆ ಮಾತಿದೆ. ಅಣ್ಣಮಾಚಾರ್ಯರ ಕಾಲದಲ್ಲಿಯೇ ಅಲುಮೇಲುಮಂಗೆಗೂ (ಪದ್ಮಾವತಿಗೂ) ವೇಂಕಟೇಶ್ವರನಿಗೂ ಮದುವೆ ನಡೆದ ಕಥೆಗಳು ಬಳಕೆಯಲ್ಲಿದ್ದುವು. ಪಶಿಂಡಿ ವೇಂಕಟತ್ತುರೈವಾರರು ಬರೆದು ದೇವರೆದುರು ಓದಿಸಿದ 'ತಿರುವೇಂಕಟಮಾಹಾತ್ಮ್ಯ'ಯಲ್ಲಿ ವೇಂಕಟೇಶ್ವರನ ಕಲ್ಯಾಣ ಸಂದರ್ಭವು ಸೊಗಸಾಗಿ ಸೇರಿಬಂದಿರಬೇಕು; ಆ ಕಾಲದಿಂದಲೂ 'ಕಲ್ಯಾಣೋತ್ಸವ'ದ ಹಂಬಲ ಶ್ರೀವೈಷ್ಣವ ಭಕ್ತರಿಗಿದ್ದಿರಬೇಕು. ಚಿನ್ನ-ತಿರುಮಲಯ್ಯಂಗಾರು ವೇಂಗಡ ದೊಡೆಯನಿಗೆ 'ಕಲ್ಯಾಣೋತ್ಸವ'ದ ಕಟ್ಟಳೆಯನ್ನು ಮೊದಲುಮಾಡಿ, ಕಲ್ಯಾಣ ವೇಂಕಟೇಶ್ವರನ ಗುಡಿಯನ್ನು ಜೀರ್ಣೋದ್ಧಾರ ಮಾಡಿಸಿ, ತಿರುಮಲೆಯ ಚೌಕಟ್ಟಿನಲ್ಲಿ ಅಲರ್‌ಮೇಲುಮಂಗೆಯ ನೆಲೆ ಬೇರೂರುವಂತೆ ಮಾಡಿದನು.

ದೇವರಿಗೆ ಕಲ್ಯಾಣೋತ್ಸವ

ಅಲರ್‌ಮೇಲ್‌ಮಂಗೈ (ಅಲಮೇಲುಮಂಗೆ) ತಿರುಚ್ಚಾನೂರಿನ ದೇವತೆ; ಲಕ್ಷ್ಮಿಯ ಅವತಾರವೆನಿಸಿದ ಪದ್ಮಾವತಿ. ತಿರುಚ್ಚಾನೂರು ಶ್ರೀವೈಷ್ಣವರ ಕೈಬಿಟ್ಟಾಗ ಈ ದೇವತೆ ಬೆಟ್ಟವನ್ನೇ ಸೇರಬೇಕಾಯಿತು. ರಾಮಾನುಜರು ವೇಂಗಡದೊಡೆಯನ ಒಡಲ ಮೇಲೆ ಈ ದೇವತೆಯ ಪ್ರತೀಕವನ್ನು ಮೂಡಿಸಿದರೆಂದು ನಂಬಿಕೆಯಿದೆ. ಒಂಟಿಯಾಗಿ ಬೆಟ್ಟದ ಮೇಲೆ ನಿಂತಿದ್ದವನಿಗೆ ಹೆಂಗಳೆಯ ಸಂಬಂಧವನ್ನು ಕಲ್ಪಿಸಲೇಬೇಕಾದುದು ಪಾಂಚರಾತ್ರ-

ಶ್ರೀವೈಷ್ಣವಸಿದ್ಧಾಂತದಲ್ಲಿ ಅಗತ್ಯವೆನಿಸಿತು. ಶ್ರೀದೇವಿಯೊಡಗೂಡಿದ ನಾರಾಯಣನೇ ಅರ್ಚಾಮೂರ್ತಿಯಲ್ಲವೆ? ಅವನೇ ಶ್ರೀ-ನಿವಾಸ. ಜನರಿಗೆ ಮತ್ತೆಮತ್ತೆ ಈ ನಂಟಿನ



ಅಣ್ಣಮಾಚಾರ್ಯರು ಮನೆಯಲ್ಲಿ ಇರಿಸಿಕೊಂಡಿದ್ದ ಮೂರ್ತಿ

ನೆನಪನ್ನು ಮಾಡಿಕೊಡಲೆಂದು 'ವೈವಾಹಿಕೋತ್ಸವ' ಅಥವಾ 'ಕಲ್ಯಾಣೋತ್ಸವ' ಬಳಕೆಗೆ ಬರಬೇಕಾಗಿದ್ದಿತು. 'ಶ್ರೀರಾಮಾನುಜಸಿದ್ಧಾಂತಸ್ಥಾಪನಾಚಾರ್ಯ'ನೆಂದು ದೊಡ್ಡ ಹೆಸರು ಹೊತ್ತ ಚಿನ್ನ-ತಿರುಮಲಯ್ಯಂಗಾರು ಈ ಕೆಲಸವನ್ನು ಕೈಗೊಂಡನು. ರಾಮಾನುಜರು

ಸೂಕ್ಷ್ಮವಾಗಿ ಮಾಡಿದುದನ್ನು ಈತನು ಸ್ಥೂಲವಾಗಿ ಮಾಡಲೆತ್ನಿಸಿದನು. ಆದರೆ ಬೆಟ್ಟದ ಮೇಲೆ ಇದನ್ನು ಮಾಡುವುದು ಅಷ್ಟು ಸುಲಭವಾಗಿರಲಿಲ್ಲ; ವೈಖಾನಸ-ಅರ್ಚಕರೆಂಬ ದೊಡ್ಡ ಅಡ್ಡಗೋಡೆ ಇದ್ದಿತಲ್ಲವೆ? ಮುಂದೆ ಇದು ಮೈದುಂಬಿ ಬಂದಿತೆನ್ನಿ.

ಈ ಕಲ್ಯಾಣೋತ್ಸವದ ಕಾತರ ಬೆಟ್ಟದ ಮೇಲೆ ಕೈಗೂಡದಿದ್ದಾಗ ಚಿನ್ನ-ತಿರುಮಲಯ್ಯಂಗಾರನ ಕಣ್ಣು ಬೆಟ್ಟದ ಕೆಳಗೆ ಯಾರಿಗೂ ಬೇಡದೆ ಪಾಳುಬಿದ್ದಿದ್ದ ಮಂಗಾಪುರದ ಗುಡಿಯ ಮೇಲೆ ಬಿದ್ದಿತು. ಇಲ್ಲಿಯವರೆಗೆ ಆ ಗುಡಿ ಅಲ್ಲಿ ಇದ್ದುದೇ ಯಾರ ಗಮನಕ್ಕೂ ಬಂದಿರಲಿಲ್ಲ. ಅದರ ಹಿನ್ನೆಲೆಯನ್ನು ಚಿನ್ನ-ತಿರುಮಲಯ್ಯನು ಸ್ಕಾಂದಪುರಾಣದಲ್ಲಿ ಕಂಡುಹಿಡಿದು ಅದಕ್ಕೊಂದು ಮರ್ಯಾದೆಯನ್ನು ತಂದುಕೊಡ ಲೆತ್ನಿಸಿದನು. ಸ್ಕಾಂದಪುರಾಣವೆಂದರೆ ಸುಳ್ಳಿನ ಕಂತೆಯೆಂದೂ, ಅದರಲ್ಲಿ ಬೇಕಾದವರು ಬೇಕಾದಂತೆ ವಿವರಗಳನ್ನು ತಿದ್ದುವ, ಸೇರಿಸುವ, ಅಳಿಸುವ ಕೆಲಸ ಶ್ರದ್ಧೆಯಿಂದ ಸಾಗಿದೆಯೆಂದೂ ಜನಜನಿತ. ಅಂತೂ ಚಿನ್ನ-ತಿರುಮಲಯ್ಯನು ಈ 'ಪುರಾಣಪ್ರಸಿದ್ಧ' ಗುಡಿಯನ್ನು ಹಿಡಿದುಕೊಂಡು, ಅದರ ಜೀರ್ಣೋದ್ಧಾರ ಮಾಡಿಸಿದ. ಅಲ್ಲಿ ನಾಚ್ಚಿಯಾರರು (ಎಂದರೆ, ದೇವಿಯರು), ಗರುಡ, ಅನಂತ, ವಿಷ್ವಕ್ಸೇನ, ಆಳ್ವಾರರು, ಉಡ್ಡೈಯವರು (ಎಂದರೆ, ರಾಮಾನುಜರು), ಪೂರ್ವಾಚಾರ್ಯರು, ತನ್ನ ತಾತನೂ 'ಆಚಾರ್ಯ'ನೂ ಆಗಿದ್ದ ಅಣ್ಣಮಾಚಾರ್ಯರು (**ಅನ್ನಮಾಚಾರ್ಯುಲೈನ ತಮ ಆಚಾರ್ಯುಲು**) ಇವರೆಲ್ಲರ ಮೂರ್ತಿಗಳ 'ತಿರುಪ್ರತಿಷ್ಠೆ' ಮಾಡಿಸಿ, ಅವರಿಗೆ ಆರಾಧನೆಯು ನಡೆಯುವ ವ್ಯವಸ್ಥೆ ಮಾಡಿದನು. ಇದನ್ನೆಲ್ಲ ಹೇಳುವ ಶಾಸನ ಈ ಗುಡಿಯ ಪ್ರವೇಶದ್ವಾರದ ಬಲಬಾಗಿಲ ಗೋಡೆಯ ಮೇಲಿದೆ. ಈ ಶಾಸನದ ಕಾಲ ಶಕವರ್ಷ 1463, ಶಾರ್ವರೀ ಚೈತ್ರಮಾಸದ ಶುದ್ಧ 15ರಂದು ಚಿತ್ತಾನಕ್ಷತ್ರವಿದ್ದಾಗ, ಎಂದರೆ ಕ್ರಿಸ್ತಾಬ್ದ 1540ರ ಮಾರ್ಚ್ ತಿಂಗಳ ಇಪ್ಪತ್ತೆರಡನೆಯ ದಿನ.

ಈ ಶಾಸನವನ್ನು ಬರೆದವರು ಯತಿರಾಜಯ್ಯಂಗಾರರು (**ಯತಿರಾಜಯ್ಯಂಗಾರಿ ಚಾತನು ವ್ರಾಯಿಂಚಿನ ಶಿಲಾಶಾಸನಂ**). ಇವರು ಬೆಟ್ಟದ ಗುಡಿಯ ಪೂಜಾದಿಗಳನ್ನು ನಿರ್ದೇಶನಮಾಡುತ್ತಿದ್ದ 'ಪೆರಿಯ ಕೋಯಿಲ್ ಕೆಳ್ವಿ' ಯತಿರಾಜ-ಜೀಯರ್; ಅಳಗಿಯ ಮಣವಾಳ-ಜೀಯರ ಶಿಷ್ಯರಾಗಿ ಬೆಟ್ಟದ ಮೇಲೆ ಪೇರರುಳಾಳನ್‌ಮಠವನ್ನು ನೋಡಿಕೊಳ್ಳುತ್ತಿದ್ದವರು, ದೇಶಾಂತರಿಗಳು (ಎಂದರೆ, ತಮಿಳುನಾಡಿನಿಂದ ಈ ಕಡೆ ಬಂದು ನೆಲೆಸಿದವರು). ಮಂಗಾಪುರದ ಗುಡಿಯ ಜೀರ್ಣೋದ್ಧಾರ, ಮೂರ್ತಿಗಳ ಪ್ರತಿಷ್ಠೆ ಮೊದಲಾದ ವಿಧಿಗಳು ನಡೆದುದು ಇವರ ನೇತೃತ್ವದಲ್ಲಿಯೇ. ಹಲವರು ಆಚಾರ್ಯಪುರುಷರೂ ಜೀಯರರೂ ಶ್ರೀವೈಷ್ಣವರೂ ನೆರೆದಿದ್ದರೆಂದು ಶಾಸನ ತಿಳಿಸುತ್ತದೆ. ಇಲ್ಲಿ ಗಮನಿಸಬೇಕಾದ ವಿಷಯವೊಂದಿದೆ.

ಬೆಟ್ಟದ ಮೇಲಿನ ಗುಡಿಯ ಸರ್ವಾಧಿಕಾರವು ಸ್ಥಾನತ್ತಾರರದ್ದು; ಗುಡಿಯ ಲೌಕಿಕ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದವನು 'ಅಧಿಕಾರಿ'; ಪೂಜೆ, ಉತ್ಸವ ಮೊದಲಾದ ಆಗಮೋಕ್ತವಿಧಿಗಳನ್ನು ನೋಡಿಕೊಳ್ಳುತ್ತಿದ್ದವನು 'ಕೋಯಿಲ್ ಕೆಳ್ವಿ'—ಗುಡಿಯ ಮೇಲ್ವಿಚಾರಣೆಯು ಈ ಮೂರು ಪ್ರಕಾರಗಳಲ್ಲಿ ನಡೆಯುತ್ತಿದ್ದಿತು. ಮಂಗಾಪುರದಲ್ಲಿ

ಚಿನ್ನ-ತಿರುಮಲಯ್ಯಂಗಾರು ನಡೆಸಿದ ಅದ್ಧೂರಿಯ ಸಮಾರಂಭದಲ್ಲಿ ಪಾಲ್ಗೊಂಡವರು 'ಕೋಯಿಲ್ ಕೆಲ್ವಿ', ಮತ್ತಿತರ ವೈಷ್ಣವರು. ಅಲ್ಲಿ ಸ್ಥಾನತ್ತಾರರಾಗಲೀ ಅಧಿಕಾರಿಯಾಗಲೀ ಇದ್ದ ಉಲ್ಲೇಖವಿಲ್ಲ. ಹೊಸದಾಗಿ ಜೀರ್ಣೋದ್ಧಾರವಾದ ಗುಡಿಯ ಆಡಳಿತದಲ್ಲಿ ಇವರು ಆಸಕ್ತಿ ತೋರಿಸಿದರೆನ್ನುವುದಕ್ಕೆ ಆಧಾರ ಆಗಲೂ ಕಾಣುವುದಿಲ್ಲ , ಮುಂದೆಯೂ ಕಾಣುವುದಿಲ್ಲ. ಕಲ್ಯಾಣವೇಂಕಟೇಶ್ವರನ ಪ್ರಾಚೀನತೆಯನ್ನಾಗಲೀ ಪ್ರಖ್ಯಾತಿಯನ್ನಾಗಲೀ ಆಗತ್ಯವನ್ನಾಗಲೀ ಅವರು ಒಪ್ಪಿಕೊಳ್ಳುವುದಕ್ಕೆ ಸಿದ್ಧರಿರಲಿಲ್ಲ. ಜನರೂ ಅವನ್ನು ಒಪ್ಪಿಕೊಂಡರೆನ್ನುವುದಕ್ಕೆ ನಿದರ್ಶನಗಳಿಲ್ಲ.

ಆದರೆ ಚಿನ್ನ-ತಿರುಮಲಯ್ಯಂಗಾರು ಹಿಡಿದ ಪಟ್ಟು ಬಿಡಲಿಲ್ಲ. ಕಲ್ಯಾಣ ವೇಂಕಟೇಶ್ವರನೇನೋ ಸೋತ; ಆದರೆ ಕಲ್ಯಾಣೋತ್ಸವವೆಂಬುದು ಜನಪ್ರಿಯವಾದ ಉತ್ಸವವಾಗಲಾರದೇ? ಆರೇಳು ವರ್ಷಗಳು ಹೆಣಗಾಡಿ, ಅವನ ತಮ್ಮ ಚಿನ್ನನ್ನ (ತಿರುವೇಂಗಳನಾಥನು) ಕ್ರಿಸ್ತಾಬ್ದ 1546ರಲ್ಲಿ ಬೆಟ್ಟದ ಮೇಲೂ, ಮರುವರ್ಷ ತಾನು ತಿರುಪತಿಯಲ್ಲೂ ವೈವಾಹಿಕೋತ್ಸವದ ವ್ಯವಸ್ಥೆ ಮಾಡಿದರು. ಚಿನ್ನ-ತಿರುಮಲಯ್ಯಂಗಾರು ಶಕವರ್ಷ 1469 ಪ್ಲವಂಗಸಂವತ್ಸರದ ಆವಣಿ ತಿಂಗಳಲ್ಲಿ (ಎಂದರೆ, ಕ್ರಿಸ್ತಾಬ್ದ 1547ರ ಆಗಸ್ಟ್ ಹದಿನೇಳನೆಯ ದಿನ) , ಐದು ದಿನಗಳ ವೈವಾಹಿಕೋತ್ಸವವನ್ನು ('ವೈವಾಹಿಕೋತ್ಸವ-ತಿರುನಾಳ್', ಕಲ್ಯಾಣೋತ್ಸವ) ತಿರುಪತಿಯಲ್ಲಿ ಶ್ರೀಗೋವಿಂದಪ್ಪೆರುಮಾಳಿಗೆ ಚಿತ್ತಿರೈಮಾಸದಲ್ಲಿ ನಡೆಸುವ ವಿಚಾರವಾಗಿ ಸುದೀರ್ಘವಾದ, ಎಲ್ಲ ವಿವರಗಳನ್ನೂ ಒಳಗೊಂಡ ಶಾಸನವೊಂದನ್ನು ಬರೆಸಿದ್ದಾರೆ. ಅವನ ತಮ್ಮನು ಬೆಟ್ಟದ ಮೇಲೆ ಅದರ ಹಿಂದಿನ ವರ್ಷ (ಕ್ರಿಸ್ತಾಬ್ದ 1546ರ ಜುಲೈ ಹದಿನೇಳರಂದು) ಪಂಗುಣಿಮಾಸದಲ್ಲಿ ಐದು ದಿನಗಳ ವೈವಾಹಿಕೋತ್ಸವವನ್ನು ಮಲಯಪ್ಪನಿಗೆ ನಡೆಸುವ ಶಾಸನವನ್ನು ಸಿದ್ಧಪಡಿಸಿದ್ದಾನೆ. ಬೆಟ್ಟದ ಮೇಲೂ ಕೆಳ ತಿರುಪತಿಯಲ್ಲೂ ಕಲ್ಯಾಣೋತ್ಸವ ಆರಂಭವಾದುದು ಹೀಗೆ. ಮಹಂತರ ಕಾಲದಲ್ಲಿ ಇದು ಜನಪ್ರಿಯವಾದ ಉತ್ಸವವೆನಿಸಿ, ಭಕ್ತರು ಅಡಿಗಡಿಗೆ ಈ ಸೇವೆಯನ್ನು ನಡೆಸಲು ಮೊದಲುಮಾಡಿದರು.

ತಿರುವೇಂಗಳನಾಥ

ಚಿನ್ನ-ತಿರುಮಲಯ್ಯಂಗಾರ ತಮ್ಮ (ಪೆದ್ದ-ತಿರುಮಲಾರ್ಯನ ನಾಲ್ಕನೆಯ ಮಗ) ತಿರುವೇಂಗಳನಾಥನಿಗೆ (ತಿರುವೇಂಗಳನಾಥಯ್ಯಂಗಾರು) ಚಿನ್ನನ್ನನೆಂದೂ ಹೆಸರು. ಇವನು ಸಂಕೀರ್ತನಾಚಾರ್ಯನಾಗಿದ್ದನೋ ಇಲ್ಲವೋ ತಿಳಿಯದು; ಅವನ ಹೆಸರಿನಲ್ಲಿ ಕೀರ್ತನೆಗಳೇನೂ ಉಳಿದುಬಂದಿಲ್ಲ. ಆದರೆ 'ಪರಮಯೋಗಿವಿಲಾಸ', 'ಅಷ್ಟಮಹಿಷೀ ಕಲ್ಯಾಣ' ಮತ್ತು 'ಉಷಾಪರಿಣಯ'ಗಳೆಂಬ ತೆಲುಗುಕಾವ್ಯಗಳನ್ನು ರಚಿಸಿದನೆಂಬ ಪ್ರಖ್ಯಾತಿಯಿದೆ. 'ಪರಮಯೋಗಿವಿಲಾಸ'ವನ್ನು ವೇಂಕಟನಾಥ ಮತ್ತು ಅಲಮೇಲು

ಮಂಗೆಯರಿಬ್ಬರನ್ನೂ ಕೂಡಿಸಿ ಸಮರ್ಪಿಸಿದ್ದಾನೆ. 'ಅಷ್ಟಮಹಿಷೀಕಲ್ಯಾಣ'ದ ಅರ್ಪಣೆ ಅಲುಮೇಲುಮಂಗತ್ತಾಯಾರರಿಗೆ ಮಾತ್ರ. ತನ್ನ ವಂಶದ ಹಿರಿಯರಾದ ಅಣ್ಣಮಾಚಾರ್ಯರ ಚರಿತ್ರೆಯನ್ನೂ ಬರೆದಿದ್ದಾನೆ. ಸಂಗೀತ-ಸಾಹಿತ್ಯಗಳೆರಡರಲ್ಲೂ ಈತನಿಗೆ ಪ್ರೌಢಿಮೆಯಿದ್ದಂತೆ ತೋರುತ್ತದೆ. ಆಗ ವಿಜಯನಗರಸಾಮ್ರಾಜ್ಯದ ಅರಸನಾಗಿದ್ದ ಸದಾಶಿವರಾಯನು ಈತನನ್ನು ಸನ್ಮಾನಮಾಡಿದಂತೆ ಉಲ್ಲೇಖವಿದೆ. ಇಷ್ಟಲ್ಲದೆ, ಈತನಿಗೆ ಯೋಗಮಾರ್ಗದ ಪರಿಚಯವಿದ್ದು ಲಂಬಿಕಾಯೋಗವನ್ನು ಅಭ್ಯಾಸಮಾಡುತ್ತಿದ್ದನಂತೆ. ಬೆಟ್ಟದ ದೇವರಿಗೆ ಈತನು ಏರ್ಪಡಿಸಿದ ಕಲ್ಯಾಣೋತ್ಸವವನ್ನು ನಡೆಸುವ ಸಲುವಾಗಿ ಐನೂರು ಗಟ್ಟಿ ವರಹ ಆದಾಯವಿದ್ದ ಶೇಂಡಲೂರು ಎಂಬ ಗ್ರಾಮವನ್ನೂ ನೂರಿಪ್ಪತ್ತು ಗಟ್ಟಿ ವರಹ ಆದಾಯವಿದ್ದ ಮಲ್ಲಾವರವನ್ನೂ ಗುಡಿಗೆ ದಾನಮಾಡಿದನು; ಮತ್ತೆ ತನ್ನ ಹಳೆಯ ಮತ್ತು ಹೊಸ 'ಉಭಯಂ'ಗಳನ್ನು ನಿರ್ವಹಿಸುವ ಸಲುವಾಗಿ ದೇವರಾಯಪಲ್ಲಿಯೆಂಬ ಗ್ರಾಮವನ್ನೂ ದಾನಮಾಡಿದನು (ಕ್ರಿಸ್ತಾಬ್ದ 1554ರಲ್ಲಿ). ಕ್ರಿಸ್ತಾಬ್ದ 1558ರಲ್ಲಿ ಬೆಟ್ಟದ ಕೆಳಗೆ ತಿರುಪತಿಯಲ್ಲಿ ಗೋವಿಂದಪುಷ್ಕರಿಣಿಯ ದಡದ ಮೇಲೆ ಸುದರ್ಶನನ ಸನ್ನಿಧಿಯನ್ನು ಏರ್ಪಡಿಸಿ, ಅದರ ನಿತ್ಯಾರಾಧನೆಗೆ ವ್ಯವಸ್ಥೆ ಮಾಡಿದನು.

ಚಿನ್ನ-ತಿರುಮಲಾಚಾರ್ಯನ ಮಗ ತಿರುವೇಂಗಳಪ್ಪ (ತಿರುವೇಂಕಟಯ್ಯನ್) ಹೆಸರಾದ ಪಂಡಿತ. ಅವನ ಬರಹಗಳು ಸಂಸ್ಕೃತಸಾಹಿತ್ಯಪ್ರಕಾರಕ್ಕೆ ಸೇರಿದವೇ. ಮಮ್ಮಟನ 'ಕಾವ್ಯಪ್ರಕಾಶ'ಕ್ಕೆ 'ಸುಧಾನಿಧಿ'ಯೆಂಬ ವ್ಯಾಖ್ಯಾನವನ್ನೂ, ಅಮರಸಿಂಹನ 'ನಾಮಲಿಂಗಾನುಶಾಸನ'ಕ್ಕೆ (ಅಮರಕೋಶ) 'ಗುರುಬಾಲಪ್ರಬೋಧಿಕಾ' ಎಂಬ ಟೀಕೆಯನ್ನೂ ರಚಿಸಿದ್ದಾನೆ. ಅಮರುಕಕಾವ್ಯವನ್ನು ತೆಲುಗುಭಾಷೆಯಲ್ಲಿ 'ಆಂಧ್ರಾಮರುಕಮು' ಎಂದು ಅನುವಾದಮಾಡಿದವನು ಇವನೇ ಎಂದು ಹೇಳುತ್ತಾರೆ. ಇವನೂ ತಿರುಮಲೆ ಮತ್ತು ತಿರುಪತಿ—ಎರಡೂ ಕ್ಷೇತ್ರಗಳಲ್ಲಿ ಕೆಲವು ಕೈಂಕರ್ಯಗಳನ್ನು ಏರ್ಪಡಿಸಿದ್ದಾನೆ. ನಾನ್ನೂರು 'ರೇಖೆ' ವರಮಾನವಿದ್ದ ಅಂಬತ್ತೂರುಗ್ರಾಮವನ್ನು ತಿರುಪತಿಯಲ್ಲಿ ಗೋವಿಂದಪ್ಪೆರುಮಾಳಿಗೆ ನಡೆಯುವ 'ಪೆಂಡಿಲಿತಿರುನಾಳ್' (ಎಂದರೆ, ಕಲ್ಯಾಣೋತ್ಸವ) ಸಂದರ್ಭದಲ್ಲಿ ಕೆಲವು ವೆಚ್ಚಗಳಿಗೆಂದು ದಾನಮಾಡಿದನು. ಗುಡಿಯಲ್ಲಿ ನಾಗಸ್ವರವನ್ನು ನುಡಿಸಲು ಇಬ್ಬರನ್ನು ವರ್ಷಕ್ಕೆ ತಲಾ ಮೂವತ್ತಾರು 'ರೇಖೆ'ಗಳ ಸಂಬಳದ ಮೇಲೆ ತನ್ನ ಸೇವೆಯಾಗಿ ನೇಮಿಸಿದನು. ತನ್ನ ತಾಯಿಯ ಹೆಸರಾಗಿ ಪೆರಿಯಾಳ್ವಾರರ ಸನ್ನಿಧಿಯನ್ನು ಏರ್ಪಡಿಸಿ ಅಲ್ಲಿ ಅಧ್ಯಯನೋತ್ಸವವನ್ನು ನಡೆಸುವ ವ್ಯವಸ್ಥೆ ಮಾಡಿದನು.

ಇಲ್ಲಿಂದ ಮುಂದೆ (ಎಂದರೆ, ಕ್ರಿಸ್ತಾಬ್ದ 1554ರ ತರುವಾಯ), ತಾಳ್ಲಪಾಕಂ ಮನೆತನದವರು ನಮ್ಮ ಗಮನಕ್ಕೆ ಬರುವುದಿಲ್ಲ. ಬಹುಶಃ ಅವರು ಬೆಟ್ಟದ ಮೇಲಾಗಲೀ ತಿರುಪತಿಯಲ್ಲಾಗಲೀ ಇರುತ್ತಿರಲಿಲ್ಲವೆಂದು ತೋರುತ್ತದೆ. ಈಗಿನ ಗುಂಟೂರು ಜಿಲ್ಲೆಯಲ್ಲಿರುವ ಗುಂಡವರಂ ಎಂಬ ಅಗ್ರಹಾರವು ತಿರುವೇಂಗಳನಾಥನಿಗೇ ಸೇರಿದ್ದು, ಅವನು ಅಲ್ಲಿಯೇ ಇರತೊಡಗಿದನೆಂಬ ಸೂಚನೆಯಿದೆ. ವಿಜಯನಗರಸಾಮ್ರಾಜ್ಯದ ಅರಸ ಸದಾಶಿವ-ಮಹಾರಾಯನು ಚಿನ್ನ-ತಿರುವೇಂಗಳನಾಥನಿಗೆ ಕೊಂಡವೀಟು-ರಾಜ್ಯದ ಅದ್ದಂಕಿ ಸೀಮೆಯಲ್ಲಿ ಮಲ್ಲಾವರವೆಂಬ ಗ್ರಾಮವನ್ನು ಕೊಟ್ಟಿದ್ದನು.

ತಿರುವೇಂಗಳಪ್ಪನಿಗೆ ಕೊಂಡವೀಟುಸೀಮೆಯಲ್ಲಿ ಗೋರಂಜವ್ವೋಲು ಎಂಬ ಗ್ರಾಮವೂ ಇದೇ ರಾಜನಿಂದ ಕೊಟಲ್ಪಟ್ಟಿದ್ದಿತು. ಹೀಗೆ ಅರಸರ ಔದಾರ್ಯಕ್ಕೆ ಪಾತ್ರರಾಗಿ ತಾಳ್ಲಪಾಕದವರು ಬೆಟ್ಟದ ಮೇಲೆ ನಿಲ್ಲದೆ ಹತ್ತಾರು ಕಡೆ ಹರಡಿಕೊಂಡರು. ಪ್ರಾಪಂಚಿಕಸಂಪತ್ತು ಹೆಚ್ಚಿ ಭಗವದ್ಭಕ್ತಿಯ ಗೀಳು ತಪ್ಪಿತು. ಗುಡಿಯ ಇತಿಹಾಸದಲ್ಲಿ ಅವರ ಅಧ್ಯಾಯ ಮುಗಿಯಿತು.



ಎಂಟು

ಕೃಷ್ಣದೇವರಾಯನ ಕೈಂಕರ್ಯ


ತುಳುವ-ಮನೆತನ

ಸಾಳುವ-ನರಸಿಂಹನು ತೀರಿಕೊಂಡನಂತರ, ಅವನ ಮಗ ಇಮ್ಮಡಿ ನರಸಿಂಹನು ವಿಜಯನಗರದ ರಾಜರೆನಿಸಿದ್ದ ಸಂಗಮ-ಮನೆತನದ ಮಲ್ಲಿಕಾರ್ಜುನ, ವಿರೂಪಾಕ್ಷರನ್ನು ಕಡೆಗಾಣಿಸಿ ತಾನೇ ರಾಜನಾದನು. ಇವನ ಮಹಾಪ್ರಧಾನಿಯಾಗಿ ಸಾಮ್ರಾಜ್ಯದ ಪ್ರಾಬಲ್ಯಕ್ಕೆ ಕಾರಣನಾದವನು ತುಳುವವಂಶದ ನರಸನಾಯಕ. ಇಮ್ಮಡಿ ನರಸಿಂಹನು ಕಾಲವಾದಮೇಲೆ ನರಸ-ನಾಯಕನ ಹಿರಿಯ ಮಗ ವೀರನರಸಿಂಹನು ಸಾಳುವ-ಮನೆತನದ ಒಡೆತನವನ್ನು ಕೊನೆಗಾಣಿಸಿ ತುಳುವ-ಮನೆತನಕ್ಕೆ ಅರಸೊತ್ತಿಗೆಯನ್ನು ದಕ್ಕಿಸಿಕೊಂಡನು. ಇವನು ನಾಲ್ಕೈದು ವರ್ಷ ಆಳುವಷ್ಟರಲ್ಲೇ ತೀರಿಕೊಳ್ಳಲು ಅವನ ಮಲತಮ್ಮ ಕೃಷ್ಣದೇವರಾಯನು ವಿಜಯನಗರದ ಸಿಂಹಾಸನವನ್ನೇರಿ, ನಮ್ಮ ನಾಡಿನ ಇತಿಹಾಸದಲ್ಲೇ ಎಲ್ಲರ ಕಣ್ಣು ಕೋರೈಸುವಂತೆ ಬೆಳಗಿ ಆಳಿದನು. ಅವನ ಕಾಲದಲ್ಲಿ ವೇಂಗಡಬೆಟ್ಟದ ವೈಭವವೂ ಪ್ರಖ್ಯಾತಿಯೂ ಹಿಂದೆಂದೂ ಬೆಳೆಯದಂತೆ ಬೆಳೆಯಿತು.

ತುಳುವ-ವಂಶದ ಹಿನ್ನೆಲೆಯೂ ಸಾಳುವ-ವಂಶದಂತೆ ಚಂದ್ರನಿಂದಲೇ ಮೊದಲಾಗಿ, ಬುಧ, ಪುರೂರವ, ಆಯು, ನಹುಷ, ಯಯಾತಿ, ತುರ್ವಸು—ಹೀಗೆ ಮುಂದರಿಯುತ್ತದೆ. ಇತಿಹಾಸದ ಯುಗದಲ್ಲಿ ಕಾಣಿಸಿಕೊಳ್ಳುವವನು ಮೊದಲನೆಯ ತಿಮ್ಮ; ಅವನ ಮಗ ಈಶ್ವರನೆಂಬುವನು. ಇವನ ಮಗನೇ ಇಮ್ಮಡಿ ನರಸಿಂಹನ ಮಹಾಪ್ರಧಾನಿಯಾದ ನರಸ-ನಾಯಕ. ನರಸನಾಯಕನಿಗೆ ಮೂವರು ಹೆಂಡಂದಿರು—ತಿಪ್ಪಾಂಬಾ, ನಾಗಲಾದೇವಿ, ಓಬಳಾಂಬಾ. ತಿಪ್ಪಾಂಬೆಯ ಮಗನೇ ವೀರ-ನರಸಿಂಹ, ವಿಜಯನಗರಸಾಮ್ರಾಜ್ಯದ ಅಧಿಕಾರವನ್ನು ಸಾಳುವರಿಂದ ಕಸಿದುಕೊಂಡವನು. ಇವನು ರಾಜನಾಗಿ ಆಳಿದ ಕಾಲ ಕ್ರಿಸ್ತಾಬ್ದ 1505ರಿಂದ 1509ರವರೆಗೆ. ನಾಗಲಾದೇವಿಯ ಮಗ ಕೃಷ್ಣದೇವರಾಯ (ಕೃಷ್ಣರಾಯ) 1509ರಿಂದ 1530ರವರೆಗೂ ಆಳಿದವನು. ನರಸ-ನಾಯಕನ ಮೂರನೆಯ ಹೆಂಡತಿ ಓಬಳಾಂಬೆಯ ಮಗ ಅಚ್ಯುತರಾಯನು ಕೃಷ್ಣದೇವರಾಯನಾದ ಮೇಲೆ 1543ರವರೆಗೂ ವಿಜಯನಗರದ ಸಿಂಹಾಸನದ ಮೇಲೆ ಕುಳಿತು ಆಳಿದನು. ಓಬಳಾಂಬೆಯ ಇನ್ನೊಬ್ಬ ಮಗ ರಂಗರಾಯನು ಸಣ್ಣಪ್ರಾಯದಲ್ಲೇ ತೀರಿಕೊಂಡನಾಗಿ ಅಚ್ಯುತರಾಯನಾದ ಮೇಲೆ ರಾಜನಾದವನು ರಂಗರಾಯನ ಮಗ ಸದಾಶಿವರಾಯ. ಇವನು ರಾಜನಾಗಿದ್ದುದು ಕ್ರಿಸ್ತಾಬ್ದ 1574ರವರೆಗೆ. ಅವನ ಕಾಲದಲ್ಲಿ

ತುಳುವಮನೆತನದ ಆಡಳಿತ ಮುಗಿದು ಅರವೀಡು-ಮನೆತನದ ಆಳ್ವಿಕೆ ಮೊದಲಾಯಿತು. ಅರವೀಡುಮನೆತನದ ಶ್ರೀರಂಗರಾಯನ ಮಗ ಇಮ್ಮಡಿ ರಾಮರಾಯನು ಕೃಷ್ಣದೇವರಾಯನ ಅಳಿಯ; ತಿರುಮಲಾಂಬೆಯ ಕೈಹಿಡಿದವನು. ಸದಾಶಿವರಾಯನು ರಾಜನಾಗಿದ್ದ ಕಾಲದಲ್ಲಿ ಪ್ರಬಲನಾದ ಇವನು ತಾಳಿಕೋಟೆ ಯುದ್ಧದಲ್ಲಿ (1575) ತೀರಿಕೊಳ್ಳಲು ಅವನ ತಮ್ಮ ತಿರುಮಲರಾಯನು ವಿಜಯನಗರದ ಸಿಂಹಾಸನವನ್ನೇರಿದನು. ಈ ವಂಶದಲ್ಲಿ ಮುಂದೆ ರಾಜನಾದವನು ವೇಂಕಟಪತಿದೇವರಾಯ (1586-1614). ಇವರೆಲ್ಲರೂ ವೇಂಗಡದ ದೇವರ ಭಕ್ತರೇ. ಬೆಟ್ಟದ ಮೇಲೆ ಹಲವಾರು ಕೈಂಕರ್ಯಗಳನ್ನು ನಡೆಸಿ ಗುಡಿಯ ಸಂಪತ್ತನ್ನು ಹೆಚ್ಚಿಸಿದರು.

ನರಸ-ನಾಯಕನ ಹಿರಿಯ ಮಗ ವೀರ-ನರಸಿಂಹನು 'ವೇಂಕಟಾದ್ರಿ'ಯಲ್ಲದೆ



ಕೃಷ್ಣದೇವರಾಯ — ಪತ್ನಿಯರೊಂದಿಗೆ

ಕಾಳಹಸ್ತಿ, ಕಾಂಚಿ, ಶ್ರೀಶೈಲ, ಅಹೋಬಲ, ಶ್ರೀರಂಗ, ಕುಂಭಕೋಣ, ತಿರವಣ್ಣಾಮಲೆ, ಗೋಕರ್ಣ, ರಾಮೇಶ್ವರ, ಹಂಪಿ ಮೊದಲಾದ ಕ್ಷೇತ್ರಗಳಲ್ಲೆಲ್ಲ 'ನಾನಾವಿಧ ಬಹುಳ ಮಹಾದಾನ'ಗಳನ್ನು ನಡೆಸಿದಂತೆ ಉಲ್ಲೇಖವಿದೆ. ವೇಂಕಟಾದ್ರಿಯ ಮೇಲೆ (ಎಂದರೆ, ವೇಂಗಡದ ಬೆಟ್ಟದ ಮೇಲೆ) ಅವನು ಮಾಡಿದ ಸೇವೆಯೇನು ಎನ್ನುವುದು ಎಲ್ಲಿಯೂ ಸ್ಪಷ್ಟವಾಗುವುದಿಲ್ಲ. ಆದರೆ ಅವನ ಹೆಸರಿನಲ್ಲಿ ಉತ್ತರಮೇರೂರಿನ ಅಪ್ಪಾ-ಪಿಳ್ಳೆ ಯೆಂಬಾತನು ಕ್ರಿಸ್ತಾಬ್ದ 1508ರಲ್ಲಿ ತಿರುಪತಿಯ ಗೋವಿಂದರಾಜನಿಗೆ ದೋಲೋತ್ಸವ ವನ್ನು (ಉಂಜಲ್-ತಿರುನಾಳ್) ಏರ್ಪಡಿಸಿದನೆಂಬ ಶಾಸನವಿದೆ. ಈ ಅಪ್ಪಾ-ಪಿಳ್ಳೆಯ ಅಣ್ಣ ಕಾಕರವೇಟ್ಟಿಪ್ಪುಳಿಯಾಳ್ವಾರ್-ಮನ್ನಾರ್ ಪಿಳ್ಳೆಯು ಸಾಳುವ-ನರಸಿಂಹನ ಸೇನಾನಿಗಳಲ್ಲೊಬ್ಬನಾಗಿದ್ದು ದಾನಧರ್ಮಗಳನ್ನು ಮಾಡಿದ ಉಲ್ಲೇಖವಿದೆ.

ಕೃಷ್ಣದೇವರಾಯ-ಮಹಾರಾಯ

ವೀರನರಸಿಂಹನು ಕ್ರಿಸ್ತಾಬ್ದ 1509ರಲ್ಲಿ ತೀರಿಕೊಳ್ಳಲು, ಕೃಷ್ಣದೇವರಾಯನು ಪಟ್ಟವೇರಿದನು. ಪಟ್ಟವೇರಿದ ನಾಲ್ಕು ವರ್ಷಗಳಲ್ಲೇ ಅವನು ಬೆಟ್ಟವೇರಿ ಬಂದು, ದೇವರ ದರ್ಶನ ಮಾಡಿ, ಕೊಡುಗೈಯಿಂದ ಧರ್ಮವನ್ನು ನಡೆಸಿದನು. ಕೃಷ್ಣದೇವ ರಾಯನು ಮನೋಧರ್ಮದಲ್ಲಿ ಶ್ರದ್ಧಾಳುವಾಗಿದ್ದುದರಿಂದ ಹಲವಾರು ಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲೆಲ್ಲ ತನ್ನ ಕೈಂಕರ್ಯಗಳನ್ನು ನಡೆಸಿದನು. ಆದರೆ ವೇಂಗಡದ ಗುಡಿಗೆ ಸಂದಂತೆ ಅವನ ದಾನಧರ್ಮಗಳು ಬೇರೆಲ್ಲಿಯೂ ಸಲ್ಲಲಿಲ್ಲ, ಬೇರಾವ ಗುಡಿಗೂ ಇಲ್ಲಿಗೆ ಬಂದಂತೆ ಏಳು ಬಾರಿ ಬರಲಿಲ್ಲ. ಅವನು ತಾನು ಮಾತ್ರವಲ್ಲದೆ ತನ್ನ ಹೆಂಡತಿಯರು, ಅಧಿಕಾರಿಗಳು, ಊಳಿಗದವರು, ವ್ಯಾಪಾರಿಗಳು, ಊರವರು ಎಲ್ಲರೂ ಈ ಗುಡಿಗೆ ನಡೆದುಕೊಳ್ಳುವಂತೆ ಪ್ರೇರಿಸಿದನು. ಅವನ ಕಾಲದಲ್ಲಿ ಐವತ್ತಕ್ಕೂ ಮೀರಿದ ಶಾಸನಗಳು ಈ ಗುಡಿಗೆ ಸಂಬಂಧಿಸಿದುವು. ಅವನ ಹೆಂಡತಿಯರು, ಅಧಿಕಾರಿಗಳು (ರಾಯಸಂ-ಕೊಂಡಮರಸಯ್ಯ, ಊಡಿಯಂ-ಎಲ್ಲಪ್ಪನಾಯಕರ್, ಬಾಹೂರು-ಮಲ್ಲರಸರ್, ಅಟ್ಟವಣೈ-ಬಸವರಸರ್ ಮೊದಲಾದವರು), ಅವನ ಸೇನಾನಿಗಳು (ಪೆರಿಯ-ಓಬಳ-ನಾಯಕರ್, ಮನ್ನಾರ್-ಪಿಳ್ಳೆ ಮೊದಲಾದವರು), ಅವನ ಪ್ರಧಾನಿ (ಸಾಳುವ-ತಿಮ್ಮರಸಯ್ಯರ್), ಅವನ ಬಾಗಿಲು ಕಾಯುತ್ತಿದ್ದವರು (ಆಡಿಯಪ್ಪನ್ ನರಸಯ್ಯ ಮತ್ತು ಅವನ ಇಬ್ಬರು ತಮ್ಮಂದಿರು), ಅವನ ನೆರವನ್ನು ಪಡೆದುಕೊಂಡ ವರ್ತಕರು (ಧರ್ಮಪುರಂ ಕೊಂಡು-ಶೆಟ್ಟಿ, ಶೆಟ್ಟಮು-ಶೆಟ್ಟಿ, ಶರಣು-ಶೆಟ್ಟಿಯಾರ್, ಪಾಪ್ಪು-ಶೆಟ್ಟಿ-ಅಯ್ಯನ್, ಕೋಮಟಿ-ಪಚ್ಚೈ-ಲಿಂಗಿ-ಶೆಟ್ಟಿ, ತಿಪ್ಪು-ಶೆಟ್ಟಿ ಮೊದಲಾ ದವರು), ಗುಡಿಯಲ್ಲಿ ಲೆಕ್ಕ ಬರೆಯುತ್ತಿದ್ದವರಲ್ಲಿ ಅವನನ್ನು ಮೆಚ್ಚಿಕೊಂಡವರು (ಕುಪ್ಪಾ-ವೆಂಕಟತ್ತರಶು, ಸಿದ್ಧಯ್ಯನ್, ಅಪ್ಪಕೊಂಡರ್, ನಾರಾಯಣನ್, ತಿರುವೇಂಗಡ ಮುಡಯ್ಯಾನ್, ಶ್ರೀನಿವಾಸನ್ ಮೊದಲಾದವರು), ಅವನ ಬಗ್ಗೆ ಆದರವಿದ್ದ ಮಹಾಜನರು (ನಾಗಲಾಪುರದ ವಡಮಲೈ-ಅಣ್ಣಗಳ್, ತಿರುಪತಿಯ ಉದ್ದಣ

ರಾಯರ್-ಅಲಗಪ್ಪರ್, ಶಿವನಸಮುದ್ರದ ತ್ರ್ಯಂಬಕದೇವರ್, ತಿರುನಗರಿಯ ಪೆರುಮಾಳ್-ಮೊದಲಿಯಾರ್, ನಾಯಕಪಾಡಿಗ್ರಾಮದ ಲಕ್ಕು-ನಾಯಕ್ಕರ್, ಪೂತ್ತಲೈ ಪಟ್ಟು ಗ್ರಾಮದ ಶಿನ್ನಪ್ಪ-ರೆಡ್ಡಿ ಮೊದಲಾದವರು), ಅವನ ಕೈಂಕರ್ಯದಿಂದ ಸ್ಫೂರ್ತಿಪಡೆದ ಧರ್ಮಗುರುಗಳು (ವ್ಯಾಸತೀರ್ಥ-ಶ್ರೀಪಾದ-ಒಡೆಯರು, ಪೆರಿಯ-ಕೋಯಿಲ್-ಕೆಳ್ವಿ ತಿರುವೇಂಕಟ-ಜೀಯರ್, ದೊಡ್ಡಯ್ಯಂಗಾರ್-ಅಪ್ಪೈ, ಅಹೋಬಲ ಮಠದ ಶ್ರೀಮನ್ನಾರಾಯಣ-ಜೀಯರ್, ಅನುಸಂಧಾನಂ ಉಡೈಯವರ್-ಕೋಯಿಲ್ ಅಣ್ಣಾ ತಿರುವೇಂಕಟದಾಸರ್, ಕಂದಾಡೆ ಮಾಧವಯ್ಯಂಗಾರ್ ಮೊದಲಾದವರು), ಅವನ ಪುರೋಹಿತರು (ಯಜ್ಞನಾರಾಯಣಭಟ್ಟರು, ರಂಗಾದೀಕ್ಷಿತರು) ಇವರೆಲ್ಲರ ಶಾಸನಗಳೂ ಗುಡಿಗೆ ತಂತಮ್ಮ ಕೈಲಾದ ಕೈಂಕರ್ಯವನ್ನು ಸಲ್ಲಿಸಿದುದನ್ನು ಹೇಳುತ್ತವೆ. ವೇಂಗಡದ ದೈವವು ಅರಸರಿಂದ ಮಾತ್ರ ಆದರವನ್ನು ಪಡೆದುದಲ್ಲ; ಜನಸಾಮಾನ್ಯರೂ ಮೆಚ್ಚಿಕೊಂಡ, ನಂಬಿಕೊಂಡುಬಂದ ದೈವ.

ಕೃಷ್ಣದೇವರಾಯನು ಶ್ರೀವೈಷ್ಣವಧರ್ಮವನ್ನು ಸ್ವೀಕರಿಸಿದ್ದನೆನ್ನಲು ನಿದರ್ಶನಗಳು ಸಾಲವು. ಅವನ ಕುಲಪುರೋಹಿತರಾಗಿ, ಬೆಟ್ಟದ ಮೇಲೂ ಅವನೊಂದಿಗೆ ಬಂದಿದ್ದವರು ರಂಗಾದೀಕ್ಷಿತರು, ಶಿವದೀಕ್ಷಿತರು, ಯಜ್ಞನಾರಾಯಣಭಟ್ಟರು (ರಂಗಾದೀಕ್ಷಿತರ ಮಗ). ಶೋಟ್ಟೈ-ತಿರುಮಲೆ-ನಂಬಿಯ ಮನೆತನದವರು ಸಂಗಮವಂಶದ ಅರಸರ ರಾಜಗುರುಗಳಾಗಿ ಆನೆಗೊಂದಿಯಲ್ಲೇ ನೆಲೆಸಿದ್ದರೂ, ಕೃಷ್ಣದೇವರಾಯನು ಅವರ ಕಡೆ ಗಮನಹರಿಸಿದಂತೆ ತೋರುವುದಿಲ್ಲ. ಕ್ರಿಸ್ತಾಬ್ದ 966ರಿಂದಲೂ ಇಲ್ಲಿ ಮೈದಳೆದ ಶಾಸನಗಳಲ್ಲಿ 'ಶ್ರೀವೈಷ್ಣವ-ರಕ್ಷೆ'ಯೆಂಬ ಮಾತು ಕಡೆಯಲ್ಲಿ ಮೂಡಿಬರುತ್ತಿದ್ದುದು ವಾಡಿಕೆ; ಯಾದವರಾಯರೂ ವಿಜಯನಗರದ ಹಿಂದಿನ ಮನೆತನಗಳ ಅರಸರೂ ತಂತಮ್ಮ ಶಾಸನಗಳಲ್ಲಿ 'ಶ್ರೀವೈಷ್ಣವ-ರಕ್ಷೆ'ಯನ್ನು ಉಳಿಸಿಕೊಂಡು ಬಂದರು. ಆದರೆ ಕೃಷ್ಣದೇವರಾಯನ ಶಾಸನಗಳು ಈ ಮಾತನ್ನು ಬಳಸುವುದಿಲ್ಲ. ಈ ಅರಸನಿಗೆ ಶ್ರೀವೈಷ್ಣವಧರ್ಮದವರಾದ ಜೀಯರರ ಸಂಪರ್ಕ ಅಷ್ಟಾಗಿ ಇದ್ದಿರಲಾರದು. ಗುಡಿಯಲ್ಲಿ ವೇಂಗಡದೊಡೆಯನ ಪಕ್ಕದಲ್ಲೇ ಇದ್ದ 'ರಾಮಾನುಜಸನ್ನಿಧಿ'ಯನ್ನು ಅವನು ಸಂದರ್ಶಿಸಿದನೆಂಬ ಉಲ್ಲೇಖ ಎಲ್ಲಿಯೂ ಬರುವುದಿಲ್ಲ. ಬೆಟ್ಟದ ಮೇಲೆ ನಂದನವನಗಳನ್ನಾಗಲೀ ಪ್ರಬಂಧಪಾರಾಯಣವನ್ನಾಗಲೀ ಇವನು ಏರ್ಪಡಿಸಲಿಲ್ಲ.

ಎಲ್ಲದಕ್ಕಿಂತ ಮಿಗಿಲಾಗಿ ಗಮನಾರ್ಹವಾದುದೆಂದರೆ, ಶ್ರೀವೈಷ್ಣವರ ಕೇಂದ್ರವಾಗಿದ್ದ ಕೆಳತಿರುಪತಿಗೆ ಅವನು ಒಮ್ಮೆಯೂ ಹೋದಂತೆ ಉಲ್ಲೇಖವಿಲ್ಲ, ಅಲ್ಲಿನ ಗೋವಿಂದರಾಜನ ಗುಡಿಗೆ ಯಾವ ಬಗೆಯ ಕೈಂಕರ್ಯವನ್ನೂ ಸಲ್ಲಿಸಿದನೆಂಬ ಶಾಸನವಿಲ್ಲ. ಆ ವೇಳೆಗಾಗಲೇ ತಿರುಪತಿಯ ಹೆಚ್ಚಳವಿದ್ದಿತು, ಗೋವಿಂದರಾಜನ ಗುಡಿ ಬೆಳೆಯುತ್ತಲಿದ್ದಿತು. ಹೀಗಿದ್ದರೂ ಕೃಷ್ಣದೇವರಾಯನು ಆ ಕಡೆ ಕಣ್ಣು ಹೊರಳಿಸಲಿಲ್ಲ. ಅವನ ಕೈಂಕರ್ಯವೆಲ್ಲ ನಡೆದುದು ಬೆಟ್ಟದ ದೇವರಿಗೆ ಮಾತ್ರ.

ಅವನಿಗೆ ಶ್ರೀವೈಷ್ಣವಸಂಪರ್ಕವಿರಲಿಲ್ಲವೆಂದಲ್ಲ. ಅವನ ಅಚ್ಚುಮೆಚ್ಚಿನ ಕವಿ ಅಲ್ಲಸಾನಿ-ಪೆದ್ದನನು ಶ್ರೀವೈಷ್ಣವನೇ; ವಣ್-ಶಠಕೋಪ-ಜೀಯರ ಶಿಷ್ಯ. ರಾಜನ

ಹೆಸರಿನಲ್ಲಿ ಪ್ರಸಿದ್ಧವಾಗಿರುವ ಕಾವ್ಯ 'ಆಮುಕ್ತಮಾಲ್ಯದ', ಆಳ್ವಾರರಲ್ಲಿ ಒಬ್ಬಳಾದ ಗೋದಾದೇವಿಯನ್ನು ಕುರಿತದ್ದೇ. ಆದರೂ ಅವನಿಗೆ ವೇಂಗಡದ ದೇವರು ಶ್ರೀವೈಷ್ಣವ ಧರ್ಮದ ಅರ್ಚಾಮೂರ್ತಿಯೆಂಬ ಕಲ್ಪನೆ ಇರಲಿಲ್ಲ. ವೇಂಗಡಕ್ಕೆ ಅವನು ನಡೆದು ಕೊಂಡಂತೆಯೇ ಕಾಳಹಸ್ತಿಯ ಶೈವಗುಡಿಗೂ ನಡೆದುಕೊಂಡನು. ಮಾಧ್ವಸಂಪ್ರದಾಯದ ವ್ಯಾಸತೀರ್ಥರ ಮೇಲೆ ಅವನಿಗೆ ವಿಶೇಷವಾದ ಗೌರವವಿದ್ದಿತು.

ತಿರುಮಲೆಯ ಗುಡಿಯಲ್ಲಿ ಸ್ಥಾನತ್ತಾರರ ಸ್ಥಾನ ಮೊದಲಿಗೆ ಸುಭದ್ರವಾಗಿದ್ದುದು ಕೃಷ್ಣದೇವರಾಯನ ಕಾಲದಲ್ಲಿ ಸಡಿಲವಾದಂತೆ ತೋರುತ್ತದೆ. ಕೃಷ್ಣದೇವರಾಯನ ಶಾಸನಗಳು ಗುಡಿಯ ಸ್ಥಾನತ್ತಾರರಿಗೆ ಯಾವ ಪಾತ್ರವನ್ನೂ ಉಲ್ಲೇಖಿಸುವುದಿಲ್ಲ ; ಅರಸರು ಅವರನ್ನು ಕಡೆಗಾಣಿಸಿದಂತೆಯೇ ಕಾಣುತ್ತದೆ. ಆ ಕಾಲಕ್ಕೆ ಕೊಂಚ ಮೊದಲು, ಕಂದಾಡೆ-ರಾಮಾನುಜ-ಅಯ್ಯನ ಪ್ರಭಾವ ಅಲ್ಲಿ ಪ್ರಬಲವಾಗಿ, ಸ್ಥಾನತ್ತಾರರೂ ಅವನೊಂದಿಗೆ ಸೇರಿ ಹಲವಾರು ಅನಪೇಕ್ಷಿತಪದ್ಧತಿಗಳನ್ನು ಗುಡಿಯಲ್ಲಿ ಬಳಕೆಗೆ ತಂದಿದ್ದರು. ಇದರಿಂದಾಗಿ ಸ್ಥಾನತ್ತಾರರ ವಿಚಾರವಾಗಿ ಜನರ ಗೌರವ ಇಳಿಮುಖ ವಾಗಿದ್ದಿತು. ಅರಸನು ತನ್ನ ಧರ್ಮವನ್ನು ಇವರ ವಶಕ್ಕೆ ಕೊಡದೆ ನೇರವಾಗಿ ದೇವರಿಗೇ ಕೊಟ್ಟನೆಂದು ಶಾಸನಗಳಲ್ಲಿ ಬರುವ ವಿವರ: "ಭುವನಭರಣಸಾವಧಾನಾಯ ವೇಂಕಟೇಶಾಭಿಧಾನಾಯ ಶೇಷಾಚಲನಿವಾಸಾಯ ಶ್ರೀನಿವಾಸಾಯ ದತ್ತಮಿದಂ ಧರ್ಮ ಶಾಸನಂ." ಸ್ಥಾನತ್ತಾರರು ಇನ್ನೂ ಕಾಣಿಸಿಕೊಳ್ಳದೆ ಇರುವಾಗ, ಎಂದರೆ ವಿಜಯನಗರದ ಮೊದಲ ವಂಶವಾದ ಸಂಗಮವಂಶದಲ್ಲಿ ಸುಪ್ರಸಿದ್ಧನಾದ ದೊರೆ ಮೊದಲನೆಯ ಬುಕ್ಕರಾಯನ ಕಾಲದಲ್ಲಿ (1342-1379), ಅವನು ಕೊಟ್ಟ ಶಾಸನವೊಂದರಲ್ಲಿ ಹೀಗೆಯೇ ದೇವರಿಗೆ ನೇರವಾಗಿ ಧರ್ಮವನ್ನು ಸಲ್ಲಿಸಿದುದನ್ನು ಹೇಳಲಾಗಿದೆ— "ತಿರುವೇಂಗಡಮುಡ್ಡೆಯ್ಯಾನುಕ್ಕು ಕುಡುತ್ತೋಂ." ಸ್ಥಾನತ್ತಾರರು ಪ್ರಬಲರಾದುದು ಕ್ರಿಸ್ತಾಬ್ದ 1390ರಿಂದ ಎಂದು ಹೇಳಬಹುದು. ಒಂದುನೂರ ಇಪ್ಪತ್ತು ವರ್ಷಗಳಲ್ಲಿ ಅವರ ಮರ್ಯಾದೆ ಮಣ್ಣುಗೂಡಿತು.

ಕೃಷ್ಣದೇವರಾಯನ ಶಾಸನಗಳು ಇಲ್ಲಿ ತೆಲುಗು, ಕನ್ನಡ, ತಮಿಳು ಮೂರು ಭಾಷೆಗಳಲ್ಲಿ ಮೂಡಿಬಂದಿವೆ. ಕನ್ನಡದ ಶಾಸನವು ನಂದಿನಾಗರಿಲಿಪಿಯಲ್ಲೂ ಬಂದಿದೆ. ಈ ಭಾಷೆಗಳನ್ನಾಡುವ ಮಂದಿ ವಿಶೇಷವಾಗಿ ಅಲ್ಲಿಗೆ ಬರುತ್ತಿದ್ದುದೂ, ಈ ಸ್ಥಳವು ಆಂಧ್ರದೇಶ, ಕನ್ನಡನಾಡು, ತಮಿಳುನಾಡು ಮೂರೂ ಪ್ರದೇಶಗಳು ಸೇರುವ ಕಡೆ ಇದ್ದುದೂ ಕಾರಣಗಳು. ಅವನ ಶಾಸನಗಳನ್ನು ಕಂಡರಿಸಲು ತನ್ನವನೇ ಆದ ಲಿಪಿಕಾರನನ್ನು ಅವನು ತನ್ನೊಂದಿಗೆ ಕರೆತರುತ್ತಿದ್ದನು. ಅವನ ಹೆಸರೂ ಉಳಿದು ಬಂದಿದೆ—ಪೆದ್ದಯಾಚಾರಿಯ ಮಗ ಶ್ರೀಪತಿ. ಶಾಸನಗಳ ಒಕ್ಕಣೆಯನ್ನು ಸಿದ್ಧಪಡಿಸು ವವರೂ ಅವನ ಊಳಿಗದಲ್ಲಿದ್ದವರೇ—ಗಿಂಡಿ-ಬಸವರಾಯುಲು ಮತ್ತು ಬಗುರಿ-ಮಲ್ಲರಸ. ಶಾಸನಗಳಲ್ಲಿ 'ಶ್ರೀಮನ್-ಮಹಾರಾಜಾಧಿರಾಜ', 'ರಾಜಪರಮೇಶ್ವರ', 'ಮೂರುರಾಯರ ಗಂಡ', 'ಅರಿರಾಯ ವಿಭಾಡ', 'ಅಷ್ಟದಿಕ್ಕುರಾಯ ಮನೋ ಭಯಂಕರ', 'ಭಾಷೆಗೆ ತಪ್ಪುವ ರಾಯರ ಗಂಡ' ಮೊದಲಾದ ಬಿರುದುಗಳು

ಕೃಷ್ಣದೇವರಾಯನನ್ನು ಕುರಿತು ಬರುತ್ತವೆ. ಅವನು ಪಡೆದುಕೊಂಡ ರಾಜ್ಯಗಳ, ನಗರಗಳ ವಿವರವೂ ಕಾಣಸಿಗುತ್ತದೆ—ಕಳಿಂಗದೇಶ, ಉದಯಗಿರಿ, ಅನಂತಗಿರಿ, ವಿಜಯವಾಡ, ಅದ್ದಂಕಿ, ನಾಗಾರ್ಜುನಕೊಂಡ ಮೊದಲಾದುವು. ಅವನು ತಿರುಮಲೆಗೆ ಬಂದುದನ್ನು ಹೇಳುವ ಏಳು ಶಾಸನಗಳು ಕ್ರಿಸ್ತಾಬ್ದ 1513ರಿಂದ 1521ರವರೆಗಿನ ಕಾಲದವು—ಸುಮಾರು ಒಂಬತ್ತು ವರ್ಷಗಳ ಅವಧಿಯೊಳಗೆ ಬರುವುವು.

ಬೆಟ್ಟದ ದೇವರ ಭಕ್ತ

ಕೃಷ್ಣದೇವರಾಯನು ಮೊದಲಬಾರಿಗೆ ಬೆಟ್ಟದಮೇಲೆ ಬಂದುದು ಕ್ರಿಸ್ತಾಬ್ದ 1513ರ ಫೆಬ್ರುವರಿ ತಿಂಗಳ ಹತ್ತನೆಯ ದಿನ. ಅವನೊಂದಿಗೆ ಅವನ ಇಬ್ಬರು ರಾಣಿಯರೂ ಬಂದಿದ್ದರು—ಚಿನ್ನಾದೇವಿ ಮತ್ತು ತಿರುಮಲದೇವಿ. ತಿರುಮಲದೇವಿ ಪಟ್ಟದರಸಿ; ಚಿನ್ನಾದೇವಿ ಪ್ರೀತಿಯರಸಿ. ರಾಜನೊಂದಿಗೆ ಇವರೂ ದೇವರಿಗೆ ಧರ್ಮಗಳನ್ನು ನಡೆಸುತ್ತಾರೆ. ದೇವರಿಗೆ ("ತಿರುವೇಂಗಳನಾಥ ದೇವುನಿಕಿ", "ತಿರುವೇಂಗಳನಾಥ ದೇವರಿಗೆ", "ತಿರುವೇಂಗಡಮುಡ್ಯೆಯಾನುಕ್ಕು") "ಶ್ರೀವೀರಪ್ರತಾಪ ಶ್ರೀವೀರ ಕೃಷ್ಣರಾಯಮಹಾರಾಯರು" ಸಮರ್ಪಿಸಿದುದನ್ನು ಬೆಟ್ಟದ ಗುಡಿಯ ಮೊದಲ ಪ್ರಾಕಾರದ ಉತ್ತರದ ಗೋಡೆಯಲ್ಲಿರುವ ಶಾಸನಗಳು ತಿಳಿಸುತ್ತವೆ—ನವರತ್ನಖಚಿತವಾದ ಕಿರೀಟ, ಮೂರೆಳೆ ಮುತ್ತಿನ ಸರ, ಮುತ್ತಿನ ಪದಕ, ಇಪ್ಪತ್ತೈದು ಬೆಳ್ಳಿ ಆರತಿ ತಟ್ಟೆಗಳು, ಕಿರೀಟದಲ್ಲಿ 1,555 ತೂಕದ ಬಂಗಾರದ ಕಟ್ಟಡ, 1076 ತೂಕದ ಕುಂದಣ-ಬಂಗಾರ, 2822 ಕೆಂಪುಗಳು, 160 ಪಚ್ಚೆ, 423 ಹಳೆಯ ವಜ್ರ, ಮೂರು ಮಾಣಿಕ್ಯಗಳು, 10 ನೀಲಗಳು, 17 ವೈಡೂರ್ಯ, ಗೋಮೇಧಿಕ—ಎಲ್ಲವೂ ಸೇರಿ 3,130 ತೂಕ; 163 ರತಿ (ಕ್ಯಾರೆಟ್) ತೂಗುವ ಮುತ್ತುಗಳನ್ನು ಕಟ್ಟಿದ ಬಂಗಾರದ ಸರಿಗೆ-ಸರ; ಕಿರೀಟದ ಒಟ್ಟು ತೂಕ 3,308. ಮುತ್ತಿನ ಮೂರೆಳೆ ಸರದಲ್ಲಿ 1,370 ಜರಿಮುತ್ತುಗಳಿದ್ದುವು, ಒಂದು ಮಾಣಿಕ್ಯವಿದ್ದಿತು, ಎರಡು ನೀಲಮಣಿಗಳಿದ್ದುವು, 15 ಅಡ್ಡಿಗೆಗಳಿದ್ದುವು; ಇದರ ಒಟ್ಟು ತೂಕ 225 ರತಿಗಳು. ಪದಕದಲ್ಲಿ ಆರು ಮುತ್ತುಗಳೂ 60 ವಜ್ರಗಳೂ 11 ಪಚ್ಚೆಗಳೂ ಮೂರು ಮಾಣಿಕ್ಯಗಳೂ ಐದು ಕೆಂಪುಗಳೂ ಇದ್ದು ಅದರ ಒಟ್ಟು ತೂಕ 91ರಷ್ಟು ಇದ್ದಿತು. ಕೃಷ್ಣದೇವರಾಯನ ರಾಣಿ (ದೇವಿಯರು) ಚಿನ್ನಾಜಿ-ಅಮ್ಮನವರು "ತಿರುವೇಂಗಳನಾಥದೇವರ ಜಿಲಿಪಾಲ-ನೈವೇದ್ಯ ಅವಸರಕೆ" (ಎಂದರೆ, ಹಾಲು ನೈವೇದ್ಯವನ್ನು ಇರಿಸಲು) 324 ತೂಕದ ಬಂಗಾರದ ಬಟ್ಟಲನ್ನೂ, ಅಂಥದೇ ಅದೇ ತೂಕದ ಬಂಗಾರದ ಬಟ್ಟಲನ್ನು ಅದೇ ಉದ್ದೇಶಕ್ಕೆಂದು ಅವನ ಇನ್ನೊಬ್ಬಳು ರಾಣಿ ತಿರುಮಲ-ದೇವಿ-ಅಮ್ಮನವರೂ ಸಮರ್ಪಿಸಿದರು. ಇವೆಲ್ಲವೂ ಗರ್ಭಗುಡಿಯಲ್ಲಿರುವ ಮೂಲವಿಗ್ರಹಕ್ಕೇ ಒಪ್ಪಿಸಿದ ಧರ್ಮಗಳು.

ಕೃಷ್ಣದೇವರಾಯನು ಎರಡನೆಯ ಬಾರಿ ದೇವರ ದರ್ಶನಕ್ಕೆ ಬಂದುದು ಕ್ರಿಸ್ತಾಬ್ದ 1513ರ ಮೇ ತಿಂಗಳು ಎರಡನೆಯ ದಿನದಂದು; ಎಂದರೆ ಮೂರು ತಿಂಗಳು

ಕಳೆಯುವುದರೊಳಗೇ. ಆದರೆ ಈ ಬಾರಿ ಬಂದಾಗ ರಾಣಿಯರು ಜೊತೆಯಲ್ಲಿರಲಿಲ್ಲ. ಮೂಲವರಿಗೆ ಹಲವು ತಿರುವಾಭರಣಗಳನ್ನೂ (ಉಡಿದಾರ, ಒರೆಯುಳ್ಳ ಕಠಾರಿಗಳು, ಕತ್ತಿಗಳು, ಪದಕ, ಭುಜಕೀರ್ತಿಗಳು, ಅಡ್ಡಿಗೆಗಳು; ಎಲ್ಲವೂ ಮುತ್ತು, ಕೆಂಪು, ವಜ್ರ, ಪಚ್ಚೆ, ನೀಲಗಳಿಂದ ಕೂಡಿಸಿದುವು), ಉತ್ಸವಮೂರ್ತಿಗಳಿಗೆ ('ಉಚ್ಚವದೇವರುಗಳು', ಎಂದರೆ ಮಲಯಪ್ಪಸ್ವಾಮಿ ಮತ್ತು ನಾಚ್ಚಿಯಾರರು, ಶ್ರೀದೇವಿ ಮತ್ತು ಭೂದೇವಿ) ಮೂರು ಕಿರೀಟಗಳನ್ನೂ ಸಮರ್ಪಿಸಿ ಹೋದನು. ಕೃಷ್ಣದೇವರಾಯನು ಮೊದಲಬಾರಿ ಬಂದಾಗ ಉತ್ಸವಮೂರ್ತಿಗಳು ಅವನ ಕಣ್ಣಿಗೆ ಬೀಳಲೇ ಇಲ್ಲ; ಎರಡನೆಯ ಬಾರಿ ಕಣ್ಣು ಆ ಕಡೆ ಹರಿದಾಗಲೂ ಅವನ ಆದರ ಅಲ್ಲಿ ಮೂಡಿಕೊಳ್ಳಲಿಲ್ಲ. ಮೂರು ಕಿರೀಟಗಳನ್ನು ಕೊಟ್ಟು ಕೈ ತೊಳೆದುಕೊಂಡ.

ಆ ಕಾಲಕ್ಕೆ ಇತರ ದಾನಿಗಳು ಮಲೆಯಪ್ಪ, ದೇವಿಯರ ಉತ್ಸವಮೂರ್ತಿಗಳನ್ನು ಕುರಿತು ಮಾಡಿದ ದಾನಧರ್ಮಗಳನ್ನೂ, ಮಾಡಿಸಿದ ಉತ್ಸವಗಳನ್ನೂ ನೋಡಿದರೆ ಮೂಲದೇವರಿಗಿಂತ ಉತ್ಸವಮೂರ್ತಿಗಳೇ ಮುಖ್ಯವಾದುವೋ ಎಂಬ ಶಂಕೆ ಮೂಡುವುದು ಸಹಜ. ಅದೂ ಕಂದಾಡೆ-ರಾಮಾನುಜ-ಅಯ್ಯನ ಪ್ರಭಾವದಿಂದ, ಜೀಯರುಗಳ ಪ್ರೋತ್ಸಾಹದಿಂದ, ತಿರುಪತಿಯ ಶ್ರೀವೈಷ್ಣವಸಮುದಾಯದ ಒತ್ತಾಸೆಯಿಂದ, ಪಾಂಚರಾತ್ರಪ್ರಕಾರದ ಮಲಯಪ್ಪನು ಮುಖ್ಯನಾದ; ವೈಖಾನಸರ ಒಂಟಿದೈವ, ವೇಂಗಡದೊಡೆಯ, ಹಿಂದೆ ಬಿದ್ದ! ಮೂಲದೇವರಿಗೆ ಹಿಂದೆ ಪರಾಂತಕಿಯಮ್ಮನು ಮಾಡಿಸಿಕೊಟ್ಟ ಬಂಗಾರದ 'ಪಟ್ಟ', ಓಬಳ-ಯಾದವನು ಮಾಡಿಸಿಕೊಟ್ಟ 'ವೈಕುಂಠಹಸ್ತ' ಇವೆರಡನ್ನು ಬಿಟ್ಟರೆ ಇನ್ನಾವ ಆಭರಣವನ್ನೂ ಈವರೆಗೆ ಯಾರೂ ಮಾಡಿಸಿಕೊಡುವ ಮನಸ್ಸು ಮಾಡಿರಲಿಲ್ಲ; ಅಥವಾ ಪ್ರಬಲರಾದ ಜೀಯರುಗಳೂ ಕಂದಾಡೆ-ಅಯ್ಯಂಗಾರರೂ ಅದಕ್ಕೆ ಅವಕಾಶ ಮಾಡಿಕೊಡಲಿಲ್ಲ.

ದಾನಿಗಳ ಮನಸ್ಸನ್ನೂ ಸಂಪತ್ತನ್ನೂ ಉತ್ಸವಮೂರ್ತಿಗಳೇ ಸೆಳೆದುವು; ಈ ಉತ್ಸವಮೂರ್ತಿಗಳಿಗೆ ನಡೆಯುವ ಉತ್ಸವಗಳೂ ಕಟ್ಟಳೆಗಳೂ ಆ ಸಂದರ್ಭದಲ್ಲಿ ಒಪ್ಪಿಸುವ ನಿಮಂದನಗಳೂ ಮುಖ್ಯವಾದುವು. ದೋಲೋತ್ಸವ, ವಸಂತೋತ್ಸವ, ಕಲ್ಯಾಣೋತ್ಸವ, ಮೃಗಯಾವಿಹಾರ, ವನಭೋಜನ ಮೊದಲಾದುವು ಜನಪ್ರಿಯವಾದ ಪ್ರಸಂಗಗಳಲ್ಲವೆ? ಜನಸಾಮಾನ್ಯರು ಉತ್ಸವಪ್ರಿಯರು. ಮೇಲಾಗಿ ಇಂಥ ಸಂದರ್ಭಗಳಲ್ಲಿ ಪ್ರಬಂಧಗಳ ಪಾರಾಯಣ ನಡೆಯಬಹುದು; ಹಾಗೆ ಪಾಂಚರಾತ್ರಶ್ರೀವೈಷ್ಣವರ ಮೇಲ್ಮೈಯನ್ನು ಕಾಣಿಸಬಹುದು. ಮೂಲವರೆಂದರೆ ಇದು ಯಾವುದರಲ್ಲೂ ಪಾಲ್ಗೊಳ್ಳುವಂತಿಲ್ಲ. ವೈಖಾನಸರು ಗರ್ಭಗುಡಿಯಲ್ಲಿ ನಡೆಸುವ ಸರಳನಿತ್ಯಾರಾಧನೆಯೇನು ಈ ಉತ್ಸವಗಳಿಂದ ಹೆಚ್ಚುವಂತಿಲ್ಲ; ದಿನದಿನಕ್ಕೆ ಯಾವ ಮಾರ್ಪಾಡೂ ಅಲ್ಲಿ ಸಲ್ಲದು. ಹೊರಗೆ ಏನು ಉತ್ಸವವಾದರೂ ಗರ್ಭಗುಡಿಯ ಒಳಗೆ ಅದರ ಯಾವ ಪ್ರಭಾವವೂ ತಟ್ಟುವಂತಿಲ್ಲ. ಇಂದಿಗೂ ಇದು ಹೀಗೆಯೇ ಉಳಿದು ಬಂದಿದೆ. ಉತ್ಸವ-ಸಂದರ್ಭವಾದರೆ ಗರ್ಭಗುಡಿಯಿಂದ ಉತ್ಸವಮೂರ್ತಿ ಹೊರಗಾಗಬೇಕಷ್ಟೆ! ಒಳಗೆ ಇದ್ದುಕೊಂಡು ಹೆಚ್ಚಿನ ಯಾವ ಆರಾಧನೆಯನ್ನೂ ಅರ್ಚನೆಯನ್ನೂ ಸೇವೆಯನ್ನೂ ಪಡೆಯುವ

ಹಾಗಿಲ್ಲ. ಗರ್ಭಗುಡಿಯ ಹೊಸ್ತಿಲನ್ನು ದಾಟಿ ಹೊರಕ್ಕೆ ಬಂದಮೇಲೆ ಮೂಲದೇವರಿಗೂ ಉತ್ಸವಮೂರ್ತಿಗೂ ಸಂಬಂಧವಿಲ್ಲ ; ಉತ್ಸವಮೂರ್ತಿಗೆ ಏನು ಓಲಾಟವನ್ನಾದರೂ ನಡೆಸಬಹುದು. ಈ ಹೊಸ ವ್ಯವಸ್ಥೆಯಿಂದ ಕೃಷ್ಣದೇವರಾಯನು ಆಕರ್ಷಿತನಾಗಲಿಲ್ಲ. ಉತ್ಸವಮೂರ್ತಿಯ ವಿಚಾರವಾಗಿ ಅವನಿಗಿದ್ದುದು ಅನಾದರವೇ; ಉತ್ಸವಗಳನ್ನು ಕುರಿತು ಅಸಡ್ಡೆಯೇ.

ದೇವರಿಗೆ ಕನಕಾಭಿಷೇಕ

ಕೃಷ್ಣದೇವರಾಯನು ಎರಡನೆಯ ಬಾರಿ ದೇವರ ದರ್ಶನವನ್ನು ಮಾಡಿಹೋದ ಒಂದುವರೆ ತಿಂಗಳಲ್ಲೇ ಮತ್ತೆ ದೇವರ ದರ್ಶನಕ್ಕೆ ಬಂದ. ವೇಂಗಡದ ದೇವರು ಅವನನ್ನು ಹೇಗೆ ಆಕರ್ಷಿಸಿದನೆಂದು ಇದರಿಂದ ವ್ಯಕ್ತವಾಗುತ್ತದೆ. ಮೂರನೆಯ ಬಾರಿ ಅವನು ಬಂದುದು ಅದೇ ವರ್ಷದ (1513) ಜೂನ್ ಹದಿಮೂರರಂದು. ಈ ಬಾರಿ ಬಂದಾಗ ತನ್ನ ತಂದೆ ನರಸನಾಯಕ-ಒಡೆಯನ ಮತ್ತು ತಾಯಿ ನಾಗಾಜಮ್ಮನ (ಎಂದರೆ, ನಾಗಲಾದೇವಿಯ) ಧರ್ಮವೆಂದು ವೇಂಗಡದ ದೇವರಿಗೆ ನವರತ್ನಖಚಿತವಾದ ಏನನ್ನೋ (—ಇಲ್ಲಿ ಶಾಸನ ತ್ರುಟಿತವಾಗಿದೆ—) ದಾನಮಾಡಿ, ತನ್ನ ತಂದೆತಾಯಿಯರ ಹೆಸರಿನಲ್ಲಿ ತೈಮಾಸ-ವತ್ಸರೋತ್ಸವ(ಬ್ರಹ್ಮೋತ್ಸವ)ವನ್ನೂ ನಡೆಸುವ ಏರ್ಪಾಡು ಮಾಡಿದನು, ಅದಕ್ಕಾಗಿ ಐದು ಗ್ರಾಮಗಳನ್ನೂ ಗುಡಿಗೆ ಬಿಟ್ಟುಕೊಟ್ಟನು.

ಅವನು ಗುಡಿಗೆ ನಾಲ್ಕನೆಯ ಬಾರಿ ಬಂದುದು ಕ್ರಿಸ್ತಾಬ್ದ 1514ರ ಜುಲೈ ತಿಂಗಳ ಆರರಂದು. ಪ್ರತಾಪರುದ್ರ-ಗಜಪತಿಯ ಮೇಲೆ ದಂಡೆತ್ತಿ ಹೋಗಿ ಅವನನ್ನು ಕೊಂಡವೀಡುವಿನವರೆಗೆ ಓಡಿಸಿ, ಉದಯಗಿರಿದುರ್ಗವನ್ನು ವಶಪಡಿಸಿಕೊಂಡು ವಿಜಯನಗರ-ರಾಜಧಾನಿಗೆ ಬಿಜಯಮಾಡುವಾಗ ತಿರುಮಲೆಗೆ ಬಂದು ತಿರುವೇಂಗಳ ನಾಥದೇವರ ದರ್ಶನವಾಗಿ ತಿರುವೇಂಗನಾಥದೇವರಿಗೆ ಕನಕಾಭಿಷೇಕವನ್ನು ಮಾಡಿದ ಶಾಸನವಿದೆ. ಕನಕಾಭಿಷೇಕವಾದುದು 'ಮೂವತ್ತುಸಾವಿರ ವರಹಾ' (ಬಂಗಾರದ ನಾಣ್ಯ) ಗಳಿಂದ. ಆ ಸಂದರ್ಭದಲ್ಲಿ ದೇವರಿಗೆ 483 ಮುತ್ತುಗಳು, 119 ಮಾಣಿಕ್ಯಗಳು, 121 ನೀಲಮಣಿಗಳೂ, 480 ಚಿನ್ನದ ಕುಸುರಿ (ಸಣ್ಣ ಎಳೆಸರ), 160 ಅಡಕಟ್ಟು ಇದ್ದು ಒಟ್ಟು 250 ತೂಗುವ ತ್ರಿಸರ(ಮೂರೆಳೆ ಸರ)ವನ್ನೂ ಸಲ್ಲಿಸಿದನು; 322 ವಜ್ರಗಳನ್ನೂ ನೂರು ಮಾಣಿಕ್ಯಗಳನ್ನೂ ಕಟ್ಟಿದ್ದು 275 ತೂಗುವ ಕಡಗಗಳ ಜೋಡಿಯನ್ನೂ (ಎಂದರೆ, ಬಾಹುವಲಯಗಳನ್ನೂ) ಒಪ್ಪಿಸಿದನು. ಪೊತಪಿನಾಡೊಳಗಿದ್ದ ತಾಳ್ಲಪಾಕವೆಂಬ ಗ್ರಾಮವನ್ನೂ ಬಿಟ್ಟುಕೊಟ್ಟನು. ದೇವರಿಗೆ ದಿನವೂ ಹತ್ತು ತಿರುಪ್ಪೋನಕಂ-ತಳಿಗೆಗಳು (ಹರಿವಾಣಗಳು), ಎರಡು ತಿರುಕ್ಕಾಮಡೈ (ಅಕಾಳಿಮಂಡೆ) ಮತ್ತು ಎರಡು ಅಪ್ಪ-ಪಡಿಗಳನ್ನು ಸಲ್ಲಿಸಬೇಕೆಂದು ಏರ್ಪಾಡು ಮಾಡಿದನು. ಹೀಗೆ ಸಲ್ಲಿಸಿದ ನೈವೇದ್ಯದಲ್ಲಿ ಒಂದು ಭಾಗವು ತನ್ನ ಪುರೋಹಿತ ರಂಗಾದೀಕ್ಷಿತನಿಗೂ, ಒಂದು ಭಾಗವು

ಶಿವದೀಕ್ಷಿತನಿಗೂ ಸೇರಬೇಕೆನ್ನುವ ವಿವರವೂ ಶಾಸನದಲ್ಲಿದೆ. ಇದೇ ಸಮಯದಲ್ಲಿ ಅವನೊಂದಿಗೆ ಬಂದಿದ್ದ ರಾಣಿ ಚಿನ್ನಾದೇವಿಯು ದೇವರಿಗೆ ಪಚ್ಚೆ-ವಜ್ರಗಳನ್ನು ಕೂಡಿಸಿದ ಪದಕದೊಂದಿಗೆ ಕಂಠಮಾಲೆಯನ್ನು ಕೊಟ್ಟು ದೇವರ ಅಮೃತಪಡಿ ನೈವೇದ್ಯಕ್ಕೆ ಏರ್ಪಾಟನ್ನೂ ಮಾಡಿದಳು. ತೊಂಡಮಂಡಲಕ್ಕೆ ಸೇರಿದ ಮುಡಿಯೂರು ಎಂಬ ಹಳ್ಳಿಯನ್ನೂ ಗುಡಿಗೆ ಬಿಟ್ಟುಕೊಟ್ಟಳು. ಅವಳೊಂದಿಗಿದ್ದ ತಿರುಮಲದೇವಿಯೂ (ಇನ್ನೊಬ್ಬ ರಾಣಿ) ಅದೇ ಬಗೆಯ ಧರ್ಮವನ್ನು ಸಲ್ಲಿಸಿದಳು.

ನವರತ್ನ-ಪ್ರಭಾವಳಿ

ಐದನೆಯ ಬಾರಿ ಕೃಷ್ಣದೇವರಾಯನು ತಿರುಮಲೆಗೆ ಬಂದುದು ಕ್ರಿಸ್ತಾಬ್ದ 1517ರ ಜನವರಿ ಎರಡರಂದು. ಆ ವೇಳೆಗೆ ಗಜಪತಿರಾಜನ ವಿರುದ್ಧ ಅವನು ನಡೆಸುತ್ತಿದ್ದ ಸೆಣಸಾಟ ಮುಗಿದು ಅವನದೇ ಮೇಲುಗೈಯಾಗಿದ್ದಿತು. ವಿಜಯನಗರದಿಂದ ಪೂರ್ವ ದಿಗ್ವಿಜಯಯಾತ್ರೆಯನ್ನು ಕೈಗೊಂಡು ಅವನು ಹಲವಾರು ಅರಸರನ್ನು ಗೆದ್ದು, ಗಿರಿ-ದುರ್ಗ-ಸ್ಥಳಗಳನ್ನು ವಶಪಡಿಸಿಕೊಂಡು, ವಿಜಯನಗರಕ್ಕೆ ಹಿಂದಿರುಗಿದ 1515ರ ಅಕ್ಟೋಬರ್ 25ರಂದು ತಿರುವೇಂಗಳನಾಥನಿಗೆ ನವರತ್ನಪ್ರಭಾವಳಿಯನ್ನು (ಮಕರ ತೋರಣವನ್ನು) ಕಳುಹಿಸಿದ್ದನು. ಈ ಪ್ರಭಾವಳಿಯಲ್ಲಿ 81 ಮಾಣಿಕ್ಯಗಳೂ, 10,694 ಕೆಂಪುಗಳೂ, 754 ಪಚ್ಚೆಗಳೂ, 530 ನೀಲಮಣಿಗಳೂ, 40 ವೈಡೂರ್ಯಗಳೂ, 45 ಗೋಮೇಧಿಕಗಳೂ, 74 ಪುಷ್ಯರಾಗಗಳೂ, 920 ಹಳೆ ವಜ್ರಗಳೂ, 3,933 ಮುತ್ತುಗಳೂ, ನಾಲ್ಕು ಗರಣೆನೀಲಗಳೂ, ಆರು ಹರಳುಗಳೂ, 30 ಶಂಖಿಗಳೂ ಇದ್ದುವೆಂದು ಒಕ್ಕಣೆಯಿದೆ. ಪ್ರಭಾವಳಿಯ ಒಟ್ಟು ತೂಕ 31,124. ಇದನ್ನು ಸಮರ್ಪಿಸಲು ಅವನು ತಿರುಮಲೆಗೆ ಬರಲಿಲ್ಲ.

ಐದನೆಯ ಬಾರಿ (ಜನವರಿ ಎರಡು, 1517) ಬಂದಾಗ ದೇವರಿಗೆ ಕಂಠಮಾಲೆ, ಪದಕಗಳನ್ನು ಸಮರ್ಪಿಸಿದುದಲ್ಲದೆ, ಗರ್ಭಗುಡಿಯ ಮೇಲಿರುವ ವಿಮಾನಕ್ಕೆ ಬಂಗಾರದ ಮೆರುಗು ಹಾಕಿಸಲೆಂದು (**ಗರ್ಭಗೃಹಂ ಮೀದ ವಿಮಾನಾನಕುಂ ಪೈಂಡಿಪೂಶೇ ಅಂದುಕು**) ಮೂವತ್ತುಸಾವಿರ ಗಟ್ಟಿಬಂಗಾರದ ವರಹಾಗಳನ್ನು ಸಲ್ಲಿಸಿ, ತಿರುವೇಂಗಳ ನಾಥನಿಗೆ ಪ್ರತಿಶುಕ್ರವಾರವೂ ನಡೆಯುವ ಪುಳುಕಾಪುವಿಧಿಗೆಂದು ತಿರುಪತಿಯ ಸುತ್ತ ಮುತ್ತ ಇದ್ದ ಹಳ್ಳಿಗಳಿಂದ (ಗೊಡಗರ್‌ನಾಡು) ಸುಂಕವಾಗಿ ಒಂದು ಸಾವಿರ ಬಂಗಾರದ ವರಹಾಗಳನ್ನು ಗುಡಿಯ ಸ್ಥಾನತ್ತಾರರು ಪಡೆಯಬಹುದೆಂದೂ ವಿಧಿಸಿದನು. ಈ ಸಮಯದಲ್ಲೇ ಗುಡಿಯ ಹೊರಬಾಗಿಲ ಪಕ್ಕದಲ್ಲಿ ತನ್ನ ಮತ್ತು ತನ್ನಿಬ್ಬರು ರಾಣಿಯರ ತಾಮ್ರದ ಪುತ್ಥಳಿಗಳನ್ನು ಅಂಜಲಿಬದ್ಧಮುದ್ರೆಯಲ್ಲಿ ಮಾಡಿಸಿ ನಿಲ್ಲಿಸಿದನೆನ್ನುವ ವಿವರವು 'ರಾಯವಾಚಕಮು' ಎಂಬ ತೆಲುಗುಗ್ರಂಥದಿಂದ ತಿಳಿದುಬರುತ್ತದೆ. ಈ ಪುತ್ಥಳಿಗಳ ಮೇಲೆ ಅವರನ್ನು ನಿರ್ದೇಶಿಸುವ ಕನ್ನಡ ಬರಹಗಳಿವೆ. ನಡುವಣ ಪುತ್ಥಳಿ 'ಕೃಷ್ಣರಾಯ ಮಹಾರಾಯರು', ಬಲಗಡೆ 'ಚಿನ್ನಾದೇವಿಯರು', ಎಡಗಡೆ 'ತಿರುಮಲದೇವಿಯರು'.

ವಿಮಾನಕೈಂಕರ್ಯ

ಗರ್ಭಗುಡಿಯ ಮೇಲಿದ್ದ ವಿಮಾನಕ್ಕೆ ಬಂಗಾರದ ಕವಚವನ್ನು ತೊಡಿಸುವ ಸೇವೆ ವೀರನರಸಿಂಗ-ಯಾದವರಾಯನಿಂದ ಕ್ರಿಸ್ತಾಬ್ದ 1262ರ ಸುಮಾರಿನಲ್ಲಿ ನಡೆಯಿತಷ್ಟೆ. ಅನಂತರ ನೂರು ವರ್ಷಗಳಷ್ಟು ಕಾಲದ ಮೇಲೆ (1359 ರಲ್ಲಿ) ಸಾಳುವ ಮಂಗಿದೇವ ಮಹಾರಾಜನು ಈ ವಿಮಾನಕ್ಕೆ ಮತ್ತೆ ಬಂಗಾರದ ಮೆರುಗನ್ನು ಹಾಕಿಸಿದನು. ಐವತ್ತೆಂಟು ವರ್ಷಗಳ ನಂತರ (1417 ರಲ್ಲಿ) ಅಮಾತ್ಯಶೇಖರ ಮಲ್ಲಣ (ಮಾಧವದಾಸರ್) ಮತ್ತೆ ಬಂಗಾರದ ಮೆರುಗನ್ನು ಹಾಕಿಸಿದ ಸೂಚನೆಯಿದೆ. ಗುಡಿಯ ಮುಕ್ಕೋಟಿಪ್ರದಕ್ಷಿಣದ ದಕ್ಷಿಣಗೋಡೆಯ ಮೇಲಿರುವ ಅವನ ಶಾಸನದ ಪಾಠ ಎಲ್ಲವೂ ಉಳಿದುಬಂದಿಲ್ಲ. "...ರ್ ಶಿಷ್ಯರ್ ಆದ-, ...ಶ್ರೀ ಮಾಧವ-ದಾಸರ್,...ಲ್ (ಆ)ನಂದ (ವಿ)-...ಪಣ್ಣೆತಿರು-.....ಪಣಂ-' ಎಂದಷ್ಟೇ ಈ ಶಾಸನ ಇರುವುದು. "ಆನಂದವಿಮಾನ"ವೆಂದು ಇಲ್ಲಿ ಸೂಚನೆಯಿರುವುದಾದರೆ ಅವನು ವಿಮಾನಕೈಂಕರ್ಯವನ್ನು ಕೈಗೊಂಡನೆಂದು ಹೇಳಬೇಕಾಗುತ್ತದೆ. ಆಗ ಇದು ಮೂರನೆಯ ಬಾರಿಗೆ ನಡೆದ ವಿಮಾನಕೈಂಕರ್ಯವಾಗುತ್ತದೆ. ಆದರೆ ಇದು ಅಷ್ಟು ಖಚಿತವಾದ ಸಂಗತಿಯಲ್ಲ. ಮೇಲಾಗಿ ಅಲ್ಲಿಯವರೆಗೆ ಈ ವಿಮಾನಕ್ಕೆ "ಆನಂದವಿಮಾನ"ವೆಂದಾಗಲೀ "ಆನಂದ ನಿಲಯ"ವಿಮಾನವೆಂದಾಗಲೀ ಹೆಸರಿದ್ದುದು ಕಂಡುಬರುವುದಿಲ್ಲ. ಭವಿಷ್ಯೋತ್ತರ ಪುರಾಣದಲ್ಲೇನೋ—

ತತ ಆನಂದನಿಲಯೇ ತೋಂಡಮಾನ್-ನೃಪನಿರ್ಮಿತೇ।
ವಿಮಾನಾಗ್ರೇ ಶ್ರೀನಿವಾಸೋ ರರಾಜ ಭಗವಾನ್ ಹರಿಃ॥

ಎಂದು ಬರುತ್ತದೆ. ಆದರೆ ಈ ಪುರಾಣ ಯಾವ ಕಾಲದ್ದೋ? ತೋಂಡಮಾನನು ವಿಮಾನವನ್ನು ಕಟ್ಟಿಸಿದನೆಂಬ ವಿವರ ಸರಿಯಿರಬಹುದು. ಅದನ್ನು "ಆನಂದನಿಲಯ"ವೆಂದು ಕರೆಯುವ ವಾಡಿಕೆ ಕೃಷ್ಣದೇವರಾಯನ ಕಾಲದಲ್ಲಿ ಕೂಡ ಇರಲಿಲ್ಲ. ಅವನ ಶಾಸನ "ಗರ್ಭಗೃಹಂ ಮೀದ ವಿಮಾನಾನಕುಂ" ಎಂದರೆ "ಗರ್ಭಗುಡಿಯ ಮೇಲಿರುವ ವಿಮಾನಕ್ಕೆ" ಎಂದಷ್ಟೇ ಹೇಳುತ್ತದೆ. ತಮಿಳುಶಾಸನದಲ್ಲಿ "ತಿರುವೇಂಗಡಮುಡೈಯಾನ್ ದಿವ್ಯವಿಮಾನತ್ತುಕ್ಕು" ಎಂದಿದೆ. ಮಲ್ಲಣನು ಈ ಕೈಂಕರ್ಯವನ್ನು ಕೈಗೊಂಡಿದ್ದುದು ದಿಟವಾದರೆ, ನೂರೊಂದು ವರ್ಷಗಳ ನಂತರ ಕೃಷ್ಣದೇವರಾಯನು ಇದನ್ನು ಮತ್ತೆ ಕೈಗೊಂಡನೆನ್ನಬೇಕಾಗುವುದು. ವಿಮಾನಕೈಂಕರ್ಯವು ಶಕವರ್ಷ 1440 ಬಹುಧಾನ್ಯ ಸಂವತ್ಸರದ ಕನ್ಯಾಮಾಸದಲ್ಲಿ ಶುಕ್ಲಪಂಚಮಿಯಂದು (ಎಂದರೆ, ಕ್ರಿಸ್ತಾಬ್ದ 1518ರ ಸೆಪ್ಟೆಂಬರ್ ಒಂಬತ್ತನೆಯ ದಿನ) ಮುಗಿಯಿತೆಂದು ಉಲ್ಲೇಖವಿದೆ. ಇದು ಮುಗಿದೊಡನೆ, ಅದೇ ವರ್ಷದ ಅಕ್ಟೋಬರ್ 16ನೆಯ ದಿನ ತಿರುಮಲೆಗೆ ಕೃಷ್ಣದೇವರಾಯನು ಬಂದನು. ಇದು ಅವನ ಆರನೆಯ ಯಾತ್ರೆ. ಈ ನಡುವೆ ಅವನ

ಪಟ್ಟಮಹಿಷಿ ತಿರುಮಲೆದೇವಿಗೆ ಗಂಡುಮಗನೊಬ್ಬ ಹುಟ್ಟಿದ್ದನು; ಇದೂ ಯಾತ್ರೆಯ ಉದ್ದೇಶದಲ್ಲಿ ಸೇರಿದ್ದಿರಬಹುದು.

ಏಳನೆಯ ಬಾರಿ ಕೃಷ್ಣದೇವರಾಯನು ತಿರುಮಲೆಗೆ ಬಂದುದು ಕ್ರಿಸ್ತಾಬ್ದ 1521ರ ಫೆಬ್ರುವರಿ ಹದಿನೇಳರಂದು. "ಆ ದಿನ ತಿರುಮಲೆ ಮೇಲೆಗೆ ಚಿತ್ತೈಸಿ ತಿರುವೇಂಗಳನಾಥ ದೇವರನೂ ದರ್ಶಿಂಸಿ ದೇವರಿಗೆ ನವರತ್ನಕಿಲಿತವಾದ ಪೀತಾಂಬರವನೂ, ಮುತ್ತು ಮಾಣಿಕ್ಯ ನೀಲ ಪಚ್ಚೆಯಿಕ್ಕಿದ ಕುಲ್ಲಾಯ 1 ನವರತ್ನ ಖಚಿತವಾದ ಚಾಮರ, ಕಾಣಿಕೆಗೆ 10000 ವರಹನೂ ವೊಂದು ಪದಕವನೂ ಸಮರ್ಪಿಸಿ, ತಂಮ್ಮ ದೇವಿಯರು ತಿರುಮಲದೇವಂಮನವರ ಕಯ್ಯಲಿ ನವರತ್ನ ಪದಕವನೂ ಸಮರ್ಪಣೆ ಮಾಡಿಸಿ"ದ ರೆನ್ನುವ ಒಕ್ಕಣೆ ಈ ಸಂದರ್ಭದಲ್ಲಿ ಬರೆಯಿಸಿದ ಧರ್ಮಶಾಸನದಲ್ಲಿದೆ. ದೇವರಿಗೆ ಅವನು ಒಪ್ಪಿಸಿದ ತಲೆಯ ಆಭರಣವನ್ನು "ಕುಲ್ಲಾಯ" ಎಂದರೆ ಕುಲಾವಿಯೆಂದು ಕರೆದಿರುವುದು ಸ್ವಾರಸ್ಯವಾಗಿದೆ. ಕುಲಾವಿಯೆಂದರೆ ನೀಳವಾಗಿ ಟೋಪಿಯಂತೆ ಕಾಣುವ ತಲೆಯುಡಿಗೆ. ಮೂಲವಿಗ್ರಹದಲ್ಲಿರುವುದು ಹೀಗೆಯೇ ಎಂದು ಊಹಿಸಿಕೊಳ್ಳಬಹುದು.

ಹೀಗೆ ಏಳು ಬಾರಿ ಕೃಷ್ಣದೇವರಾಯನು ಬೆಟ್ಟದ ಮೇಲೆ ಬಂದು ತುಂಬ ಬೆಲೆಬಾಳುವ ಒಡವೆಗಳನ್ನು ವೇಂಗಡದ ದೇವರಿಗೆ ಕೊಟ್ಟನು. ಆದರೆ ಈಗ ಪ್ರಭಾವಳಿ, ಕಿರೀಟ-ಕಠಾರಿಗಳನ್ನು ಬಿಟ್ಟು ಉಳಿದುವೆಲ್ಲ ಮಾಯವಾಗಿವೆಯೆಂದು ಗುಡಿಯ ಆಚಾರ್ಯಪುರುಷರಲ್ಲಿ ಒಬ್ಬರಾಗಿದ್ದ ವೀರರಾಘವಾಚಾರ್ಯರು ಹೇಳುತ್ತಾರೆ. ತಾನು ನೆನೆಸಿಕೊಂಡ ಕೆಲಸ ಕೈಗೂಡಿದುದು ಈ ದೇವರ ನೆರವಿನಿಂದಲೇ ಎಂಬ ನಂಬಿಕೆ ಅವನಿಗಿದ್ದುದರಿಂದ, ಒಂದೊಂದು ಜಯದ ಸಂದರ್ಭದಲ್ಲಿಯೂ ಅವನು ಬೆಟ್ಟದ ಮೇಲೆ ಬಂದು ಕೃತಜ್ಞತೆಯನ್ನು ಸಲ್ಲಿಸುತ್ತಿದ್ದುದು ಈ ಆಭರಣಗಳ ದಾನದಿಂದ. ಏಳು ಬಾರಿ ಬೆಟ್ಟವೇರಿ ಬಂದುದೂ ಸುಮಾರು ಹೀಗೆಯೇ ಎನ್ನಬಹುದು.

ಅರಸನಂತೆ ಅಧಿಕಾರಿಗಳು

ಕೃಷ್ಣದೇವರಾಯನ ಕಡೆಗಾಲ ಅಷ್ಟು ನೆಮ್ಮದಿಯಿಂದಿರಲಿಲ್ಲ. ಬಯಸಿ ಬಯಸಿ, ತಿರುಮಲದೇವಿಯ ಬಸುರಿಂದ ಬಂದ ಮಗ ಆರು ವರ್ಷಗಳಲ್ಲೇ ತೀರಿಕೊಂಡ. ಈ ದುರ್ಘಟನೆ ನಡೆದದ್ದು ಕ್ರಿಸ್ತಾಬ್ದ 1524ರಲ್ಲಿ. ಮಗನು ಹುಟ್ಟಿದನೆಂದು ಸಂತೋಷಪಟ್ಟು ತಿರುವೇಂಕಟನಾಥದೇವರಿಗೆ ಕೃತಜ್ಞತೆಯನ್ನು ಸಲ್ಲಿಸಲು 1518ರ ಅಕ್ಟೋಬರ್ ಹದಿನಾರರಂದು ಬೆಟ್ಟದ ಮೇಲೆ ಬಂದಿದ್ದನಷ್ಟೆ. ಕಡೆಯ ಬಾರಿ ಅವನು ಬೆಟ್ಟಕ್ಕೆ ದೇವರ ದರ್ಶನಕ್ಕೆ ಬಂದುದು 1521ರಲ್ಲಿ. ಮೂರು ವರ್ಷಗಳ ನಂತರ ಮಗನನ್ನು ಕಳೆದುಕೊಂಡು ಅವನ ಆರೋಗ್ಯ ಕೆಟ್ಟಿತು, ಮಾನಸಿಕಸ್ಥಿತಿ ಹದಗೆಟ್ಟಿತು. ಅವನು ರಾಜ್ಯವಾಳುವಂತಿರಲಿಲ್ಲ. ಆಗ ಅವನ ಮಲತಮ್ಮ ಅಚ್ಯುತರಾಯ-ಮಹಾರಾಯನು ಅವನ ಪರವಾಗಿ ರಾಜ್ಯಭಾರಮಾಡತೊಡಗಿದನು. ಎರಡು-ಮೂರು

ವರ್ಷಗಳಲ್ಲೇ ಕೃಷ್ಣದೇವರಾಯನ ಆರೋಗ್ಯ ಸ್ವಲ್ಪ ಸುಧಾರಿಸಿ ಮತ್ತೆ ಆಡಳಿತದ ಹೊಣೆಯನ್ನು ಹೊತ್ತನಾದರೂ ಬಹುಕಾಲ ಉಳಿಯಲಿಲ್ಲ. 1530ರಲ್ಲಿ ಅವನು ತೀರಿಕೊಂಡನು. ಅಚ್ಯುತರಾಯ-ಮಹಾರಾಯನೇ ಆಳತೊಡಗಿದನು.

ಕೃಷ್ಣದೇವರಾಯನ ಹತ್ತಿರ ಕೆಲಸಮಾಡುತ್ತಿದ್ದ ಹಲವರು ವೇಂಗಡದ ದೇವರಿಗೆ ಬಗೆಬಗೆಯ ಸೇವೆಗಳನ್ನು ಸಲ್ಲಿಸಿದರು. ಅವನ ಪ್ರಧಾನಿಯಾಗಿದ್ದವನು ಸಾಳುವ ತಿಮ್ಮಣ್ಣ ದಂಡನಾಥ; ಸಾಳುವವಂಶದ ರಾಚಿರಾಜನೆಂಬುವನ ಮಗ; ಅವನದ್ದು ಕೌಂಡಿನ್ಯಗೋತ್ರ, ಆಪಸ್ತಂಬಸೂತ್ರ, ಯಜುಃಶಾಖೆ. ಅವನು ವೀರನರಸಿಂಹನ ಕಾಲದಲ್ಲೂ ಪ್ರಧಾನಿಯಾಗಿದ್ದ, ಮುಂದೆ ಅಚ್ಯುತರಾಯನ ಕಾಲದಲ್ಲೂ ಪ್ರಧಾನಿಯಾಗಿ ಮುಂದುವರೆದ. ಹೀಗೆ ಮೂವರು ರಾಜರಿಗೆ ಒಟ್ಟು ಮೂವತ್ತು ವರ್ಷಗಳ ಕಾಲ 'ಪ್ರಧಾನಿ'ಯಾಗಿ ವಿಜಯನಗರದ ಆಡಳಿತವನ್ನು ದಕ್ಷತೆಯಿಂದ ನಡೆಸಿದ. ಅವನಿಗೆ 'ಶಿರಃಪ್ರಧಾನಿ'ಯೆಂದೂ, 'ಶ್ರೀಕೃಷ್ಣದೇವರಾಯ ಸಾಮ್ರಾಜ್ಯ ಭಾರಧುರಂಧರ'ನೆಂದೂ ಬಿರುದುಗಳಿದ್ದುವು. ಅವನು ಪ್ರಧಾನಿಮಾತ್ರವಲ್ಲದೆ ದಂಡನಾಯಕನೂ ಆಗಿದ್ದು ಗಜಪತಿಯ ಮೇಲೆ, ಬಿಜಾಪುರದ ಸುಲ್ತಾನನ ಮೇಲೆ ಕೃಷ್ಣದೇವರಾಯನು ನಡೆಸಿದ ಯುದ್ಧಗಳಲ್ಲಿ ಪ್ರಮುಖಪಾತ್ರವನ್ನು ವಹಿಸಿದ್ದನು. ಕೊಂಡವೀಡುದುರ್ಗವನ್ನು ವಶಪಡಿಸಿಕೊಳ್ಳುವದರಲ್ಲಿ ಅವನ ಶೌರ್ಯ, ಸಾಹಸಗಳು ಎಲ್ಲರ ಮೆಚ್ಚುಗೆಯನ್ನು ಪಡೆದುವು. ಕ್ರಿಸ್ತಾಬ್ದ 1515ರಲ್ಲಿ ಕೊಂಡವೀಡುದುರ್ಗವು ವಿಜಯನಗರದ ಕೈ ಸೇರಿತು.

ಪ್ರಧಾನಿ, ದಂಡನಾಯಕ ಮಾತ್ರವಲ್ಲದೆ ಅವನು ತಕ್ಕಮಟ್ಟಿಗೆ ಸಂಸ್ಕೃತ ಪಂಡಿತನೂ ಆಗಿದ್ದನೆಂಬುದು ಅವನು ಅಗಸ್ತ್ಯನ 'ಬಾಲಭಾರತ'ಕ್ಕೆ ಬರೆದಿರುವ ವ್ಯಾಖ್ಯಾನದಿಂದ ಸ್ಪಷ್ಟವಾದೀತು. ಅವನ ತಮ್ಮ ಗೋವಿಂದರಾಜನೂ ಕ್ರಮವಾಗಿ ಗುತ್ತಿರಾಜ್ಯ, ಕೊಡುಗನಾಡು, ತೆರಕಣಾಂಬಿಯ ಸೀಮೆ ಇವುಗಳ ಮೇಲೆ ಅರಸನ ಪರವಾಗಿ ಒಡೆತನ ನಡೆಸುತ್ತಿದ್ದು ಅನಂತರ ವಿಜಯನಗರದ ರಾಜಧಾನಿಯನ್ನು ನೋಡಿಕೊಳ್ಳುವ ಹೊಣೆಯನ್ನು ಹೊತ್ತನು. ತಿಮ್ಮಮಂತ್ರಿಯೂ ಅವನ ತಮ್ಮನೂ ತಿರುಮಲೆಯ ದೇವರಿಗೆ ಹಳ್ಳಿಗಳನ್ನು ದಾನಮಾಡಿದ ಶಾಸನಗಳಿವೆ. ಕ್ರಿಸ್ತಾಬ್ದ 1512ರ ಸುಮಾರಿಗೆ ತಿಮ್ಮಮಂತ್ರಿಯು ಪೊತ್ತಪಿನಾಡಿನಲ್ಲಿದ್ದ ಪರಾಂದಲೂರು ಗ್ರಾಮವನ್ನೂ, 1522ರ ಸುಮಾರಿಗೆ ಗೋವಿಂದನು ಗಂಡಿಕೋಟ ಸೀಮೆಯಲ್ಲಿದ್ದ ಮೇಲ್‌ಪಾಡಿ ಗ್ರಾಮವನ್ನೂ ಗುಡಿಗೆ ಕೊಟ್ಟರು. ತಿಮ್ಮಮಂತ್ರಿಯ ಹೆಂಡತಿ ಲಕ್ಷ್ಮಿ-ಅಮ್ಮನೂ, ಈ ದೇವರಿಗೆ ಮಾಡಿದ ದಾನಗಳ ಉಲ್ಲೇಖವಿದೆ.

ರಾಯನ ಒಬ್ಬನೇ ಮಗನು ಎಳೆತನದಲ್ಲಿ ತೀರಿಕೊಂಡಮೇಲೆ (1524ರಲ್ಲಿ) ತಿಮ್ಮಮಂತ್ರಿಯು ದೊರೆಯ ವಿಶ್ವಾಸವನ್ನು ಕಳೆದುಕೊಂಡಂತೆ ತೋರುತ್ತದೆ. ಅವನ ಭಾಗ್ಯ ಬದಲಾದುದು ಕ್ರಿಸ್ತಾಬ್ದ 1536ರ ಕೆಲವು ಶಾಸನಗಳಿಂದ ತೋರಿಬರುತ್ತದೆ. ತಾನು ಗುಡಿಗೆ ಮಾಡಿದ ದಾನಗಳಲ್ಲಿ ದಾನಿಯ ಪಾಲಿನ ಪ್ರಸಾದವನ್ನು ತಾಳ್ಳಪಾಕಂ ತಿರುಮಲಾಚಾರ್ಯನಿಗೆ ಕ್ರಮವಾಗಿ 4600, 3200 ಮತ್ತು 1900 ಪಣಗಳಿಗೆ

ಮಾರಿಕೊಂಡುದನ್ನು ಈ ಶಾಸನಗಳು ತಿಳಿಸುತ್ತವೆ. ಪ್ರಸಾದವನ್ನೂ ಮಾರಿಕೊಳ್ಳ ಬೇಕಾದರೆ ಅವನ ಪರಿಸ್ಥಿತಿ ಹೇಗಿದ್ದಿತೆನ್ನುವುದನ್ನು ಊಹಿಸಿಕೊಳ್ಳಬಹುದು. ಈ ಪರಿಸ್ಥಿತಿ ಒದಗಿದುದು ಅಚ್ಯುತರಾಯನು ದೊರೆಯಾಗಿದ್ದಾಗ.

ಕೃಷ್ಣದೇವರಾಯನ ಸೇನೆಗಳ ಅಧಿಪತಿಯಾಗಿದ್ದ ಪೆರಿಯ-ಓಬಳ-ನಾಯಕ್ಕರ್ (ರಾಮ-ನಾಯಕ್ಕರ್) ತಿಮ್ಮಮಂತ್ರಿಯಂತೆಯೇ ತುಂಬ ಸಮರ್ಥನಾಗಿದ್ದವನು; ಅವನಿಗೆ 'ಮಹಾನಾಯಂಕಾಚಾರ್ಯ'ನೆಂಬ ಬಿರುದಿದ್ದಿತು. ಇವನು ಕ್ರಮವಾಗಿ ಸಾಳುವ-ನರಸಿಂಹನ ಮಗ ಇಮ್ಮಡಿ ನರಸಿಂಹ, ತುಳುವವಂಶದ ವೀರನರಸಿಂಹ ಮತ್ತು ಕೃಷ್ಣದೇವರಾಯ—ಈ ಮೂವರು ದೊರೆಗಳ ಸೇನಾನಿಯಾಗಿದ್ದವನು. ಕ್ರಿಸ್ತಾಬ್ದ 1514ರ ಸುಮಾರಿಗೆ ದೇವರೆದುರು ತುಪ್ಪದ ದೀಪಗಳನ್ನು ಉರಿಸುವ ಸಲುವಾಗಿ ಒಮ್ಮೆ ಇನ್ನೂರು ಹಸುಗಳನ್ನೂ ಇನ್ನೊಮ್ಮೆ ಐವತ್ತು ಹಸುಗಳನ್ನೂ ಇವನು ಬೆಟ್ಟದ ಗುಡಿಗೆ ದಾನ ಮಾಡಿದ ಶಾಸನಗಳಿವೆ. ಗುಡಿಯ ಶ್ರೀಭಂಡಾರಕ್ಕೆ ತಿರುಕ್ಕುಡವೂರು ಜಿಲ್ಲೆಯಲ್ಲಿರುವ ಕಡಲೂರುಗ್ರಾಮವನ್ನೂ ಬಿಟ್ಟುಕೊಟ್ಟನು. 1504ರಲ್ಲಿ ಬರೆಯಿಸಿದ ಈ ಶಾಸನವು "ವೇಂಗಡದೊಡೆಯನ ಗರ್ಭಗುಡಿಯಲ್ಲೇ ಇರುವ ರಘುನಾಥ"ನಿಗೆ (**திருவேங்கடமுடையான் சன்னிதியில் எலுந்தருவிலிருக்க ரகுநாதனுக்கு**) ನಿತ್ಯದೀಪವನ್ನು ತನ್ನ ಹೆಸರಿನಲ್ಲಿ ಹಚ್ಚಬೇಕೆನ್ನುವುದು ಗ್ರಾಮದಾನದ ಉದ್ದೇಶ ಗಳಲ್ಲೊಂದು ಎಂದು ನಿರ್ದೇಶಿಸುತ್ತದೆ. ಎಂದರೆ ಗರ್ಭಗುಡಿಯಲ್ಲಿ ಈಗ ನಾವು ಕಾಣುವ ರಾಮಪರಿವಾರದ ಮೂರ್ತಿಗಳು ಆ ಕಾಲದಲ್ಲೇ ಅಲ್ಲಿದ್ದುವೆಂದು ಅರ್ಥ. ರಾಮ, ಸೀತೆ, ಲಕ್ಷ್ಮಣ ಮತ್ತು ಸುಗ್ರೀವ—ಈ ನಾಲ್ವರ ತಾಮ್ರದ ಪ್ರತಿಮೆಗಳು ಈ ಪರಿವಾರದಲ್ಲಿ ಸೇರಿವೆ. ಅವುಗಳ ವಿಚಾರ ಮುಂದೆ ಹೇಳಬೇಕಾಗುತ್ತದೆ.

ಕೃಷ್ಣದೇವರಾಯನಿಗೆ ಅಚ್ಚುಮೆಚ್ಚಿನ ಇನ್ನೊಬ್ಬ ಅಧಿಕಾರಿಯೆಂದರೆ ರಾಯಸಂ (ರಾಯಸ್ತ) ಕೊಂಡಮರಸಯ್ಯ. ಇವನ ತಂದೆ ತಿಮ್ಮರಸ-ಮಂತ್ರಿಯೂ (ತಿಮ್ಮ ರಸಯ್ಯಂಗಾರ್), ಅವನ ತಂದೆ ಶ್ರೀಪತ್ಯಾಚಾರ್ಯನೂ ವಿಜಯನಗರದ ಅರಸರಿಗೆ ಸೇವೆ ಸಲ್ಲಿಸಿದ್ದವರು. ಶ್ರೀಪತ್ಯಾಚಾರ್ಯನು ಪ್ರೌದ್ದಟೂರಿಗೆ ಒಡೆಯನಾಗಿದ್ದವನು, ತಿಮ್ಮರಸನು ಪೆನುಗೊಂಡೆಯ (ಘನಗಿರಿಕೋಟೆಯ) ಒಡೆಯನಾಗಿದ್ದವನು. ಇವರು ಉದಯಗಿರಿಯ ಕನ್ನಡ ಮಾತನಾಡುವ ಬ್ರಾಹ್ಮಣರು; ಋಕ್‌ಶಾಖೆ, ಆಶ್ವಲಾಯನ ಸೂತ್ರದ ಭಾರದ್ವಾಜಗೋತ್ರದವರು. ರಾಯಸಂ ಕೊಂಡಮರಸಯ್ಯನು 'ರಾಯ ಸಿಂಹಾಸನದ ಕಾರ್ಯಕರ್ತ'ನೆನಿಸಿದ್ದವನು; ಪೆನುಗೊಂಡೆಯ ಅಧಿಪತಿಯಾಗಿದ್ದು ಕೊಂಡು ಕೃಷ್ಣದೇವರಾಯನಿಗೆ ಕಾರ್ಯದರ್ಶಿಯಂತಿದ್ದವನು. ಸಿಂಹಾದ್ರಿಯಲ್ಲಿ ಕೃಷ್ಣದೇವರಾಯನ ವಿಜಯಸ್ತಂಬವನ್ನು ನೆಟ್ಟವನು ಇವನೇ; ರಾಯಚೂರುಯುದ್ಧ ದಲ್ಲಿಯೂ ರಾಯರ ಪರವಾಗಿ ಹೋರಾಡಿ ಅವರಿಗೆ ಗೆಲುವನ್ನು ತಂದುಕೊಟ್ಟವನು. ಗುಡಿಯ ಬೊಕ್ಕಸಕ್ಕೆ ಉದಯಗಿರಿ ರಾಜ್ಯದ ನೆಲ್ಲೂರುಸೀಮೆಯಲ್ಲಿರುತ್ತಿದ್ದ ಮುಲುಂಬುಂಡಿ ಎಂಬ ಗ್ರಾಮದ ಉತ್ಪತ್ತಿಯನ್ನು ಸಲ್ಲಿಸಿ, ವೇಂಗಡದೊಡೆಯನಿಗೆ

ದಿನವೂ ತನ್ನ ಹೆಸರಿನಲ್ಲಿ ಹದಿನಾರು ತಿರುಪ್ಪೋನಕಗಳನ್ನೂ ಒಂದು ಅಪ್ಪ-ಪಡಿಯನ್ನೂ ಒಂದು ತಿರುಕ್ಕಣಾಮಡೆಯನ್ನೂ (ಮನೋಹರಂ) ಒಪ್ಪಿಸುವ ವ್ಯವಸ್ಥೆ ಮಾಡಿದನು.

ಮಹಾಜನರ ಸೇವೆ

ಪ್ರಧಾನಿಗಳು ಸೇನಾನಿಗಳು ಹಾಗಿರಲಿ, ಸಣ್ಣಹುದ್ದೆಗಳಲ್ಲಿದ್ದವರು ಕೂಡ ಬೆಟ್ಟದ ಗುಡಿಗೆ ತಮ್ಮ ಕೈಂಕರ್ಯವನ್ನು ಸಲ್ಲಿಸಿರುವುದನ್ನು ಕಾಣಬಹುದು. ಕೃಷ್ಣದೇವರಾಯನ ಅರಮನೆಯ ತಲೆಬಾಗಿಲಲ್ಲಿ ನಿಂತು ರಾಯರ ದರ್ಶನಕ್ಕೆಂದು ಬಂದವರನ್ನು ಒಳಕ್ಕೆ ಒಯ್ಯುವವರು, ರಾಯರ ಅಪ್ಪಣೆಯನ್ನು ಇತರರಿಗೆ ತಿಳಿಯಪಡಿಸುವವರು 'ಅವಸರ ದವರು' ('ರಾಯರ ಬಾಗಿಲ ಅವಸರದವರು'). ಇಂಥವರಲ್ಲಿ 'ಅವಸರದ' ನರಸಯ್ಯ ಮತ್ತು ಅವನ ತಮ್ಮ ತಿಮ್ಮಯ್ಯ ('ವಾಕಿಟಿ-ಕಾವಲಿ' ತಿಮ್ಮಣ) ಇವರು ಕ್ರಿಸ್ತಾಬ್ದ 1512ರಲ್ಲಿ "ತಿರುವೇಂಗಳನಾಥದೇವರ ಸಂನಿಧಿಯಲು ಸದಾ ನಮಸ್ಕಾರವ ಮಾಡುತಿಹಾರು" ಎಂಬ ಶಾಸನವನ್ನು ಬರೆಸಿದ್ದಾರೆ. ಗುಡಿಯ ಮೊದಲ ಪ್ರಾಕಾರದ ದಕ್ಷಿಣಗೋಡೆಯ ಮೇಲಿರುವ ಈ ಸಣ್ಣ ಶಾಸನದ ಕಡೆಯಲ್ಲಿ ಅವರ ತಾಯಿ ಬಸವಮ್ಮನ ನಮಸ್ಕಾರವನ್ನೂ ದೇವರಿಗೆ ಸಲ್ಲಿಸಲಾಗಿದೆ ("ತಾಇ ಬಸವಂಮಾ ನಮಸ್ಕಾರ"). ರಾಯರ ಎದುರಿನಲ್ಲಿ ಬೆಳ್ಳಿಕಟ್ಟಿಗೆಯನ್ನು ಹಿಡಿದು ನಡೆದುಹೋಗುವ ತಮ್ಮು-ನಾಯಕ್ಕರ್ (ಕಟ್ಟಿಗೆ-ದಾದಿನೇನಿ-ದಳವಾಯಿ-ತಿಮ್ಮಯ್ಯ) ಎಂಬುವವನು ಜಿಲೇಳ್ಳ-ಬಸವ-ನಾಯ್ಕರ ಮಗ; ಶ್ರೀವೈಷ್ಣವ-ಆಚಾರ್ಯರಾಗಿದ್ದ ಅನುಸಂಧಾನಂ ರಾಮಾನುಜ-ಅಯ್ಯನ ಶಿಷ್ಯ. ಈತನು ತನ್ನ ಧರ್ಮವೆಂದು ಗುಡಿಯ ಭಂಡಾರಕ್ಕೆ 1513ರಲ್ಲಿ 1200 ಪಣಗಳನ್ನು ಒಪ್ಪಿಸಿದನು.

ರಾಯರ ರಸಿಕತೆಯ ವ್ಯಾಪ್ತಿಯಲ್ಲಿ ಸದಾ ತಾಂಬೂಲ ಜಗಿಯುವುದೂ ಸೇರಿದ್ದಿತು. ಚಿಗುರು ವೀಳೆಯದೆಲೆಗಳ ಕಟ್ಟನ್ನು ಹಿಡಿದುಕೊಂಡು ರಾಯರ ಜೊತೆಯಲ್ಲೇ ಇರುತ್ತ ಅವರ ತಾಂಬೂಲಚರ್ವಣಕ್ಕೆ ಅಣಿಮಾಡಿಕೊಡುವವನು 'ಅಡ್ಡೆಯಪ್ಪಂ'. ಕಾಶ್ಯಪಗೋತ್ರದ ತಿಮ್ಮಪ್ಪ-ನಾಯಕನ ಮಗ 'ಅಡ್ಡೆಯಪ್ಪಂ' ಬೈಯಪ್ಪ-ನಾಯಕ್ಕನ್ ಕ್ರಿಸ್ತಾಬ್ದ 1516ರಲ್ಲಿ ಕೃಷ್ಣದೇವರಾಯರ ಧರ್ಮಕ್ಕೆಂದು ದೇವರಿಗೆ ಆರು ತಿರುಪ್ಪೋನಕಗಳನ್ನು ಸಮರ್ಪಿಸುವ ಸೇವೆ ನಡೆಸಿದ್ದಾನೆ. 'ಊಡಿಯಂ' ಎಲ್ಲಪ್ಪ ನಾಯಕನು ಕೃಷ್ಣದೇವರಾಯನ ಊಳಿಗದವನು, ಎಡಬಲ ಸೇವಕ. ಇವನು 1516ರಲ್ಲಿ ಕರ್ರಾಳೈಪಟ್ಟು, ನೆಲ್‌ವಾಯ್ ಮತ್ತು ಕೊಳ್ಳಿಡುಂಬೈ ಎಂಬ ಮೂರು ಹಳ್ಳಿಗಳನ್ನು ಗುಡಿಗೆ ಬಿಟ್ಟುಕೊಟ್ಟ; ಬೆಟ್ಟಕ್ಕೆ ಬರುವ ಯಾತ್ರಿಕರ ಅನುಕೂಲಕ್ಕೆಂದು ಬೆಟ್ಟದ ಮೇಲೆ 1527ರಲ್ಲಿ 'ಕಲ್‌ತೇರು' ಸತ್ರವೊಂದನ್ನು ಕಟ್ಟಿಸಿದ; ಗುಡಿಯ ಶ್ರೀಭಂಡಾರಕ್ಕೆ 4600 ಪಣಗಳನ್ನು ಸಲ್ಲಿಸಿದ. ಇನ್ನು ಶಾಸನಗಳನ್ನು ಬರೆಸದೆ ಧರ್ಮವನ್ನು ಮಾಡಿದವರೆಷ್ಟೋ ಮಂದಿ! ಅವರ ನೆನಪು ಉಳಿದಿಲ್ಲ. ಆದರೆ ಗುಡಿಯ ಸಂಪತ್ತು ಹೆಚ್ಚಿತು. ಅದಕ್ಕಿಂತ ಹೆಚ್ಚಾಗಿ, ಗುಡಿಯ ಜನಪ್ರೀತಿ ಬೆಳೆಯಿತು.

ವ್ಯಾಸತೀರ್ಥರು

ಕೃಷ್ಣದೇವರಾಯನು ತನ್ನ ನಿತ್ಯಜೀವನದಲ್ಲಿ ಮೆಚ್ಚಿಕೊಂಡಿದ್ದ ಮತಧರ್ಮವೇನೋ ತಿಳಿಯದು. ಅವನದೆನ್ನುವ 'ಆಮುಕ್ತಮಾಲ್ಯದ' ('ವಿಷ್ಣುಚಿತ್ತೀಯಂ') ಎಂಬ ಗ್ರಂಥವನ್ನು ತೋರಿಸಿ, ಅದನ್ನು ಬರೆದ ಅವನು ಶ್ರೀವೈಷ್ಣವಶ್ರದ್ಧಾಳು ಎನ್ನುವವರಿದ್ದಾರೆ. ಆದರೆ ಯಾವ ಶ್ರೀವೈಷ್ಣವಗುರುವೂ ಅವನಿಗೆ ಮಾರ್ಗದರ್ಶನ ಮಾಡಿದ ಉಲ್ಲೇಖ ಎಲ್ಲಿಯೂ ಬರುವುದಿಲ್ಲ ; ಯಾವ ಶ್ರೀವೈಷ್ಣವ-ಆಚಾರ್ಯರಿಗೂ ಅವನು ವಿಶೇಷವಾದ ಸನ್ಮಾನ ಮಾಡಿದ ಪ್ರಸಂಗ ನಮ್ಮ ನೆನಪಿನಲ್ಲಿ ಉಳಿದುಬಂದಿಲ್ಲ. ಬೆಟ್ಟದ ಮೇಲೆ ಗುಡಿಯ ವಿಚಾರವಾಗಿ ಅವನು ನಡೆದುಕೊಂಡ ಬಗೆಯಲ್ಲಿ ಶ್ರೀವೈಷ್ಣವಪಕ್ಷಪಾತ ಅವನಿಗಿದ್ದಿತೆನ್ನಲಾರೆವು. ಅವನ ಪುರೋಹಿತರು ರಂಗಾದೀಕ್ಷಿತರು, ಶಿವದೀಕ್ಷಿತರು, ಯಜ್ಞನಾರಾಯಣಭಟ್ಟರು. ಅವನು ವಿಶೇಷವಾಗಿ ಪುರಸ್ಕರಿಸಿದ ಧರ್ಮಗುರುಗಳೆಂದರೆ ವ್ಯಾಸತೀರ್ಥರು. ಆದರೆ ಇಷ್ಟನ್ನು ಬಿಟ್ಟು ಅವನಿಗೂ ಮಾಧ್ವಸಂಪ್ರದಾಯಕ್ಕೂ ಏನೇನೂ ಸಂಬಂಧವಿಲ್ಲ. ಹೀಗಾಗಿ ಅವನ ಒಲವು ಎಲ್ಲಿಯಾದರೂ ಹೆಚ್ಚಾಗಿ ಇದ್ದಿತೇ ಎನ್ನುವುದೂ ಸಂಶಯವೇ. ಆದರೆ ಅವನ ಕಾಲದಲ್ಲಿ ಧಾರ್ಮಿಕಕ್ಷೇತ್ರ ಸಾಕಷ್ಟು ಪ್ರಬಲವಾಗಿದ್ದಿತು.

ಆ ಕಾಲದಲ್ಲಿ ತುಂಬ ಪ್ರಖ್ಯಾತರೆನಿಸಿದ ಗುರುಗಳು ವ್ಯಾಸತೀರ್ಥರು (ಜನನ ಕ್ರಿಸ್ತಾಬ್ದ 1446); ಮಾಧ್ವಸಂಪ್ರದಾಯಕ್ಕೆ ಸೇರಿದ ಮಠೀಯ ಪರಂಪರೆಯಲ್ಲಿ ಬಂದವರು. ಕುಂದಾಪುರಮಠದ ಬ್ರಹ್ಮಣ್ಯತೀರ್ಥರ ಶಿಷ್ಯರು. ತಮ್ಮ ಉಜ್ವಲವಾದ ವ್ಯಕ್ತಿತ್ವದಿಂದಲೂ ಅಸದೃಶವಾದ ಪಾಂಡಿತ್ಯದಿಂದಲೂ ತಾವು ಒಡೆತನನಡೆಸಿದ ಮಠವನ್ನು 'ವ್ಯಾಸರಾಯ ಮಠ'ವೆಂದೇ ಹೆಸರಾಗಿಸಿದವರು. ಗುಡಿಯ ಸ್ಥಾನತ್ತಾರರು ಅವರಿಗೆ ಬರೆಯಿಸಿಕೊಟ್ಟ ಶಿಲಾಶಾಸನದಲ್ಲಿ (1524ರಲ್ಲಿ) ಅವರನ್ನು "ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯ, ಪದವಾಕ್ಯಪ್ರಮಾಣಜ್ಞ, ದುರ್ವಾದಿಗರ್ವಸರ್ವಸ್ವಾಪಹಾರ, ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯ, ಸಕಲವಿದ್ವಜ್ಜನಮನಃಪದ್ಮವನ ಸೌವಸ್ತಿಕ, ಶ್ರೀಮತ್ ವ್ಯಾಸತೀರ್ಥಶ್ರೀಪಾದ ಒಡೆಯ"ರೆಂದು ಒಕ್ಕಣೆಯನ್ನು ಕಾಣಬಹುದು. ಆ ಕಾಲದ ಜನರ ಎಣಿಕೆಯಲ್ಲಿ ಇವರ ಸ್ಥಾನ ಎಷ್ಟು ಉನ್ನತವಾಗಿದ್ದಿತೆಂದು ಇದರಿಂದ ತಿಳಿಯಬಹುದು. "ತರ್ಕತಾಂಡವ", "ನ್ಯಾಯಾಮೃತ" ಮತ್ತು "ಚಂದ್ರಿಕಾ" ಎಂಬ ಅವರ ಗ್ರಂಥಗಳು 'ವ್ಯಾಸತ್ರಯಿ'ಯೆಂದು ಪ್ರಸಿದ್ಧವಾಗಿವೆ. ಮಾಧ್ವಸಿದ್ಧಾಂತದ ಪ್ರತಿಪಾದನೆಯಲ್ಲೂ ವೈಷ್ಣವಧರ್ಮದ ಪ್ರಚಾರದಲ್ಲೂ ಅವರ ಪಾತ್ರ ಪ್ರಮುಖವಾದುದು.

ಇವರು ಕನ್ನಡಿಗರಾಗಿದ್ದುಕೊಂಡು, ಸಾಳುವ-ನರಸಿಂಹನ ಕಾಲದಲ್ಲಿ ಚಂದ್ರಗಿರಿಗೂ ತಿರುಮಲೆಗೂ ಬಂದುದೇನು ಆಶ್ಚರ್ಯವಲ್ಲ. ಆದರೆ ಕೃಷ್ಣದೇವರಾಯನು ಅವರಿಗೆ ಬೆಟ್ಟದ ಮೇಲಿದ್ದ ಒಂದು ಮನೆಯನ್ನು ದಾನವಾಗಿ ನೀಡುವವರೆಗೂ ಅಲ್ಲಿ ಮಠವನ್ನು ಮೂಡಿಸುವ ಪ್ರಯತ್ನವನ್ನು ಅವರು ಮಾಡದಿದ್ದುದು ಸೋಜಿಗ. ಆಗ

ಅವರಿಗಾಗಲೇ ಇಳಿವಯಸ್ಸು. ಅವರು ಅಲ್ಲಿ ಮತ್ತು ತಿರುಪತಿಯಲ್ಲಿ ಮಠವನ್ನು ಏರ್ಪಡಿಸಿದರಾದರೂ ಮುಂದೆ ಅದೇನು ಬೇರೂರಲಿಲ್ಲ, ಬೆಳೆಯಲಿಲ್ಲ. ಮಾಧ್ವರ ಪ್ರಭಾವ ಬೆಟ್ಟದ ಮೇಲೆ ಮೂಡಿಬರಲಿಲ್ಲ. ಅವರು ಬೆಟ್ಟದ ಮೇಲೆ ಹನ್ನೆರಡು ವರ್ಷಗಳು ತಂಗಿದ್ದು, ಗುಡಿಯಲ್ಲಿ ತಾವೇ ಪೂಜೆಯನ್ನು ನಡೆಸುತ್ತಿದ್ದರೆಂದು ಪ್ರತೀತಿಯಿದೆ.

ಯಾವುದೋ ಒಂದು ಕಾರಣಕ್ಕಾಗಿ ದೇವರ ಸ್ವರೂಪವು ಉಗ್ರವಾಗಿ ಬಿಟ್ಟಿತೆಂದೂ, ಅರ್ಚಕರು ಹೆದರಿ ಪೂಜೆ ಮಾಡದಿರಲು ವ್ಯಾಸತೀರ್ಥರು ಅವರಿಗೆ ಸಮಾಧಾನ ಹೇಳಿ ತಾವೇ ನಿತ್ಯಾರ್ಚನೆ ನಡೆಸಿ, ದೇವರ ಸ್ವರೂಪವನ್ನು ಮತ್ತೆ ಸೌಮ್ಯವಾಗಿಸಿ, ಹನ್ನೆರಡು ವರ್ಷಗಳ ನಂತರ ಪೂಜೆಯ ಹೊಣೆಯನ್ನು ಅರ್ಚಕರಿಗೇ ವಹಿಸಿಕೊಟ್ಟರೆಂದೂ ಇದರ ವಿವರ. ಈ ಸಂಗತಿಗೆ ನಿಖರವಾದ ಚೌಕಟ್ಟಾಗಲೀ ಆಧಾರವಾಗಲೀ ದೊರೆಯುವುದಿಲ್ಲ. ದೇವರ ರೂಪ ಉಗ್ರವಾಯಿತೆಂಬ ಅಥವಾ ಅಲ್ಲಿ ಪೂಜೆ ತಪ್ಪಿದ್ದಿತೆಂಬ ಉಲ್ಲೇಖ ನಮಗೆ ಸಾಳುವ-ನರಸಿಂಹ, ಇಮ್ಮಡಿ ನರಸಿಂಹ, ವೀರ ನರಸಿಂಹ, ಕೃಷ್ಣದೇವರಾಯ ಇವರ ಕಾಲದ ಶಾಸನಗಳಲ್ಲೆಲ್ಲಿಯೂ ದೊರೆಯುವುದಿಲ್ಲ. ವ್ಯಾಸತೀರ್ಥರು ಗುಡಿಯೊಳಗೆ ಹನ್ನೆರಡು ವರ್ಷ ಪೂಜೆ ನಡೆಸಿದರೆಂದು ನಂಬುವುದೂ ಕಷ್ಟವೇ. ಮಾಧ್ವರಿಗೆ ವೇಂಗಡದೊಡೆಯ ಪ್ರೀತಿಯ ದೇವರೆಂಬುದು ನಿಜ. ವ್ಯಾಸತೀರ್ಥರಿಂದ ಉತ್ತೇಜನವನ್ನು ಪಡೆದ ದಾಸಕೂಟದವರಿಗಂತೂ "ತಿರುಪತಿ ತಿಮ್ಮಪ್ಪ" ಅಚ್ಚುಮೆಚ್ಚಿನ ದೇವರು. ವ್ಯಾಸತೀರ್ಥರು ಬೆಟ್ಟದ ಮೇಲೆ ಕೊಂಚ ಕಾಲ ಇದ್ದದ್ದೂ ದಿಟವೇ. ಅಲ್ಲಿ ಒಂದು ಮಠವನ್ನು ಕಟ್ಟುವ ಮನಸ್ಸು ಮಾಡಿದುದಕ್ಕೂ ಆಧಾರವಿದೆ. ವಿಮಾನದ ಮೇಲಿರುವ "ಶ್ರೀನಿವಾಸ"ನಿಗೆ ದರ್ಶನಭಾಗ್ಯ ಒದಗಿದುದು ವ್ಯಾಸತೀರ್ಥರಿಂದಲೇ ಇರಬಹುದು. ಆದರೆ ಇಷ್ಟಕ್ಕೆ ಹೆಚ್ಚಾಗಿ ಏನನ್ನು ಹೇಳುವುದೂ ಕಷ್ಟ. ಕೃಷ್ಣದೇವರಾಯನು ವ್ಯಾಸತೀರ್ಥರನ್ನು ಗೌರವದಿಂದ ಕಂಡಿರುವುದಂತೂ ಸ್ಪಷ್ಟವಾಗಿದೆ. ವ್ಯಾಸತೀರ್ಥರು ಪಡೆದುಕೊಂಡ ದಾನಧರ್ಮಗಳು, ಸನ್ಮಾನಗಳು ಕೃಷ್ಣದೇವರಾಯನ ಕಾಲದವೇ ಎಂದರೂ ತಪ್ಪಲ್ಲ. ಅವರ ಪ್ರಭಾವವು ತಿರುಮಲೆ ತಿರುಪತಿ ಮಾತ್ರವಲ್ಲದೆ ಕಾಂಚೀಪುರ, ಹಂಪಿ ಮೊದಲಾದ ಸ್ಥಳಗಳಲ್ಲೂ ಕಾಣಬರುತ್ತದೆ.

ವ್ಯಾಸತೀರ್ಥರು ತಮ್ಮ ಮಠವನ್ನು ಏರ್ಪಡಿಸಿಕೊಳ್ಳಲೆಂದು ಕೃಷ್ಣದೇವರಾಯನು ಬೆಟ್ಟದ ಮೇಲೂ ತಿರುಪತಿ-ಊರಿನಲ್ಲೂ ಮನೆಗಳನ್ನು ದಾನವಾಗಿ ಕೊಟ್ಟ ಶಾಸನಗಳಿವೆ. ಸಾಳುವ-ನರಸಿಂಹನು ಆಳುತ್ತಿದ್ದಾಗ ಗುಡಿಯ ಅರ್ಚಕರಲ್ಲಿ ಒಬ್ಬನಾದ ನಂಬಿ-ಶಿರ್ರಪ್ಪಯ್ಯನ್ ದೇವರ ಒಡವೆಗಳಲ್ಲಿ ಕೆಲವನ್ನು ಕದ್ದನಂತೆ. ಕದ್ದುದು ಖಚಿತವಾದಾಗ ಅರಸನು, ಬೆಟ್ಟದ ಮೇಲೂ ಕೆಳತಿರುಪತಿಯಲ್ಲೂ ಇವನದಾಗಿದ್ದ ಮನೆಗಳನ್ನು ಅವನಿಂದ ಕಸಿದುಕೊಂಡು ಗುಡಿಗೆ ಒಪ್ಪಿಸಿ ಶಿಕ್ಷೆ ಮಾಡಿದನಂತೆ. ಬೆಟ್ಟದ ಮೇಲೆ ಗುಡಿಯ ಎದುರಿನ ಕೊಳಕ್ಕೆ ("ತಿರುಮಲೈಮೇಲಿಲ್ ತಿರುಕ್ಕೋನೇರಿಕ್ಕು") ಉತ್ತರದಲ್ಲಿ ನಂಬಿ-ಚಕ್ರಾಯುಧ-ಭಟ್ಟರ ಮತ್ತು ಚಕ್ರವರ್ತಿ-ಅಣ್ಣೈಯಂಗಾರರ ಮನೆಗಳ ನಡುವೆ ಇದ್ದ ಈ ಮನೆಯನ್ನು ಕೃಷ್ಣದೇವರಾಯನೇ ವ್ಯಾಸತೀರ್ಥರಿಗೆ ಧಾರಾಪೂರ್ವಕವಾಗಿ

ಕೊಟ್ಟು, ಅಲ್ಲಿ ಅವರು ತಮ್ಮ ಮಠವನ್ನು ಕಟ್ಟಿಕೊಳ್ಳಬಹುದೆಂದು ("ಮಠಮಾಹ ಕಟ್ಟುವಿತ್ತು") ರಾಯಸವನ್ನು ಕೊಟ್ಟುದಲ್ಲದೆ, ಮಠದ ಧರ್ಮಕ್ಕೆಂದು ಅವನ ಹೆಸರಿನಲ್ಲಿ ದೇವರಿಗೆ ಸಲ್ಲುವ ನೈವೇದ್ಯದ ಪ್ರಸಾದದ ಒಂದು ಪಾಲನ್ನು ಇವರಿಗೆ ಸಲ್ಲಿಸಬೇಕೆಂದೂ ಹೇಳುವ ಶಾಸನ ಕ್ರಿಸ್ತಾಬ್ದ 1524ರ ಜನವರಿ 12ರಂದು ಹೊರಟಿದ್ದು. ಅದೇ ರೀತಿ ಕೆಳತಿರುಪತಿಯಲ್ಲಿಯೂ ಗೋವಿಂದರಾಜನ ಗುಡಿಗೆ ಉತ್ತರದ ಮಾಡ-ಬೀದಿಯಲ್ಲಿ ಶೊಟ್ಟೈಭಟ್ಟರ್-ಹಸ್ತಿಗಿರಿನಾಥರ್ (ಸಭೈಯಾರರಲ್ಲಿ ಒಬ್ಬರು) ಮತ್ತು ಮಲೈನಿನ್ರಾನ್ ಭಟ್ಟರ್-ಅಣ್ಣನ್ (ಗುಡಿಯ ಅರ್ಚಕರಲ್ಲೊಬ್ಬರು) ಇವರ ಮನೆಗಳ ನಡುವೆ ಇದ್ದ ನಂಬಿ-ಶಿರ್ರಪ್ಪಯ್ಯನ ಮನೆಯನ್ನು ವ್ಯಾಸತೀರ್ಥರ ಮಠಕ್ಕೆಂದು ಇದೇ ದಿನ ಕೊಟ್ಟ ಶಾಸನವಿದೆ.

ಅದೇ ವರ್ಷ ನವೆಂಬರ್ ತಿಂಗಳಿನಲ್ಲಿ ಬೆಟ್ಟದ ಮೇಲೆ ಮಠವಾಗಿಸಿದ ಮನೆಯೆದುರು ವ್ಯಾಸತೀರ್ಥರು ಮಂಟಪವೊಂದನ್ನು ಕಟ್ಟಿಸಿ, ಗುಡಿಯ ಭಂಡಾರಕ್ಕೆ 14,000 ನರ್-ಪಣಗಳನ್ನು ಕೊಟ್ಟು ಪ್ರತಿವರ್ಷವೂ ವಿಶೇಷದಿನಗಳಲ್ಲಿ ಒಟ್ಟು 354 ಅಪ್ಪ-ಪಡಿಗಳನ್ನು ದೇವರಿಗೆ ಸಮರ್ಪಿಸುವ ವ್ಯವಸ್ಥೆ ಮಾಡಿದರು. ಅವರು ಪಟ್ಟಿ ಮಾಡಿರುವ ವಿಶೇಷ ದಿನಗಳಲ್ಲಿ ಎಂಟು ಬ್ರಹ್ಮೋತ್ಸವಗಳ 96 ದಿನಗಳು, ಏಕಾದಶಿಗಳು, ಯುಗಾದಿ, ದೀಪಾವಳಿ, ಕಾರ್ತಿಕೋತ್ಸವ, ಮಾಸ-ಸಂಕ್ರಮಣಗಳು, ಪವಿತ್ರೋತ್ಸವ, ಅಧ್ಯಯನೋತ್ಸವ, ಸಹಸ್ರ-ಕಳಶಾಭಿಷೇಕೋತ್ಸವ, ದೋಲೋತ್ಸವ ಮೊದಲಾದುವು ಸೇರಿವೆ. ಈ ಪಟ್ಟಿಯಲ್ಲಿ ತಿರುಪತಿಯ ಗೋವಿಂದರಾಜನಿಗೂ ಸಲ್ಲಿಸಬೇಕಾದ ಅಪ್ಪ-ಪಡಿಯ ವಿವರಗಳಿವೆ. ಮಾಧ್ವರಾದರೂ ವೈದಿಕನಿಷ್ಠೆಯುಳ್ಳವರಾದರೂ ಅಧ್ಯಯನೋತ್ಸವವನ್ನು ಈ ಪಟ್ಟಿಯಲ್ಲಿ ಸೇರಿಸಿರುವುದನ್ನು ಗಮನಿಸಬೇಕು. ಎಂದರೆ ಆ ಕಾಲಕ್ಕೆ ಅಧ್ಯಯನೋತ್ಸವ (ಎಂದರೆ, ತಮಿಳುಪ್ರಬಂಧಗಳ ಪಾರಾಯಣವೇ ಮುಖ್ಯವಿವರವಾಗಿ ಉಳ್ಳ ಉತ್ಸವ) ಬೆಟ್ಟದ ಮೇಲೂ ಕೆಳತಿರುಪತಿಯಲ್ಲೂ ಬೇರೂರಿದ್ದಿತು. ಅದರ ವಿಚಾರವಾಗಿ ನಡೆಯುತ್ತಿದ್ದ ವಿವಾದದ ಕಾವು ಆರಿದ್ದಿರಬೇಕು. ವ್ಯಾಸತೀರ್ಥರು ಪಡೈನಾಡು-ಸೀಮೆಯಲ್ಲಿರುತ್ತಿದ್ದ ಶಿಯಾಲ ಪಾಂಡೂರು-ಗ್ರಾಮವನ್ನು ತಿರುಪತಿಯ ಗೋವಿಂದರಾಜನಿಗೆ ದಿನವೂ ಎಂಟು ತಿರುಪ್ಪೋನಕಗಳನ್ನೂ ನಲವತ್ತು ಅಡಿಕೆಗಳನ್ನೂ ಎಂಬತ್ತು ವೀಳೆಯದೆಲೆಗಳನ್ನೂ ಒಂದು ಪಲ ಚಂದನವನ್ನೂ ಸಮರ್ಪಿಸುವ ಸಲುವಾಗಿ ಗುಡಿಗೆ ಬಿಟ್ಟರು.

ಹರಿದಾಸರ ತಿಮ್ಮಪ್ಪ

ಕನ್ನಡನಾಡಿನ ದಾಸಕೂಟ ಪರಂಪರೆಗೆ ಆಚಾರ್ಯಪುರುಷರು ನಾಲ್ವರು; ಇವರ ಹೆಸರನ್ನು ಹರಿದಾಸರೆಲ್ಲರೂ ನೆನೆಸಿಕೊಳ್ಳುವುದಿದೆ—

ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ।
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ॥

ಶ್ರೀಪಾದರಾಜರು (1406-1504), ವ್ಯಾಸತೀರ್ಥರು (1447-1539), ಪುರಂದರ ದಾಸರು (1484-1564) ಮತ್ತು ವಿಜಯದಾಸರು (1687-1755). ಇವರಲ್ಲಿ ಮೊದಲ ಮೂವರು ತಿರುಮಲೆ ಬೆಟ್ಟದ ನಿಕಟಸಂಪರ್ಕವಿದ್ದವರು. ಇದರಿಂದಾಗಿ ದಾಸಕೂಟ ದವರಿಗೆ ವೇಂಗಡದೊಡೆಯ ಪ್ರೀತಿಯ ಪರದೈವ. ಅವರಿಗೆ ಇದೇ ಭೂವೈಕುಂಠ. ಎಲ್ಲ ಹರಿದಾಸರೂ ಈ ದೇವರನ್ನು ಅಕ್ಕರೆಯಿಂದ ಹಾಡಿ ಹೊಗಳಿದ್ದಾರೆ. ತಿರುಪತಿ ತಿಮ್ಮಪ್ಪನೆಂದು ಈ ದೇವರನ್ನು ಕರೆದವರು ಅವರೇ. ಬೆಟ್ಟಕ್ಕೆ ಹೋಗಿ ಬರುವುದು ಅವರಿಗೊಂದು ಪ್ರಿಯವಾದ ವ್ರತ, ಸಂಭ್ರಮದ ಹಬ್ಬ. ಅದರ ಪರಿಯೇ ವಿಶಿಷ್ಟವಾಗಿ ಮೈದಳೆದಿದೆ; ಮೆಟ್ಟಲುಸೇವೆ, ದಾರಿಯುದ್ದಕ್ಕೂ ಭಜನೆ, ಪುರಾಣಪ್ರಸಿದ್ಧವಾದ ಎಡೆಗಳ ದರ್ಶನ, ದೇವಳದಲ್ಲಿ ನಿಯಮದ ನಡಾವಳಿ, ಗೋವಿಂದನಾಮೋಚ್ಚಾರಣೆ ಮೊದಲಾಗಿ ಹಲವು ವಿವರಗಳು. ತಂಡತಂಡವಾಗಿ ಬೆಟ್ಟ ಹತ್ತುವಾಗ, ಹತ್ತಿ ಗುಡಿಯ ಒಳಹೊಕ್ಕಾಗ, ಒಳಹೊಕ್ಕು ದೇವರನ್ನು ಕಂಡಾಗ, 'ಗೋವಿಂದ' ಎಂದು ಮೈಮರೆತು ಕೂಗುವುದು ಹರಿದಾಸರಿಂದಲೇ ಬಂದದ್ದು. ಶ್ರೀಪಾದರಾಜರೇ 'ಬಾರೋ ಮನೆಗೆ ಗೋವಿಂದ' ಎಂದು ಶ್ರೀನಿವಾಸನನ್ನು ಕರೆದುದ್ದುಂಟು. ಕನಕದಾಸರು (ಸಾವೇರಿಯಲ್ಲಿ)

ಗೋವಿಂದ ಗೋವಿಂದ ಎನ್ನಲರಿಯದೆ ವೃಥಾ
ನೋವಿಂದ ಭಂಗವ ಪಡುವುದುಚಿತವೆ ॥

ಎಂದು ಹಾಡಿದ್ದು ಬೆಟ್ಟ ಹತ್ತುತ್ತ ಬಳಲುವವರನ್ನು ಕುರಿತದ್ದೇ. ಮತ್ತೆ, ಅವರೇ 'ಗೋವಿಂದ ಸಲಹೆನ್ನನು ಸದಾನಂದ ಗೋವಿಂದ' ಎಂಬ ಹಾಡಿನಲ್ಲಿ (ನಾದನಾಮ ಕ್ರಿಯೆ) ಪ್ರತಿ ಸಾಲೂ ಗೋವಿಂದನಾಮೋಚ್ಚಾರಣೆಯಿಂದಲೇ ಮುಗಿಯುತ್ತದೆ. ಕಡೆಯಲ್ಲಿ ,

ಸುರರ ಪೊರೆವ ಗೋವಿಂದ, ಶ್ರೀ ವೈಕುಂಠ
ಪುರದೊಳಗಿಹ ಗೋವಿಂದ, ಅಚ್ಯುತಾನಂತ
ತಿರುಪತಿನಿಲೆಯಾದಿಕೇಶವ ಹರಿಯೆ ಗೋವಿಂದ

ಎಂದು ತಿರುಪತಿಯ ತಿಮ್ಮಪ್ಪನನ್ನು ಗೋವಿಂದ ಎಂದೇ ವ್ಯವಹರಿಸಿದ್ದಾರೆ. 'ಬಂದೆವಯ್ಯ ಗೋವಿಂದ ಶೆಟ್ಟಿ' (ಪಂತುವರಾಳಿ) ಎಂದು ಅವನನ್ನು ಕರೆದಿದ್ದಾರೆ.

ಇದು ಹೇಗಾದರಿರಲಿ. ಮೊದಲ ಹರಿದಾಸರಾದ ಲಕ್ಷ್ಮೀನಾರಾಯಣತೀರ್ಥರು (ಶ್ರೀಪಾದರಾಜರು), ಮತ್ತು ವ್ಯಾಸತೀರ್ಥರು ಇವರು ಬೆಟ್ಟದ ಗುಡಿಗೆ ಹೊಂದಿದ್ದ ನಂಟನ್ನು ಕುರಿತ ಉಲ್ಲೇಖ ಈಗಾಗಲೇ ಅಲ್ಲಲ್ಲಿ ಬಂದಿದೆ. ಶ್ರೀಪಾದತೀರ್ಥರು ಶ್ರೀರಂಗದಲ್ಲಿ ಸ್ವರ್ಣವರ್ಣತೀರ್ಥರ ಶಿಷ್ಯರಾಗಿದ್ದವರು. ಮುಂದೆ ಚಂದ್ರಗಿರಿಯ ಆಳರಸನಾಗಿದ್ದ ಸಾಳುವ-ನರಸಿಂಹನ ಕರೆಯನ್ನು ಮನ್ನಿಸಿ ಬೆಟ್ಟದ ನೆರೆಯಲ್ಲೇ ಇದ್ದ ಚಂದ್ರಗಿರಿಗೆ ಬಂದು ಅಲ್ಲಿ ಬಹುಕಾಲ ನೆಲೆಸಿದ್ದವರು. ಈ ಸಮಯದಲ್ಲಿ ಅವರು ಬೆಟ್ಟವನ್ನೇರಿ ತಿಮ್ಮಪ್ಪನ ದರ್ಶನವನ್ನು ಮತ್ತೆ ಮತ್ತೆ ಪಡೆಯುತ್ತಲೆ ಇದ್ದವರು.

ವಾದಿರಾಜಸ್ವಾಮಿಗಳ, 'ಶ್ರೀಪಾದರಾಜರ ದಿವ್ಯಶ್ರೀಪಾದವ ಭಜಿಸುವೆ' ಎಂಬ ಕೃತಿಯಲ್ಲಿ 'ವರದ ವೇಂಕಟೇಶನ್ನ ಒಲಿಸಿ ಪೂಜಿಸುವವನ' ಎಂಬ ಮಾತು ಬಂದಿದೆ. ಅವರ ರಚನೆಗಳಲ್ಲಿ ಶ್ರೀನಿವಾಸನ ಪ್ರಸ್ತಾಪ ಅಡಿಗಡಿಗೆ ಬರುತ್ತದೆ. 'ಇಂದಿರೆ ರಮಣ ಗೋವಿಂದ' ಅವನು. 'ಹರೇ ವೇಂಕಟವಲ್ಲಭ, ಪೊರೆಯಬೇಕು ಎನ್ನ' (ನಾದನಾಮ ಕ್ರಿಯೆ) ಎಂದು ಬೇಡಿಕೊಂಡಿದ್ದಾರೆ. 'ಸ್ಮರಿಸಿದವರನು ಕಾಯ್ವ ನಮ್ಮ ಸೂರ್ಯಾನೇಕ ಪ್ರಭಾವ। ಸುರಮುನಿಗಳ ಸಂಜೀವ ಶ್ರೀವೇಂಕಟ ನಮ್ಮನು ಪೊರೆವ' ಎಂಬ ಭೈರವಿ ಕೃತಿಯಲ್ಲಿ 'ವೈಕುಂಠದಿಂದ ಬಂದು ಶೇಷಾಚಲದಲಿ ನಿಂದು। ಭಕ್ತರ ಪಾಲಿಪೆನೆಂಬ ಅಭಯದಯಾಕರಸಿಂಧು'ವೆಂದು ಕೊಂಡಾಡಿದ್ದಾರೆ. 'ಭೂಷಣಕೆ ಭೂಷಣ ಇದು ಭೂಷಣ। ಶೇಷಗಿರಿವಾಸ ಶ್ರೀವರವೇಂಕಟೇಶ' ಎಂದು ಹಾಡಿದ್ದಾರೆ (ಸಾರಂಗ). ಅವರೂ (1406-1504) ತಾಳ್ಳಪಾಕಂ ಅಣ್ಣಮಾಚಾರ್ಯರೂ (1408-1503) ಸಮಕಾಲಿಕರು. ಅಣ್ಣಮಾಚಾರ್ಯರು ತಿರುಪತಿಗೆ ಬಂದು ತಮ್ಮ ಕೀರ್ತನಸೇವೆಯನ್ನು ಮೊದಲು ಮಾಡಿದ್ದು 1424ರ ಸುಮಾರಿಗೆ. ಆ ವೇಳೆಗಾಗಲೆ ಶ್ರೀಪಾದರಾಜರು ಚಂದ್ರಗಿರಿಯಲ್ಲಿರುತ್ತಿದ್ದು ತಿರುಪತಿಗೆ ಹೋಗಿಬರುತ್ತಿದ್ದರು. ಇಬ್ಬರ ಒಡನಾಟವಿದ್ದುದು ಸಹಜವೇ. ಅಣ್ಣಮಾಚಾರ್ಯರು ತಮ್ಮ ಮುಪ್ಪಿನಲ್ಲಿ, ತರುಣರಾಗಿದ್ದ ಪುರಂದರದಾಸರನ್ನೂ ಬೆಟ್ಟದ ಗುಡಿಯಲ್ಲಿ ಕಂಡಿದ್ದ ಉಲ್ಲೇಖವಿದೆ. ಹೀಗಾಗಿ ಶ್ರೀಪಾದರಾಜರಿಂದ ಸಂಕೀರ್ತನಪದ್ಧತಿಯಲ್ಲಿ ಅಣ್ಣಮಾಚಾರ್ಯರು ಪ್ರೇರಣೆ, ಉತ್ತೇಜನಗಳನ್ನು ಪಡೆದರೆಂದು ಡಾ॥ ರಾಳ್ಳಪಲ್ಲಿ ಅನಂತಕೃಷ್ಣಶರ್ಮರು ಸೂಚಿಸಿರುವುದು ಸರಿಯೆಂದೇ ತೋರುತ್ತದೆ. ಹಾಗೆಯೇ, ಅವರೇ ಹೇಳಿರುವಂತೆ, ಅಣ್ಣಮಾಚಾರ್ಯರ ಪ್ರಭಾವ ಪುರಂದರದಾಸರ ಮೇಲೆ ಇದ್ದೇ ಇದ್ದಿತು. ಅವರಿಬ್ಬರ ಕೃತಿರಚನೆಯಲ್ಲಿ ಎಷ್ಟೋ ಸಾಮ್ಯವನ್ನೂ ಸಾಮಗ್ರಿಸಾಮಾನ್ಯತೆಯನ್ನೂ ಕಾಣಬಹುದು. 'ಅಣ್ಣಮಾಚಾರ್ಯ ಚರಿತ್ರೆ'ಯಲ್ಲೂ ಬೆಟ್ಟದ ಮೇಲೆ ಅವರಿಬ್ಬರ ಸಮಾಗಮದ ಪ್ರಸ್ತಾಪವಿದೆ.

ಶ್ರೀಪಾದರಾಜರು ಚಂದ್ರಗಿರಿಯಲ್ಲಿರುವಾಗ ತಮ್ಮ ಶಿಷ್ಯ ವ್ಯಾಸತೀರ್ಥರನ್ನು ಆಲ್ಲಿಗೆ ಕರೆಯಿಸಿಕೊಂಡದ್ದು ಸಹಜವೇ. ಹಾಗೆ ಮೊದಲಾದ ಬೆಟ್ಟದ ನಂಟು ಬೆಳೆದು ಬಂದಿತು. ಕಾರಣಾಂತರದಿಂದ ಬೆಟ್ಟದ ಗುಡಿಯ ಮೇಲೆ ಪೂಜೆಯಲ್ಲಿ ಗೊಂದಲವೊದಗಿದಾಗ, ಚಂದ್ರಗಿರಿಯ ಸಾಮಂತರಾಜ ಸಾಳುವ-ನರಸಿಂಹನು ಶ್ರೀಪಾದರಾಜರ ನೆರವನ್ನು ಕೋರಿದ. ಅವರು ತಮ್ಮ ಪಟ್ಟಶಿಷ್ಯ ವ್ಯಾಸತೀರ್ಥರನ್ನು ಬೆಟ್ಟದ ಮೇಲೆ ಕಳುಹಿಸಿದರು. ಅಲ್ಲಿ ಅವರು ಹನ್ನೆರಡು ವರ್ಷಕಾಲ (1486 ರಿಂದ 1498 ರವರೆಗೆ) ಪೂಜೆಯ ವ್ಯವಸ್ಥೆ ಮಾಡಿದ ಉಲ್ಲೇಖವಿದೆ. ಈ ವಿಚಾರವಾಗಿ ಗುರುಜಗನ್ನಾಥದಾಸರು

ಶೇಷಗಿರಿಯನು ಸಾರ್ದು ವೇಂಕಟ
ಈಶಮೂರ್ತಿಯ ಪೂಜೆ ಸಂತತ
ಆಶೆಯಿಲ್ಲದೆ ಗೈದು ದ್ವಾದಶವರುಷ ಬಿಡದಂತೆ

ಎಂದು ಹೇಳಿರುವುದಿದೆ. ಇದೇ ಕಾಲದಲ್ಲೇ ವಿಜಯನಗರದ ಅರಸ ಕೃಷ್ಣದೇವರಾಯ ಮಹಾರಾಯನು ಅವರ ಸಂಪರ್ಕಕ್ಕೆ ಬಂದು ಅವರ ವಿಚಾರವಾಗಿ ಭಕ್ತಿ, ಆದರ,

ಅಭಿಮಾನಗಳನ್ನು ತಳೆದದ್ದು ಇತಿಹಾಸದಲ್ಲೇ ಕಂಡುಬರುತ್ತದೆ. ಅವನ 1527ರ ಶಾಸನವೊಂದರಲ್ಲಿ ಬರುವ ಈ ಸ್ತುತಿಯನ್ನು ನೋಡಿ—

ನಿಗಮಾಗಮನಿರ್ಣೀತನಿರ್ಜರಾಧೀಶಮಂತ್ರಿಣೇ।
ನೃಪೇಂದ್ರಮುಕುಟೀರತ್ನನೀರಾಜಿತನಿಜಾಂಘ್ರಯೇ॥
ನಿರಹಂಕಾರಚಿತ್ತಾಯ ನೀತಿಮಾರ್ಗೋಪದೇಶಿನೇ।
ಶೇಷಾಯ ನರವೇಶಾಯ ಶಿಕ್ಷಿತಾಂತರವೈರಿಣೇ॥
ಪುರಾಣಪುರುಷಧ್ಯಾನಪುಷ್ಕಲೋಲಕಮೂರ್ತಯೇ।
ಮಧ್ವಾಚಾರ್ಯಮತಾಂಭೋಜಮಾರ್ತಾಂಡಾಯಿತತೇಜಸೇ॥
ಬ್ರಹ್ಮಣ್ಯತೀರ್ಥಶಿಷ್ಯಾಯ ಬ್ರಹ್ಮನಿರ್ಮಲಮೂರ್ತಯೇ।
ವ್ಯಾಸತೀರ್ಥಯತೀಂದ್ರಾಯ ವಿದ್ಮದಿಂದೀವರೇಂದವೇ॥

ಕೃಷ್ಣದೇವರಾಯನಿಗೆ ಕುಹೂಯೋಗ ಒದಗಿದಾಗ (ವಿಕ್ರಮಸಂವತ್ಸರದ ಪುಷ್ಯಬಹುಳ ಅಮಾವಾಸ್ಯೆಯಂದು ಎಂದರೆ 1521ರ ಜನವರಿ 30) ವ್ಯಾಸತೀರ್ಥರೇ ರಾಜ ಸಿಂಹಾಸನದ ಮೇಲೆ ಆ ಹೊತ್ತಿನಲ್ಲಿ ಕುಳಿತಿದ್ದು ಕುಹೂಯೋಗದ ಆಪತ್ತನ್ನು ನೀಗಿಸಿದರೆಂಬ ಪ್ರಸಿದ್ಧಿಯೂ ಇದೆ. ಅವರ ಶಿಷ್ಯ ಪುರಂದರದಾಸರೇ—

ದೇಶಾಧಿಪಗೆ ಬಂದ ಕುಹುಯೋಗವನು ನೂಕಿ
ನೀ ಸಿಂಹಾಸನವನೇರಿ ಮೆರೆದೆ ಜಗವರಿಯೆ

ಎಂದು ಉಲ್ಲೇಖಿಸಿದ್ದಾರೆ.

ವ್ಯಾಸತೀರ್ಥರು ವೇಂಕಟೇಶನ ಮೂರು ನುಡಿಗಳ ಸುಪ್ರಭಾತವೊಂದನ್ನೂ ರಚಿಸಿದ್ದಾರೆ. ಸೊಗಸಾಗಿದೆಯಾಗಿ ಅದರ ಪಾಠವನ್ನು ಕೊಟ್ಟಿದೆ—

ಪ್ರಾತಃ ಸ್ಮರಾಮಿ ರಮಯಾ ಸಹ ವೇಂಕಟೇಶಂ
ಮಂದಸ್ಮಿತಂ ಮುಖಸರೋರುಹಕಾಂತರಮ್ಯಮ್।
ಮಾಣಿಕ್ಯಕಾಂತಿವಿಲಸನ್ಮುಕುಟೋರ್ದ್ವಪುಂಡ್ರಂ
ಪದ್ಮಾಕ್ಷಲಕ್ಷಮಣಿಕುಂಡಲಮಂಡಿತಾಂಗಮ್ ॥೧॥

ಪ್ರಾತರ್ಭಜಾಮಿ ಕರರಮ್ಯಸುಶಂಖಚಕ್ರಂ
ಭಕ್ತಾಭಯಪ್ರದಕಟಸ್ಥಲದತ್ತಪಾಣಿಮ್।
ಶ್ರೀವತ್ಸಕೌಸ್ತುಭಲಸನ್ಮಣಿಕಾಂಚನಾಢ್ಯಂ
ಪೀತಾಂಬರಂ ಮದನಕೋಟಿಸುಮೋಹನಾಂಗಮ್ ॥೨॥

ಪ್ರಾತರ್ನಮಾಮಿ ಪರಮಾತ್ಮಪದಾರವಿಂದಮ್
ಆನಂದಸಾಂದ್ರನಿಲಯಂ ಮಣಿನೂಪುರಾಢ್ಯಮ್।
ಏತತ್ಸಮಸ್ತಜಗತಾಮಿತಿ ದರ್ಶಯಂತಂ
ವೈಕುಂಠಮತ್ರ ಭಜತಾಂ ಕರಪಲ್ಲವೇನ ॥೩॥

ವ್ಯಾಸರಾಜಯತಿಪ್ರೋಕ್ತಂ ಶ್ಲೋಕತ್ರಯಮಿದಂ ಶುಭಂಮ್।
ಪ್ರಾತಃಕಾಲೇ ಪಠೇದ್ಯಸ್ತು ಪಾಪೇಭ್ಯೋ ಮುಚ್ಯತೇ ನರಃ॥

ಅದಲ್ಲದೆ ವ್ಯಾಸತೀರ್ಥರು ಹರಿದಾಸ್ಯದ ಸ್ವಾರಸ್ಯವನ್ನು ಅರಿತುಕೊಂಡದ್ದು ಬೆಟ್ಟದ ಮೇಲೇ; ಅಲ್ಲಿ ಆಗಲೇ ನೆರೆಯುತ್ತಿದ್ದ ಹರಿದಾಸರ ಸಂಕೀರ್ತನಗೋಷ್ಠಿಯನ್ನು ಕಂಡಿದ್ದವರು ಅವರು, ಅವರೇ ತಮ್ಮೊಂದು ಕೃತಿಯಲ್ಲಿ—

ಪರ್ವತವಾಸನ ಕಂಡು ಉರ್ವಿಯೊಳಿಹರ ಸಂಗ

ವನ್ನು ಕಂಡು 'ಹರಿದಾಸರ ಸಂಗಕೆ ಸರಿಯುಂಟೆ?' ಎಂದು ಹಾಡಿದ್ದಾರೆ. ಪುರಂದರ ದಾಸರೂ ಬೆಟ್ಟದ ದೇವರನ್ನು ನಂಬಿ ನಡೆದುಕೊಂಡವರು. ಅವರ ಕೃತಿಗಳಲ್ಲಿ ನೂರಾರು ವೇಂಕಟೇಶನನ್ನೇ ಕುರಿತವು. ವ್ಯಾಸತೀರ್ಥರ ಇನ್ನೊಬ್ಬ ಶಿಷ್ಯರೂ, ಪುರಂದರದಾಸರ ಸ್ನೇಹಿತರೂ ಆಗಿದ್ದ ಕನಕದಾಸರು (1508-1606) ಕೂಡ ಬೆಟ್ಟದೊಡೆಯನ ಭಕ್ತರೇ. ಅವರು ವ್ಯಾಸತೀರ್ಥರ ಸಂಪರ್ಕಕ್ಕೆ ಬರುವ ಮೊದಲೇ ತಿರುಪತಿಯ ಸಂಬಂಧವಿದ್ದಿತು. ತಮ್ಮ 'ಮೋಹನತರಂಗಿಣಿ'ಯ ಮೊದಲಲ್ಲೇ "ತಾಮಸಗುಣನಾಶ ಸಾತ್ತ್ವಿಕೋಲ್ಲಾಸ ರಾಮಾನುಜಮುನಿಗೆ' ಶರಣರಾಗಿದ್ದಾರೆ; 'ತಾತಾಚಾರಿಯರಡಿಗೆರಗುವೆನು' ಎಂದು ಹೇಳಿದ್ದಾರೆ. ಇವರು ಯಾವ ತಾತಾಚಾರ್ಯರೆಂಬುದು ತಿಳಿಯುವುದಿಲ್ಲ; ತಿರುಪತಿಯ ಮೂಲದವರೆಂಬುದಂತೂ ಸರಿಯೆ. ಕನಕದಾಸರು ಬೆಟ್ಟದ ಮೇಲೆ ಹತ್ತಾರು ವರ್ಷ ಗಳು ನೆಲೆಸಿದ್ದ ಉಲ್ಲೇಖವೂ ಇದೆ. ಅವರು ತಮ್ಮ ಇಷ್ಟದೈವವಾದ ಕಾಗಿನೆಲೆಯ ಆದಿಕೇಶವನಿಗೂ ವೇಂಕಟದೊಡೆಯನಿಗೂ ಭೇದವನ್ನೆಣಿಸಲಿಲ್ಲ. ಅವರ ಕೃತಿಗಳಲ್ಲಿ "ಹರಿ ಆದಿಕೇಶವ ಗುರು ಅಪ್ರಮೇಯ। ಸಿರಿಧರ ಶೇಷಗಿರಿ ವರತಿಮ್ಮರಾಯ॥" ('ಲಾಲಿ ಪಾವನಚರಣ ಲಾಲಿ ಅಘಹರಣ। ಲಾಲಿ ವೇಂಕಟರಮಣ ಲಲಿತಕಲ್ಯಾಣ' ಎಂಬ ಆನಂದಭೈರವಿ-ಕೃತಿ), ತಿರುಪತಿ ನೆಲೆಯಾದಿಕೇಶವ ('ಗೋವಿಂದ ಸಲಹೆನ್ನನು' ಎಂಬ ನಾದನಾಮಕ್ರಿಯೆ-ಕೃತಿ), "ಶೇಷಗಿರಿಪ್ರಕಟವಾಸಾದಿಕೇಶವ ವೆಂಕಟೇಶ" ('ಸಿರಿಯ ಮದವೆ ಮುಕುಂದ' ಎಂಬ ಕೇದಾರಗೌಳ-ಕೃತಿ), "ಕಾಗಿನೆಲೆಯಾದಿಕೇಶವ ಜಗ। ದೊಡೆಯ ತಿರುವೇಂಕಟೇಶ ಜಗದೀಶ" ('ಪೂಶರನ ಜನಕನೇ' ಎಂಬ ಭೂಪಾಳಿ-ಕೃತಿ), "ಶೇಷಗಿರಿ ಕಾಗಿನೆಲೆಯಾದಿಕೇಶವನ" ('ಬಂಟನಾಗಿ ಬಾಗಲ ಕಾಯುವೆ' ಎಂಬ ಕೃತಿ), "ದಾನವಾಡ ಗುಡ್ಡದ ತಿರುಮಲೇಶ ಸರ್ವೇಶ" ('ಮಾಡಯ್ಯ ನಿನ್ನ ದಾಸರ ಮೇಲೆ ಕೃಪೆಗಳನು' ಎಂಬ ಭೂಪಾಳಿ-ಕೃತಿ) "ಉರಗಗಿರಿಯ ವೆಂಕಟಾದಿಕೇಶವನ" ('ರಮಣಿ ಕೇಳಿಲೆ' ಎಂಬ ಭೈರವಿ-ಕೃತಿ)—ಹೀಗೆ ಅಂಕಿತಮಾತು ಗಳನ್ನು ಕಾಣಬಹುದು.

ವ್ಯಾಸತೀರ್ಥರ ಇನ್ನೊಬ್ಬ ಶಿಷ್ಯರಾದ ಸೋದೆಯ ವಾದಿರಾಜಸ್ವಾಮಿಗಳೂ ವೇಂಕಟೇಶನ ಭಕ್ತರೇ. "ಸಾರಿದೆನೋ ನಿನ್ನ, ವೇಂಕಟರನ್ನ" (ಯದುಕುಲ ಕಾಂಬೋಜಿ), "ಹರಿ ಗೋವಿಂದ ಶೇಷಗಿರಿಯಲಿ ನಿಂದ" ('ಸೇವಕನೆಲೊ ನಾನು' ಎಂಬ ಮಧ್ಯಮಾವತಿ-ಕೃತಿ), "ಶರಣು ವೇಂಕಟನಾಯಕ" ('ಶರಣು ಶರಣಯ್ಯ'

ಎಂಬ ಸುರುಟಿ-ಕೃತಿ) ಮೊದಲಾದ ರಚನೆಗಳಲ್ಲದೆ ಇಡಿ ಸುಳಾದಿಯೊಂದನ್ನೇ ವೇಂಕಟದೊಡೆಯನ ವರ್ಣನೆಗೆ ಮೀಸಲಿರಿಸಿದ್ದಾರೆ. ಸಂಸ್ಕೃತದಲ್ಲಿ ಸೊಗಸಾದ ಮಂಗಲಾಷ್ಟಕವೊಂದನ್ನೂ ರಚಿಸಿದ್ದಾರೆ. ಸುಳಾದಿಯ ಮೊದಲ ಚರಣ (ಧ್ರುವತಾಳದ್ದು) ಮೂರ್ತಿರೂಪವನ್ನು ಆಪಾದಮಸ್ತಕ ಬಣ್ಣಿಸುತ್ತದೆ. ಕನಸಿನಲಿ ಕಂಡಂತೆ ಒಕ್ಕಣೆಯಿದೆ—

ಅರಳಿದ ಕೆಂದಾವರೆಯ ಇರವು ಧಿಕ್ಕರಿಸುವ
ಗಿರಿಯ ತಿಮ್ಮರಾಯನ ಚರಣಗಳ ಕಂಡೆ ನಾ।
ಅರುಣತಳದಲಿಪ್ಪ ಅಂಕುಶಧ್ವಜವಜ್ರದಿಂ
ಸುರುಚಿರ ರೇಖೆಗಳ ಸೊಬಗ ಕಂಡೆ ನಾ।
ಬೆರಳು ಸಾಲ್ಗಳ ಮೇಲೆ ಬೇರೆ ತೋರುವ ಭಾ-
ಸುರನಖಮಣಿಗಳೆಸೆವ ಕಿರಣಗಳ ಕಂಡೆ ನಾ।
ಕಿರುಗೆಜ್ಜೆ ಕಡಗ ಪೆಂಡೆಯ ಪುಭೆಯ ಕಂಡೆ
ಎರಡು ರನ್ನದ ಕನ್ನಡಿಯ ಕೆತ್ತಿಸಿದ ವೋಲ್
ಮುರಹರನ ಮೋಹನದ ಜಾನುದ್ವಯವ ಕಂಡೆ ನಾ।
ಕರಿಯ ದಂತವ ಪೋಲ್ವ ಜಂಘೆಗಳ ಕಂಡೆ ನಾ
ಉರುಟು ಕದಳಿಯ ಕಂಬಂದಂತುರುತವಾದತುಲ
ಹರಿಯ ಊರುಪೀಠವ ಕಂಡೆ ಕನಸಿನಲಿ।
ವರಪೀತಾಂಬರ ಕಾಂಚಿ ಕಿಂಕಿಣಿ-
ಜಾಲಗಳಿಂದ ದಾಮ ಉಡುಗಿ ಮೆರೆವ
ಕರುಣಿ ವೇಂಕಟೇಶ್ವರನ ಕಟಿಯನ್ನು ಕಂಡೆ ನಾ।
ಕಿರುಡೊಳ್ಳಿನುದರದಿಂದ ನಾಭಿ ತ್ರಿವಳಿರೇಖೆಯು ಇಂ-
ದಿರೆಯೊಪ್ಪಿಕೊಂಬ ಮಧ್ಯ ಚಲ್ವಿಕೆಯ ಕಂಡೆ ನಾ।
ಸಿರಿದೇವಿ ಸಿರಿವತ್ಸ ಕೊರಳ ಕೌಸ್ತುಭಹಾರ
ಸರಸದಿಂದೋಲುವ ವಿಶಾಲ ಉರುಸ್ಥಳವ ಕಂಡೆ ನಾ
ಭರದಿ ಮಿಂಚುವ ಉರುಸ್ಥಳವ ಕಂಡೆ ನಾ।
ಕರಚತುಷ್ಟಯದಲಿಪ್ಪ ಶಂಖಚಕ್ರಗದೆಪದ್ಮ-
ವರ ಅಭಯಗಳ ಕಂಡೆ ಕರ್ಣಕುಂಡಲಪ್ರಭೆಯ।
ತ್ರಿರೇಖೆಗಳಿಂದೊಪ್ಪುವ ಕಂಠ ಶಂಖದಂದದಿ
ವರ ವೇಂಕಟೇಶ್ವರನ ಕಂಧರವ ಕಂಡೆ ನಾ।
ಉರುಳುಗೂದಲು ಫಣೆ ಸಿಂಗಾಡಿಯಂತಿರ್ಪ ಪುರ್ಬು
ಸರಸಿಜನಯನ ಸುಕಪೋಲ ಕೂರ್ಮನಂದದಿ ಗಲ್ಲ
ಕುಂದಪಲ್ಗಳು ಬಿಂಬಾ-
ಧರ ಮಂದಸ್ಮಿತವದನ ಚಂಪಕನಾಸ ಕ-
ಸ್ತೂರಿ ನಾಮಗಳಿಂದೆಸೆವ
ಸಿರಿಮೊಗವ ಕಂಡೆ ನಾ ಸಿರಿ ಹಯವದನಾ
ಸಿರಿಶೇಷಗಿರಿ ಅರಸನ ಕಿರೀಟವನೆ ಕಂಡು ಕೃತಾರ್ಥನಾದೆ॥

ತಮ್ಮ ಇಷ್ಟದೈವ ಸೋದೆಯ ತ್ರಿವಿಕ್ರಮನನ್ನೇ ಬೆಟ್ಟದೊಡೆಯನಲ್ಲಿ ಕಂಡರು. ಸುಳಾದಿಯ ಕಡೆಗೆ ಬರುವ ಜತೆ ಇದನ್ನು ತಿಳಿಸುತ್ತದೆ—

ತಿರುಮಲರಾಯನ ತ್ರಿವಿಕ್ರಮರಾಯನ
ಸಿರಿ ಹಯವದನನ ಚರಣವೇ ಗತಿ ಎನ್ನು॥

ಪುರಂದರದಾಸರದ್ದೂ ಹೀಗೆಯೇ ಒಂದು ಸುಳಾದಿಯಿದೆ. ಕಿರೀಟದಿಂದ ಮೊದಲು ಮಾಡಿ ಪಾದಗಳವರೆಗೆ ತಾವು ಕಂಡ ಮೂರ್ತಿಯನ್ನು ಬಣ್ಣಿಸಿದ್ದಾರೆ—

(ಧ್ರುವತಾಳ)

ವರಮಣಿಗಳ ಕೆತ್ತಿಸಿದ ಮುಕುಟದ ಚಾರು
ತಿರುಮಲಗಿರಿಯ ತಿಮ್ಮರಾಯನ ಕಂಡೆ ನಾ।
ಪೆರೆಯ ನೊಸಲತಿಲಕದ ದಿವ್ಯ ಮಧುಕರ
ಕುರುಳು ಭ್ರೂಲತೆಯ ಶ್ರೀಕಾರದ ಕರ್ಣಯುಗಳ
ಅರಳಿದ ಅರುಣ ಕಮಲದ ತರಳನಯನದ।
ವರದಂತಪಂಕ್ತಿ ಎಸೆವ ಅಧರ ಚುಬುಕಾಗ್ರ
ಸ್ಫುರಿತ ಕಂಬುಕಂಠ ತ್ರಿರೇಖೆ ಚತುರ್ಭುಜ
ಅರಿ ಶಂಖ ಕಟಿ ಶೋಭಾಭಯಹಸ್ತವ ಕಂಡೆ।
ತರಣಿಯನಂತಕಿರಣ ಜಾನುಜಂಘೆಯ
ಕಿರುಗೆಜ್ಜೆ ಎರಡು ಪಾದಾಂಗುಳಿಯ ನಖದ
ವರವಜ್ರಾಂಕುಶ ಧ್ವಜ ಊರ್ಧ್ವರೇಖೆಯಿಂದೊಪ್ಪುವ
ಚರಣಮಾಂದಳಿರ ಕಂಡೆ ಒಲವಿಂದ।
ಪರಮಪುರುಷ ಗುಣಾತ್ಮ ನೀಲಮೇಘಶ್ಯಾಮ
ಸಿರಿಯರಸು ಪುರಂದರವಿಠಲರಾಯನ ಕಂಡೆ॥

(ಮಟ್ಟತಾಳ)

ಅಂದುಗೆ ಕಡೆಯ ಪೆಂಡೆಯವು ಮೆರೆವ
ಹೊಂದಿದ ಕಾಂಚೀಧಾಮವ ಕಂಡೆ ನಾ।
ಕಂಡು ಹೇಳಲೇನು ಜಾಂಬುನದ ಸಟಿ
ಪೊಂದಿದ ಚಿನ್ನದ ಸೂತ್ರವ ಕಂಡೆ ನಾ।
ಕುಂದದೆ ಪೊಳೆಯ ಕೌಸ್ತುಭ ವೈಜಯಂತಿಯ ಕಂಡೆ ನಾ।
ಇಂದುವಿನಂದದಿ ಮೆರೆವ ಕುಂಡಲ
ಬಂಧುರಮಹಿಮ ಬಾಹುಕೀರ್ತಿಯಾ-
ನಂದದಿ ನಿರುಪಮ ತಿರುವೇಂಗಳಪ್ಪ ಪು-
ರಂದರವಿಠಲರಾಯನ ಕಂಡೆ ನಾ॥

ಈ ಸುಳಾದಿಯ ಕಡೆಯಲ್ಲಿ ಕಾಣುವ ಜತೆ—

ಧರಿಗಿದೇ ವೈಕುಂಠವೆಂದು ತೋರುವ ಹಸ್ತ
ತಿರುವೇಂಗಳಪ್ಪ ಶ್ರೀಪುರಂದರವಿಠಲ॥

ವಿಜಯದಾಸರು ಪುರಂದರದಾಸರನಂತರ ದಾಸಕೂಟದ ನೇತಾರರಾಗಿ ಮೆರೆದ ಮಹನೀಯರು. ಇವರೂ ಬೆಟ್ಟದೊಡೆಯನಿಗೇ ನಡೆದುಕೊಂಡವರು. ಅವರ ರಚನೆಗಳಲ್ಲಿ ವೇಂಕಟಾಚಲಪರ್ವತದ ಮಹಿಮೆಯನ್ನು ಕುರಿತ ಸುಳಾದಿ, ವೇಂಕಟೇಶನ ಯಾತ್ರಾಮಹಿಮೆಯನ್ನು ಹೇಳುವ ಹಲವು ಸುಳಾದಿಗಳು, ತಿರುಮಲೇಶನ ಪಾದಸುಳಾದಿಗಳು, ನಖಿಸುಳಾದಿ, ವೈಕುಂಠವೆಂದು ತೋರುವ ಹಸ್ತಸುಳಾದಿ, ಶ್ರೀನಿವಾಸನ ಮಹಿಮಾವರ್ಣನಸುಳಾದಿಗಳಲ್ಲದೆ 'ಭಳಿರೆ ತಿರುಪತಿ ತಿಮ್ಮಾ' (ಕಲ್ಯಾಣಿ), 'ಅಭಯಗಿರಿವಾಸ ಶ್ರೀನಿವಾಸನೋ ನಮಗೆ। ಶುಭವೀವ ನಿತ್ಯಮಂದಹಾಸನೋ' (ಕೇದಾರಗೌಳ), 'ಗಿರಿರಾಜ ಚಿತ್ತ ಉದಾರ ಜೀಯಾ' (ಆನಂದಭೈರವಿ), 'ತಿರಿದುಂಬುವವ ನೀನು ತಿರುಮಲೇಶಾ' (ಕೇದಾರಗೌಳ), 'ಕಾವನಯ್ಯ ಜಗವನನು -ದಿನ। ದೇವ ತಿರುಪತಿಯ ವಾಸ ಶ್ರೀವಲ್ಲಭ ವೇಂಕಟೇಶ॥' (ವರಾಳಿ), 'ವೆಂಕಟಾಚಲನಿಲಯ ಎನ್ನ ಒಡೆಯಾ' (ಭೂಪಾಳಿ), 'ಸಾರಿದೆ ನಿನ್ನ ವೇಂಕಟರನ್ನ ಪಾಲಿಸು ಎನ್ನ' (ಕೇದಾರಗೌಳ), 'ನೀನೇ ದಯಾಪಯೋನಿಧಿಯೋ ಮೇಲ್ಗಿರಿ ತಿಮ್ಮಾ' (ಕಲ್ಯಾಣಿ) ಮೊದಲಾದ ಭಕ್ತಿಭಾವಭರಿತ ಕೀರ್ತನೆಗಳಿವೆ. ಇವುಗಳಲ್ಲಿ ಬೆಟ್ಟದ ಯಾತ್ರೆ, ಅಲ್ಲಿಯ ತೀರ್ಥಗಳು, ಉತ್ಸವಗಳು, ದೇವರ ಸ್ವಾರಸ್ಯ ಎಲ್ಲವೂ ಸಾಮಗ್ರಿಗಳಾಗಿವೆ.

ಅವರ ಶಿಷ್ಯರಾದ ಗೋಪಾಲದಾಸರೂ (1722-1765), ಜಗನ್ನಾಥದಾಸರೂ (1728-1809) ತಿರುಮಲೆಯ ದೇವರ ದರ್ಶನವನ್ನು ಅಡಿಗಡಿಗೆ ಮಾಡುತ್ತ ಬದುಕಿದವರು. ಅವರ ರಚನೆಗಳಲ್ಲೂ ವೇಂಕಟೇಶ ಪ್ರಮುಖವಾಗಿ ತೋರಿಕೊಳ್ಳುತ್ತಾನೆ. ಗೋಪಾಲದಾಸರ 'ಬಾರಯ್ಯ ಬಾ ಬಾ ಭಕುತರ ಪ್ರಿಯ ಶ್ರೀನಿವಾಸರಾಯ' (ಆನಂದಭೈರವಿ), 'ನಡೆದು ಬಾರಯ್ಯ ನೀನು ವೇಂಕಟರಾಯ' (ಸಾವೇರಿ), 'ದೀನರಕ್ಷಕ ನಿನ್ನಧೀನದವ ನಾನು' ಎಂಬ ಸುಳಾದಿ ಮೊದಲಾದ ರಚನೆಗಳು ಇಂದಿಗೂ ಜನಪ್ರಿಯವಾಗಿವೆ. ಹಾಗೆಯೇ ಜಗನ್ನಾಥದಾಸರು 'ಶ್ರೀಶೈಲದೊಳಗಿಪ್ಪ ಸ್ವಾಮಿ ಪುಷ್ಕರಿಣಿ' (ಸಾರಂಗ), ಏಳು ಬೆಟ್ಟಗಳನ್ನು ಹೆಸರಿಸುವ ಸೌರಾಷ್ಟ್ರರಾಗದ ಕೃತಿ, ಭೂವರಾಹಸ್ತುತಿ (ಕಾಂಭೋದಿ), 'ಬಾ ವೆಂಕಟಶೈಲಾಧಿಪ ಮನ್ಮನಕೆ' (ಮೋಹನ), 'ನಾರಾಯಣಾದ್ರಿಕೃತವಾಸ ಶರಣು' (ತೋಡಿ), 'ತುತಿಸಬಲ್ಲೆನೆ ನಾ ನಿನ್ನ ವೆಂಕಟರನ್ನ' (ತೋಡಿ), 'ಶ್ರೀವೇಂಕಟಾಚಲನಿವಾಸ' (ಆನಂದಭೈರವಿ), 'ರಕ್ಷಿಸೋ ಶ್ರೀಶ ಶ್ರೀನಿವಾಸ' (ಮಧ್ಯಮಾವತಿ), 'ಶರಣಾಗತಕಲ್ಪತರುವೆ ವೇಂಕಟಧರಾಧರನಾಥ' (ಆನಂದಭೈರವಿ), 'ಗಿರಿರಾಜ ಗಿರಿರಾಜ, ತರಣಿಶತಸುರುಚಿರತೇಜ ವೇಂಕಟಗಿರಿರಾಜ' (ಪೂರ್ವಿ) ಮೊದಲಾದ ಮನೋಜ್ಞವಾದ ಗೀತೆಗಳನ್ನಲ್ಲದೆ ಸಂಸ್ಕೃತದಲ್ಲಿ 'ಶ್ರೀವೇಂಕಟಶೈಲಾಧಿಪ' ಎಂದು ಮೊದಲಾಗುವ ನಾದನಾಮಕ್ರಿಯೆಯ ನವಚರಣಮಾಲಿಕೆಯೊಂದನ್ನೂ ರಚಿಸಿದ್ದಾರೆ.

ಹರಿದಾಸರು ವೇಂಗಡದೊಡೆಯನನ್ನು ಪುರಾಣಪ್ರಕ್ರಿಯೆಗಳ ದೃಷ್ಟಿಯಿಂದ ಕಂಡು ಕೊಂಡವರು. ಹನ್ನೆರಡು ಪುರಾಣಗಳಲ್ಲಿ ಬರುವ ವೇಂಕಟಾಚಲಮಾಹಾತ್ಮ್ಯೆಯಿಂದ ತಮ್ಮ ಭಕ್ತಿಗೆ, ಭಾವುಕತೆಗೆ ಸಾಮಗ್ರಿಯನ್ನು ಪಡೆದುಕೊಂಡವರು. ಹೀಗಾಗಿ ಬೆಟ್ಟದ ಮೇಲಿನ ತೀರ್ಥಗಳು, ತೊಂಡಮಾನನೇ ಮುಂತಾದವರ ಕತೆಗಳು, ಗುಡಿಯಲ್ಲಿ ನಡೆಯುವ ಬ್ರಹ್ಮೋತ್ಸವದ ವಿವರಗಳು, ಮೂರ್ತಿಯ ಲಕ್ಷಣಗಳು ಇವೆಲ್ಲ ಅವರ ರಚನೆಗಳಲ್ಲಿ ಕಾಣಸಿಗುತ್ತವೆ. ಅದರಲ್ಲೂ ಶ್ರೀನಿವಾಸಕಲ್ಯಾಣ (ಅಥವಾ ಪದ್ಮಾವತಿ ಪರಿಣಯ) ಅವರಿಗೆಲ್ಲ ತುಂಬ ಪ್ರಿಯವಾದ ಪ್ರಸಂಗ. ದಾಸಕೂಟದಲ್ಲಿ ಇದನ್ನು ಉತ್ಸವವಾಗಿ ಆಳವಡಿಸಿಕೊಂಡಿದ್ದಾರೆ. ಶ್ರೀನಿವಾಸಕಲ್ಯಾಣದ ಹಾಡುಗಳು ಅನೇಕ ಹರಿದಾಸರ ನುಡಿಗಳಲ್ಲಿ ಮೂಡಿ ಬಂದಿದೆ. ಇದಕ್ಕೆ ಹಿನ್ನೆಲೆ ಆಗ ಬೆಟ್ಟದ ಗುಡಿಯಲ್ಲೇ ಅದ್ದೂರಿಯಾಗಿ ಅಡಿಗಡಿಗೆ ನಡೆಯುತ್ತಿದ್ದ ಕಲ್ಯಾಣೋತ್ಸವಗಳು; ಈಗಲೂ ಅಲ್ಲಿ ಈ ಉತ್ಸವದ್ದೇ ಮೇಲಾಟವೆನ್ನಿ.

ಆದರೆ ಇದೇನು ಆಗಮೋಕ್ತವಾದ ಉತ್ಸವವಲ್ಲ. ಹೇಳಿ ಕೇಳಿ ಅದು ಏಕಬೇರಾಲಯ; ಶಯನಾಸನದಲ್ಲೂ ಭೋಗಶ್ರೀನಿವಾಸ ಏಕಾಂಗಿಯೇ. ಬೆಟ್ಟದ ಮೇಲೆ ಗುಡಿಯಲ್ಲಿ ಅಮ್ಮನವರ ಸನ್ನಿಧಿಯೆಂದು ಬೇರೆ ಎಲ್ಲಿಯೂ ಇರದು. ಲಕ್ಷ್ಮಿ ಇರುವುದು ಶ್ರೀನಿವಾಸನ ವಕ್ಷಃಸ್ಥಳದಲ್ಲೇ. ಹೀಗಿರುವುದರಿಂದ ಅಲ್ಲಿ ಕಲ್ಯಾಣೋತ್ಸವ ಎಂಬುದು ಅಪ್ರಸ್ತುತವಾಗುತ್ತದೆ, ವಿಡಂಬನೆಯಾಗುತ್ತದೆ. ಆದರೂ ತಾಳ್ಲಪಾಕವಂಶದ ಚಿನ್ನ-ತಿರುಮಲಯ್ಯಂಗಾರರು, ಅವರ ತಮ್ಮ ಚಿನ್ನನ್ನ (ತಿರುವೇಂಗಳನಾಥ) ಇಬ್ಬರೂ ಹಟ ಹಿಡಿದು, ಹಿಡಿದ ಪಟ್ಟು ಬಿಡದೆ, ಕೆಳತಿರುಪತಿಯಲ್ಲಿ ಮೊದಲು ಅನಂತರ ಬೆಟ್ಟದ ಮೇಲಣ ಗುಡಿಯಲ್ಲಿ , 1546 (ಜುಲೈ ಪಂಗುಣಿಮಾಸ)ರಲ್ಲಿ ಐದು ದಿನಗಳ ಕಲ್ಯಾಣೋತ್ಸವದ ಕಟ್ಟಳೆಯನ್ನು ಬಳಕೆಗೆ ತಂದ ವಿಚಾರ ಆಗಲೇ ಬಂದಿದೆ. ಅವರು ಎರಡು ಗ್ರಾಮಗಳ ಸಾವಿರದಷ್ಟು ಗಟ್ಟಿ ವರಹ ಆದಾಯವನ್ನು ಈ ಉತ್ಸವಕ್ಕೆಂದು ಗುಡಿಗೆ ನೀಡಿದರಾಗಿ, ಗುಡಿಯ ಆಡಳಿತವು ಉತ್ಸವವನ್ನು ನಡೆಸಲು ಒಪ್ಪಿತು. ಉತ್ಸವದಿಂದ ಇನ್ನೂ ಹೆಚ್ಚಿನ ವರಮಾನ ಬರತೊಡಗಿದುದು ಮಹಂತರ ಆಸಕ್ತಿಯನ್ನು ಕುದುರಿಸಿತು. ಇದೇ ಆಸಕ್ತಿ ಇಂದಿಗೂ ಮುಂದುವರೆದಿದೆ. ಹರಿದಾಸಪರಂಪರೆಯಲ್ಲಿ ಪುರಂದರದಾಸರ ಕಡೆಕಾಲದಲ್ಲೇ ಬೆಟ್ಟದ ಗುಡಿಯಲ್ಲಿ ಕಲ್ಯಾಣೋತ್ಸವವು ನಡೆಯುತ್ತಿದ್ದಿರಬಹುದು. ಆದರೆ ಅದರ ವೈಭವ ಮೂಡಿಬಂದದ್ದು ಮುಂದಿನ ಹರಿದಾಸರ ಕಾಲದಲ್ಲೇ. ಶ್ರೀನಿವಾಸಕಲ್ಯಾಣವು ದಾಸಕೂಟದಲ್ಲಿ ಜನಪ್ರಿಯವಾದದ್ದು ವಿಜಯ ದಾಸರ ಕಾಲದನಂತರವೇ. ದಾಸರಿಗೆ ಇದರ ಮರ್ಮ ತಿಳಿಯದೆ ಇರಲಿಲ್ಲ. ಒಬ್ಬ ದಾಸರು (ತಂದೆ ವೆಂಕಟೇಶ ವಿಠ್ಠಲ) ತಮ್ಮೊಂದು ಕೃತಿಯನ್ನು (ಆಸಾವೇರಿ)—

ನೋಡಿರಮ್ಮ ವೆಂಕಟೇಶ। ಹೂಡಿದಾಟವಾ
ಹುಡುಗರಾಟವಾ। ಮದುವೆ ಕೂಟವಾ॥

ಎಂದು ಮೊದಲು ಮಾಡಿದ್ದಾರೆ, ಶ್ರೀನಿವಾಸಕಲ್ಯಾಣದ ಸೊಲ್ಲನ್ನು ಗೇಲಿಮಾಡಿದ್ದಾರೆ.

ದಾಸರ ರಚನೆಗಳಲ್ಲಿ ಕಾಣಸಿಗುವ ಮತ್ತೊಂದು ವಿವರವೆಂದರೆ ಈ ಗುಡಿಯಲ್ಲಿ ದೇವರ ಪ್ರಸಾದವನ್ನು ಮಾರಾಟಮಾಡುತ್ತಿದ್ದರ ಭರಾಟೆ. ಗುಡಿಯನ್ನು ನಿರ್ವಹಿಸುತ್ತಿದ್ದ ಅಧಿಕಾರಿಗಳ, ಮಹಂತರ ದುರಾಸೆಯಿಂದಾಗಿ, ದೇವರಿಗೆ ನಿವೇದನ ಮಾಡುತ್ತಿದ್ದ ಬಗೆಬಗೆಯ, ರುಚಿಕರವಾದ ಅಪ್ಪ, ಅತಿರಸ, ಲಡ್ಡು, ವಡೆ, ದೋಸೆ ಮೊದಲಾದ ಪ್ರಸಾದ-ಪಣ್ಯಾರಗಳನ್ನು ಯಾತ್ರಿಕರಿಗೆ, ಭಕ್ತರಿಗೆ ಮಾರುವ ವ್ಯವಸ್ಥೆ ಗುಡಿಯ ಆಡಳಿತದಲ್ಲೇ ಇದ್ದಿತು. ಮತ್ತು ಮಹಂತರ ಕಾಲದಲ್ಲಿ ದೇವರಿಗೆ ಹಣದ ಕಾಣಿಕೆಯೇ ಸಲ್ಲಬೇಕೆಂದು ಕತೆಗಳನ್ನು ಸೃಷ್ಟಿಸಿದರು. ಮದುವೆಗಾಗಿ ಮಾವನಾದ ಆಕಾಶರಾಜನ ಸಾಲವನ್ನು ತೀರಿಸಲು ತಿಮ್ಮಪ್ಪನು ಕಪ್ಪ, ಕಾಣಿಕೆ, ಬಡ್ಡಿಗಳನ್ನು ತನ್ನ ಭಕ್ತರಿಂದ ವಸೂಲು ಮಾಡಬೇಕಾಗಿದೆಯೆಂಬ ಕಲ್ಪನೆಯನ್ನು ಜನರಲ್ಲಿ ಬೇರೂರಿಸಿದರು. ಅಧಿಕಾರಿಗಳ ದುರಾಸೆಗೆ ದೇವರನ್ನೇ ಗುರಿಮಾಡಿ ಅವನ ಹೆಸರಿಗೇ ಕಳಂಕವನ್ನು ತಂದರು!

ಪುರಂದರದಾಸರೇ ಮೊದಲಾಗಿ ಎಲ್ಲ ದಾಸರೂ ವೇಂಕಟೇಶನನ್ನು ನಿಂದಾಸ್ತುತಿಯಲ್ಲಿ ಈ ಅಪವಾದಕ್ಕೆ ಗುರಿಮಾಡಿದ್ದಾರೆ. ಪುರಂದರದಾಸರ 'ಕಂಡೆ ಕಂಡೆ ಸ್ವಾಮಿಯ ಬೇಡಿಕೊಂಡೆ' (ಮುಖಾರಿ) ಎಂಬ ಕೃತಿಯಲ್ಲಿ—

ತಪ್ಪುಕಾಣಿಕೆ ಕಪ್ಪಗಳನು ಸಪ್ತಲೋಕಗಳಿಂದ ತರಿಸುವ
ಉಪ್ಪು ಓಗರಗಳನೆ ಮಾರಿಸಿ ಉಚಿತದಿಂದಲಿ ಹಣ ಗಳಿಸುವ।
ಇಪ್ಪತ್ತು ದುಡ್ಡಿಗೆ ಸೇರು ತೀರ್ಥವ
ಒಪ್ಪದಿಂ ಕ್ರಯಮಾಡಿ ಕೊಡಿಸುವ
ಸರ್ಪಶಯನನ ಸಾರ್ವಭೌಮನ
ಅಪ್ಪ ವೇಂಕಟರಮಣನಂಘ್ರಿಯ॥

ಎಂಬ ಒಕ್ಕಣೆಯಿದೆ. ಅವರದ್ದೇ 'ದಣಿಯ ನೋಡಿದೆನೋ ವೇಂಕಟನ' (ಸಾವೇರಿ) ಎನ್ನುವ ಕೃತಿಯಲ್ಲಿ—

ಕೇಸಕ್ಕಿ ಅನ್ನ ಉಂಬುವನ - ದುಡ್ಡು
ಕಾಸು ಬಿಡದೆ ಹೊನ್ನು ಗಳಿಸಿಕೊಂಬುವನ
ದೋಸೆ ಅನ್ನವ ಮಾರಿಸುವನ
ತನ್ನ ದಾಸರ ಮೇಳದಿ ಕುಣಿದಾಡುತಿಹನ

ಎಂಬುದು ಕಾಣುತ್ತದೆ. ವಾದಿರಾಜಸ್ವಾಮಿಗಳೂ 'ಶ್ರೀಶ ನೀನಹುದೋ ಶೇಷಾಚಲವಾಸ ನೀನಹುದೋ' (ಭೈರವಿ)—

ಶೇಷಶಯನ ಸುರೇಶವಂದಿತಾ-
ಶೇಷ ಜನರನು ಪಾಲಿಸಿ ಬಡ್ಡಿ
ಕಾಸು ಸೇರಿಸಿ ಗಂಟು ಕಟ್ಟುವ
ಕ್ಯಾಸಕ್ಕಿ ತಿಮ್ಮಪ್ಪ ನೀನೇ

ಎಂದಿದ್ದಾರೆ. ಕನಕದಾಸರು—

ಬಂದೆವಯ್ಯ ಗೋವಿಂದಶೆಟ್ಟಿ
ಇಂದು ನಿಮ್ಮ ಹರಿವಾಣ ಪ್ರಸಾದ ಉಂಟೆನಲಾಗಿ

ಎನ್ನುವ ಪಂತುವರಾಳಿ–ಕೃತಿಯಲ್ಲಿ—

ಅಪ್ಪವು ಅತಿರಸ ತುಪ್ಪವು ಬಿಸಿಪಾಲು
ಒಪ್ಪುವ ಸಕ್ಕರೆ ಯಾಲಕ್ಕಿಯ
ಅಪರೂಪವಾದ ಕಜ್ಜಾಯಗಳನೆಲ್ಲ
ಭಪ್ಪನ್ನ ದೇಶಕ್ಕೆ

ಮಾರುವುದನ್ನೂ,

ಒಡೆದು ಮಡಕೆಯಲ್ಲಿ ಅರೆದು ನಾಮವ ಮಾಡಿ
ತೊಡುವೆ ನೀ ಕಾಸಿಗೆ ಒಂದೊಂದನು।
ಒಡಲು ತುಂಬ ಮಿಕ್ಕ ಓಗರ ಮಾರಿಸಿ
ಒಡವೆಯ ಗಳಿಸುವ

ಕಡುಲೋಭಿತನವನ್ನೂ ಎತ್ತಿ ಆಡಿದ್ದಾರೆ.

ಈ ತೆರನಾದ ಅಪಖ್ಯಾತಿಯಲ್ಲೂ ಭಕ್ತಿಯನ್ನು ಬಿಡದೆ ಉಳಿಸಿಕೊಂಡವರು ಹರಿದಾಸರು.

ನಾರಾಯಣ–ಜೀಯರ್

ವ್ಯಾಸತೀರ್ಥರ ಕಾಲದಲ್ಲಿ ಅಹೋಬಲಮಠದ ಗುರುಗಳಾಗಿದ್ದವರು ಶ್ರೀಮನ್ ನಾರಾಯಣ-ಜೀಯರು (ಮಠದ ಒಡೆತನ ಕ್ರಿಸ್ತಾಬ್ದ 1515-1528). ಇವರು ಈ ಮಠವನ್ನು ಸ್ಥಾಪಿಸಿದ ಆದಿ-ವಣ್-ಶಠಕೋಪ-ಜೀಯರ ಶಿಷ್ಯರು, ಉತ್ತರಾಧಿಕಾರಿಗಳು. ಸಾಳುವ-ನರಸಿಂಹನ ಕಾಲದಲ್ಲೇ ಮೂಡಿಕೊಂಡ ಈ ಮಠ ತಿರುಪತಿಯಲ್ಲಿ ತುಂಬ ಪ್ರಭಾವಶಾಲಿಯಾಗಿದ್ದಿತು. ಕೃಷ್ಣದೇವರಾಯನು ತನ್ನ ಆಳ್ವಿಕೆಯನ್ನು ಮೊದಲು ಮಾಡಿದಾಗಲೂ ಆದಿ-ವಣ್-ಶಠಕೋಪ-ಜೀಯರು ಬದುಕಿದ್ದು ಈ ಮಠದ ಒಡೆಯರಾಗಿದ್ದರು. ಅವರ ವಿಚಾರ ಆಗಲೇ ಬಂದಿದೆ. ಅವರ ಶಿಷ್ಯರಾದ ನಾರಾಯಣ-ಜೀಯರು ಬೆಟ್ಟದ ಗುಡಿಗೆ 1,860 ನರ್-ಪಣಗಳನ್ನು ಸಲ್ಲಿಸಿ ಅವರ ಹೆಸರಿನಲ್ಲಿ ಬೆಟ್ಟದ ಗುಡಿಯಲ್ಲಿ ದೇವರಿಗೆ ನಡೆಯುವ ಅಧ್ಯಯನೋತ್ಸವದ ಸಂದರ್ಭದಲ್ಲಿ ತಿರುವೊಲಕ್ಕಂ, ಅತಿರಸ-ಪಡಿ, ಗೋಧಿ-ಪಡಿ, ಸುಖಿಯನ್-ಪಡಿ, ಇಡ್ಡಲಿ-ಪಡಿ ಇಷ್ಟನ್ನು ತಿರುಮೋಳಿ-ಪಡಿಯೆಂದು ಸಮರ್ಪಿಸುವ ವ್ಯವಸ್ಥೆ ಮಾಡಿದರು (1516ರಲ್ಲಿ). ತಮ್ಮ ಗುರುಗಳಾದ ಆದಿ-ವಣ್-ಶಠಕೋಪ-ಜೀಯರ ತಿರುನಕ್ಷತ್ರದಂದು (ಜ್ಯೇಷ್ಠಾ) ಪ್ರತಿವರ್ಷವೂ ಹದಿಮೂರು ದಿನಗಳು ಅಪ್ಪ-ಪಡಿಯನ್ನು ದೇವರಿಗೆ ಸಮರ್ಪಿಸುವ

ಕೈಂಕರ್ಯವನ್ನೂ ಕೈಗೊಂಡರು. ಅದೇ ವರ್ಷ ತಮ್ಮ ಹೆಸರಿನಲ್ಲಿ ತಿರುಪತಿಯ ಗೋವಿಂದರಾಜನಿಗೂ ಕೆಲವು ಸೇವೆಗಳನ್ನು ಸಲ್ಲಿಸಲೆಂದು ಗುಡಿಯ ಶ್ರೀಭಂಡಾರಕ್ಕೆ ಮತ್ತೆ 3800 ಪಣಗಳನ್ನು ಸಲ್ಲಿಸಿದರು.

ಸಾಳುವ-ನರಸಿಂಹನ ಕಾಲದಲ್ಲಿ ಮೇಲಕ್ಕೆ ಬಂದು, ಗುಡಿಯ ಆಡಳಿತದಲ್ಲಿ ಕೈಹಾಕಿ ತನ್ನ ಪ್ರಭಾವವನ್ನು ಎಲ್ಲೆಡೆಯೂ ಮೂಡಿಸಿದ ಕಂದಾಡೆ-ರಾಮಾನುಜ-ಅಯ್ಯನ ಅನಂತರ ಅವನ ರಾಮಾನುಜಕೂಟದ ಕಾರ್ಯಕರ್ತನಾಗಿ ನಿಂತವನು ಅವನ ಶಿಷ್ಯ ಮತ್ತು ನಂಟ ಕಂದಾಡೆ-ಮಾಧವ-ಅಯ್ಯಂಗಾರ್. ಈತನು ತಿರುಮಲದೇವಿ-ಪುರವೆಂಬ ಹೊಸ ಗ್ರಾಮವನ್ನೇ ಏರ್ಪಡಿಸಿ ಅದನ್ನು ಗುಡಿಯ ಶ್ರೀಭಂಡಾರಕ್ಕೆ ಸಲ್ಲಿಸಿದನು (1520). ಉಳಿದಂತೆ ಅವನ ಸೇವೆ ಸಂದುದು ತಿರುಪತಿಯ ಗೋವಿಂದರಾಜನಿಗೇ.



ಒಂಬತ್ತು

ಅಚ್ಯುತರಾಯನ ಉತ್ಸಾಹ, ರಸಿಕತೆ

ಗುಡಿಗೆ ಕೊಡುಗೆ

ಅರಸೊತ್ತಿಗೆಯ ಬಲೆಯಲ್ಲಿ ವಿರಸಗಳು ತಪ್ಪುವುದಿಲ್ಲ, ಸಂಶಯಗಳು ಕಾಡದೆ ಇರುವುದಿಲ್ಲ. ಕೃಷ್ಣದೇವರಾಯನು ತನ್ನ ಉತ್ತರಾಧಿಕಾರಿಯನ್ನು ಕುರಿತು ಆಲೋಚಿಸುವ ಘಟ್ಟ ಬಂದಾಗ, ತನ್ನ ಮಲತಮ್ಮ ಅಚ್ಯುತರಾಯನನ್ನು ಚಂದ್ರಗಿರಿಯ ಅರಮನೆಯಲ್ಲಿ ಹೆಚ್ಚೂ ಕಡಮೆ ಸೆರೆಯಲ್ಲಿ ಹತ್ತಾರು ವರ್ಷಗಳು ಇರಿಸಿದ್ದ. ಆದರೆ ತನ್ನ ಮಗ ತಿರುಮಲನು ಆರು ವರ್ಷಗಳ ಎಳೆಯ ವಯಸ್ಸಿನಲ್ಲೇ ತೀರಿಕೊಳ್ಳಲು, ಅಚ್ಯುತರಾಯನನ್ನು ನಿರ್ಬಂಧದಿಂದ ಬಿಡಿಸಿ, ಅವನೇ ತನ್ನ ಉತ್ತರಾಧಿಕಾರಿಯೆಂದು ಸಾರಿ, ಅವನು ಆಡಳಿತದಲ್ಲಿ ಪಾಲ್ಗೊಳ್ಳುವಂತೆ ಮಾಡಿದ. ಹೀಗೆ ನಾಲ್ಕೈದು ವರ್ಷಗಳು ಕಳೆದಾಗ ಅಚ್ಯುತರಾಯನಿಗೆ ಕೃಷ್ಣದೇವರಾಯನು ವಿಧಿಯಂತೆ ಪಟ್ಟಾಭಿಷೇಕವನ್ನೂ ಮಾಡಿಸಿದ. ಇದು ನಡೆದದ್ದು ಕ್ರಿಸ್ತಾಬ್ದ 1529ರಲ್ಲಿ. ಮರುವರ್ಷವೇ ಕೃಷ್ಣದೇವರಾಯನು ತೀರಿಕೊಂಡು ಅಚ್ಯುತರಾಯನು ಸ್ವತಂತ್ರವಾಗಿ ಸಾಮ್ರಾಜ್ಯವನ್ನಾಳತೊಡಗಿದ.

ಅಚ್ಯುತರಾಯನಿಗೆ ಪಟ್ಟಾಭಿಷೇಕ ನಡೆದುದು ಮೂರು ಬಾರಿ; ಮೂರೂ ಸುಮಾರು ಒಂದು ತಿಂಗಳೊಳಗೇ ನಡೆದುವು—1529ರ ಅಕ್ಟೋಬರ್-ನವೆಂಬರ್ ತಿಂಗಳುಗಳ ಅವಧಿಯಲ್ಲಿ. ಮೊದಲ ಬಾರಿಯ ಪಟ್ಟಾಭಿಷೇಕವು ಬೆಟ್ಟದ ಗುಡಿಯೊಳಗೇ ನಡೆಯಿತು. ಗರ್ಭಗುಡಿಯಲ್ಲಿ ದೇವರ ಕೈಯಲ್ಲಿದ್ದ ಶಂಖದಿಂದಲೇ ಅವನಿಗೆ ಅಭಿಷೇಕ ನಡೆಯಿತೆಂದು ಹೇಳಿದೆ. ಎರಡನೆಯ ಬಾರಿ ಪಟ್ಟಾಭಿಷೇಕವಾದದ್ದು ಕಾಳಹಸ್ತಿಯ ಗುಡಿಯಲ್ಲಿ. ಇವೆರಡೂ ಗುಡಿಗಳು ಕೃಷ್ಣದೇವರಾಯನಿಗೆ ತುಂಬ ಪ್ರಿಯವಾದುವು. ಅಲ್ಲಿ ಇವನಿಗೆ ಪಟ್ಟಾಭಿಷೇಕವು ಧಾರ್ಮಿಕವಿಧಿಯಂತೆ ನಡೆಯಬೇಕೆಂದು ಕೃಷ್ಣದೇವರಾಯನ ಬಯಕೆಯಿದ್ದುದು ಸೋಜಿಗವಲ್ಲ. ಮೂರನೆಯದು ರಾಜಧಾನಿಯಾದ ವಿಜಯನಗರದಲ್ಲೇ ಸಾರ್ವಜನಿಕಸಮಾರಂಭವಾಗಿ ವೈಭವದಿಂದ ನಡೆಯಿತು.

ಕೃಷ್ಣದೇವರಾಯನಂತೆಯೇ ಅಚ್ಯುತರಾಯನೂ ಬೆಟ್ಟದ ಗುಡಿಗೆ ಉದಾರವಾಗಿ ದಾನ ಮಾಡಿದನು, ಅಲ್ಲಿನ ದೇವರನ್ನು ಬೆಲೆಬಾಳುವ ಆಭರಣಗಳಿಂದ ಅಲಂಕರಿಸಿದನು. ಆದರೆ ಕೃಷ್ಣದೇವರಾಯನಂತೆ ಅಚ್ಯುತರಾಯನು ವೇಂಗಡದೊಡೆಯನ ಮಟ್ಟಿಗೆ ಭಕ್ತಿಯನ್ನು ತೋರಿಸಿದವನಲ್ಲ; ವೇಂಗಡದೊಡೆಯನಿಗೆ ಚೌಕಟ್ಟಾಗಿ ಮೂಡಿಕೊಂಡು

ಬರುತ್ತಿದ್ದ ಶ್ರೀವೈಷ್ಣವಧರ್ಮದ ವಿಚಾರವಾಗಿಯೂ ಇವನಿಗೆ ವಿಶೇಷವಾದ ಆದರ ವಿದ್ದಿತು. ಇವನು ಚಂದ್ರಗಿರಿಯ ಅರಮನೆಯಲ್ಲಿ ನಿರ್ಬಂಧದಲ್ಲಿದ್ದಾಗ, ರಾಜಕಾರಣ-ಹವ್ಯಾಸವೇನೂ ಇರದೆ, ತಿರುಪತಿಯ ಆಚಾರ್ಯಪುರುಷರೊಂದಿಗೆ, ಜೀಯರ ರೊಂದಿಗೆ ನಂಟನ್ನು ಬೆಳೆಸಿಕೊಂಡಿದ್ದ. ಅಡಿಗಡಿಗೆ ತಿರುಪತಿಗೆ ಬರುತ್ತಿದ್ದು ಅಲ್ಲಿ ನಡೆಯುತ್ತಿದ್ದ ಉತ್ಸವಗಳಲ್ಲಿ ಪಾಲುಗೊಳ್ಳುತ್ತಿದ್ದ. ಅವನೂ ಅವನ ಹೆಂಡತಿ ವರದಾಜಿ-ಅಮ್ಮನೂ ಸಾಂಪ್ರದಾಯಿಕವಾಗಿ ಶ್ರೀವೈಷ್ಣವಧರ್ಮದ ದೀಕ್ಷೆ ಪಡೆದಿದ್ದರೆಂದು ಸೂಚನೆಯಿದೆ. ಆದುದರಿಂದ ಅಚ್ಯುತರಾಯನು ಆಳತೊಡಗಿದ ಮೇಲೆ ತಿರುಪತಿಯ ಪ್ರಸಿದ್ಧಿ ಹೆಚ್ಚಿತು, ಅಲ್ಲಿನವರು ಬೆಟ್ಟದ ಗುಡಿಯ ಮೇಲೆ ಒದಗಿಸಿಕೊಳ್ಳುತ್ತಿದ್ದ ಹಿಡಿತ ಇನ್ನಷ್ಟು ಬಲವಾಯಿತು.

ಚಕ್ರತೀರ್ಥ

ಅಚ್ಯುತರಾಯನ ಪಟ್ಟಾಭಿಷೇಕ ನಡೆಯುವ ಮೊದಲೇ ಅವನ ಗಮನ ಹರಿದದ್ದು ಬೆಟ್ಟದ ತಪ್ಪಲಲ್ಲಿ ತಿರುಪತಿಯ ನೆರೆಯಲ್ಲಿರುವ ಜಲಪಾತ-ಕೊಳ ಆಳ್ವಾರ್‌ತೀರ್ಥದ ಮೇಲೆ. ರಾಮಾನುಜರ ಕಾಲಕ್ಕೆ ಮೊದಲು ಇದು ಕಪಿಲತೀರ್ಥ; ಅಲ್ಲಿನ ದೇವರು ಶೈವ ಒಲವಿನವನು, ಕಪಿಲೇಶ್ವರ. ರಾಮಾನುಜರು ತಿರುಪತಿಯಲ್ಲಿ ಗೋವಿಂದರಾಜನ ಸನ್ನಿಧಿಯನ್ನು ಏರ್ಪಡಿಸಿದಾಗ, ಈಗ ಗುಡಿಯ ಹತ್ತಿರವಿರುವ ಗೋವಿಂದ-ಪುಷ್ಕರಿಣಿ ಇನ್ನೂ ಮೈದಳೆದಿರಲಿಲ್ಲ. ದೇವರ 'ತೀರ್ಥವಾರಿ' ಮೊದಲಾದ ವಿಧಿಗಳಿಗೆ ಕಪಿಲ ತೀರ್ಥವನ್ನೇ ಅವರು ಬಳಸಿಕೊಳ್ಳಬೇಕಾಗಿತ್ತು. ಆದರೆ ರಾಮಾನುಜರು ಅದಕ್ಕೆ ಶ್ರೀವೈಷ್ಣವಸಂಸ್ಕಾರವನ್ನು ಮಾಡಿದರು. ಅಲ್ಲಿ ಸುದರ್ಶನಚಕ್ರದ ಸಾನ್ನಿಧ್ಯವನ್ನೇರ್ಪಡಿಸಿ ಕೊಳವನ್ನು 'ಚಕ್ರತೀರ್ಥ'ವೆಂದು ಕರೆದರು. ಸುದರ್ಶನಚಕ್ರಕ್ಕೆ ತಮಿಳಿನ ಹೆಸರು 'ತಿರುವಳಿ-ಆಳ್ವಾರ್'; ಹೀಗಾಗಿ ಈ ಕೊಳವು 'ಆಳ್ವಾರ್-ತೀರ್ಥ'ವೆಂದೇ ಹೆಸರಾಯಿತು. ಗೋವಿಂದರಾಜನ ಉತ್ಸವಮೂರ್ತಿ ಅಡಿಗಡಿಗೆ ಈ ಕೊಳಕ್ಕೆ ಬರಬೇಕಾಗಿದ್ದರೂ, ಈ ಕೊಳವನ್ನು ಗುಡಿಯ ಘನತೆಗೆ ತಕ್ಕಂತೆ ಊರ್ಜಿತಗೊಳಿಸುವ ಗೋಜಿಗೆ ಯಾರೂ ಹೋಗಿರಲಿಲ್ಲ. ಅಚ್ಯುತರಾಯನು ಈ ಕೆಲಸವನ್ನು ಕೈಗೊಂಡನು. ಅವನು ಪಟ್ಟಕ್ಕೆ ಬಂದ ಮರುವರ್ಷ ಇದು ಮುಗಿಯಿತು.

"ಶ್ರೀ ವೀರಪ್ರತಾಪ ಶ್ರೀ ವೀರ ಅಚ್ಯುತರಾಯ ಮಹಾರಾಯರು.... ತಿರುವೇಂಗಳನಾಥ ದೇವರ ದಿವ್ಯತೀರ್ಥವಾದ ತಿರುಪತಿ ಚಕ್ರತೀರ್ಥ....ತಮಗೆ ಚತುರ್ವಿಧ ಪುರುಷಾರ್ಥಸಿದ್ಧಿ ಆಗುವ ಮರಿಯಾದೆಯಲಿ ಪುನಃಪ್ರತಿಷ್ಟೆ ಮಾಡಿಸಿ ಶಿಲೆಯಲ್ಲಿ ಸೋಪಾನಪಂಕ್ತಿಯನು ಮಾಡಿಸಿ.... ಸಂಧ್ಯಾವಂದನೆ ಮಂಟಪವನು ಕಟ್ಟಿಸಿ ನಾಲ್ಕು ದಿಕ್ಕಿನಲಿ ಸುದರ್ಶನಶಿಲೆಗಳನ್ನೂ ಸ್ಥಾಪನೆ ಮಾಡಿಸಿ..." ಎಂದು ಕ್ರಿಸ್ತಾಬ್ದ 1531ರ ಶಾಸನದ ಒಕ್ಕಣೆ. ಇದೇ ಶಾಸನದ ತಮಿಳುಪ್ರತಿಯಲ್ಲಿ ಕೊಳವನ್ನು 'ಆಳ್ವಾರ್ ತೀರ್ಥ'ವೆಂದು ಕರೆಯಲಾಗಿದೆ. (**ತಿರುವೇಂಗಡಮುಡೈಯಾನ್ ದಿವ್ಯತೀರ್ಥಮಾನ**

திருப்பதியில் ஆழ்வார்-தீர்த்தத்தை). ಈ ಹೆಸರು ಶ್ರೀವೈಷ್ಣವರ ನಡುವೆ ವಾಡಿಕೆಯಲ್ಲಿದ್ದಿರಬಹುದು; ಆದರೆ ಆವರೆಗೆ ಅದನ್ನು ಆಳ್ವಾರ್-ತೀರ್ಥವೆಂದು ಯಾವ ಶಾಸನವೂ ಕರೆದುದಿಲ್ಲ. ಮೇಲಾಗಿ, ಅದು 'ತಿರುವೇಂಗಡದೊಡೆಯನ ದಿವ್ಯತೀರ್ಥ' ವೆಂಬ ಕಲ್ಪನೆಯೂ ಇದಕ್ಕೆ ಮೊದಲು ಕಾಣುವುದಿಲ್ಲ. ಬೆಟ್ಟದ ಮೇಲೆ ನಿಂತಿರುವ ಒಡೆಯನಿಗೂ ಬೆಟ್ಟದ ಕೆಳಗಿರುವ ಈ ಕೊಳಕ್ಕೂ ಸಂಬಂಧವನ್ನು ಕಲ್ಪಿಸುವ ಕಾತರದ ಹಿನ್ನೆಲೆಯಲ್ಲಿರುವುದು ತಿರುಮಲೆಗೂ ತಿರುಪತಿಗೂ ಹೆಚ್ಚಿನ ನಂಟನ್ನು ಒದಗಿಸಬೇಕೆಂಬ ಬಯಕೆ. ಈ ಬಯಕೆ ಸಾಳುವ-ನರಸಿಂಹನ ಕಾಲದಿಂದಲೂ ಇದ್ದದ್ದೇ; ಕಂದಾಡೆ ಅಯ್ಯಂಗಾರರೂ ಜೀಯರರೂ ಆಚಾರ್ಯಪುರುಷರೂ ಅವರ ಪ್ರಭಾವವನ್ನು ತಳೆದ ಅಧಿಕಾರಿಗಳೂ ಈ ಬಯಕೆಯನ್ನು ಈಡೇರಿಸಲು ಅಷ್ಟಿಷ್ಟು ಯತ್ನಿಸಿದರು. ಆದರೆ ಕೃಷ್ಣದೇವರಾಯನಿಗೆ ಈ ವಿಚಾರದಲ್ಲಿ ಆದರವೇನೂ ಇರಲಿಲ್ಲ. ಅವನ ಎಣಿಕೆಯಲ್ಲಿ ತಿರುಮಲೆಯಷ್ಟೇ ಮುಖ್ಯವಾಗಿದ್ದುದು. ಆದರೂ ಅವನ ಕಾಲದಲ್ಲಿ ಮೂಡಿಕೊಂಡ ಹಲವು ಶಾಸನಗಳನ್ನು ನೋಡಿದರೆ ತಿರುಪತಿಯವರ ಕೈ ಬಲವಾಗುತ್ತಿದ್ದುದು ಸ್ಪಷ್ಟವಾಗುತ್ತದೆ. ಅಚ್ಯುತರಾಯನೇನೋ ತಿರುಪತಿಯ ಹಿರಿಮೆಯನ್ನು ಸ್ಥಿರಪಡಿಸಲು ಉತ್ಸಾಹವನ್ನು ತಳೆದನು. ಕಪಿಲತೀರ್ಥವು ಆಳ್ವಾರ್‌ತೀರ್ಥವಾದುದು ಹೀಗೆ.

ಸಹಸ್ರನಾಮಾರ್ಚನೆಯ ಸಾಹಸ

ಅಚ್ಯುತರಾಯನು ಸಾಮ್ರಾಜ್ಯದ 'ಮಹಾರಾಜಾಧಿರಾಜ'ನಾಗಿ ಅಧಿಕಾರಸೂತ್ರವನ್ನು ವಹಿಸಿಕೊಂಡು ಮೂರು ವರ್ಷಗಳು ಕಳೆಯಲು, ಕ್ರಿಸ್ತಾಬ್ದ 1533ರ ಜನವರಿ ತಿಂಗಳಿನ ಕಡೆಯ ದಿನ, ತಿರುಮಲೆ ಬೆಟ್ಟವೇರಿ ಬರುತ್ತಾನೆ. ಅವನೊಂದಿಗೆ ಅವನ ರಾಣಿ ವರದಾಜಿ-ಅಮ್ಮನೂ ಮಗ ಚಿಕ್ಕ-(ಕುಮಾರ-)ವೇಂಕಟಾದ್ರಿಯೂ ಇರುತ್ತಾರೆ. ಅವರೆದುರು ರಾಜನು "ಗುಡಿಯ ಅರ್ಚಕರು ಸಹಸ್ರನಾಮಾವಳಿಯನ್ನು ಹೇಳುತ್ತಿರಲು ತಾನೇ ಕೈಯಾರ ದೇವರ ಅರ್ಚನೆ ನಡೆಸುತ್ತಾನೆ" (**அச்சுதராயமஹாராயர் கையிலே அர்ச்சனை அர்ச்சகவும் அர்ச்சகர் ஶ்ரீனிவாசஸஹஸ்ரநாமம் ஶொல்ல**வும்...) ಎಂದು ತಮಿಳುಭಾಷೆಯಲ್ಲಿರುವ ಶಾಸನವು ಹೆಮ್ಮೆಯಿಂದ ಒಕ್ಕಣಿಸುತ್ತದೆ.

ಇಂಥ ಕೆಲಸವನ್ನು ಆ ಗುಡಿಯಲ್ಲಿ ಈವರೆಗೆ ಯಾರೂ ನಡೆಸಿರಲಿಲ್ಲ. ಗುಡಿಯಲ್ಲಿ ಯಾವುದೇ ಅರ್ಚನೆಯನ್ನು ಮಾಡುವುದು ಆದರಲ್ಲಿ ದೀಕ್ಷಿತನಾದ ಅರ್ಚಕನ ಅಧಿಕಾರ; ಇದನ್ನು ಬೇರೆ ಯಾರೂ ಮಾಡಲಾರರು. "ಮಹಾರಾಜಾಧಿರಾಜ"ನೆನಿಸಿಕೊಂಡ ಮಾತ್ರಕ್ಕೆ ಈ ಅಧಿಕಾರ ಒದಗಿಬರುವುದಿಲ್ಲ. ಕೃಷ್ಣದೇವರಾಯನು ಎಷ್ಟೋ ಸೇವೆಗಳನ್ನು ಸಲ್ಲಿಸಿದ್ದನಾದರೂ ಅರ್ಚನೆಯನ್ನು ತಾನೇ ನಡೆಸುವೆನೆಂದು ಮುಂದರಿದಿರಲಿಲ್ಲ. ಹಿಂದಿನಿಂದ ಬಂದ ಪದ್ಧತಿಯನ್ನು ಕಡೆಗಾಣಿಸುವ ಗೋಜಿಗೆ ಅವನು ಹೋಗಲಿಲ್ಲ. ಆದರೆ ಅಚ್ಯುತರಾಯನಿಗೆ ಈ ಬಗೆಯ ಅಳುಕು ಇರಲಿಲ್ಲ. ಗುಡಿಯ ಅರ್ಚಕನನ್ನೂ

ತನ್ನ ಪರಿಚಾರಕನಂತೆ ಬಳಸಿಕೊಂಡು, ಅವನು ಮಂತ್ರ ಹೇಳಬೇಕು ತಾನು ಪೂಜೆ ಮಾಡಬೇಕು ಎಂದು ನಿರ್ಧರಿಸಿದುದು ಅವನ ಅಹಂಕಾರವನ್ನು ತೋರಿಸುತ್ತದೆ. ಸ್ಥಾನತ್ತಾರರೂ ವೈಖಾನಸ-ಅರ್ಚಕರೂ ಇದನ್ನು ವಿರೋಧಿಸಿದ್ದಿರಬೇಕು; ಆದರೆ "ವೀರಪ್ರತಾಪ"ನೆನಿಸಿಕೊಂಡ ಅರಸನೆದುರು ಅವರ ಆಡ್ಡಿ ನಡೆಯುವುದೆ? ಕಡೆಗೆ, ಇದನ್ನು ತಿಳಿಸುವ ಶಾಸನವೂ "ರಾಜನ ಅಪ್ಪಣೆಯ ಮೇರೆ" ಮೂಡಿಬಂದುದೆಂದೇ ಒಕ್ಕಣೆಯಿದೆ. ಎಂದರೆ ಗುಡಿಯ ಆಡಳಿತದವರು ತಾವಾಗಿ ಈ ಪ್ರಸಂಗವನ್ನು ಶಿಲಾಶಾಸನದಲ್ಲಿ ಉಳಿಸಲು ಬಯಸಿರಲಿಲ್ಲ, ಅರಸನ ಆಣತಿಗೆ ತಲೆಬಾಗಿ ಶಾಸನ ಹೊರಬಂದಿತು, ಅಷ್ಟೆ.

ಇದನ್ನು ನಡೆಸಿದ ದಿನ ಶುಕ್ರವಾರ; ದೇವರಿಗೆ ಸ್ನಪನ-ಕಟ್ಟಳೆ (ತಿರುಮಂಜನ) ಮುಗಿದಮೇಲೆ ಬೆಲೆಬಾಳುವ ಹಲವು ಆಭರಣಗಳನ್ನು ಅರಸನು ಸಮರ್ಪಿಸುತ್ತಾನೆ. ಇದರ ವಿವರವೂ ಶಾಸನದಲ್ಲಿದೆ. ನೂರಾರು ವಜ್ರ, ಮುತ್ತು, ಪಚ್ಚೆ, ರತ್ನಗಳನ್ನು ಕೂಡಿಸಿದ ಕವಚ, ಕುಲಾವಿ, ತಲೆಮಣಿ, ಕೈಬಳೆಗಳು, ಹಾರಗಳು ಮೊದಲಾದುವನ್ನೆಲ್ಲ ಅರಸನು ದೇವರಿಗೆ ಕೊಡುತ್ತಾನೆ. "ಕಪಿಲ-ಪಶು"ವೆಂಬ ಮಹಾದಾನವನ್ನೂ ಮಾಡುತ್ತಾನೆ; ಕೃಷ್ಣದೇವರಾಯನು ಮಾಡಿಸಿದಂತೆಯೇ ದೇವರಿಗೆ "ಸ್ವರ್ಣವರ್ಷ"ವನ್ನೂ ಮಾಡಿಸುತ್ತಾನೆ.

ಲಕ್ಷ್ಮೀದೇವಿಗೆ ಉತ್ಸವ

ಅಚ್ಯುತರಾಯನು ಎರಡನೆಯ ಬಾರಿ ಗುಡಿಗೆ ಬಂದುದು ಎರಡು ವರ್ಷಗಳಷ್ಟು ಕಾಲ ಕಳೆದಮೇಲೆ, ಕ್ರಿಸ್ತಾಬ್ದ 1535ರ ಡಿಸೆಂಬರ್ ತಿಂಗಳ ಇಪ್ಪತ್ತಾರನೆಯ ದಿನ. ಈ ಬಾರಿಯೂ ಮೊದಲಬಾರಿಯಂತೆ ಇನ್ನೊಂದು ಅನುಚಿತವೆಂಬಂಥ ಕೆಲಸವನ್ನು ನಡೆಸುತ್ತಾನೆ. ಇದು "ಲಕ್ಷ್ಮೀದೇವಿ-ಮಹೋತ್ಸವ"ವನ್ನು ಗುಡಿಯಲ್ಲಿ ನಡೆಸಬೇಕೆಂಬ ಕಟ್ಟಳೆ. ಬೆಟ್ಟದ ಗುಡಿಯಲ್ಲಿ ಎಲ್ಲಿಯೂ ಲಕ್ಷ್ಮಿಯ ಸನ್ನಿಧಿಯೆಂಬುದಿಲ್ಲ, ಲಕ್ಷ್ಮಿಯ ವಿಗ್ರಹವೂ ಇಲ್ಲ. ದೇವರು "ಶ್ರೀನಿವಾಸ"ನಾದುದರಿಂದ ಅವನ ವಕ್ಷಃಸ್ಥಳದಲ್ಲೇ ಲಕ್ಷ್ಮಿಯ ಸ್ಥಾನ. ಆಗಮದಂತೆ ಇದು ಏಕಬೇರ-ದೇವಾಲಯ; ಇಲ್ಲಿ ವೇಂಗಡದೊಡೆಯನನ್ನು ಬಿಟ್ಟು ಬೇರೆ ಯಾವ ದೇವತೆಗೂ ಪ್ರತ್ಯೇಕವಾದ ಪೂಜೆ ನಡೆಯುವ ವಾಡಿಕೆಯಿಲ್ಲ. ಇದು ವೈಖಾನಸ-ಪದ್ಧತಿಯ ಕಟ್ಟುಪಾಡು. ರಾಮಾನುಜರ ಕಾಲಕ್ಕೆ ಒಂಟಿ-ದೇವರ ಎದೆಯ ಮೇಲೆ ಪದ್ಮಾವತಿ ಅಥವಾ ಅಲರ್-ಮೇಲ್-ಮಂಗತ್ತಾಯಾರರೆನಿಸಿಕೊಳ್ಳುವ ವ್ಯೂಹಲಕ್ಷ್ಮಿಯ ಪ್ರತೀಕವು ಮೂಡಿಕೊಂಡುಬಂದಿತೆಂದು ಪ್ರತೀತಿ. ಅಲರ್-ಮೇಲ್-ಮಂಗೈ ಲಕ್ಷ್ಮಿಯ ಅವತಾರವೆಂದೇ ಕಲ್ಪನೆಯಾದರೂ ಅದು ಮಾನುಷೀಮೂರ್ತಿ. ಅಲ್ಲಿನವರೆಗೆ ಯಾರೂ ಈ ವಕ್ಷಃಸ್ಥಳಲಕ್ಷ್ಮಿಗೆ ಹೆಚ್ಚಿನ ಗಮನವನ್ನು ಕೊಟ್ಟುದಿಲ್ಲ.

ಅಚ್ಯುತರಾಯನು ಅಂಗೀಕರಿಸಿದ ಧರ್ಮದಲ್ಲಿ ಲಕ್ಷ್ಮಿಗೆ ಹೆಚ್ಚಿನ ಪ್ರಾಶಸ್ತ್ಯ;

ಒಂಟಿದೇವರಲ್ಲಿ ಒಳಪಡಿಸದೆ ಬೇರೆಯಾಗಿ ಉಳಿಸಿಕೊಂಡು ಪೂಜೆ ಸಲ್ಲಿಸುವ ಪದ್ಧತಿ ಅದರದ್ದು. ಅಚ್ಯುತರಾಯನು ಏರ್ಪಡಿಸಿದ ಲಕ್ಷ್ಮೀಮಹೋತ್ಸವವು ವೇಂಗಡದೊಡೆಯ ಮತ್ತು ಅಲರ್-ಮೇಲ್-ಮಂಗೈ-ನಾಚ್ಚಿಯಾರರಿಗೆಂದು ಶಾಸನದಲ್ಲಿ ಬರುವ ಒಕ್ಕಣೆ. ಆದರೆ ಉತ್ಸವದ ವಿವರಗಳೆಲ್ಲ ನಾಚ್ಚಿಯಾರಿಗೆ ಸಂಬಂಧಿಸಿದುವೇ. ಇದೇ ಉತ್ಸವವನ್ನು ಪ್ರಸ್ತಾಪಿಸುವ ಇನ್ನೊಂದು ಶಾಸನ (ಬೆಟ್ಟದ ಗುಡಿಯ ಮೂರನೆಯ ಪ್ರಾಕಾರದ ಉತ್ತರಗೋಡೆಯ ಮೇಲಿರುವುದು) ಸಣ್ಣದಾಗಿರುವುದು ಮಾತ್ರವಲ್ಲ, ಅದರ ಒಕ್ಕಣೆಯಲ್ಲಿ ಕಡ್ಡಾಯದ ಧ್ವನಿಯಿದೆ. "ಲಕ್ಷ್ಮೀದೇವಿಮಹೋತ್ಸವವನ್ನು ಉತ್ತರಾದಿ ನಕ್ಷತ್ರ ವಿರುವಾಗ ಅಂಕುರಾರ್ಪಣಮಾಡಿ ರೋಹಿಣೀನಕ್ಷತ್ರವಿರುವಾಗ ಶಾತ್ತುಮುರೈ ನಡೆಸಿ, ಏಳು ದಿನಗಳು ನಡೆಸಬೇಕೆಂದು ಕಟ್ಟುಮಾಡಿದೆ"—ಇದು ತಮಿಳುಶಾಸನದ ಕನ್ನಡ ರೂಪ. ಎಂದರೆ, ಈ ಉತ್ಸವಕ್ಕೂ ಗುಡಿಯ ಆಡಳಿತದವರಿಂದ ಮತ್ತು ವೈಖಾನಸ-ಅರ್ಚಕರಿಂದ ವಿರೋಧವಿದ್ದುದರ ಧ್ವನಿ ಇಲ್ಲಿ ಕಾಣಬರುತ್ತದೆ. ಈ ಶಾಸನದಲ್ಲಿ ವೇಂಗಡದೊಡೆಯನ ಪ್ರಸ್ತಾಪವೇ ಇರದು.

ಮೊದಲು ಹೇಳಿದ ಶಾಸನದಲ್ಲಿ "ಸ್ವಾಮಿ-ಅಚ್ಯುತರಾಯ-ಮಹಾರಾಯ"ನೆಂದು ಬಂದಿರುವ ಒಕ್ಕಣೆ ಸ್ವಾರಸ್ಯವಾದುದು. ವಿಜಯನಗರದ ಅರಸನು "ಸ್ವಾಮಿ"ಯಾದುದು ಯಾವಾಗ? "ಸ್ವಾಮಿ"ಯೆನ್ನುವ ಮಾತು ಧಾರ್ಮಿಕನೆಲೆಯಲ್ಲಿ ಗೌರವಾರ್ಹನಾದ ವ್ಯಕ್ತಿಗೆ ಬಳಸುವಂಥದು. ಅಚ್ಯುತರಾಯನು ತಾನೇ ಆಚಾರ್ಯಪುರುಷನೆಂದು ಭಾವಿಸಿಕೊಂಡಿದ್ದನೋ, ಅಥವಾ ಜೀಯರಿಗೆ ಸಮನಾದವನೆಂದು ಬಗೆದಿದ್ದನೋ ತಿಳಿಯದು. ಅಥವಾ ವೀರರಾಘವಾಚಾರ್ಯರು ಸೂಚಿಸಿರುವಂತೆ, ಸ್ಥಾನತ್ತಾರರು ಅಚ್ಯುತರಾಯನ ಶ್ರೀವೈಷ್ಣವಶ್ರದ್ಧೆಯ ಅತಿರೇಕವನ್ನು ನೋಡಿ, ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು, ಕುಹಕವಾಗಿ ಈ ಪದವನ್ನು ಬಳಸಿರಬಹುದು. ಬೇರೆ ಯಾರಿಗೂ ಈ ಪದದ ಬಳಕೆ ಬಂದಿಲ್ಲ. ಅಂತೂ ಈ ಮಹೋತ್ಸವವು ಹೊಸದಾಗಿ ಮೂಡಿಬಂದುದು. ಆಗಮದಲ್ಲಿಯಾಗಲೀ ಗುಡಿಯ ಸಂಪ್ರದಾಯದಲ್ಲಿಯಾಗಲೀ ಪೂಜಾವಿಧಾನದಲ್ಲಾಗಲೀ ಇಂಥ ಉತ್ಸವಕ್ಕೆ ಅವಕಾಶವಿಲ್ಲ. ಆದರೂ ಅರಸನು ಇವನ್ನೆಲ್ಲ ಕಡೆಗಾಣಿಸಿ, ತನ್ನ ಅಧಿಕಾರದ ಬಲದಿಂದ ಈ ಉತ್ಸವವು ನಡೆಯುವಂತೆ ಕಟ್ಟುಮಾಡಿದನು.

ಈ ಉತ್ಸವದ ವೆಚ್ಚಕ್ಕಾಗಿ ಕೊಂಡವೀಡು-ಸೀಮೆಯಲ್ಲಿರುತ್ತಿದ್ದ ಗ್ರಾಮಗಳ ಉತ್ಪತ್ತಿಯಾದ (ಉತ್ತರಾಯಂ) ಮುನ್ನೂರು ರೇಖೆ-ಪೊನ್ನುಗಳನ್ನು (ಎಂದರೆ, ಬಂಗಾರದ ನಾಣ್ಯಗಳನ್ನು) ಗುಡಿಗೆ ಕೊಟ್ಟನು. ಈ ಪೊನ್ನುಗಳನ್ನು ಹೇಗೆ ವೆಚ್ಚಮಾಡಬೇಕೆಂಬ ವಿವರವೂ ಶಾಸನದಲ್ಲಿದೆ. ಉತ್ಸವಕ್ಕೆ ಬೇಕಾಗುವ ದ್ರವ್ಯಗಳು, ಉತ್ಸವದ ಅಂಗವಾಗಿ ನಡೆಯಬೇಕಾದ ವಿಧಿಗಳು, ಉತ್ಸವದಲ್ಲಿ ಸಲ್ಲಿಸಬೇಕಾದ ಹಲವು ಸೇವೆಗಳು, ಎಡೆಗಳು—ಇವೆಲ್ಲವೂ ಬಂದಿವೆ. ಗುಡಿಯಲ್ಲಿ ಲಕ್ಷ್ಮಿಯ ಪ್ರತಿಮೆಯಿರಲಿಲ್ಲವಾಗಿ ಹೊಸದಾಗಿ ಬಂಗಾರದ ಪ್ರತಿಮೆಯನ್ನು ಮಾಡಿಸಲು ಹದಿನಾರು ಪೊನ್ನುಗಳನ್ನು ನಿಗದಿಮಾಡಲಾಗಿದೆ. ಉಳಿದಂತೆ ಬ್ರಹ್ಮನ ಪ್ರತಿಮೆ, ಸೋಮಕುಂಭ, ಸೋಮ-ಪ್ರತೀಕ, ಬ್ರಹ್ಮಮಂಡಲ, ಶೇಷವಿಗ್ರಹ ಮೊದಲಾದುವುಗಳನ್ನು ಮಾಡಿಸಲು

ಪ್ರತ್ಯೇಕವಾಗಿ ವ್ಯವಸ್ಥೆ ಮಾಡಲಾಗಿದೆ. ಶ್ರೀಸೂಕ್ತದ ಕಲ್ಪಮಂತ್ರ, ಲಕ್ಷ್ಮೀಸಹಸ್ರನಾಮ, ಲಕ್ಷ್ಮೀಗಾಯತ್ರಿಗಳ ಪಾರಾಯಣವನ್ನು ಉತ್ಸವದಲ್ಲಿ ಅಡಕಮಾಡಲಾಗಿದೆ. ಹತ್ತು ಮಂದಿ ಸುಮಂಗಲಿಯರಿಗೆ ಸುವರ್ಣದಾನವನ್ನು ನೀಡುವ ವಿವರವೂ ಇದೆ.

ಈ ಸಂದರ್ಭದಲ್ಲಿ ಉತ್ಸವಮೂರ್ತಿಯನ್ನು ಏಳು ಮಂಟಪಗಳಲ್ಲಿ ಕೂರಿಸಿ ಐದು ಬಗೆಯ ಪಡಿನೈವೇದ್ಯಗಳನ್ನು ಒಪ್ಪಿಸುವಂತೆ ಕಟ್ಟುಮಾಡಲಾಗಿದೆ. ಏಳು ಮಂಟಪಗಳನ್ನು ಅಚ್ಯುತರಾಯನೇ ಹೊಸದಾಗಿ ಕಟ್ಟಿಸಿದಂತೆ ತೋರುತ್ತದೆ. ಮಂಟಪಗಳ ಹೆಸರುಗಳು: ಅಚ್ಯುತರಾಯಸ್ವಾಮಿ-ಮಂಟಪ, ವರದಾಜಿ-ಅಮ್ಮನ್-ಮಂಟಪ, ಅಚ್ಯುತರಾಯರ್-ಅಂಗಣ-ಮಂಟಪ, ವರದಾಜಿ-ಅಮ್ಮನ್-ಅಂಗಣ-ಮಂಟಪ, ಕುಮಾರ-ಚಿಕ್ಕ-ವೇಂಕಟಾದ್ರಿ-ಒಡೆಯರ ಅಂಗಣ-ಮಂಟಪ, ನರಸಾನಾಯಕ್ಕರ ಅಂಗಣ-ಮಂಟಪ ಮತ್ತು ಓಬಳಚ್ಚಿ-ಅಮ್ಮನ-ಅಂಗಣ-ಮಂಟಪ. ವರದಾಜಿ-ಅಮ್ಮ ಹೆಂಡತಿ, ಕುಮಾರ-ವೇಂಕಟಾದ್ರಿ ಮಗ, ನರಸಾ-ನಾಯಕ ತಂದೆ, ಓಬಳಚ್ಚಿ ತಾಯಿ —ಹೀಗೆ ಏಳೂ ಮಂಟಪಗಳೂ ಅಚ್ಯುತರಾಯನ ಕುಟುಂಬದ ನೆನಪನ್ನು ಉಳಿಸಲೆಂದೇ ಆದುವು. ಈ ಶಾಸನವನ್ನು ಗುಡಿಯ ಕರಣಿಕನು (**ಕೋಯಿಲ್‌ಕಣಕ್ಕು ತಿರುನಿನ್ರ ಊರುಡೈಯಾನ್**) ಶ್ರೀವೈಷ್ಣವರ ಅಪ್ಪಣೆಯ ಮೇರೆ (**ಇಪ್ಪಡಿಕ್ಕು ಶ್ರೀವೈಷ್ಣವರ್ಗಳ್ ಪಣಿಯಾಲ್**) ಬರೆದನೆಂಬ ಒಕ್ಕಣೆಯೂ ಸ್ವಾರಸ್ಯವಾದುದು. ಇದಾದ ಮೇಲೆ ಮತ್ತೆ "ಶ್ರೀವೈಷ್ಣವರಕ್ಷೆ"ಯೆಂಬ ಸಾಂಪ್ರದಾಯಿಕವಾದ ಮುಕ್ತಾಯವೂ ಇದೆ. ಅರಸನ ಮೇಲೆ ತಿರುಪತಿಯ ಶ್ರೀವೈಷ್ಣವರ ಪ್ರಭಾವ ಎಷ್ಟರ ಮಟ್ಟಿಗೆ ಇದ್ದಿತೆಂಬುದನ್ನು ಊಹಿಸಿಕೊಳ್ಳಬಹುದು.

ರಾಮನಿಗೆ ಪುನರ್ವಸು-ತಿರುನಾಳ್

ಇದೇ ಸಂದರ್ಭದಲ್ಲಿ (ಎಂದರೆ ಎರಡನೆಯ ಬಾರಿ ಬೆಟ್ಟದ ಮೇಲೆ ಬಂದಾಗಲೇ) ಅಚ್ಯುತರಾಯನು ಗುಡಿಯಲ್ಲಿ ಇನ್ನೊಂದು ಉತ್ಸವವನ್ನೂ ವ್ಯವಸ್ಥೆ ಮಾಡಿದನು. ಇದು ಗರ್ಭಗುಡಿಯಲ್ಲಿ ಇರುವ ರಾಮನಿಗೆ (ರಘುನಾಥನಿಗೆ) ನಡೆಯಬೇಕಾದ 'ಪುನರ್ವಸು-ತಿರುನಾಳ್'. ಅದೇ ಕೊಂಡವೀಡು-ಸೀಮೆಗೆ ಸೇರಿದ ಗ್ರಾಮಗಳ ಉತ್ಪತ್ತಿಯಲ್ಲಿ ಅರವತ್ತು ರೇಖೈ-ಪೊನ್ನುಗಳನ್ನು ರಘುನಾಥ (ರಾಮ), ನಾಚ್ಚಿಯಾರ್ (ಸೀತೆ) ಮತ್ತು ಇಳೈಯ-ಪೆರುಮಾಳ್ (ಲಕ್ಷ್ಮಣ)—ಇವರ ಜನ್ಮನಕ್ಷತ್ರೋತ್ಸವವನ್ನು ಪ್ರತಿವರ್ಷವೂ ಹದಿಮೂರು ದಿನಗಳ ಕಾಲ ನಡೆಸಲು ಕೊಟ್ಟ ಶಾಸನವಿದೆ. ಈ ಮೂರು ಮೂರ್ತಿಗಳಿಗೆ ತಿರುಮಂಜನ, ನೈವೇದ್ಯ, ಉತ್ಸವಗಳನ್ನು ನಡೆಸುವ ವಿವರಗಳಿವೆ. ರಾಮನಿಗೆ ಪಂಚಗವ್ಯಾಭಿಷೇಕವನ್ನು ಪುನರ್ವಸುನಕ್ಷತ್ರವಿರುವಂದು ನಡೆಸಬೇಕೆನ್ನುವ ವಿಧಿಯೂ ಇಲ್ಲಿ ಸೇರಿದೆ; ಇದಕ್ಕೆ ಗುಡಿಯ ಉಗ್ರಾಣದಿಂದ ತುಪ್ಪ, ಸಕ್ಕರೆ, ಜೇನುತುಪ್ಪ, ಹಾಲು, ' ಮೊಸರುಗಳನ್ನು ತಲಾ ಒಂದು 'ಉರಿ'ಯಷ್ಟು ಒದಗಿಸಬೇಕೆಂಬ ಕಟ್ಟೂ ಇಲ್ಲಿದೆ.

ತಿರುಪತಿಯ ಗೋವಿಂದರಾಜನಿಗೆ ಉತ್ತೇಜನ

ಹೀಗೆ ತಿರುಪತಿಯ ಶ್ರೀವೈಷ್ಣವಧರ್ಮದವರ ಪಾಂಚರಾತ್ರಪದ್ಧತಿಗಳನ್ನು ಬೆಟ್ಟದ ಮೇಲಿನ ಗುಡಿಯಲ್ಲಿ ಮೂಡಿಸಲು ಅಚ್ಯುತರಾಯನು ಹಲವು ಏರ್ಪಾಡುಗಳನ್ನು ಮಾಡಿದನಾದರೂ ತಿರುಪತಿಯ ಗೋವಿಂದರಾಜನ ಗುಡಿಗೇ ಏನೊಂದು ದಾನಧರ್ಮವನ್ನೂ ನೀಡದಿದ್ದುದು ಒಂದು ಒಗಟು. ಅವನು ಶ್ರೀವೈಷ್ಣವ ಶ್ರದ್ಧಾಳುವೆಂಬುದಂತೂ ನಿರ್ವಿವಾದವಾದುದು. ಆದರೆ ತಿರುಪತಿಯ ಗುಡಿಗಳಿಗೆ ಅನಾದರವನ್ನು ತೋರಿಸಿದುದೇಕೆ? ಆಳ್ವಾರ್-ತೀರ್ಥವನ್ನು ಊರ್ಜಿತಗೊಳಿಸುವಾಗಲೂ ಅದನ್ನು 'ವೇಂಗಡ ದೊಡೆಯನ ದಿವ್ಯತೀರ್ಥ'ವೆಂದು ಬಣ್ಣಿಸಿದನೇ ವಿನಾ 'ಗೋವಿಂದರಾಜನ ತೀರ್ಥ' ವೆಂದು ಕರೆಯಲಿಲ್ಲ. ರಾಮಾನುಜರ ಕಾಲದಿಂದ ಅದಕ್ಕೂ ಗೋವಿಂದರಾಜನಿಗೂ ಬೆಳೆದುಬಂದಿದ್ದ ಸಂಬಂಧ ಅರಸನ ಅರಿವಿನಲ್ಲಿರಲಿಲ್ಲವೆ? ಮೇಲಾಗಿ, ಬೆಟ್ಟದ ಮೇಲೆ ರಾಮಾನುಜ-ಸನ್ನಿಧಿಯ ವಿಚಾರವಾಗಿಯೂ ಇವನು ಏನೊಂದು ಆಸಕ್ತಿಯನ್ನೂ ಆದರವನ್ನೂ ತೋರಿಸಲಿಲ್ಲ. ಇದು ತುಂಬ ಸೋಜಿಗವಾದುದು. ಕೃಷ್ಣದೇವರಾಯನೂ ತಿರುಪತಿಯ ಗುಡಿಯ ಬಗ್ಗೆ, ಬೆಟ್ಟದ ಮೇಲಿನ ರಾಮಾನುಜ-ಸನ್ನಿಧಿಯ ಬಗ್ಗೆ ಯಾವ ಆದರವನ್ನೂ ಕಾಣಿಸಲಿಲ್ಲವಷ್ಟೆ. ಅದೇ ಜಾಡನ್ನು ಅಚ್ಯುತರಾಯನೂ ಹಿಡಿದಂತೆ ತೋರುತ್ತದೆ. ಕೃಷ್ಣದೇವರಾಯನಂತೆ ಅಚ್ಯುತರಾಯನೂ ನಡೆದುಕೊಂಡುದೆಲ್ಲ ವೇಂಗಡ ದೊಡೆಯನಿಗೇ.

ಆದರೆ ಅವನ ಅಧಿಕಾರಿಗಳೂ ಇತರರೂ ತಿರುಪತಿಯ ಗೋವಿಂದರಾಜನಿಗೆ ಬಹುಬಗೆಯ ಸೇವೆಗಳನ್ನು ಸಲ್ಲಿಸಿದರು. ಅಚ್ಯುತರಾಯನು ಬೆಟ್ಟದ ಮೇಲೆ ಲಕ್ಷ್ಮೀದೇವಿ-ಮಹೋತ್ಸವವನ್ನು ಏರ್ಪಡಿಸಿದ ಸುಮಾರು ಒಂದು ವರ್ಷದಲ್ಲೇ (1537ರ ಜನವರಿ ಕಡೆಯ ದಿನ), ಚಂದ್ರಗಿರಿಯ ನೆರೆಯ ಕೃಷ್ಣರಾಯಪಟ್ಟಣದಲ್ಲಿ ವಾಸಮಾಡುತ್ತಿದ್ದ ವರ್ತಕ ಸಾದಯಪಲ್ಲಿ ನಾಮಿ-ಸೆಟ್ಟಿಯು ತಿರುಪತಿಯ ಗೋವಿಂದರಾಜನಿಗೂ ಲಕ್ಷ್ಮೀದೇವಿ-ಮಹೋತ್ಸವವನ್ನು ಏರ್ಪಡಿಸಿ ಶ್ರೀಭಂಡಾರಕ್ಕೆ ತನ್ನ 'ಉಭ್ಯೆ'ವೆಂದು 1,575 ನರ್-ಪಣಗಳನ್ನು ಸಲ್ಲಿಸುತ್ತಾನೆ. ತಿರುಮಲೆ ಮತ್ತು ತಿರುಪತಿಗಳ ರಾಮಾನುಜ-ಕೂಟದ ಕಾರ್ಯಕರ್ತ ಕುಮಾರ-ರಾಮಾನುಜ-ಅಯ್ಯಂಗಾರು ಅಚ್ಯುತರಾಯನ ಧರ್ಮವೆಂದು ತಿರುಪತಿಯ ಪೆರಿಯ-ರಘುನಾಥ ಎಂಬ ಶ್ರೀರಾಮದೇವರಿಗೆ ತೇರನ್ನು ಕಟ್ಟಿಸಿಕೊಡುತ್ತಾನೆ. ಅಚ್ಯುತರಾಯನ ಅಧಿಕಾರಿಯಾಗಿ, ಸೇನಾನಿಯಾಗಿ ಅವನಿಗೆ ಅಚ್ಚುಮೆಚ್ಚಾಗಿದ್ದ ಚಂದ್ರಗಿರಿ-ರಾಮಭಟ್ಟರ್ (1532ರಲ್ಲಿ) ತಿರುಪತಿಯ ಗೋವಿಂದರಾಜನಿಗೆ 'ಪಂಗುಣಿ-ಉತ್ತಿರಂ' ಉತ್ಸವವನ್ನು ನಡೆಸಲು ಗುಡಿಯ ಶ್ರೀಭಂಡಾರಕ್ಕೆ 3500 ಪಣಗಳನ್ನು ಸಲ್ಲಿಸುತ್ತಾನೆ. ಇಂಥ ನಿದರ್ಶನಗಳು ಹಲವಿವೆ. ಹೀಗೆ ತಿರುಪತಿಯ ಗೋವಿಂದರಾಜನಿಗೆ ಕೃಷ್ಣದೇವರಾಯನ ಕಾಲದಲ್ಲೂ ಅಚ್ಯುತರಾಯನ ಕಾಲದಲ್ಲೂ ಅರಸರಲ್ಲದೆ ಇತರರಿಂದ ಸಾಕಷ್ಟು ಪ್ರೋತ್ಸಾಹ ದೊರೆಯಿತು.

ಕೃಷ್ಣದೇವರಾಯನು ತಿರುಪತಿಯ ಗೋವಿಂದರಾಜನಿಗೆ ನಡೆದುಕೊಳ್ಳದೆ ಇದ್ದುದು

ಆಶ್ಚರ್ಯವಲ್ಲ; ಆದರೆ ಅಚ್ಯುತರಾಯನೂ ಹಾಗೇ ಮಾಡಿದ್ದು ಆಶ್ಚರ್ಯ. ಈ ಸಮಸ್ಯೆಯನ್ನು ಬಿಡಿಸಲು ಒಂದು ವಿವರ ನೆರವಾಗುತ್ತದೆ. ಅದು ತಿರುಪತಿಯಲ್ಲಿ ಅಚ್ಯುತರಾಯನು ತನ್ನ ಹೊಸದಾದ ಗುಡಿಯೊಂದನ್ನು ಏರ್ಪಡಿಸಿದುದು. ಅಚ್ಯುತರಾಯನು ಪಟ್ಟಕ್ಕೆ ಬಂದ ತರುಣದಲ್ಲಿ 'ಆಳ್ವಾರ್-ತೀರ್ಥ'ವನ್ನು 'ಪುನಃಪ್ರತಿಷ್ಠೆ' ಮಾಡಿಸಿದ (1531ರಲ್ಲಿ); ಎರಡು ವರ್ಷಗಳ ತರುವಾಯ ರಾಯಸಂ-ರಾಮಚಂದ್ರ-ದೀಕ್ಷಿತನ ಶಾಸನವೊಂದರಲ್ಲಿ ಬೆಟ್ಟದ ಮೇಲೆ 'ಅಚ್ಯುತರಾಯರ್-ಕೊನೇರಿ' ಎಂಬ ಹೆಸರಿನ ಕೊಳವೇರ್ಪಟ್ಟಿದ್ದುದು ತಿಳಿದುಬರುತ್ತದೆ. ತನ್ನ ಹೆಸರಿನಲ್ಲಿ ಒಂದು ಕೊಳವನ್ನು ತೋಡಿಸಿದರೆ, ಅದು ಸ್ವಾಮಿಪುಷ್ಕರಿಣಿ(ತಿರು-ಕ್ಕೋನೇರಿ)ಯನ್ನು ಜನರ ಗೌರವದಲ್ಲಿ ಹಿಂದಕ್ಕೆ ತಳ್ಳುವುದೆಂದು ಭಾವಿಸಿದ್ದನೆಂದು ತೋರುತ್ತದೆ. ರಾಯಸಂ-ರಾಮಚಂದ್ರ-ದೀಕ್ಷಿತನು ಅಚ್ಯುತರಾಯನ ಅಧಿಕಾರಿಯಾಗಿದ್ದು ಅದರ ದಡದ ಮೇಲೆ ಮಂಟಪವನ್ನು ಕಟ್ಟಿಸಿದನು. ಮುಂದೆ ನಾಲ್ಕೈದು ವರ್ಷಗಳಲ್ಲೇ ಆರು ಮಂಟಪಗಳಾದುವು; ಕೆಲವು ಅಧಿಕಾರಿಗಳು ಒಟ್ಟು 1500 ಪಣಗಳಷ್ಟು ಧನವನ್ನು ಈ ಕೋನೇರಿಯ ಹಿರಿಮೆಗೆ ಸುರಿದರು.

ಬೆಟ್ಟದ ಮೇಲೆ ಈ ಕೋನೇರಿ ಕಾಣಿಸಿಕೊಂಡ ಮೇಲೆ, ತಿರುಪತಿಯಲ್ಲಿ ಅಚ್ಯುತರಾಯನು ಗೋವಿಂದರಾಜನಿಗೆ ಪೈಪೋಟಿಯಾಗಿ 'ಅಚ್ಯುತ-ಪೆರುಮಾಳ್' ಸನ್ನಿಧಿಯನ್ನು ಏರ್ಪಡಿಸಿದನು. ತಿರುಪತಿಯ ಒಂದು ಹರವಾದ ('ತಿರುವೇಂಗಡ ಮುಡೈಯಾನ್ ತಿರುವಿಡೈಯಾಟ್ಟಮಾನ') ಕೋಟ್ಟೂರು (ಈಗಿನ ಪೇಟೆ-ಗುಡಿ) ಎಂಬ ಹಳ್ಳಿಯಲ್ಲಿ ತಿರುಮಲೆಯ ಗುಡಿಗೆ ಸೇರಿದ್ದ ಭೂಮಿಯನ್ನು ಅಚ್ಯುತರಾಯನು 2400 ನರ್-ಪಣಗಳನ್ನು ಸಲ್ಲಿಸಿ ಪಡೆದುಕೊಂಡು ಅಲ್ಲಿ 'ಅಚ್ಯುತ-ಪೆರುಮಾಳ್ ತಿರುಕ್ಕೋಯಿಲ'ನ್ನು ಕಟ್ಟಿಸಿ, ಅಲ್ಲಿ ನಿತ್ಯಾರಾಧನೆ ನಡೆಯುವ ಸಲುವಾಗಿ ಪರಿತ್ತಿಪ್ಪತ್ತೂರು ಎಂಬ ಹಳ್ಳಿಯನ್ನು ಗುಡಿಗೆ ಬಿಟ್ಟುಕೊಟ್ಟನೆಂಬ ಶಾಸನವಿದೆ. ಕ್ರಿಸ್ತಾಬ್ದ 1539ರ ಜನವರಿ ಹದಿನೈದನೆಯ ದಿನದಲ್ಲಿ ಹೊರಟದ್ದು ಇದು. ಗುಡಿಯ ಸುತ್ತ ಹೊಸದಾಗಿ ಊರನ್ನೂ ಕಟ್ಟಿಸಿ ಅದನ್ನು 'ಅಚ್ಯುತರಾಯಪುರ' (ಅಚ್ಯುತ-ಪೇಟೆ) ಎಂದು ಕರೆದನು. ಇದರಿಂದಾಗಿ ತಿರುಪತಿಯ ಶ್ರೀವೈಷ್ಣವರಿಗೆ ಅಸಮಾಧಾನವಾಗಿ ಅವರು ಅಚ್ಯುತರಾಯನನ್ನು ವಿರೋಧಿಸಿದರೆಂದು ಊಹಿಸಿಕೊಳ್ಳಬಹುದು. ಹೀಗಾಗಿ ಅವನು ಗೋವಿಂದರಾಜನನ್ನು ಉಪೇಕ್ಷೆಮಾಡಿದ. ಶ್ರೀವೈಷ್ಣವರು ಅಚ್ಯುತ-ಪೆರುಮಾಳನ್ನು ಉಪೇಕ್ಷೆಮಾಡಿದರು. ಅಚ್ಯುತ-ಪೆರುಮಾಳ ಗುಡಿ ಮತ್ತು ಅಚ್ಯುತಪೇಟೆ—ಎರಡೂ ಕಾಲಕ್ರಮದಲ್ಲಿ ಪಾಳುಬಿದ್ದುವು; ಬೆಟ್ಟದ ಮೇಲೆ 'ಅಚ್ಯುತರಾಯರ ಕೊನೇರಿ'ಯೂ ಇದೇ ಗತಿಯನ್ನು ಕಂಡಿತು. ಅಹಂಕಾರದಿಂದ ಒದಗಿದ ಉತ್ಸಾಹ ಊರ್ಜಿತವಾಗಲಾರದು.

ದೇವದಾಸಿಯರ ಸಂಪರ್ಕ

ಅಚ್ಯುತರಾಯನು ಇಲ್ಲಿ ಕೈಗೊಂಡ ಇನ್ನೊಂದು ಕೆಲಸವೆಂದರೆ ಬೆಟ್ಟದ ಗುಡಿಗೆ

ದೇವದಾಸಿಯರನ್ನು ಗಂಟುಹಾಕಿದುದು. ದೊಡ್ಡದೊಡ್ಡ ಗುಡಿಗಳಲ್ಲಿ ಕೆಲವೊಂದು ಉತ್ಸವಸಂದರ್ಭದಲ್ಲಿ ದೇವರೆದುರು ಸಂಗೀತ, ನೃತ್ಯಗಳು ನಡೆಯುವುದು ವಾಡಿಕೆಯಾಗಿದ್ದಿತು; ಇದಕ್ಕಾಗಿ ದೇವದಾಸಿಯರು ಗುಡಿಯ ಸಿಬ್ಬಂದಿಯಲ್ಲಿ ಇರುತ್ತಿದ್ದುದು ಸಹಜವೇ. ಆಗಮಗಳಲ್ಲಿಯೂ ಈ ಪದ್ಧತಿಗೆ ಸಮ್ಮತಿಯಿದೆಯೆನ್ನಿ. ದೇವರ ಉತ್ಸವವು ಊರ ಬೀದಿಗಳಲ್ಲಿ ಬರುವಾಗ ಮುಖ್ಯವಾದ ಸ್ಥಳಗಳಲ್ಲಿ ಹೆಂಗಳೆಯರಿಂದ ನರ್ತನ ಸೇವೆ, ಸಂಗೀತಸೇವೆಗಳು ನಡೆಯಬೇಕೆಂದೂ, ಉತ್ಸವ ಮುಗಿದು ಉತ್ಸವ ಮೂರ್ತಿಯು ಗುಡಿಯನ್ನು ಪ್ರವೇಶಿಸುವ ಮೊದಲು ತಲೆಬಾಗಿಲಲ್ಲಿ 'ಕುಂಭ-ಆರತಿ' ನಡೆಯಬೇಕೆಂದೂ ವಿಧಿ. 'ಕುಂಭ-ಆರತಿ'ಯನ್ನು ಹಿಡಿದು ಈ ಹೆಂಗಳೆಯರು ಉತ್ಸವವನ್ನು ಪ್ರದಕ್ಷಿಣೆ ಮಾಡಿ ನರ್ತನಸೇವೆ ನಡೆಸಿದ ಮೇಲೆ ಅರ್ಚಕನು 'ಕುಂಭ-ಆರತಿ'ಯನ್ನು ದೇವರೆದುರು ಬೆಳಗಿ, ದೃಷ್ಟಿದೋಷವನ್ನು ತೆಗೆಯುತ್ತಾನೆ.

ಈ ಸೇವೆಗಳಿಗಾಗಿ ಗೊತ್ತಾದ ಹೆಂಗಳೆಯರು ಗುಡಿಯ ಅಧಿಕಾರಿಗಳ, ಊರ ಹಿರಿಯರ ಬಳಕೆಗಾಗಿಯೂ ಒದಗಿ ಪದ್ಧತಿಯ ಮೂಲೋದ್ದೇಶವೇ ಮರೆಯಾಯಿತು. ಗುಡಿಯ ವ್ಯವಸ್ಥೆಯಲ್ಲಿ ದೇವದಾಸಿಪದ್ಧತಿಯು ಕಳಂಕವಾಯಿತು. ನಮ್ಮ ದೇಶದ ಹಲವು ಪ್ರಸಿದ್ಧದೇವಾಲಯಗಳಲ್ಲಿ ಈ ಪದ್ಧತಿಯು ತುಂಬ ಹಿಂದೇ ಮೊದಲಾಗಿ ಮೊನ್ನೆಮೊನ್ನೆಯವರೆಗೆ ಉಳಿದುಕೊಂಡು ಬಂದ ನಿದರ್ಶನಗಳಿವೆ; ಈ ಪದ್ಧತಿಯಿಂದ ಒದಗಿದ ಹಾವಳಿಯೂ ಪ್ರಸಿದ್ಧವಾದದ್ದೇ. ಆದರೆ ವೇಂಗಡದೊಡೆಯನ ಗುಡಿಯಲ್ಲಿ ಈ ಪದ್ಧತಿ ಮೊದಲಾದುದು ಅಚ್ಯುತರಾಯನ ಕಾಲದಲ್ಲೇ ಎನ್ನಬಹುದು; ಮತ್ತು ಇದು ಅವನ ಕಾಲಕ್ಕೇ ಮುಗಿದೂ ಹೋಯಿತು. ಈ ಪದ್ಧತಿಯ ಮೇಲಾಟವಿದ್ದುದು ಸುಮಾರು ಐವತ್ತು ವರ್ಷಗಳ ಕಾಲವಷ್ಟೆ. ಆದರೂ ಈ ಅವಧಿಯಲ್ಲಿ ದೇವರ ಸೇವೆಗೆಂದು ಗೊತ್ತಾದ ಹೆಂಗಳೆಯರು ('ತಿರುವೀಧಿಸಾನಿ'ಯರು, 'ಎಂಪೆರುಮಾನಡಿಯಾರ'ರು) ಯಾವ ಅನುಚಿತವಾದ ನಡವಳಿಕೆಯಿಂದಲೂ ಗುಡಿಯ ಘನತೆಗೆ ಕುಂದು ತಂದ ನಿದರ್ಶನವಿಲ್ಲ. ಮಾತ್ರವಲ್ಲ, ದೇವರಿಗೆ ಮತ್ತು ಗುಡಿಗೆ ತಮ್ಮ ಕೈಲಾದ ದಾನಧರ್ಮಗಳನ್ನು ನಡೆಸಿರುವ ಪ್ರಸಂಗಗಳು ಹಲವಿವೆ.

ಅಚ್ಯುತರಾಯನು ರಸಿಕ. ಅಚ್ಯುತರಾಯನೇ ಏನು, ರಾಯರ ಕಾಲದ ರಸಿಕತೆ ಹೆಸರಾದದ್ದು ತಾನೆ? ಕೃಷ್ಣದೇವರಾಯನ ಕಾಲದಲ್ಲಿ ಅರಮನೆಗೆ ಸೇರಿದಂತೆ ನಾಟ್ಯಶಾಲೆಯಿದ್ದಿತು. ಕಾಲಕಾಲಕ್ಕೆ ಅರಸನು ವಿದ್ವಾಂಸರನ್ನೂ ರಸಿಕರನ್ನೂ ಕರೆಸಿಕೊಂಡು ಸಭೆಯನ್ನು ನಡೆಸುತ್ತಿದ್ದ; ಅವನಿಗೆ 'ವಿದ್ವತ್ಸಭಾರಾಯ'ನೆಂಬ ಬಿರುದೂ ಇದ್ದಿತು. ಇಂಥ ಸಭೆಗಳಲ್ಲಿ ನಾಟ್ಯವಾಡಿ ಅವನ ಮನಸ್ಸನ್ನು ಸಂತೋಷಪಡಿಸುತ್ತಿದ್ದವರ ಗೋಷ್ಠಿಯೂ ಇದ್ದಿತು. ಈ ಗೋಷ್ಠಿಯ ನಾಯಕ 'ವಿದ್ವತ್ಸಭಾರಾಯ-ರಂಜಕ' ಶ್ರೀರಂಗರಾಜ ಎಂಬುವನು; ಇವನಿಗೆ 'ರಂಜಕಂ ಶ್ರೀರಂಗರಾಜ'ನೆಂದೇ ಅಡ್ಡ ಹೆಸರು. ಇವನ ತಂದೆ ತಿರುಮಲೆನಾಥನು ಭರತನಾಟ್ಯದಲ್ಲಿ ಪ್ರವೀಣನಾಗಿದ್ದವನು. ಶ್ರೀರಂಗರಾಜನೂ ಅವನ ಮಗಳೂ ಮೊಮ್ಮಗಳೂ ಭರತನಾಟ್ಯದಲ್ಲಿ ಪ್ರಸಿದ್ಧರಾದವರು. ಕೃಷ್ಣದೇವರಾಯನ ಆಸ್ಥಾನದಲ್ಲಿ ಶ್ರೀರಂಗರಾಜನೂ ಅವನ ಮಗಳು ರಂಜಕಂ-ಕುಪ್ಪಾಯಿಯೂ

(ಕುಪ್ಪಾಯಿನಿ ಅಥವಾ ಕುಪ್ಪಾಸಾನಿ) ಸಭಾರಂಜಕರಾಗಿದ್ದರು. ಕುಪ್ಪಾಯಿಯ ಮಗಳು ಮುದ್ದುಕುಪ್ಪಾಯಿ ಅಚ್ಯುತರಾಯನ ಆಸ್ಥಾನದಲ್ಲಿದ್ದವಳು, ತುಂಬ ಹೆಸರಾದವಳು. ಇವಳನ್ನು ಅಚ್ಯುತರಾಯನು ವೇಂಗಡದೊಡೆಯನ ಸೇವೆಗೆಂದು 1531ರಲ್ಲಿ ತಿರುಪತಿಗೆ ಕಳುಹಿಸಿದ ಶಾಸನವಿದೆ. ಬೆಟ್ಟದ ಮೇಲಿನ ಗುಡಿಯ ಸಿಬ್ಬಂದಿಯಲ್ಲಿ ತಿರುವೀಧಿಸಾನಿಯರು ಸೇರಿಬರತೊಡಗಿದುದು ಹೀಗೆ.

ಅದಕ್ಕೆ ಮೊದಲು ತಿರುವೀಧಿಸಾನಿಯರ ಸಂಪರ್ಕ ಬೆಟ್ಟದ ಗುಡಿಗಿರಲಿಲ್ಲ ವೆಂದಲ್ಲ. ಕಂದಾಡೈ-ರಾಮಾನುಜ-ಅಯ್ಯನು ತನ್ನನ್ನು ಹೊಗಳುವ ಹಾಡುಗಳನ್ನು (ಉಲಾ) ಹಾಡಲೆಂದೇ ಇಂಥ ಹೆಂಗಸರನ್ನು ನೇಮಿಸಿಕೊಂಡುದನ್ನು ಹಿಂದೆಯೇ ನೋಡಿದ್ದೇವೆ. ಸಾಳುವ-ನರಸಿಂಹನ ಕಾಲದಿಂದಲೂ ಗುಡಿಗೆ ಇವರ ನಂಟು ಅಷ್ಟಿಷ್ಟು ಇರುತ್ತಿದ್ದಿತು. ತಿರುಮಲೆಯಲ್ಲಿ ಪಂಕಯಚ್ಚೆಲ್ಲಿ-ತಿರುನಂದವನವನ್ನು ನೋಡಿಕೊಳ್ಳುತ್ತಿದ್ದ ಕೋಯಿಲ್-ಕೆಲ್ವಿ ಎಂಪರುಮಾನಾರ್-ಜೀಯರ್ ಕ್ರಿಸ್ತಾಬ್ದ 1446ರಲ್ಲಿ ಗುಡಿಗೆ ಒಂದು ಸಾವಿರ ನರ್-ಪಣಗಳನ್ನು ಕೊಟ್ಟು ಕೆಲವೊಂದು ಉತ್ಸವದ ವ್ಯವಸ್ಥೆಮಾಡಿ ದಾನಿಯ ಪ್ರಸಾದ-ಭಾಗದಲ್ಲಿ ಮೂರು "ಉಳಕ್ಕು"ಗಳಷ್ಟು "ಎಂಪೆರುಮಾನಡಿಯಾರ"ರಿಗೆ (ಎಂದರೆ, ಗುಡಿಯ ದೇವದಾಸಿಯರಿಗೆ) ಸಲ್ಲಿಸಬೇಕೆಂದು ಕಟ್ಟುಮಾಡಿದ ಶಾಸನವಿದೆ. ಈ ಜೀಯರಿಗೂ ಹೆಂಗಳೆಯರಿಗೂ ಏನು ನಂಟು? ಎಂದರೆ—ಗುಡಿಯಲ್ಲಿ 'ಎಂಪೆರುಮಾನಡಿಯಾರಾ'ಗಿ ಸೇವೆ ಸಲ್ಲಿಸಲು ಹೆಂಗಸು ಯಾರಾದರೊಬ್ಬ ಆಚಾರ್ಯ ಪುರುಷನ ಅಥವಾ ಜೀಯರ ಶಿಷ್ಯತ್ವವನ್ನು ಕೈಗೊಂಡು ಅವನಿಂದ ಚಕ್ರಾಂಕನ ಮಾಡಿಸಿಕೊಂಡು ದೇವರಿಗೆ ತನ್ನ ಮೈಯನ್ನೂ ಮನಸ್ಸನ್ನೂ ಒಪ್ಪಿಸಿಕೊಳ್ಳುವುದು ಪದ್ಧತಿಯಾಗಿದ್ದಿತು. ಪ್ರತಿಯೊಬ್ಬ "ಎಂಪೆರುಮಾನಡಿಯಾರ"ಳಿಗೂ ಒಬ್ಬ ಆಚಾರ್ಯ ನಿರುವುದು ಅವಶ್ಯವಾಗಿದ್ದಿತು. ಉತ್ಸವಗಳನ್ನು ವ್ಯವಸ್ಥೆಮಾಡಿದಮೇಲೆ ಇಂಥ ಹೆಂಗಳೆಯರ ಅಗತ್ಯ ಕಂಡುಬಂದಿತು. ಆದರೆ ಅವರ ಸೇವೆ ಸಲ್ಲುತ್ತಿದ್ದುದು ಉತ್ಸವ ಸಂದರ್ಭಗಳಲ್ಲಿ , ಬೀದಿಗಳಲ್ಲಿ ; ಗುಡಿಗಳ ಒಳಗಲ್ಲ. ಅಂತೂ, ಕ್ರಿಸ್ತಾಬ್ದ 1446ರಷ್ಟು ಹಿಂದೆಯೇ ಗುಡಿಗೂ "ಎಂಪೆರುಮಾನಡಿಯಾರ"ರಿಗೂ ಸಂಬಂಧವಿದ್ದಿತು; ಆದರೆ ತೀರ ದೂರದ ಸಂಬಂಧ.

ತಿರುಪತಿಯ ತಿರುವೀಧಿಸಾನಿಯರು

ಬಹುಶಃ ತಿರುಪತಿಯಲ್ಲಿ ಈ ಹೆಂಗಳೆಯರು ಗುಡಿಯ ಸಿಬ್ಬಂದಿಯಲ್ಲಿ ಸೇರಿದ್ದಿರಬಹುದು. ಕ್ರಿಸ್ತಾಬ್ದ 1457ರ ಶಾಸನವೊಂದು ಶವರಿಪ್ಪೆರುಮಾಳ್ ಎಂಬುವನ ಮಗಳು ವೆಂಕಟವಲ್ಲಿ "ನರಸಿಂಹದೇವರ ಗುಡಿಗೆ ಸೇರಿದ ದೇವದಾಸಿಯರಲ್ಲಿ ಒಬ್ಬಳು. **(ಶ್ರೀನರಸಿಂಹದೇವರ್ ಕೋಯಿಲಿಲ್ ಎಂಪೆರುಮಾನ್ ಅಡಿಯಾರಿಲ್ ಚವರಿಪ್ಪೆರು ಮಾಹಳ್ ಮಗಳ್)**" ಎಂಬ ವರ್ಣನೆಯಿದೆ. ಇದು ತಿರುಪತಿಯ ಗುಡಿಯಾಗಿರಬೇಕು; ಬೆಟ್ಟದ ಮೇಲೆ ಯಾವ "ನರಸಿಂಹ ದೇವರ್ ಕೋಯಿಲೂ" ಇರಲಿಲ್ಲ , ಈಗಲೂ

ಇಲ್ಲ. ಈಕೆ ಪ್ರತಿದಿನವೂ ವೇಂಗಡದೊಡೆಯನಿಗೆ ತನ್ನ ಹೆಸರಿನಲ್ಲಿ ತಿರುಪ್ಪೋನಕ ವೊಂದನ್ನು ಸಮರ್ಪಿಸಲೆಂದು ಗುಡಿಗೆ ಒಂದು ಸಾವಿರ ನರ್‌ಪಣಗಳನ್ನು ದಾನ ಮಾಡಿದ್ದಾಳೆ. ಬೆಟ್ಟದ ಗುಡಿಯ ಮೊದಲ ಗೋಪುರದ ದಕ್ಷಿಣಕ್ಕೆ ಹೊರಗೋಡೆಯ ಮೇಲಿರುವ ಒಂದು ಶಾಸನ (1486ರದ್ದು) "ತಿರುವೀಧಿಸಾನಿ ಆನೈಮಾದಿ ಮಗಳ್ ವಲಂದಿ"ಯೆಂಬುವಳು ಗುಡಿಗೆ ಮಾಡಿದ ದಾನವೊಂದನ್ನು ತಿಳಿಸುತ್ತದೆ. ಮುನ್ನೂರು ಪಣಗಳನ್ನು ಗುಡಿಯ ಶ್ರೀಭಂಡಾರಕ್ಕೆ ನೀಡಿ ಮಾರ್ಗಳಿತಿಂಗಳಲ್ಲಿ (ಧನುರ್ಮಾಸದಲ್ಲಿ) ವೇಂಗಡದೊಡೆಯನಿಗೆ ಮೂವತ್ತು ದಿನವೂ ಒಂದೊಂದು ತಿರುಕ್ಕಣ್ಣಾಮಡೈ (ಮನೋಹರ)ವನ್ನು ಸಮರ್ಪಿಸುವ ಏರ್ಪಾಟು ಮಾಡಿದ್ದಾಳೆ ಈಕೆ. ಶಾಸನವು ಈಕೆ ಯಾವ ಗುಡಿಯ "ತಿರುವೀಧಿಸಾನಿ"ಯೆಂಬುದನ್ನು ಸ್ಪಷ್ಟಪಡಿಸುವುದಿಲ್ಲ. ವೇಂಗಡ ದೊಡೆಯನ ಗುಡಿಯವಳೇ ಆಗಿದ್ದರೆ ಶಾಸನವು ಅದನ್ನು ನಿರ್ದೇಶಿಸುತ್ತಿದ್ದಿತು.

ಕೃಷ್ಣದೇವರಾಯನ ಆಸ್ಥಾನದಲ್ಲಿ ಭರತನಾಟ್ಯಪ್ರವೀಣನಾಗಿದ್ದ ರಂಜಕಂ ಶ್ರೀರಂಗ ರಾಜನ ವಿಚಾರ ಆಗಲೇ ಬಂದಿತಷ್ಟೆ. ಇವನು ಕ್ರಿಸ್ತಾಬ್ದ 1514ರಲ್ಲಿ ಬರೆಯಿಸಿದ ಶಾಸನವೊಂದು "ರಂಜಕಂ ತಿರುಮಲನಾಥುನಿ ಕೊಡುಕು ಶ್ರೀರಂಗರಾಜುಲು ಶ್ರೀ ವೇಂಕಟನಾಥ ದೇವರಿಗೆ ನಯಿವೇದ್ಯಮುನಕು ಸಮರ್ಪಿಂಚಿನ ಎರಲಪೂಂಡಿ ಗ್ರಾಮಂ 1 ಆರಗಿಂಪು ವೆಂಡಿ ಪಳ್ಳಿ 1 ತೂಕಂ 545" ಎಂದು ಒಕ್ಕಣಿಸುತ್ತದೆ. ಶಾಸನದ ಭಾಷೆ ತೆಲುಗಾದರೂ "ಶ್ರೀವೇಂಕಟನಾಥ ದೇವರಿಗೆ' ಎಂದು ಕನ್ನಡರೂಪವನ್ನೇ ಬಳಸಿರು ವುದು ಸ್ವಾರಸ್ಯವಾಗಿದೆ. ಎರಲಪೂಡಿಗ್ರಾಮವು ಮಾಡನಲ್ಲೂರು ಸೀಮೆಯಲ್ಲಿದ್ದುದು; ಬಹುಶಃ ಕೃಷ್ಣದೇವರಾಯನು ಇದನ್ನು ಅವನಿಗೆ ಬಹುಮಾನವಾಗಿ ಕೊಟ್ಟಿದ್ದಿರಬಹುದು. ಅದನ್ನು ಈಗ ವೇಂಗಡದೊಡೆಯನಿಗೆ ನಿತ್ಯನೈವೇದ್ಯಕ್ಕೆ (ತಿರುಪ್ಪೋನಕಂ) ಬಿಟ್ಟು ಕೊಟ್ಟಿದ್ದಾನೆ. 545 ತೂಗುವ ಬೆಳ್ಳಿತಟ್ಟೆಯನ್ನೂ ದೇವರಿಗೆ ಸಮರ್ಪಿಸಿದ್ದಾನೆ. ಈತನ ಮಗಳು "ವಿದ್ವತ್ಸಭಾರಾಯ ರಂಜಕಂ ಕುಪ್ಪಸಾನಿ" ಅಥವಾ ಕುಪ್ಪಾಯಿ(ಕುಪ್ಪಾಯನಿ)ಯ ಹೆಸರಿನಲ್ಲಿರುವ ದಾನಶಾಸನ ಇದಕ್ಕೂ ಮೊದಲಿನದು; 1512ರದ್ದು. ಈಕೆ ಗುಡಿಯ ಭಂಡಾರಕ್ಕೆ ಒಂದು ಸಾವಿರ ನರ್‌ಪಣಗಳನ್ನು ಸಲ್ಲಿಸಿ ಒಂದು ಸಂಧಿ-ನೈವೇದ್ಯಕ್ಕೆ ಏರ್ಪಾಟು ಮಾಡಿದ್ದಾಳೆ. ಈಕೆಯ ಮಗಳು ತಿರುಮಲಮ್ಮ ಐದು ವರ್ಷಗಳನಂತರ, ಎಂದರೆ ತನ್ನ ಅಜ್ಜ ಶ್ರೀರಂಗರಾಜನ ಧರ್ಮ ನಡೆದ ಮರುವರ್ಷ, ಗುಡಿಗೆ ಮೂರು ಸಾವಿರ ಪಣಗಳನ್ನು ನೀಡಿದಳು. ಈಕೆಯು ಕೃಷ್ಣದೇವರಾಯನೊಂದಿಗೆ ಅವನ ಪರಿವಾರದಲ್ಲಿ ಸೇರಿಕೊಂಡು ಒಮ್ಮೆ ಬೆಟ್ಟದ ಮೇಲೆ ಬಂದಿದ್ದಳೆಂದೂ, ಆದರೆ ಅದಕ್ಕೆ ಮೊದಲೇ, ಎಂದರೆ ಕೃಷ್ಣದೇವರಾಯನು ಬೆಟ್ಟದ ಗುಡಿಯನ್ನು ನೋಡುವ ಮೊದಲೇ, ಈಕೆಯು ಇಲ್ಲಿಗೆ ಯಾತ್ರಿಕಳಂತೆ ಬಂದಿದ್ದಳೆಂದೂ ತಿಳಿದುಬರುತ್ತದೆ.

ಈಕೆಯ ಮಗಳು ಮುದ್ದು-ಕುಪ್ಪಾಯಿ ಅಚ್ಯುತರಾಯನ ಆಸ್ಥಾನವನ್ನು ತನ್ನ ಚೆಲುವಿನಿಂದಲೂ ಬೆಡಗಿನಿಂದಲೂ ಬೆಳಗಿದವಳು. ಅವಳ ಕಲಾನೈಪುಣ್ಯ ನಾಡಿನಲ್ಲೆಲ್ಲ ಹೆಸರಾಗಿದ್ದಿತು. ಇಂಥವಳನ್ನು ವೇಂಗಡದೊಡೆಯನ ಸೇವೆಗೆಂದು ಕಳುಹಿಸಿಕೊಟ್ಟರೆ ಅದೇ ಒಂದು ತನ್ನ ಸೇವೆಯಾದೀತೆಂದು ಅಚ್ಯುತರಾಯನು ಬಗೆದಂತೆ ತೋರುತ್ತದೆ.



ಅಚ್ಯುತರಾಯ — ಪತ್ನಿಯರೊಂದಿಗೆ

ಕ್ರಿಸ್ತಾಬ್ದ 1531ರ ಜೂನ್ ತಿಂಗಳಿನಲ್ಲಿ ಆರನೆಯ ದಿನ ಬೆಟ್ಟದ ಗುಡಿಯ ಸ್ಥಾನತ್ತಾರರು ಈಕೆಯ ಹೆಸರಿನಲ್ಲಿ ಶಿಲಾಶಾಸನವೊಂದನ್ನು ಹೊರಡಿಸಿದ್ದಾರೆ. ಅದರಲ್ಲಿ ಇರುವ ಒಕ್ಕಣೆ—"ವಿದ್ವತ್ಸಭಾರಾಯ ರಂಜಕಂ ಕುಪ್ಪಸಾನಿಯ ಮಗಳು ಮುದ್ದುಕುಪ್ಪಾಯಿಯು ತಿರುವೇಂಗಡೊಡೆಯನ ಸನ್ನಿಧಿಯಲ್ಲಿ ಊಳಿಗವನ್ನು ಮಾಡಿಕೊಂಡು ಇರತಕ್ಕದೆಂದೂ **(ತಿರುವೇಂಗಡ ಮುಡೈಯಾನ್ ಸನ್ನಿಧಿಯಿಲೆ ಊಡಿಯಂ ಪಣ್ಣಿಕ್ಕೊಂಡು ಇರುಕ್ಕುಂ ಪಡಿಕ್ಕುಂ)** ತಿರುಪತಿಯಲ್ಲಿ ಗೋವಿಂದರಾಜನ ಗುಡಿಯಲ್ಲಿ ದಿನಕ್ಕೊಂದು ತಳಿಗೆ (ಹರಿವಾಣ) ಪ್ರಸಾದವನ್ನು ಈಕೆಗೆ ಶ್ರೀಭಂಡಾರದಿಂದ ಒದಗಿಸತಕ್ಕುದೆಂದೂ ರಾಯರು ಕಟ್ಟಳೆ ಮಾಡಿದರು **(ಕಟ್ಟಳೈ ಪಣ್ಣಿ....ಇರಾಯರ್ ಇರಾಯಸಪ್ಪಡಿಕ್ಕು ತಿರುಪ್ಪತಿಯಿಲೆ ಗೋವಿಂದರಾಜನ್ ಕೋಯಿಲಿಲ್ ನಾಳ್‌ವಳಿ ಒರು ತಳಿಗೈ ಪ್ರಸಾದಂ ಶ್ರೀಭಂಡಾರ ತ್ತಿಲೇ....)**" ಎಂದು.

ಆಕೆಯು ವಾಸಮಾಡಬೇಕಾಗಿದ್ದುದು ತಿರುಪತಿ ಊರಿನಲ್ಲಿ ; ಊಳಿಗವು ಬೆಟ್ಟದ ಮೇಲಿನ ದೇವರಿಗೆ. ಎಂದರೆ ಉತ್ಸವಸಂದರ್ಭಗಳಲ್ಲಿ ಆಕೆ ಬೆಟ್ಟದ ಮೇಲೆ ಹೋಗುತ್ತಿದ್ದಳೆಂದರ್ಥವೆ? ಅಥವಾ ಆಕೆಯ ಸೇವೆಯೂ ತಿರುಪತಿಯ ಗೋವಿಂದ ರಾಜನ ಗುಡಿಯಲ್ಲೇ ಎಂಬ ಕಟ್ಟಳೆಯೋ? ಶಾಸನದ ಮಾತೇನೋ 'ವೇಂಗಡ ದೊಡೆಯನ ಸನ್ನಿಧಿಯಲ್ಲಿ' ಎಂದಿದೆ. ಆದರೆ ಅಚ್ಯುತರಾಯನು ಬೆಟ್ಟದ ಕೆಳಗಿರುವ ಕಪಿಲತೀರ್ಥವನ್ನು 'ತಿರುವೇಂಗಡದೊಡೆಯನ ದಿವ್ಯತೀರ್ಥ'ವೆಂದೇ ಕರೆಯಲಿಲ್ಲವೆ? ದಿಟವಾಗಿ ಅದು ಗೋವಿಂದರಾಜನ ತೀರ್ಥ. ಹಾಗೆಯೇ ಗೋವಿಂದರಾಜನ ಸನ್ನಿಧಿಯನ್ನೂ ವೇಂಗಡದೊಡೆಯನ ಸನ್ನಿಧಿಯೆಂದೇ ಬಗೆದಿದ್ದರೆ, ಹಾಗೆ ಒಕ್ಕಣಿಸಿದ್ದರೆ ಆಶ್ಚರ್ಯವಲ್ಲ. ಇಲ್ಲವಾದರೆ ಅವಳ ಊಳಿಗಕ್ಕೆ ಸಂಭಾವನೆಯನ್ನು (ತಳಿಗೆ-ಪ್ರಸಾದವನ್ನು) ಗೋವಿಂದರಾಜನ ಗುಡಿಯಿಂದ ಕೊಡಬೇಕಾದ ಅಗತ್ಯವೇನು? ಔಚಿತ್ಯವೇನು? ಈ ಶಾಸನವಿರುವುದೂ ತಿರುಪತಿಯ ಗೋವಿಂದರಾಜನ ಗುಡಿಯಲ್ಲಿ ಪಾರ್ಥಸಾರಥಿ ಸ್ವಾಮಿ-ಸನ್ನಿಧಿಯಲ್ಲೇ. ಈ ಗುಡಿಯ ಆಡಳಿತವೂ ಬೆಟ್ಟದ ಗುಡಿಯ ಸ್ಥಾನತ್ತಾರರ ವಶದಲ್ಲಿಯೇ ಇದ್ದುದರಿಂದ ಅವರಿಗೇ ರಾಯಸ.

ತಿರುಪತಿಯಲ್ಲಿರುತ್ತಿದ್ದು ಗೋವಿಂದರಾಜನಿಗೂ ವೇಂಗಡದೊಡೆಯನಿಗೂ ಹಲವಾರು ಸೇವೆಗಳನ್ನು ಸಲ್ಲಿಸಿದ ಹಲವರು ತಿರುವೀಧಿಸಾನಿಯರು ನಮ್ಮ ಗಮನಕ್ಕೆ ಬರುತ್ತಾರೆ. ಇವರು ಅಚ್ಯುತರಾಯನ ಮತ್ತು ಮುಂದೆ ಅರಸನಾದ ಸದಾಶಿವರಾಯನ ಕಾಲದಲ್ಲಿ ಸುಮಾರಾಗಿ ಪ್ರಬಲರೇ ಆಗಿದ್ದಂತೆ ತೋರುತ್ತದೆ. ಶಾಸನಗಳಲ್ಲಿ ಅವರ ಕೊಡುಗೆಗಳೂ ಕೈಂಕರ್ಯಗಳೂ ಕಾಣಬರುತ್ತವೆ. ಉಳಿದಂತೆ ಅವರ ಪ್ರಭಾವ ಶಾಸನದ ವಸ್ತುವಾಗಿಲ್ಲ. ಆದರೆ ಸದಾಶಿವರಾಯನ ಕಾಲದಲ್ಲಿ ತಿರುವೇಂಕಟಮಾಣಿಕ್ಯಂ ಎಂಬಾಕೆಗೆ ವೇಂಗಡದೊಡೆಯನ ದಂಡಿಗೆ(ಪಲ್ಲಕ್ಕಿ)ಯನ್ನೇ ಅವಳ ಬಳಕೆಗೆಂದು ಗುಡಿಯ ಸ್ಥಾನತ್ತಾರರೇ ಕೊಟ್ಟರೆಂಬ ಉಲ್ಲೇಖವನ್ನು ನೋಡಿದರೆ ಇದರ ಮೇಲೆ ಕೊಂಚ ಬೆಳಕು ಬಿದ್ದೀತು. ಹೀಗೆ ವಿಪರೀತವಾದ ದಾರಿ ಹಿಡಿದರೆನ್ನುವ ವೇಳೆಗೆ ಗುಡಿಯಿಂದ ಈ ಪದ್ಧತಿಯೇ ಮರೆಯಾದುದು ಒಳ್ಳೆಯದಾಯಿತು.

ಕಂದಾಡೈ-ರಾಮಾನುಜ-ಅಯ್ಯನ್ ಮತ್ತು ಎಂಬೆರುಮಾನಾರ್-ಜೀಯರ್ ಇವರ ಅಪ್ರಸ್ತುತ, ಅನುಚಿತಉತ್ಸಾಹವೇ ದೇವದಾಸಿಯರ ನಂಟು ಬೆಟ್ಟದ ಗುಡಿಗೆ ಸೇರಿಕೊಂಡು ಬರಲು ಕಾರಣವಾಯಿತು. ಮುಂದೆ ಅಚ್ಯುತರಾಯನ ರಸಿಕತೆ ಈ ಪದ್ಧತಿಯನ್ನು ಬೆಳೆಸಿತು. ತಿರುಪತಿಯ ಶ್ರೀವೈಷ್ಣವಸಮುದಾಯದಲ್ಲಿ ಅಚ್ಯುತರಾಯನ ರಸಿಕತೆಯನ್ನು ಮೆಚ್ಚಿಕೊಂಡವರೂ ಇದ್ದಂತೆ ತೋರುತ್ತದೆ. ಹನುಮಸಾನಿ ಎಂಬಾಕೆಗೆ ಕ್ರಿಸ್ತಾಬ್ದ 1540ರ ಜನವರಿ ಮೂವತ್ತನೆಯ ದಿನ ಸ್ಥಾನತ್ತಾರರು ಕೊಟ್ಟ ಶಿಲಾಶಾಸನ ವೊಂದರಿಂದ (ತಿರುಮಲೆಯ ಗುಡಿಯಲ್ಲಿ ಮೂರನೆಯ ಪ್ರಾಕಾರದ ದಕ್ಷಿಣಗೋಡೆಯ ಮೇಲಿರುವುದು) ಈ ಹೆಂಗಳೆಯರನ್ನು ಅಚ್ಯುತರಾಯನೇ ಗುಡಿಯ ಸೇವೆಗಾಗಿ ಬಿಟ್ಟುಕೊಟ್ಟು ತಿರುಪತಿಯಲ್ಲಿರುವಂತೆ ಕಟ್ಟು ಮಾಡಿದುದು ತಿಳಿದುಬರುತ್ತದೆ (**ತಿರುಪ್ಪತಿ ಇಲ್....ಅಚ್ಯುತರಾಯಮಹಾರಾಯರ್ ಏಟ್ಟ ಎಂಪೆರುಮಾನಡಿಯಾರಿಲ್...**). ಶಾಸನದ

ಒಕ್ಕಣೆಯನ್ನು ನೋಡಿದರೆ ತಿರುಪತಿಯಲ್ಲಿ ಇವರ ದೊಡ್ಡ ತಂಡವೇ ಇದ್ದಿರಬೇಕೆನಿಸುತ್ತದೆ. ಇವರಲ್ಲಿ ಗುಡಿಗೆ ದಾನಧರ್ಮಗಳನ್ನು ನಡೆಸಿದ ಒಬ್ಬೊಬ್ಬಳನ್ನು ಕುರಿತು ಹೇಳುವಾಗಲೂ ಸ್ಥಾನತ್ತಾರರು ಜಾಗರೂಕತೆಯಿಂದ "ತಿರುಪ್ಪತಿಯಿಲ್ ಇರುಕ್ಕುಂ" ("ತಿರುಪತಿಯಲ್ಲಿರುವ"), "ತಿರುಪ್ಪತಿಯಿಲ್ ಎಂಪೆರುಮಾನಡಿಯಾರಿಲ್" ("ತಿರುಪತಿಯ ದೇವದಾಸಿಯರಲ್ಲಿ ಒಬ್ಬಳಾದ") ಎಂದು ವಿವರಿಸುತ್ತಾರೆ. ಬೆಟ್ಟದ ಮೇಲೆ ಇವರಿರಲು ಆಸ್ಪದವಿರಲಿಲ್ಲವೆಂದು ಊಹಿಸಿಕೊಳ್ಳಬಹುದು. ಉತ್ಸವಸಂದರ್ಭಗಳಲ್ಲಿ ಮಾತ್ರ ಬೆಟ್ಟಕ್ಕೆ ಬಂದು ಹೋಗುತ್ತಿದ್ದರೆಂದು ಕಾಣುತ್ತದೆ. ಬ್ರಹ್ಮೋತ್ಸವದಂಥ ಉತ್ಸವಗಳಲ್ಲಿ ಬೆಟ್ಟದ ಮೇಲೇ ಹಲವಾರು ದಿನಗಳು ಉಳಿದುಕೊಳ್ಳುತ್ತಿದ್ದರೆ ಆಶ್ಚರ್ಯವಲ್ಲ. ಆದರೆ ಅವರ ಕಾರ್ಯಕ್ಷೇತ್ರ ತಿರುಪತಿಯೇ; ಅವರ ಕೊಡುಗೆಯೂ ಬಹುಮಟ್ಟಿಗೆ ಸಂದುದು ಗೋವಿಂದರಾಜನಿಗೇ.

ಸಜ್ಜರವುತ್ತು-ಪೋಲು-ನಾಯಕ್ಕನೆಂಬುವನ ಮಗಳು ಗೋವಿಂದಸಾನಿ. ಇವಳು ತಿರುಪತಿಯ ಗೋವಿಂದರಾಜನಿಗೆ ದಿನವೂ ಒಂದು ತಿರುಪ್ಪೋನಕ, ಧನುರ್ಮಾಸದ ಮೂವತ್ತು ದಿನವೂ ಮೂವತ್ತು ತಿರುಪ್ಪೋನಕಗಳು ಇಷ್ಟನ್ನು ಸಮರ್ಪಿಸಲೆಂದು ಗುಡಿಗೆ 1620 ನರ್-ಪಣಗಳನ್ನು ಕೊಡುತ್ತಾಳೆ, ಕ್ರಿಸ್ತಾಬ್ದ 1534ರಲ್ಲಿ. ತಿಪ್ಪಾಸಾನಿ ಎಂಬ ತಿರುವೀಧಿಸಾನಿಯ ಮಕ್ಕಳು ಲಿಂಗಿ (ಲಿಂಗಾಸಾನಿ) ಮತ್ತು ತಿರುವೇಂಕಟಮಾಣಿಕ್ಯಂ ಇವರಿಬ್ಬರೂ 1535ರಲ್ಲಿ ಗುಡಿಗೆ 230 ನರ್-ಪಣಗಳನ್ನು ಕೊಟ್ಟು ಗೋವಿಂದರಾಜನಿಗೆ ಕೆಲವು ಕೈಂಕರ್ಯಗಳನ್ನು ವ್ಯವಸ್ಥೆ ಮಾಡಿದರು. ಇವರೇ ನಾಲ್ಕೈದು ವರ್ಷಗಳ ನಂತರ ತಮ್ಮ "ಉಭ್ಭಯ"ವೆಂದು ಗೋವಿಂದರಾಜನಿಗೂ, ಬೆಟ್ಟದ ಮೇಲೆ ಉತ್ಸವ ಮೂರ್ತಿಗೂ (ಮಲೈಕ್ಕೂನಿಯನಿನ್ರ-ಪೆರುಮಾಳಿಗೂ) ಕೆಲವು ಸೇವೆಗಳಿಗಾಗಿ 1650 ನರ್-ಪಣಗಳನ್ನು ಮತ್ತೆ ಕೊಟ್ಟರು.

ತಿರುವೇಂಕಟಮಾಣಿಕ್ಯಂ ಇನ್ನೂ ಹಲವು ಸೇವೆಗಳಿಗಾಗಿ ಧನವನ್ನು ಬಿಟ್ಟಿದ್ದಾಳೆ. ಚಿಕ್ಕಯ ಸವಾಯಿ ಮತ್ತು ಆಕೆಯ ತಂಗಿ ಗೋವಿಂದಸಾನಿ ತಿರುಪತಿಯ ಗುಡಿಯಲ್ಲಿ ತಮಿಳುಯುಗಾದಿಯಾದ ಚಿತ್ತಿರೈ-ವಿಷುಉತ್ಸವವನ್ನು ನಡೆಸುವ ವ್ಯವಸ್ಥೆಮಾಡಿ 1535ರಲ್ಲಿ 1750 ಪಣಗಳನ್ನು ಕೊಟ್ಟರು. ಅಲ್ಲಿಯೇ ಮಕರಸಂಕ್ರಾಂತಿ-ಉತ್ಸವದ ಸಂದರ್ಭದಲ್ಲಿ ಗೋವಿಂದರಾಜನಿಗೆ ತಿರುವೋಲಕ್ಕಂ ಸಮರ್ಪಣೆಗೆಂದು 230 ಪಣಗಳನ್ನೂ ಇತರ ಕೆಲವು ಸೇವೆಗಳಿಗಾಗಿ ಮತ್ತೆ ಹಣವನ್ನೂ ಗುಡಿಯ ಶ್ರೀಭಂಡಾರಕ್ಕೆ ಸಲ್ಲಿಸಿದ ಪೆರುಚ್ಚಿ ಅಥವಾ ಬೆಜ್ಜೆ (ಬೆಜ್ಜಮ್ಮ) ಮಲ್ಲಕ್ಕನ-ವೇಂಕಟತ್ತುರೈವಾರ್-ಶೆವ್ವಿ ಎಂಬುವಳ ಮಗಳು. ವೇಂಗಡದೊಡೆಯನಿಗೆ ಬ್ರಹ್ಮೋತ್ಸವ, ವಿಜಯದಶಮೀ, ಪಾಡಿಯ-ವೇಟ್ಟೈ (ಮೃಗಯಾವಿಹಾರ) ಮೊದಲಾದ ಸಂದರ್ಭಗಳಲ್ಲಿ ಅಪ್ಪ-ಪಡಿಗಳನ್ನೂ ತಿರುಪತಿಯ ಗೋವಿಂದರಾಜನ ಗುಡಿಯಲ್ಲಿರುವ ಸುದರ್ಶನನಿಗೆ ದೋಸೆ ಪಡಿಯನ್ನೂ ಸಲ್ಲಿಸುವಂತೆ ಏರ್ಪಾಟು ಮಾಡಿ 820 ನರ್-ಪಣಗಳನ್ನು ಗುಡಿಗೆ ಕೊಟ್ಟವಳು ಹನುಮಸಾನಿ; ಉಡ್ಡಿದ-ತಿಮ್ಮಯ್ಯನ ಮಗಳು. ಈಕೆಯದೊಂದು ಹೂದೋಟವೂ ಬೆಟ್ಟದ ಮೇಲಿದ್ದಿತು. ಈಕೆಯು ಬೆಟ್ಟದ ಮೇಲೆ ಮಂಟಪವೊಂದನ್ನೂ

ಕಟ್ಟಿಸಿದಳು. ಹೀಗೆಯೇ ಶೆಲ್ಲಿ, ಶೆಣ್ಬಕ ವೆಂಗು, ನಾಗಸಾನಿ, ಶೆವ್ವಸಾನಿ ಎಕ್ಕು, ಅವಳ ಮಗಳು ನಾಚ್ಚಿ ಮೊದಲಾದವರು ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತಾರೆ.

ಅಚ್ಯುತರಾಯನು ಕೈಗೊಂಡ ಕೈಂಕರ್ಯಗಳೆಲ್ಲ ಹಾಳಾದುವು. ಅವನು ಗುಡಿಯ ವೈಭವಕ್ಕೆ ತಿರುವೀಧಿಸಾನಿಯರ ನೆರವು ಅಗತ್ಯವೆಂದು ಬಳಕೆಗೆ ತಂದ ಈ ಪದ್ಧತಿಯೂ ಬಹುಕಾಲ ಉಳಿಯಲಿಲ್ಲ. ಅನಂತರ ಸದಾಶಿವರಾಯನ ಕಾಲದಲ್ಲಿ ಕುಂಟುತ್ತ ಮುಂದೆ ಸಾಗಿದ ಪದ್ಧತಿ ಅವನೊಂದಿಗೇ ಸತ್ತಿತು. ಬೆಟ್ಟದ ಗುಡಿಯ ಇತಿಹಾಸದಲ್ಲಿ ಸುಮಾರು ಐವತ್ತು ವರ್ಷಗಳ ಕಾಲ ಈ ಹೆಂಗಳೆಯರ ಬೆಡಗು ಆಗೊಮ್ಮೆ ಈಗೊಮ್ಮೆ ಇಣುಕು ಹಾಕಿತು. ಅಲ್ಲಿ ಸ್ಥಿರವಾಗಿ ನಿಲ್ಲುವ ಸಾಮರ್ಥ್ಯ ಅವರಿಗೂ ಇರಲಿಲ್ಲ, ಹಾಗೆ ಅವರು ನಿಲ್ಲಲು ಅವಕಾಶ ಕೊಡುವ ಕಾತರ ಗುಡಿಯ ಆಡಳಿತದವರಿಗಾಗಲೀ ಅರ್ಚಕರಿಗಾಗಲೀ ಇರಲಿಲ್ಲ. ಗುಡಿಯ ಘನತೆ ಉಳಿಯಿತು.



ಹತ್ತು

ದೇವರ ದಂಡಿಗೆಯು ದೇವದಾಸಿಯ ಪಾಲು

ಅರವೀಡು-ಅರಸರು

ಅಚ್ಯುತರಾಯನಾದಮೇಲೆ ವಿಜಯನಗರದ ಭಾಗ್ಯಚಕ್ರವನ್ನು ನಡೆಸುವ ಹೊಣೆ ಬಿದ್ದುದು ಸದಾಶಿವರಾಯನ ಮೇಲೆ. ಅಚ್ಯುತರಾಯನ ತಮ್ಮ ರಂಗರಾಯನ ಮಗ ಸದಾಶಿವರಾಯ, ಅಚ್ಯುತರಾಯನ ಕಡೆಗಾಲದಲ್ಲಿ ಮೂರು-ನಾಲ್ಕು ವರ್ಷಗಳು ಅವನೊಂದಿಗೇ ಆಡಳಿತವನ್ನು ನೋಡಿಕೊಳ್ಳುತಿದ್ದ. ಅಚ್ಯುತರಾಯನಿಗೇ ಮಗನೊಬ್ಬ ಇದ್ದುದರಿಂದ, ಅವನನ್ನು ಕಡೆಗಾಣಿಸಿ ಸದಾಶಿವರಾಯನು ಅರಸನಾದನೆಂದು ಅರಮನೆಯಲ್ಲಿ ಯಾದವೀಕಲಹವೊಂದು ನಡೆಯಿತು. ಅಚ್ಯುತರಾಯನ ಆಳ್ವಿಕೆಯಲ್ಲಿ ಪ್ರಬಲರಾದವರು ಸಾಲಕ-ಮನೆತನದವರು. ಸಾಲಕ-ತಿಮ್ಮರಾಯ ಅಚ್ಯುತರಾಯನ ಮಾವ; ಅವನಿಗೆ ಮೂವರು ಗಂಡುಮಕ್ಕಳು: ಪೆರಿಯ-ತಿರುಮಲ, ಶಿಝ್ರು-ತಿರುಮಲ, ಮತ್ತು ಸಿಂಗರಾಜ. ಇವರಲ್ಲಿ ಮೊದಲ ಇಬ್ಬರು ಸಮರಶೂರರು, ಸಾಹಸಿಗಳು, ಅಚ್ಯುತರಾಯನಿಗೆ ಆಡಳಿತದಲ್ಲಿ ನೆರವಾದವರು. ತಮ್ಮ ಭಾವನ ಭಾಗ್ಯ ಬೇರೂರಲು ಹಲವು ಹಗೆಗಳೊಂದಿಗೆ ಹೋರಾಡಿದವರು. ರಾಜ್ಯದಲ್ಲಿ ಅವರ ಪ್ರಭಾವ ಪ್ರಬಲವಾದುದು ಆಶ್ಚರ್ಯವಲ್ಲ. ಅಚ್ಯುತರಾಯನು ತೀರಿಕೊಂಡಾಗ, ಅವನ ಮಗ ಚಿಕ್ಕ-ವೇಂಕಟಾದ್ರಿಯ ನೆಪ ಮಾಡಿಕೊಂಡು ಸದಾಶಿವರಾಯನ ವಿರುದ್ಧ ಎದ್ದರು. ಆದರೆ ಸದಾಶಿವರಾಯನಿಗೆ ನೆರವಾಗಿ ಅರವೀಡು (ಅರವೀಟಿ) ಮನೆತನದವರು ನಿಂತು ಸಾಲಕ-ಸೋದರರನ್ನು ಸದೆಬಡಿದರು. ಅಚ್ಯುತರಾಯನ ಕಾಲದಲ್ಲಿ ಸಾಲಕ-ವಂಶದವರು ಮುಖ್ಯರಾದಂತೆಯೇ ಸದಾಶಿವರಾಯನ ಕಾಲದಲ್ಲಿ (ಎಂದರೆ, 1541ರಿಂದ 1574ರವರೆಗೆ) ಅರವೀಡುವಂಶದವರು ಪ್ರಬಲರಾದರು; ಅವನನಂತರ ಅರಸೊತ್ತಿಗೆ ಇವರ ಮನೆತನಕ್ಕೇ ಸೇರಿತು.

ಅರವೀಡುವಂಶದ ರಾಮರಾಯನು ಕೃಷ್ಣದೇವರಾಯನ ಅಳಿಯ; 'ಅಳಿಯ-ರಾಮರಾಯ'ನೆಂದೇ ಅವನ ಹೆಸರಾಯಿತು. ಅಚ್ಯುತರಾಯನ ಕಾಲದಲ್ಲೇ ಅವನ ಪ್ರಾಬಲ್ಯ ಮೊದಲಾಯಿತು; ಅವನು ಸಾಲಕ-ಸೋದರರ ಏಳಿಗೆಯನ್ನು ಸಹಿಸದೆ ಇದ್ದುದು ಸಹಜವೇ. ರಾಮರಾಯನೂ ಅವನ ಸೋದರರು ತಿರುಮಲರಾಯ ಮತ್ತು ವೇಂಕಟಾದ್ರಿ ಇವರೂ ಶೂರರು, ಸಾಹಸಿಗಳು. ಅರಸೊತ್ತಿಗೆಯ ಮೇಲೆ ಕಣ್ಣಿಟ್ಟಿದ್ದವರು. ಸಾಲಕ-ಸೋದರರ ಆಶಯವನ್ನು ಅರಿತುಕೊಂಡು, ಸದಾಶಿವರಾಯನ ಪಕ್ಷವನ್ನು ಹಿಡಿದು ಅವರೊಂದಿಗೆ ಕಾದಾಡತೊಡಗಿದರು. 'ಅಳಿಯ' ರಾಮರಾಯನು ಸದಾಶಿವ

ರಾಯನ ಭಾವನೇ. ಅರವೀಡು-ಸೋದರರು ಸದಾಶಿವರಾಯನಿರುವವರೆಗೂ ಅವನಿಗೆ ವಿಧೇಯರಾಗಿಯೇ ತೋರಿಕೊಂಡರಾದರೂ, ದಿಟವಾಗಿ ಅವರೇ ಆಳುತ್ತಿದ್ದವರು. ಅರವೀಡು-ರಾಮರಾಯನು ಸದಾಶಿವರಾಯನ ಮಹಾಪ್ರಧಾನಿಯಾಗಿದ್ದವನು ರಾಮರಾಯನು ತಾಳಿಕೋಟೆ ಕದನದಲ್ಲಿ (1565ರಲ್ಲಿ) ತೀರಿಕೊಂಡಮೇಲೆ ಅವನ ತಮ್ಮ ತಿರುಮಲರಾಜನು ಮಹಾಪ್ರಧಾನಿಯಾದ.

ಸದಾಶಿವರಾಯನು ಸತ್ತು ಅರಸೊತ್ತಿಗೆ ತೆರವಾದಾಗ ತಿರುಮಲರಾಜನೇ ಅರಸನಾದ. ಕ್ರಿಸ್ತಾಬ್ದ 1575ರ ಸುಮಾರಿಗೆ, ಎರಡು-ಮೂರು ವರ್ಷಗಳ ದೊರೆತನ ಅವನದ್ದು. ಅವನ ನಂತರ ಅರಸನಾದವನು ಅವನ ಮಗ ಶ್ರೀರಂಗದೇವ. ಆ ವೇಳೆಗೆ ರಾಜ್ಯದ ರಾಜಧಾನಿ ವಿಜಯನಗರದಿಂದ ಪೆನುಗೊಂಡೆಗೆ ಬದಲಾಗಿದ್ದಿತು. ಶ್ರೀರಂಗ ದೇವನ ತಮ್ಮ (ತಿರುಮಲರಾಜನ ಕಡೆಯ ಮಗ) ವೆಂಕಟಪತಿದೇವನು ಅಣ್ಣನಿಗೆ ನೆರವಾಗಿ ಚಂದ್ರಗಿರಿರಾಜ್ಯವನ್ನು ನೋಡಿಕೊಳ್ಳುತ್ತಿದ್ದನು. ಮುಂದೆ ಉದಯಗಿರಿ, ಕೊಂಡವೀಡು ಮುಂತಾದ ಗಡಿಯ ಕೋಟೆಗಳನ್ನೂ ನೋಡಿಕೊಳ್ಳತೊಡಗಿದ. ಶ್ರೀರಂಗದೇವನ ನಂತರ, 1616ರ ಸುಮಾರಿಗೆ, ಇವನೇ ವಿಜಯನಗರದ ಅರಸನೆನಿಸಿಕೊಂಡ. ಇವನ ಕಾಲದಲ್ಲಿ ವಿಜಯನಗರರಾಜ್ಯದ ರಾಜಧಾನಿಯು ಪೆನುಗೊಂಡೆಯಿಂದ ಚಂದ್ರಗಿರಿಗೇ ಬದಲಿಸಿತು.

ಹೀಗೆ ಸದಾಶಿವರಾಯನ ಕಾಲಕ್ಕೆ ತುಳುವ-ಮನೆತನದವರ ಆಳ್ವಿಕೆ ಮುಗಿಯಿತು; ಅನಂತರ ಅರವೀಡು-ವಂಶದವರ ಆಡಳಿತ ಮೊದಲಾಯಿತು. ಆದರೆ ಆ ವೇಳೆಗಾಗಲೇ ವಿಜಯನಗರಸಾಮ್ರಾಜ್ಯ ಸೊರಗಿದ್ದಿತು. ಮಹಾಪ್ರವಾಹವಾಗಿದ್ದುದು ಈಗ ಸಣ್ಣ ತೊರೆಯೆಂತೆ ಸಾಗತೊಡಗಿ, ಬರುಬರುತ್ತ ಬತ್ತಿಹೋಯಿತು. ಈ ಅವಧಿಯಲ್ಲಿ ಬೆಳಗಿದವನು ಅಳಿಯ-ರಾಮರಾಯ. ಸದಾಶಿವರಾಯನನ್ನು ಸಿಂಹಾಸನದ ಮೇಲೆ ಕೂರಿಸಿದವನು ಅವನೇ ಎನ್ನಬಹುದು. ಅವನು ಅರಸನಾದಮೇಲೆ ರಾಮರಾಯನು ಮಹಾಪ್ರಧಾನಿಯೆಂದು ಕರೆಸಿಕೊಂಡನಾದರೂ ಆಡಳಿತವೆಲ್ಲ 'ಚಾಳಿಕ್ಯ-ನಾರಾಯಣ', 'ರಾಯ-ರಾಹುತ್ತ-ಮಿಂಡ', 'ನಾನಾವರ್ಣಶ್ರೀ-ಮಾಂಡಲಿಕ-ಗಂಡ', 'ಅಳಿಯ-ರಾಮರಾಜಯ್ಯದೇವ-ಮಹಾರಾಜಯ್ಯ'ನದೇ. ಅವನಿಗೆ ಬಲಗೈಯಾಗಿದ್ದವನು ಅವನ ತಮ್ಮ 'ತಿರುಮಲಯ್ಯದೇವ-ಮಹಾರಾಜ', ಹಗೆಗಳನ್ನೆಲ್ಲ ಹತ್ತಿಕ್ಕಿ ಸದಾಶಿವರಾಯನ ಆಡಳಿತ ನೆಮ್ಮದಿಯಾಗಿ ನಡೆಯುವಂತೆ ನೆರವಾದವನು.

ಅರವೀಡುವಂಶದವರೂ ಸಾಲಕವಂಶದವರಂತೆ ಬೆಟ್ಟದೊಡೆಯನ ಭಕ್ತರೇ. ಎರಡೂ ಮನೆತನಗಳು ಗುಡಿಯ ಏಳಿಗೆಗೆ ಟೊಂಕ ಕಟ್ಟಿ ನಿಂತುವು. ಸಾಲಕ-ಮನೆತನದವರು ವೇಂಗಡದ ಗುಡಿಗೆ ಒಟ್ಟು 34,600 ಪಣಗಳನ್ನು ಸಲ್ಲಿಸಿದರೆನ್ನುವ ಉಲ್ಲೇಖವಿದೆ. ಅರವೀಡು-ಮನೆತನದವರು ಬೆಟ್ಟದ ಗುಡಿಗೆ, ಕೆಳಗಿನ ತಿರುಪತಿಗೆ ಬಗೆಬಗೆಯ ಸೇವೆಗಳನ್ನು ಸಲ್ಲಿಸಿದರು. ಅವನ್ನು ಕೊಂಚ ಮುಂದೆ ಪ್ರಸ್ತಾಪಿಸಬೇಕಾಗುತ್ತದೆ. ಆದರೆ ಕೃಷ್ಣದೇವರಾಯನಂತೆ, ಅಚ್ಯುತರಾಯನಂತೆ ಸದಾಶಿವರಾಯನಿಂದ ದೇವರಿಗೆ ಕೊಡುಗೈ ಕೊಡುಗೆಗಳನ್ನು ಕೊಡಲಾಗಲಿಲ್ಲ. ಅಚ್ಯುತರಾಯನು

ಕಣ್ಣು ಮುಚ್ಚುವ ಕಾಲಕ್ಕೇ ಅರಸರ ಬೊಕ್ಕಸ ಬಹುಮಟ್ಟಿಗೆ ಬರಿದಾಗಿದ್ದಿತು. ಸದಾಶಿವರಾಯನಿಗೆ ಅವನ ಹಿರಿಯರು ನಡೆಸಿದ ಕೈಂಕರ್ಯ ಕನಸಾಯಿತು ಅಷ್ಟೆ. ಆದರೆ ಅವನ ಪರಿವಾರದಲ್ಲಿದ್ದವರು, ಪುರಜನರು, ವರ್ತಕರು ಅನೇಕರು ಗುಡಿಗೆ ನಡೆದುಕೊಂಡು, ಗುಡಿಯ ಸಂಪತ್ತೇನೋ ಹೆಚ್ಚುತ್ತಲೇ ಬಂದಿತು. ಅಚ್ಯುತರಾಯನ ಮತ್ತು ಸದಾಶಿವರಾಯನ ಕಾಲದಲ್ಲಿ ತಿರುಪತಿಯವರ ಪ್ರಭಾವ ಬಲವಾಯಿತು. ಅರಸರೂ ಅರಸರ ನಂಟರೂ ಅಧಿಕಾರಿಗಳೂ ಶ್ರೀವೈಷ್ಣವಧರ್ಮಕ್ಕೆ ಒಲಿದಿದ್ದವರು, 'ಶ್ರೀವೈಷ್ಣವರಕ್ಷೆ'ಗಾಗಿ ಹಂಬಲಿಸುತ್ತಿದ್ದವರು. ಅವರ ಆಸಕ್ತಿಯಿಂದ, ಉತ್ಸಾಹದಿಂದ, ಛಲದಿಂದ ಬೆಟ್ಟದ ಗುಡಿಯಲ್ಲಿ ಶ್ರೀವೈಷ್ಣವಪ್ರಭಾವ ಸ್ಪಷ್ಟವಾಗಿ ಮೂಡಿಬಂದಿತು.

ಸದಾಶಿವರಾಯನ ಆಳ್ವಿಕೆ ಅರವತ್ತು ವರ್ಷಗಳಿಗೂ ಮೀರಿ. ಆದರೆ ಅವನು ಬೆಟ್ಟದ ಗುಡಿಗೆ ಬಂದುದು ಎರಡು ಬಾರಿಯಷ್ಟೆ. ಬಂದಾಗಲೂ ಏನೊಂದು ಕೈಂಕರ್ಯವನ್ನೂ ಸಲ್ಲಿಸದೆ ಹಿಂದಿರುಗಿದ. ಮೊದಲಬಾರಿ ಬಂದಾಗ ಮಕರ-ಸಂಕ್ರಮಣ (1553ರ ಡಿಸೆಂಬರ್ 27). ಎರಡನೆಯ ಬಾರಿ ಮರುವರ್ಷವೇ ಬಂದ (ಜುಲೈ ಎರಡನೆಯ ದಿನದಂದು). ಎರಡು ಬಾರಿ ಬಂದಾಗಲೂ ದೇವರಿಗಾಗಲೀ ಗುಡಿಗಾಗಲೀ ಯಾವ ದಾನಧರ್ಮಗಳನ್ನೂ ನಡೆಸಿದ ಉಲ್ಲೇಖವಿಲ್ಲ. ಆದರೆ ಎರಡನೆಯ ಬಾರಿ ಬೆಟ್ಟಕ್ಕೆ ಬಂದಾಗ, ಬೆಟ್ಟದ ಕೆಳಗೆ ತಿರುಪತಿಯ ರಾಮಾನುಜಕೂಟಕ್ಕೆ ನೆರವಾದನೆಂಬ ಶಾಸನವಿದೆ. ಈ ರಾಮಾನುಜ-ಕೂಟವನ್ನು ಕಟ್ಟಿಸಿದ್ದವನು ಅವನ ನಂಟನೇ 'ಶ್ರೀಮನ್ ಮಹಾಮಂಡಲೇಶ್ವರ' ರಾಮರಾಜ-ಕೋನೇಟಿ-ಅಯ್ಯನ ಮಗ ಅರವೀಡು-ಕೊಂಡ ರಾಜಯ್ಯ. ಈತನು ತಿರುಪತಿಯ ಗೋವಿಂದರಾಜನ ಗುಡಿಯ ನೆರೆಯಲ್ಲಿಯೇ 'ಅಯ್ಯಂಗಾರ್-ತಿರುವೀಧಿ'ಯಲ್ಲಿ (ಇದಕ್ಕೆ ಭಾಷ್ಯಕಾರರ್-ಅಗ್ರಹಾರವೆಂದೂ ಹೆಸರು, ಈಗ ಉತ್ತರ-ಮಾಡ-ರಸ್ತೆ) ನಮ್ಮಾಳ್ವಾರರ ಸನ್ನಿಧಿಯೊಂದನ್ನು ಏರ್ಪಡಿಸಿ, ಅದಕ್ಕೆ ಹೊಂದಿಕೊಂಡಂತೆ ರಾಮಾನುಜ-ಕೂಟವೊಂದನ್ನು ಕ್ರಿಸ್ತಾಬ್ದ 1550ರ ಸುಮಾರಿಗೆ ವ್ಯವಸ್ಥೆ ಮಾಡಿದನು. ರಾಮಾನುಜಕೂಟವೆಂದರೆ ಶ್ರೀವೈಷ್ಣವಯಾತ್ರಿಕರು ಉಚಿತವಾಗಿ ಪಡೆಯಬಹುದಾದ ಭೋಜನಸೌಲಭ್ಯ. ಇದರ ಧರ್ಮಕರ್ತನಾಗಿ ತಿರುಮಲೆ ತಿರುಪತಿ ಗುಡಿಗಳ ಆಚಾರ್ಯಪುರುಷರಲ್ಲಿ ಒಬ್ಬನಾಗಿದ್ದ ಕೋಟ್ಟೈ-ತಿರುಮಲೆ-ನಂಬಿ ಶ್ರೀರಾಮ-ಅಯ್ಯಂಗಾರನನ್ನು ನೇಮಿಸಿದನು.

ತಿರುಪತಿಯ ಹಿರಿಮೆ

ದೂರದ ಊರುಗಳಿಂದ ಬರುವ ಯಾತ್ರಿಕರು ಬೆಟ್ಟವನ್ನೇರುವ ಮೊದಲು ತಿರುಪತಿಯಲ್ಲಿ ಒಂದೆರಡು ದಿನಗಳು ತಂಗಿ ಅನಂತರ ಬೆಟ್ಟವನ್ನು ಹತ್ತಿಹೋಗುವುದೂ, ಬೆಟ್ಟದ ಮೇಲೆ ಕೆಲಸ ಮುಗಿದಮೇಲೆ ತಮ್ಮ ಊರಿಗೆ ತೆರಳುವ ಮೊದಲು ತಿರುಪತಿಯಲ್ಲೇ ಒಂದು ದಿನ ತಂಗಿದ್ದು ಹೋಗುವುದೂ ವಾಡಿಕೆಯಾಗಿದ್ದಿತು. ಚಂದ್ರಗಿರಿ, ತಿರುಚಾನೂರು, ಮೊದಲಾದ ಇತರ ಮಾರ್ಗಗಳಿಂದ ಬೆಟ್ಟಕ್ಕೆ

ಹೋಗುವುದು ತೀರ ಅಪರೂಪವಾಯಿತು. ತಿರುಪತಿಯೂ ಒಂದು ಕ್ಷೇತ್ರವಾಗಿ ಮಾರ್ಪಟ್ಟು ಬೆಟ್ಟಕ್ಕಿಂತಲೂ ಹೆಚ್ಚು ಪ್ರಾಶಸ್ತ್ಯವನ್ನು ಪಡೆಯುತ್ತಿದ್ದ ಕಾಲ ಅದು. ಅದರಲ್ಲಿಯೂ ಶ್ರೀವೈಷ್ಣವಧರ್ಮದ ಒಲವಿದ್ದ ಯಾತ್ರಿಕರಿಗೆ ತಿರುಪತಿಯು ಅವಶ್ಯವಾಗಿದ್ದ ಯಾತ್ರಾಸ್ಥಳವೇ. ಆದರೆ ಯಾತ್ರಿಕರಿಗೆಲ್ಲ ಭೋಜನವ್ಯವಸ್ಥೆ ಸಮರ್ಪಕವಾಗಿರಲಿಲ್ಲ. ಬೆಟ್ಟದ ಗುಡಿಯಲ್ಲಿ ನಿಮಂದನಗಳೂ ಸೇವೆಗಳೂ ಸಂಧಿಗಳೂ ಅವಸರಗಳೂ ಹೆಚ್ಚಿ ಪ್ರಸಾದವಿತರಣೆ ಎಲ್ಲ ಯಾತ್ರಿಕರಿಗೂ ಸಲ್ಲಬೇಕೆಂದು ದಾನಿಗಳು ಬಯಸಿದರೂ, ಅದರ ಹೆಚ್ಚು ಪಾಲು ಆಡಳಿತದವರಿಗೂ ಗುಡಿಯ ಪರಿಚಾರಕರಿಗೂ ಸೇರಿಬಿಡುವ ವಾಡಿಕೆ ಬಂದು, ಯಾತ್ರಿಕರಿಗೆ ದೊರೆಯುತ್ತಿದ್ದುದು ಹಣಕ್ಕೆ ಮಾತ್ರ. ಪ್ರಸಾದದ ಮಾರಾಟ, ಕೊಂಡುಕೊಳ್ಳಾಟ ದೇವರ ದರ್ಶನಕ್ಕಿಂತಲೂ ಮುಖ್ಯವಾಯಿತು.

ದೇವರ ಪ್ರಸಾದವನ್ನು ಹಣಕ್ಕೆ ಮಾರುವುದು ಎಲ್ಲ ಆಗಮಗಳಿಗೂ ವಿರುದ್ಧವಾದುದು; ದಾನಿಗಳ ಆಶಯಕ್ಕಂತೂ ತಕ್ಕುದಲ್ಲವೇ ಅಲ್ಲ. ಆದರೆ ಆದಾಯದ ದಾರಿಯನ್ನು ಯಾರು ಬಿಡುತ್ತಾರೆ? ಅದೂ ಅವಕಾಶವಿರುವಾಗ? ತಿರುಪತಿಯಲ್ಲಿಯೂ ಇದೇ ವ್ಯಾಪಾರ ಮೊದಲಾಯಿತು; ಆದರೆ ಬೆಟ್ಟದ ಮೇಲಿನಷ್ಟು ಹೆಚ್ಚಿನ ಪ್ರಸಾದ ಮಾರಾಟಕ್ಕೆ ಒದಗುತ್ತಿರಲಿಲ್ಲ. ಹಣವಿದ್ದವರು ಬೆಟ್ಟದ ಮೇಲೆ ಪ್ರಸಾದವನ್ನು ಕೊಳ್ಳಬಹುದಾಗಿದ್ದಿತು; ತಿರುಪತಿಯಲ್ಲಿ ಅದೂ ಕಷ್ಟವೆನಿಸಿತು. ಬಡಯಾತ್ರಿಕರು ಪಡುತ್ತಿದ್ದ ಬವಣೆಯನ್ನು ನೋಡಿ ಆರವೀಡು-ಕೊಂಡಯ್ಯ-ರಾಜನು ತಿರುಪತಿಯಲ್ಲಿ ರಾಮಾನುಜಕೂಟವೊಂದನ್ನು ಏರ್ಪಡಿಸಿದನು. ದೇವರ ಪ್ರಸಾದವನ್ನು ಕೊಳ್ಳಬೇಕಾಗಿ ಬಂದ ಕೆಟ್ಟ ಕಾಲದಲ್ಲಿ ಒಳ್ಳೆಯ ಕೆಲಸವೊಂದನ್ನು ಈತ ಕೈಗೊಂಡ.

ಸದಾಶಿವರಾಯನ ಅಧಿಕಾರಿಗಳು

ಸದಾಶಿವರಾಯನು ಬೆಟ್ಟದ ಮೇಲೆ ಎರಡನೆಯ ಬಾರಿ ಬಂದಾಗ ಕೊಂಡಯ್ಯ ರಾಜನ ಈ ಧರ್ಮಕ್ಕೆ ನೆರವಾದನು. ಚಂದ್ರಗಿರಿ-ರಾಜ್ಯ, ಪಡೆವೀಡು-ರಾಜ್ಯ, ಶೆಂಜಿ, ತಿರುವಡಿ, ಭುವನಗಿರಿ ಮೊದಲಾದ ಹದಿನಾರು ಸೀಮೆಗಳಿಂದ ಬರುವ ಆದಾಯಕ್ಕೆ ಹತ್ತು ಬಗೆಯ ತೆರಿಗೆಗಳ ವಿನಾಯಿತಿಯನ್ನು ನೀಡಿದುದೇ ಅವನ ನೆರವು. ತಿರುಪತಿಯ ರಾಮಾನುಜಕೂಟಕ್ಕೆ ತಾರ್ಕೋಲಂ, ತಾಯನೂರು, ಅತ್ತಿಯಾರು ಮೊದಲಾದ ಹತ್ತು ಹಳ್ಳಿಗಳ ವಾರ್ಷಿಕ ಆದಾಯವಾಗಿ 5713 ರೇಖೆ ಪೊನ್ನುಗಳ ವರಮಾನವಿರುವಂತೆ ಕೊಂಡಯ್ಯರಾಜನು ವ್ಯವಸ್ಥೆ ಮಾಡಿದ್ದನು. ಇದರಿಂದ ದಿನವೂ 125 ವೇಳ್ಪೈ-ತಿರುಪ್ಪೋನಕಗಳು ದೇವರಿಗೆಂದು ಸಿದ್ಧವಾಗಿ ಸುಮಾರು ಒಂದು ಸಾವಿರದ ಐನೂರು ಶ್ರೀವೈಷ್ಣವಯಾತ್ರಿಕರಿಗೆ ಉಚಿತವಾಗಿ ದೊರಕುವಂತಿದ್ದಿತು. ಇವನ ಶ್ರೀವೈಷ್ಣವ-ಶ್ರದ್ಧೆಯನ್ನು ಅರಿತುಕೊಳ್ಳಲು ಇದಲ್ಲದೆ ಆಳ್ವಾರರ ತಿರುನಕ್ಷತ್ರಗಳಲ್ಲಿ ನೈವೇದ್ಯ ಸಮರ್ಪಣೆಗೆಂದು ಪರಣೂರಿನ ಬಳಿಯಿದ್ದ ನಗರಿ-ಗ್ರಾಮವನ್ನು ಗುಡಿಗೆ ಕೊಟ್ಟುದೂ (ಕ್ರಿಸ್ತಾಬ್ದ

1475), ರಾಮಾನುಜರ ಜನ್ಮಸ್ಥಳವಾದ ಶ್ರೀಪೆರಂಬೂದೂರಿನಲ್ಲಿರುವ ರಾಮಾನುಜ-ಸನ್ನಿಧಿಯಲ್ಲಿ ಕೈಂಕರ್ಯಕ್ಕೆಂದು ಸದಾಶಿವರಾಯನಿಂದ ಮೂವತ್ತೊಂದು ಹಳ್ಳಿಗಳನ್ನು ಕೊಡಿಸಿದುದೂ (ಕ್ರಿಸ್ತಾಬ್ದ 1556) ನೆರವಾಗುತ್ತವೆ.

ಇಷ್ಟನ್ನು ಮೀರಿ ಸದಾಶಿವರಾಯನು ಬೆಟ್ಟದ ಗುಡಿಗಾಗಲೀ ತಿರುಪತಿಯ ಗೋವಿಂದರಾಜನಿಗಾಗಲೀ ಏನನ್ನೂ ಮಾಡಿದ ಉಲ್ಲೇಖವಿಲ್ಲ. ಅವನ ಅಧಿಕಾರಿಗಳಲ್ಲಿ ಹಲವರು ಬೆಟ್ಟದ ಗುಡಿಗೂ ತಿರುಪತಿಯ ಗುಡಿಗೂ ಬಗೆಬಗೆಯಾದ ಸೇವೆಗಳನ್ನು ಸಲ್ಲಿಸಿದರು. ಮಹಾಪ್ರಧಾನಿಯಾಗಿದ್ದ ಅಳಿಯ-ರಾಮರಾಯನ ಬಳಗವು ಒಟ್ಟು 34,585 ಪಣಗಳನ್ನೂ ಇಪ್ಪತ್ತುನಾಲ್ಕು ಹಳ್ಳಿಗಳನ್ನೂ ಗುಡಿಯ ಭಂಡಾರಕ್ಕೆ ಕೊಟ್ಟಿತು. ಅವನ ದೊಡ್ಡಪ್ಪ ಪೊಟ್ಲಪಾಟಿ ತಿಮ್ಮರಾಜ, ಅವನ ಮಗ ವಿಟ್ಠಲರಾಜ, ನಂದ್ಯಾಲ-ವಂಶದ ನಾರಪ್ಪರಾಜ, ಪೆಂಡಿಲಿಕೊಡಕು-ತಿಮ್ಮರಾಜ ಮೊದಲಾದವರು ಹಲವಾರು ಸೇವೆಗಳನ್ನೂ ಉತ್ಸವಗಳನ್ನೂ ಏರ್ಪಡಿಸಿದರು. ಇವರೆಲ್ಲರಿಗೂ ಅರಸರಿಗೂ ಗುರುಗಳಾಗಿ ಇವರೆಲ್ಲರ ಕೈಂಕರ್ಯಕ್ಕೆ ಸ್ಫೂರ್ತಿಯನ್ನೂ ಮಾರ್ಗದರ್ಶನವನ್ನೂ ಒದಗಿಸಿದವರು ಶೊಟ್ಟೈ-ಏಟ್ಟೂರು-ತಿರುಮಲೆ-ನಂಬಿ ಕುಮಾರ-ತಾತ-ಅಯ್ಯಂಗಾರ್ ಮತ್ತು ಅವರ ಮಗ ಶ್ರೀನಿವಾಸ-ಅಯ್ಯಂಗಾರ್. ರಾಮಾನುಜರ ಸೋದರಮಾವ, ತಿರುಮಲೆಯ ಗುಡಿಯಲ್ಲಿ ಮೊದಲು ಆಚಾರ್ಯಪುರುಷನಾಗಿ ಸೇವೆ ಸಲ್ಲಿಸಿದ ತಿರುಮಲೆ-ನಂಬಿಯ ವಂಶಸ್ಥರು ಇವರು; ತಿರುವೇಂಕಟ-ತಾತ-ಅಯ್ಯಂಗಾರ ಮಗ. ತಿರುಮಲೆ ಮತ್ತು ತಿರುಪತಿಯ ಗುಡಿಗಳ ಆಚಾರ್ಯಪುರುಷರಾಗಿದ್ದವರು. ಇವರ ಅಣ್ಣನ (ತೊಳಪ್ಪರ್-ಅಯ್ಯಂಗಾರ) ಮಗನ ಹೆಸರೂ ಕುಮಾರ-ತಾತ ಅಯ್ಯಂಗಾರ್ ಎಂದೇ. ಆದರೆ ಇವರ ವಿಚಾರವಾಗಿ ಸ್ವಲ್ಪ ಗೊಂದಲವುಂಟಾಗಿರುವುದು ಸಹಜವೇ. ಎರಡನೆಯವರನ್ನು ಇಮ್ಮಡಿ ಕುಮಾರ-ತಾತಾಚಾರ್ಯರೆಂದು ಕರೆಯುವ ವಾಡಿಕೆಯಿದೆ. ಇವರಿಗೆ ಲಕ್ಷ್ಮೀಕುಮಾರ-ತಾತಾಚಾರ್ಯರೆಂದೂ ಕೋಟಿಕನ್ಯಾದಾನಂ-ತಾತಾಚಾರ್ಯರೆಂದೂ ಹೆಸರುಗಳಿದ್ದುವು. ಇವರು ವೇಂಕಟಪತಿದೇವನ ಗುರುಗಳು; ಬೆಟ್ಟದ ಮೇಲಿನ ಗುಡಿಯ ಬಂಗಾರವಿಮಾನಕ್ಕೆ ಮತ್ತೆ ಮೆರುಗು ಹಾಕಿಸಿದವರು. ಮೊದಲನೆಯ ಕುಮಾರ-ತಾತ ಅಯ್ಯಂಗಾರರು ಅಚ್ಯುತರಾಯನ, ಸದಾಶಿವರಾಯನ ಕಾಲದಲ್ಲಿ ಹೆಸರಾದವರು.

ಕುಮಾರ-ತಾತಯ್ಯಂಗಾರರ ಪ್ರಭಾವ

ಇವರು ತಿರುಪತಿಯಲ್ಲೇ ಇರುತ್ತಿದ್ದರೆಂದು ತೋರುತ್ತದೆ. ತಿರುಪತಿಯಲ್ಲಿ ಹಲವಾರು ಗುಡಿಗಳು ಮೂಡಿಕೊಳ್ಳುವುದಕ್ಕೆ ಇವರೇ ಕಾರಣವೆನ್ನಬಹುದು—ಗೋವಿಂದ ಕೃಷ್ಣ (ಕ್ರಿಸ್ತಾಬ್ದ 1543), ವಿಟ್ಠಲ-ಪೆರುಮಾಳ್ (ಕ್ರಿಸ್ತಾಬ್ದ 1546), ಲಕ್ಷ್ಮೀ ನಾರಾಯಣ-ಪೆರುಮಾಳ್ (ಕ್ರಿಸ್ತಾಬ್ದ 1547), ಜನಾರ್ದನ-ಪೆರುಮಾಳ್ (ಕ್ರಿಸ್ತಾಬ್ದ

1548) ಮೊದಲಾದ ಗುಡಿಗಳು. ತಿರುಪತಿಯ ಹಿರಿಮೆಯೂ, ಶ್ರೀವೈಷ್ಣವ ಸಮುದಾಯದ ಪ್ರಾಬಲ್ಯವೂ, ಬೆಟ್ಟದ ಕೆಳಗಿನ ಕ್ಷೇತ್ರದ ಆಕರ್ಷಣೆಯೂ ಹೆಚ್ಚಿದುವು. ಈ ಆಚಾರ್ಯರಿಗೆ ಶಿಷ್ಯರಾಗಿದ್ದವರು ಅರಸರು, ಅಧಿಕಾರಿಗಳು ಮಾತ್ರವಲ್ಲ, ತಿರುವೀಧಿಸಾನಿಯರೂ (ಎಂಪೆರುಮಾನಡಿಯಾರರೂ) ಇದ್ದರು. ತಿಪ್ಪಾಸಾನಿಯ ಮಗಳು 'ತಿರುವೇಂಕಟಮಾಣಿಕ್ಕಂ', ಲಿಂಗಸಾನಿ, ಸೆಣ್ಬಕ ವೆಂಗು ಮೊದಲಾದವರು ಗುಡಿಗೆ ಸೇರಿದ ದೇವದಾಸಿಯರು. ಇವರಿಗೆ ಗುರು ಕುಮಾರ-ತಾತ-ಅಯ್ಯಂಗಾರ್; ಈ ಹೆಂಗಳೆಯರಿಗೆ ಚಕ್ರಾಂಕನವನ್ನು ಮಾಡಿ, ಇವರ ಮೈಯನ್ನು ದೇವರ ಸೇವೆಗೆಂದು ಶುದ್ಧಿಮಾಡಿ, ಮಂತ್ರೋಪದೇಶ ಮಾಡಿದವರು. ತಿರುಮಲೆಯ ಗುಡಿಯ ಇತಿಹಾಸದಲ್ಲಿ ದೇವದಾಸಿಯರು ಗಾಂಭೀರ್ಯದಿಂದ, ಘನತೆಯಿಂದ ನಡೆದುಕೊಂಡರೆಂದು ಹಿಂದೆಯೇ ಹೇಳಿದೆ. ಕುಮಾರ-ತಾತ-ಅಯ್ಯಂಗಾರ ವ್ಯಕ್ತಿತ್ವ ಉಜ್ಜ್ವಲವಾಗಿದ್ದಿತೆಂದು ಸುಲಭವಾಗಿ ಊಹಿಸಿಕೊಳ್ಳಬಹುದು. ಆದರೂ ಕೆಲವು ರಸಿಕ-ಶಿಖಾಮಣಿಗಳ ಉತ್ಸಾಹದಿಂದ ಅನುಚಿತವಾದ ಒಂದು ಪ್ರಸಂಗ ಬೆಟ್ಟದ ಮೇಲೆ ನಡೆದುಹೋಯಿತು, ದೇವರ ದಂಡಿಗೆಯು ದೇವದಾಸಿಯೊಬ್ಬಳಿಗೆ ದೊರೆತಿತ್ತು.

ದೇವರ ದಂಡಿಗೆಯ ದಾನ

'ತಿರುವೇಂಕಟಮಾಣಿಕ್ಕಂ' ಎಂಬುದು ತಿಪ್ಪಾಸಾನಿಯ ಮಗಳ ದಿಟವಾದ ಹೆಸರಲ್ಲ; 'ತಿರುವೇಂಕಟದಾಸಿ'ಯೆನ್ನುವ ಉಲ್ಲೇಖವಿದೆ. ಅವಳ ಸೋದರಿ ಲಿಂಗಿ ಅಥವಾ ಲಿಂಗಸಾನಿ, ಅವಳೂ ಗುಡಿಗೆ ಸೇರಿದ ತಿರುವೀಧಿಸಾನಿಯೇ. ಇಬ್ಬರೂ ಗುಡಿಗೆ ಹಲವಾರು ದಾನಧರ್ಮಗಳನ್ನು ನಡೆಸಿದ್ದಾರೆ. ಇವರಲ್ಲಿ ತಿರುವೇಂಕಟಮಾಣಿಕ್ಕಂ ಮೇಲೆ ಹೇಳಿದ ಪೊಂಡ್ಲಪಾಟಿ ತಿಮ್ಮರಾಜಯ್ಯನ ಗಮನವನ್ನು ಸೆಳೆದುಕೊಂಡಿದ್ದಳು. ಪೊಂಡ್ಲಪಾಟಿ-ತಿಮ್ಮರಾಜಯ್ಯನು ಕುಮಾರ-ತಾತ-ಅಯ್ಯಂಗಾರ ಶಿಷ್ಯನೇ. ಕ್ರಿಸ್ತಾಬ್ದ 1546ರ ಜುಲೈ 23ರಂದು ಸ್ಥಾನತ್ತಾರರು ಹೊರಡಿಸಿದ ಒಂದು ಶಾಸನ (ಬೆಟ್ಟದ ಗುಡಿಯ ಮೂರನೆಯ ಪ್ರಾಕಾರದ ಪಶ್ಚಿಮ ಗೋಡೆಯ ಮೇಲೆ ಇರುವುದು) ಈಕೆಯನ್ನು ಕುರಿತದ್ದು.

ಇದರಲ್ಲಿರುವ ಒಕ್ಕಣೆಯ ಪ್ರಕಾರ ಆಕೆಗೆ 'ತಿರುವೇಂಕಟಮಾಣಿಕ್ಕಂ' ಎಂಬ ಹೆಸರನ್ನು ವೇಂಗಡದೊಡೆಯನೂ ಅವನ ಪ್ರೇಯಸಿಯೆಂದು ಪ್ರಸಿದ್ಧಳಾದ ಅಲುಮೇಲು ಮಂಗೆಯೂ (ತಿರುಚ್ಚಾನೂರಿನ ಪದ್ಮಾವತಿಯೆಂದು ಹೆಸರಾದವಳು) ಅಭಿಮಾನದಿಂದ ಕೊಟ್ಟರು: "ತಿರುವೇಂಗಡಮುಡೈಯಾನುಂ ಅಲೈಮೇಲ್-ಮಂಗೈ ನಾಚ್ಚಿಯಾರುಂ ತನ್ನೈ ಅಭಿಮಾನಿತ್ತು ತಿರುವೇಂಕಟಮಾಣಿಕ್ಕಂ ಎನ್ರು ಪೇರ್ ಕುಡುಕ್ಕೈಯಿಲ್..." ಇದು ಯಾವುದೋ ಕಾವ್ಯದಲ್ಲಿ, ಪುರಾಣಕಥೆಯಲ್ಲಿ ಬಂದ ಮಾತಲ್ಲ; ಶಾಸನದಲ್ಲಿ ಗುಡಿಯ ಆಡಳಿತದವರು ಮಾಡಿರುವ ಒಕ್ಕಣೆ. ಉದಾರವಾಗಿ ದೇವರಿಗೆ ಧರ್ಮ ಮಾಡಿದ ಕೃಷ್ಣದೇವರಾಯನ ಮೇಲಾಗಲೀ ಅಚ್ಯುತರಾಯನ ಮೇಲಾಗಲೀ, ಕಡೆಗೆ ಆಗ

ನಾಡನ್ನಾಳುತ್ತಿದ್ದ ಸದಾಶಿವರಾಯನ ಮೇಲಾಗಲೀ ದೇವರು ಅಭಿಮಾನಿಸಲಿಲ್ಲ; ನಾಡಿನಲ್ಲಿ ಪ್ರಬಲನಾಗಿದ್ದ ಪ್ರಧಾನಿ ಅಳಿಯ-ರಾಮರಾಯನಿಗೆ ದೇವರು ಮುದ್ದಿನ ಹೆಸರೊಂದನ್ನು ನೀಡಲಿಲ್ಲ. ಈ ತಿರುವೀಧಿಸಾನಿಯನ್ನು ದೇವರೇ ಮೆಚ್ಚಿಕೊಂಡು ತನ್ನ 'ಮಾಣಿಕ್ಯ'ವೆಂದು ಕರೆದನಂತೆ! ಈ ಒಕ್ಕಣೆಯನ್ನು ಕಲ್ಲಿನ ಮೇಲೆ ಕಡೆಯಿಸುವ ಸಾಹಸ ಸ್ಥಾನತ್ತಾರರಿಗೆ ಬಂದುದು ಹೇಗೋ ತಿಳಿಯದು.

ಅಷ್ಟು ಮಾತ್ರವಲ್ಲ, ಈ ಹೆಂಗಸನ್ನು ದೇವತೆಯೇ ಮೆಚ್ಚಿಕೊಂಡಮೇಲೆ ಗುಡಿಯ ಆಡಳಿತದವರು ಹಿಂದುಳಿಯಬೇಕೆ? ಅವರೂ ಆಕೆಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಬೇಡವೆ? ದೇವರ ದಂಡಿಗೆಯನ್ನೇ ಆಕೆಗೆ ಬಹುಮಾನವಾಗಿ ಕೊಟ್ಟುಬಿಟ್ಟರು! ಶಾಸನ ಇದನ್ನು ಬಾಯಿಬಿಟ್ಟು ತಿಳಿಸುತ್ತದೆ; ಅದೂ ಹೆಮ್ಮೆಯ ಉಸಿರಿನಲ್ಲಿ. ಶಾಸನದಲ್ಲಿ ಈ ಭಾಗದ ಪಾಠ ಇರುವುದು ಹೀಗೆ—"ತಿಮ್ಮಯ-ಮಹಾರಾಜಾವುಂ ನಾಂಗಳುಂ ತನಕ್ಕು ದಂಡಿಗೈ ಇಡುಕೈಯಿಲ್ ತನಕ್ಕು ನಾಂಗಳ್ ತಿರುವೇಂಗಡಮುಡೈಯಾನ್ ಅಲೈಮೇಲ್‌ಮಂಗೈನಾಚ್ಚಿಯಾರ್ ತಿರುಕ್ಕೈವಳಕ್ಕಮಾಹ..."; '(ಪೊಟ್ಲಪಾಟಿ)-ತಿಮ್ಮಯ್ಯ ರಾಜನೂ ನಾವೂ (ಸ್ಥಾನತ್ತಾರರು) ದಂಡಿಗೆಯನ್ನು ದೇವರಿಂದ ಸಂದ ಗೌರವವೆಂದು ನಿನಗೆ ಕೊಟ್ಟಿದ್ದೇವೆ' ಎಂದು ತಾತ್ಪರ್ಯ. ಪೊಟ್ಲಪಾಟಿ-ತಿಮ್ಮಯ್ಯನದೇ ಪ್ರೇರಣೆ, ಒತ್ತಾಸೆಯೆಂಬುದು ಸ್ಪಷ್ಟವಾಗುವುದಿಲ್ಲವೆ? ಈ ಪೊಟ್ಲಪಾಟಿ-ತಿಮ್ಮಯ್ಯನು ಮಹಾಪ್ರಧಾನಿ ಅಳಿಯ-ರಾಮರಾಯನ ದೊಡ್ಡಪ್ಪ; ವೀರನರಸಿಂಹನ ಕಾಲದಿಂದ ಸದಾಶಿವರಾಯನ ಕಾಲದವರೆಗೂ ಆಡಳಿತದಲ್ಲಿ ದೊಡ್ಡ ಅಧಿಕಾರದಲ್ಲಿದ್ದವನು. ಪ್ರಭಾವಶಾಲಿಯಾದ ವ್ಯಕ್ತಿ ; ತಿರುಪತಿಯ ಗೋವಿಂದರಾಜನಿಗೆ ಹಲವು ಸೇವೆಗಳನ್ನು ಸಲ್ಲಿಸಿ, ಶ್ರೀವೈಷ್ಣವರ ಆದರಕ್ಕೆ ಪಾತ್ರನಾಗಿದ್ದವನು; ಕುಮಾರ-ತಾತ-ಅಯ್ಯಂಗಾರ ಶಿಷ್ಯ. ಹೀಗೆ ತನ್ನ ಗುರು-ಭಗಿನಿಯಂತಿದ್ದ ತಿರುವೇಂಕಟದಾಸಿಗೆ ಈ ಮರ್ಯಾದೆಯನ್ನು ದೊರಕಿಸಿಕೊಟ್ಟನು. ಸ್ಥಾನತ್ತಾರರೂ ಜಾಗರೂಕತೆಯಿಂದ ಶಾಸನದಲ್ಲಿ "ತಿಮ್ಮಯ್ಯ-ಮಹಾರಾಜನೂ ನಾವೂ" ಎಂದು ಅವನದೇ ಮೊದಲ ಉಲ್ಲೇಖವನ್ನು ಮಾಡಿ, ಅನಂತರ ತಮ್ಮ ಹೊಣೆಯನ್ನು ಕಾಣಿಸಿದ್ದಾರೆ. ಶಾಸನದ ಒಕ್ಕಣೆಯಲ್ಲಿ ಸ್ಥಾನತ್ತಾರರಿಗೆ ಇದು ಅನುಚಿತವಾದ ಕೆಲಸವೆಂಬ ಅರಿವಿದ್ದುದು ಧ್ವನಿಸುತ್ತದೆ.

ಉತ್ಸವಮೂರ್ತಿಗಳನ್ನು ಗುಡಿಯ ಆವರಣದೊಳಗೇ ವಿಶೇಷ ಸಂದರ್ಭಗಳಲ್ಲಿ ಅಲ್ಲಿಂದಿಲ್ಲಿಗೆ ಒಯ್ಯಲು ಗುಡಿಯ ದಂಡಿಯನ್ನು ಬಳಸುವುದು ವಾಡಿಕೆ; ಪಲ್ಲಕ್ಕಿಗಿಂತ ಅನುಕೂಲವಾದ ವಾಹನ. ದೇವರನ್ನು ಕೂರಿಸುವ ದಂಡಿಗೆಯ ಮೇಲೆ ತಿರುವೀಧಿ ಸಾನಿಯೊಬ್ಬಳು ಕೂಡಬಹುದೆಂದು ಗುಡಿಯ ಆಡಳಿತವು ನಿರ್ಧರಿಸಿತೆಂದರೆ ಆಶ್ಚರ್ಯ ವಲ್ಲವೆ? ಸಂಪ್ರದಾಯದ ಆಚಾರ-ವ್ಯವಹಾರಗಳು ಬಲವಾಗಿರುವ ಬೆಟ್ಟದ ಗುಡಿಯಲ್ಲಿ ಇಂಥ ಪ್ರಸಂಗ ಹಿಂದೆಂದೂ ನಡೆದುದಿಲ್ಲ. ಅಚ್ಯುತರಾಯನು ಗರ್ಭಗುಡಿಯಲ್ಲಿರುವ ದೇವರ ಶಂಖದಿಂದ ಅಭಿಷೇಕ ಮಾಡಿಸಿಕೊಂಡನೆಂಬ ವಿವರವನ್ನು ನಾವು ಹಿಂದೆ ಕಾಣಿಸಿದ್ದೇವೆ. ಇದರ ಉಲ್ಲೇಖ ಶಾಸನದಲ್ಲಿ ಎಲ್ಲಿಯೂ ಬರುವುದಿಲ್ಲ. ರಾಜನಾಥನ 'ಅಚ್ಯುತರಾಯಾಭ್ಯುದಯ'ವೆಂಬ ಕಾವ್ಯದಲ್ಲಿ ಇದರ ಪ್ರಸ್ತಾಪವಿದೆ—

ಪ್ರಣಾಮಶೀಲಃ ಫಣಿಶೈಲಶಾಸಿತುಃ ಕದಾಚಿದಗ್ರೇ ಕರಶಂಖವಾರಿಣಾ।
ಪಯೋಧಿಕಾಂಚೀಪರಿಣೇತೃತಾಸ್ಪದೇ ಪದೇऽಭಿಷಿಕ್ತಃ ಸ ಪರಂಪರಾಗತೇ॥

(3, 23)

ಒಂದು ವೇಳೆ ಇದು ದಿಟವಾಗಿ ನಡೆದಿದ್ದರೂ ಸ್ಥಾನತ್ತಾರರು ಅದನ್ನು ಶಾಸನದಲ್ಲಿ ಮೂಡಿಸುವ ಧೈರ್ಯವನ್ನು ಮಾಡಿರಲಾರರು; ಮಾಡಿದ್ದರೂ ತಪ್ಪಾಗುತ್ತಿರಲಿಲ್ಲ. ಅಚ್ಯುತರಾಯನು ತಾನೇ ದೇವರಿಗೆ ಸಹಸ್ರನಾಮಾರ್ಚನೆ ಮಾಡಿದುದೇನೋ ಶಾಸನದಲ್ಲಿ ಬಂದಿದೆ; ಅದು ಅರಸನ ಆದೇಶದಮೇಲೆ ಮೂಡಿಬಂದ ವಿವರ. ಎಷ್ಟಾದರೂ ಅರಸ; ಅವನನ್ನು ಸ್ಥಾನತ್ತಾರರು ಎದುರಿಸಬಲ್ಲರೆ? ಆದರೆ ತಿರುವೇಂಕಟದಾಸಿಗೆ ಅವರು ಅಂಜಬೇಕಾದ ಕಾರಣವಿರಲಿಲ್ಲ. ಅವಳ ಹಿಂದೆ ಬೆಂಬಲವಾಗಿ ಪೊಟ್ಲಪಾಟಿ-ತಿಮ್ಮಯ್ಯರಾಜನೂ, ಅವನ ಹಿಂದೆ ಮಹಾಪ್ರಧಾನಿ ಅಳಿಯ-ರಾಮರಾಯನೂ, ಅವನ ಹಿಂದೆ ಅರಸನಾದ ಸದಾಶಿವರಾಯನೂ ಇದ್ದುದರಿಂದ ಸ್ಥಾನತ್ತಾರರಿಗೆ ಕೊಂಚ ಅಳುಕಾಯಿತೆಂದು ತೋರುತ್ತದೆ.

ದೇವರೇ ಇವಳನ್ನು ಅಭಿಮಾನಿಸಿದನೆಂದಷ್ಟೇ ಅಲ್ಲ, ದೇವರ ದಂಡಿಗೆಯನ್ನೇ ಇವಳಿಗೆ ಒಪ್ಪಿಸಿದೆವೆಂದು ಮಾತ್ರವಲ್ಲ, ಶಾಸನವು ಇನ್ನೂ ಒಂದು ವಿವರವನ್ನು ಒಳಗೊಳ್ಳುತ್ತದೆ: ಇಷ್ಟು ಸಾಲದೆಂಬಂತೆ, ದಿನವೂ ದೇವರ ಪ್ರಸಾದವಾಗಿ ಒಂದು ತಳಿಗೆಯನ್ನು ಗುಡಿಯಿಂದ ಒಯ್ದು ತಿರುಪತಿಯಲ್ಲಿದ್ದ ಇವಳ ಮನೆಗೇ ಒಪ್ಪಿಸುವ ಏರ್ಪಾಟು ಶಾಸನದಲ್ಲಿದೆ. ಈ ಮರ್ಯಾದೆ ಆಚಾರ್ಯಪುರುಷರಿಗಾಗಲೀ ಸ್ಥಾನತ್ತಾರರಿಗಾಗಲೀ ಸಲ್ಲುತ್ತಿದ್ದಿತೋ ಇಲ್ಲವೋ! ಅಕೆಯದೊಂದು ಹೂದೋಟ ('ಅಲ್ಲೆಮೇಲ್ ಮಂಗೈನಾಚ್ಚಿಯಾರ್-ತೋಟ') ತಿರುಮಲೆಯಲ್ಲಿ ಇದ್ದಿತೆಂದೂ ಶಾಸನದಲ್ಲಿ ತಿಳಿದು ಬರುತ್ತದೆ; ಆ ತೋಟದಲ್ಲಿ ಕೆಲಸಮಾಡುವವನಿಗೂ ಒಂದು ತಳಿಗೆ ಪ್ರಸಾದ ಸಲ್ಲಬೇಕೆಂದು ಶಾಸನದ ವಿವರ.

ಈ ಪ್ರಸಂಗದಿಂದ ಗುಡಿಯ ಆಡಳಿತವು ತಿರುಪತಿಯಲ್ಲಿರುತ್ತಿದ್ದು ಪ್ರಭಾವ ಶಾಲಿಗಳಾದ ವ್ಯಕ್ತಿಗಳಿಗೆ ತಗ್ಗಿ ಬಗ್ಗಿ ನಡೆಯುವ ಪರಿಸ್ಥಿತಿ ಒದಗಿಬಂದಿದ್ದಿತೆಂದು ಊಹಿಸಿಕೊಳ್ಳಬಹುದು. ದೇವರಿಗಿಂತಲೂ ಗುಡಿ ದೊಡ್ಡದಾಯಿತು, ಗುಡಿಗಿಂತಲೂ ಆಡಳಿತ ದೊಡ್ಡದಾಯಿತು, ಆಡಳಿತಕ್ಕಿಂತಲೂ ಅಧಿಕಾರಿಗಳು ದೊಡ್ಡವರಾದರು, ಅಧಿಕಾರಿಗಳಿಗಿಂತಲೂ ಅವರು ಒಲಿದವರು ದೊಡ್ಡವರಾದರು. ವಿಜಯನಗರದ ಅರಸರ ಕಾಲದಲ್ಲಿ ಸ್ಥಾನತ್ತಾರರ ಸ್ವಾತಂತ್ರ್ಯ ಮೊಟಕಾದಂತೆ ತೋರುತ್ತದೆ. ಅರಸರು ನೇರವಾಗಿ ಗುಡಿಯ ವ್ಯವಹಾರದಲ್ಲಿ ಕೈಹಾಕಲಿಲ್ಲ, ನಿಜ. ಆದರೆ ಗುಡಿಯ ಆಗುಹೋಗುಗಳನ್ನು ನೋಡಿಕೊಳ್ಳಲೆಂದು ನೇಮಿತರಾದ ಕೋಯಿಲ್-ಕೆಳ್ವಿಗಳು (ಜೀಯ್ಯಂಗಾರರು), ಅಧಿಕಾರಿಗಳು, ಲೆಕ್ಕ-ಪತ್ರದವರು (ತಿರುನಿನ್ರ ಊರ್ ಉಡೈಯಾನರು), ಪಾರುಪತ್ಯದಾರರು—ಇವರೆಲ್ಲರ ಮೇಲೆ ರಾಜಕೀಯಪ್ರಭಾವಗಳು ಬೀಳದೆ ಇರುತ್ತಿರಲಿಲ್ಲ. ಅರ್ಚಕರನ್ನಂತೂ ಕೇಳುವವರೇ ಇರಲಿಲ್ಲ. ಅವರು ಹೇಳಿಕೇಳಿ

ವೈಖಾನಸಸಂಪ್ರದಾಯದವರು. ಅಂದಿನ ಧಾರ್ಮಿಕವಾತಾವರಣ ಅವರಿಗೆ ಅನುಕೂಲವಾಗಿರಲಿಲ್ಲ. ಪಾಂಚರಾತ್ರದ ಗಾಳಿಯೇ ಎಲ್ಲೆಲ್ಲಿಯೂ ಬೀಸುತ್ತಿದ್ದುದು. ತಿರುಮಲೆ-ತಿರುಪತಿಗಳ ಹಗರಣದಲ್ಲಿ ತಿರುಪತಿಯದೇ ಮೇಲುಗೈಯಾಗಿದ್ದಿತು.

ಗುಡಿಗೆ ನಡೆದುಕೊಂಡವರು

ಪೊಟ್ಲಪಾಟಿ-ತಿಮ್ಮರಾಜನು ತಿರುವೇಂಕಟಮಾಣಿಕ್ಯಂಗೆ ಗುಡಿಯ ಮರ್ಯಾದೆಗಳನ್ನು ಒದಗಿಸಿಕೊಟ್ಟನಲ್ಲವೆ? ಅವನ ಮಗ ವಿಟ್ಠಲರಾಜನು ಹೀಗಿರದೆ ನಾವು ಇಂದಿಗೂ ನೆನೆಸಿಕೊಳ್ಳಬಹುದಾದ ಕೆಲಸಗಳನ್ನು ಕೈಗೊಂಡನು. ಕ್ರಿಸ್ತಾಬ್ದ 1545ರ ಶಾಸನವೊಂದು ಅವನನ್ನು 'ಆರವೀಟಿ-ಬುಕ್ಕರಾಜ-ರಾಮರಾಜ-ತಿಮ್ಮರಾಜಯ್ಯನ ಮಗ ಶ್ರೀಮನ್-ಮಹಾಮಂಡಲೇಶ್ವರ ವಿಟ್ಠಲೇಶ್ವರ-ಮಹಾರಾಜ'ನೆಂದು ಬಣ್ಣಿಸಿ ಅವನ ಸೇವೆಯನ್ನು ವಿಸ್ತಾರವಾಗಿ ಬಣ್ಣಿಸುತ್ತದೆ. ಅವನು ಗುಡಿಗೆ ಪಾಲಮಂಗಲಂ, ಪರಣೂರು, ವೇಣಕತ್ತೂರು ಎಂಬ ಮೂರು ಗ್ರಾಮಗಳನ್ನು (ಒಟ್ಟು ವಾರ್ಷಿಕ ಆದಾಯ ಒಂದು ಸಾವಿರ ರೇಖೆ-ಪೊನ್ನುಗಳು) ಕೊಟ್ಟು ಬೆಟ್ಟದ ಗುಡಿಯಲ್ಲಿ ವೈಕಾಶಿಮಾಸದಲ್ಲಿ ಐದು ದಿನಗಳ ಪಲ್ಲವೋತ್ಸವವನ್ನು ನಡೆಸುವ ಏರ್ಪಾಟು ಮಾಡಿದನು. ಅದಕ್ಕೆ ಸಂಬಂಧಪಟ್ಟಂತೆ ಸಾಮಗ್ರಿಗಳಿಗೂ ವಿಧಿಗಳಿಗೂ ಉತ್ಸವಗಳಿಗೂ ನೆರವಾಗುವ ವ್ಯಕ್ತಿಗಳಿಗೂ ಎಷ್ಟೆಷ್ಟು ಹಣಸಲ್ಲಬೇಕೆನ್ನುವ ವಿವರಗಳು ಶಾಸನದಲ್ಲಿವೆ. ನಮಗೆ ಸ್ವಾರಸ್ಯವಾದ ವಿವರವೆಂದರೆ ವಿಟ್ಠಲರಾಜನ ಗಮನ ಬಡಯಾತ್ರಿಕರ ಮೇಲೆ ಹರಿದುದು. ಪುರಟ್ಟಾಶಿ-ಬ್ರಹ್ಮೋತ್ಸವದ ಸಂದರ್ಭದಲ್ಲಿ ಹತ್ತು ದಿನಗಳೂ ಗುಡಿಗೆ ಬರುವ ಬಡಯಾತ್ರಿಕರಿಗೆಲ್ಲ ಉಚಿತವಾಗಿ ಬಟ್ಟೆಗಳನ್ನು ಕೊಡಲೆಂದು ಅರವತ್ತಾರು ರೇಖೆ-ಪೊನ್ನುಗಳನ್ನೂ ಆರೂಕಾಲು ಪಣಗಳನ್ನೂ ನಿಗದಿಮಾಡಿದನು. ಗುಡಿಯೆದುರು ಹತ್ತೂ ದಿನಗಳು ಅರವಟ್ಟಿಗೆಯೊಂದನ್ನು ಇರಿಸಿ, ಬಂದವರಿಗೆಲ್ಲ ನೀರು-ಮಜ್ಜಿಗೆ ನೀಡುವ ವ್ಯವಸ್ಥೆಯನ್ನೂ ಈತನು ಮಾಡಿದನು. ದೇವರಿಗೆ ದಿನವೂ ಸಲ್ಲುವ ತಿರುಪ್ಪೋನಕ, ತಿರುಪ್ಪಾವಡೆ, ತಿರುಕ್ಕಣ್ಣಾಮಡೈ (ಮನೋಹರ-ಪಡಿ), ಸುಖಿಯನ್-ಪಡಿ, ಮತ್ತು ಅಪ್ಪಳಾಂಪಡಿ ಇವುಗಳೊಂದಿಗೆ ಎರಡು ಕೊಡ ನೀರುಮಜ್ಜಿಗೆಯನ್ನು ಸಮರ್ಪಿಸುವ ಏರ್ಪಾಟು ಈ ಶಾಸನದಲ್ಲಿ ಕಾಣುತ್ತದೆ.

ತಂದೆಯ ಗುರು ಶೊಟ್ಟೈ-ನಂಬಿ ಮನೆತನದ ಕುಮಾರ-ತಾತ-ಅಯ್ಯಂಗಾರರು; ಆದರೆ ಮಗನ ಗುರುವನ್ನು ಶಾಸನವು ಕಂದಾಡೈ-ಭಾವನಾಚಾರ್ಯರ ಮಗ ಶ್ರೀರಂಗಾಚಾರ್ಯನೆಂದು ಹೇಳುತ್ತದೆ (**ತಮ್ಮಿಡ ಆಚಾರಿಯರ್**....). ವಾಧೂಲಗೋತ್ರದ ಕೋಯಿಲ್-ಕಂದಾಡೈ-ಪೆರಿಯ-ಅಪ್ಪನ್ ಎಂಬುವರ ಮೊಮ್ಮಗನಾದ ಭಾವನಾಚಾರ್ಯರು ತಿರುಮಲೆ-ತಿರುಪತಿಗುಡಿಗಳ ಆಚಾರ್ಯಪುರುಷರಲ್ಲಿ ಒಬ್ಬರು, ತಿರುಪತಿಯಲ್ಲೇ ವಾಸವಾಗಿದ್ದವರು; 'ನಾಟ್ಟು-ಶ್ರೀವೈಷ್ಣವ'ಪಂಗಡಕ್ಕೆ ಸೇರಿದ್ದವರೆಂದು ತೋರು

ತ್ತದೆ. ಇವರ ಮಗ ಶ್ರೀರಂಗಾಚಾರ್ಯನು ಗುಡಿಯ ಶ್ರೀಭಂಡಾರಕ್ಕೆ ಒಂದು ಸಾವಿರದ ಐನೂರು ಪಣಗಳನ್ನು ಸಲ್ಲಿಸಿ ವೇಂಕಟೇಶನಿಗೂ ಗೋವಿಂದರಾಜನಿಗೂ ದೋಸೆ-ಪಡಿಗಳನ್ನು ಸಮರ್ಪಿಸುವ ಏರ್ಪಾಟು ಮಾಡಿದ ಶಾಸನವೊಂದಿದೆ (ಕ್ರಿಸ್ತಾಬ್ದ 1545ರದ್ದು). ಈ "(ತಿರುಪತಿ)-ಕಂದಾಳ ಶ್ರೀರಂಗಾಚಾರಿಲಯ್ಯವಾರಿ"ಯ ಶಿಷ್ಯೆ (ತಮಿಳುಶಾಸನದಲ್ಲಿ 'ಶಿಷಿ'ಯೆಂದಿದೆ, ಸಂಪಾದಕರು ಅಡಿಟಿಪ್ಪಣಿಯಲ್ಲಿ 'ಶಿಷ್ಯಸ್ತ್ರೀ' ಯೆಂದು ಓದಬೇಕೆಂದು ಸೂಚಿಸಿದ್ದಾರೆ) ತಿರುವೆಂಕಟ-ಕೊರ್ರಿ ಎಂಬಾಕೆ ತನ್ನ ಉಭ್ಬೆಯ ವೆಂದು ಗುಡಿಗೆ ನಲವತ್ತು ಪಣಗಳನ್ನು ಸಲ್ಲಿಸಿ ತಿರುಪತಿಯಲ್ಲಿದ್ದ ವಿಟ್ಠಲೇಶ್ವರನಿಗೆ ಒಂದು ಮನೋಹರಪ್ಪಡಿಯನ್ನು ಸಮರ್ಪಿಸುವಂತೆ ಶಾಸನವನ್ನು ಬರೆಸಿದ್ದಾಳೆ.

ಇನ್ನೊಬ್ಬ ಆಚಾರ್ಯರೂ ಆ ಕಾಲದಲ್ಲಿ ಹೆಸರಾಗಿದ್ದವರು—ವೇದಾಂತ ಶಠಕೋಪ-ಜೀಯರ್; ಇವರು ಆದಿ-ವಣ್-ಶಠಕೋಪ ಜೀಯರು ಏರ್ಪಡಿಸಿದ ಅಹೋಬಲಮಠದ ಪರಂಪರೆಯಲ್ಲಿ ಐದನೆಯವಾಗಿ ಬಂದವರು. ಅವರ ಕಾಲ ಕ್ರಿಸ್ತಾಬ್ದ 1552ರಿಂದ 1558ರವರೆಗೆ. ಇವರು ಇರುತ್ತಿದ್ದುದು ತಿರುಪತಿಯಲ್ಲಿಯೇ. ಇವರು ಅರವೀಡುವಂಶದೊಂದಿಗೆ ನಂಟನ್ನು ಪಡೆದಿದ್ದ ನಂದ್ಯಾಲ-ಮನೆತನದ ನಾಯಕರ ಆಚಾರ್ಯರಾಗಿದ್ದವರು. ಇವರ ಶಿಷ್ಯರಲ್ಲಿ ಒಬ್ಬ ನಾರಪ್ಪರಾಜನೆಂಬುವನು ತಿರುಪತಿಯ ಗೋವಿಂದರಾಜನ ಗುಡಿಯ "ಚಿತ್ರಕೂಟಮಂಟಪ"ದಲ್ಲಿ ಶಿಲಾದ್ವಾರ ಪಾಲಕರನ್ನು ನಿಲ್ಲಿಸಿ, ಅವರಿಗೆ ನಿತ್ಯನಿಮಂದನ ನಡೆಯುವ ಏರ್ಪಾಟು ಮಾಡಿದನು. ಆ ಕಾಲಕ್ಕೆ ಬೆಟ್ಟದ ಗುಡಿಯಲ್ಲಿ ದ್ವಾರಪಾಲಕರಿದ್ದರೋ ಇಲ್ಲವೋ ತಿಳಿಯುವುದಿಲ್ಲ. ಅಲ್ಲಿ ದ್ವಾರಪಾಲಕರ ಶಿಲಾಮೂರ್ತಿಗಳು ಈಗಲೂ ಇಲ್ಲ. ಅಲ್ಲಿನ ತಿರುಮಾಮಣಿ ಮಂಟಪದಲ್ಲಿ ಬಂಗಾರುಬಾಗಿಲಿನ ಪಕ್ಕ ಕಾಣುವ ದ್ವಾರಪಾಲಕರ ಭವ್ಯಪ್ರತಿಮೆಗಳು ಲೋಹದವು, ಅಷ್ಟು ಪ್ರಾಚೀನವಾದುವಲ್ಲ.

ವಿಜಯನಗರಸಾಮ್ರಾಜ್ಯದ ಅಡಿಪಾಯ ಸಡಿಲವಾಗುತ್ತಿರುವಾಗ ಅರಸರಾಗಿದ್ದ ಅರವೀಡು-ತಿರುಮಲರಾಜ, ಶ್ರೀರಂಗ, ವೇಂಕಟಪತಿರಾಯ ಮೊದಲಾದವರು ಗುಡಿಗೆ ಹೆಚ್ಚಿನ ಕೈಂಕರ್ಯವನ್ನು ಸಲ್ಲಿಸುವ ಸ್ಥಿತಿಯಲ್ಲಿರಲಿಲ್ಲ. ತಿರುಮಲರಾಜನು ಅಳಿಯ-ರಾಮರಾಯನ ತಮ್ಮ. ಸದಾಶಿವರಾಯನೊಂದಿಗೆ ತುಳುವವಂಶದ ದೊರೆತನ ಮುಗಿದಮೇಲೆ ಅರಸನಾದವನು ಇವನೇ, ಕ್ರಿಸ್ತಾಬ್ದ 1567ರ ಸುಮಾರಿಗೆ. ಸುಮಾರು ಹತ್ತು ವರ್ಷಗಳ ಕಾಲ ಇವನು ಆಳಿದುದು. ಈ ಆಳ್ವಿಕೆಯ ಕಡೆಗಾಲದಲ್ಲಿ (1575 ರಲ್ಲಿ) ಇವನು ಗುಡಿಯ ಆವರಣದೊಳಗೆ ಮಂಟಪವೊಂದನ್ನು ಕಟ್ಟಿಸಿದ ಅಷ್ಟೆ. ಇದು "ತಿರುಮಲರಾಯ-ಮಂಟಪ"ವೆಂದು ಹೆಸರಾಗಿದೆ. ಇದು ಹೊಸ ಮಂಟಪವೂ ಅಲ್ಲ, ಹಿಂದೆಯೇ ಇದ್ದ ಮಂಟಪವೊಂದರ ವಿಸ್ತರಣವಷ್ಟೆ. ಕ್ರಿಸ್ತಾಬ್ದ 1473ರ ಸುಮಾರಿಗೆ ಸಾಳುವ-ನರಸಿಂಹನು ಗುಡಿಯಲ್ಲಿ ಉತ್ಸವಮೂರ್ತಿಗೆ ಉಯ್ಯಾಲೋತ್ಸವ ವನ್ನು (ಅನ್ನ-ಊಂಜಲ್ ತಿರುನಾಳನ್ನು) ನಡೆಸುವುದಕ್ಕಾಗಿ 'ರಂಗನಾಯಕನ ಮಂಟಪ'ಕ್ಕೆ ಸೇರಿಕೊಂಡಂತೆ ಮಂಟಪವೊಂದನ್ನು ಕಟ್ಟಿಸಿದ್ದನು. ಗುಡಿಯ ತಲೆಬಾಗಿಲಿನಿಂದ ಒಳ ಹೊಕ್ಕರೆ ನಮ್ಮ ಎಡಭಾಗದಲ್ಲಿ ಮೊದಲೇ ಕಾಣುವುದು 'ರಂಗನಾಯಕನ ಮಂಟಪ';

ಅದರ ಪಕ್ಕದಲ್ಲಿ 'ಸಾಳುವ-ಮಂಟಪ'. ಈಗ 'ತಿರುಮಲರಾಯ-ಮಂಟಪ'ವೆಂದು ಕರೆಸಿಕೊಳ್ಳುವ ಮಂಟಪದ ದಕ್ಷಿಣಭಾಗವೇ 'ಸಾಳುವ-ಮಂಟಪ', ಮೊದಲಿದ್ದುದು.

ವೇಂಕಟಪತಿರಾಯ

ತಿರುಮಲರಾಜನ ಕಡೆಯ ಮಗ ವೇಂಕಟಪತಿರಾಯನು ಕ್ರಿಸ್ತಾಬ್ದ 1586ರ



ವೇಂಕಟಪತಿರಾಯ

ಸುಮಾರಿಗೆ ಪಟ್ಟವೇರಿ 1615ರವರೆಗೂ ಆಳಿದವನು. ಇವನು ವೇಂಗಡದೇವರ ಭಕ್ತನೆಂದು ಪ್ರತೀತಿಯಿದೆ. ಆದರೆ ಗುಡಿಗಾಗಲೀ ದೇವರಿಗಾಗಲೀ ಏನೊಂದು ಸೇವೆಯನ್ನೂ ಇವನು ಸಲ್ಲಿಸಲಿಲ್ಲ. ಇವನ ಕಾಲದಲ್ಲಿ "ಶ್ರೀವೇಂಕಟೇಶಾಯ ನಮಃ" ಎಂಬ ಬರಹವುಳ್ಳ ನಾಣ್ಯಗಳು ಚಲಾವಣೆಗೆ ಬಂದುವು. ಈ ನಾಣ್ಯಗಳ ಮೂಲ ಇವನು ರಾಜ್ಯದ ವೆಚ್ಚಕ್ಕೆ ಗುಡಿಯ ಕೊಪ್ಪರಿಗೆಯಿಂದ ಹಣವನ್ನು ಬಳಸಿಕೊಂಡುದೇ ಎಂದು ವಿವರಣೆಯೊಂದಿದೆ. ವಿಜಯನಗರದ ಸಾಮ್ರಾಜ್ಯವು ಅಂದು ಬೆಟ್ಟದ ಗುಡಿಗಿಂತಲೂ ಬಡತನದಲ್ಲಿದ್ದುದು ದಿಟವೇ, ಗುಡಿಯ ಆಡಳಿತದಲ್ಲಿ ರಾಜಕೀಯ ಪ್ರಭಾವವಿದ್ದುದೂ ದಿಟವೇ. ವೇಂಕಟಪತಿರಾಯನ ಕಷ್ಟದಲ್ಲಿ ವೇಂಕಟೇಶನು ನೆರವಾಗಿದ್ದರೆ ಆಶ್ಚರ್ಯವಲ್ಲ. ಎಷ್ಟಾದರೂ ಭಕ್ತಪರಾಧೀನನಲ್ಲವೆ? ಕೃಷ್ಣದೇವರಾಯನಂತೆ ದೇವರಿಗೆ ಏನೊಂದು ಕೈಂಕರ್ಯವನ್ನು ನಡೆಸದಿದ್ದರೂ, ವೇಂಕಟಪತಿರಾಯನು ಕೃಷ್ಣದೇವರಾಯನಂತೆ ತನ್ನ ಭಕ್ತವಿಗ್ರಹವನ್ನೇನೋ ಗುಡಿಯಲ್ಲಿ ನಿಲ್ಲಿಸಿಕೊಂಡ. ಗುಡಿಯ ತಲೆಬಾಗಿಲಿನ ಒಳಭಾಗದಲ್ಲಿ ಎಡಗಡೆ ತಿರುಗಿದರೆ ಈ ಲೋಹಮೂರ್ತಿಯನ್ನು ಕಾಣುತ್ತೇವೆ. ಅದರ ಬಲಭುಜದ ಮೇಲೆ ತೆಲುಗಿನಲ್ಲಿ "ವೇಂಕಟಪತಿರಾಯಲು" ಎಂಬ ಬರಹವೂ ಇದೆ. ಇದರ ಪಕ್ಕದಲ್ಲಿ ಇನ್ನೊಬ್ಬ ಅರಸನ ಮತ್ತು ಅವನ ಅರಸಿಯ ಶಿಲಾವಿಗ್ರಹಗಳಿವೆ. ಇದನ್ನು ಅಚ್ಯುತರಾಯ-ವರದಾಜಿ-ಅಮ್ಮ ಎಂದೂ ತಿರುಮಲ ರಾಜ-ವೇಂಗಳಾಂಬ ಎಂದೂ ಬೇರೆಬೇರೆಯಾಗಿ ನಿರ್ದೇಶಿಸುತ್ತಾರೆ. ವಿಗ್ರಹಗಳ ಮೇಲೆ ಬರಹಗಳೇನೂ ಇಲ್ಲ. ಅರಸನ ಹಣೆಯ ಮೇಲೆ ಮೂಡಿರುವ ವಡಗಲೆನಾಮದಿಂದ ತಿರುಮಲರಾಜನೆಂದು ಹೇಳುವವರಿದ್ದಾರೆ!

ಮಟ್ಲಕುಮಾರ-ಅನಂತರಾಜ

ವಿಜಯನಗರಸಾಮ್ರಾಜ್ಯದ ಈ ಕಡೆಗಾಲದಲ್ಲಿ ಗುಡಿಗೆ ಕೈಂಕರ್ಯವನ್ನು ಸಲ್ಲಿಸಿದವರಲ್ಲಿ ಮಟ್ಲಿ-(ಮಟ್ಲ-)ಕುಮಾರ-ಅನಂತರಾಜನೆಂಬುವನು ಪ್ರಸಿದ್ಧನಾಗಿದ್ದಾನೆ. ದೇವಚೋಡ-ವಂಶದ ಮಟ್ಲ-ವರದರಾಜನೆಂಬುವನು ಕೃಷ್ಣದೇವರಾಯನ ಅಳಿಯನಾದ ಅಳಿಯ-ರಾಮರಾಯನ ಷಡ್ಡಕ. ಇವನ ಸೋದರ ತಿರುವೇಂಗಳನಾಥನ ಮಗ 'ದೇವಚೋಡ ಮಹಾರಾಜುಲಯ್ಯ' ಮಟ್ಲ-ಕುಮಾರ-ಅನಂತರಾಜಯ್ಯ. ಇವನನ್ನು ಶಾಸನಗಳು "ಶ್ರೀಮನ್ಮಹಾಮಂಡಲೇಶ್ವರ"ನೆಂದು ಒಕ್ಕಣಿಸುತ್ತವೆ. ಕಡಪ-ಸೀಮೆಯ ಪೂರ್ವಭಾಗವನ್ನು ಇವನು ಆಳುತ್ತಿದ್ದಂತೆ ಉಲ್ಲೇಖವಿದೆ. ಈ ಪ್ರಾಂತ್ಯಕ್ಕೆ "ಮಟ್ಲವಾರಿ ಸೀಮ" ಎಂದೇ ಹೆಸರಿದ್ದಿತು. ಕಡಪ ಜಿಲ್ಲೆಯ ರಾಯಚೋಡಿ ತಾಲೂಕಿನಲ್ಲಿ ಮಟ್ಲ ಒಂದು ಗ್ರಾಮ. ಅಹೋಬಲದಿಂದ ತಿರುಮಲೆಯವರೆಗೂ ಅವನ ಆಳ್ವಿಕೆಯ ಹರವಿದ್ದಿತೆಂದೂ ಶಾಸನ ತಿಳಿಸುತ್ತದೆ. ಏನಾದರಿರಲಿ, ಇವನು ತಿರುಮಲೆ ಮತ್ತು ತಿರುಪತಿಗಳಲ್ಲಿ ನಡೆಸಿದ ಕೈಂಕರ್ಯವನ್ನು ಯಾರೂ ಮರೆಯುವಂತಿಲ್ಲ. ಬೆಟ್ಟವನ್ನೇರುವ ಮೊದಲೇ ಕಾಣುವ "ಕೊತ್ತಗೋಪುರ", ಬೆಟ್ಟವನ್ನೇರುವುದು ಮುಗಿದ ಸ್ಥಳದಲ್ಲಿ

"ಗಾಳಿಗೋಪುರ" (ಅಗ್ರಗೋಪುರ), ಬೆಟ್ಟದ ಮೇಲೆ "ಉನ್ನತಕೇಳಿ-ಮಂಟಪ", ಸೋಪಾನಮಾರ್ಗಗಳು, ಬೆಟ್ಟದ ಕೆಳಗೆ ತಿರುಪತಿಯಲ್ಲಿ ಗೋವಿಂದರಾಜನ ಗುಡಿಗೆ ರಾಜಗೋಪುರ, ಬೆಟ್ಟದ ತಪ್ಪಲಿನಲ್ಲಿ ಆಳ್ವಾರ್‌ತೀರ್ಥದ ಬಳಿ ಅನ್ನಸತ್ರ ಮೊದಲಾದುವೆಲ್ಲ ಇವನ ಕಟ್ಟಡಗಳೇ (ಕ್ರಿಸ್ತಾಬ್ದ 1628ರ ಸುಮಾರಿನಲ್ಲಿ). ಬೆಟ್ಟದ ದೇವರಿಗೆ ರತ್ನಾಢ್ಯ-ಮುಕುಟವನ್ನೂ ನೈವೇದ್ಯಭಾಜನವನ್ನೂ (ಎಂದರೆ, ಎಡೆಯಿಡುವ ತಟ್ಟೆ) ಸಮರ್ಪಿಸಿದನು. ಗುಡಿಯಲ್ಲಿ ನಡೆಯುವ ಉತ್ಸವಗಳಿಗಾಗಿ ಬಂಗಾರದ ಕುದುರೆ, ಆನೆ, ಸಮರಭೂಪಾಲ ಎಂಬ ಮೂರು ವಾಹನಗಳನ್ನೂ ಮಾಡಿಸಿಕೊಟ್ಟನು. ಇವಲ್ಲದೆ ರಜತದಾನ, ತುಲಾದಾನ, ಗೋದಾನ, ಭೂದಾನಗಳನ್ನೂ ನಡೆಸಿದ ಉಲ್ಲೇಖವಿದೆ.

ಅನಂತರಾಜನ ಧರ್ಮಗಳು ಅವನ ಸಂಪತ್ತನ್ನು ತೋರಿಸುವುದಕ್ಕೆಂದು ಸಿದ್ಧವಾದುವಲ್ಲ. ಯಾತ್ರಿಕರ ಅನುಕೂಲವನ್ನು ಗಮನದಲ್ಲಿರಿಸಿಕೊಂಡು ಮಾಡಿದ ಕೈಂಕರ್ಯಗಳು ಅವನವು ಹಲವಿವೆ. ಹನ್ನೆರಡು ನಗರಗಳಲ್ಲಿ ಉಚಿತವಾದ ಊಟ ದೊರೆಯುವಂತೆ ಅನ್ನಸತ್ರಗಳನ್ನು ಕಟ್ಟಿಸಿದನು. ಅವುಗಳಲ್ಲಿ ಎರಡು ತಿರುಪತಿ ಊರಿನಲ್ಲಿದ್ದುವು: ಒಂದು ಬೆಟ್ಟವನ್ನೇರುವ ಮೊದಲು ಆಳ್ವಾರ್‌ತೀರ್ಥದ ಬಳಿಯಿದ್ದಿತು; ಇನ್ನೊಂದು ಬೆಟ್ಟದ ಮೇಲೆ 'ಶೇಷಾಚಲಕುರುವ' ಎಂಬಲ್ಲಿದ್ದಿತು. ಸೋಪಾನ ಮಾರ್ಗಗಳೂ ಗೋಪುರ-ಮಂಟಪಗಳೂ ಯಾತ್ರಿಕರ ಹಿತವನ್ನು ಹೆಚ್ಚಿಸಲೆಂದೇ. ಇವನ ಧರ್ಮಶಾಸನಗಳಲ್ಲಿ ವಿಜಯನಗರದ ಅರಸನಾಗಿದ್ದವನ ಹೆಸರು ಕಾಣಬರುವುದಿಲ್ಲ, ಸ್ಥಾನತ್ತಾರರ ಪ್ರಸ್ತಾಪ ಬರುವುದಿಲ್ಲ. ತನ್ನ ಧರ್ಮಗಳನ್ನು ನಿರ್ವಹಿಸುವ ಹೊಣೆಯನ್ನು ಇವನು ಸ್ಥಾನತ್ತಾರರಿಗೆ ಬಿಡದೆ, ತನ್ನ ಕಡೆಯವನಾದ ಕೊಂಡಯ್ಯನೆಂಬುವನಿಗೆ ಒಪ್ಪಿಸಿರುವುದು ಗಮನಾರ್ಹವಾದುದು. ಅರಸರ ವಿಚಾರವಾಗಿ ಅವನಿಗಿದ್ದ ಅಸಡ್ಡೆಯನ್ನೂ ಸ್ಥಾನತ್ತಾರರ ವಿಚಾರವಾಗಿ ಅವನಿಗಿದ್ದ ಸಂದೇಹವನ್ನೂ ನಾವು ಊಹಿಸಿಕೊಳ್ಳಬಹುದು.

ಇವನು ಶಾಸನದಲ್ಲಿ ತನ್ನನ್ನು "ಶ್ರೀವೇಂಕಟೇಶ್ವರಸೇವಾಧುರಂಧರ"ನೆಂದು ಕರೆದುಕೊಂಡಿದ್ದರೂ ಅವನ ಕೈಂಕರ್ಯಗಳು ತಿರುಮಲೆ-ತಿರುಪತಿಗಳಲ್ಲಿ ಮಾತ್ರವಲ್ಲದೆ ಉದಯಗಿರಿ, ತಿರುವಳ್ಳೂರು, ಕಾಳಹಸ್ತಿ, ಪುಷ್ಪಗಿರಿ, ವೊಂಟಿ-ಮಿಟ್ಟ, ಸಿದ್ಧವಟ (ಕಡಪಾ ಬಳಿ), ಚಂದ್ರಗಿರಿ ಮೊದಲಾದ ಕಡೆಗಳಲ್ಲಿಯೂ ನಡೆದುವು. ಸೇತುವಿನಿಂದ ಶೀತಾಚಲದವರೆಗೆ (ಎಂದರೆ, ರಾಮೇಶ್ವರದಿಂದ ಬದರಿಯವರೆಗೆ) ಯಾತ್ರೆ ಮಾಡುವವರು ಸಂತೋಷಪಡುವಂತೆ ಅನ್ನ-ದಾನ-ಧರ್ಮಗಳನ್ನು ಕೈಗೊಳ್ಳುವುದು ಇವನ ಬಯಕೆಯಂತೆ ("ಆಸೇತುಶೀತಾಚಲಾಯಾತ-ಪಥಿಕ-ಸಕಲಜನಾನಂದ-ಸಂಧಾನ-ಬಂಧುರ-ಷಡ್ರಸೋಪೇತಾನ್ನಸತ್ರದಾತ"). ಆದರೂ ಅವನ ಒಲವಿದ್ದುದು "ಪ್ರಬಲತರ-ಶೇಷ-ಭೂಧರ-ಪ್ರಾಂತ", ಎಂದರೆ ವೇಂಗಡದ ಬೆಟ್ಟದ ಮೇಲೇ. ತಿರುಪತಿಯಿಂದ ಬೆಟ್ಟಕ್ಕೆ ಹೋಗುವ ದಾರಿಯಲ್ಲಿ, ಎಂದರೆ ಅಲಿಪಿರಿಯಲ್ಲಿ, ವೇಂಗಡದೊಡೆಯನ ವಿಗ್ರಹವನ್ನು ಪ್ರತಿಷ್ಠೆಮಾಡಿದನೆನ್ನುವ ವಿವರ ಶಾಸನದಲ್ಲಿದೆ (**ತಿರುಪತಿಮಾರ್ಗ-ಕುರುವ-ಪ್ರತಿಷ್ಠಿತ-ವೇಂಕಟಾಧೀಶ್ವರ-ವಿಗ್ರಹುಂಡು**). ಅವನ ಕಾಲದಲ್ಲಿ



ವೇಂಕಟಪತಿರಾಯ

ಕಡಪಾನಗರದಲ್ಲಿ "ರಮಾವಿಭು", ಎಂದರೆ ವೇಂಕಟೇಶನ ಗುಡಿಯೊಂದಿದ್ದಿತಂತೆ; ಅದಕ್ಕೆ ಅವನು ಪ್ರಾಕಾರವನ್ನೂ ಗೋಪುರವನ್ನೂ ಕಟ್ಟಿಸಿದನಂತೆ. ವೇಂಗಡದೊಡೆಯನ ಮೂರ್ತಿಗಳೂ ಗುಡಿಗಳೂ ಇತರೆಡೆಗಳಲ್ಲಿ ಮೂಡಿಕೊಳ್ಳುವ ಪದ್ಧತಿ ಮೊದಲಾದುದು ಈ ಮಟ್ಲ-ಕುಮಾರ-ಅನಂತರಾಜನ ಕಾಲದಿಂದ ಎನ್ನಬಹುದು.

ಉತ್ಸವಗಳ ಮೇಲಾಟ

ವಿಜಯನಗರಸಾಮ್ರಾಜ್ಯದ ಪಾಡು ಹೇಗೇ ಇರಲಿ, ಅರಸರ ಪರದಾಟ ಎಷ್ಟೇ ಇರಲಿ, ಅಧಿಕಾರಿಗಳ ಅತಂತ್ರ ಏನೇ ಇರಲಿ ಈ ಗುಡಿಯ ವೈಭವವಂತೂ ಹೆಚ್ಚುತ್ತಲೇ ಬಂದಿತು. ವರ್ಷಕ್ಕೊಮ್ಮೆ ನಡೆಯಬೇಕಾದ ಬ್ರಹ್ಮೋತ್ಸವ ತಿಂಗಳಿಗೊಂದರಂತೆ ನಡೆಯತೊಡಗಿತು, ತಿಂಗಳ-ದಿವಸಗಳು ವಾರವಾರವೂ ನಡೆಯತೊಡಗಿದುವು, ವಿಶೇಷೋತ್ಸವಗಳ ಸಂಖ್ಯೆ ವರ್ಷದ ದಿನಗಳ ಸಂಖ್ಯೆಯನ್ನು ಮೀರಿತು. ವರ್ಷದಲ್ಲಿ

ನಾನ್ನೂರಕ್ಕೂ ಮೀರಿ ಉತ್ಸವಗಳು ಗುಡಿಯಲ್ಲಿ ನಡೆಯಬೇಕಾದುವು! ಹಳೆಯ ಉತ್ಸವಗಳು ಸಾಕಾಗದೆ ದಾನಿಗಳು ಹೊಸ ಹೊಸ ಉತ್ಸವಗಳನ್ನು ಆಲೋಚಿಸಿಕೊಂಡು ಗುಡಿಯ ಮೇಲೆ ಪ್ರಯೋಗಿಸತೊಡಗಿದರು—ವಿಟ್ಠಲರಾಜನ ಪಲ್ಲವೋತ್ಸವ, ತಾಳ್ಳಪಾಕಂ ತಿರುಮಲ-ಅಯ್ಯಂಗಾರ ವೈವಾಹಿಕೋತ್ಸವ, ಪೆಂಡಿಲಿಕೊಡಕು ತಿಮ್ಮರಾಜನ ವಸಂತೋತ್ಸವ, ಹೀಗೆ. ಉತ್ಸವಗಳೆಂದರೆ ಸಿಬ್ಬಂದಿ, ಸಾಮಗ್ರಿ, ಸೇವೆಗಳು, ಇವಕ್ಕಿಂತ ಮುಖ್ಯವಾಗಿ ನಿಮಂದನಗಳು, ಹಲವಾರು ಓಗರೆಗಳು, ಹತ್ತಾರು ಪಡಿಗಳು, ವಡೆಗಳು, ತಳಿಗೆಗಳು; ಉತ್ಸವದ ಸಂಭ್ರಮ ಹೆಚ್ಚಿಸಲು ವಾಹನಗಳು.

ವೇಂಗಡದೊಡೆಯನಿಗೆ ಸಂಬಂಧವೇ ಇಲ್ಲದ ಉತ್ಸವಗಳೂ ದಾನಿಗಳ ಉತ್ಸಾಹ ದಿಂದ ಇಲ್ಲಿ ಕಾಲಿಟ್ಟುವು. ಜನರಿಗೆ ಪ್ರಿಯವೆನಿಸಿದ ಆಚಾರಗಳೆಲ್ಲ ಗುಡಿಯೊಳಗೆ ತೂರಿಕೊಂಡು ಬಂದುವು. ನೋಟ್ಟಕಾರ ವೆಂಕಟಯ್ಯನು ಕ್ರಿಸ್ತಾಬ್ದ 1614ರ ನವೆಂಬರ್ ನಾಲ್ಕನೆಯ ದಿನ ಏರ್ಪಡಿಸಿದ "ಪಟ್ಟಾಭಿಷೇಕ-ತಿರುನಾಳ್" ಎಂಬ ಉತ್ಸವವನ್ನು ನೋಡಿ. ಗರ್ಭಗುಡಿಯೊಳಗೆ ಯಾವುದೋ ಕಾಲದಲ್ಲಿ ಹೇಗೋ ರಾಮಪರಿವಾರದ ವಿಗ್ರಹಗಳು ಸೇರಿಕೊಂಡುಬಿಟ್ಟಿದ್ದುವು. ವೇಂಕಟೇಶನ ನಿತ್ಯಾರ್ಚನೆಗೂ ಈ ವಿಗ್ರಹ ಗಳಿಗೂ ಏನೂ ಸಂಬಂಧವಿಲ್ಲ. ಆದರೆ ನೋಟ್ಟಕ್ಕಾರ-ವೆಂಕಟಯ್ಯನಿಗೆ ಏನೋ ಪ್ರೇರಣೆಯಾಗಿ ರಾಮನವಮಿಯಂದು ಈ ರಾಮನಿಗೆ ಗುಡಿಯಲ್ಲಿ ಪಟ್ಟಾಭಿಷೇಕ ಸಮಾರಂಭವನ್ನು ನಡೆಸಬೇಕೆನ್ನಿಸಿತು. ಗರ್ಭಗುಡಿಯೊಳಗೆ ಇಂಥದೇನನ್ನೂ ಮಾಡುವ ಹಾಗಿಲ್ಲ, ವೇಂಗಡದೊಡೆಯನ ನಂಟೂ ಇರಬೇಕು. ಇದಕ್ಕೆಲ್ಲ ಉತ್ಸವಮೂರ್ತಿ ಯಾದ ಮಲೆಯಪ್ಪ ಯಾವಾಗಲೂ ಸಿದ್ಧನೇ. ಗರ್ಭಗುಡಿಯಿಂದ ಮಲೆಯಪ್ಪನೂ (ಮಲೈಕೂನಿಯನಿನ್ರ-ಪೆರುಮಾಳ್), ದೇವಿಯರೂ (ನಾಚ್ಚಿಮಾರ್), ಹೊರಬಂದು ತಿರುಮಲೆಯ ವೆನ್ರುಮಾಲೈಯಿಟ್ಟಾನ್ ಮಂಟಪದಲ್ಲಿ ರಾಮ ("ಚಕ್ರವರ್ತಿ-ತಿರುಮಗನಾರ್", ಶಾಸನದ ಮಾತು), ಸೀತೆ (ಸೀತೈಪ್ಪಿರಾಟ್ಟಿಯಾರ್), ಲಕ್ಷ್ಮಣ (ಯಿಳೈಯ-ಪೆರುಮಾಳ್), ಹನುಮಂತ (ಶಿರುತ್ತಿರುವಡಿ), ಸುಗ್ರೀವ, ಅಂಗದ—ಈ ರಾಮಪರಿವಾರವೂ, ವಿಷ್ವಕ್ಸೇನ (ಸೇನೈ-ಮುದಲಿಯಾರ್) ಮತ್ತು ರಾಮಾನುಜರೂ (ಎಂಬೆರುಮಾನಾರ್) ಇವರೊಂದಿಗೆ ಬಿಜಯಮಾಡಿಸಿ, ಸಿಂಹಾಸನಾರೋಹಣ ಮಾಡಿ ಸೇವೆಗಳನ್ನು ಕೈಗೊಳ್ಳುವ ಉತ್ಸವ ಇದು. ಪ್ರಸಾದ-ಪಣ್ಯಾರಗಳ ವಿನಿಯೋಗದ ಜೊತೆಗೆ, ಪುರಾಣಭಟ್ಟರು "ವಾಯುಪುರಾಣ"ವನ್ನು ಓದಬೇಕೆಂಬ ವಿಧಿ ಶಾಸನದಲ್ಲಿ ಕಂಡುಬರುತ್ತದೆ. ವಾಯುಪುರಾಣಕ್ಕೂ ರಾಮನ ಪಟ್ಟಾಭಿಷೇಕಕ್ಕೂ ಮಲೆಯಪ್ಪನಿಗೂ ಏನು ನಂಟು? ಇನ್ನೂರು ಪೊನ್ನುಗಳಷ್ಟು ಹಣವನ್ನು ವೆಚ್ಚಮಾಡಲು ಆ ದಾನಿ ಸಿದ್ಧನಿದ್ದ, ಸ್ಥಾನತ್ತಾರರು ಒಪ್ಪಿದರು, ಅಷ್ಟೆ. ಗುಡಿಯಲ್ಲಿ ಸಂಭ್ರಮ, ಸೇವೆ ಸಲ್ಲಿಸುವವರ ಹಣ, ನೆರೆದವರಿಗೆ ಪ್ರಸಾದ, ಇಷ್ಟು ಸಾಲದೆ?

ಈ ನೋಟ್ಟಕ್ಕಾರ-ವೆಂಕಟಯ್ಯನ ಗುರು ಕೋಯಿಲ್-ಕೆಳ್ವಿ-ಅಣ್ಣನ್-ರಾಮಾನುಜ-ಜೀಯರ್. 'ಕೋಯಿಲ್-ಕೆಳ್ವಿ' ಎಂದರೆ ಬೆಟ್ಟದ ಗುಡಿಯಲ್ಲಿ ಪೂಜೆಯ ಪಾಲನ್ನು ನಿರ್ವಹಿಸುತ್ತಿದ್ದವರು. ತಿರುಮಲೆ ಮತ್ತು ತಿರುಪತಿಯ ಗುಡಿಗಳಲ್ಲಿ ಪೂಜೆ,

ಉತ್ಸವಗಳ ಮೇಲ್ವಿಚಾರಣೆಗಾಗಿ ಮುಲ್ಲೈ-ತಿರುವೇಂಕಟ-ಜೀಯರು ಕ್ರಿಸ್ತಾಬ್ದ 1440ರ ಸುಮಾರಿಗೆ ಎರಡೂ ಕಡೆ ಪೆರಿಯ-ಜೀಯರ್-ಮಠಗಳನ್ನು ಏರ್ಪಡಿಸಿದ್ದರಷ್ಟೆ. ಶ್ರೀವೈಷ್ಣವಪ್ರಭಾವ ಬರುಬರುತ್ತ ಬೆಳೆದು ಬೆಟ್ಟದ ಗುಡಿಯ ಆಡಳಿತದಲ್ಲೂ ಆರಾಧನೆಯಲ್ಲೂ ಈ ಮಠದ ಜೀಯರು ಮುಖ್ಯವಾದ ಪಾತ್ರವನ್ನು ಪಡೆಯತೊಡಗಿದರು. ಈ ಮಠದ ಪರಂಪರೆಯಲ್ಲಿ ಹತ್ತನೆಯವರು ನೋಟ್ಟಕಾರ-ವೆಂಕಟಯ್ಯನ ಗುರುಗಳು. ಇವರು ತಿರುಮಲೆಯ ಗುಡಿಯಲ್ಲೂ ತಿರುಪತಿಯ ಗುಡಿಯಲ್ಲೂ ಹಲವಾರು ಹೊಸ ಉತ್ಸವಗಳನ್ನು ಮೊದಲುಮಾಡಿದ ಉಲ್ಲೇಖವಿದೆ; ಬೆಟ್ಟದ ಮೇಲೆ ಚಿತ್ರಾಪೂರ್ಣಿಮೆ, ಶ್ರೀ-ಜಯಂತಿ, ಯುಗಾದಿ, ವಿಜಯದಶಮೀ, ಚಿತ್ತಿರೈ-ಬ್ರಹ್ಮೋತ್ಸವದಲ್ಲಿ ವಿಡಾಯಾರ್ರಿ ಎಂಬ ಉತ್ಸವ—ಇವೇ ಮೊದಲಾದುವು ನಡೆಯುವ ಏರ್ಪಾಟು ಮಾಡಿದರು. ನೋಟ್ಟಕ್ಕಾರ-ವೆಂಕಟಯ್ಯನಿಗೆ ಸ್ಫೂರ್ತಿಯನ್ನು ಇವರೇ ಒದಗಿಸಿದ್ದಿರಬೇಕು.

ಬಿಕ್ಕಟ್ಟು

ಈ ಅಸಂಖ್ಯ ಹೊಸ ಉತ್ಸವಗಳ ಹಿನ್ನೆಲೆಯಲ್ಲಿ ಉತ್ಸವಪ್ರಿಯರಾದ ಪಾಂಚರಾತ್ರಶ್ರದ್ಧಾಳುಗಳಿಗೂ ನಿತ್ಯಾರ್ಚನೆಯ ಹಟವನ್ನು ತೊಟ್ಟ ವೈಖಾನಸ-ಅರ್ಚಕರಿಗೂ ನಡುವೆ ಬಿಕ್ಕಟ್ಟು ಅಡಿಗಡಿಗೆ ತಲೆದೋರುತ್ತಿದ್ದರೆ ಆಶ್ಚರ್ಯವೇನಲ್ಲ. ಉತ್ಸಾಹಿಗಳಾದ ದಾನಿಗಳು ಶ್ರೀವೈಷ್ಣವ-ಆಚಾರ್ಯರ ಪ್ರೋತ್ಸಾಹದಿಂದ ಬೆಟ್ಟದ ಗುಡಿಯಲ್ಲಿ ನೂರಾರು ಉತ್ಸವಗಳನ್ನು ನಡೆಸುವ ಏರ್ಪಾಟು ಮಾಡುತ್ತಿದ್ದಾಗ, ಗರ್ಭಗುಡಿಯಲ್ಲಿ ನಿಂತ ಮೂಲವರಿಗೆ ನಿತ್ಯಾರ್ಚನೆಯನ್ನು ಕ್ರಮದಂತೆ ಕಾಲಕಾಲಗಳಲ್ಲಿ ನಡೆಸುವುದು ಅರ್ಚಕರಿಗೆ ಕಷ್ಟವೆನಿಸಿರುವುದೂ ಸಹಜವೇ. ಯಾವ ಉತ್ಸವವೂ ಗರ್ಭಗುಡಿಯಲ್ಲಿ ನಡೆಯದಾದರೂ, ಗುಡಿಯಲ್ಲಿ ಉತ್ಸವದ ಸಂಭ್ರಮವಿದ್ದಾಗ ಗರ್ಭಗುಡಿಯೊಳಗಿನ ಕೆಲಸದಲ್ಲಿ ಗಡಿಬಿಡಿಯಾಗದೆ ಇರುತ್ತದೆಯೆ? ಗರ್ಭಗುಡಿಯೊಳಗೆ ನೆಲೆಸಿರುವ ಉತ್ಸವಮೂರ್ತಿಯನ್ನು ಮತ್ತೆ ಮತ್ತೆ ಹೊರಗೊಯ್ಯುವುದು–ಒಳಗೆ ತರುವುದು ಮೂಲಬೇರಕ್ಕೆ ನಡೆಯಬೇಕಾದ ಅರ್ಚನೆಯಲ್ಲಿ ತೊಡಕನ್ನು ತರಲಾರದೆ? ಉತ್ಸವಗಳ ಮೇಲಾಟವನ್ನು ವೈಖಾನಸ-ಅರ್ಚಕರು ವಿರೋಧಿಸಿದ್ದರೆಂದು ಸುಲಭವಾಗಿ ಊಹಿಸಿಕೊಳ್ಳಬಹುದು. ಅರಸರ, ಅಧಿಕಾರಿಗಳ, ಮಹಾಜನರ ಒಲವು ಬೇರೆ ಕಡೆಯಿದ್ದುದರಿಂದ ಅರ್ಚಕರು ನಿರುಪಾಯರಾಗಿ ಸುಮ್ಮಗಾಗಿರಬೇಕು.

ದೇವರ ದಂಡಿಗೆಯನ್ನು ತಿರುವೀಧಿಸಾನಿಯಾದ ತಿರುವೇಂಕಟಮಾಣಿಕ್ಯಂ ಪಡೆದು ಕೊಂಡುದು ಸಾಂಕೇತಿಕ ಎನ್ನಬಹುದು. ಬೆಟ್ಟದೊಡೆಯನ ಏಕಾಂತ ಆಕರ್ಷಣೆ ಈ ಸ್ಥಳದ ವಿಶೇಷ. ಆದರೆ ಅವನಿಗೊಂದು ಉತ್ಸವಮೂರ್ತಿಯನ್ನು ಸಿದ್ಧಮಾಡಿ ಉತ್ಸವದ ಉತ್ಸಾಹಿಗಳ ಹಣದ ಮೇಲಾಟದಲ್ಲಿ ಅದನ್ನು ತೊಡಗಿಸಿದುದು ಸರಿಯೇ? ಉತ್ಸವ, ಸೇವೆ, ಸಂಧಿ ಎಂದರೆ ಗುಡಿಗೆ ಸಂಪತ್ತಿನ ದಾರಿ; ಸ್ಥಾನತ್ತಾರರ ದೃಷ್ಟಿಯಲ್ಲಿ ಈ ವಿವರಗಳೇ ಮುಖ್ಯ. ಹಣವೂ ಹಳ್ಳಿಗಳೂ ಗುಡಿಗೆ ಸೇರಿದರೆ ಅವರಿಗೆ ಸಮಾಧಾನ.

ಈ ಹಣದ ಗಳಿಕೆಯ ಗೀಳಿನಲ್ಲಿ ಆಗಮದ ನಿರ್ಬಂಧಗಳು ತೂರಿಹೋದುವು. ಮೂಲವರಿಗೆ ನಡೆಯುವ ಕರ್ಮಾರ್ಚನೆಗಿಂತ ಉತ್ಸವರಿಗೆ ನಡೆಯುವ ಓಲಾಟ ಹೆಚ್ಚಿನಿಸಿತು. ಉತ್ಸವಮೂರ್ತಿ ಆಗಮದಲ್ಲಿ ಆಗತ್ಯವಾಗಿರುವುದು ಕೆಲವೊಂದು ವಿಧಿಗಳಿಗಾಗಿ. ಅದೊಂದು ದೇವರ ದಂಡಿಗೆ. ಜನರ ಚಾಪಲ್ಯವನ್ನು ತೀರಿಸಲು ಆಡಳಿತದವರು, ದಾನಿಗಳು ನೀಡುವ ಹಣಕ್ಕೆ ಬದಲಾಗಿ ಉತ್ಸವಗಳನ್ನು ಮಿತಿಯಿಲ್ಲದೆ, ಆಗಮದ ಎಣಿಕೆಯಿಲ್ಲದೆ ಬಳಕೆಗೆ ತಂದರೆಂದರೆ ಈ ದಂಡಿಗೆಯನ್ನು ತಿರುವೀಧಿಸಾನಿಗೆ ಕೊಟ್ಟಂತೆಯೇ ಅಲ್ಲವೆ? ವಿಜಯನಗರದ ಕಡೆಯ ಅರಸರ ಕಾಲದಲ್ಲಿ ವೇಂಗಡ ದೊಡೆಯನನ್ನು ಕೇಳುವವರೇ ಇಲ್ಲ ; ಮಲೆಯಪ್ಪನೇ ಮುಂದೆ ಬರುತ್ತಿದ್ದುದು.

ಅಷ್ಟುಮಾತ್ರವಲ್ಲ , ಬೆಟ್ಟದ ದೇವರನ್ನು ಬೆಟ್ಟದಿಂದ ಕೆಳಗಿಳಿಸಿ ಇತರ ಗುಡಿಗಳ ಚೌಕಟ್ಟಿನಲ್ಲಿ ತೂರಿಸುವ ಪ್ರಯತ್ನವೂ ನಡೆಯಿತು. ಮೇಲೆ ಪೆರಿಯ-ಜೀಯರ್-ಮಠದ ಅಣ್ಣನ್-ರಾಮಾನುಜ-ಜೀಯರ ಪ್ರಸ್ತಾಪ ಬಂದಿತಲ್ಲ, ಅವರ ಹಿಂದಿನವರಾದ ಕೋಯಿಲ್-ಕೆಳ್ವಿ ವಾನಮಾಮಲೈ-ಜೀಯರ್ ಬೆಟ್ಟದ ಗುಡಿಯ ಆರಾಧನೆಯಲ್ಲಿ ಪಾಲ್ಗೊಳ್ಳುತ್ತಿದ್ದವರು. ಇವರು ತಮ್ಮ ತಿರುಪತಿಯ ಮಠದಲ್ಲಿ (ಗೋವಿಂದರಾಜ-ಸನ್ನಿಧಿ-ತಿರುವೀಧಿಯಲ್ಲೇ ಇದ್ದುದು), ಕ್ರಿಸ್ತಾಬ್ದ 1546ರ ಆಕ್ಟೋಬರ್ ಹದಿಮೂರನೆಯ ದಿನದ ಶಾಸನ ತಿಳಿಸುವಂತೆ, ತಿರುವೇಂಗಡಮುಡೈಯಾನನ ವಿಗ್ರಹವನ್ನು ಪ್ರತಿಷ್ಠೆಮಾಡಿ ಅದಕ್ಕೆ ದಿನವೂ ವೆಳ್ಳೈ-ತಿರುಪ್ಪೋನಕ ಸಲ್ಲುವಂತೆಯೂ ಗುಡಿಯ ಭಂಡಾರದ ನೆರವಿನಿಂದ ಈ ಮೂರ್ತಿಯೆದುರು ನಿತ್ಯದೀಪ ಉರಿಯುವಂತೆಯೂ ವ್ಯವಸ್ಥೆ ಮಾಡಿದರು. ಇದರ ತಾತ್ಪರ್ಯವೇನು? ಬೆಟ್ಟದ ದೇವರನ್ನು ತಿರುಪತಿಯಲ್ಲೇ ಕಾಣ ಬಹುದೆಂದೋ? ಅಥವಾ ತಮ್ಮ ಅನುಯಾಯಿಗಳು ಈ ದೇವರಿಗೇ ತಮ್ಮ ಕಾಣಿಕೆಗಳನ್ನೂ ಕೈಂಕರ್ಯಗಳನ್ನೂ ಸಲ್ಲಿಸಿ ತೃಪ್ತರಾಗಬಹುದೆಂದೋ? ಹಲವಾರು ಕ್ಷೇತ್ರಗಳಲ್ಲಿ ಇಂಥ ವ್ಯವಸ್ಥೆಯಿದೆ. ಅಲ್ಲಲ್ಲಿ ಬೆಟ್ಟದ ದೇವರ ಗುಡಿಗಳನ್ನು ಎಬ್ಬಿಸಿಕೊಂಡು ಅಲ್ಲಿಯೇ ಭಕ್ತರಿಂದ ಕಾಣಿಕೆಗಳನ್ನೂ ಕೈಂಕರ್ಯಗಳನ್ನೂ ಪಡೆದುಕೊಳ್ಳುವುದನ್ನು ಕಾಣಬಹುದು. ಬೆಟ್ಟಕ್ಕೆ ಹರಕೆ ಹೊತ್ತಿದ್ದವರು ಅದನ್ನು ಈ ಗುಡಿಗಳಲ್ಲಿಯೇ ಸಲ್ಲಿಸಬಹುದೆಂದು ಬೆಟ್ಟದ ದೇವರೇ ಅಪ್ಪಣೆ ಕೊಟ್ಟಂತೆ ಕಥೆಗಳನ್ನು ಹೆಣೆಯುತ್ತಾರೆ. ವಾನಮಾಮಲೈ-ಜೀಯರು ತಮ್ಮ ಮಠದಲ್ಲಿ ಈ ದೇವರ ಸನ್ನಿಧಿಯನ್ನು ಏರ್ಪಡಿಸಿದಾಗ ಈ ಉದ್ದೇಶ ಇದ್ದಿರಲಾರದು. ವೇಂಗಡದೊಡೆಯನ ಸನ್ನಿಧಿ ತಮ್ಮ ಮಠದಲ್ಲೂ ಇರಲೆಂದು ಅವರು ಈ ವ್ಯವಸ್ಥೆ ಮಾಡಿರಬಹುದು. ಆದರೆ ಬೇರೆಡೆಗಳಲ್ಲಿ ವೇಂಗಡದ ದೇವರ ಪ್ರತಿಕೃತಿಗಳನ್ನು ಪ್ರತಿಷ್ಠೆಮಾಡುವ ಪದ್ಧತಿ ಬೆಳೆದುಬರಲು ಇದು ನಾಂದಿಯಾಯಿತು. ಇದರಿಂದಾಗಿ ಬೆಟ್ಟಕ್ಕೆ ಹೊಂದಿಕೊಂಡು ಬಂದ ಹಿರಿಮೆ ಸುಮಾರಾಗಿ ಮರೆಯಾಯಿತು.

ಮಹಾಜನರ ಕೈಂಕರ್ಯ

ಅರಸರ ಅಧಿಕಾರವೂ ಸಂಪತ್ತೂ ಕಡಮೆಯಾಗುತ್ತ ಬಂದು ಗುಡಿಗೆ ಉದಾರ

ವಾಗಿ ನೀಡುವ ಸಾಮರ್ಥ್ಯ ಸಾಲದಾದಾಗ ಸಾಮಾನ್ಯಜನರು ಗುಡಿಯ ನೆರವಿಗೆ ಬಂದುದೊಂದು ಸ್ವಾರಸ್ಯ. ತಿರುಪತಿಯ ವರ್ತಕರು (ನಗರತ್ತರ್) ಯಾವಾಗಲೂ ಬೆಟ್ಟದ ದೇವರಿಗೆ ಉದಾರವಾಗಿ ಹಣವನ್ನು ಸಲ್ಲಿಸುತ್ತ ಬಂದಿದ್ದಾರೆ. ಈಗ ನಾವು ಪರಿಶೀಲಿಸುತ್ತಿರುವ ಕಾಲದಲ್ಲಿ ರಂಗಾಪುರಂ-ನಾರಾಯಣ-ಶೆಟ್ಟಿಯು ತನ್ನ ಕುಟುಂಬದ ಪರವಾಗಿ ಗುಡಿಯ ಶ್ರೀಭಂಡಾರಕ್ಕೆ 48,900 ನರ್-ಪಣಗಳನ್ನೂ, ಪೆಂಗಾಡೈ-ಶೆಟ್ಟಿಯ ಮಗ ಕಾಳತ್ತಿ-ಶೆಟ್ಟಿಯು 1085 ನರ್-ಪಣಗಳನ್ನೂ, ಕೋಪ್ಪು-ಶೆಟ್ಟಿಯು 2,000 ಪಣಗಳನ್ನೂ, ಪೆರಿಯ ಕೋನೇರಿ-ಶೆಟ್ಟಿಯು 3200 ಪಣಗಳನ್ನೂ ಕೊಟ್ಟುದನ್ನು ಉದಾಹರಣೆಯಾಗಿ ಹೇಳಬಹುದು. ಗರ್ಭಗುಡಿಯಲ್ಲಿ ಪೂಜೆ ಮಾಡುವ ಅರ್ಚಕರು (ನಂಬಿಮಾರರು) ತಮ್ಮ ಕೊಡುಗೆಯಾಗಿ ಮೂರು ಸಾವಿರಕ್ಕೂ ಮೀರಿ ಪಣಗಳನ್ನು ಗುಡಿಗೆ ಸಲ್ಲಿಸಿದ ಉಲ್ಲೇಖವಿದೆ. ಮಲೈ-ನಿನ್ರಾನ್-ಭಟ್ಟರ ಮಗ ವೇಂಕಟತ್ತುರೈವಾರ್, ಪೆರಿಯ-ಪೆರುಮಾಳ್-ಭಟ್ಟರ್ ಅನಂತಪ್ಪರ್, ತಿರುವೇಂಕಟ-ನಂಬಿಮಾರ್-ತಿಮ್ಮಯ್ಯರ್ ಮಗ ನಂಬಿಮಾರ್-ಶ್ರೀನಿವಾಸನ್, ಕರುಣಾಕರ-ಭಟ್ಟರ ಮಗ ಮಲೈ-ನಿನ್ರ-ಪೆರುಮಾಳ್, ತಿರುವೇಂಕಟಭಟ್ಟರ್-ಅಕ್ಕಣ್ಣನ್ ಮೊದಲಾದವರ ಹೆಸರುಗಳು ಅವರ ದಾನಗಳಿಂದಾಗಿ ಉಳಿದುಬಂದಿವೆ. ತಿರುಮಲೆಗುಡಿಯ ಆಚಾರ್ಯ ಪುರುಷರ ಮೂರೂ ಪಂಗಡದವರೂ (ಶೋಟ್ಟೈ-ಏಟ್ಟೂರು ಮನೆತನ, ಕಂದಾಡೈ ಮನೆತನ ಮತ್ತು ಆನಂದಾಂಪಿಳ್ಳೈ ಮನೆತನ) ಮೂವತ್ತು-ಸಾವಿರ ಪಣಗಳಷ್ಟು ವಾರ್ಷಿಕ-ವರಮಾನವನ್ನು ಗುಡಿಗೆ ಈ ಅವಧಿಯಲ್ಲಿ ತಂದುಕೊಟ್ಟರು.

ಗುಡಿಯಲ್ಲಿ ಲೆಕ್ಕಬರೆಯುತ್ತಿದ್ದ ತಿರುನಿನ್ರ-ಊರ-ಉಡಯ್ಯಾನರೆಲ್ಲ ಸೇರಿ ಹನ್ನೆರಡು-ಸಾವಿರ ಪಣಗಳಷ್ಟು ಸಂಪತ್ತನ್ನು ಗುಡಿಗೆ ಸೇರಿಸಿದರು. ಗುಡಿಯ ಕಾವಲುಗಾರರೆಲ್ಲ ಸೇರಿ ಕ್ರಿಸ್ತಾಬ್ದ 1546ರಲ್ಲಿ ಯುಗಾದಿಯಂದು ಐನೂರ-ಎಪ್ಪತ್ತು ಪಣಗಳನ್ನು ದೇವರಿಗೆ ಸಮರ್ಪಿಸಿದರೆನ್ನುವ ಶಾಸನವಿದೆ. ನಡೆಯದ ನಾಣ್ಯಗಳನ್ನು ದೇವರ ಕೊಪ್ಪರಕ್ಕೆ ಸುರಿಯುವ ಭಕ್ತರು ಆ ಕಾಲದಲ್ಲಿಯೂ ಇದ್ದರೆಂದು ತೋರುತ್ತದೆ. ಅದಕ್ಕಾಗಿಯೇ ಕೊಪ್ಪರದಲ್ಲಿ ಬಿದ್ದ ಹಣವನ್ನು ಚಲಾವಣೆಗೆ ಬರುವಂಥವೋ ಅಲ್ಲವೋ ಎಂದು ಪರೀಕ್ಷಿಸಲು 'ನೋಟ್ಟಕ್ಕಾರ'ರೆಂಬ ಅಧಿಕಾರಿಗಳನ್ನು ಗುಡಿಯ ಆಡಳಿತವು ನೇಮಿಸಿಕೊಳ್ಳಬೇಕಾಯಿತು. ಇಂಥ 'ನೋಟ್ಟಕ್ಕಾರ'ರೂ ಗುಡಿಯ ಜೋಸ್ಯರೂ (ವೇಂಕಟಾದ್ರಿ-ಅಯ್ಯನ್, ತಿರುಮಲೈ-ಜೋಸ್ಯರ್ ಮೊದಲಾದವರು), ಜೀಯರುಗಳೂ ಹೀಗೆಯೇ ಗುಡಿಯ ಸಂಪತ್ತಿನ ಹೆಚ್ಚಳದಲ್ಲಿ ಪಾಲುಗೊಂಡಿದ್ದಾರೆ.

ಗುಡಿಗೆ ಸಂಬಂಧಪಡದ ಹಲವರು ಗುಡಿಗೆ ಕೊಡುಗೈ ದಾನಗಳನ್ನು ನೀಡಿರುವ ಶಾಸನಗಳಿವೆ. ಅರಸರ ಅಧಿಕಾರಿಗಳೂ ದಂಡನಾಯಕರೂ ಸೇರಿ ಗುಡಿಯ ಶ್ರೀಭಂಡಾರಕ್ಕೆ ಮೂವತ್ತುನಾಲ್ಕು ಗ್ರಾಮಗಳನ್ನು ಸೇರಿಸಿ, ಸುಮಾರು ನಲವತ್ತುಸಾವಿರ ಪಣಗಳನ್ನು ಸಲ್ಲಿಸಿದರು. ಊರ ಹಿರಿಯರಾಗಿದ್ದ ರಾಯಸಂ ಹರಿಯಪ್ಪರ್, (1580 ಪಣಗಳು), ಉದಯಗಿರಿ-ದೇವರಾಯ-ಭಟ್ಟರ್ (4600 ಪಣಗಳು), ಶೆಟ್ಟಲೂರು-ಕುಪ್ಪಯ್ಯನ್ (2550 ಪಣಗಳು), ಎಲ್ಲಪ್ಪ-ಪಿಳ್ಳೈ (1580 ಪಣಗಳು), ಮೊದಲಾದವರು

ತಂತಮ್ಮ ಕೈಂಕರ್ಯಗಳನ್ನು ಗುಡಿಗೆ ಸಲ್ಲಿಸಿದರು. ಇವೆಲ್ಲ ಅಚ್ಯುತರಾಯ ಮತ್ತು ಸದಾಶಿವರಾಯ ಇವರ ಕಾಲದಲ್ಲಿ ನಡೆದ ಧರ್ಮಗಳು. ಮುಂದೆ ವೆಂಕಟಪತಿರಾಯನ ಕಾಲದಲ್ಲೂ ಅರಮನೆಯ ಅಧಿಕಾರಿಗಳೂ (ಅವಸರಂ ಚಿನ್ನಪ್ಪರ್, ಬೊಕ್ಕಸಂ-ಕೃಷ್ಣಯ್ಯನ್ ಇತ್ಯಾದಿ), ಸೇನಾನಿಗಳೂ (ತಿಲ್ಲಪ್ಪ-ನಾಯಕ್ಕರ್, ಹನುಮಯ್ಯರ್-ಅಣ್ಣಂಗಾರ್ ಮೊದಲಾದವರು), ವೈದಿಕಬ್ರಾಹ್ಮಣರೂ (ಕೋಮಂಡೂರು ಅಪ್ಪಯ್ಯರ್, ತಿರುವೇಂಕಟ-ಅಯ್ಯಂಗಾರ್, ಆಳ್ವಾನ್-ಕೋಯಿಲ್ ತಿರುವೇಂಕಟಯ್ಯನ್ ಇತ್ಯಾದಿ), ಊರ ಹಿರಿಯರೂ (ನಾರಾಯಣ-ಅಯ್ಯನ್, ಅಪ್ಪಾಲ-ಚಿನ್ನಪ್ಪನ್, ಪೆರಿಯ-ತಿಮ್ಮಪ್ಪ-ನಾಯಕ್ಕರ್, ನಾರಾಯಣ-ದಾಸರಿ-ನಾಯಕ್ಕರ್, ವೆಂಕಮರಸರೆಡ್ಡಿ, ಕೊಂಡಾಪಂಡಿತನ ಮಗ ತಮ್ಮಯ್ಯನ್ ಇತ್ಯಾದಿ), ವರ್ತಕರೂ (ಕೊಂಡು-ಶೆಟ್ಟಿ, ಶಿಲಂಬಿಡೈಯರ್-ಶೆಟ್ಟಿ, ವೀರಮ-ಶೆಟ್ಟಿ ಮೊದಲಾದವರು), ಗುಡಿಗೆ ಸಂಬಂಧಪಟ್ಟವರೂ (ಅರ್ಚಕರು, ಆಚಾರ್ಯಪುರುಷರು, ಜೀಯರು, ತಿರುನಿನ್ರ-ಊರ-ಉಡೈಯಾನರು) ಗುಡಿಯ ಬೊಕ್ಕಸವನ್ನು ತುಂಬಿಸಿದರು.

ಅನಂತರದ ಕಾಲದಲ್ಲಿ ದೇಶದ ನೆಮ್ಮದಿ ಕದಡಿದ್ದು, ಜನರಲ್ಲಿ ಕಾತರ ಒದಗಿದ್ದಿತಾಗಿ ಬರುಬರುತ್ತ ಇಂಥ ಕೊಡುಗೆಗಳು ಕಡಮೆಯಾದುವು. ಅರಸರೇ ಮಣ್ಣುಮುಕ್ಕುತ್ತಿರುವಾಗ ಸಾಮಾನ್ಯಜನರೇನು ಮಾಡಬಲ್ಲರು? ಶಾಸನಗಳಲ್ಲಿ ಹೇಳುವಂಥ ದಾನ ಇಳಿಮುಖವಾಯಿತಾದರೂ, ಬೆಟ್ಟಕ್ಕೆ ಜನ ಬರುವುದಾಗಲೀ ಬಂದವರು ದೇವರ ಕೊಪ್ಪರದಲ್ಲಿ ತಮ್ಮ ಶಕ್ತಿಯಿದ್ದಷ್ಟು ಹಣವನ್ನು ಸುರಿಯುವುದಾಗಲೀ ನಿಲ್ಲಲಿಲ್ಲ. ಆದರೆ ಗುಡಿಯ ಆದಾಯದಲ್ಲಿ ಇಳಿಮುಖವಾದುದು ಗಮನಾರ್ಹವಾದುದೇ. ಶಾಸನಗಳನ್ನು ನೋಡಿದರೆ, ಕೃಷ್ಣದೇವರಾಯನ ಕಾಲದಲ್ಲಿ ಗುಡಿಗೆ ಸಂದ ನಿಧಿ ಸುಮಾರು ಎಂಬತ್ತು ಸಾವಿರ ರೇಖೆ-ಪೊನ್ನುಗಳು, ಅಚ್ಯುತರಾಯನ ಕಾಲದಲ್ಲಿ ಐವತ್ತುಸಾವಿರದಷ್ಟು; ಸದಾಶಿವರಾಯನ ಕಾಲದಲ್ಲಿ ಇಪ್ಪತ್ತುಸಾವಿರಗಳಷ್ಟೇ; ಸದಾಶಿವರಾಯನ ಕಾಲವಾದ ಮೇಲೆ ವಿಜಯನಗರದ ಅರಸರು ಆಳುವವರೆಗೂ ಗುಡಿಗೆ ಸಂದುದು ಐನೂರ ಇಪ್ಪತ್ತೈದು ರೇಖೆ-ಪೊನ್ನುಗಳು! ಗುಡಿಗೆಂದು ಹಿಂದಿನವರು ನೀಡಿದ್ದ ಹಲವು ಹಳ್ಳಿಗಳು ಆದಾಯವಿಲ್ಲದೆ ಹೋದುವು. ಹಲವು ಕಾರಣಾಂತರಗಳಿಂದ ಕೈಬಿಟ್ಟು ಹೋದುವು. ಹೀಗಾಗಿ ಮೊದಲು ನಡೆಯುತ್ತಿದ್ದ ಉತ್ಸವಗಳಲ್ಲಿ ಹಲವು ನಿಲ್ಲಬೇಕಾಯಿತು; ಹಿಂದಿನವರು ಏರ್ಪಡಿಸಿದ್ದ ಸಂಧಿಗಳೂ ಅವಸರಗಳೂ ಹಲವು ಮರೆಯಾದುವು, ತಳಿಗೆಗಳ ವೈವಿಧ್ಯವೂ ಸಂಖ್ಯೆಯೂ ಇಳಿದುವು.

ಮೈಸೂರುದೊರೆಗಳ ಕೊಡುಗೆ

ಇಮ್ಮಡಿ ಶ್ರೀರಂಗನು ವಿಜಯನಗರದ ಅರಸನಾಗಿದ್ದಾಗ ಮೈಸೂರು ಸೀಮೆಯ ಸಂಪರ್ಕವನ್ನು ವಿಶೇಷವಾಗಿ ಬೆಳೆಸಿಕೊಂಡಿದ್ದನು. ಅವನು ಕ್ರಿಸ್ತಾಬ್ದ 1575ರಲ್ಲಿ ನಮ್ಮ ಮೇಲುಕೋಟೆ ಗುಡಿಗೆ ಹಲವು ಕೈಂಕರ್ಯಗಳನ್ನು ಸಲ್ಲಿಸಿದ ಉಲ್ಲೇಖವಿದೆ. ಅವನ

ಹಿರಿಮೆಯ ಸೊಲ್ಲು ಹರಡಿದ್ದು ಅವನು ಅಹೋಬಲಕ್ಷೇತ್ರವನ್ನು ಇಬ್ರಾಹಿಂ ಕುತ್‌ಬ್‌ಶಾ ಮತ್ತು ಹಂಡೆ-ಅನಂತಪುರದ ಪಾಳ್ಯೇಗಾರ ಮಲಕಪ್ಪ ಇವರ ಆಕ್ರಮಣದಿಂದ ಬಿಡಿಸಿದನೆಂಬ ಕಾರಣದಿಂದ. ಇವನನಂತರ ದೊರೆಯಾದ ವೇಂಕಟಪತಿರಾಯನ ಕಾಲದಲ್ಲಿ ಅವನ ಪರವಾಗಿ ಮೈಸೂರು ಸೀಮೆಯನ್ನು ಆಳುತ್ತಿದ್ದವನು ಸೋದರಳಿಯ ತಿರುಮಲನೆಂಬುವನು. ಸುಮಾರು 1585ರಿಂದ 1610ರ ವರೆಗೆ ಈತನು ಮಂಜರಾಬಾದಿನಿಂದ ಮೈಸೂರಿನವರೆಗೆ ತನ್ನ ಅಧಿಕಾರದ ಹರವನ್ನು ಹರಡಿಕೊಂಡಿದ್ದ ನೆಂದೂ, ಅವನ ಕಾಲದಲ್ಲೇ ಯದುವಂಶದ ರಾಜ-ಒಡೆಯನು ಪ್ರಬಲನಾದನೆಂದೂ ತಿಳಿದುಬರುತ್ತದೆ. ಬರುಬರುತ್ತ ರಾಜ-ಒಡೆಯರಿಗೂ ತಿರುಮಲನಿಗೂ ಅಸೂಯೆ-ವಿರಸಗಳು ತಲೆದೋರಿ, ಬೆಳೆದು ತಿರುಮಲನನ್ನು ತಲಕಾಡಿಗೆ ಅಟ್ಟುವುದರಲ್ಲಿ ಮುಗಿಯಿತು. ನೆಪಕ್ಕಾದರೂ ಅರಸನಾಗಿದ್ದ ವೇಂಕಟಪತಿರಾಯನು ರಾಜ-ಒಡೆಯನ ಕಡೆಗೇ ಇದ್ದುದರಿಂದ ರಾಜ-ಒಡೆಯನ ಬಲ ಇನ್ನಷ್ಟು ಹೆಚ್ಚಿತು; ತನ್ನನ್ನು 'ಕರ್ಣಾಟದ ದೊರೆ'ಯೆಂದೇ ಕರೆದುಕೊಂಡನು. ಸೊರಗಿ ಕರಗುತ್ತಿದ್ದ ವಿಜಯನಗರಸಾಮ್ರಾಜ್ಯದ ಉತ್ತರಾಧಿಕಾರಿಯಾಗಿ ಮೈಸೂರು-ಅರಸೊತ್ತಿಗೆ ಮೈದಳೆದುದು ಹೀಗೆ. ವಿಜಯನಗರದ ಮುಂದಿನ ಅರಸರಿಗೂ ಮೈಸೂರುದೊರೆಗಳಿಗೂ ನಂಟು ಮುಂದರಿಯಿತು.

ಈ ನಂಟಿನ ಒಂದು ಮುಖ ಕರ್ಣಾಟಕದಲ್ಲಿ ಶ್ರೀವೈಷ್ಣವಧರ್ಮ ಬೆಳೆದು ಬಂದುದು. ವೇಂಕಟಪತಿರಾಯನ ಪ್ರಭಾವದಿಂದ ರಾಜ-ಒಡೆಯನೂ ಶ್ರೀವೈಷ್ಣವ ಶ್ರದ್ಧಾಳುವಾದನು. ವೇಂಕಟಪತಿರಾಯನ ಗುರುವಾಗಿದ್ದ ಶೋಟ್ಟೈ-ಏಟ್ಟೂರು ಕುಮಾರ-ತಾತಾಚಾರ್ಯ-ಅಯ್ಯನು ಈ ಕಡೆ ತುಂಬ ಪ್ರಭಾವವನ್ನು ಬೀರಿದನು. ಆತನಿಗೆ ಮೇಲುಕೋಟೆಯಲ್ಲಿ ತುಂಬ ಮರ್ಯಾದೆ ದೊರೆತ ಉಲ್ಲೇಖವಿದೆ. ಇದೇ ಹೆಸರಿನ ಇನ್ನೊಬ್ಬ ವ್ಯಕ್ತಿಯ ವಿಚಾರವನ್ನು ಹಿಂದೆಯೇ ಹೇಳಿದ್ದೇವೆ. ಇಬ್ಬರೂ ರಾಮಾನುಜರ ಸೋದರಮಾವ ತಿರುಮಲೆ-ನಂಬಿಯ ಮನೆತನಕ್ಕೆ ಸೇರಿದವರೇ, ತಿರುಪತಿ-ಊರಿನವರೇ. ಆದರೆ ಮೊದಲು ಹೇಳಿದಾತ ತಿರುಮಲೆಗುಡಿಯ ಆಚಾರ್ಯಪುರುಷರಲ್ಲಿ ಒಬ್ಬ, ಈಗ ಹೇಳುವವನು ಅಲ್ಲ. ಇವನನ್ನು ಶಾಸನಗಳು 'ವೇದಮಾರ್ಗಪ್ರತಿಷ್ಠಾಪನಾಚಾರ್ಯ'ನೆಂದೂ 'ಉಭಯವೇದಾಂತಾಚಾರ್ಯ'ನೆಂದೂ ಕರೆದಿವೆ. ಇವನನ್ನು 'ಲಕ್ಷ್ಮೀಕುಮಾರ-ತಾತಾಚಾರ್ಯ'ನೆಂದೂ 'ಕೋಟಿಕನ್ಯಾದಾನಂ-ತಾತಾಚಾರ್ಯ'ನೆಂದೂ ಕರೆಯುವುದುಂಟು. ಎರಡನೆಯ ಅಡ್ಡಹೆಸರು ಸ್ವಾರಸ್ಯವಾಗಿದೆ. ಆತನು ಶ್ರೀಮಂತನಾಗಿದ್ದು ನೂರಾರು ಬಡಹುಡುಗಿಯರಿಗೆ ಯೋಗ್ಯರಾದ ವರರನ್ನು ಹುಡುಕಿ ಮದುವೆ ಮಾಡಿಕೊಟ್ಟನೆಂದೂ, ಆತನು ತುಂಬ ವೈಭವದಿಂದ ಬಾಳುತ್ತಿದ್ದನೆಂದೂ ಆ ಕಾಲದಲ್ಲಿ ಇಲ್ಲಿದ್ದ ವಿದೇಶೀಯನೊಬ್ಬನು ಒಕ್ಕಣಿಸಿದ್ದಾನೆ. ಕಾಂಚೀಪುರದಲ್ಲೇ ಬಹುಮಟ್ಟಿಗೆ ಇರುತ್ತಿದ್ದು ಅಲ್ಲಿನ ವೈಷ್ಣವದೇವಾಲಯಗಳ ಮೇಲ್ವಿಚಾರಕನಾಗಿದ್ದನೆಂದೂ ಕೂಡ ('ಶ್ರೀಕಾರ್ಯಧುರಂಧರ') ತಿಳಿದುಬರುತ್ತದೆ. ತನ್ನನ್ನು ಬಂಗಾರದಲ್ಲಿ ತೂಗಿಸಿಕೊಂಡು ಅದರಿಂದ ಕಾಂಚೀಪುರದ ವರದರಾಜಗುಡಿಯಲ್ಲಿ ಲಕ್ಷ್ಮೀಸನ್ನಿಧಿಯ ಮೇಲೆ ಬಂಗಾರದ ವಿಮಾನವನ್ನು ('ಕಲ್ಯಾಣಕೋಟಿ' ವಿಮಾನ) ಕ್ರಿಸ್ತಾಬ್ದ 1614ರಲ್ಲಿ ಮೂಡಿಸಿದನೆಂದೂ,

ಕೃಷ್ಣದೇವರಾಯನು ವರದರಾಜಸನ್ನಿಧಿಯ ಮೇಲೆ ಮೂಡಿಸಿದ್ದ 'ಪುಣ್ಯಕೋಟಿ' ವಿಮಾನವನ್ನು ದುರಸ್ತಿಮಾಡಿಸಿದನೆಂದೂ ಉಲ್ಲೇಖವಿದೆ. ವೇಂಗಡದ ಗುಡಿಯಲ್ಲಿ ಬಂಗಾರದ ವಿಮಾನಕ್ಕೆ ಮತ್ತೆ ಈತನು 1630ರಲ್ಲಿ (1570 ಎಂದು ಇನ್ನೊಂದು ಎಣಿಕೆ) ಮೆರುಗು ಹಾಕಿಸಿದನೆಂದೂ ಪ್ರತೀತಿಯಿದೆ. ಇದನ್ನು ತಿಳಿಸುವ ಶಾಸನ ಕಾಂಚೀಪುರದ ವರದರಾಜಸ್ವಾಮಿ-ದೇವಾಲಯದಲ್ಲಿದೆ. ಈ ವಿಚಾರ ತಿರುಮಲೆಯ ಶಾಸನಗಳಲ್ಲಿ ಕಂಡುಬರುವುದಿಲ್ಲ.

ವಿಜಯನಗರದ ಕೃಷ್ಣದೇವರಾಯ, ಅಚ್ಯುತರಾಯರಾದಮೇಲೆ ವೇಂಗಡದ ದೇವರಿಗೆ ಔದಾರ್ಯದಿಂದ ನಡೆದುಕೊಂಡ ದೊರೆಗಳೆಂದರೆ ಮೈಸೂರಿನವರು. ರಾಜ ಒಡೆಯನು ದೇವರಿಗೆ ದಿನವೂ ಸಹಸ್ರನಾಮಾರ್ಚನೆಯನ್ನು ನಡೆಸುವ ವ್ಯವಸ್ಥೆ ಮಾಡಿದನು. ನಿತ್ಯಾರ್ಚನೆಗೆ ಬೇಕಾಗುವ ಪಾತ್ರೆಗಳನ್ನು ಬೆಳ್ಳಿ-ಬಂಗಾರಗಳಲ್ಲಿ ಮಾಡಿಸಿ ಕೊಟ್ಟನು; ಉತ್ಸವಕ್ಕೆ ಬಂಗಾರದ ಕೊಡೆ, ರತ್ನಹಾರಗಳು ಮೊದಲಾದುವನ್ನು ನೀಡಿದನು. ಕಂಠೀರವ-ನರಸರಾಜ-ಒಡೆಯನು ಹಾಗೆಯೇ ಸೇವೆಗಳನ್ನು ಮುಂದರಿಸಿದನು. ದೊಡ್ಡ-ದೇವರಾಜ-ಒಡೆಯನು ಉತ್ಸವರನ್ನು ಬಿಜಯಮಾಡಿಸಲೆಂದು ರತ್ನ ಖಚಿತವಾದ ಮಂಟಪವನ್ನೂ, ನೈವೇದ್ಯಭಾಜನವೆಂದು ಬಂಗಾರದ ದೊಡ್ಡ ತಟ್ಟೆಗಳೆರಡನ್ನೂ ಮಾಡಿಸಿಕೊಟ್ಟನು; ಬೆಟ್ಟದ ಮೇಲೆ ತುಳಸೀತೋಟವನ್ನು ಏರ್ಪಡಿಸಿದನು. ಅನಂತರ ರಾಜನಾದ ಚಿಕ್ಕದೇವರಾಜ-ಒಡೆಯನೂ ಬಂಗಾರದ ತಟ್ಟೆ ಮೊದಲಾದ ಉಪಕರಣಗಳನ್ನು ಗುಡಿಗೆ ಕೊಟ್ಟನು. ದೊಡ್ಡ-ಕೃಷ್ಣರಾಜ-ಒಡೆಯನು ಉತ್ಸವಸಂದರ್ಭಗಳಲ್ಲಿ ಅರ್ಚನೆಯ ವೆಚ್ಚಕ್ಕೆಂದು ಆರುನೂರು ಕಂಠೀರಾಯ ವರಹಾಗಳನ್ನು ಗುಡಿಯ ಭಂಡಾರಕ್ಕೆ ಸಲ್ಲಿಸಿದನು (1730ರ ಸುಮಾರಿಗೆ). ಚಿಕ್ಕ ಕೃಷ್ಣರಾಜ-ಒಡೆಯನು ರಾಜ-ಒಡೆಯನ ಕಾಲದಲ್ಲಿ ಕೊಟ್ಟಿದ್ದ ಬಂಗಾರದ ಉಪಕರಣಗಳನ್ನು ಸರಿಪಡಿಸಿ, ತನ್ನ ಕೈಂಕರ್ಯವೆಂದು ಹಲವಾರು ಬಂಗಾರ, ಬೆಳ್ಳಿಯ ಪಾತ್ರೆಗಳನ್ನೂ ರತ್ನಖಚಿತವಾದ ಒಡವೆಗಳನ್ನೂ ಉಡುಗೆಗಳನ್ನೂ ಗುಡಿಗೆ ಸಮರ್ಪಿಸಿದನು.

ಈ ಅರಸನ ಕಾಲದಲ್ಲೇ ದಂಡಿನ ಒಡೆಯನಾಗಿದ್ದ ಹೈದರಾಲಿಯು ಅಡಳಿತವನ್ನು ವಶಪಡಿಸಿಕೊಂಡುದು. ಅವನೂ ಅವನನಂತರ ಟೀಪು-ಸುಲ್ತಾನನೂ ಮೈಸೂರು ಸೀಮೆಯನ್ನು ಆಳುತ್ತಿದ್ದು, ಅನಂತರ ಮುಮ್ಮಡಿ-ಕೃಷ್ಣರಾಜ-ಒಡೆಯರ ಪಟ್ಟವೇರಿದ ಮೇಲೆ ಮತ್ತೆ ವೇಂಗಡದ ಗುಡಿಗೆ ಕೈಂಕರ್ಯಗಳು ಮುಂದರಿದುವು. ಗುಡಿಯಲ್ಲಿ ಅಖಂಡದೀಪದ ವ್ಯವಸ್ಥೆ, ನೈವೇದ್ಯಗಳು, ಗಜವಾಹನ ಮುಂತಾದ ಸೇವೆಗಳಿಗೆ ಒಂದುನೂರ ಐವತ್ತಾರು ಕಂಠೀರಾಯ-ವರಹಾಗಳನ್ನು ಈ ಅರಸನು ನೀಡಿದನು. ಅಷ್ಟು ಮಾತ್ರವಲ್ಲದೆ, ಬೆಟ್ಟದ ಮೇಲೆ ಮತ್ತು ಕೆಳಗೆ ತಿರುಪತಿಯಲ್ಲಿ ಯಾತ್ರಿಕರ ಸೌಕರ್ಯಕ್ಕೆಂದು ಚತ್ರಗಳನ್ನು ಕಟ್ಟಿಸಿ ಅವನ್ನು ನೋಡಿಕೊಳ್ಳಲು 1815ರಲ್ಲಿ ಒಬ್ಬ ಶಿರಸ್ತೇದಾರನನ್ನೂ ನೇಮಿಸಿದನು.



ಹನ್ನೊಂದು

ಕಾಸಿಗೆ ಆಸೆ ಪಡುವ ದೇವರು

ಬೊಕ್ಕಸ ಬರಿದಾದಾಗ

ಕನ್ನಡನಾಡಿನ ಹರಿದಾಸರು ಕಾಣಿಸಿಕೊಳ್ಳುವ ಕಾಲಕ್ಕಾಗಲೇ ಬೆಟ್ಟದ ದೇವರಿಗೆ ಹಣದ ಆಸೆ ಅತಿಯೆಂಬ ಅಪಖ್ಯಾತಿ ಜನರ ನಡುವೆ ಹರಡಿಕೊಂಡಿದ್ದಿತು. ಗುಡಿಯಲ್ಲಿ 'ಕಾಣಿಕೆ ಬರುವ ಚೆಂದ'ವನ್ನು ಕಂಡ ಪುರಂದರದಾಸರು (ಜನನ ಕ್ರಿಸ್ತಾಬ್ದ 1484)—

ಕಾಸು ತಪ್ಪಿದರೆ ಪಟ್ಟಿ। ಬಡ್ಡಿಕಾಸು ಬಡದೆ ಗಂಟುಕಟ್ಟಿ
ದಾಸನೆಂದರೆ ಬಿಟ ಗಟ್ಟಿ। ನಮ್ಮ ಕೇಸಕ್ಕಿ ತಿಮ್ಮಪ್ಪ ಶೆಟ್ಟಿ

ಎಂದು ವಿವರಣೆಯನ್ನು ನೀಡಿದರು. ದೇವರ ಹಣದಾಸೆಯು ಕ್ಷೇತ್ರಮಾಹಾತ್ಮ್ಯ ಯಲ್ಲಿಯೇ ಸೇರಿಕೊಂಡು ಬಂದಿದ್ದಿತು. ಗುಡಿಯ ಅಧಿಕಾರಿಗಳ ಗಮನವೆಲ್ಲ ಇದ್ದುದು ಕೊಪ್ಪರದ ಮೇಲೆ; ಕ್ಷೇತ್ರಮಾಹಾತ್ಮ್ಯ ಇದನ್ನು ಸಮರ್ಥಿಸಿದಮೇಲೆ ಜನರ ಕಣ್ಣಿಗೆ ಇದು ತಪ್ಪಾಗಿಯೂ ಕಾಣಲಿಲ್ಲ. ವಿಜಯದಾಸರು (ಕ್ರಿಸ್ತಾಬ್ದ 1687—1755)—

ತೊಳಸದಕ್ಕಿಯ ತಿಂಬ ಕಿಲುಬುತಳಿಗೆಯಲುಂಬ
ಕೊಳಗದಲಿ ಹಣಗಳನು ಅಳೆದುಕೊಂಬ
ಇಲ್ಲ ಕಾಸೆಂದು ಸುಳ್ಳುಮಾತಾಡಿದರೆ
ಎಲ್ಲವನು ಕಸುಕೊಂಬ ಕಳ್ಳದೊರೆಗೆ

ಜಯಮಂಗಳವನ್ನೂ ನಿತ್ಯಶುಭಮಂಗಳವನ್ನೂ ಹಾಡಿದರು. ಕೊಪ್ಪರದ ಹಣವನ್ನು ಕೊಳಗದಲ್ಲಿ ಅಳೆಯುವುದನ್ನು ಮಾತ್ರವಲ್ಲದೆ ದಾಸರು ಗುಡಿಯಲ್ಲಿದ್ದ ಗಲೀಜನ್ನೂ ಗಮನಿಸಿದರು. ಅಧಿಕಾರಿಗಳ ಕಣ್ಣು ಕೊಪ್ಪರದ ಮೇಲಿರುವಾಗ ದೇವರ ನೈವೇದ್ಯಕ್ಕೆ ಅಕ್ಕಿಯನ್ನು ತೊಳೆಯಬೇಕೆಂಬ ತವಕ ಯಾರಿಗೆ? ತಳಿಗೆಯ ಕಿಲುಬನ್ನು ತಿಕ್ಕಿ ಬೆಳಗಬೇಕೆಂಬ ಆದರ ಯಾರಿಗೆ? ಈ ಸ್ಥಿತಿ ಹೆಚ್ಚೂಕಡಮೆ ಇಂದಿನವರೆಗೂ ಉಳಿದು ಬಂದಿದೆ. ಹಣದಾಸೆ ಬೆಳೆದಿದೆನ್ನುವುದೂ ದಿಟವೇ. ಅದಿರಲಿ, ದೇವರಿಗೆ ಹಣದಾಸೆ ಯೆಂಬ ಸೊಲ್ಲು ಶುರುವಾದುದು ಹೇಗೆ?

ದೇವರ ಹೆಸರಿನಲ್ಲಿ , ಸೇವೆಗಳೆಂಬ ನೆಪದಲ್ಲಿ , ಈಗ ಯಾವ ಗುಡಿಯಲ್ಲಿಯೂ ಸುಲಿಗೆಗೆ ಒಂದು ಜನಸಮ್ಮತಿ ದೊರೆತಿದೆ. ಗುಡಿಯಲ್ಲಿ ನಡೆಸಬಹುದಾದ ಸೇವೆಗಳ, ಕೈಂಕರ್ಯಗಳ ಪಟ್ಟಿ ದೇವರಿಗಿಂತ ಹೆಚ್ಚು ಸ್ಪಷ್ಟವಾಗಿ ಎದ್ದುಕಾಣುವಂತೆ ಇರುತ್ತದೆ;

ಒಂದೊಂದು ಸೇವೆಗೂ ಇಂತಿಷ್ಟೆಂದು ಹಣವನ್ನು ಒಕ್ಕಣಿಸಿರುತ್ತಾರೆ; ಕೈಂಕರ್ಯಗಳ ಅನುಕ್ರಮವು ಹಣದ ಮೊತ್ತವನ್ನು ಅವಲಂಬಿಸಿಯೇ. ಈ ಬಗೆಯ ವ್ಯಾಪಾರಕ್ಕೆ ಆಗಮದ ಆಧಾರವಿರದೆಂದು ಎಲ್ಲರೂ ಬಲ್ಲರು; ದೇವಾಲಯದ ಸಂಸ್ಕೃತಿಗೆ ಹೊರತಾದ ವಿವರವಿದೆಂದು ಯಾರಿಗೆ ತಿಳಿಯದು? ಗೊತ್ತುಮಾಡಿ, ಎಲ್ಲರೆದುರೂ ಇರಿಸಿರುವ ಸೇವಾಪಟ್ಟಿಯ ಸುಲಿಗೆ ಮಾತ್ರವಲ್ಲದೆ ಗುಡಿಯ ಅಧಿಕಾರಿಗಳೂ ಪರಿಚಾರಕರೂ ಅರ್ಚಕರೂ ಬಗೆಬಗೆಯಾಗಿ ಭಕ್ತರ ಕಿಸೆಗೆ ಕೈಹಾಕುವ ಉದ್ಯಮವನ್ನು ಕೈಗೊಳ್ಳುವುದೂ ಎಲ್ಲರಿಗೂ ತಿಳಿದದ್ದೇ. ದೇವರ ಸೇವೆಗೆಂದು ಹಣವನ್ನು ಸುಲಿದು ಕೊಳ್ಳುವ ಈ ಕೆಟ್ಟಚಾಳಿಗೆ ಓನಾಮ ಹಾಕಿದುದು ತಿರುಮಲೆಯ ಗುಡಿಯೇ. ಅದರ ಆದರ್ಶವನ್ನು ಇತರ ಗುಡಿಗಳು ಅನುಸರಿಸಿದುದು ಅಲ್ಲಿ ಸೇರುತ್ತಿದ್ದ ಲಾಭವನ್ನು ಕಂಡೇ. ತಿರುಮಲೆಯ ಗುಡಿಯಲ್ಲಿ ಇದು ಮೊದಲಾದುದು ಹೇಗೆ?

ವಿಜಯನಗರಸಾಮ್ರಾಜ್ಯದ ಕಡೆಗಾಲದಲ್ಲಿ ಅರಸರ ಬೊಕ್ಕಸ ಬರಿದಾಗುತ್ತ ಬಂದಾಗ ಈ ಗುಡಿಯ ಕೊಪ್ಪರದಿಂದ ಅಷ್ಟಿಷ್ಟು ನೆರವನ್ನು ಅವರು ಪಡೆದುಕೊಳ್ಳ ತೊಡಗಿದುದು ಕಾಣಬರುತ್ತದೆ. ಈ ಅಗತ್ಯವನ್ನೂ ಅನುಕೂಲವನ್ನೂ ಅರಿತುಕೊಂಡವ ರಲ್ಲಿ ವೇಂಕಟಪತಿರಾಯನು ಮೊದಲಿಗನಿದ್ದೀತು. ಅವನ ನಾಣ್ಯಗಳಲ್ಲಿ ಕೆಲವು 'ಶ್ರೀ ವೇಂಕಟೇಶ್ವರಾಯ ನಮಃ' ಎಂಬ ಬರಹವನ್ನು ಹೊತ್ತಿರುವುದು ಇದನ್ನು ಸೂಚಿಸುತ್ತದೆ. ಅವನು ಗುಡಿಯಿಂದ ಪಡೆದುಕೊಂಡ ಬಂಗಾರದಿಂದ ಮಾಡಿಸಿದ ನಾಣ್ಯಗಳ ನಿರ್ದೇಶನ ಇದಿರಬಹುದು; ನಿಖರವಾಗಿ ಹೇಳುವುದೇನೋ ಆಗದು. ಒಂದು ವಿಚಾರವಂತೂ ನಿಶ್ಚಿತವಾದುದು. ದೇವರಿಗೆ ದಾನಮಾಡುವ ಕಾಲ ಆ ಅರಸರ ಪಾಲಿಗೆ ಮುಗಿದಿದ್ದಿತು; ಹಿಂದಿನ ಅರಸರೂ ಇತರರೂ ಮಾಡಿದ್ದ ಕೈಂಕರ್ಯವಲ್ಲದೆ ನಿರಂತರವಾಗಿ ನಡೆಯುತ್ತಿದ್ದ ಉತ್ಸವಗಳೂ ಬಹುಸಂಖ್ಯೆಯಲ್ಲಿ ನೆರೆಯುತ್ತಿದ್ದ ಜನರ ಕೊಡುಗೆಯೂ ಗುಡಿಯ ಭಂಡಾರವನ್ನು ಸಮೃದ್ಧವಾಗಿಸಿದ್ದುವು. ಅರಸರಿಗೆ ಪರದಾಟ ವಾದರೂ, ಸಾಮಾನ್ಯಜನರು ಈ ದೇವರಿಗೆ ನಡೆದುಕೊಳ್ಳುವುದೇನು ನಿಂತಿರಲಿಲ್ಲ. ಅರಸರ ಬೊಕ್ಕಸ ಬರಿದಾಗುತ್ತಿದ್ದಂತೆ ಗುಡಿಯ ಕೊಪ್ಪರ ತುಂಬಿಕೊಳ್ಳುತ್ತಿದ್ದಿತು. ದೈವಭಕ್ತಿಯನ್ನೂ ಮೀರಿನಿಂತ ಹಣದ ಆಗತ್ಯ ಅರಸರ ದೃಷ್ಟಿಯನ್ನು ಕೊಪ್ಪರದ ಕಡೆ ತಿರುಗಿಸಿದ್ದರೆ ಆಶ್ಚರ್ಯವಲ್ಲ.

ಕೊಪ್ಪರದ ಏರ್ಪಾಟು

ಆದರೆ ಗುಡಿಯ ನಿತ್ಯ-ನೈಮಿತ್ತಿಕ-ಉತ್ಸವಗಳಿಗೆಂದು ನಿಗದಿ ಮಾಡಿದ ಹಣವನ್ನು ಹೀಗೆ ಅರಸರ ನೆರವಿಗೆ ಹರಿಸುವುದು ಸರಿಯಲ್ಲವಷ್ಟೆ? ಹೀಗೆ ಮಾಡಬಯಸುವ ಧೈರ್ಯ ಅರಸರಿಗೂ ಇರಲಿಲ್ಲ, ಮಾಡಬೇಕೆಂಬ ಉತ್ಸಾಹ ಗುಡಿಯ ಆಡಳಿತ ದವರಿಗೂ ಇರಲಿಲ್ಲ. ಗುಡಿಯ ಆಗತ್ಯವೆಲ್ಲ ಪೂರೈಸಿ ಉಳಿದ ಹಣವನ್ನು ಅರಸನಿಗೆ ನೀಡಬಹುದಷ್ಟೆ. ಈ ಮೇಲುಹಣವನ್ನು ಹೇಗೆ ಹೆಚ್ಚಿಸಬೇಕೆಂಬ ಚಿಂತೆ ಗುಡಿಯ

ಆಡಳಿತದವರನ್ನು ಕಾಡತೊಡಗಿದುದು ಸಹಜವೇ. ಗುಡಿಗೆ, ಗುಡಿಯೊಳಗಿನ ದೇವರಿಗೆ ನಡೆದುಕೊಳ್ಳುವುದು ಹಿಂದಿನಿಂದ ಬಂದ ಪದ್ಧತಿ. ಬೆಟ್ಟದ ಮೇಲೆ ಇತರ ಕ್ಷೇತ್ರಗಳನ್ನೂ ತೀರ್ಥಗಳನ್ನೂ ಸನ್ನಿಧಿಗಳನ್ನೂ ಏರ್ಪಡಿಸಿದರೆ ಭಕ್ತರ ಕಿಸೆಯಿಂದ ಇನ್ನಷ್ಟು ಕಾಸನ್ನು ಸೆಳೆದುಕೊಳ್ಳಬಹುದಲ್ಲವೇ? ಗುಡಿಯ ಪಕ್ಕದಲ್ಲಿ, ಸ್ವಾಮಿಪುಷ್ಕರಿಣಿಯ ದಡದ ಮೇಲೆ ವರಾಹಸ್ವಾಮಿ ಹಿಂದೆಂದೂ ಕಾಣದ ಪ್ರಶಸ್ತಿಯನ್ನು ಗಳಿಸಿಕೊಂಡ. ವರಾಹಸ್ವಾಮಿಯೇ ಗುಡಿಯಿರುವ ಎಡೆಗೆ ಒಡೆಯನೆಂದೂ, ಅವನನ್ನು ಮೊದಲು ಪೂಜಿಸಿಯೇ ಗುಡಿಗೆ ಬರಬೇಕೆಂದೂ ಕ್ಷೇತ್ರಮಾಹಾತ್ಮ್ಯ ನಿರ್ಬಂಧಿಸಿತು. ಸ್ವಾಮಿಪುಷ್ಕರಿಣಿ ಒಂದರಲ್ಲೇ ಎಂಟು ತೀರ್ಥಗಳ ಸಮಾಗಮವಿರುವುದೆಂದೂ, ಯಾತ್ರಿಕರು ಎಂಟೂ ಕಡೆ ಸ್ನಾನಮಾಡಿದರೆ ಪುಣ್ಯವೆಂದೂ ಕ್ಷೇತ್ರಪುರೋಹಿತರ ಬಾಯಿಂದ ಹೊರಡಿಸಿದರು. ಸ್ನಾನವೆಂದರೆ ಸಂಕಲ್ಪ, ಸಂಕಲ್ಪವೆಂದರೆ ದಕ್ಷಿಣೆ. ಹೀಗೆಯೇ ಬೆಟ್ಟದ ಮೇಲೆ ಆಕಾಶಗಂಗೆ, ಪಾಪವಿನಾಶ, ತುಂಬುರುತೀರ್ಥ, ಗೋಗರ್ಭ ಮೊದಲಾದ ಮೂವತ್ತು ಮಹಾತೀರ್ಥಗಳು ಇದ್ದಕ್ಕಿದ್ದಂತೆ ಎದ್ದುಕೊಂಡವು. ಒಂದೊಂದು ತೀರ್ಥದಲ್ಲೂ ಬೇರೆಬೇರೆ ಸೇವೆ; ಒಂದೊಂದು ಸೇವೆಗೂ ಪ್ರತ್ಯೇಕವಾಗಿ ದಾನಧರ್ಮಗಳು. ಕ್ಷೇತ್ರಪುರೋಹಿತರಿಗೂ ಗುಡಿಯ ಆಡಳಿತದವರಿಗೂ ಪರಸ್ಪರ ಅನುಕೂಲವೆನಿಸುವ ಒಪ್ಪಂದ. ಯಾತ್ರಿಕರಿಗೆ ಪುಣ್ಯ; ಗುಡಿಗೆ ಹಣ. ಎರಡನ್ನೂ ಒದಗಿಸಲು ನೆರವಾಗುವಂತೆ ಕ್ಷೇತ್ರಮಾಹಾತ್ಮ್ಯಗಳೂ ಪುರಾಣಕಥೆಗಳೂ ಪ್ರತೀತಿಗಳೂ ಸಿದ್ಧವಾದುವು.

ಸಾಧ್ಯವಾದಷ್ಟೂ ಹಣವನ್ನು ಕೊಪ್ಪರಕ್ಕೆ ಸುರಿದರೆ ಶ್ರೀನಿವಾಸನಿಗೆ ಪ್ರೀತಿ ಎಂದು ಈ ಆಕರಗಳೆಲ್ಲ ಸಾರಿದುವು. ಮತ್ತೆಮತ್ತೆ ಹೇಳಿದರೆ ಯಾವ ಸುಳ್ಳಾದರೂ ನಿಜವೆನಿಸೀತು. ಒಂದು ಪೀಳಿಗೆಯಲ್ಲಿ 'ಇರಬಹುದು' ಎನ್ನುವುದು ಇನ್ನೊಂದು ಪೀಳಿಗೆಯಲ್ಲಿ 'ಹೀಗೆಯೇ ಸರಿ' ಎನಿಸುವುದೂ ಸಹಜವೇ. ಹೀಗಾಗಿ ಗುಡಿಯ ಕೊಪ್ಪರವೇ ದೇವರು ಎಂದು ಜನ ಬಗೆಯತೊಡಗಿದರು; ಯಾತ್ರಿಕರು ತಪ್ಪದೆ ಕೊಪ್ಪರಕ್ಕೇ ಪ್ರದಕ್ಷಿಣೆ-ನಮಸ್ಕಾರಗಳನ್ನು ಸಲ್ಲಿಸಿ ತಮ್ಮ ಕೈಲಾದ ಕಾಣಿಕೆಯನ್ನು ಸುರಿದು ಕೃತಾರ್ಥರಾದೆವೆಂದುಕೊಂಡು ಹೋಗತೊಡಗಿದರು. ಬಂದ ಯಾವ ಭಕ್ತನೂ ಕೊಪ್ಪರದಲ್ಲಿ ಕಾಣಿಕೆಯನ್ನು ಹಾಕದೆ ಹೋಗಬಾರದೆಂಬ ಕಟ್ಟು ಮೂಡಿಕೊಂಡಿತು; ಹರಕೆ ಮಾಡಿಕೊಂಡ ಹಣವನ್ನು ತೆರದಿದ್ದರೆ ಕೆಡುಕೆಂದು ಸುದ್ದಿ ಹರಡಿಕೊಂಡಿತು; 'ತಪ್ಪು ಕಾಣಿಕೆ'ಯೆಂಬ ಕಲ್ಪನೆ ಹುಟ್ಟಿಕೊಂಡಿತು. ಈ ದೇವರ ಹಿರಿಮೆ ಕಾರಣಾಂತರಗಳಿಂದ ಇರುವುದಾಗಿ ಜನರೂ ಹೇಗೂ ಗುಡಿಗೆ ಬಂದೇ ಬರುತ್ತಾರೆ; ಬಂದವರನ್ನು ಓರಣವಾಗಿ ಸುಲಿಗೆ ಮಾಡಿ ಕಳುಹಿಸಿದರಾಯಿತು, ಎಂಬ ಎಣಿಕೆ ಕೆಲಸ ಮಾಡತೊಡಗಿತು. ಇದೇ ಎಣಿಕೆ ಈಗಲೂ ಕೆಲಸ ಮಾಡುತ್ತಿದೆ.

ಮುಂದೆ ಈ ಕಡೆಯ ನಾಡನ್ನಾಳತೊಡಗಿದ ಅರಸರು ಮುಸಲ್ಮಾನರು. ಅವರಿಗೆ ಗುಡಿಯ ಬಗ್ಗೆ ಇದ್ದ ಒಂದೇ ಆದರವೆಂದರೆ, ಅದು ಒದಗಿಸುತ್ತಿದ್ದ ಆದಾಯ. ವರ್ಷಕ್ಕೆ ಎರಡು ಲಕ್ಷಕ್ಕೂ ಮೀರಿ ಉತ್ಪನ್ನವಿದ್ದ ಗುಡಿಯಿದೆಂದು ಅವರು ಅರಿತೊಡನೆ ಗುಡಿಯನ್ನು ಉಳಿಸಿಕೊಳ್ಳುವ ಉತ್ಸಾಹ ಅವರಿಗೆ ಮೂಡಿದುದು ಸಹಜವೇ. ಉಳಿದೆಡೆ

ಅವರ ಹೆಸರು, ಗುಡಿಗಳನ್ನು ಹಾಳುಮಾಡಿದರೆಂದೇ ಅಲ್ಲವೆ? ಇಲ್ಲಿ ಅವರ ಒಡೆತನ ಇರುವವರೆಗೂ ಗುಡಿಯ ಆದಾಯ ಅವರಿಗೆ ಸಂದಾಯವಾಗುತ್ತಿದ್ದಿತು. ಈ ಆದಾಯ ಕ್ಕಾಗಿ ಅವರಲ್ಲಿಯೇ ಕಾದಾಟವಾದುದೂ ಉಂಟು. ಮುಂದೆ ಫ್ರೆಂಚರೂ ಇಂಗ್ಲಿಷರೂ ನಾಡನ್ನು ಆಳಲೆಂದು ಬಳಸಿಬಂದಾಗ ಅವರ ದೃಷ್ಟಿಯೂ ಗುಡಿಯ ಆದಾಯದ ಮೇಲೆ ಮೂಡಿತು. ಅದನ್ನು ತಮ್ಮದಾಗಿಸಿಕೊಳ್ಳಲು ಹವಣಿಸಿ, ಹೊಡೆದಾಡಿದರು. ಇಂಗ್ಲಿಷರು ಕಡೆಗೆ ಗೆದ್ದುಕೊಂಡು ಗುಡಿಯ ಆದಾಯಕ್ಕೆ ಅಧಿಕಾರಿಗಳಾದರು.

ಗುತ್ತಿಗೆದಾರರು

ವಿಧರ್ಮೀಯರಾದ ಅರಸರಿಗೆ ಗುಡಿಯ ಬಗ್ಗೆ ಧಾರ್ಮಿಕವಾದ ಶ್ರದ್ಧೆ ಇದ್ದೀತೆಂದು ನಿರೀಕ್ಷಿಸುವುದು ತಪ್ಪು. ಅವರಿಗೆ ಅದರ ಆದಾಯದ ಮೇಲೇ ಆಸಕ್ತಿಯಿದ್ದುದು ಸಹಜವೇ. ನಮ್ಮ ಅರಸರು ಗುಡಿಗೆ ನಡೆದುಕೊಳ್ಳುತ್ತಿದ್ದವರು, ಈ ದೇವರನ್ನು ನಂಬಿಯೇ ಬಾಳನ್ನು ನಡೆಸಿಕೊಳ್ಳುತ್ತಿದ್ದವರು. ಅವರೇ ದೇವರ ಕೊಪ್ಪರಕ್ಕೆ ಕೈಹಾಕಿದರೆಂದಮೇಲೆ ವಿಧರ್ಮೀಯರ ಆಸಕ್ತಿಯನ್ನು ದೂಷಿಸುವಂತಿಲ್ಲ. ಮೇಲಾಗಿ ನಮ್ಮವರ ಸಹಕಾರವಿಲ್ಲದೆ ವಿಧರ್ಮೀಯರ ಆಸಕ್ತಿ ಚಿಗುರೊಡೆದು ಬಲಿಯುತ್ತಿರಲಿಲ್ಲ. ಮುಸಲ್ಮಾನ-ಅರಸರಾಗಲೀ ಕ್ರೈಸ್ತ-ಅಧಿಕಾರಿಗಳಾಗಲೀ ನೇರವಾಗಿ ಗುಡಿಗೆ ಬಂದು ಒಳಗೆ ನುಗ್ಗಿ ಆದಾಯವನ್ನು ದೋಚಿಕೊಳ್ಳುವುದು ಸಾಧ್ಯವಿರಲಿಲ್ಲವಷ್ಟೆ? ಒಮ್ಮೆ ಹಾಗೆ ದೋಚಿಕೊಂಡರೆ ಮುಂದೆ ಗುಡಿಗೆ ಬರುವವರೇ ಇಲ್ಲದೆ ಆದಾಯವು ಅಲ್ಲಿಗೇ ಮುಗಿಯುತ್ತಿತ್ತು. ನಿರಂತರವಾದ ಆದಾಯವಿರಬೇಕೆಂದರೆ ಗುಡಿ ಎಂದಿನಂತೆ ಮುಂದರಿಯಬೇಕು, ಉತ್ಸವಗಳು ನಡೆಯಬೇಕು, ಜನರು ನೆರೆಯಬೇಕು, ಕೊಪ್ಪರ ತುಂಬಬೇಕು.

ಗುಡಿಯ ವ್ಯವಹಾರವನ್ನು ನೋಡಿಕೊಂಡು ಅದರ ಆದಾಯವನ್ನು ಹೆಚ್ಚಿಸ ಬೇಕಾದರೆ ನಮ್ಮವರೇ ಮೇಲ್ವಿಚಾರಕರಾಗಿರಬೇಕು. ಆ ವೇಳೆಗಾಗಲೇ ಊರ ಹಿರಿಯರ, ಸಭೆಯಾರರ, ಸ್ಥಾನತ್ತಾರರ ಅಧಿಕಾರ ಮರೆಯಾಗಿದ್ದಿತು. ಅರಸರೇ ತಮ್ಮ ಕಡೆಯವನೊಬ್ಬನನ್ನು ಗುಡಿಯ ಮೇಲ್ವಿಚಾರಕನೆಂದು ನೇಮಿಸಿ ಅವನೊಂದಿಗೆ ಆದಾಯದ ಒಪ್ಪಂದವನ್ನು ಮಾಡಿಕೊಳ್ಳುವ ವಾಡಿಕೆ ಮೊದಲಾಗಿದ್ದಿತು. ಮುಸಲ್ಮಾನ-ಅರಸರ ಕಾಲದಲ್ಲಿ ಇಂಥ 'ನಡುಮನುಷ್ಯ'ನೇ ಮುಖ್ಯನಾದ. ಗುಡಿಯೊಂದು ಅವನಿಗೆ ಗುತ್ತಿಗೆ; ಮೇಲರಸನಿಗೆ ನಿಗದಿ ಮಾಡಿದಷ್ಟು ಹಣವನ್ನು ಸಲ್ಲಿಸಿದ ಮೇಲೆ ತನಗಾಗಿ ಅವನು ಎಷ್ಟನ್ನಾದರೂ ಗಳಿಸಿಕೊಳ್ಳಬಹುದು. ಅವನಿಗೂ ಆದಾಯದ ದಾರಿ ಯಾಯಿತು, ಅರಸರಿಗೂ ನೆಮ್ಮದಿಯ ಏರ್ಪಾಟಾಯಿತು. ಈ 'ನಡುಮನುಷ್ಯ' ಅಥವಾ ಗುಡಿಯ ಗುತ್ತಿಗೆದಾರ ಹಿಂದುವಾಗಿರಬೇಕು; ಬ್ರಾಹ್ಮಣನಾಗಿದ್ದರಂತೂ ಒಳ್ಳೆಯದೇ. ಗುಡಿಗೆ ಸಂಬಂಧಪಟ್ಟವನೇ ಆಗಿದ್ದರಂತೂ ಕೇಳುವ ಹಾಗೆಯೇ ಇಲ್ಲ. ಮುಖ್ಯವಾಗಿ ಜನರು ಹೆಚ್ಚುಹೆಚ್ಚಾಗಿ ಗುಡಿಗೆ ಬರುತ್ತಿರಬೇಕು, ಕೊಪ್ಪರ ತುಂಬುತ್ತಿರಬೇಕು.

ಈ ಗುತ್ತಿಗೆದಾರನಿಗೆ ದೈವಭಕ್ತಿಗಿಂತಲೂ ಹೆಚ್ಚಾಗಿರಬೇಕಾದುದು ವ್ಯವಹಾರ ಕೌಶಲ. ಅವನ ಧರ್ಮನಿಷ್ಠೆ ಎಷ್ಟು ಸಡಿಲವಾಗಿದ್ದರೆ ಅವನ ಜಾಣತನ ಅಷ್ಟೂ ಕುದುರುತ್ತದೆಯಷ್ಟೆ? ಯಾರೋ ತನ್ನವರಲ್ಲದ ಅರಸರಿಗೆ ಬೇಕಾದಷ್ಟು ಹಣವನ್ನು ತೆತ್ತಮೇಲೆ, ತಾನು ತನಗಾಗಿ ಏನನ್ನೂ ಮಾಡಿಕೊಳ್ಳದೆ ಇರುತ್ತಾನೆಯೆ? ಜೇನುಗೂಡಿಗೆ ಕೈಹಾಕಿದ ಜಾಣ ಜೇನುಸೂಸುವ ತನ್ನ ಬೆರಳನ್ನು ಚೀಪದಿರುತ್ತಾನೆಯೆ? ಇವನಿಗೆ ದೇವರ ಮೇಲೆ ಭಕ್ತಿಯಿಲ್ಲ, ಅರಸನ ಮೇಲೆ ಆದರವಿಲ್ಲ. ಇದೊಂದು ಅವನ ವೃತ್ತಿ, ಉದ್ಯಮ; ಆದಾಯಕ್ಕೊಂದು ದಾರಿ. ದೇವರ ಆದಾಯವನ್ನು ಹೆಚ್ಚಿಸುವ ಉಪಾಯ ಗಳನ್ನು ಹುಡುಕುತ್ತಲೇ ಇರುತ್ತಾನೆ. ದೇವರ ಆದಾಯದ ಬಹುಪಾಲು ಅರಸನಿಗೇ ಸಲ್ಲುವುದಾದರೆ ಇವನ ಶ್ರಮಕ್ಕೇನು ಪ್ರತಿಫಲ? ಅರಸನಿಗೆ ಕೊಡಬೇಕಾದುದಕ್ಕಿಂತ ಹೆಚ್ಚುಪಾಲು ತನಗೇ ಸಂದರೆ ಸರಿ. ಆ ಕಾಲಕ್ಕೆ ಗುಡಿಗೆ ಉದಾರವಾಗಿ ನೀಡುವ ದಾತರು ಮರೆಯಾಗಿದ್ದರು, ದೇವರಿಗೆ ನಡೆದುಕೊಳ್ಳುತ್ತಿದ್ದ ಅಧಿಕಾರಿಗಳು ಅಡವಿ ಪಾಲಾಗಿದ್ದರು. ರಾಜಕೀಯವಾತಾವರಣ ಹದಗೆಟ್ಟಿರುವಾಗ ಸಿರಿವಂತರಾದವರು ಉದಾರಿಗಳಾಗಿರುವುದು ದುಸ್ತರವಷ್ಟೆ? ಯಾವ ಹೊತ್ತಿಗೆ ಏನೋ? ಈ ವಾತಾವರಣ ದಿಂದ ದೂರವಾಗಿರುವವರೆಂದರೆ ಸಾಮಾನ್ಯಜನರು, ಅವರ ಬದುಕು ಎಂದಿನಂತೆಯೇ ಸಾಗುವಂತಿರುತ್ತಿತ್ತು. ಉತ್ಸವಗಳ ಕಾಲದಲ್ಲಿ ಗುಡಿಗೆ ಬಂದು ನೆರೆಯುವವರು ಇವರೇ, ಕೊಪ್ಪರಕ್ಕೆ ಕೈಲಾದಷ್ಟು ಹಾಕುತ್ತಿದ್ದವರೂ ಇವರೇ. ಗುತ್ತಿಗೆದಾರರ ದೃಷ್ಟಿ ಇವರ ಮೇಲೆ ತಾನೆ ಬೀಳಬೇಕು? ಬ್ರಹ್ಮೋತ್ಸವಗಳಂಥ ಉತ್ಸವ ಸಂದರ್ಭದಲ್ಲಿ ಯಾತ್ರಿಕರಮೇಲೆ ತೆರಿಗೆಯನ್ನು ಹೇರಲು, ಕೊಡದವರನ್ನು ಹೊಡೆಸಲು ಹಿಂದೆಮುಂದೆ ನೋಡಲಿಲ್ಲ ಈ ನಮ್ಮ ಗುತ್ತಿಗೆದಾರರು. ವಿಜಯದಾಸರು ಆ ಕಾಲದ ಸ್ಥಿತಿಯನ್ನು ಮನಮುಟ್ಟುವಂತೆ ಬಣ್ಣಿಸಿ ಈ ದೇವರನ್ನೇ ಅನ್ಯಾಯಕಾರಿಯೆಂದುಬಿಟ್ಟರು.

ತನ್ನ ನೋಡೀನೆಂದು ಮುನ್ನೂರು ಗಾವುದ ಬರೆ
ತನ್ನ ಗುಡಿಯ ಹೊಕ್ಕ ಜನರಿಗೆಲ್ಲ
ಹೊನ್ನು-ಹಣಗಳಗೊಂಡು, ತನ್ನ ದರುಶನ ಕೊಡದೆ
ಬೆನ್ನೊಡೆಯ ಹೋಯಿಸುವ
ಅನ್ಯಾಯಕಾರಿಗೆ—

ಇದು ಅವರು ಕಂಡ ವೇಂಕಟರಮಣ. ಅವನನ್ನು ಈ ಸ್ಥಿತಿಗೆ ತಂದವರು ಮುಸಲ್ಮಾನ ಅರಸರಲ್ಲ, ಕ್ರೈಸ್ತ-ಅಧಿಕಾರಿಗಳಲ್ಲ, ನಮ್ಮವರೇ ಆಗಿದ್ದ ಗುತ್ತಿಗೆದಾರರು.

ಮುಸಲ್ಮಾನರ ಆಸಕ್ತಿ

ವಿಜಯನಗರಸಾಮ್ರಾಜ್ಯವು ಮುದುಡಿಕೊಂಡನಂತರ ಈ ಕಡೆಯಲ್ಲಿ ಸಣ್ಣ ಪುಟ್ಟ ಪಾಳೆಯಪಟ್ಟುಗಳು ಮೇಲೆದ್ದುಕೊಂಡುವು. ತಾಳಿಕೋಟೆಯ ಹಗರಣದಲ್ಲೇ (ಕ್ರಿಸ್ತಾಬ್ದ

1565) ಈ ಸಾಮ್ರಾಜ್ಯದ ಬೆನ್ನುಮೂಳೆ ಮುರಿಯಿತಾದರೂ ಅಳಿದುಳಿದ ರಾಜ್ಯ ಕುಂಟುತ್ತ ಕುಲುಕುತ್ತ ಕಂಗಾಲಾಗಿ ಮುಂದೊಂದು ನೂರು ವರ್ಷ ಮುಂದುವರೆಯಿತು. ಈ ರಾಜ್ಯದ ಅವಶೇಷಕ್ಕೂ ಇತಿಶ್ರೀಯನ್ನು ಹೇಳಿದವನು ಶ್ರೀರಂಗರಾಜ. ಇವನ ದೊಂದು ಸಣ್ಣ ಶಾಸನ ಬಿಡಿಗಲ್ಲಿನ ಮೇಲೆ ಮೂಡಿಕೊಂಡು ಬೆಟ್ಟದ ಮೇಲೆ ತಬ್ಬಲಿಯಾಗಿ ಬಿದ್ದಿದ್ದಿತು. ಅದನ್ನು ಗುಡಿಯ ಗೋಡೆಗಳ ಮೇಲೆ ಮೂಡಿಸುವ ಸಾಮರ್ಥ್ಯವೂ ಈ ಅರಸನಿಗಿರಲಿಲ್ಲ; ಇನ್ನು ದಾನ-ಧರ್ಮ ಮಾಡಿಯಾನೆಂದು ಯಾರು ಬಗೆದಾರು? ಅವನು ದಾನ-ಧರ್ಮಗಳನ್ನೇನೂ ಮಾಡಲೂ ಇಲ್ಲ. ಶಾಸನದ ಪ್ರಕಾರ ಅವನು ಮಾಡಿದ 'ಸದಾಸೇವೆ'—

ಶ್ರೀತಿರುವೆಂಗಳನಾಥ ದೇವುನಿ.... ಶ್ರೀ
ಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರ
.... ಶ್ರೀರಂಗರಾಜ ಸದಾಸೇವ

ಹೆಸರಿನ ಹಿಂದೆ ಒಕ್ಕಣೆಯೇನೋ ಜೋರಾಗಿದೆ; ಅದು ಹಿಂದಿನಿಂದ ಬಂದ ಬಳುವಳಿ; ರಂಗರಾಜನ ಕಾಲದಲ್ಲಿ ಅದಕ್ಕೇನೂ ಅರ್ಥವಿರಲಿಲ್ಲ. 'ಸದಾಸೇವೆ'ಯೆನ್ನುವುದು ಸಾಮಾನ್ಯಭಕ್ತರು ಒಮ್ಮೆ ಯಾತ್ರೆಗೆ ಬಂದುದೇ ಅವರು ಯಾವಾಗಲೂ ದೇವರಿಗೆ ಸೇವೆ ನಡೆಸುತ್ತಿರುವುದರ ಸೂಚನೆ. ಯಾತ್ರಿಕರಾಗಿ ಬಂದು ದೇವರ ದರ್ಶನ ಮಾಡಿದುದಷ್ಟೇ ಇಲ್ಲಿನ ಸೇವೆ; ಅದಕ್ಕಿಂತ ಹೆಚ್ಚಾಗಿ ಏನನ್ನು ಮಾಡುವುದೂ ತಮ್ಮ ಶಕ್ತಿಮೀರಿದುದೆಂದೂ ದೇವರು ಅಷ್ಟಕ್ಕೇ ತೃಪ್ತನಾಗಿ 'ಸದಾಸೇವೆ'ಯ ಫಲವನ್ನು ಕರುಣಿಸಬೇಕೆಂದೂ ಇದರ ತಾತ್ಪರ್ಯ (**ಸಕೃತ್ ಸೇವಯಾ ನಿತ್ಯಸೇವಾಫಲಮ್**). ವಿಜಯ



ಲಾಲಾ-ಖೇಮರಾಂ, ಪತ್ನಿ ಮತ್ತು ತಾಯಿಯೊಂದಿಗೆ

ನಗರಸಾಮ್ರಾಜ್ಯದ ಚಕ್ರವರ್ತಿ ಈಗ ಈ 'ಸದಾಸೇವೆ'ಯ ಸ್ಥಿತಿಗಿಳಿದಿದ್ದನೆನ್ನುವುದನ್ನು ಶಾಸನ ಸಾರುತ್ತದೆ. ಬೆಟ್ಟದ ಪಕ್ಕದಲ್ಲಿ ಚಂದ್ರಗಿರಿಪ್ರಾಂತ್ಯವನ್ನು ಆಳುತ್ತಿದ್ದ ಇವನನ್ನು ಕ್ರಿಸ್ತಾಬ್ದ 1665ರ ಸುಮಾರಿಗೆ ಗೋಲ್ಕೊಂಡದ ಮುಸಲ್ಮಾನ-ಅರಸನು ಸೆಣಸಿ ಸೋಲಿಸಿದಾಗ ವಿಜಯನಗರಸಾಮ್ರಾಜ್ಯದ ಕಥೆ ಕಡೆಗೂ ಮುಗಿಯಿತು. ಚಂದ್ರಗಿರಿ-ಪ್ರಾಂತ್ಯ ಗೋಲ್ಕೊಂಡದ ನವಾಬನ ಅಧೀನವಾಯಿತು. ಬೆಟ್ಟದ ಒಡೆತನವೂ ಅವನ ಪಾಲೇ ಆಯಿತು. ಮುಂದೆ ಸುಮಾರು ನೂರೈವತ್ತು ವರ್ಷಗಳು ವೇಂಗಡದೊಡೆಯನ ಗುಡಿಯ ಮೇಲೆ ಮುಸಲ್ಮಾನ-ಅರಸರ, ಅಧಿಕಾರಿಗಳ ಆಶಾದೃಷ್ಟಿ ಎಡೆಬಿಡದೆ ಬಿದ್ದಿದ್ದಿತು.

ಮುಗಲ-ಸಮ್ರಾಟನಾಗಿದ್ದ ಅವರಂಗಜೇಬನು ದಕ್ಷಿಣಭಾರತವನ್ನು (ದಕ್ಕನ್, ಡೆಕ್ಕನ್) ತನ್ನ ಆಡಳಿತದ ಹರವಿನಲ್ಲಿ ಸೇರಿಸಿಕೊಳ್ಳಲು ತೊಡಗಿದ್ದು, ಬಿಜಾಪುರ ಮತ್ತು ಗೋಲ್ಕೊಂಡಗಳ ಸುಲ್ತಾನರನ್ನು ಗೆದ್ದು ಅವರ ರಾಜ್ಯಗಳನ್ನೂ ಒಳಗೊಂಡಂತೆ 'ದಕ್ಷಿಣ-ಸುಭಾ' ಎಂಬ ಪ್ರಾಂತ್ಯವಾಗಿ ಮಾರ್ಪಡಿಸಿದನು. ಈ 'ಸುಭಾ'ದ ಒಡೆಯನು (ಸುಭಾದಾರನು) ದಿಲ್ಲಿಸಮ್ರಾಟನ ಪ್ರತಿನಿಧಿಯಾಗಿ ಈ ಪ್ರಾಂತ್ಯವನ್ನು ಆಳುವ ವ್ಯವಸ್ಥೆ ಅವರಂಗಜೇಬನು ಸಾಯುವ ಕಾಲಕ್ಕೆ (ಕ್ರಿಸ್ತಾಬ್ದ 1707) ಸಿದ್ಧವಾಗಿದ್ದಿತು. ಮುಂದೆ (1710 ರಲ್ಲಿ) ಈ ಸುಭಾದಾರನ ಅಧಿಕಾರದ ಹರವಿನಲ್ಲಿ ಸೇರಿದಂತೆ ಕೃಷ್ಣಾನದಿಯಿಂದ ಕಾವೇರಿಯವರೆಗೆ 'ಕರ್ಣಾಟಕ'ವೆಂಬ ಸೀಮೆ (ನವಾಬಿ) ಮೈದಳೆಯಿತು. ಗೋಲ್ಕೊಂಡ ರಾಜ್ಯವೂ ಆದು ವಶಪಡಿಸಿಕೊಂಡಿದ್ದ ಚಂದ್ರಗಿರಿನಾಡೂ ಸುತ್ತಮುತ್ತಲ ಪ್ರದೇಶಗಳೂ ಈ ಕರ್ಣಾಟಕ-ನವಾಬಿಯಲ್ಲಿ ಸೇರಿದ್ದುವು. ದಕ್ಷಿಣ-ಸುಭಾದ ಮೊದಲ ಒಡೆಯ 'ನಿಜಾಂ-ಉಲ್-ಮುಲ್ಕ್' ಅಸಫ್-ಜಾಹಾ; ಮುಂದೆ ಪ್ರಸಿದ್ಧವಾದ ನಿಜಾಮ ಅರಸೊತ್ತಿಗೆ ಮೂಲಪುರುಷ. ಕರ್ಣಾಟಕ-ನವಾಬಿಯನ್ನು ವ್ಯವಸ್ಥೆ ಮಾಡಿದ ಮುಗಲ್ ಚಕ್ರವರ್ತಿ ಶಾ-ಆಲಂ ಈ ನವಾಬಿಗೆ ದಾವೂದ್-ಖಾನ್ ಎಂಬುವವನನ್ನು ನೇಮಿಸಿದ. ಇವನು ಕಾರಣಾಂತರದಿಂದ ಗುಜರಾತಿಗೆ ಹೋದಮೇಲೆ, ಕರ್ಣಾಟಕದ ನವಾಬನಾಗಿ ನೇಮಿತನಾದವನು ಸಾದತ್-ಉಲ್ಲಾ-ಖಾನ್ (1713). ಇವನು ಈ ಅಧಿಕಾರದಲ್ಲಿ ಇಪ್ಪತ್ತು ವರ್ಷಗಳು ಕಾರುಬಾರು ನಡೆಸಿದನು. ಇವನು ಬಹುಮಟ್ಟಿಗೆ ಆರ್ಕಾಡನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನಾಗಿ, ಇವನನ್ನೂ ಇವನ ಉತ್ತರಾಧಿಕಾರಿಗಳನ್ನೂ ಆರ್ಕಾಡು-ನವ್ವಾಬರೆಂದೇ ಕರೆಯುವುದು ವಾಡಿಕೆಯಾಯಿತು.

ಚಂದ್ರಗಿರಿನಾಡು ಇವರ ಅಧೀನವಾಗಿದ್ದುದರಿಂದ ವೇಂಗಡಬೆಟ್ಟವೂ, ಬೆಟ್ಟದ ಮೇಲಿನ ಗುಡಿಯೂ ಇವರ ಆಡಳಿತದಲ್ಲಿ ಸೇರಿದುವು. ಗುಡಿಗೆ ಹಿಂದಿನಿಂದ ಸೇರಿ ಬಂದಿದ್ದ ಹಳ್ಳಿಗಳಲ್ಲಿ ಹಲವನ್ನು ಈ ನವಾಬರು ತಮ್ಮ ಸ್ವಂತ ಆಸ್ತಿಯೆಂದು ಬಗೆದು ಅವುಗಳ ಗುತ್ತಿಗೆ ನಿರ್ವಹಣೆಯನ್ನು ತಮ್ಮ ಅಧಿಕಾರಿಗಳಿಗೆ ವಹಿಸಿಕೊಟ್ಟುಬಿಟ್ಟರು. ಮೊದಲೇ ರಾಜಕೀಯಗೊಂದಲದ ಪರಿಸ್ಥಿತಿಯ ಕಾರಣವಾಗಿ ಈ ಹಳ್ಳಿಗಳಿಂದ ಗುಡಿಗೆ ಬರಬೇಕೆಂದು ದಾನಿಗಳು ಗೊತ್ತುಮಾಡಿದ್ದ ಹಣವು ಸರಿಯಾಗಿ ಬರುತ್ತಿರಲಿಲ್ಲ; ಹಲವಾರು ಉತ್ಸವಗಳೂ ಸೇವೆಗಳೂ ನಡೆಯುವುದು ಕಷ್ಟವೆನಿಸಿದ್ದಿತು. ಈಗ ಹಳ್ಳಿಗಳೇ

ಗುಡಿಯ ಕೈಬಿಟ್ಟುಹೋದುವಾಗಿ ಉತ್ಸವಗಳ ತಂಟೆಯೇ ತಪ್ಪಿತು. ಹೀಗಾಗಿ ಗುಡಿಯ ಸಂಭ್ರಮ, ವೈಭವ ಬಹುಮಟ್ಟಿಗೆ ಮರೆಯಾದುವು. ಆದರೆ ಗುಡಿಯಲ್ಲಿ ನಿತ್ಯಾರ್ಚನೆ ತಪ್ಪಲಿಲ್ಲ ; ದಿನವೂ ಸಾವಿರಾರು ಯಾತ್ರಿಕರು ಗುಡಿಯಲ್ಲಿ ನೆರೆಯುವುದು ನಿಲ್ಲಲಿಲ್ಲ. ನವಾಬನ ಖಜಾನೆಗೆ ವರ್ಷಕ್ಕೊಮ್ಮೆ ಎರಡು ಲಕ್ಷ ರೂಪಾಯಿಗಳಷ್ಟು ಹಣ ಗುಡಿಯ ಕೊಪ್ಪರದಿಂದ ಸಲ್ಲುತ್ತಿತ್ತು ಎಂದ ಮೇಲೆ ಯಾತ್ರಿಕರ ಸಂಖ್ಯೆಯನ್ನು ಊಹಿಸಿಕೊಳ್ಳ ಬಹುದು.

ಆರ್‌ಕಾಡಿನ ನವಾಬ ಸಾದತ್-ಉಲ್ಲಾ-ಖಾನನ ದಿವಾನನಾಗಿದ್ದ ದಾಮಲ್ಲಿ-ಕೃಷ್ಣಾಜಿ-ಪಂತನು ಬೆಟ್ಟದ ಮೇಲೆ ನಡೆದ ಬ್ರಹ್ಮೋತ್ಸವವೊಂದರಲ್ಲಿ ಪಾಲ್ಗೊಂಡು ಅಮಲ್ದಾರ್-ಶ್ರೀನಿವಾಸಾಚಾರಿ ಎಂಬುವವನಿಗೆ ಗುಡಿಯ ಆದಾಯದ ಗುತ್ತಿಗೆಯನ್ನು ಮಾಡಿಕೊಟ್ಟು ನವಾಬನಿಗೆ ಸಲ್ಲಿಸಬೇಕಾದ ಹಣವನ್ನು ನಿಗದಿಮಾಡಿದನೆಂಬ ಉಲ್ಲೇಖವಿದೆ. ಶ್ರೀನಿವಾಸಾಚಾರಿಯು ತಾನು ಒಪ್ಪಿಕೊಂಡ ಹಣವನ್ನು ನವಾಬನಿಗೆ ಸಲ್ಲಿಸದೆ, ತಗಾದೆ ಹೆಚ್ಚಾಗಲು ತಲೆತಪ್ಪಿಸಿಕೊಂಡು ಓಡಿದ. ವಾಸುದೇವಾಚಾರಿಯೆಂಬ ಇನ್ನೊಬ್ಬ ದಳ್ಳಾಳಿ ಗುಡಿಯ ಗುತ್ತಿಗೆಗೆ ಮುಂದೆಬಂದ. ಹಿಂದಿನ ಬಾಕಿಯ ಸಲುವಾಗಿ ಒಂದು ಲಕ್ಷ ಪಗೋಡಗಳನ್ನು ನವಾಬನಿಗೆ ಸಲ್ಲಿಸಿ ಮುಂದೆ ಪ್ರತಿವರ್ಷವೂ ನಲವತ್ತೇಳು ಸಾವಿರ ಪಗೋಡಗಳಷ್ಟು ಹಣವನ್ನು ಕೊಡುವುದಾಗಿ ನವಾಬನೊಂದಿಗೆ ಕರಾರು ಮಾಡಿಕೊಂಡ. ಆ ಕಾಲದಲ್ಲಿ ವರ್ಷಕ್ಕೆ ಮೂರು ಬ್ರಹ್ಮೋತ್ಸವಗಳು ನಡೆಯುತ್ತಿದ್ದು ವೆಂದೂ, ಯಾತ್ರಿಕರಿಂದ ವರ್ಷದಲ್ಲಿ ಐವತ್ತೆರಡುಸಾವಿರ ರೂಪಾಯಿಗಳೂ, ಉಳಿದಂತೆ (ಎಂದರೆ, ಗುಡಿಗೆ ಬಿಟ್ಟಿದ್ದ ಹಳ್ಳಿಗಳ ಉತ್ಪತ್ತಿಯಾಗಿ) ನಲವತ್ತೈದುಸಾವಿರ ಪಗೋಡಗಳೂ ಆದಾಯವಿದ್ದಿತೆಂದೂ ಒಂದು ಒಕ್ಕಣೆಯಿದೆ. ಇದೇನೇ ಇರಲಿ, ಗುಡಿಯಲ್ಲಿನ ಪೂಜೆ ನೆಮ್ಮದಿಯಿಂದ ನಡೆಯುತ್ತಿದ್ದಿತು, ಜನರು ಭಯವಿಲ್ಲದೆ ಬಂದು ನೆರೆಯುತ್ತಿದ್ದರು.

ತೋಡರಮಲ್ಲ

ಸಾದತ್-ಉಲ್ಲಾ-ಖಾನನ ಆಪ್ತರಲ್ಲಿ ಒಬ್ಬ ತೋಡರ-ಮಲ್ಲ (ಲಾಲಾ-ಖೇಮರಾಂ) ಎಂಬ ಹಿಂದು. ಬೆಜವಾಡದ ಬಳಿ ಕೊಂಡವೀಡು ಎಂಬ ಗ್ರಾಮದ ನಿವಾಸಿಯಾಗಿದ್ದ ಚೆತ್ತರೇಯಮನೆತನವೊಂದಕ್ಕೆ ಸೇರಿದವನೆಂದೂ, ನವಾಬನು ಇವನ ಸಲಹೆಗಳನ್ನು ವಿಶ್ವಾಸದಿಂದ ಸ್ವೀಕರಿಸುತ್ತಿದ್ದನೆಂದೂ ಹೇಳುತ್ತಾರೆ. ಈ ನವಾಬನು ಕ್ರಿಸ್ತಾಬ್ದ 1714ರಲ್ಲಿ ಚೆನ್ನಪಟ್ಟಣದ ಮೇಲೆ (ಎಂದರೆ, ಈಗಿನ ಮದರಾಸಿನ—ಚೆನ್ನೈ—ಮೇಲೆ) ದಾಳಿ ಮಾಡುವಾಗ ಸಂಭವವಿದ್ದಾಗ, ಅಲ್ಲಿ ಫೋರ್ಟ್-ಸೇಂಟ್-ಜಾರ್ಜ್‌ನಲ್ಲಿದ್ದ ಇಂಗ್ಲಿಷರು ತೋಡರಮಲ್ಲನಿಗೆ ವಿಜ್ಞಾಪನಪತ್ರವೊಂದನ್ನು ಬರೆದುಕೊಂಡು ಗೌರವ-ಸಂಭಾವನೆಗಳನ್ನು ಕಳುಹಿಸಿ ಈ ದಾಳಿಯನ್ನು ತಪ್ಪಿಸುವಂತೆ ಕೋರಿಕೊಂಡ ಉಲ್ಲೇಖವಿದೆ. ಬೆಟ್ಟದ ಗುಡಿಗೆ ನಡೆದುಕೊಳ್ಳುತ್ತಿದ್ದವನೆಂದು ತೋರುತ್ತದೆ. ಗುಡಿಯಲ್ಲಿ

ತಿರುಮಲರಾಯ-ಮಂಟಪ ಮತ್ತು ಧ್ವಜಸ್ತಂಭಗಳ ನಡುವೆ ವೇದಿಕೆಯೊಂದರ ಮೇಲೆ ಮೂರು ಭಕ್ತವಿಗ್ರಹಗಳಿವೆ. ಒಬ್ಬನು ಗಂಡಸು, ಉಳಿದಿಬ್ಬರು ಹೆಂಗಸರು. ಗಂಡಸಿನ ವೇಷ-ಭೂಷಣಗಳನ್ನು ನೋಡಿದರೆ ಉತ್ತರದ ಸರದಾರನಂತೆಯೇ ಕಾಣುತ್ತಾನೆ. ಇವನ ಪ್ರತಿಮೆಯ ಮೇಲೆ 'ಲಾಲಾ-ಖೇಮರಾಂ' ಎನ್ನುವ ಬರಹವಿದೆ; ತೋಡರ-ಮಲ್ಲನ ಹೆಸರು ಇದೇ. ಪಕ್ಕದಲ್ಲಿರುವ ಹೆಂಗಸು ಅವನ ತಾಯಿ, 'ಮಾತಾ ದೋಹ-ಪೇ'



ಲಾಲಾ-ಖೇಮರಾಂ, ಪತ್ನಿ ಮತ್ತು ತಾಯಿಯೊಂದಿಗೆ

ಎಂಬ ಬರಹ ಕಾಣಿಸಿಗುತ್ತದೆ. ಇವರಿಬ್ಬರ ವಿಗ್ರಹಗಳು ತಲೆಯಿಂದ ಮಂಡಿಯವರೆಗೆ ಮಾತ್ರ ಉಳಿದಿವೆ, ಕಾಲುಗಳು ಮರೆಯಾಗಿವೆ. ತಾಯಿಯ ಪಕ್ಕದಲ್ಲಿರುವ ಪೂರ್ಣ ಪ್ರತಿಮೆ 'ಪಿತಾ-ಬೀಬಿ'ಯದು; ತೋಡರಮಲ್ಲನ ಹೆಂಡತಿ ಈಕೆ. ಮೂವರೂ ಒಮ್ಮೆ ಗುಡಿಗೆ ದೇವರ ದರ್ಶನಕ್ಕೆ ಬಂದಾಗ ಕೆಲವು ಕೈಂಕರ್ಯಗಳನ್ನು ಸಲ್ಲಿಸಿ ಈ ಪ್ರತಿಮೆಗಳನ್ನು ನಿಲ್ಲಿಸಿದರೆಂದು ತೋರುತ್ತದೆ.

ಆರ್‌ಕಾಡು-ನವಾಬರು

ಸಾದತ್-ಉಲ್ಲಾ-ಖಾನನು ಕ್ರಿಸ್ತಾಬ್ದ 1732ರಲ್ಲಿ ತೀರಿಕೊಂಡಮೇಲೆ ಅವನ ಸೋದರಳಿಯ ದೋಸ್ತ್-ಆಲಿಯು ನವಾಬನಾದನು. ಈ ವೇಳೆಗೆ ನಿಜಾಮನು (ಅಸಫ್-ಜಾಹ್) ಮುಗಲರ ಮೇಲಧಿಕಾರದಿಂದ ಕಳಚಿಕೊಂಡು ಸ್ವತಂತ್ರನಾಗಿಯೇ ದಕ್ಷಿಣಪ್ರಾಂತ್ಯವನ್ನು ಆಳತೊಡಗಿದ್ದನು. ದೋಸ್ತ್-ಆಲಿಯನ್ನು ಆರ್‌ಕಾಡು ನವಾಬಿಗೆ ನೇಮಿಸಿದವನು ಇವನೇ. ನೇಮಕವಾದಾಗ ಮಾಡಿಕೊಂಡ ಕರಾರಿನಂತೆ ದೋಸ್ತ್-ಆಲಿಯು ನಿಜಾಮನಿಗೆ ವರ್ಷಕ್ಕೆ ಸಲ್ಲಿಸಬೇಕಾಗಿದ್ದ ಕಪ್ಪ-ಕಾಣಿಕೆಗಳನ್ನು ಆರು ವರ್ಷಗಳವರೆಗೆ ಸಲ್ಲಿಸದೆ, ಸುಮಾರು ಅರವತ್ತು ಲಕ್ಷ ರೂಪಾಯಿಗಳಷ್ಟು ಹಣವನ್ನು ಬಾಕಿ ಉಳಿಸಿಕೊಂಡನು. ಇದರಲ್ಲಿ ವೇಂಗಡಗುಡಿಯ ಆದಾಯವೇ ಹೆಚ್ಚು ಭಾಗ. ದೋಸ್ತ್-ಆಲಿಯು ವರ್ಷವೂ ತಪ್ಪದೆ ಗುಡಿಯಿಂದ ಹಣವನ್ನು ತೆಗೆದುಕೊಂಡು ಬಳಸಿಕೊಳ್ಳುತ್ತಿದ್ದುದು ನಿಜಾಮನಿಗೆ ಗೂಢಚಾರರಿಂದ ತಿಳಿದುಬಂದಿತು. ಅವನು ರೊಚ್ಚಿಗೆದ್ದು ಮರಾಠಾಸೇನೆಯನ್ನು ದೋಸ್ತ್-ಆಲಿಯ ಮೇಲೆ ಹರಿಯಬಿಟ್ಟನು. ಇತ್ತ ನಿಜಾಮನಿಗೂ ಪೇಶ್ವೆಗೂ ಬಿಕ್ಕಟ್ಟು ಒದಗಿದ್ದು, ನಿಜಾಮನು ಪೇಶ್ವೆಗೆ (ಮರಾಠರಿಗೆ) ಹಣ ತೆರಬೇಕಾಗಿದ್ದಿತು. ಅವನು ಪೇಶ್ವೆಯೊಂದಿಗೆ ಕರಾರು ಮಾಡಿಕೊಂಡು ಮರಾಠಾಸೇನೆಯು ಬೆಟ್ಟದ ಗುಡಿಯ ಹಣವನ್ನು ತೆಗೆದುಕೊಳ್ಳುವಂತೆ ಒಪ್ಪಿದನು. ತನಗೆ ದೋಸ್ತ್-ಆಲಿಯಿಂದ ಬರಬೇಕಾಗಿದ್ದುದನ್ನೂ ಮರಾಠರೇ ಪಡೆದುಕೊಳ್ಳಬಹುದೆಂದೂ ಕರಾರಿದ್ದಿತು.

ಮರಾಠಾಸೇನೆಯ ಐವತ್ತುಸಾವಿರ ಕುದುರೆಸವಾರರು ದಾಮಲಚೆರುವು ಮತ್ತು ಕಲ್ಲೂರು ಕಣಿವೆಗಳ ಮೂಲಕ ಬೆಟ್ಟವನ್ನು ಮುತ್ತಿದರು. ನಡೆದ ಕದನದಲ್ಲಿ ದೋಸ್ತ್-ಆಲಿ ಸತ್ತ. ಅವನ ನವಾಬಿಯನ್ನು ಪಡೆದುಕೊಂಡ ಸಫ್‌ದರ್-ಆಲಿಯು ಮರಾಠಾ ಸೇನೆಗೆ ಮೊದಲ ಕಂತಾಗಿ ಐವತ್ತು-ಸಾವಿರ ರೂಪಾಯಿಗಳನ್ನು ಗುಡಿಯ ಭಂಡಾರದಿಂದ ಕೊಡಿಸಿ ಉಳಿದ ಹಣವನ್ನು ಕ್ರಮವಾಗಿ ತೀರಿಸುವೆನೆಂದು ಕರಾರು ಮಾಡಿಕೊಂಡನು. ಉಳಿದ ಹಣವನ್ನು ಇವನು ತೀರಿಸಿದನೋ ಇಲ್ಲವೋ ತಿಳಿಯದು. ಇವನು ಕ್ರಿಸ್ತಾಬ್ದ 1744ರಲ್ಲಿ, ಎಂದರೆ ಮರಾಠರು ಬೆಟ್ಟದಿಂದ ಕಾಲ್ತೆಗೆದು ನಾಲ್ಕು ವರ್ಷಗಳು ಕಳೆಯುವಷ್ಟರಲ್ಲೇ, ತೀರಿಕೊಂಡು ಅನ್ವರ್-ಉದ್-ದೀನ್ ನವಾಬನಾದ. ನಿಜಾಮನೂ ತೀರಿಕೊಂಡು, ಅವನ ಉತ್ತರಾಧಿಕಾರದ ವಿಚಾರವಾಗಿ ಗೊಂದಲ

ಕಾಣಿಸಿಕೊಂಡಿತು. ಮರಾಠರಿಗೂ ನಿಜಾಮನ ಅಧಿಕಾರಿಗಳಿಗೂ ಹಗರಣಗಳು ನಡೆಯತೊಡಗಿ, ಇಂಗ್ಲಿಷರೂ ಫ್ರೆಂಚರೂ ಇಲ್ಲಿನ ಆಡಳಿತಕ್ಕೆ ಕೈ ಹಾಕಿ, ಕಚ್ಚಾಡತೊಡಗಿದರು. ಬೆಟ್ಟದ ಗುಡಿಯ ಆದಾಯ ಈ ಎಲ್ಲರ ಆಸೆಯನ್ನೂ ಸೂರೆಗೊಂಡಿದ್ದಿತು.

ಫ್ರೆಂಚರೂ ಇಂಗ್ಲಿಷರೂ

ಈ ನಡುವೆ ಇಂಗ್ಲಿಷರೂ ಫ್ರೆಂಚರೂ ದಕ್ಷಿಣದೇಶದ ರಾಜಕಾರಣದಲ್ಲಿ ಎದುರು-ಬಣಗಳನ್ನು ಕಟ್ಟಿಕೊಳ್ಳುತ್ತಿದ್ದರು. ಇಂಗ್ಲಿಷರ ಬಣದ ನಾಯಕ ರಾಬರ್ಟ್ ಕ್ಲೈವ್; ಅವನ ಫ್ರೆಂಚ್ ಎದುರಾಳಿ ದೂಪ್ಲೆ. ಇಬ್ಬರೂ ಜಾಣರು, ಸಮರ್ಥರು, ದುಷ್ಟರು. ಅಂಬೂರು ಕದನದಲ್ಲಿ (1749) ಆರ್‌ಕಾಡು ನವಾಬ ಅನ್ವರ್-ಉದ್-ದೀನನು ತೀರಿಕೊಳ್ಳಲು, ಅವನ ಮಗ ಮಹಮ್ಮದ್-ಆಲಿಯನ್ನು ನವಾಬಿಯಲ್ಲಿ ಕೂರಿಸಲು ಕ್ಲೈವ್ ಮನಸ್ಸುಮಾಡಿದ; ಏಕೆಂದರೆ ಮಹಮ್ಮದ್-ಆಲಿ ಇಂಗ್ಲಿಷ್‌ಸೇನೆಗೆ ನೆರವಾಗಿದ್ದನು. ಒಡನೆಯೇ ದೂಪ್ಲೆ ರಾಜಾ-ಚಾಂದ-ಸಾಹೇಬ ಎಂಬ ಇನ್ನೊಬ್ಬನ ಹಕ್ಕನ್ನು ಎತ್ತಿಹಿಡಿದ. ನವಾಬಿಯಲ್ಲಿ ಆಗಲೇ ಕೂತಿದ್ದ ಮಹಮ್ಮದ್-ಆಲಿ ಕ್ರಿಸ್ತಾಬ್ದ 1750ರಲ್ಲಿ ಬೆಟ್ಟದ ಗುಡಿಯ ವಾರ್ಷಿಕ-ಆದಾಯವನ್ನು (ಎರಡು ಲಕ್ಷ ರೂಪಾಯಿಗಳನ್ನು) ತನ್ನ ಬದಲು ಇಂಗ್ಲಿಷರೇ ತೆಗೆದುಕೊಳ್ಳಬಹುದೆಂದು ಒಪ್ಪಂದ ಮಾಡಿಕೊಟ್ಟು ಕ್ಲೈವನ ನೆರವನ್ನು ಪಡೆದುಕೊಂಡಿದ್ದ. ಆರ್‌ಕಾಡನ್ನು ಮುತ್ತಿದ್ದ ಚಾಂದ-ಸಾಹೇಬನನ್ನು ಕ್ಲೈವ್ ಎದುರಿಸಿ ಹಿಮ್ಮೆಟ್ಟಿಸಿದ್ದ. ಈ ಸಹಾಯಕ್ಕೆ ಪ್ರತಿಫಲವಾಗಿ ಮಹಮ್ಮದ್-ಆಲಿ ಕ್ಲೈವನಿಗೆ ಕೊಟ್ಟುದು ಬೆಟ್ಟದ ಗುಡಿಯ ಆದಾಯ. 'ಅಗಸರ ಕತ್ತೆ ದೊಂಬರಿಗೆ ತ್ಯಾಗ.' ಅಂತೂ ಬೆಟ್ಟದ ಗುಡಿಯ ಆದಾಯದ ಮೇಲೆ ಒಡೆತನ ಇಂಗ್ಲಿಷರ ಪಾಲಾದುದು ಹೀಗೆ.

ಫ್ರೆಂಚರಿಗೂ ಈ ಆದಾಯದ ಮೇಲೆ ಕಣ್ಣಿದ್ದಿತು. ದೂಪ್ಲೆಯು 1742ರಲ್ಲಿ ಫ್ರೆಂಚ್-ವಸಾಹತಾಗಿದ್ದ ಪಾಂಡಿಚೇರಿಯ ಒಡೆಯನಾಗಿ ನಮ್ಮ ದೇಶಕ್ಕೆ ಬಂದೊಡನೆ ಫ್ರೆಂಚರ ಆಳ್ವಿಕೆ ಭಾರತದಲ್ಲಿ ನೆಲೆನಿಲ್ಲುವ ಕನಸನ್ನು ಕಾಣತೊಡಗಿದ್ದ. ಈ ಕನಸನ್ನು ಕೈಗೂಡಿಸಿಕೊಳ್ಳಲು ಬೆಟ್ಟದ ಗುಡಿಯ ನಿರಂತರ ಆದಾಯ ನೆರವಾದೀತೆಂದು ಅವನು ಬಗೆದು ಈ ಕಡೆ ದೃಷ್ಟಿಹರಿಸಿದ. ಬೆಟ್ಟದ ಪಕ್ಕ ಬೊಮ್ಮರಾಜು-ಪಾಳೆಯಂ (ಈಗಿನ ಕಾರ್ವೇಟಿನಗರ) ಎಂಬಲ್ಲಿನ ಜಮೀನುದಾರನು ದೂಪ್ಲೆಯ ಅನುಗ್ರಹವನ್ನು ಪಡೆದುಕೊಳ್ಳಬೇಕೆಂಬ ಆಸೆಯಿಂದ ಅವನಲ್ಲಿಗೆ 1746 ರಲ್ಲಿ ರಾಯಭಾರವೊಂದನ್ನಟ್ಟಿದ. ಅವನ ದುಭಾಷಿಯಾಗಿ, ದೂಪ್ಲೆಯನ್ನು ಪಾಂಡಿಚೇರಿಯ ಬಳಿ ತಿರುವೇಂಕಟಪುರದ ಅರಮನೆಯಲ್ಲಿ ಕಂಡವನು ಪ್ರಸಿದ್ಧನಾದ ಆನಂದರಂಗಂ-ಪಿಳ್ಳೈ. ಜಮೀನುದಾರನು ದೂಪ್ಲೆಯ ಸನ್ಮಾನಕ್ಕೆಂದು ಹಲವಾರು ಬೆಲೆಬಾಳುವ ಉಡುಗೆ-ತೊಡುಗೆಗಳನ್ನೂ ಅರಬ್ಬೀ ಕುದುರೆಯನ್ನೂ ಕಳುಹಿಸಿದ್ದ. ಅಷ್ಟುಮಾತ್ರವಲ್ಲ, ಬೆಟ್ಟದ ಗುಡಿಯ ಪ್ರಸಾದವನ್ನು ಈ ಫ್ರೆಂಚ್ 'ಭಕ್ತ'ನಿಗೆ ಮುಟ್ಟಿಸಲು ತನ್ನ ಕುಲಪುರೋಹಿತ ಅಯಂಬಿರಾಲಯನ್, ಆನಂದರಂಗಂ-ಪಿಳ್ಳೈಯ ಗುರುಪುತ್ರ ಶ್ರೀನಿವಾಸಾಚಾರಿ, ಗುಡಿಯ ನಾಲ್ವರು ಅರ್ಚಕರು ಇವರನ್ನೂ

ಕಳುಹಿಸಿದ್ದ. ಗುಡಿಯ ಪ್ರಸಾದವನ್ನು ಕಟ್ಟಿಕೊಂಡು ದೂಪ್ಲೆ ಏನು ಮಾಡಿಯಾನು? ಗುಡಿಯ ಆದಾಯ ತನ್ನ ಕೈಸೇರಿದರೆ ಸರಿ. ಆದರೆ ಈ ಜಮೀನುದಾರನೇನು ಅಷ್ಟು ಪ್ರಬಲನಲ್ಲ ; ದೂಪ್ಲೆಗೆ ಅವನಿಂದ ಏನು ಪ್ರಯೋಜನವಾದೀತು? ಗುಡಿಯ ಪ್ರಸಾದ ವ್ಯರ್ಥವಾಯಿತಷ್ಟೆ!

ಕ್ಲೈವನು ಮಹಮ್ಮದ್-ಆಲಿಯನ್ನು ನವಾಬಿಯಲ್ಲಿ ಕೂರಿಸಿದ್ದನಷ್ಟೆ. ಈ ಮಹಮ್ಮದ್-ಆಲಿಯ ತಮ್ಮ ನಜೀಬ್-ಉಲ್ಲಾನನ್ನು ಫ್ರೆಂಚರು ಎತ್ತಿಗಟ್ಟಿದರು. ಅವನಿಗೆ ನೆರವಾಗುವೆವೆಂದು ನೆಲ್ಲೂರನ್ನು ವಶಪಡಿಸಿಕೊಂಡು ತಿರುಪತಿಯ ಕಡೆ ನುಗ್ಗಿದರು. ನಾರಾಯಣವರದ ಬಳಿಯಿದ್ದ ಆಕಾಶರಾಜು-ಕೋಟೆಯನ್ನು ಮುತ್ತಿ ಆಕ್ರಮಿಸಿಕೊಂಡು ಬೆಟ್ಟಕ್ಕೆ ಹೋಗುವ ಹೆದ್ದಾರಿಯನ್ನು ಹಿಡಿದುಕೊಂಡರು. ಇದರ ಸುಳಿವು ಮದರಾಸಿನ ಈಸ್ಟ್-ಇಂಡಿಯಾ-ಕಂಪೆನಿಯವರಿಗೆ (ಇಂಗ್ಲಿಷರಿಗೆ) ತಿಳಿದೊಡನೆ ಸೇನೆಯ ತುಕಡಿಯೊಂದನ್ನು ತಿರುಪತಿಗೆ ಅಟ್ಟಿ, ಬೆಟ್ಟವನ್ನು ಭದ್ರಪಡಿಸಿಕೊಂಡರು. ಅದು ಬ್ರಹ್ಮೋತ್ಸವದ ಕಾಲ. ಬೆಟ್ಟವನ್ನೇರಿ ಹೋಗಲು ಬಹುಸಂಖ್ಯೆಯಲ್ಲಿ ಯಾತ್ರಿಕರು ಕೆಳಗಡೆ ನೆರೆದಿದ್ದರು. ಹೆದ್ದಾರಿಯಲ್ಲೇ ನಜೀಬ್-ಉಲ್ಲಾನು ಫ್ರೆಂಚರ ನೆರವಿನಿಂದ ಯಾತ್ರಿಕರನ್ನೆಲ್ಲ ಸುಲಿಗೆ ಮಾಡಿ ಬೆಟ್ಟಕ್ಕೆ ಹೋಗಗೊಡದೆ ಹಿಂದಕ್ಕೆ ಕಳುಹಿಸಿದನು. ಆ ವರ್ಷದ ಬ್ರಹ್ಮೋತ್ಸವದ ಆದಾಯ ನಜೀಬ್-ಉಲ್ಲಾನ ಪಾಲಾಯಿತು, ಅದರ ಒಂದು ಪಾಲು ಫ್ರೆಂಚರಿಗೂ ದಕ್ಕಿರಬೇಕು.

ಹೊರನಾಡಿನ ಜನರೇ ಗುಡಿಯ ಆದಾಯಕ್ಕೆ ಹೀಗೆ ಬಾಯಿಬಿಟ್ಟು ಕೈಚಾಚಿದಾಗ ನಮ್ಮವರು ಸುಮ್ಮನಿರಬೇಕೇ? 1753ರಲ್ಲಿ ನೆಲ್ಲೂರಿನ ಮಹಮ್ಮದ್ ಕಮಾಲ್ ಎಂಬ ಸೇನಾನಿ ತಿರುಪತಿಯನ್ನು ಮುತ್ತಿ, ವಶಪಡಿಸಿಕೊಂಡ; ಇನ್ನೇನು ಬೆಟ್ಟವನ್ನೇರಿ ಹೋಗಿ ಗುಡಿಯ ಆ ವರ್ಷದ ಆದಾಯವನ್ನು (ಅರವತ್ತು-ಸಾವಿರ ಪಗೋಡ ಹಣಗಳು) ಲೂಟಿಮಾಡಬೇಕೆನ್ನುವಷ್ಟರಲ್ಲಿ ಇಂಗ್ಲಿಷರ ಸೇನೆ ಅವನನ್ನು ತಡೆಗಟ್ಟಿ ಹಿಂದೂಡಿತು. 1755ರಲ್ಲಿ ಕಡಪದ ನವಾಬನು ಮರಾಠಾ ದಂಡನಾಯಕ ನರಸಿಂಗರಾವ್ ಎಂಬುವನೊಂದಿಗೆ ಬೆಟ್ಟವನ್ನು ಬ್ರಹ್ಮೋತ್ಸವದ ಸಮಯದಲ್ಲಿ ಮುತ್ತಿದ; ಆದರೆ ಇಂಗ್ಲಿಷರು ಎಚ್ಚರವಾಗಿದ್ದುದರಿಂದ ಇವನಿಗೇನೂ ದಕ್ಕಲಿಲ್ಲ. ಮೂರು ವರ್ಷಗಳ ನಂತರ ಅಬ್ದುಲ್-ಬಾಬ್-ಖಾನ್ ಒಂದುಸಾವಿರ ಕುದುರೆ ಪಡೆ, ಒಂದುಸಾವಿರ ಕಾಲಾಳು, ಐನೂರು ಪೇದೆಗಳೊಡನೆ ಚಂದ್ರಗಿರಿಯನ್ನು ಹೊಕ್ಕು ಬೆಟ್ಟವನ್ನೇರಲು ಯತ್ನಿಸಿ ವಿಫಲನಾದ. ಆರ್‌ಕಾಡು-ನವಾಬ ಮಹಮದ್-ಆಲಿಯ ಇನ್ನೊಬ್ಬ ತಮ್ಮ ಕಿಲ್ಲಾದಾರ ಅಬ್ದುಲ್-ವಹಾಬ್ ಚಂದ್ರಗಿರಿಯನ್ನು ವಶಪಡಿಸಿಕೊಂಡು ಬೆಟ್ಟವನ್ನೇರುವಷ್ಟರಲ್ಲಿ ಗುತ್ತಿಗೆದಾರನು ತನ್ನ ಸಿಪಾಯಿಗಳ ಪಡೆಯ ನೆರವಿನಿಂದ ಅವನನ್ನು ಹೊಡೆದಟ್ಟಿದ. ಪೇಶ್ವೆಯ ಅಧಿಕಾರಿಗಳಾದ ಬಾಲಕೃಷ್ಣ-ಶಾಸ್ತ್ರಿ ಮತ್ತು ರಾಘವಾಚಾರಿ ಎಂಬಿಬ್ಬರು ಐನೂರು ಕುದುರೆಗಳ ಪಡೆ, ಒಂದುಸಾವಿರ ಕಾಲಾಳುಗಳ ಸೇನೆಯೊಂದಿಗೆ ಬಂದು ಗುಡಿಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲೆತ್ನಿಸಿದರು. ಗುಡಿಯ ಗುತ್ತಿಗೆದಾರನು ಇವರನ್ನು ಹಿಮ್ಮೆಟ್ಟಿಸಿದನು.

ಮರುವರ್ಷ, ಮರಾಠಾಸಾಹಸಿ ಗೋಪಾಲರಾವ್ ಇದೇ ಉದ್ದೇಶದಿಂದ ಗುಡಿಯ ಮೇಲೆರಗಲು ಹವಣಿಸಿದ; ಆದರೆ ಪೇಶ್ವೆಯು ಇವನನ್ನು ಹಿಂದಿರುಗುವಂತೆ ಅಪ್ಪಣೆ ಮಾಡಿದಮೇಲೆ ತನ್ನ ಸೇನೆಯ ತುಕಡಿಯೊಂದನ್ನು ಅಲ್ಲಿಯೇ ಬಿಟ್ಟು ಹಿಂದಿರುಗಿದ. ಈ ತುಕಡಿ ಮುಂದೆ ನಾರಾಯಣಶಾಸ್ತ್ರಿ ಎಂಬುವನ ನಾಯಕತ್ವದಲ್ಲಿ ಸುತ್ತಮುತ್ತಲ ಪಾಳೆಗಾರರ ನೆರವಿನಿಂದ, ಬೆಟ್ಟವನ್ನೇರಿ ಹೋಗಿ ಗುಡಿಯನ್ನು ವಶಪಡಿಸಿಕೊಳ್ಳಲೆತ್ನಿಸಿತು. ಇದನ್ನೆದುರಿಸಿದ ಇಂಗ್ಲಿಷ್‌ಸೇನೆ ಮೊದಲು ಸೋತಿತು; ನಾರಾಯಣಶಾಸ್ತ್ರಿಯದೇ ಮೇಲುಗೈಯಾಯಿತು. ಆದರೆ ಇಂಗ್ಲಿಷ್‌ಸೇನೆ ಬಲವನ್ನು ಹೆಚ್ಚಿಸಿಕೊಂಡು ಬಂದು ಗುಡಿಯೆದುರೇ ನಾರಾಯಣಶಾಸ್ತ್ರಿಯ ಸೇನೆಯೊಂದಿಗೆ ಬಿರುಸಾಗಿ ಕಾದಾಡಿ ಅದನ್ನು ಸೋಲಿಸಿತು. ಅಂದಿನಿಂದ ಗುಡಿಯನ್ನು ಕಾಯಲು ಇಂಗ್ಲಿಷರ ಸಣ್ಣದೊಂದು ಪಡೆ ಯಾವಾಗಲೂ ಬೆಟ್ಟದ ಮೇಲೆ ಉಳಿಯಿತು.

ಅದೇ ಸಮಯದಲ್ಲಿ ಫ್ರೆಂಚ್-ದಂಡನಾಯಕ ಬುಸ್ಸಿ ಹೈದರಾಬಾದಿನಿಂದ ಮದ್ರಾಸಿಗೆ ಹೋಗುತ್ತಿದ್ದವನು ದಾರಿಯಲ್ಲಿ ತಿರುಪತಿಯ ಕಡೆ ತಿರುಗಿ, ಮರಾಠಾ ಸೇನೆಯ ನೆರವನ್ನು ಪಡೆದುಕೊಂಡು ಬೆಟ್ಟದ ಗುಡಿಯ ಗುತ್ತಿಗೆದಾರನನ್ನು ಬೆದರಿಸಿ ಆ ವರ್ಷದ ಆದಾಯವನ್ನು ಕೊಂಡುಹೋಗಬೇಕೆಂದು ಹವಣಿಸಿದ. ಚಂದ್ರಗಿರಿಯ ಅಬ್ದುಲ್-ವಹಾಬ್, ನೆಲ್ಲೂರಿನ ನಜೀಬ್-ಉಲ್ಲಾ, ಕಾರ್ವೇಟಿನಗರದ ಜಮೀನುದಾರ ಮೊದಲಾದವರು ಬುಸ್ಸಿಗೆ ನೆರವಾಗುವ ಭರವಸೆ ನೀಡಿದರು. ಆದರೆ ಇಂಗ್ಲಿಷರ ಬಲದ ಮುಂದೆ ಇವನ ಆಟ ಸಾಗದೆ, ತನ್ನ ದಾರಿ ಹಿಡಿಯಬೇಕಾಯಿತು.

ಗುಡಿಯ ಮೇಲೆ ಫ್ರೆಂಚರಿಗಿದ್ದ ಆಸಕ್ತಿ ಇಷ್ಟಕ್ಕೇ ಮುಗಿಯಲಿಲ್ಲ. ಬೆಟ್ಟದ ಒಡೆತನವನ್ನು ಉಪಾಯದಿಂದ ಗಳಿಸಿಕೊಳ್ಳುವ ನಿರೀಕ್ಷೆಯಿಂದ ಮೈಸೂರುಅರಸರ ನೆರವನ್ನು ಸಾಧಿಸಿಕೊಳ್ಳುವ ಯತ್ನವನ್ನು ನಡೆಸಿದರು. ಆಗ ಮೈಸೂರುನಾಡನ್ನು ಆಳುತ್ತಿದ್ದವರು ನಂಜರಾಜ ಮತ್ತು ದೇವರಾಜರೆಂಬ ಸೋದರರು. ಮೊದಲಿಂದ ಮೈಸೂರಿನ ಅರಸರು ಬೆಟ್ಟದ ಗುಡಿಗೆ ಉದಾರವಾಗಿ ನಡೆದುಕೊಳ್ಳುತ್ತಿದ್ದರಾಗಿ, ಗುಡಿಯ ಆಡಳಿತದಲ್ಲಿ ಅವರಿಗೆ ವಿಶೇಷವಾದ ಮರ್ಯಾದೆಯಿದ್ದಿತು. ನಂಜರಾಜನ ವಕೀಲನಾಗಿದ್ದು, ಹೊರಗಣ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದವನು ವೆಂಕಟ ನಾರಣಪ್ಪಯ್ಯ. ಇವನ ಮೂಲಕ ಫ್ರೆಂಚರು ದೊರೆಗಳನ್ನು ಒಲಿಸಿಕೊಳ್ಳಬೇಕೆಂದು ಉದ್ದೇಶಿಸಿದರು. ಫ್ರೆಂಚ್ ಆಡಳಿತದ ಪರವಾಗಿ ಮದಾರಿ-ಗೊದೆಹು ಎಂಬಾಕೆ ವೆಂಕಟನಾರಣಪ್ಪಯ್ಯನಿಗೆ ಹಣವನ್ನು ಕೊಟ್ಟು, ತಿರುಮಲೆಯ ಮೇಲೆ ಫ್ರೆಂಚರ ನೆಲೆ ಮೂಡಲು ನೆರವಾಗಬೇಕೆಂದು ಕೇಳಿಕೊಂಡಳು. ಆದರೆ ಅಷ್ಟರಲ್ಲಿ, ದೊರೆಗಳ ದಂಡನಾಯಕನಾಗಿದ್ದ ಹೈದರ್-ಆಲಿ ದೊರೆಗಳನ್ನು ಕಡೆಗಾಣಿಸಿ ದೇಶದ ಆಡಳಿತವನ್ನು ತಾನೇ ನಡೆಸತೊಡಗಿದ. ಇವನು ಫ್ರೆಂಚರಿಗೆ ಅನುಕೂಲನಾಗಿರಲಿಲ್ಲ. ಅಲ್ಲದೆ, 1778ರಲ್ಲಿ ಹೈದರನು ಚಂದ್ರಗಿರಿಯನ್ನು ಮುತ್ತಿ, ಫ್ರೆಂಚರ ಒಡನಾಡಿಯಾಗಿದ್ದ ಅಬ್ದುಲ್-ವಹಾಬನನ್ನು ನೆಲೆತಪ್ಪಿಸಿ ಓಡಿಸಿದಮೇಲಂತೂ ಫ್ರೆಂಚರ ಕನಸು ಮಣ್ಣುಗೂಡಿತು.

ಈಸ್ಟ್ ಇಂಡಿಯಾ ಕಂಪೆನಿಯ ವಶ

ಈಸ್ಟ್-ಇಂಡಿಯಾ-ಕಂಪೆನಿಯವರು ಆರ್‌ಕಾಡು-ನವಾಬನಿಗೆ ಬೆಂಬಲವಾಗಿ ನಿಂತು ಅವನ ಯೋಗಕ್ಷೇಮವನ್ನು ನೋಡಿಕೊಳ್ಳುವುದಕ್ಕೆ ಪ್ರತಿಫಲವಾಗಿ ನವಾಬನು ತನ್ನ ಅಧೀನದಲ್ಲಿದ್ದ ಬೆಟ್ಟದ ಗುಡಿಯ ಆದಾಯವನ್ನು ಅವರಿಗೆ ಒಪ್ಪಿಸುವ ವ್ಯವಸ್ಥೆ ಮಾಡಿದ್ದನಷ್ಟೆ. ಯಾವ ಅರಸನೂ ತಮಗೆ ಸಲ್ಲಿಸುತ್ತಿದ್ದ ಕಪ್ಪಕಾಣಿಕೆಗಳಿಗಿಂತ ಹೆಚ್ಚು ಕ್ರಮವಾಗಿ, ತಪ್ಪದೆ, ಗುಡಿಯ ಆದಾಯ ತಮಗೆ ಸಲ್ಲುತ್ತಿದ್ದುದನ್ನು ಇಂಗ್ಲಿಷರು ಗಮನಿಸಿ ಈ ಆದಾಯದ ಮೂಲವನ್ನು ಗಟ್ಟಿಮಾಡಿಕೊಳ್ಳಬೇಕೆಂದು ಬಯಸಿದುದು ಸರಿಯೇ. ವರ್ಷದಲ್ಲಿ ಮೂರು ಬಾರಿ ಗುಡಿಯ ಆದಾಯ ಅವರಿಗೆ ಸಂದಾಯವಾಗುತ್ತಿದ್ದಿತು—ಬ್ರಹ್ಮೋತ್ಸವ (ಸುಮಾರು ಸೆಪ್ಟೆಂಬರ್ ತಿಂಗಳು), ಮುಕ್ಕೋಟಿ ದ್ವಾದಶಿ (ಡಿಸೆಂಬರ್ ತಿಂಗಳ ಸುಮಾರಿಗೆ) ಮತ್ತು ಅನಿವರೈ-ಆಸ್ಥಾನ (ಜೂನ್) ಸಮಯ)ಗಳಲ್ಲಿ. ಬೆಟ್ಟದ ಮೇಲೆ ಯಾತ್ರಿಕರು ಹೆಚ್ಚಾಗಿ ನೆರೆಯುತ್ತಿದ್ದುದು ಈ ಮೂರು ಸಂದರ್ಭಗಳಲ್ಲೇ; ಕೊಪ್ಪರ ತುಂಬುತ್ತಿದ್ದುದೂ ಆಗಲೇ. ನವಾಬನು ಗುಡಿಯ ಆದಾಯವನ್ನು ಪಡೆದು ಕೊಳ್ಳಲು ಗುತ್ತಿಗೆದಾರನೊಬ್ಬನನ್ನು ನೇಮಿಸುತ್ತಿದ್ದುದನ್ನು ಕಂಡಿದ್ದೇವಷ್ಟೆ. ಈಗ ಈ ಆದಾಯವನ್ನು ಇಂಗ್ಲಿಷರಿಗೆ ಒಪ್ಪಿಸಬೇಕಾದಾಗ ನವಾಬನ ದಿವಾನ ಸಂಪತ್‌ರಾವ್ (ಸಾಮಾನ್ಯವಾಗಿ ಕಾಂಚೀಪುರದಲ್ಲಿರುತ್ತಿದ್ದವನು) ಇದರ ಹೊಣೆಯನ್ನು ಹೊತ್ತುಕೊಳ್ಳ ಬೇಕಾಯಿತು. ಈ ಸಂದರ್ಭದಲ್ಲಿ ಅವನು ಇಂಗ್ಲಿಷರ ದಿವಾನನಾಗಿಯೂ ಕೆಲಸ ನಿರ್ವಹಿಸುತ್ತಿದ್ದ. ಇಂಗ್ಲಿಷರಿಗೆ ಗುಡಿಯ ಆದಾಯ ಸಲ್ಲತೊಡಗಿದುದು 1751ರಿಂದ. ಆಗ ಗುಡಿಯ ಗುತ್ತಿಗೆದಾರನಾಗಿದ್ದವನು ಶ್ರೀನಿವಾಸಾಚಾರಿ. ಅವನಿಂದ ನವಾಬನ ಪರವಾಗಿ ಗುಡಿಯ ಆದಾಯವನ್ನು ತೆಗೆದುಕೊಳ್ಳುತ್ತಿದ್ದವನು ನವಾಬನ ನಂಟನೂ ಚಂದ್ರಗಿರಿಯಲ್ಲೇ ಇರುತ್ತಿದ್ದವನೂ ಆದ ಅಬ್ದುಲ್-ಬಾಬ್-ಖಾನ್. ಇವನು ಸಂಪತ್ ರಾವ್‌ಗೆ ಹಣವನ್ನು ಮುಟ್ಟಿಸಬೇಕೆಂದೂ, ಸಂಪತ್‌ರಾವ್ ಮದ್ರಾಸಿನ ಫೋರ್ಟ್-ಸೇಂಟ್-ಜಾರ್ಜ್‌ನಲ್ಲಿದ್ದ ಈಸ್ಟ್-ಇಂಡಿಯ-ಕಂಪೆನಿಯ ಅಧಿಕಾರಿಗಳಿಗೆ ಖುದ್ದಾಗಿ ಹಣವನ್ನು ಸಲ್ಲಿಸಬೇಕೆಂದೂ ವ್ಯವಸ್ಥೆಯಿದ್ದಿತು. ಆದರೆ ಎಷ್ಟೋ ವೇಳೆ ಚಂದ್ರಗಿರಿಯ ಅಬ್ದುಲ್-ಬಾಬ್-ಖಾನ್ ಶ್ರೀನಿವಾಸಾಚಾರಿಯಿಂದ ಸರಿಯಾಗಿ ಹಣವನ್ನು ಪಡೆದು ಕೊಂಡು, ಅದರ ಒಂದು ಪಾಲನ್ನು ತಾನೇ ನುಂಗಿ, ಉಳಿದ ಅಷ್ಟಿಷ್ಟನ್ನು ಸಂಪತ್ ರಾವ್‌ಗೆ ಮುಟ್ಟಿಸಿ, ಗುತ್ತಿಗೆದಾರನು ತೆತ್ತದ್ದು ಇಷ್ಟೇ ಎಂದು ಸುಳ್ಳು ಒಕ್ಕಣಿಕೆ ಸಲ್ಲಿಸುತ್ತಿದ್ದನು.

ಇದು ಈಸ್ಟ್-ಇಂಡಿಯ-ಕಂಪೆನಿಯ ಅಧಿಕಾರಿಗಳ ಗಮನಕ್ಕೆ ಬಂದ ಮೇಲೆ ಗುತ್ತಿಗೆದಾರನಿಂದ ಹಣವನ್ನು ಸಂಪತ್‌ರಾಯನ ಮೂಲಕ ತಾವೇ ನೇರಾಗಿ ಪಡೆದು ಕೊಳ್ಳುವ ಏರ್ಪಾಟು ಮಾಡಿದರು. 1654ರಲ್ಲಿ ನವಾಬನು ಗುಡಿಯ ಆದಾಯದ ಮೇಲೆ ತನಗಿದ್ದ ಹಕ್ಕನ್ನೆಲ್ಲ ಇಂಗ್ಲಿಷರಿಗೆ ಬಿಟ್ಟುಕೊಟ್ಟನು. ಆಗ ಅವರು ಗುಡಿಯ ಗುತ್ತಿಗೆಯನ್ನು ವರ್ಷವರ್ಷವೂ ಹರಾಜುಮಾಡುವ ಪದ್ಧತಿಯನ್ನು ಜಾರಿಗೆ ತಂದು,

ಗುತ್ತಿಗೆದಾರನಿಗೆ ಹಣ-ವಸೂಲಾತಿಯಲ್ಲಿ ನೆರವಾಗಲು ತಹಸೀಲ್‌ದಾರನೊಬ್ಬನನ್ನು ನೇಮಿಸಿದರು. ಈ ಪದ್ಧತಿ ಮೊದಲಾದಾಗ ಬಂದ ಗುತ್ತಿಗೆದಾರ ಶ್ರೀನಿವಾಸಾಚಾರಿ; ತಹಸೀಲ್‌ದಾರ ಕೃಷ್ಣಾಜಿ-ಪಂತ. ಗುಡಿಯ ಆದಾಯವನ್ನು ಗುತ್ತಿಗೆದಾರನಿಂದ ಪಡೆದು ಕೊಳ್ಳುವದೂ ತಮಗೆ ಸಲ್ಲಿಸುವುದೂ ಮೊದಲು ನವಾಬನ ಹೊಣೆಯಾಗಿದ್ದಿತು; ಈಗ ಅವನ ಹೊಣೆಗಾರಿಕೆ ತಪ್ಪಿತು. ಇದರಿಂದ ಗುಡಿಯ ಮೇಲೆ ಇಂಗ್ಲಿಷರ ಹಿಡಿತ ನೇರವಾಯಿತು. ಆದರೂ ಗುಡಿಯ ಒಳ ಆಡಳಿತದಲ್ಲಿ ಅವರು ಕೈಹಾಕಲಿಲ್ಲ. ಗುತ್ತಿಗೆದಾರನಿಂದ ಹಣ ಪಡೆಯುವಷ್ಟಕ್ಕೆ ತಮ್ಮ ಅಧಿಕಾರವನ್ನು ಮುಗಿಸುತ್ತಿದ್ದರು.

ಅವರಿಗೆ ಆಗ ಸಲ್ಲುತ್ತಿದ್ದ ಗುಡಿಯ ಆದಾಯದ ವಿವರಗಳು ಈಸ್ಟ್-ಇಂಡಿಯ-ಕಂಪೆನಿಯವರ ದಾಖಲೆಗಳಲ್ಲಿ ದೊರೆಯುತ್ತವೆ. ಕ್ರಿಸ್ತಾಬ್ದ 1753-1754ರ ಸಾಲಿನಲ್ಲಿ ಅವರಿಗೆ ಗುಡಿಯಿಂದ ಸಂದ ಹಣ ಅರವತ್ತೆರಡುಸಾವಿರ ಉತ್ತರ-ಆರ್‌ಕಾಡು ರೂಪಾಯಿಗಳು ಮತ್ತು ಐವತ್ತಾರುಸಾವಿರ ನಾನ್ನೂರಮೂವತ್ತೆರಡು ಸದಾತ್-ಉಲ್ಲಾ ಪಗೋಡಗಳು. ಮರುವರ್ಷದ ಆದಾಯ ಐವತ್ತೆಂಟುಸಾವಿರ ರೂಪಾಯಿಗಳು, ಐವತ್ತೊಂಬತ್ತುಸಾವಿರ ನಾನ್ನೂರು ಪಗೋಡಗಳು. ಇಷ್ಟೊಂದು ಆದಾಯವಿರುವ ಗುಡಿಯ ಆಡಳಿತದಲ್ಲಿ ಕಂಪೆನಿಯವರು ಆಸಕ್ತಿವಹಿಸದೆ ಇರುವುದು ಹೇಗೆ? ಎಷ್ಟಾದರೂ ಅವರು ವ್ಯಾಪಾರಗಾರರು; ಇಂಗ್ಲಿಷರ ಪ್ರಾಬಲ್ಯ ನಾಡಿನಲ್ಲಿ ಈಗಲೇ ಮೂಡಿದ್ದಿತಾಗಿ ಈ ವ್ಯಾಪಾರಗಾರರ ಬಲವೂ ಹೆಚ್ಚಿತ್ತಲ್ಲವೆ? ಲಾರ್ಡ್ ವೆಲ್ಲೆಸ್ಲಿ ನಾಡಿನ ಆಡಳಿತವನ್ನು ಅಷ್ಟಿಷ್ಟು ಕೈಗೊಂಡು ನಡೆಸುತ್ತಿದ್ದಾಗ, 1801ರಲ್ಲಿ ಕಂಪೆನಿಯವರು ನವಾಬನ ಮೇಲೆ ಏನೋ ಆರೋಪಗಳನ್ನು ಹೇರಿ, ನವಾಬಿಯನ್ನು ಕರಗಿಸಿಬಿಟ್ಟರು.

ಇಡೀ ಕರ್ನಾಟಕವು ಇಂಗ್ಲಿಷರ ವಶವಾಯಿತು. ಗುಡಿಯ ಆಡಳಿತವು ನೇರವಾಗಿ ಕಂಪೆನಿಯವರ ಕೈಗೆ ಬಂದಿತು. ಒಡನೆಯೇ ಗುಡಿಗೆ ಸೇರಿದ್ದ ಹಳ್ಳಿಗಳ ಆದಾಯವೆಲ್ಲ ಕಂಪೆನಿಗೆ ಸೇರಬೇಕೆಂದೂ, ಕಂಪೆನಿಯವರೇ ಗುಡಿಯ ಸಿಬ್ಬಂದಿಯ ಸಂಬಳ-ಸಾರಿಗೆ ಗಳನ್ನು ನೋಡಿಕೊಳ್ಳುವರೆಂದೂ ಸರಕಾರದ ನಿರೂಪ ಹೊರಟಿತು. ವೆಚ್ಚಕ್ಕೆ ಬಹುಪಟ್ಟು ಹೆಚ್ಚು ಆದಾಯವಿದ್ದ ಗುಡಿ ಅದು. ಆಗ ವರ್ಷಕ್ಕೆ (1822) ಗುಡಿಯ ವರಮಾನ ಸುಮಾರು ಒಂದೂವರೆ ಲಕ್ಷ ರೂಪಾಯಿಗಳಷ್ಟಾದರೆ ಕಂಪೆನಿಯು ವೆಚ್ಚಮಾಡ ಬೇಕಾಗಿದ್ದುದು ಇಪ್ಪತ್ತುಸಾವಿರ ರೂಪಾಯಿಗಳಷ್ಟೆ! ಬರುಬರುತ್ತ ಗುಡಿಯ ವರಮಾನ ಇನ್ನೂ ಹೆಚ್ಚಿತು—1823ರಲ್ಲಿ ಒಂದೂಮುಕ್ಕಾಲು ಲಕ್ಷ ರೂಪಾಯಿಗಳು, ಮರು ವರ್ಷದ ಆದಾಯ ಎರಡೂಕಾಲು ಲಕ್ಷ ರೂಪಾಯಿಗಳು. ಈ ವರ್ಷಗಳಲ್ಲಿ ಸರಕಾರ (ಎಂದರೆ, ಕಂಪೆನಿ) ಗುಡಿಗೆ ಕೊಟ್ಟ ಹಣ ಕ್ರಮವಾಗಿ ಸುಮಾರು ಮೂವತ್ತೊಂದು ಸಾವಿರ ಮತ್ತು ಮೂವತ್ತೈದುಸಾವಿರ ರೂಪಾಯಿಗಳಷ್ಟೆ. ಇನ್ನಾವ ಉದ್ದಿಮೆ ಕಂಪೆನಿಗೆ ಇಷ್ಟು ಲಾಭವನ್ನು ಇಷ್ಟು ಸುಲಭವಾಗಿ ಗಳಿಸಿಕೊಟ್ಟಿದ್ದೀತು?

ಕಂಪೆನಿಯ ಕೈಲಿ ಗುಡಿಯ ಆಡಳಿತವಿದ್ದುದು 1801ರಿಂದ 1841ರವರೆಗೆ. ದೇವಾಲಯ, ಮಸೀದಿ ಮೊದಲಾದ ಧರ್ಮಸಂಸ್ಥೆಗಳಿಗೆಂದು ಬಿಟ್ಟ ಹಳ್ಳಿಗಳ ವಾರ್ಷಿಕ ಆದಾಯವನ್ನು ವಹಿಸಿಕೊಳ್ಳುವ ಸೌಲಭ್ಯ, ಮತ್ತು ಆಯಾ ಧರ್ಮಸಂಸ್ಥೆಗಳನ್ನು

ಸಮರ್ಪಕವಾಗಿ ನಿರ್ವಹಿಸುವ ಹೊಣೆ ಇವುಗಳನ್ನು ಸರಕಾರಕ್ಕೆ ಒದಗಿಸಿದ 1817ರ 'ಮದ್ರಾಸ್ ರೆಗುಲೇಷನ್ ಏಳು' ಎಂಬ ಕಾನೂನಿನ ಪ್ರಕಾರ ಈ ಗುಡಿಯ ಪರಮಾಧಿಕಾರ ರೆವೆನ್ಯೂ-ಬೋರ್ಡ್‌ನ ಅಧೀನನಾಗಿ ಕೆಲಸ ಮಾಡುತ್ತಿದ್ದ ಜಿಲ್ಲಾ ಕಲೆಕ್ಟರನಿಗೆ ಬಂದಿತು. ಗುಡಿಯ ಆದಾಯ-ವೆಚ್ಚ, ವ್ಯವಹಾರ-ನಿರ್ವಹಣೆಗಳಲ್ಲಿ ಅವನು ರಾಜ್ಯಸರಕಾರದ ಪ್ರತಿನಿಧಿಯಾಗಿ, ಸರಕಾರದ ಆಸಕ್ತಿಯನ್ನು ಗಮನಿಸಿ ಕೆಲಸ ಮಾಡಬೇಕೆಂಬ ವಿಧಿಯಿದ್ದಿತು. ಬ್ರಹ್ಮೋತ್ಸವ ಮೊದಲಾದ ವಿಶೇಷಸಂದರ್ಭಗಳಲ್ಲಿ ಹೆಚ್ಚು ಮಂದಿ ಯಾತ್ರಿಕರು ನೆರೆಯುತ್ತಿದ್ದುದರಿಂದ (ಎಂದರೆ ಕಾಣಿಕೆಯ ಪ್ರಮಾಣ ಹೆಚ್ಚುತ್ತಿದ್ದುದರಿಂದ) , ಕಂಪೆನಿಯ ಆಸಕ್ತಿಗೆ ಲೋಪ ಬರದಂತೆ, ಕಲೆಕ್ಟರನೇ ಖುದ್ದಾಗಿ ಅಲ್ಲಿದ್ದು ಕೊಪ್ಪರದ ಮೇಲೆ ಗಮನವಿರಿಸಬೇಕೆಂಬ ನಿರ್ಬಂಧವಿದ್ದಿತು. ಕಲೆಕ್ಟರನಿಗೆ ವಿಧೇಯನಾಗಿ ಗುಡಿಯ ದಿನನಿತ್ಯದ ಆಗುಹೋಗುಗಳನ್ನೆಲ್ಲ ನೋಡಿಕೊಳ್ಳಲು ಒಬ್ಬ ತಹಸೀಲ್‌ದಾರ, ಅವನ ಕೈಕೆಳಗೆ ಒಬ್ಬ ಶಿರಸ್ತೇದಾರ, ಅವನಿಗೆ ನೆರವಾಗಿ ನಾಲ್ವರು ಗುಮಾಸ್ತರು ಮೊದಲಾಗಿ ಸಿಬ್ಬಂದಿಯೂ ವ್ಯವಸ್ಥಿತವಾಯಿತು. ಉಗ್ರಾಣದ ಪಾರುಪತ್ಯ ಜೀಯಂಗಾರರ ಪಾಲಿಗೆ ಬಂದಿತು. ಗುಡಿಯ ಹಲವು ವಿಧಿಗಳಲ್ಲಿ ಸಾಮಾನು ಸರಬರಾಜು, ಸೇವಕರ ಮೇಲ್ವಿಚಾರಣೆ ಮೊದಲಾದುವನ್ನು ನೋಡಿಕೊಳ್ಳಲು ತಹಸೀಲ್‌ದಾರನ ಕೈಕೆಳಗೆ ಪಾರುಪತ್ಯದಾರನೂ ಒಬ್ಬನಿರುತ್ತಿದ್ದ.

ಸವಾಲ್-ಜವಾಬ್ ಪಟ್ಟಿ

ಗುಡಿಯಲ್ಲಿ ಹಿಂದಿನಿಂದ ನಡೆದುಬಂದ ವಿಧಿಗಳನ್ನೂ ಉತ್ಸವಗಳನ್ನೂ ಕೈಂಕರ್ಯಗಳನ್ನೂ ತಪ್ಪದೆ ನಡೆಯಿಸಿಕೊಂಡು ಬರಲೂ ಕಂಪೆನಿಯವರು ಕೆಲವು ಏರ್ಪಾಟುಗಳನ್ನು ಮಾಡಿದರು. ಗುಡಿಗೆ ಸಂಬಂಧಿಸಿದ ಎಲ್ಲರನ್ನೂ ಕಂಡು, ಅವರ ಮುಂದೆ ಒಂದು ಪ್ರಶ್ನಾವಳಿಯನ್ನಿರಿಸಿ, ಅದಕ್ಕೆ ಅವರಿಂದ ಉತ್ತರಗಳನ್ನು ಪಡೆದು ಅದನ್ನು 'ಸವಾಲ್-ಜವಾಬ್ ಪಟ್ಟಿ' ಎಂಬ ಹೆಸರಿನಿಂದ ಪ್ರಕಟಿಸಿದರು. ಇದರಿಂದ ಗುಡಿಯ ನಡಾವಳಿಯ ವಿವರಗಳು ನಿರ್ದಿಷ್ಟವಾದುವು; ಸಿಬ್ಬಂದಿಯ ಕೆಲಸದ ವಿಂಗಡಣೆಯೂ ಖಚಿತವಾಯಿತು. ಇವೆಲ್ಲವನ್ನೂ 'ಕೈಂಕರ್ಯ-ಪಟ್ಟಿ' ಎಂಬ ನಿಬಂಧನೆಯಲ್ಲಿ ದಾಖಲೆ ಮಾಡಿದ್ದಾರೆ. ಗುಡಿಯ ಪಾರುಪತ್ಯದಾರನು ವರ್ಷದ ಒಂದೊಂದು ದಿನವೂ ಗುಡಿಯಲ್ಲಿ ನಡೆದ ವಿದ್ಯಮಾನಗಳೆಲ್ಲವನ್ನೂ ಚ-ತು ತಪ್ಪದೆ, ಅಂದಂದೇ 'ಅಮುಲ್ ನಾಮಾ' ಎಂಬ ಕಡತದಲ್ಲಿ ಬರೆದಿಡಬೇಕು; ಗುಡಿಯಲ್ಲಿ ದಿನದಿನವೂ ನಡೆದ ಅರ್ಚನೆಗಳು, ಕೈಂಕರ್ಯಗಳು, ಉತ್ಸವಗಳು, ಪ್ರಸಂಗಗಳು ಎಲ್ಲವೂ ಇದರಲ್ಲಿ ಸೇರಬೇಕು. ಗುಡಿಯಲ್ಲಿನ ಪದ್ಧತಿಗಳನ್ನು ಅರಿತುಕೊಳ್ಳಲು ಇದು ನೆರವಾಗುತ್ತದೆ. ಹಿಂದಿನಿಂದ ಬಂದ ಕಟ್ಟಳೆಗಳನ್ನು ಕೈಬಿಡದೆ ನಡೆಸಿಕೊಂಡು ಹೋಗುವುದರಲ್ಲಿ ಕಂಪೆನಿಯ ಆಡಳಿತ ಆಸಕ್ತಿ ತೋರಿಸಿತು; ಹೊಸ ಪದ್ಧತಿಗಳನ್ನು ಜಾರಿಗೆ ತರುವ ವಿಚಾರದಲ್ಲಿ ಎಚ್ಚರಿಕೆಯನ್ನೂ ವಹಿಸಿತು. ಗುಡಿಯ ಆಡಳಿತವನ್ನು ನಿರ್ಧರಿಸಲು

ಕಂಪೆನಿಯವರು ಬ್ರೂಸ್ ಎಂಬುವನನ್ನು ನೇಮಿಸಿ, ಅವನಿಂದ 'ನಿಬಂಧನೆ'ಯೊಂದನ್ನು ಸಿದ್ಧಪಡಿಸಿ ('ಬ್ರೂಸಸ್ ಕೋಡ್') ಅದರಂತೆ ಗುಡಿಯ ವ್ಯವಹಾರಗಳೆಲ್ಲ ಸಾಗುವಂತೆ ಮಾಡಿದರು (1821).

ಮಹಂತರ ಪಾಲು

ಭಾರತದ ದೇವಾಲಯಗಳ ವ್ಯವಹಾರದಲ್ಲಿ ಕಂಪೆನಿಯು ಕೈಹಾಕಬಾರದೆಂದು ಈಸ್ಟ್-ಇಂಡಿಯ-ಕಂಪೆನಿಯ ಡೈರೆಕ್ಟರುಗಳು 1841ರಲ್ಲಿ ನಿರ್ಧರಿಸಿದರು. ಅದರಂತೆ ಬೆಟ್ಟದ ಗುಡಿಯ ಆಡಳಿತವನ್ನು ಕಂಪೆನಿಯು ಬಿಟ್ಟುಕೊಡಬೇಕಾಗಿ ಬಂದು, ಯಾರಿಗೆ ಇದನ್ನು ವಹಿಸುವುದು ಎಂಬ ಸಮಸ್ಯೆ ಮೂಡಿತು. ಗುಡಿಯ ಆಚಾರ್ಯಪುರುಷರಿಗೇ ಇದನ್ನು ವಹಿಸಬಹುದೆಂಬ ಸೂಚನೆಯು ಬಂದಿತು. ಇದನ್ನು ಪರಿಶೀಲಿಸಲೆಂದು ಕಂಪೆನಿಯು ಗುಡಿಯ ಆಚಾರ್ಯಪುರುಷರಿಗೆ ಜಿಲ್ಲಾ ಕಲೆಕ್ಟರನನ್ನು ಭೇಟಿಮಾಡಲು ಬರಬೇಕೆಂದು ಕರೆಕಳುಹಿಸಿತು. ಆದರೆ ವೈದಿಕಶ್ರದ್ಧಾಳುಗಳಾದ ಆಚಾರ್ಯಪುರುಷರು ವಿದೇಶೀಯ ಅಧಿಕಾರಿಯನ್ನು ಅವನ ಕಚೇರಿಯಲ್ಲಿ ಭೇಟಿಮಾಡಲು ನಿರಾಕರಿಸಿದರು. ಬೇಕಿದ್ದರೆ ಕಲೆಕ್ಟರನೇ ಗುಡಿಯ ಹೊರಬಾಗಿಲವರೆಗೆ ಬಂದು ನಿಂತರೆ ಅಲ್ಲಿ ಆಚಾರ್ಯಪುರುಷರನ್ನು ಅವನು ಭೇಟಿ ಮಾಡಬಹುದೆಂದು ಅವರು ಹೇಳಿಕಳುಹಿಸಿದರು. ಇದರಿಂದ ಕಲೆಕ್ಟರನು ಸಿಟ್ಟಿಗೆದ್ದು, ಬಂದಿದ್ದ ಸೂಚನೆಯನ್ನು ಅಷ್ಟಕ್ಕೇ ಕೈಬಿಟ್ಟನು. ಇದು ನಡೆದದ್ದು 1841ರಲ್ಲಿ. ವೈದಿಕರಿಗೆ ವ್ಯವಹಾರಜ್ಞಾನವಿಲ್ಲವೆಂದು ಹಲವರು ಹಳಿದರು; ಆದರೆ ಅವರ ಸ್ವಾಭಿಮಾನವನ್ನು, ಮತ್ತು ತಮ್ಮ ಮರ್ಯಾದೆಯನ್ನೂ ಸಂಪ್ರದಾಯವನ್ನೂ ಕಾಪಾಡಿಕೊಳ್ಳಬೇಕೆಂಬ ನಿಷ್ಠೆಯನ್ನು ಮೆಚ್ಚಿಕೊಂಡವರೂ ಇದ್ದರು.

ಎರಡು ವರ್ಷಗಳು ವಾದವಿವಾದಗಳು ನಡೆದು, ಯಾವ ವ್ಯವಸ್ಥೆಯೂ ಸರಿಕಾಣದೆ ಇದ್ದಾಗ ಕಂಪೆನಿಯವರು 1843ರಲ್ಲಿ ತಿರುಪತಿಯ ಹಾಥೀರಾಮಜೀ ಮಠದ ಮಹಂತರನ್ನು 'ವಿಚಾರಣಕರ್ತ'ರೆಂದು ನೇಮಿಸಿ ಅವರ ವಶಕ್ಕೆ ಗುಡಿಯ ಆಡಳಿತವನ್ನು ಬಿಟ್ಟುಹೋದರು. ಈ ಮಠ ಉತ್ತರದೇಶದ್ದು; ಇದರ ಮಹಂತರು ಹಿಂದಿಯವರು, ಗೋಸಾಯಿ-ಪಂಗಡಕ್ಕೆ ಸೇರಿದ ವೈಷ್ಣವರು. ಇವರಿಗೂ ಬೆಟ್ಟದ ಗುಡಿಗೂ ಯಾವ ನಂಟೂ ಇರಲಿಲ್ಲ. ಆದರೆ ಗುಡಿಯ ಆಡಳಿತವನ್ನು ಎಲ್ಲರಿಗೂ ಒಪ್ಪುವಂತೆ ನೋಡಿಕೊಳ್ಳುವೆವೆಂದು ಮುಂದೆ ಬಂದರು. ಈ ಮಠದ ಹಿಂದಿನವರು ಬೆಟ್ಟದ ಮೇಲೆ ತೀರ್ಥವೊಂದರ ಬಳಿ ಆಶ್ರಮವನ್ನು ಏರ್ಪಡಿಸಿಕೊಂಡು ಇರುತ್ತಿದ್ದಂತೆ ತೋರುತ್ತದೆ. ಆದರೆ ಅದೇನು ಉಳಿದುಬರಲಿಲ್ಲ. ತಿರುಪತಿಯನ್ನು ತಮ್ಮ ಕೇಂದ್ರವನ್ನಾಗಿ ಮಾಡಿಕೊಂಡಿದ್ದರಾಗಿ, ಕಂಪೆನಿಯವರು ಅವರಿಗೆ ಗುಡಿಯ ಮೇಲ್ವಿಚಾರಣೆಯ ಸನ್ನದನ್ನು ಕೊಟ್ಟರು.

ಈ ಅಧಿಕಾರವನ್ನು ವಹಿಸಿಕೊಂಡ ಹಾಥೀರಾಮಜೀ-ಮಠದ ಮೊದಲನೆಯ

ಮಹಂತನ ಹೆಸರು ಸೇವಾದಾಸ (1839-1860). ಇವನು ಉತ್ತರಭಾರತದ ಅನಭಿಹಾ ನಂದಸ್ವಾಮಿಯ ಶಿಷ್ಯನೆಂದು ಒಕ್ಕಣೆಯಿದೆ. ಗುಡಿಯ ವಿಚಾರಣಕರ್ತನಾದಮೇಲೆ 'ಶ್ರೀಮದಖಿಲಾಂಡಕೋಟಿ-ಬ್ರಹ್ಮಾಂಡನಾಯಕ-ಶ್ರೀವೇಂಕಟೇಶ್ವರ-ಸ್ವಾಮಿನಃ ಶ್ರೀವಿಷ್ಣ-ಕ್ಷೇನ-ಮುದ್ರಾಧಿಕಾರ'ನೆಂದು ತನ್ನನ್ನು ಕರೆದುಕೊಳ್ಳತೊಡಗಿದನು. ಇವನ ಬೃಂದಾವನವು ತಿರುಪತಿಯಲ್ಲೇ ನರಸಿಂಹತೀರ್ಥದ ಪಶ್ಚಿಮಕ್ಕೆ ಮಠದ ಉದ್ಯಾನದಲ್ಲಿದೆ. ಈತನು ಬೆಟ್ಟದ ಮೇಲೆ ಕೈಗೊಂಡ ಕೈಂಕರ್ಯಗಳಲ್ಲಿ ಸ್ವಾಮಿಪುಷ್ಕರಿಣೀತೀರ್ಥದ ಜೀರ್ಣೋದ್ಧಾರವೊಂದು (1846ರಲ್ಲಿ); ಈ ತೀರ್ಥವು ವರಾಹತೀರ್ಥ ಮತ್ತು ಶ್ರೀನಿವಾಸ ಮಹಾತೀರ್ಥಗಳ ನಡುವೆ ಇರುವುದೆಂಬ ಒಕ್ಕಣೆ ಶಾಸನದಲ್ಲಿದೆ. ಕೊಳದ ನಡುವೆ 'ಅಲಮೇಲುಮಂಗಾಸಮೇತ ಶ್ರೀನಿವಾಸನ ಜಲಕೇಳೀಮಂಟಪ'ವನ್ನೂ ಜೀರ್ಣೋದ್ಧಾರ ಮಾಡಿಸಿದನು. ಇವನನಂತರ ವಿಚಾರಣಕರ್ತನಾಗಿ ಅಧಿಕಾರವನ್ನು ವಹಿಸಿಕೊಂಡ ಇವನ ಶಿಷ್ಯ ಮಹಂತ-ಧರ್ಮದಾಸನು (1860-1870) ಬೆಟ್ಟದ ಕೆಳಗೆ ಕಪಿಲತೀರ್ಥವನ್ನು ಜೀರ್ಣೋದ್ಧಾರಮಾಡಿಸಿದನು.

ಈ ಕಾಲದಲ್ಲೇ ಬೆಟ್ಟದ ಗುಡಿಯ ಹೊರಪ್ರಾಕಾರದ ತಲೆಬಾಗಿಲ ಮೇಲೆ 'ಪಡಿಕಾವಲಿ ಗೋಪುರ'ವನ್ನು ಕಟ್ಟಿಸಿದುದನ್ನು ಹೇಳುವ ಶಾಸನವಿದೆ (1865ರ ಫೆಬ್ರುವರಿ ಹತ್ತನೆಯ ದಿನ). ಇದು ಗುಡಿಯ ಮಹಾದ್ವಾರಗೋಪುರ. ಈ ಮಹಂತನ ಕಾಲಕ್ಕೆ ಮೊದಲು ಅದು ಇದ್ದು ಇವನು ಅದನ್ನು ದುರಸ್ತಿಮಾಡಿಸಿದನೋ ಅಥವಾ ಈ ಕಾಲದಲ್ಲೇ ಅದು ಹೊಸದಾಗಿ ಮೂಡಿಕೊಂಡಿತೋ, ಹೇಳುವುದು ಕಷ್ಟ. ಶಾಸನದ ಒಕ್ಕಣೆ "ಶೇಷಗಿರೀಶುನಿ ಚಿತ್ತಮಲರ ಗೋಪುರಂಬುನು ಚಾಲ ಗೊಪ್ಪಗಾ ಕಲ್ಪಿಂಚಿ" ಎಂದು ಹೆಮ್ಮೆಯಿಂದ ಮೂಡಿಬಂದಿದೆ. ಇಷ್ಟು ಒಳ್ಳೆಯ ಕೈಂಕರ್ಯವನ್ನು ಕೈಗೊಂಡ ತನಗೆ "ಶ್ರೀಶ ಚಿನ್ಮಯಾಚ್ಯುತ ಜಯಶೀಲ-ಸಿಂಹಸ್ವರೂಪ-ವಿಶದರವಿಕೋಟಿಸಂಕಾಶ-ಶ್ರೀವೇಂಕಟೇಶನು" ತಾನು ಕೋರಿದುದೆಲ್ಲವನ್ನೂ ಕೊಟ್ಟು ವೈಕುಂಠವನ್ನೂ ನೀಡಲೆಂದು ಶಾಸನ ಅಹವಾಲನ್ನು ಸಲ್ಲಿಸುತ್ತದೆ. ಈ ಗೋಪುರವಲ್ಲದೆ ಕೆಲವು ಮಂಟಪಗಳನ್ನೂ ಇವನು ಕಟ್ಟಿಸಿದನೆಂದು ತಿಳಿದುಬರುತ್ತದೆ.

ಸುಲಿಗೆ-ಸೇವೆ

ಇವನನಂತರ ಉತ್ತರಾಧಿಕಾರಿಯಾದ ಭಗವಾನ-ದಾಸ (1871-1884) ಮತ್ತು ಅವನಾದಮೇಲೆ ಮಹಂತನಾದ ರಾಮಕಿಶೋರ-ದಾಸ (1895-1900)—ಇವರು ಇಂಥ ಯಾವ ಕೈಂಕರ್ಯವನ್ನೂ ಕೈಗೊಂಡ ಉಲ್ಲೇಖವಿಲ್ಲ. ಅವರ ಕಾಲಕ್ಕೆ ಹಾಥಿರಾಮಜೀ-ಮಠ ಸಂಪದ್ಭರಿತವಾದಂತೆ ತೋರುತ್ತದೆ; ಮಹಂತರ ಮತ್ತು ಅವರ ಆಶ್ರಿತರ ಬದುಕು ವೈಭವದ್ದಾಯಿತೆಂದು ಹೇಳುವುದಿದೆ. ಇವರ ಅನಾಚಾರದ ಅಪಶ್ರುತಿಯೂ ಅಲ್ಲಲ್ಲಿ ಕೇಳಬರುತ್ತದೆ. ನ್ಯಾಯಾಂಗದ ಕಟ್ಟಳೆಗಳೂ ತಲೆದೋರಿಕೊಂಡಂತೆ ಕಾಣುತ್ತದೆ. ಮಹಂತರ ಪರಂಪರೆಯಲ್ಲಿ ಕಡೆಯವನಾದ ಪ್ರಯಾಗದಾಸ



ಹುಂಡಿ

(1901-1933) ಬೆಟ್ಟದ ಗುಡಿಯು ಹೆಚ್ಚು ಜನಪ್ರಿಯವಾಗಲು ವೇಂಕಟಾಚಲ ಮಾಹಾತ್ಮ್ಯಗಳನ್ನೂ, ಗುಡಿಯ ಹಿರಿಮೆಯನ್ನು ಹೇಳುವ ಹಲವಾರು ಗ್ರಂಥಗಳನ್ನೂ ಗುಡಿಯ ಕಡೆಯಿಂದ ಸಂಸ್ಕೃತ, ತೆಲುಗು, ತಮಿಳು, ಹಿಂದಿಭಾಷೆಗಳಲ್ಲಿ ಬರೆಯಿಸಿ ಪ್ರಕಟಿಸಿದನು. ಒಂದು ಶಾಸನ ಇವನನ್ನು 'ವೈರಾಗ್ಯಚಕ್ರವರ್ತಿ-ಪ್ರಥಾಜುಷ'ನೆಂದೂ 'ವಿರಾಗಿಮೌಳಿಮಣಿ'ಯೆಂದೂ ವರ್ಣಿಸಿದೆ. ಇವನ ಸತೀರ್ಥರಲ್ಲೊಬ್ಬನಾದ ಅಧಿಕಾರಿ-ರಾಮಲಕ್ಷ್ಮಣ-ದಾಸನೆಂಬುವನು 1908ರ ಸೆಪ್ಟೆಂಬರ್ ಮೂವತ್ತರಂದು ಗುಡಿಯ ಆನಂದನಿಲಯ-ವಿಮಾನದ ಮೇಲಿನ ಚಿನ್ನದ ಕಲಶವನ್ನು ಜೀರ್ಣೋದ್ಧಾರಮಾಡಿಸಿದಂತೆ ಶಾಸನವಿದೆ (**ಚಿರಶಿಥಿಲಿತವಿಧ್ವಸ್ತಂ ದುಷ್ಪ್ರಥಮನ್ಯೈರ್ಹರೇಃ। ಕೃಪಾವಶತಃ ಅಮುನಾ ಸ್ಥಾಪಿತಶ್ರೀಪತಿದಿವ್ಯವಿಮಾನಾಗ್ರಕನಕಮಯಕಲಶಂ**).

ಮಹಂತರ ಅಧಿಕಾರದ ಅವಧಿಯಲ್ಲಿ ಯಾತ್ರಿಕರ ಸುಲಿಗೆ ಎಂದಿಗಿಂತ ಹೆಚ್ಚಿತು. ನವಾಬನ ಆದಾಯಕ್ಕೆ ಆತಂಕವಿದ್ದಿತು; ಗುತ್ತಿಗೆದಾರನ ಆಸೆಗೆ ಮಿತಿಯಿದ್ದಿತು;

ಕಂಪೆನಿಯ ಕಾರುಬಾರಿಗೆ ಒಂದು ಚೌಕಟ್ಟು ಇದ್ದಿತು. ಆದರೆ ಮಹಂತನನ್ನು ಹಿಡಿಯುವವರು ಯಾರೂ ಇರಲಿಲ್ಲ; ಮೇಲಧಿಕಾರಿಯ ಬೆದರಿಕೆಯಾಗಲೀ ಎದುರಾಳಿಯ ಹೆದರಿಕೆಯಾಗಲೀ ಅವನನ್ನು ಕಾಡಲಿಲ್ಲ. ಮೇಲಾಗಿ, ಧಾರ್ಮಿಕವೆಂದು ಕಾಣುವ ಕವಚವನ್ನು ಅವನು ತೊಟ್ಟಿದ್ದನಾಗಿ ಸುಲಿಗೆಗೆ ತುತ್ತಾದವರು ಸೊಲ್ಲೆತ್ತುವಂತಿರಲಿಲ್ಲ. ಯಾತ್ರಿಕರು ಇದ್ದುದನ್ನೆಲ್ಲ ತೆತ್ತು ಬರಿಗೈಯಲ್ಲಿ ಹಿಂದಿರುಗಬೇಕಾದರೂ ಅದರಿಂದ ಅವರ ನೆಮ್ಮದಿಯು ಕೆಡುತ್ತಿರಲಿಲ್ಲ; 'ಎಲ್ಲವೂ ದೇವರಿಗೆ ಸೇರಿತು' ಎಂಬ ಸಮಾಧಾನವಿರುತ್ತಿದ್ದಿತು. ಇದು ಧಾರ್ಮಿಕ-ದರೋಡೆಯ ಬಲಗಳಲ್ಲೊಂದು.

ಜನರಲ್ಲಿ ಬೇಗನೆ ಒಂದು ಭಾವನೆ ಬೆಳೆಯಿತು—'ಬೆಟ್ಟದ ಮೇಲೆ ನಿಂತಿರುವ ದೇವರು ಕಾಸುಗಳ್ಳ, ಅವನು ಬಯಸುವುದು ಹಣವನ್ನು, ಇದನ್ನು ತೆತ್ತರೆ ನಮ್ಮ ಬಯಕೆಗಳನ್ನು ಈಡೇರಿಸುತ್ತಾನೆ; ಆದುದರಿಂದ ಅವನಿಗೆ ಕೊಟ್ಟರೆ ನಷ್ಟವೇನಿಲ್ಲ, ವ್ಯಾಪಾರದಂತೆ ಇಷ್ಟು ಕೊಟ್ಟರೆ ಇನ್ನಷ್ಟು ಬರುತ್ತದೆ.' ಈ ಭಾವನೆಗೆ ಬೆಂಬಲವಾಗಿ ಇನ್ನೊಂದು ನಂಬಿಕೆ—ದೇವರಿಗೂ ಮಹಂತನಿಗೂ ಭೇದವಿಲ್ಲ, ಮಹಂತನು ಪಡೆಯುವುದು ದೇವರ ಪರವಾಗಿಯೇ, ದೇವರ ಸಲುವಾಗಿಯೇ; ಮಹಂತನಿಗೆ ದೈವಾನುಗ್ರಹವಿಲ್ಲದೆ, ಅವನಲ್ಲಿ ದೈವಾಂಶವಿಲ್ಲದೆ ಇಂಥ ಗುಡಿಗೆ ಒಡೆಯನಾದಾನೇ?'

ಯಾತ್ರಿಕರಲ್ಲಿ ಬಹುಮಂದಿಗೆ ಆಳವಾಗಿ ಆಲೋಚನೆಮಾಡುವ, ಎಚ್ಚರದಿಂದ ವಿಮರ್ಶೆಮಾಡುವ ಸಾಮರ್ಥ್ಯವು ಸಾಲದು, ಆಸಕ್ತಿಯೂ ಇರದು, ಅವಕಾಶವಂತೂ ಇರದೇ ಇರದು. 'ಇಲ್ಲ ಕಾಸೆಂದು ಸುಳ್ಳು ಮಾತಾಡಿದರೆ ಎಲ್ಲವನು ಕಸುಕೊಂಬ ಕಳ್ಳದೊರೆ' ಮಹಂತನಲ್ಲ, ದೇವರೇ ಎಂದು ದಾಸರು ಹಾಡಲಿಲ್ಲವೆ? ತಿರುಪತಿಯ ತಿಮ್ಮಪ್ಪ ಬಿಡಿಗಾಸೂ ಬಿಡ ಎಂದು ಎಲ್ಲರೂ ಬಲ್ಲರಲ್ಲವೆ? ಹೀಗಾಗಿ ಮಹಂತನ ದಬ್ಬಾಳಿಕೆ ತಡೆಯಿಲ್ಲದೆ ಮುಂದರಿಯಿತು. ದೇವರಿಗಿಂತಲೂ ತಾನೇ ದೊಡ್ಡವನು ಎಂದು ಅವನೇ ನಂಬುವಂತಾಯಿತು. ಗುಡಿಗೆ ಬರುವ ಯಾತ್ರಿಕರು ಮಹಂತನನ್ನು ಕಾಣದೆ, ಅವನ ಮಠದಲ್ಲಿ ಕಾಲಿಡದೆ ಅವನಿಗೆ ಕಾಣಿಕೆ ಸಲ್ಲಿಸದೆ ಹೋಗಬಾರದೆಂಬ ನಂಬಿಕೆಯೂ ಬೆಳೆಯಿತು. ಮಹಂತನನ್ನು ಒಲಿಸಿಕೊಂಡರೆ ದೇವರ ದರ್ಶನ ಸುಲಭವೆಂಬ ಜಾಣತನವೂ ಅವನ ಹಿರಿಮೆಯನ್ನು ಬೇರೂರಿಸಿತು.

ಅನುಕೂಲವಾದ ಕಥೆಗಳು

ಜನರ ಸಂಶಯವನ್ನು ಅದುಮಿಹಿಡಿಯಲು ಮಹಂತರು ಕಥೆಯೊಂದನ್ನು ಕಟ್ಟಿ ಹಲವು ಬಗೆಗಳಲ್ಲಿ ಅದನ್ನು ಜನರ ನಡುವೆ ಹರಡಿದರು. 'ಈ ಮಠದ ಮೂಲ ಪುರುಷ ಹಾಥೀರಾಮಜೀ ಎಂಬುವನು ಬೆಟ್ಟದ ಗುಡಿಗೆ ಮೊದಲಿಂದಲೂ ನಂಟ, ದೇವರ ಒಡನಾಡಿಯಾಗಿಯೇ ಇದ್ದವನು. ವೇಂಗಡದೊಡೆಯನು ಅವನನ್ನು ಗೆಳೆಯನಂತೆ ಕಂಡುಕೊಂಡು ಅವನೊಂದಿಗೆ ಆಟವಾಡುತ್ತ ಕಾಲಕಳೆಯುವುದು ವಾಡಿಕೆ. ಒಮ್ಮೆ ಈ ಮೊದಲ ಮಹಂತನು ದೇವರೊಂದಿಗೆ ಪಗಡೆಯಾಡುತ್ತ ಕುಳಿತಿದ್ದಾಗ

ದೇವರು ಅವರಿಗೆ ತನ್ನಲ್ಲಿದ್ದುದೆಲ್ಲವನ್ನೂ ಸೋತ. ಅದರಿಂದ ಆಟದ ಆಸಕ್ತಿ ಇಂಗದೆ ಮಹಂತನಿಂದಲೇ ಹಣವನ್ನು ಸಾಲ ಮಾಡಿ ಅದನ್ನೆಲ್ಲ ಪಣವಾಗಿ ಒಡ್ಡಿ ಅಷ್ಟನ್ನೂ ಸೋತ. ತನ್ನ ಗುಡಿಯನ್ನೂ ಅದರ ಸಂಪತ್ತನ್ನೂ ಮಹಂತನಿಗೆ ಕೊಟ್ಟ; ಸಾಲದ ಹೊರೆ ಇನ್ನೂ ಇಳಿಯದೆ ಇರಲು ತನ್ನ ದರ್ಶನಕ್ಕೆ ಬರುವ ಯಾತ್ರಿಕರು ತನಗೆಂದು ನೀಡುವ ಹಣವನ್ನೆಲ್ಲ ಮಹಂತನು ತೆಗೆದುಕೊಳ್ಳಲಿ ಎಂದು ತನ್ನ ಒಪ್ಪಿಗೆಯ ಮುಚ್ಚಳಿಕೆಯನ್ನು ಬರೆದುಕೊಟ್ಟ.' ದೇವರು ಹೀಗೆ ಬರೆದು ಕೊಟ್ಟ ಕರಾರುಪತ್ರ ಮಹಂತರ ಕಿಸೆಯಲ್ಲಿ ಇನ್ನೂ ಇದೆ. ಉತ್ಸುಕರಾದ ಯಾತ್ರಿಕರು ಬಯಸಿದರೆ ಅದನ್ನು ಅವರು ತೋರಿಸುತ್ತಾರೆ. ಆದರೆ ಅದಕ್ಕೆಂದು ಕಾಣಿಕೆ ಸಲ್ಲಿಸಬೇಕಾಗುತ್ತದೆ!

ಮಹಂತರು ಯಾತ್ರಿಕರಿಗೆ ಧಾರಾಳವಾಗಿ ಸಲ್ಲಿಸುತ್ತಿದ್ದ ಸುಲಿಗೆಸೇವೆಯನ್ನು ಸಮರ್ಥಿಸಲು ಇಂಥ ಕಟ್ಟುಕಥೆಗಳು ನೆರವಾದುವು. ಹಿಂದೆಯೇ ಗುತ್ತಿಗೆದಾರರ ಕಾಲದಲ್ಲಿ ಇಂಥ ಇನ್ನೊಂದು ಕಥೆ ಜನರ ಕಿವಿಗೆ ಬಿದ್ದು, ಮನಸ್ಸಿನಲ್ಲಿಳಿದು, ಬಾಯಿಂದ ಬಾಯಿಗೆ ಹರಿದಾಡಿತು. ವೇಂಗಡದೊಡೆಯನು ತಾವರೆಕನ್ನಿಕೆ (ಅಲರ್‌ಮೇಲ್‌ಮಂಗೈ) ಯಾದ ಪದ್ಮಾವತಿಯನ್ನು ಮದುವೆಯಾಗುವಾಗ ನಡೆದ ವೆಚ್ಚ ಆಕಾಶರಾಯನಿಂದ ತಂದ ಸಾಲದಿಂದ ತುಂಬಿತಂತೆ. ಈ ಸಾಲವನ್ನು ತೀರಿಸುವ ಬಗೆ ದೇವರಿಗೆ ಕಾಣದಾಯಿತಂತೆ. ಆದುದರಿಂದ ಭಕ್ತರು ಬೆಟ್ಟಕ್ಕೆ ಬಂದಾಗ ಕೊಡುಗೈ ಕಾಣಿಕೆಗಳನ್ನು ಸಲ್ಲಿಸಿ ದೇವರನ್ನು ಸಾಲದಿಂದ ಬಿಡಿಸಬೇಕಂತೆ. ಆ ಸಾಲವೇನು ಸಾಮಾನ್ಯವಾದುದಲ್ಲ; ಕಲಿಯುಗದುದ್ದಕ್ಕೂ ಭಕ್ತರು ಕಾಣಿಕೆ ಸಲ್ಲಿಸಿದರೇ ಅದು ತೀರುವುದು! ಎಂದರೆ, ಆ ಸಾಲ ತೀರುವ ಹಾಗೂ ಇಲ್ಲ , ಗುತ್ತಿಗೆದಾರರಿಗೆ ಹಣ ಬರುವುದು ನಿಲ್ಲಬೇಕಾಗಿಯೂ ಇಲ್ಲ.

ಈ ಕಥೆ ದಿಟವೆಂಬಂತೆ ಕಾಣಲು ಕರಾರುವಾಕ್ಕಾದ ವಿವರಗಳನ್ನೂ ಕೊಡುತ್ತಾರೆ. ವೇಂಗಡದೊಡೆಯನು ಆಕಾಶರಾಜನಿಂದ (ಕುಬೇರನಿಂದ ಎಂದು ಇನ್ನೊಂದು ಪಾಠ) ಪಡೆದುಕೊಂಡ ಸಾಲ 1,14,00,000 ರಾಮಟಂಕಿ ವರಹಗಳಂತೆ. ಅದಕ್ಕೆ ಇಪ್ಪತ್ತೈದು ಬಿಲಿಯನ್ ಸ್ಟರ್ಲಿಂಗ್ ಸಮನಾದ ಮೊತ್ತವೆಂದು ಲೆಕ್ಕವನ್ನೂ ಮಾಡಿದ್ದಾರೆ! ಈ ಸಾಲಕ್ಕಾಗಿ ಬರೆದುಕೊಟ್ಟ ಕರಾರುಪತ್ರ ಅಥವಾ ಮುಚ್ಚಳಿಕೆಗೆ ಸಾಕ್ಷಿಗಳಾಗಿ ಸಹಿ ಹಾಕಿದವರು ಯಾರು ಯಾರು? ಈಶ್ವರ, ಬ್ರಹ್ಮ ಮತ್ತು ಅಶ್ವತ್ಥವೃಕ್ಷ! ಕರಾರುಪತ್ರದಲ್ಲಿದ್ದ ಒಕ್ಕಣೆಕೆ ಪಾಲಾರ್ ಮತ್ತು ಸ್ವರ್ಣಮುಖೀನದಿಗಳ ನಡುವೆ ಅರಸರಾಗಿ ಯಾರು ಆಳುವರೋ ಅವರಿಗೆ ವೇಂಗಡದೊಡೆಯನು ಸಾಲವನ್ನು ತೀರಿಸುತ್ತ ಬರಬೇಕೆನ್ನುವುದು. ದೇವರಿಗೆ ಹಣ ಬರುವುದು ಭಕ್ತರಿಂದ ತಾನೆ? ದೇವರ ಪರವಾಗಿ ಗುತ್ತಿಗೆದಾರರೋ ಮಹಂತರೋ ಭಕ್ತರಾದ ನಮ್ಮಿಂದ ವಸೂಲು ಮಾಡಬೇಕಷ್ಟೆ? ಈ ಕಥೆಯನ್ನು ಜನ ಅರಗಿಸಿಕೊಳ್ಳುವ ಹೊತ್ತಿಗೆ ಮಹಂತರ ಇನ್ನೊಂದು ಕಥೆ. ಈ ಎಲ್ಲ ಕಥೆಗಳ ತಾತ್ಪರ್ಯ ಇಷ್ಟೇ—ಇಲ್ಲಿ ಹಣತೆತ್ತು ಹಿಂದಿರುಗಿ, ಮತ್ತೆಮತ್ತೆ ಬನ್ನಿ, ಬಂದಾಗಲೆಲ್ಲ ಹಣ ತನ್ನಿ.

ಮಹಂತರ ಕಥೆಗೆ ಏನೇನೂ ಕಾಲಿಲ್ಲ. ಪಗಡೆಯಾಟವಿರಲಿ, ದೇವರು ಸೋತದ್ದಿರಲಿ, ಹಾಥೀರಾಮಜಿಗೂ ಗುಡಿಗೂ ಮೊದಲಿಂದ ನಂಟಿದ್ದಿತೆಂಬುದೂ

ಅಸಂಬದ್ಧಪ್ರಲಾಪವೇ. ಯಾವ ಮಠದ ಮಹಂತನೂ ಕ್ರಿಸ್ತಾಬ್ದ 1843ರ ಮುಂಚೆ ಗುಡಿಯ ಆಡಳಿತದಲ್ಲಿ ಕೈಹಾಕಿದ ಉಲ್ಲೇಖವಿಲ್ಲ. ಉತ್ತರದೇಶದಿಂದ ಇಲ್ಲಿಗೆ ಬಂದ ಗೋಸಾಯಿಯನ್ನು ನಮ್ಮ ವೈಖಾನಸ-ಅರ್ಚಕರೂ ಶ್ರೀವೈಷ್ಣವ-ಆಚಾರ್ಯಪುರುಷರೂ ಸಭ್ಯಿಯಾರರೂ ಸ್ಥಾನತ್ತಾರರೂ ತಮ್ಮ ತಲೆಯ ಮೇಲೆ ಕೂರಿಸಿಕೊಂಡರೆಂದು ನಂಬಬಹುದೆ? ಈಸ್ಟ್-ಇಂಡಿಯ-ಕಂಪೆನಿಯವರು ಅಧಿಕಾರಮಾಡುತ್ತಿದ್ದಾಗ ಕೆಳಗಿನ ತಿರುಪತಿಯಲ್ಲಿದ್ದ ಸಣ್ಣದೊಂದು ಮಠ ಇದು. ತಿರುಪತಿಯು ವೈಷ್ಣವಕ್ಷೇತ್ರವಾಗಿದ್ದು ಈ ಮಠವೂ ವೈಷ್ಣವಸಂಪ್ರದಾಯದ್ದಾದುದರಿಂದ ಮಠ ಅಲ್ಲಿದ್ದುದು ಸರಿಯೆ. ಆದರೆ ಮಠದ ಒಡೆಯರು (ಮಹಂತರು) ಅಲ್ಲಿನ ಗುಡಿಗಳ ಆಡಳಿತದಲ್ಲಿ ಪಾಲುಗೊಂಡಿದ್ದರೆಂದು ಹೇಳುವುದು ಸರಿಯಲ್ಲ. ಇವರು ಕೆಲವೊಂದು ಕೈಂಕರ್ಯಗಳನ್ನು ವಾಡಿಕೆಯಂತೆ ನಡೆಸಲು ಆಡಳಿತದವರು ಒಪ್ಪಿರಬಹುದು. ಈಗಲೂ ಬೆಟ್ಟದ ಗುಡಿಯಲ್ಲಿ ಈ ಮಠದ ಕಡೆಯಿಂದ ಕೆಲವು ಸೇವೆಗಳು ನಡೆಯುವುದಿದೆ. ಇಷ್ಟರಿಂದ ಗುಡಿಯ ಮೇಲೆ ಅವರ ಹಿಡಿತವಿದ್ದಿತು ಎಂದು ಭಾವಿಸುವುದಾಗದು. ಬೇರೆ ಉಪಾಯ ಕಾಣದೆ, ಕಂಪೆನಿಯವರು ಗುಡಿಯ ಮೇಲ್ವಿಚಾರಣೆಯನ್ನು ಅವರಿಗೆ ಒಪ್ಪಿಸಿದರು ಅಷ್ಟೆ. ಆದೂ, ಬೇರೆ ಯಾವ ಏರ್ಪಾಡೂ ಸರಿಕಾಣದಿದ್ದಮೇಲೆ. ಒಮ್ಮೆ ಅಧಿಕಾರ ದೊರೆಯಿತೆಂದರೆ, ಅದು ಬೇರೂರಿ, ಕಲಿಯುಗ ಮುಗಿಯುವವರೆಗೂ ಮುಂದರಿಯಬೇಕಲ್ಲವೆ? ಮುಂದರಿಯಬೇಕಾದರೆ ಹಿನ್ನೆಲೆ ಬೇಕು. ಬರಿಯ ಕಲ್ಪನೆಯಾದುದರಿಂದ ಎಷ್ಟು ಹಿಂದೆ ಬೇಕೆಂದರೂ ಕೈಚಾಚಬಹುದು. ವೇಂಕಟರಮಣನೂ ಆದಿಮಹಂತ ಹಾಥೀರಾಮಜೀಯೂ ಪಗಡೆಯಾಡಿದ ಕಥೆಯನ್ನು ಕಟ್ಟಿದರು, ಅದರ ಚಿತ್ರಗಳನ್ನು ಬರೆಯಿಸಿದರು, ಅದರ ಶಿಲ್ಪಗಳನ್ನು ಕಡೆಯಿಸಿದರು, ಬಂದವರಿಗೆಲ್ಲ ಕಥೆಯನ್ನು ಹೇಳಿದರು. ಬಾರದಿದ್ದವರಿಗೂ ಪುಸ್ತಕಗಳ ಮೂಲಕ ಮುಟ್ಟಿಸಿದರು.

ಮಹಂತರಿಂದ ಸಮಿತಿಗೆ

ಮೊದಲ ಮಹಂತನು ದೇವರೊಡನೆ ಪಗಡೆಯಾಟವಾಡಿ ದೇವರನ್ನೇ ಸೋಲಿಸಿರಬಹುದು; ಆದರೆ ಕಡೆಯ ಮಹಂತನು ಆಗಿನ ಸರಕಾರದೊಂದಿಗೆ ಆಟವಾಡಿ ಗೆಲ್ಲಲಿಲ್ಲ. ಆಂಗ್ಲ-ಸರಕಾರವು 1932ರಲ್ಲಿ 'ತಿರುಮಲೆ-ತಿರುಪತಿ ದೇವಸ್ಥಾನಗಳ ಕಾಯಿದೆ'ಯೊಂದನ್ನು ಹೊರಡಿಸಿ ಮಹಂತರ ಅಧಿಕಾರವನ್ನು ಕೊನೆಗಾಣಿಸಿತು; ಏಳು ಮಂದಿ ಸದಸ್ಯರುಳ್ಳ ಸಮಿತಿಯೊಂದಕ್ಕೆ ಗುಡಿಯ ಆಡಳಿತವನ್ನು ಒಪ್ಪಿಸಿತು. ಇದು ರೂಪಾಂತರಗಳನ್ನು ತಳೆದು ಇಂದಿನವರೆಗೂ ಉಳಿದುಕೊಂಡು ಬಂದಿದೆ. ಮಹಂತರಿಂದ ಸರಕಾರವು ಆಡಳಿತವನ್ನು ಕಸಿದುಕೊಳ್ಳುವುದಕ್ಕೆ ಅವರ ಹಲವಾರು ಅಕ್ರಮಗಳು ಕಾರಣವಾದುವೆಂದು ಹೇಳುತ್ತಾರೆ. ಆದರೆ ಅವರ ಅಧಿಕಾರದ ಅವಧಿಯಲ್ಲಿ ಬೆಟ್ಟದ ಮೇಲೆ ಒಳ್ಳೆಯ ಕೆಲಸಗಳೂ ನಡೆದುವು ಎಂದು ಒಪ್ಪಿಕೊಳ್ಳಬೇಕು. ಬೆಟ್ಟಕ್ಕೆ ಬಂದ ಯಾತ್ರಿಕರು ತಂಗಲು ಯಾವ ಏರ್ಪಾಟೂ ಮೊದಲಿರಲಿಲ್ಲ; ಮಹಂತರು ಹಲವು

ವಸತಿಗೃಹಗಳನ್ನೂ ಸತ್ರಗಳನ್ನೂ ಕಟ್ಟಿಸಿ, ಯಾತ್ರಿಕರ ಸೌಕರ್ಯವನ್ನು ಹೆಚ್ಚಿಸಿದರು. ಬೆಟ್ಟವನ್ನೇರಿಬರುವ ದಾರಿಯನ್ನು ಸರಿಪಡಿಸಿ, ವಿದ್ಯುದ್ದೀಪಗಳನ್ನು ಹಾಕಿಸಿ, ಅಲ್ಲಲ್ಲಿ ಕುಡಿಯುವ ನೀರಿನ ಅನುಕೂಲಗಳನ್ನು ಮಾಡಿಕೊಟ್ಟರು. ಸೋಪಾನಮಾರ್ಗಗಳನ್ನು ಹೊಸದಾಗಿ ಕಟ್ಟಿಸಿದರು. ಅಂಗಡಿಗಳನ್ನು ತೆರೆಯಿಸಿದರು. ಗುಡಿಯ ಎದುರಿಗೆ ದಿಣ್ಣೆಯ ಮೇಲಿದ್ದ 'ಸಾವಿರ-ಕಾಲಿನ-ಮಂಟಪ'ದಲ್ಲಿಯೂ ಯಾತ್ರಿಕರು ಕೆಲವು ದಿನಗಳು ಉಳಿದುಕೊಳ್ಳುವ ಸೌಲಭ್ಯವನ್ನು ಕಲ್ಪಿಸಿಕೊಟ್ಟರು. ಶ್ರೀಮಂತರು ಸೇವೆಗಳನ್ನೂ ಉತ್ಸವ ಗಳನ್ನೂ ಕ್ರಮವರಿತು ಮಾಡಿಸುವಂತೆ ವ್ಯವಸ್ಥೆಮಾಡಿದುದಲ್ಲದೆ, ಬಡವರೂ ಧರ್ಮ ದರ್ಶನವನ್ನು ಪಡೆಯುವಂತೆ ಅನುಕೂಲಪಡಿಸಿದರು. ಗುಡಿಯೊಳಗೆ ಆರಾಧನೆಯಲ್ಲಿ ಹಿಂದಿನಿಂದ ಬಂದ ಕ್ರಮವನ್ನೇ ಉಳಿಸಿಕೊಂಡುಬಂದರು. ಗುಡಿಯ ವೈಭವವನ್ನು ಹೆಚ್ಚಿಸಿದರು. 1930ರಲ್ಲಿ ಅವರ ಅಧೀನದಲ್ಲಿದ್ದ ಗುಡಿಗಳ ಒಟ್ಟು ಆದಾಯ ಹನ್ನೊಂದು ಲಕ್ಷ ರೂಪಾಯಿಗಳು!

ಮಹಂತರ ಆಡಳಿತವನ್ನು ಕುರಿತು ದೂರುಗಳು ಹೆಚ್ಚಾಗಲು ಜಿಲ್ಲಾನ್ಯಾಯಾ ಲಯವೂ ಉಚ್ಚನ್ಯಾಯಾಲಯವೂ ಆಗಿನ ಪರಮಾಧಿಕಾರಸಂಸ್ಥೆಯಾಗಿದ್ದ ಪ್ರಿವಿ-ಕೌನ್ಸಿಲ್ ಇವು 1907ರಲ್ಲಿ ಒಂದು ವ್ಯವಸ್ಥೆಯನ್ನು ಮಾಡಿ ತಿರುಮಲೆ-ತಿರುಪತಿಗುಡಿಗಳ ಆಡಳಿತವು ಸರಿಯಾಗಿ ನಡೆಯುವಂತೆ ನಿರ್ದೇಶಿಸಿದರು. ಆದರೆ ಇದರಿಂದ ಅಷ್ಟಾಗಿ ಪ್ರಯೋಜನವಾಗದೆ, 1927ರಲ್ಲಿ ಪನಗಲ್‌ರಾಜನು ಮುಖ್ಯಮಂತ್ರಿಯಾಗಿದ್ದಾಗ ಮದರಾಸ್ ಹಿಂದೂ ಧಾರ್ಮಿಕದತ್ತಿಗಳ ಕಾಯಿದೆಯ ಪರಿಧಿಯೊಳಗೆ ಈ ಗುಡಿಗಳ ಆಡಳಿತವನ್ನು ತರಲೆತ್ನಿಸಿದರು. 1933ರಲ್ಲಿ ಮದರಾಸ್ ಸರಕಾರದವರು 'ತಿರುಮಲ-ತಿರುಪತಿ ದೇವಸ್ಥಾನಗಳ ಕಾಯಿದೆ'ಯನ್ನು ಹೊರಡಿಸಿ ಮಹಂತರ ಆಳ್ವಿಕೆಯನ್ನು ಕೊನೆಗಾಣಿಸಿದರು. ಆಡಳಿತವನ್ನು ಒಂದು ಸಮಿತಿಯ ವಶಕ್ಕೆ ಕೊಟ್ಟು ಸರಕಾರವು ಮೂರು ವರ್ಷಗಳ ಅವಧಿಗೆ ಕಮಿಷನರ್ ಒಬ್ಬನನ್ನು ನೇಮಿಸಿತು. ಅದೇ ವರ್ಷ ಸಿ. ಅಣ್ಣಾರಾಯರು ಗುಡಿಗಳ ಪೇಷ್ಕಾರ್ ಆಗಿ ನೇಮಕಗೊಂಡರು. 1949ರಲ್ಲಿ ಅವರೇ ದೇವಸ್ಥಾನಗಳ ಕಮಿಷನರ್ ಆದರು. 1951ರಲ್ಲಿ ಮದರಾಸ್ ಸರಕಾರವು ಹೊರಡಿಸಿದ ಇನ್ನೊಂದು ಕಾಯಿದೆಯಿಂದಾಗಿ ಆಡಳಿತದಲ್ಲಿ ಮತ್ತೆ ಕೊಂಚ ಬದಲಾವಣೆ ಯಾಯಿತು. ಅಣ್ಣಾರಾಯರನ್ನು 'ಎಕ್ಸಿಕ್ಯುಟಿವ್-ಆಫೀಸರ್' ಎಂದು ಕರೆಯಲಾಯಿತು. ಈ ಹುದ್ದೆಯಲ್ಲಿ ಅವರು ಮೂವತ್ತೊಂದು ವರ್ಷಗಳು ದುಡಿದು 1964ರಲ್ಲಿ ನಿವೃತ್ತರಾದರು. ಇವರ ಕಾಲದಲ್ಲಿ ಗುಡಿಯು ಜಗತ್‌ಪ್ರಸಿದ್ಧವಾಯಿತು; ಆಡಳಿತದಲ್ಲಿ ಅಚ್ಚುಕಟ್ಟು ಹೆಚ್ಚಿತು; ಯಾತ್ರಿಕರ ಅನುಕೂಲ ಇಮ್ಮಡಿಯಾಯಿತು.

ಅವರು ಆಡಳಿತವನ್ನು ವಹಿಸಿಕೊಳ್ಳುವ ಕಾಲಕ್ಕೆ ಚಿತ್ತೂರು ಮತ್ತು ಚಿಂಗಲ್‌ಪೇಟೆ ಜಿಲ್ಲೆಗಳಲ್ಲಿ ಒಟ್ಟು ಆರುನೂರು ಜಮೀನುದಾರೀ ಗ್ರಾಮಗಳು ಗುಡಿಗೆ ಸೇರಿದ್ದುವು; ಇವುಗಳ ವಾರ್ಷಿಕ-ಉತ್ಪನ್ನ ಆರುಲಕ್ಷ ರೂಪಾಯಿಗಳು. ಆದರೆ 1950ರಲ್ಲಿ ಜಮೀನುದಾರಿಪದ್ಧತಿಯನ್ನು ರದ್ದುಪಡಿಸಿದಾಗ ಈ ಹಳ್ಳಿಗಳು ಸರಕಾರದ ವಶವಾದುವು. ಅಣ್ಣಾರಾಯರು ಕೆಲಸಕ್ಕೆ ಸೇರಿದ ವರ್ಷ ತಿರುಮಲೆ-ತಿರುಪತಿಗುಡಿಗಳ ಆದಾಯ

ಹನ್ನೊಂದು ಲಕ್ಷ ರೂಪಾಯಿಗಳು; 1949ರಲ್ಲಿ ಅದು ಇಪ್ಪತ್ತೆರಡು ಲಕ್ಷಕ್ಕೆ ಏರಿತು; ಅವರು ಕೆಲಸದಿಂದ ನಿವೃತ್ತರಾಗುವಾಗ (1964ರಲ್ಲಿ) ಇಪ್ಪತ್ತೊಂದು ಕೋಟಿ ರೂಪಾಯಿಗಳಾಯಿತು! ಬಿಡಿದಿನಗಳಲ್ಲೇ ಬೆಟ್ಟದ ಗುಡಿಗೆ ಸುಮಾರು ಹತ್ತುಸಾವಿರ ಭಕ್ತರು ಬರುವಂತಾಯಿತು. ವಿಶೇಷೋತ್ಸವಗಳಲ್ಲಂತೂ ದಿನದಲ್ಲಿ ಐವತ್ತುಸಾವಿರ ಜನರು ದೇವರ ದರ್ಶನಕ್ಕೆ ಬರುತ್ತಾರೆ. ಯಾತ್ರಿಕರ ಅನುಕೂಲಕ್ಕಾಗಿ ಹಲವಾರು ವ್ಯವಸ್ಥೆಗಳನ್ನು ಮಾಡಲಾಗಿದೆ. ವಸತಿಗೃಹಗಳು, ಫಲಾಹಾರಮಂದಿರ, ಕಲ್ಯಾಣಕಟ್ಟೆ, ವೈದ್ಯಶಾಲೆ, ಕುಡಿಯುವ ನೀರಿನ ವ್ಯವಸ್ಥೆ, ವಾಹನಸೌಕರ್ಯ, ಪ್ರಕಟನೆಗಳು, ಪ್ರಸಾದವಿತರಣೆ, ವಿದ್ಯಾಸಂಸ್ಥೆಗಳು ಮುಂತಾದ ವಿವರಗಳಲ್ಲಿ ಆಡಳಿತದವರು ಆಸಕ್ತಿಯನ್ನು ವಹಿಸಿ ಯಾತ್ರೆ ಸುಖಕರವಾಗುವಂತೆ ಮಾಡಿದ್ದಾರೆ. ಅನುಕೂಲಗಳು ಹೆಚ್ಚಾದಂತೆ ಯಾತ್ರಿಕರೂ ಹೆಚ್ಚಾಗುತ್ತಿರುವುದರಿಂದ ಅನುಕೂಲಗಳು ಯಾತ್ರಿಕರ ಸಂಖ್ಯೆಯನ್ನು ಸರಿಗಟ್ಟುವುದು ಕಷ್ಟವೇ.

ಆದರೆ ದೇವರು ಕಾಸಿಗೆ ಆಸೆಪಡುವನೆಂಬ ಅಪವಾದ ಮಾತ್ರ ತಪ್ಪಲಿಲ್ಲ. ಇಡೀ ಆಡಳಿತವು ದೊಡ್ಡದೊಂದು ಉದ್ಯಮದಂತೆ ಕೆಲಸಮಾಡುತ್ತಿದ್ದು ಹಣದ ಸುತ್ತ ತಿರುಗುತ್ತಿರುವುದನ್ನು ಯಾರಾದರೂ ಕಾಣಬಹುದು. ಹಣವಿದ್ದವರು ದೇವರ ದರ್ಶನವನ್ನು ಮಾಡಿಯಾರು; ಉಳಿದವರು ಆಡಳಿತದವರ ಅಚ್ಚುಕಟ್ಟನ್ನು ಮೆಚ್ಚಿಕೊಂಡು ಹಿಂದಿರುಗಬೇಕಷ್ಟೆ! 'ಧರ್ಮದರ್ಶನ' ಅಥವಾ 'ಸರ್ವದರ್ಶನ'ವೆನ್ನುವುದು ಯಾರಿಗಾದರೂ ಅಹಿತವಾದ ಅನುಭವವೇ; ವಿಧಿಯಿಲ್ಲದೆ (ಎಂದರೆ ಹಣವಿಲ್ಲದೆ) ಲಕ್ಷಾಂತರ ಜನರು ಈ ದರ್ಶನಕ್ಕೆಂದು ಕೊನೆಮೊದಲಿಲ್ಲದಂತೆ ಸಾಲುಗಟ್ಟಿನಿಲ್ಲುತ್ತಾರೆ. ಗರ್ಭಗುಡಿಯ ಹತ್ತಿರ ಸೇರುವುದೇ ದುಸ್ತರವಾಗಿ ವೇಂಗಡದೊಡೆಯನನ್ನು ಕಣ್ಣು ತುಂಬ ನೋಡುವುದು ತುಂಬ ಕಷ್ಟವೆನಿಸುತ್ತದೆ. ಆಡಳಿತದ ವ್ಯವಸ್ಥೆಗಳೆಲ್ಲವೂ ಸೇರಿ ಕ್ಷೇತ್ರದ ಪಾವಿತ್ರ್ಯವನ್ನು ಸುಮಾರಾಗಿ ಕೆಡಿಸಿವೆಯೆಂದು ಒಪ್ಪಬೇಕು. ಗುತ್ತಿಗೆದಾರರ ಕಾಲದಿಂದಲೂ ಸಾಗಿಬಂದಿರುವ, ಗುಡಿಯನ್ನು ಹಣದ ಮೇಲೆ ನಿಲ್ಲಿಸುವ ಪ್ರಯತ್ನ ಈಗಿನ ಆಡಳಿತದಲ್ಲಿ ಹೆಚ್ಚು ಯಶಸ್ವಿಯಾಗಿದೆ. ವೇಂಗಡದೊಡೆಯನ ಜನಪ್ರೀತಿಯನ್ನು ಅವಲಂಬಿಸಿಕೊಂಡು ವ್ಯಾಪಾರಸಂಸ್ಥೆಯೊಂದು ಮೂಡಿಕೊಂಡು ಬೆಳೆಯುತ್ತಿದೆಯೆಂದರೆ ತಪ್ಪಲ್ಲ. ದೇವರನ್ನು ಒಳಗಿರಿಸಿಕೊಂಡು, ಬಂದವರು ಹಣತೆತ್ತರೆ ಮಾತ್ರ ನೋಡಗೊಡಿಸುವುದು ಭಾವುಕರಿಗೆ ಬೇಸರವನ್ನುಂಟುಮಾಡುವ ಪ್ರಸಂಗವಲ್ಲವೆ?

ಗುಡಿಯಿಲ್ಲದೆ ಬಟ್ಟಬಯಲಲ್ಲಿ ಎಲ್ಲರೆದುರೂ ಕಾಣುತ್ತಿದ್ದ ಈ ವಿಗ್ರಹವನ್ನು ಗರ್ಭಗುಡಿಯೊಳಗೆ ಅಡಗಿಸಿದುದು ಆಗಮದ ವಿಧಿ. ಈ ಗುಡಿಯನ್ನು ಬೆಳೆಸಿ ಕೋಟೆಯೊಳಗೆ ಅಡಗಿಸಿದುದು ಅರಸರ ಕೈಂಕರ್ಯ. ದೇವರನ್ನು ನೋಡಲು ಹಣವನ್ನು ತೆರಬೇಕೆನ್ನುವುದು ಗುತ್ತಿಗೆದಾರರ ಮತ್ತು ಮಹಂತರ ಲೋಭ, ದುರಾಸೆ.



ಹನ್ನೆರಡು

ಈಗಿರುವ ಗುಡಿ

ಬೆಟ್ಟದ ಮೇಲಿರುವ ಗುಡಿಯು ಈಗಿರುವಂತೆಯೇ ಯಾವಾಗಲೂ ಇದ್ದಿತು ಎಂದು ಭಾವಿಸಬಾರದು; ಈಗ ನಾವು ನೋಡುವ ಗುಡಿಯ ಕಟ್ಟಡಗಳೆಲ್ಲ ಒಮ್ಮೆಲೆ ಮೈದಳೆದುವು ಎಂದೂ ಬಗೆಯಬಾರದು. ಗುಡಿಯೇ ಇಲ್ಲದೆ, ವೇಂಗಡದೊಡೆಯನು ಬಿಡಿಬೀಸಾಗಿ ಗಾಳಿ-ಮಳೆ-ಬಿಸಿಲಿಗೆ ಮೈಯೊಡ್ಡಿ ನಿಂತಿದ್ದ ಕಾಲವೂ ಇದ್ದಿತು; ತಾನೇ ತಾನಾಗಿ ತೋರಿಕೊಂಡವನಲ್ಲವೆ? ಕಟ್ಟಿದ ಗುಡಿಯೊಳಗೆ ಬಂದು ಸೇರಿಕೊಂಡು ನಿಂತವನಲ್ಲವಷ್ಟೆ? ಹುತ್ತದಲ್ಲಿ ಹುದುಗಿದ್ದವನನ್ನು ಹೊರತೆಗೆದವರು ಒಡನೆಯೇ ಗುಡಿಯನ್ನು ಕಟ್ಟಿದರೆನ್ನುವ ಉಲ್ಲೇಖ ಪುರಾಣಗಳಲ್ಲಿಯೂ ಕಾಣಬರುವುದಿಲ್ಲ. ಗುಡಿಯೆಂಬ ಕಟ್ಟಡ ಕಾಣಿಸಿಕೊಂಡುದು ಮುಂದೆ ಎಂದೋ; ಅದೂ ಗರ್ಭಗುಡಿಯಷ್ಟೇ. ಬಹುಕಾಲದನಂತರ ಮುಂದೊಂದು ಮಂಡಪ, ಮತ್ತು ಗರ್ಭಗುಡಿಯ ಸುತ್ತ ಪ್ರದಕ್ಷಿಣೆ ಮಾಡಲು ಎಡೆ ಇವು ತೋರಿಕೊಂಡುವು; ಅನಂತರ ಬಂದುದು ಈಗಿನ ತಿರುಮಾಮಣಿ-ಮಂಡಪ. ಈಗಿನ ವಿಮಾನಪ್ರದಕ್ಷಿಣೆಯ ಒಳಗೆ ಸೇರಿರುವ ಭಾಗಗಳು ಕ್ರಿಸ್ತಾಬ್ದ ಹದಿಮೂರನೆಯ ಶತಮಾನಕ್ಕೆ ಮೊದಲು ಮೈದಳೆದುವು. ಅಲ್ಲಿಂದೀಚೆಗೆ ಗುಡಿಯ ಉಳಿದೆಲ್ಲ ಕಟ್ಟಡಗಳೂ ಆಗಾಗ ಅಷ್ಟಷ್ಟು ಮೂಡಿಕೊಂಡು ಬಂದುವು. ಮೊದಲಿಗೆ ತಿರುಮಲೆಯೆಂಬ ಕುಗ್ರಾಮಕ್ಕೆ ಎಲ್ಲೆಕಟ್ಟೇ ಇರಲಿಲ್ಲ; ಬೇಕಾಗಿಯೂ ಇರಲಿಲ್ಲ. ದಟ್ಟವಾದ ಕಾಡು ಸುತ್ತಲೂ ಇದ್ದಿತು. ಯಾವ ಬೆಳೆಯನ್ನೂ ಜನ ಬೆಳೆಯುತ್ತಿರಲಿಲ್ಲ. 1806ರ ಸುಮಾರಿಗೆ ಮಾಮಂಡೂರು ಪಾಳೆಯಕ್ಕೆ ಸೇರುವವರೆಗೂ ಇದು ಬಿಡಿಯಾದ, ಸ್ವತಂತ್ರ ಗ್ರಾಮವೇ ಆಗಿದ್ದಿತು. 1880ರ ಉತ್ತರ ಆರ್ಕಾಡು ಮ್ಯಾನ್ಯುಎಲ್‌ನಲ್ಲಿ ಈ ಗ್ರಾಮದಲ್ಲಿ 500 ಜನರಿದ್ದರೆಂಬ ದಾಖಲೆಯಿದೆ. ಗ್ರಾಮದ ವಿಸ್ತಾರ ಒಂದೂಕಾಲುಮೈಲಿ ಚಚ್ಚೌಕ. 1951ರಲ್ಲೂ ಅಲ್ಲಿ ಮನೆಗಳಿದ್ದುದು 603 ಅಷ್ಟೆ; ಜನಸಂಖ್ಯೆ 3,505. ಆದರೆ 1985ರ ಸುಮಾರಿಗೆ 5,846 ಮನೆಗಳಾಗಿದ್ದುವು; ಜನಸಂಖ್ಯೆ 25,840! ಮುಂದೆ ಬೆಳೆದ ಬಗೆಯನ್ನು ಕೇಳುವುದೇ ಬೇಡ.

ಇಲ್ಲಿ ಇನ್ನೂ ಒಂದು ವಿವರವನ್ನು ಗಮನಿಸಬೇಕು. ಈ ಗುಡಿಯ ಕ್ಷೇತ್ರಪಾಲಕನು ರುದ್ರ. ಇವನನ್ನು ಪ್ರತಿನಿಧಿಸುವ ಕಲ್ಲುಗುಂಡೊಂದು ಗುಡಿಯ ನೆರೆಯಲ್ಲಿಯೇ ಪೂಜೆಗೊಳ್ಳುತ್ತ ಇದ್ದಿತು. ಇದನ್ನು ಕ್ಷೇತ್ರಪಾಲಗುಂಡು ಎಂದು ಕರೆಯುವುದಿದೆ. ಈಗ ಇದು ಗುಡಿಯ ಬಳಿ ಕಾಣಿಸಿಗುವುದಿಲ್ಲ. ದೂರದ ಗೋಗರ್ಭತೀರ್ಥದಲ್ಲಿ ನೆಲೆಗೊಂಡಿದೆ. ಇದು ಯಾವಾಗ, ಹೇಗೆ ಸ್ಥಳಾಂತರಗೊಂಡಿತೋ ತಿಳಿಯುವುದಿಲ್ಲ.

ಆದರೂ ಮಹಾಶಿವರಾತ್ರಿಯಂದು (ಮಾಘ-ಬಹುಳ-ಚತುರ್ದಶಿ) ಗುಡಿಯ ಅರ್ಚಕರೂ ಉದ್ಯೋಗಸ್ಥರೂ ಕೈಂಕರ್ಯಪರರೂ ಮಂಗಳವಾದ್ಯದೊಂದಿಗೆ ಗೋಗರ್ಭತೀರ್ಥಕ್ಕೆ ತೆರಳಿ ಅಲ್ಲಿ ಕ್ಷೇತ್ರಪಾಲಗುಂಡಿಗೆ ಏಕಾದಶರುದ್ರ-ಅಭಿಷೇಕ, ಅಲಂಕಾರ, ಆರಾಧನೆ ಗಳನ್ನು ನಡೆಸಿ ಹಿಂದಿರುಗುವ ಸಂಪ್ರದಾಯವಿದೆ. ಈ ಕ್ಷೇತ್ರಪಾಲ ಗುಂಡು ಎಲ್ಲಿದ್ದಿತೋ, ಆಗ ಗುಡಿ ಹೇಗಿದ್ದಿತೋ ತಿಳಿಯುವುದಿಲ್ಲ. ಕಂಪೆನಿಯವರು ಮಹಂತಸೇವಾದಾಸನಿಗೆ ವಿಚಾರಣಕರ್ತನೆಂದು ಹೆಸರು ಕೊಟ್ಟು ಗುಡಿಯ ಆಡಳಿತವನ್ನು ವಹಿಸಿಕೊಡುವಾಗ (1843ರ ಸನ್ನದು) ಗುಡಿಗೆ ಸೇರಿದಂತೆ, ಆದರೆ ಗುಡಿಯ ಆವರಣದ ಹೊರಗೆ, ಇರುವ ಆರು ಸನ್ನಿಧಿಗಳನ್ನೂ ಸೇರಿಸಿದ್ದ ದಾಖಲೆಯಿದೆ. ಅದರಲ್ಲಿ ಕ್ಷೇತ್ರಪಾಲಕನ ಸನ್ನಿಧಿಯೂ ಒಂದು. ಉಳಿದವು ವರಾಹಸ್ವಾಮಿ, ಭಾಷ್ಯಕಾರರು ಎಂದರೆ ರಾಮಾನುಜರು (ಗುಡಿಯ ಒಳಗೇ ಈಗ ಇದೆ), ಬೇಡಿ ಹನುಮಂತ, ಸ್ವಾಮಿಪುಷ್ಕರಿಣಿ ಆಂಜನೇಯ, ದೋವ ಭಾಷ್ಯಕಾರರು (ರಾಮಾನುಜರು). ಆದರೆ ಈಗ ಕ್ಷೇತ್ರಪಾಲಕನ ಸನ್ನಿಧಿಯೊಂದು ಇಲ್ಲ ; ಉಳಿದವು ಇವೆ. ಮಹಂತರ ಕಾಲದಲ್ಲೇ ಈ ಕ್ಷೇತ್ರಪಾಲಕ ರುದ್ರ ಗುಡಿಯ ನೆರೆಯನ್ನು ಬಿಟ್ಟು ದೂರ ಓಡಿರಬೇಕು, ವೀರವೈಷ್ಣವರ ಕಾರುಬಾರಿಗೆ ಅಂಜಿ!

ಈಗಿರುವ ಗುಡಿಯ ಹರವಿನಲ್ಲೂ ಮೊದಲಿಂದ ಮುಖ್ಯವೆನಿಸಿಕೊಂಡ ಎಡೆ ಗಳಿವೆ. ಕಾರ್ತಿಕ-ದೀಪೋತ್ಸವದ ಪರ್ವದಿನದಲ್ಲಿ ಗರ್ಭಗುಡಿಯಿಂದ ದೀಪಪಾತ್ರೆಯನ್ನು ಹೊರಡಿಸಿಕೊಂಡು ಗುಡಿಗೆ ಸೇರಿದಂತೆ ಐವತ್ತೆರಡು ಎಡೆಗಳಲ್ಲಿ ದೀಪಗಳನ್ನು ಬೆಳಗಿಸುವ ವಾಡಿಕೆಯಿದೆ. ಈ ಎಡೆಗಳಲ್ಲಿ ಸೇರಿರುವ ಭಾಗಗಳನ್ನು ನೋಡಿ. ಗರ್ಭಗುಡಿಯಲ್ಲಿರುವ ಬ್ರಹ್ಮಾಖಂಡ, ಕುಲಶೇಖರ-ಪಡಿ (ಗರ್ಭಗುಡಿಯ ಹೊಸ್ತಿಲು), ರಾಮರ ಮೇಡೆ, ಬಂಗಾರ-ಬಾಗಿಲು, ದ್ವಾರಪಾಲಕರು, ಗರುಡಸನ್ನಿಧಿ, ಪೋಟು ಅಮ್ಮನವರು (ಅಡುಗೆಮನೆಯಲ್ಲಿ), ವರದರಾಜಸ್ವಾಮಿಸನ್ನಿಧಿ, ಬಂಗಾರಬಾವಿ, ಕಲ್ಯಾಣಮಂಟಪ, ಬೊಕ್ಕಸ ಅರ, ವಾಹನಮಂಟಪ, ತಾಳ್ಲಪಾಕ ಅರ, ವಿಷ್ವಕ್ಸೇನ ಸನ್ನಿಧಿ, ರಾಮಾನುಜಸನ್ನಿಧಿ, ಚಂದನ ಅರ, ನರಸಿಂಹ-ಸನ್ನಿಧಿ, ನಡುಪಡಿಕಾ ವಲಿ, ಧ್ವಜಸ್ತಂಭ, ಬಲಿಪೀಠ, ತಿರುಮಲರಾಯ-ಮಂಟಪ, ಉಗ್ರಾಣ, ಹೂ-ಬಾವಿ, ಯಮುನತ್ತುರೈ, ಕ್ಷೇತ್ರಪಾಲಕ, ರಂಗನಾಯಕ-ಮಂಟಪ, ಮಹಾದ್ವಾರ, ಇಷ್ಟು ಈಗಿನ ಗುಡಿಯ ಒಳಗಾದರೆ, ಗುಡಿಯ ಹೊರಗೆ ಗೋಗರ್ಭಕ್ಷೇತ್ರಪಾಲಕ, ಬೇಡಿ ಆಂಜನೇಯಸ್ವಾಮಿ-ಸನ್ನಿಧಿ, ವರಾಹಸ್ವಾಮಿ-ಗುಡಿ, ಸ್ವಾಮಿಪುಷ್ಕರಿಣಿ ಮತ್ತು ಪುಷ್ಕರಿಣಿ ಆಂಜನೇಯ-ಸನ್ನಿಧಿ ಇವು ಸೇರುತ್ತವೆ.

ಮತ್ತೆ, ಬೆಟ್ಟದ ಮೇಲೆ ಗುಡಿಯ ನೆರೆಯಲ್ಲೇ ಇರುವ ಸ್ವಾಮಿಪುಷ್ಕರಿಣೀ ತೀರ್ಥ, ಗುಡಿಯಿಂದ ವಾಯವ್ಯದಿಕ್ಕಿನಲ್ಲಿ ಐದು ಮೈಲಿ ದೂರ ಇರುವ ಕುಮಾರ ಧಾರಾತೀರ್ಥ, ಗುಡಿಗೆ ಏಳೂವರೆ ಮೈಲಿ ದೂರ ಇರುವ ತುಂಬುರುತೀರ್ಥ, ಗುಡಿಯಿಂದ ಎರಡು ಮೈಲಿ ದೂರ ಇರುವ ಆಕಾಶಗಂಗೆ, ಗುಡಿಗೆ ಎರಡೂವರೆ ಮೈಲಿ ದೂರ ಇರುವ ಪಾಪವಿನಾಶನತೀರ್ಥ—ಇವು ಗುಡಿಗೆ ನಂಟನ್ನು ಪಡೆದು

ಕೊಂಡವು. ಗುಡಿಯ ಬೆಳವಣಿಗೆಯಲ್ಲಿ ಇವುಗಳ ಪಾತ್ರವೂ ಇಲ್ಲದಿಲ್ಲ. ಆದರೆ ಇವು ಗುಡಿಗೂ ಈ ತೀರ್ಥಗಳಿಗೂ ನೇರವಾದ ನಂಟು ಮೊದಲಿಂದ ಇದ್ದಿತೆಂದು ಭಾವಿಸಬಾರದು. ಮಹಂತರ ಕಾಲದಲ್ಲಿ ಗುಡಿಯ ಹೆಗ್ಗಳಿಕೆಯನ್ನು ಹೆಚ್ಚಿಸಲು, ಬೆಟ್ಟವೆಲ್ಲ ತಮ್ಮ ಆಡಳಿತಕ್ಕೇ ಸೇರಿದ್ದೆಂದು ತೋರಿಸಲು, ಮತ್ತು ಯಾತ್ರಿಕರ ಸುಲಿಗೆಗೆಂದು ಈ ತೀರ್ಥಗಳೆಲ್ಲ ಅಣಿಗೊಂಡುವು; ಪುರಾಣದ ಕಥೆಗಳೂ ಹುಟ್ಟಿಕೊಂಡುವು. ಮಹಂತರಿಗೆ ಇಂಗ್ಲಿಷರು ಗುಡಿಯ ಆಡಳಿತವನ್ನು ಒಪ್ಪಿಸುವಾಗ ಮಾಡಿದ ಕರಾರುನಾಮೆಯಲ್ಲಿ ಗುಡಿಗೆ ಸೇರಿದ ಭಾಗ ಗುಡಿಯಿಂದ ಸುತ್ತಲೂ ಎರಡು ಮೈಲಿಗಳಷ್ಟು ಮಾತ್ರ ಎಂದು ನಮೂದಿಸಲಾಗಿದೆ. ಇದರಲ್ಲಿ ಆಕಾಶಗಂಗೆ ಸೇರುತ್ತದೆ. ಇದರ ನೀರನ್ನೇ ಗುಡಿಗೆ ಅರ್ಚನೆಗಾಗಿ ತರುವುದು ಹಿಂದಿನಿಂದ ಬಂದ ವಾಡಿಕೆ. ಅನಂತರ 1879ರ ಸುಮಾರಿಗೆ ಮಹಂತನು ಇಡೀ ಬೆಟ್ಟದ ಪರಿಸರವೆಲ್ಲ (ಕೊಳ, ಕಾಡು, ಮೇಡು ಎಲ್ಲವೂ) ಗುಡಿಗೇ (ಎಂದರೆ ತನಗೇ) ಸೇರಿದ್ದೆಂದು ತಕರಾರು ಹೂಡಿದನು.


ಕಮರಿಯಲ್ಲಿ ಗುಡಿ

ಗುಡಿಯಿರುವುದು ಹಳ್ಳದಲ್ಲಿ. ಸುತ್ತಲೂ ಬೆಟ್ಟಗಳು; ಪೂರ್ವದಿಕ್ಕೊಂದನ್ನು ಬಿಟ್ಟು. ಈ ಹಳ್ಳದ ನಡುವೆ ಗುಡಿಯಿದೆ. ಬೆಟ್ಟವೇರಿ ಹೋಗುವಾಗ ಅಥವಾ ಗುಡಿಯ ಕಡೆ ನಡೆದು ಬರುವಾಗ ಗೋಪುರವಾಗಲೀ ವಿಮಾನವಾಗಲೀ ಕಣ್ಣಿಗೆ ಬೀಳುವುದಿಲ್ಲ; ತೀರ ಹತ್ತಿರ ಬಂದಮೇಲೇ ಗುಡಿಯ ನೋಟ ದೊರೆಯುವುದು. ಬೆಟ್ಟದ ಕೆಳಗಿದ್ದವರು ಈ ದೇವರನ್ನು 'ಬೆಟ್ಟದ ತುದಿಯಲ್ಲಿ ನಿಂತವನು' (ಉಚ್ಚಿಯಿಲ್ ನಿನ್ರಾನ್) ಎಂದು ಕರೆದರಾದರೂ ಬೆಟ್ಟವೇರಿ ಬಂದು ದೇವರನ್ನು ನೋಡಿದವರು 'ಬೆಟ್ಟ ಬಾಗಿರುವ ಕಡೆ ನಿಂತವನು' (ಮಲೈಕೂನಿಯ ನಿನ್ರಾನ್) ಎಂದು ನಿರ್ದೇಶಿಸಿದರು. ನಾಲ್ಕೂ ಕಡೆಗಳಿಂದ ಬೆಟ್ಟ ಬಾಗಿರುವಲ್ಲಿಯೇ ಗುಡಿ ಇರುವುದು; ಗುಡಿಯ ಸುತ್ತಲೂ ಏನಿಲ್ಲವೆಂದರೂ ಹದಿನೈದು ಅಡಿಗಳಷ್ಟು ಎತ್ತರವಿರುವ ದಿಣ್ಣೆ, ಬೆಟ್ಟಸಾಲು. ಗುಡಿಯ ಹೊರಗೋಡೆಯ ನಾಲ್ಕೂ ಕಡೆ ಇರುವ ಬೀದಿಗಳನ್ನು ಕೂಡ ಬೆಟ್ಟ ಕಡಿದೇ ಮಾಡಿದ್ದಾರೆ. ಹೀಗಿರುವುದರಿಂದ ಗುಡಿ ಸಣ್ಣದೇ. ದೊಡ್ಡದಾಗಿ ಬೆಳೆಯುವ ಅವಕಾಶವಿಲ್ಲ. ದಕ್ಷಿಣ ದೇಶದ ಮಧುರೆ, ಚಿದಂಬರ, ತಿರುವಣ್ಣಾಮಲೆ, ರಾಮೇಶ್ವರ ಮೊದಲಾದ ಇತರ ಹೆಸರಾಂತ ಗುಡಿಗಳಿಗೆ ಹೋಲಿಸಿದರೆ ಈ ಬೆಟ್ಟದ ಗುಡಿ ತೀರ ಸಣ್ಣದು. ಕ್ರಿಸ್ತಾಬ್ದ ಹದಿಮೂರನೆಯ ಶತಮಾನದಲ್ಲಿ ನಡೆದ ಬಡಾವಣೆಯೇ ಹೆಚ್ಚೂ ಕಡಮೆ ಸ್ಥಿರವಾಯಿತು.

ಬೆಟ್ಟವೇರಿದ ಮೇಲೆ ಮೆಟ್ಟಲುಗಳನ್ನಿಳಿದುಬಂದು ಗುಡಿಯ ಸುತ್ತ ಹೋಗಿ ಬಂದರೆ ಅದು ಮಹಾಪ್ರದಕ್ಷಿಣೆ. ಉತ್ತರ ಮತ್ತು ದಕ್ಷಿಣದ 'ಮಾಡ'ಬೀದಿಗಳು ಒಂದೊಂದೂ ಸುಮಾರು 800 ಅಡಿ ಉದ್ದವಾಗಿದೆ; ಪಶ್ಚಿಮ, 'ಮಾಡ' (ಎಂದರೆ ಗುಡಿಯ ಹಿಂಭಾಗದ) ರಸ್ತೆ 900 ಅಡಿಗಳಷ್ಟು ಉದ್ದ, ಗುಡಿಯ ಮುಂದೆ

ಹಾದುಹೋಗುವ ಬೀದಿ 750 ಅಡಿಗಳಷ್ಟು. ಇದು ಸ್ವಾಮಿಪುಷ್ಕರಿಣೀಕೊಳವನ್ನೂ ಒಳಗೊಳ್ಳುತ್ತದೆ. ಇಷ್ಟೂ ಮಹಾಪ್ರದಕ್ಷಿಣೆಯೆನಿಸಿಕೊಳ್ಳುತ್ತದೆ. ಇದರ ಒಟ್ಟು ಹರವು ಹದಿನಾರು ಎಕರೆಗಳಷ್ಟು ಭೂಮಿ. ಇದನ್ನು ಮುಗಿಸಿ ಪೂರ್ವ-ಮಾಡ-ಬೀದಿಗೆ ಬಂದರೆ ಅಲ್ಲಿ ಗುಡಿಯ ತಲೆಬಾಗಿಲು; ಮಹಾದ್ವಾರ, ಮುಖದ್ವಾರ ಅಥವಾ ಪ್ರವೇಶದ್ವಾರ. ಈ ಗುಡಿಗೆ ಇದೊಂದೇ ಬಾಗಿಲು; ಬೇರೆ ಎಲ್ಲಿಂದಲೂ ಗುಡಿಯೊಳಗೆ ಹೋಗುವ ಹಾಗಿಲ್ಲ. ಇದನ್ನು 'ಪಡಿಕ್ಕಾವಲಿ', 'ತಿರುವಾಶಲ್', 'ಪೆರಿಯ-ಗೋಪುರ-ವಾಶಲ್' ಎಂದು ಬೇರೆಬೇರೆ ಹೆಸರುಗಳಿಂದ ಕರೆಯುತ್ತಾರೆ. ಈ ಬಾಗಿಲ ಅಗಲ ಹನ್ನೊಂದು ಅಡಿಗಳು. ಈ ಬಾಗಿಲಿನಿಂದ ಮಹಾಪ್ರಾಕಾರವು ಪೂರ್ವದಿಂದ ಪಶ್ಚಿಮಕ್ಕೆ 414 ಅಡಿಗಳು, ದಕ್ಷಿಣದಿಂದ ಉತ್ತರಕ್ಕೆ 263 ಅಡಿಗಳು ಸಾಗುತ್ತದೆ.

ಈ ಪ್ರಾಕಾರವು ಕೋಟೆಯ ಗೋಡೆಗಳಂತೆ ಎತ್ತರವಾಗಿದ್ದು ನಾಲ್ಕು ಅಡಿಗಳಷ್ಟು ದಪ್ಪವಾಗಿದೆ. ನೆರೆಯ ಅರಸರ ಕಣ್ಣೆಲ್ಲ ಈ ಗುಡಿಯ ಸಂಪತ್ತಿನ ಮೇಲಿದ್ದುದರಿಂದ,




ಆಲಯಶಿಖರದ ಒಂದು ನೋಟ

ಮತ್ತೆಮತ್ತೆ ದಾಳಿಯಾಗುವ ಸಂಭವವಿದ್ದುದರಿಂದ ಹೊರಗೋಡೆಯನ್ನು ಭದ್ರ ಪಡಿಸಿದುದು ಸಹಜವೇ. ಈ ತಲೆಬಾಗಿಲು ಕ್ರಿಸ್ತಾಬ್ದ 1210ರ ಸುಮಾರಿಗೇ ಇದ್ದಿತೆಂದು ತೋರುತ್ತದೆ. ಆದರೆ ಈ ತಲೆಬಾಗಿಲ ಮೇಲೆ ಈಗ ಕಾಣುವ ಗೋಪುರ (ಇದನ್ನು ಪೆರಿಯ-ಗೋಪುರ, ದ್ವಾರಗೋಪುರ ಎಂದೂ ಕರೆಯುತ್ತಾರೆ) ಎದ್ದುದು 1260ರ ನಂತರವೇ. ಈ ಗೋಪುರ ಅಷ್ಟೇನೂ ಎತ್ತರವಾದುದೂ ಅಲ್ಲ, ಹಾಗೆ ಸೊಗಸಾದುದೂ ಅಲ್ಲ; ಅದರ ಆಕಾರವೂ ಕಣ್ಣನ್ನು ಸೆಳೆಯುವಂತೇನೂ ಇಲ್ಲ. ಅದರ

ಮೇಲೆ ಮೂಡಿಕೊಂಡಿರುವ ಶಿಲ್ಪಗಳು ಸಾಧಾರಣ. ಮೊದಲು ಹೇಗಿದ್ದಿತೋ ತಿಳಿಯದು, ಈಗಂತೂ ಕೆಡಿಸಿದ್ದಾರೆ. ನಮ್ಮ ಗುಡಿಗಳ ಆಡಳಿತ ನಡೆಸುವ ಜನಕ್ಕೆ ಸೌಂದರ್ಯದೃಷ್ಟಿ ಮರೆಯಾಗಿ ಬಹುಕಾಲವಾಯಿತು!

ತಲೆಬಾಗಿಲನ್ನು ದಾಟಿ ಒಳಹೊಕ್ಕರೆ ಗುಡಿಯ ಒಟ್ಟು ವಿಸ್ತಾರ ಎರಡು ಎಕರೆಗಳಷ್ಟು. ಮೊದಲು ಹೊರ ಆವರಣ ಕಾಣುತ್ತದೆ. ಈ ಆವರಣ 'ಸಂಪಂಗಿ ಪ್ರದಕ್ಷಿಣ'ವೆನಿಸಿಕೊಂಡು ಒಳ ಆವರಣವನ್ನು ಸುತ್ತರಿದು, ಭಕ್ತರು ಪ್ರದಕ್ಷಿಣೆಮಾಡಿಬರ ಬಹುದಾಗಿದ್ದಿತು. ಈಗ ಅದು ಸಾಧ್ಯವಿಲ್ಲ. ಹೊರ ಆವರಣದ ಮುಂಭಾಗವಷ್ಟೇ ತೆರೆದು ಉಳಿದಿದೆ. ತಲೆಬಾಗಿಲಿನಿಂದ ನೂರಿಪ್ಪತ್ತು ಅಡಿಗಳಷ್ಟು ಹರವಿರುವ ಈ ಭಾಗವನ್ನು ದಾಟಿದರೆ ಒಳಗೋಪುರ, ಅದನ್ನು ದಾಟಿದರೆ ಒಳ ಆವರಣ (ಇದೇ 'ವಿಮಾನಪ್ರದಕ್ಷಿಣ'). ಇದನ್ನೂ ಸುತ್ತರಿದು ಪ್ರಾಕಾರವಿದೆ. ಇದರ ಮೇಲೊಂದು ಗೋಪುರವೂ ಇದೆ. ಒಳ ಆವರಣ ತೆರವಾಗಿಯೇ ಇದೆ, ಭಕ್ತರು ಪ್ರದಕ್ಷಿಣೆ ಮಾಡಿಬರಬಹುದು. ಗುಡಿಗೆ ಮೂರು ಪ್ರದಕ್ಷಿಣಮಾರ್ಗಗಳು: ಸಂಪಂಗಿ-ಪ್ರದಕ್ಷಿಣ, ವಿಮಾನ-ಪ್ರದಕ್ಷಿಣ ಮತ್ತು ಮುಕ್ಕೋಟಿ-ಪ್ರದಕ್ಷಿಣ ಎಂದು. ಮುಕ್ಕೋಟಿ-ಪ್ರದಕ್ಷಿಣ ಗರ್ಭಗುಡಿಯ ಸುತ್ತ ಇರುವುದು. ಅದನ್ನು ಮುಚ್ಚಿ ಸುಮಾರು ಏಳುನೂರು ವರ್ಷಗಳಾದುವು. ಅದರ ವಿಚಾರ ಮುಂದೆ ಬರುತ್ತದೆ. ಸಂಪಂಗಿ-ಪ್ರದಕ್ಷಿಣವನ್ನು ಈಚೆಗೆ ಮುಚ್ಚಿದ್ದಾರೆ. ಎಂದರೆ ಭಕ್ತರು ಅದರಲ್ಲಿ ನಡೆದು ಪ್ರದಕ್ಷಿಣೆ ಮಾಡುವಂತಿಲ್ಲ. ಉಳಿದಿರುವುದು ವಿಮಾನಪ್ರದಕ್ಷಿಣ. ಅದನ್ನೂ ಯಾವಾಗ ಮುಚ್ಚುವರೋ ತಿಳಿಯದು!



ಬಂಗಾರಬಾಗಿಲು


ಪ್ರತಿಮಾಮಂಡಪ

ಗುಡಿಗೆ ಎರಡು ಆವರಣಗಳು: ಹೊರಗೆ ಸಂಪಂಗಿಪ್ರದಕ್ಷಿಣದ್ದೊಂದು, ಒಳಗೆ ವಿಮಾನಪ್ರದಕ್ಷಿಣದ್ದಿನ್ನೊಂದು. ಹೊರ ಆವರಣವನ್ನು ತಲೆಬಾಗಿಲಿನಿಂದ ಸೇರಬೇಕು. ತಲೆಬಾಗಿಲನ್ನು ದಾಟಿದರೆ ಅದಕ್ಕೆ ಹೊಂದಿಕೊಂಡಂತೆಯೇ ತೆರೆದ ಮಂಡಪವೊಂದಿದೆ. ಹದಿನಾರು ಕಂಬಗಳ ಮೇಲೆ ನಿಂತು ಮೂವತ್ತಾರು ಅಡಿ ಉದ್ದ ಅಷ್ಟೇ ಅಗಲವಿರುವ ಈ ಮಂಡಪಕ್ಕೆ ಹೆಸರೇನೂ ಇಲ್ಲ. ವಿಜಯನಗರದ ಮೂವರು ಅರಸರ ಪ್ರತಿಮೆಗಳನ್ನು ಈ ಮಂಡಪದಲ್ಲಿರಿಸಿರುವುದರಿಂದ 'ಪ್ರತಿಮಾಮಂಡಪ' ಎಂದು ಕರೆಯುವುದುಂಟು; ಈ ಅರಸರಲ್ಲಿ ಪ್ರಮುಖನಾದ ಕೃಷ್ಣದೇವರಾಯನ ಹೆಸರಿನಿಂದ 'ಕೃಷ್ಣದೇವರಾಯ ಮಂಡಪ' ಎಂದೂ ಕರೆಯುತ್ತಾರೆ. ಹೊರಪ್ರಾಕಾರಕ್ಕೆ ಬೆನ್ನುಮಾಡಿ ದೇವರೆದುರು ಮುಖಮಾಡಿ ಕೈಜೋಡಿಸಿಕೊಂಡು ಪುರುಷಪ್ರಮಾಣದಲ್ಲಿ ನಿಂತ ಈ ಭಕ್ತವಿಗ್ರಹಗಳು ಸ್ವಾರಸ್ಯವಾದುವು, ಸೊಗಸಾದುವು; ಮೂರ್ತಿಶಿಲ್ಪಕ್ಕೆ ಉತ್ತಮನಿದರ್ಶನಗಳು.

ತಲೆಬಾಗಿಲನ್ನು ದಾಟಿದೊಡನೆ ನಮ್ಮ ಬಲಗಡೆಗೆ ಕೃಷ್ಣದೇವರಾಯ ಮಹಾರಾಯನ ಪ್ರತಿಮೆಯಿದೆ. ಕ್ರಿಸ್ತಾಬ್ದ 1510ರಲ್ಲಿ ಪಟ್ಟವೇರಿದ ಇವನು ದೇವರ ದರ್ಶನಕ್ಕೆ ಏಳು ಬಾರಿ ಬಂದ ಶಾಸನಗಳಿವೆ; ಬಂದಾಗಲೆಲ್ಲ ದೇವರಿಗೆ ಆದರದಿಂದ ಉದಾರವಾಗಿ ನಡೆದುಕೊಂಡದ್ದನ್ನು ತಿಳಿದಿದ್ದೇವೆ. ವೇಂಗಡದ ಗುಡಿಯ ಶ್ರೀಮಂತಿಕೆಗೆ ಮತ್ತು ಜನಾನುರಾಗಕ್ಕೆ ಬಹುಮಟ್ಟಿಗೆ ಕಾರಣನಾದವನು ಈ ಅರಸ. ಇಂಥವನ ಭಕ್ತವಿಗ್ರಹ ಗುಡಿಯಲ್ಲಿರುವುದು ಸೋಜಿಗವೇನಲ್ಲ. ಆದರೆ ಈ ವಿಗ್ರಹ ಯಾವಾಗ ಮೂಡಿಬಂದಿತು, ಯಾರು ಮಾಡಿಸಿದರು ಎನ್ನುವ ಬಗ್ಗೆ ವಿವರಗಳು ದೊರೆಯುವುದಿಲ್ಲ. ಕೃಷ್ಣದೇವರಾಯನ ಮೂರ್ತಿ, ಪದ್ಮಪೀಠದ ಮೇಲೆ ಅಂಜಲಿಬದ್ಧವಾಗಿ ನಿಂತಿರುವ ಭಂಗಿ ಕಣ್ಮನ ಸೆಳೆಯುವಂಥದು. ಅದರಲ್ಲಿ ಭಕ್ತನ ವಿನಯವಿದೆ, ಅರಸನ ಗಾಂಭೀರ್ಯವಿದೆ, ಸಹೃದಯನ ಭಾವವಿದೆ, ವೀರನ ಠೀವಿಯಿದೆ. ಪದ್ಮಪೀಠದಿಂದ ಮುಡಿಯ ತನಕ ಅರವತ್ತೆಂಟು ಅಂಗುಲ ಎತ್ತರವಿರುವ ಈ ಪ್ರತಿಮೆಯಲ್ಲಿ ಅರಸನು ಆಡಂಬರವನ್ನೆಲ್ಲ ಬಿಟ್ಟು ಭಕ್ತನಾಗಿ ಗುಡಿಗೆ ಬಂದ ನಿಲುವೇ ಕಾಣಬರುತ್ತದೆ. ಅವನ ಬಲಗಡೆ ಅವನ ಅರಸಿ ಚಿನ್ನಾದೇವಿಯ ಮೂರ್ತಿಯಿದೆ. ಎಡಕ್ಕೆ ಇನ್ನೊಬ್ಬಳು ಅರಸಿ ತಿರುಮಲದೇವಿಯದಿದೆ. ಇವೆರಡೂ ಹೆಣ್ಣುವಿಗ್ರಹಗಳು ಸುಂದರವಾದ ಶಿಲ್ಪಗಳು. ಹೀಗೆ ರಾಜಪರಿವಾರವಾಗಿ ನಿಂತಿರುವ ಈ ಮೂರು ಪ್ರತಿಮೆಗಳು ಹಿತ್ತಾಳೆಯವು. ಇವೇ ಗುಡಿಯಲ್ಲಿ ಮೊದಲು ಮೂಡಿಕೊಂಡ ಭಕ್ತವಿಗ್ರಹಗಳು.

ತಲೆಬಾಗಿಲನ್ನು ದಾಟಿ ಎಡಕ್ಕೆ ತಿರುಗಿದರೆ ಮೊದಲಲ್ಲೇ ಕಾಣುವುದು ಅರವೀಡು ಮನೆತನದ ಅರಸ ವೇಂಕಟಪತಿರಾಯ-ಮಹಾರಾಯನ ತಾಮ್ರವಿಗ್ರಹ. ಸುಮಾರು ಐದು ಅಡಿ ಎತ್ತರವಿರುವ ಈ ಅರಸ ಎರಡಡಿ ಎತ್ತರದ ಪೀಠದ ಮೇಲೆ ನಿಂತಿದ್ದಾನೆ. ಚಂದ್ರಗಿರಿಪ್ರಾಂತ್ಯವನ್ನು 1570ರ ಸುಮಾರಿಗೆ ಇವನು ಆಳುತ್ತಿದ್ದಾಗ ಈ ಪ್ರತಿಮೆಯನ್ನು ನಿಲ್ಲಿಸಿರಬಹುದು. ಇದು ಒಂಟಿ ವಿಗ್ರಹ; ಅರಸಿಯರು ಮಗ್ಗುಲಲ್ಲಿಲ್ಲ. ಈ ಪ್ರತಿಮೆಯ

ಪಕ್ಕದಲ್ಲಿ ಕೊಂಚ ದೂರಕ್ಕೆ ಇನ್ನೆರಡು ಸೊಗಸಾದ ಶಿಲಾಶಿಲ್ಪಗಳಿವೆ; ಒಬ್ಬ ಅರಸ ಮತ್ತು ಅವನ ಅರಸಿಯದು. ಅರಸನ ಎತ್ತರ ಅರವತ್ತುನಾಲ್ಕು ಅಂಗುಲಗಳಷ್ಟು; ಹಣೆಯಲ್ಲಿ ವಡಗಲೆ-ಶ್ರೀವೈಷ್ಣವ ನಾಮವಿದೆ. ಈ ದಂಪತಿಗಳು ಯಾರೆಂಬುದು ಸ್ಪಷ್ಟವಾಗಿಲ್ಲ. ತಿರುಮಲರಾಯ ಮತ್ತು ಅವನ ರಾಣಿ ವೆಂಗಳಾಂಬೆ ಎಂದು ಒಂದು




ಗುಡಿಗೆ ಪ್ರವೇಶ


ಊಹೆ; ಅಚ್ಯುತರಾಯ-ಮಹಾರಾಯ ಮತ್ತು ಅವನ ಅರಸಿ ವರದಾಜಿ-ಅಮ್ಮ ಎಂದು ಇನ್ನೊಂದು ಎಣಿಕೆ. ಯಾರಾದರಿರಲಿ, ಈ ಎರಡು ವಿಗ್ರಹಗಳೂ ತುಂಬ ಭವ್ಯವಾದುವು. ಅವುಗಳಲ್ಲಿ ಕಾಣಬರುವ ಕಲಾವಂತಿಕೆ ಇಲ್ಲಿ ಬೇರೆಲ್ಲಿಯೂ ಕಾಣಸಿಗುವುದಿಲ್ಲ.

ರಂಗಮಂಡಪ

ಇಷ್ಟು ಮುಖದ್ವಾರಕ್ಕೆ ಹೊಂದಿಕೊಂಡಂತೆ ಒಳಗಿರುವ ಮಂಡಪದ ವಿವರ. ಅದರ ಎಡಭಾಗದಲ್ಲೇ ಮುಂದೆ ಸರಿದರೆ 'ರಂಗಮಂಡಪ'ವೆಂಬುದನ್ನು ಕಾಣುತ್ತೇವೆ. ಇದನ್ನು 'ರಂಗನಾಯಕನ ಮಂಡಪ'ವೆಂದೂ ಕರೆಯುವುದುಂಟು. ಶ್ರೀರಂಗವನ್ನು ಮುಸಲ್ಮಾನರು ದಾಳಿಮಾಡುವರೆಂಬ ಹೆದರಿಕೆಯಿದ್ದಾಗ ಅಲ್ಲಿನ ಗುಡಿಯಿಂದ ಅರ್ಚಕರು ರಂಗನಾಥನ ಉತ್ಸವವಿಗ್ರಹವನ್ನು ಸಾಗಿಸಿಕೊಂಡು ವೇಂಗಡದ ಬೆಟ್ಟದ ಗುಡಿಯಲ್ಲಿ ಹತ್ತಾರು ವರ್ಷಗಳು ಇರಿಸಿದ್ದರೆಂದು ಪ್ರತೀತಿಯಿದೆ. ಎಂದರೆ ಈ ಮಂಡಪ ಮೂಡಿಕೊಂಡುದು ಕ್ರಿಸ್ತಾಬ್ದ 1320ರ ಸುಮಾರಿಗೆ. 1320ರಿಂದ 1360ರವರೆಗೂ ಇಲ್ಲಿ ರಂಗನಾಥನ ಉತ್ಸವಮೂರ್ತಿಯಿರುತ್ತಿದ್ದು ಶ್ರೀರಂಗದ ಶ್ರೀವೈಷ್ಣವರೂ ಇಲ್ಲಿಯೇ ಬಿಡಾರ ಹೂಡಿದ್ದರೆಂದು ತೋರುತ್ತದೆ.




ರಂಗಮಂಡಪ (ಎಡಕ್ಕೆ)




ಗುಡಿಯ ಒಂದು ನೋಟ

ವಿಶಾಲವಾದ ಮಂಡಪ ಇದು; ಉತ್ತರದಿಂದ ದಕ್ಷಿಣಕ್ಕೆ ನೂರೆಂಟು ಅಡಿಗಳು, ಪೂರ್ವದಿಂದ ಪಶ್ಚಿಮಕ್ಕೆ ಅರವತ್ತು ಅಡಿಗಳು. ಈ ಮಂಡಪದ ದಕ್ಷಿಣಭಾಗದ ಕೊನೆಯಲ್ಲಿ ಸಣ್ಣ ಗುಡಿಯೊಂದಿದೆ; ಹನ್ನೆರಡು ಅಡಿ ಚಚ್ಚೌಕ. ಇಲ್ಲಿಯೇ ರಂಗನಾಥನ ಉತ್ಸವಮೂರ್ತಿಯನ್ನು ಇರಿಸಿದ್ದುದೆಂದು ಕಾಣುತ್ತದೆ. ಶ್ರೀರಂಗದ ಸ್ಥಿತಿ ನೆಮ್ಮದಿಯಾಗಿ ಉತ್ಸವಮೂರ್ತಿ ಅಲ್ಲಿಗೆ ಹಿಂದಿರುಗಿದಮೇಲೆ ಈ ಗುಡಿಯ ಬಾಗಿಲನ್ನು ಮುಚ್ಚಿಬಿಟ್ಟಿರ ಬೇಕು; ಈಗಲೂ ಮುಚ್ಚಿಯೇ ಇರುತ್ತದೆ. ಎದುರಿಗೆ ದೊಡ್ಡದೊಂದು ಶೇಷವಾಹನ ವನ್ನು ಇರಿಸಿರುತ್ತಾರೆ. ಈ ಮಂಡಪದ ವಿನ್ಯಾಸದಲ್ಲಾಗಲೀ ಸ್ತಂಭಗಳಲ್ಲಾಗಲೀ ಕಲೆಗಾರಿಕೆಯ ಕುರುಹುಗಳು ಅಷ್ಟಾಗಿ ಕಾಣಿಸುವುದಿಲ್ಲ. ಆತುರದಲ್ಲಿ ಕಟ್ಟಿದ್ದೆಂದು ಸ್ಪಷ್ಟವಾಗುತ್ತದೆ. ಶ್ರೀರಂಗದ ಗುಡಿಯಲ್ಲಿ ಗೋಷ್ಠೀಪೂಜೆ ವಾಡಿಕೆಯಲ್ಲಿದ್ದುದರಿಂದ, ಪಾಂಚರಾತ್ರ-ಸಂಪ್ರದಾಯದ ಶ್ರೀವೈಷ್ಣವಸಮುದಾಯ ಅಲ್ಲಿಯೇ ನೆರೆಯಬೇಕಾಗಿದ್ದುದ ರಿಂದ ಮಂಡಪ ವಿಶಾಲವಾಗಿರಬೇಕಾಯಿತು. ಆಗ ಆ ಪ್ರದೇಶವನ್ನು ಆಳುತ್ತಿದ್ದ ಶ್ರೀರಂಗನಾಥ-ಯಾದವರಾಯನು ಈ ಮಂಡಪವನ್ನು ಕಟ್ಟಿಸಿದನೆಂಬ ಊಹೆಯ ಮೇಲೆ ಇದನ್ನು 'ರಂಗನಾಯಕನ ಮಂಡಪ'ವೆಂದು ಕರೆಯುವುದಿದೆ. ಶ್ರೀರಂಗದ

ದೇವರಿಗಾಗಿ ಕಟ್ಟಿಸಿದುದರಿಂದ 'ರಂಗ-ಮಂಡಪ'ವೆಂಬ ಹೆಸರೂ ಉಂಟು. ಆದರೆ ಶ್ರೀರಂಗನಾಥ-ಯಾದವರಾಯನು ಇದನ್ನು ಕಟ್ಟಿಸಿದನೆಂಬುದಕ್ಕೆ ನೇರವಾದ ಆಧಾರವೇನೂ ಇರದು; ಶ್ರೀರಂಗದ ದೇವರಿಗೆ ಎಡೆ ಮಾಡಿಕೊಡುವುದೇ ಮಂಡಪದ ಉದ್ದೇಶವಾದರೆ ಕಾಲಕ್ರಮದಲ್ಲಿಯೂ ಕೊಂಚ ಗೊಂದಲ ಏಳುತ್ತದೆ.




ರಂಗಮಂಡಪ (ಕಂಬಗಳು)



ರಂಗಮಂಡಪ (ಕಂಬಗಳು)

ಈ ಮಂಡಪವನ್ನು ಕಟ್ಟುವ ಮೊದಲೇ ಹೊರಪ್ರಾಕಾರವಿದ್ದಿತೋ ಇಲ್ಲವೋ ಹೇಳುವುದು ಕಷ್ಟ. ಈಗೇನೋ ಈ ಮಂಡಪದ ಎರಡು ಗೋಡೆಗಳು ಹೊರ ಪ್ರಾಕಾರವೇ; 'ಮದಿಲ್' ಗೋಡೆಗಳು. ಆದರೆ ಪಾಂಚರಾತ್ರ-ಸಂಪ್ರದಾಯದ ಪೂಜೆ ನಡೆಯುವ ವ್ಯವಸ್ಥೆ ಹತ್ತಾರು ವರ್ಷಗಳು ಅಲ್ಲಿ ಇದ್ದಿತೆಂದರೆ ಪ್ರತ್ಯೇಕವಾಗಿಯೇ ತೆರೆದ

ಮಂಡಪವನ್ನು ಕಟ್ಟಿಸಿರಬೇಕು. ರಂಗನಾಥನು ವೇಂಗಡದೊಡೆಯನಿಗೆ ಅಧೀನನೆನಿಸುವ ದೇವತೆಯಲ್ಲವಾದುದರಿಂದ ರಂಗನಾಥನ ಪೂಜೆ ಸ್ವತಂತ್ರವಾಗಿಯೇ ನಡೆಯುತ್ತಿದ್ದಿರ ಬೇಕು; ಅದಕ್ಕಾಗಿ ಸಿದ್ಧವಾದ ಮಂಡಪ ವೇಂಗಡದೊಡೆಯನ ಗುಡಿಯ ಹೊರಗೇ ಇರುವುದು ಸಹಜ. ಮೇಲಾಗಿ ವೇಂಗಡದೊಡೆಯನ ಪೂಜೆ ವೈಖಾನಸಪದ್ಧತಿಯದು. ಆ ಕಾಲಕ್ಕೆ ಒಳ ಆವರಣ ಸ್ಪಷ್ಟವಾಗಿದ್ದು ಮೊದಲ ಪ್ರಾಕಾರ ಇದ್ದಿತು. ರಂಗಮಂಡಪ




ರಂಗಮಂಡಪ (ಕಂಬಗಳು)

ಈಗಲೂ ಇರುವುದು ಇದರ ಹೊರಗೇ, ಕೊಂಚ ದೂರದಲ್ಲೇ. ಮುಂದೆ ರಂಗಮಂಡಪವನ್ನೂ ಸೇರಿಸಿಕೊಂಡು ಹೊರ ಪ್ರಾಕಾರವನ್ನು ಕಟ್ಟಿದರೆಂದು ತೋರುತ್ತದೆ. ಹೊರ ಪ್ರಾಕಾರದ ರಂಗಮಂಡಪದ ಹಿನ್ನೆಲೆಯಲ್ಲಿದ್ದ ಪಾಂಚರಾತ್ರಪೂಜಾಪದ್ಧತಿ ಒಳಪ್ರಾಕಾರದ ವೈಖಾನಸಸಂಪ್ರದಾಯದ ಮೇಲೆ ಅಷ್ಟಿಷ್ಟು ಪ್ರಭಾವ ಬೀರಿತೆಂದು ಒಪ್ಪಿಕೊಳ್ಳಬೇಕು.




ಪಡಿ-ಪೋಟು (ಅಡುಗೆಮನೆ)




ಸ್ವಾಮಿಪುಷ್ಕರಿಣಿ

ತಿರುಮಲರಾಯ-ಮಂಡಪ


ರಂಗಮಂಡಪದ ಎಡಭಾಗದಲ್ಲಿ, ಒಳಪ್ರಾಕಾರದ ಪೂರ್ವಗೋಡೆಯಿಂದ ಸುಮಾರು ಹನ್ನೆರಡು ಅಡಿ ದೂರದಲ್ಲಿ, ಇರುವುದು ತಿರುಮಲರಾಯ-ಮಂಡಪ. ಅರವೀಡುಮನೆತನದ ಅರಸ ತಿರುಮಲರಾಜನು (ಬುಕ್ಕರಾಜ-ರಾಮರಾಜ-ಶ್ರೀರಂಗ ರಾಜ-ತಿರುಮಲರಾಜ) ಮೊದಲೇ ಇದ್ದ ಮಂಡಪವೊಂದನ್ನು ವಿಸ್ತರಿಸಿದನಾಗಿ ಮಂಡಪಕ್ಕೆ ಅವನ ಹೆಸರು ಬಂದಿತು. ಅವನ ಕಾಲ ಹದಿನಾರನೆಯ ಶತಮಾನ. ಈ ಮಂಡಪಕ್ಕೆ ಹಿಂಭಾಗದಲ್ಲಿ ಮೊದಲೇ ಇದ್ದ ಮಂಡಪವನ್ನು ಮಹಾಮಂಡಲೇಶ್ವರ ಸಾಳುವ-ನರಸಿಂಹನು ಕ್ರಿಸ್ತಾಬ್ದ 1473ರಲ್ಲಿ ಕಟ್ಟಿಸಿದನು; ತಾನು ಹೊಸದಾಗಿ ಏರ್ಪಡಿಸಿದ ದೋಲಾಮಹೋತ್ಸವ ಅಥವಾ ಅನ್ನಾ-ಉಂಜಲ್-ತಿರುನಾಳ್ ಎಂಬ ಉತ್ಸವ ಈ ಮಂಡಪದಲ್ಲಿ ನಡೆಯುವಂತೆ ವ್ಯವಸ್ಥೆ ಮಾಡಿದನೆಂದು ತೋರುತ್ತದೆ. 1473ರ ಅಕ್ಟೋಬರ್ ಹದಿಮೂರರಲ್ಲಿ ಸಿದ್ಧವಾದ ಅವನ ಶಾಸನವೊಂದು 'ನರಸಿಂಹ ರಾಯನ ಮಂಡಪ'ವೊಂದನ್ನು ಉಲ್ಲೇಖಿಸುತ್ತದೆ. ಇದೇ ಈಗಿನ ತಿರುಮಲರಾಯ ಮಂಡಪದ ಹಿಂಭಾಗದ ಊಂಜಲ್-ಮಂಡಪ. ಇದರಲ್ಲಿ ನಲವತ್ತೈದು ಅಡಿ ಉದ್ದ ಹತ್ತಡಿ ಅಗಲವಿರುವ ಒಳಭಾಗ (ನಾಲ್ಕು ಕಂಬಗಳ ಮಂಡಪ) ಪ್ರಾಚೀನವಾದುದು.



ತಿರುಮಲರಾಯ-ಮಂಡಪ (ಒಳನೋಟ)



ತಿರುಮಲರಾಯ-ಮಂಡಪ (ಪೀಠ)




ತಿರುಮಲರಾಯ-ಮಂಡಪ (ಪಶ್ಚಿಮದಿಕ್ಕಿನ ಕಂಬಗಳು)

ತಿರುಮಲರಾಯನ ಕಾಲಕ್ಕೆ ಇದು ಒಳ್ಳೆಯ ಸ್ಥಿತಿಯಲ್ಲಿರಲಿಲ್ಲವೆಂದು ತೋರುತ್ತದೆ. ಅವನು ಇದನ್ನು ದುರಸ್ತಿಪಡಿಸಿ ಈಗಿನ ಹರವಿಗೆ ಹೆಚ್ಚಿಸಿದನು. ಸುಮಾರು ನೂರು ಅಡಿ ಉದ್ದ, ನಲವತ್ತು ಅಡಿ ಅಗಲವಿರುವ ಈಗಿನ ಈ ಮಂಡಪದಲ್ಲಿ ಎರಡು ಭಾಗಗಳನ್ನು ಸ್ಪಷ್ಟವಾಗಿ ಕಾಣಬಹುದು. ಹಿಂದಿನದು ಹಳೆಯದು, ಅದರ ನೆಲಮಟ್ಟ ಎತ್ತರದಲ್ಲಿದೆ. ಮುಂದಿನ ಭಾಗದ ನೆಲಮಟ್ಟ ಕೊಂಚ ತಗ್ಗು; ಈ



ತಿರುಮಲರಾಯ-ಮಂಡಪ (ಪಶ್ಚಿಮದಿಕ್ಕಿನ ಕಂಬಗಳು)

ಮುಂಭಾಗವು ಧ್ವಜಸ್ತಂಭಮಂಡಪವನ್ನು ಮುಟ್ಟುವಂತೆ ಮೈಚಾಚಿದೆ. ಹಿಂಭಾಗದ ಹಿಂದಿನ ಗೋಡೆ ಹೊರಪ್ರಾಕಾರದ ಗೋಡೆಯಲ್ಲ; ಪ್ರಾಕಾರದ ಗೋಡೆಗೂ ಮಂಡಪದ ಹಿಂದಿನ ಗೋಡೆಗೂ ಹತ್ತಾರು ಅಡಿ ಅಂತರವಿದೆ. ಉಯ್ಯಾಲೋತ್ಸವವನ್ನು ಹಿಂದಿನ ಮಂಡಪದಲ್ಲೂ, ವಸಂತೋತ್ಸವವನ್ನು ಮುಂಭಾಗದ ಮಂಡಪದಲ್ಲೂ ನಡೆಸುವ ವಾಡಿಕೆಯಿದ್ದಿತು. ಗುಡಿಯಲ್ಲಿ ಬ್ರಹ್ಮೋತ್ಸವ ನಡೆಯುವಾಗ ಉತ್ಸವ ಮೂರ್ತಿಯು (ಮಲೆಯಪ್ಪಸ್ವಾಮಿ) ಈ ಮುಂಭಾಗದ ಮಂಡಪದಲ್ಲೇ ಆಸ್ಥಾನಮಾಡಿ




ತಿರುಮಲರಾಯ-ಮಂಡಪ (ಮುಂಭಾಗ)

ಕುಳಿತು, ಮುಂದಿನ ಧ್ವಜಸ್ತಂಭದ ಮೇಲೆ ಗರುಡ-ಧ್ವಜಾರೋಹಣವಾಗಿ ಉತ್ಸವ ಮೊದಲಾಗುವುದನ್ನು ನೋಡುತ್ತದೆ.

ಸಂಪಂಗಿ-ಪ್ರದಕ್ಷಿಣದ ತೆರೆದ ಆವರಣದ ನಾಲ್ಕೂ ಮೂಲೆಗಳಲ್ಲಿ ನಾಲ್ಕು ಮಂಡಪಗಳಿವೆ. ಸಾಳುವ-ನರಸಿಂಹನು 1470ರ ಸುಮಾರಿಗೆ ಕಟ್ಟಿಸಿದ ಇವುಗಳಲ್ಲಿ ಒಂದೊಂದೂ ಹತ್ತು ಅಡಿ ಚಚ್ಚೌಕವಾಗಿವೆ. ಉತ್ಸವಸಂದರ್ಭದಲ್ಲಿ ಉತ್ಸವ ಮೂರ್ತಿಯು ತಂಗಲೆಂದು ಈ ಮಂಡಪಗಳು ಸಿದ್ಧವಾದುವು.

ತಿರುಮಲರಾಯಮಂಡಪದ ಎದುರಿಗೇ ಇರುವುದು ಧ್ವಜಸ್ತಂಭಮಂಡಪ. ಒಳಬಾಗಿಲು, ಒಳಗೋಪುರಗಳಿಗೆ ಹೊಂದಿಕೊಂಡಂತೆಯೇ ಇರುವ ಈ ಮಂಡಪ ಮುಖದ್ವಾರದಿಂದ ಸುಮಾರು ನೂರಿಪ್ಪತ್ತು ಅಡಿ ದೂರದಲ್ಲಿದೆ. ಇಪ್ಪತ್ತು ಕಂಬಗಳಿಂದ ಕೂಡಿದ ಈ ತೆರೆದ ಮಂಡಪದಲ್ಲಿ ಧ್ವಜಸ್ತಂಭ ಮತ್ತು ಬಲಿಪೀಠ ಎರಡೂ ಇವೆ.




ತಿರುಮಲರಾಯ-ಮಂಡಪ (ಒಳನೋಟ)

ಧ್ವಜಸ್ತಂಭಕ್ಕಾಗಲೀ ಬಲಿಪೀಠಕ್ಕಾಗಲೀ ಮಂಡಪವನ್ನು ಕಟ್ಟುವ ವಾಡಿಕೆಯಿಲ್ಲ. ಆದರೆ ಬೆಟ್ಟದ ಮೇಲೆ ಬ್ರಹ್ಮೋತ್ಸವ ನಡೆಯುವ ಕಾಲ ಮಳೆಗಾಲವಾದುದರಿಂದ, ಆಗ ಧ್ವಜಾರೋಹಣದ ವಿಧಿ ನಡೆಯುವಾಗ ತೊಂದರೆಯಾಗದಿರಲೆಂದು ಇಲ್ಲಿ ಮಂಡಪವನ್ನು ಕಟ್ಟಬೇಕಾಯಿತು. ಧ್ವಜಸ್ತಂಭವು ಒಳಬಾಗಿಲಿನ ಎದುರೇ ಮಂಡಪದ ನಟ್ಟ ನಡುವೆ ಇದೆ. ಇಲ್ಲಿನ ಧ್ವಜಸ್ತಂಭ ಮರದ್ದು; ಬಂಗಾರದ ಮುಲಾಮಿರುವ ತಾಮ್ರದ ಹೊದಿಕೆಯಿಂದ ಮುಚ್ಚಿದ್ದಾರೆ. ಅದರ ಹಿಂಭಾಗದಲ್ಲಿ ಬಲಿಪೀಠ. ತಲೆಬಾಗಿಲಿನಿಂದ ನೇರವಾಗಿ ನಡೆದುಹೋದರೆ ಮೊದಲು ಕಾಣುವುದೇ ಚಚ್ಚೌಕದ ಬಲಿಪೀಠ. ಇದು ಕಲ್ಲಿನದು; ಮೇಲೆ ಬಂಗಾರದ ಮೆರುಗಿರುವ ತಾಮ್ರದ ಹೊದಿಕೆಯಿದೆ. ಧ್ವಜಸ್ತಂಭಕ್ಕೂ ಬಲಿಪೀಠಕ್ಕೂ ನಡುವೆ ಐದು ಬಲಿಕಲ್ಲುಗಳಿವೆ, ಇವುಗಳ ಮೇಲೆಯೇ ಬಲಿಯನ್ನಿರಿಸುವುದು.

ವಿಮಾನಪ್ರದಕ್ಷಿಣ

'ಸಂಪಂಗಿಪ್ರದಕ್ಷಿಣ'ದ ಭಾಗ ಇಲ್ಲಿಗೆ ಮುಗಿಯಿತು. ಶಾಸನದಲ್ಲಿ ಇದನ್ನೇ 'ಸಂಬಗ-ಚ್ಚುರ್ರು' ಎಂದು ಕರೆದಿದ್ದಾರೆ. 'ಸಂಬಗ' ಎಂದರೆ ಸಂಪಿಗೆ, ತೆಲುಗಿನಲ್ಲಿ 'ಸಂಪಂಗಿ'. ಮೊದಲು ಈ ಆವರಣದಲ್ಲಿ ಹಲವಾರು ಸಂಪಿಗೆಮರಗಳಿದ್ದಿರಬೇಕು. ಈಗೇನೋ ಒಂದೂ ಇಲ್ಲ , ಹೆಸರು ಮಾತ್ರ ಉಳಿದಿದೆ. ಧ್ವಜಸ್ತಂಭಮಂಡಪವನ್ನು



ತಿರುಮಲರಾಯ-ಮಂಡಪ (ಪಾರ್ಶ್ವಭಾಗ)

ದಾಟಿ ಒಳಬಾಗಿಲಿನಿಂದ ನಡೆದರೆ ಒಳ ಆವರಣಕ್ಕೆ ಬರುತ್ತೇವೆ. ಇದನ್ನು ಪ್ರಥಮಾವರಣವೆಂದೂ ಕರೆಯಬಹುದು. ಇಲ್ಲಿ ಗರ್ಭಗುಡಿಯ ಸುತ್ತ ನಡೆಯುವಾಗ ವಿಮಾನವು ಕಾಣುತ್ತಲೇ ಇರುವುದರಿಂದ ಇದನ್ನು 'ವಿಮಾನಪ್ರದಕ್ಷಿಣ'ವೆಂದೂ ಕರೆಯುತ್ತಾರೆ. ಈ ಆವರಣವನ್ನು ನಿರ್ದೇಶಿಸುವ ಪ್ರಾಕಾರವು ಕ್ರಿಸ್ತಾಬ್ದ 1190ರ ಸುಮಾರಿಗೆ ಸಿದ್ಧವಾಯಿತೆಂದು ತಿಳಿದುಬರುತ್ತದೆ. ಈ ಪ್ರಾಕಾರದ ಒಳಗೆ ಅಡಗಿರುವ ಆವರಣದ



ವರದರಾಜಸ್ವಾಮಿ

ಹರವು 235 ಅಡಿ ಉದ್ದ (ಪೂರ್ವದಿಂದ ಪಶ್ಚಿಮಕ್ಕೆ), 160 ಅಡಿ ಅಗಲ (ಉತ್ತರದಿಂದ ದಕ್ಷಿಣಕ್ಕೆ). ಒಳಬಾಗಿಲ ಮೇಲಿರುವ ಗೋಪುರ ಯಾವಾಗ ಸಿದ್ಧವಾಯಿತೋ ತಿಳಿಯದು. ಇದು ಸಣ್ಣ ಗೋಪುರ.

ಒಳ ಆವರಣದಲ್ಲಿ ಪ್ರದಕ್ಷಿಣೆ ಮಾಡುತ್ತ ಹೊರಟರೆ ಎಡಭಾಗದಲ್ಲಿ ಮೊದಲು ಕಾಣುವುದು ವರದರಾಜಸನ್ನಿಧಿ. ಗರ್ಭಗುಡಿಯ ಕಡೆಗೇ ಮುಖಮಾಡಿ ಒಳಪ್ರಾಕಾರ

ದಿಂದ ಎರಡಡಿ ಮುಂದೆ ಒಳಬಾಗಿಲಿನ ಬದಿಯಲ್ಲಿ ಏಳಡಿ ದೂರದಲ್ಲಿರುವ ಈ ಗುಡಿ ಸಣ್ಣದು; ಅದರ ಉದ್ದ ಇಪ್ಪತ್ತು ಅಡಿಗಳು, ಅಗಲ ಹದಿನೈದು ಅಡಿಗಳು. ಕಾಂಚೀಪುರವನ್ನು ಮುಸಲ್ಮಾನರ ದಂಡು ಮುತ್ತುವುದೆಂಬ ಹೆದರಿಕೆಯಿದ್ದಾಗ ಅಲ್ಲಿಂದ ವರದರಾಜಸ್ವಾಮಿಯ (ಪೊನ್‌ಮೆಯ್ನ್ನಂದ-ಪೆರುಮಾಳ್) ಉತ್ಸವಮೂರ್ತಿಯನ್ನು ತಂದು ಇಲ್ಲಿರಿಸಿದ್ದರೆಂದು ಪ್ರತೀತಿ. ಈಗಲೂ ಈ ಗುಡಿಯಲ್ಲಿ ವರದರಾಜನ ಸ್ಥಾನಕ ಶಿಲಾಮೂರ್ತಿಯಿದೆ. ಗುಡಿಯೆದುರು ಅದಕ್ಕೆ ಸೇರಿದಂತೆ ಸಣ್ಣದೊಂದು ಮುಖ ಮಂಡಪವೂ ಇದೆ. ಜಗುಲಿಯ ಮೇಲೆ ಕಟ್ಟಿರುವ ಈ ಗುಡಿಗೆ ಹೋಗಲು ಮೆಟ್ಟಿಲುಗಳಿವೆ. ಈ ಗುಡಿಯನ್ನು ಕಟ್ಟಿದುದು ಯಾವಾಗ ಎಂಬುದು ತಿಳಿದುಬರುವುದಿಲ್ಲ. ಆದರೆ ಗುಡಿಯ ಗೋಡೆಯ ಮೇಲಿರುವ ಶಾಸನವೊಂದರಿಂದ ಶ್ರೀರಂಗನಾಥ-ಯಾದವರಾಯನ ಕಾಲದಲ್ಲೇ (1354-55ರ ಸುಮಾರಿಗೆ) ಈ ಕಟ್ಟಡವಿದ್ದಿತೆಂದು ಸ್ಪಷ್ಟವಾಗುತ್ತದೆ.

ವರದರಾಜನ ಗುಡಿಗೂ ಒಳಪ್ರಾಕಾರದ ಗೋಡೆಗೂ ನಡುವೆ ದಕ್ಷಿಣದಲ್ಲಿ ಗುಡಿಯ ಅಡುಗೆಶಾಲೆಯಿದೆ; ಇದನ್ನು ಪೋಟು ಎಂದು ಕರೆಯುತ್ತಾರೆ. ಎರಡೂವರೆ ಅಡಿ ಎತ್ತರದ ಜಗುಲಿಯ ಮೇಲೆ, ಅರವತ್ತೊಂದು ಅಡಿ ಉದ್ದ, ಮೂವತ್ತು ಅಡಿ ಅಗಲವಿರುವ ಈ ಅಡುಗೆಶಾಲೆಯಲ್ಲಿ ದೇವರ ನಿತ್ಯನಿಮಂದನದ ವಿವರಗಳು ಸಿದ್ಧವಾಗುತ್ತವೆ. ಅಡುಗೆಗೆ ಇಲ್ಲಿ ದಿನವೂ ಮಣ್ಣಿನ ಹೊಸ ಮಡಕೆಗಳನ್ನೇ ಬಳಸುವುದು ಹಿಂದಿನಿಂದ ಬಂದಿರುವ ವಾಡಿಕೆ; ಒಂದು ದಿನ ಬಳಸಿದ ಮಡಕೆಗಳನ್ನು ಮತ್ತೆ ಬಳಸುವುದಿಲ್ಲ. ಅಡುಗೆಶಾಲೆಯ ಒಳಗೆ ತಲೆಬಾಗಿಲಲ್ಲೇ ವಕುಳಾದೇವಿಯ ಆಸೀನ ಶಿಲಾಮೂರ್ತಿಯಿದೆ. ಈಕೆ ವೇಂಗಡದೊಡೆಯನ ಸಾಕುತಾಯಿಯಂತೆ; ಈಕೆಯನ್ನು ಮದಪುಳಿ-ನಾಚ್ಚಿಯಾರ್ (ಪೋಟುಲಕ್ಷ್ಮಿ) ಎಂದೂ ಕರೆಯುತ್ತಾರೆ. ಈಕೆಯ ನೇತೃತ್ವ ದಲ್ಲೇ ಅಡುಗೆ ನಡೆಯಬೇಕೆಂಬುದು ಇಲ್ಲಿನ ಕಟ್ಟಳೆ.


ಅಡುಗೆಮನೆಯಲ್ಲಿ ಎರಡು ಭಾಗಗಳು. ದೇವರ ಪ್ರಸಾದವಾಗುವ ದಧ್ಯೋದನ, ಪುಳಿಹೋರ, ಪೊಂಗಲು, ಸಕ್ಕರೆಪೊಂಗಲು, ಸಕ್ಕರೆಭಾತ್, ಕೇಸರಿಭಾತ್, ಪಾಯಸ, ಶಿರಾ ಮೊದಲಾದುವನ್ನು ಸಿದ್ಧಮಾಡುವ ಅನ್ನಪ್ರಸಾದಂ ಪೋಟು ಒಳಭಾಗ; ಅಪ್ಪಂ, ಲಡ್ಡು, ವಡೆ, ಪೋಳಿ, ದೋಸೆ, ತೆಂತೊಲ, ಸುಕಿಯನ್, ಜಿಲೇಬಿ ಮೊದಲಾದ ಪಣ್ಯಾರಗಳನ್ನು (ಪಡುಲು-ಪ್ರಸಾದ) ತಯಾರಿಸುವ ಪಡುಲುಪೋಟು. ಪ್ರಸಾದವನ್ನು ಯಾತ್ರಿಕರಿಗೆ, ಅಭ್ಯರ್ಥಿಗಳಿಗೆ ಮಾರುವ ವಘಪಡಿ ಎಂಬ ಭಾಗವೂ ಇದೆ. ಇವನ್ನೆಲ್ಲ ಸಿದ್ಧಪಡಿಸಲು ಮನೆತನಗಳಿಂದ ಬಂದ ಗಮೇಕಾರರು ಬಹುಸಂಖ್ಯೆಯಲ್ಲಿದ್ದಾರೆ. ಇವರು ಶ್ರೀವೈಷ್ಣವರು; ಮೊದಲಿಗೆ ಇವರಿಗೂ ಮೀರಾಸಿ ಇದ್ದಿತು.

ಅಡುಗೆಶಾಲೆಯ ಎದುರಿಗೆ ಒಳ ಆವರಣದಲ್ಲೇ ಬಾವಿಯೊಂದಿದೆ. ಇದಕ್ಕೆ ಬಂಗಾರದ ಕವಚ ತೊಡಿಸಿರುವುದರಿಂದ ಇದನ್ನು 'ಬಂಗಾರ-ಬಾವಿ' ಎಂದು ಕರೆಯುತ್ತಾರೆ. ಗುಡಿಯಲ್ಲಿ ಬೇರೆಬೇರೆ ವಿಧಿಗಳಿಗೆ ಮತ್ತು ಅಡುಗೆಗೆ ಬೇಕಾಗುವ ನೀರನ್ನು ಈ ಬಾವಿಯಿಂದಲೇ ಸೆಳೆದುಕೊಳ್ಳುತ್ತಾರೆ. ಈ ಬಾವಿಯನ್ನು ಮೊದಲ

ಗುಡಿಯನ್ನು ಕಟ್ಟಿದ ರಂಗದಾಸನೇ ತೋಡಿಸಿದನೆಂದು ಕಥೆಯಿದೆ. ಇದಕ್ಕೆ 'ಸುಂದರ ಸ್ವಾಮಿ-ಬಾವಿ' ಎಂಬ ಹೆಸರೂ ಮೊದಲಿಗೆ ಇದ್ದುದು ತಿಳಿದುಬರುತ್ತದೆ; ಹಿನ್ನೆಲೆ ಗೊತ್ತಾಗುವುದಿಲ್ಲ. ಈ ಬಾವಿಯ ಪಾವಿತ್ರ್ಯವು ಆಕಾಶಗಂಗಾತೀರ್ಥ, ಪಾಪವಿನಾಶ ತೀರ್ಥಗಳಷ್ಟೇ ಎಂಬುದು ಮಾಹಾತ್ಮ್ಯೆಯಲ್ಲಿ ಬರುವ ವಿವರ.



ಫೋಟು-ತಾಯಾರು



ಧ್ವಜಸ್ತಂಭಮಂಟಪ (1982, ಮರದ ನೂತನ ಸ್ತಂಭದ ಸ್ಥಾಪನೆ)

ಕಲ್ಯಾಣಮಂಡಪ


ವಿಮಾನಪ್ರದಕ್ಷಿಣೆಯಲ್ಲೇ ಈ ಬಂಗಾರದ ಬಾವಿಯನ್ನು ದಾಟಿ ಮುಂದೆ ನಡೆದರೆ 'ಕಲ್ಯಾಣಮಂಡಪ' ಕಣ್ಣಿಗೆ ಬೀಳುತ್ತದೆ. ಒಳಪ್ರಾಕಾರದ ದಕ್ಷಿಣಗೋಡೆಗೆ ಹೊಂದಿ ಕೊಂಡಂತೆ ಜಗುಲಿಯ ಮೇಲೆ ಇರುವ ಈ ಮಂಡಪ ಎಂಬತ್ತು ಅಡಿ ಉದ್ದ, ಮೂವತ್ತಾರು ಅಡಿ ಅಗಲವಿದ್ದು ಇಪ್ಪತ್ತೊಂಬತ್ತು ಕಂಬಗಳ ಮೇಲೆ ನಿಂತಿದೆ. ಕಂಬಗಳು



ಧ್ವಜಸ್ತಂಭಮಂಟಪ (ಉತ್ತರ-ಭಾಗ)




ಧ್ವಜಸ್ತಂಭದಲ್ಲಿ ಹನುಮಂತ




ಧ್ವಜಸ್ತಂಭ

ಧ್ವಜಸ್ತಂಭದಲ್ಲಿ ಗರುಡ



ಧ್ವಜಸ್ತಂಭಮಂಟಪ



(ವೈದಿಕ ಪದ್ಧತಿಯಲ್ಲಿ ಪಟ್ಟಾಭಿಷೇಕ)



ಶ್ರೀ ಪಟ್ಟಾಭಿರಾಮ ದೇವಾಲಯದ ಒಳಾಂಗಣ




ಬಲಿಪೀಠ ಮತ್ತು ಧ್ವಜಸ್ತಂಭ




ಬಂಗಾರು-ಬಾವಿ




ಧ್ವಜಸ್ತಂಭಮಂಟಪ (ಹಿಂದಿನ ಬಲಿಪೀಠ)




ಧ್ವಜಸ್ತಂಭದ ಪೀಠ




ಗುಡಿಯಲ್ಲಿರುವ ಬಲಿಪೀಠ (ಕಲ್ಲಿನದು); ಇದರ ಮೇಲೆ ಬಂಗಾರದ ಕವಚವನ್ನು ಹೊದಿಸಿದ್ದಾರೆ.



ನಡುವಣ ಪಡಿಕಾವಲಿಯಲ್ಲಿ ಅಧಿಷ್ಠಾನ



ನಡುವಣ ಪಡಿಕಾವಲಿ (ದ್ವಾರಮಂಟಪ) ಉಪಪೀಠ


ವಿಮಾನ ಪ್ರದಕ್ಷಿಣೆ
ಗರ್ಭಗುಡಿ
ಕಯಾಸ ಮಂಟಪ
ಸ್ನಪನಮಂಟಪ
(ತಿರುಪಳಿ ಕೋಯಿಲ್)
ಶ್ರೀ ಭಂಡಾರ
ಶ್ರೀ ಭಂಡಾರ
ಬಂಗಾರ ಬಾವಿ
ಬಂಗಾರ ಬಾಗಿಲು
ದ್ವಾರಪಾಲಕರು
ದ್ವಾರಪಾಲಕರು
ಬಂಗಾರ ಬಾಗಿಲಿನಿಂದ ಒಳಗೆ

ಆಲಯದ ನಕ್ಷೆ

ಕಲಾತ್ಮಕವಾಗಿವೆ. ಇದರೊಳಗೆ ಪಶ್ಚಿಮದಿಕ್ಕಿನ ಭಾಗದಲ್ಲಿ ಸಣ್ಣ ಗುಡಿಯೊಂದಿದೆ. ಅದರ ಮುಂದೊಂದು ನಾಲ್ಕು ಕರಿಕಲ್ಲಿನ ಕಂಬಗಳ ಮೇಲೆ ನಿಂತ ಸೊಗಸಾದ ಮಂಡಪ. ಗುಡಿಯ ಹಿಂದೆ ಎತ್ತರವಾದ ಕಟ್ಟೆಯ ಮೇಲೆ ಯಾಗಶಾಲೆ. ಉತ್ಸವ ಸಂದರ್ಭಗಳಲ್ಲಿ ಹೋಮ-ಹವನಾದಿಗಳು ಜರುಗುವುದು ಇಲ್ಲಿಯೇ. ಈ ಮಂಡಪದ ಹೆಸರು ಸೂಚಿಸುವಂತೆ ಉತ್ಸವಬೇರಕ್ಕೆ (ಮಲಯಪ್ಪನಿಗೆ) ಕಲ್ಯಾಣೋತ್ಸವ ನಡೆಯುವುದು ಈ ಮಂಡಪದಲ್ಲಿ.

ಗುಡಿಯಲ್ಲಿ ನಡೆಯುವ ಬ್ರಹ್ಮೋತ್ಸವ ಮೊದಲಾದ ಉತ್ಸವಸಂದರ್ಭಗಳಲ್ಲಿಯೂ ಗರ್ಭಗೃಹದಲ್ಲಿರುವ ಮೂಲವರಿಗೆ ದಿನಂಪ್ರತಿ ನಡೆಯುವ ಪೂಜೆಯ ವಿಧಿಗಳು ಮಾರ್ಪಡುವುದಿಲ್ಲ. ಉತ್ಸವವೆಂದು ಮೂಲವರಿಗೆ ಯಾವ ಹೆಚ್ಚಿನ ಕಟ್ಟಳೆಯೂ ನಡೆಯುವ ಅವಕಾಶ ವೈಖಾನಸಸಂಪ್ರದಾಯದಲ್ಲಿಲ್ಲ. ನಿರ್ದಿಷ್ಟವಾದ ನಿಮಂದನಕ್ಕಿಂತ ಹೆಚ್ಚಾಗಿ ಏನನ್ನೂ ಗರ್ಭಗುಡಿಯೊಳಗೆ ತರುವಂತಿಲ್ಲ. ಹೀಗಾಗಿ ಉತ್ಸವಸಂದರ್ಭದ ಹೆಚ್ಚುಕಟ್ಟಳೆಯಲ್ಲಿ ಪಾಲ್ಗೊಳ್ಳಬೇಕಾದ ಉತ್ಸವಬೇರ (ಮಲಯಪ್ಪ) ಗರ್ಭಗುಡಿಯಲ್ಲಿಯೇ ಇದ್ದರೆ ತೊಂದರೆಯಾಗುತ್ತದೆ. ಉತ್ಸವಗಳೆಲ್ಲ ಉತ್ಸವಬೇರಕ್ಕೇ ವಿನಾ ಮೂಲವರಿಗೂ ಅವುಗಳಿಗೂ ಏನು ನಂಟೂ ಇರದು. ಆದುದರಿಂದ ಹತ್ತಾರು ದಿನಗಳ ಈ ಅವಧಿಯಲ್ಲಿ ಉತ್ಸವಬೇರವನ್ನು ದೇವಿಯರೊಂದಿಗೆ ಗರ್ಭಗುಡಿಯಿಂದ ಹೊರತಂದು ಕಲ್ಯಾಣಮಂಡಪದ ಗುಡಿಯಲ್ಲಿರಿಸುತ್ತಾರೆ. ಉತ್ಸವ ಮೊದಲಾಗುವ ಮೊದಲೇ ಹೊರಬಂದ ಮಲೆಯಪ್ಪಸ್ವಾಮಿ ಉತ್ಸವ ಮುಗಿಯುವವರೆಗೂ ಗರ್ಭಗುಡಿಯೊಳಗೆ ಹೋಗುವುದಿಲ್ಲ. ಕಾಲಕಾಲಕ್ಕೆ ಮೈದೋರಿದ ಉತ್ಸವಗಳಿಗೂ ವೇಂಗಡದ ಒಡೆಯನಿಗೂ ಸಂಬಂಧವಿಲ್ಲವೆನ್ನುವುದು ಈ ಪದ್ಧತಿಯ ತಾತ್ಪರ್ಯ. ಬ್ರಹ್ಮೋತ್ಸವ ಸಂದರ್ಭದಲ್ಲಿ ಧ್ವಜಾರೋಹಣವಾದ ಮೇಲೆ ದೀಪಾವಳಿ ಆಸ್ಥಾನದವರೆಗೂ, ಎಂದರೆ ಪುರಟ್ಟಾಶಿ ಮತ್ತು ಅರ್ಪಶಿಮಾಸಗಳಲ್ಲಿ (ನಮ್ಮ ಆಶ್ವಯುಜ-ಕಾರ್ತಿಕಮಾಸಗಳಲ್ಲಿ, ಸಾಮಾನ್ಯವಾಗಿ ಸೆಪ್ಟೆಂಬರ್-ಅಕ್ಟೋಬರ್ ತಿಂಗಳುಗಳಲ್ಲಿ) ಉತ್ಸವಮೂರ್ತಿ ಗರ್ಭಗುಡಿಯಲ್ಲಿರುವುದಿಲ್ಲ, ಕಲ್ಯಾಣಮಂಡಪದಲ್ಲೇ ಇರುತ್ತದೆ. ಹಾಗೆಯೇ ಅಧ್ಯಯನೋತ್ಸವದ ಸಂದರ್ಭದಲ್ಲಿಯೂ ಇಪ್ಪತ್ತುಮೂರು ದಿನ ಉತ್ಸವರು ಕಲ್ಯಾಣಮಂಡಪದಲ್ಲೇ ಇರುತ್ತಾರೆ. ಈ ಮಂಡಪವು ಕ್ರಿಸ್ತಾಬ್ದ 1586ರಂದು ಅವಸರಂ ಚನ್ನಪ್ಪನೆಂಬ ಅಧಿಕಾರಿಯಿಂದ ಕಟ್ಟಿಸಲ್ಪಟ್ಟಿತೆಂದು ತಿಳಿದುಬರುತ್ತದೆ.

ವಿಮಾನ-ಶ್ರೀನಿವಾಸ

ವಿಮಾನಪ್ರದಕ್ಷಿಣದ ಈ ಭಾಗ, ಎಂದರೆ ಅಡುಗೆಶಾಲೆ, ಕಲ್ಯಾಣಮಂಡಪ ಗಳಿರುವ ಕಡೆ ಇಕ್ಕಟ್ಟಾಗಿರುವುದು ಸಹಜವೇ. ಇದರ ಅಗಲ ಹನ್ನೊಂದು ಅಡಿಗಳಷ್ಟೆ. ಉತ್ಸವಗಳೂ, ಪ್ರದಕ್ಷಿಣೆ ಮಾಡುವ ಜನರೂ ಸಾಗಿ ಹೋಗಬೇಕಾದುದು ಇಲ್ಲಿಯೇ. ಪಶ್ಚಿಮ-ದಿಕ್ಕಿನಲ್ಲಿ, ಎಂದರೆ ಗರ್ಭಗುಡಿಯ ಹಿಂಭಾಗದಲ್ಲಿ, ಪ್ರಾಕಾರಕ್ಕೆ ಸೇರಿದಂತೆ

ಹಲವಾರು ಮಂಡಪಗಳಿದ್ದು, ಉತ್ಸವಗಳಲ್ಲಿ ಬಳಸುವ ವಾಹನಗಳನ್ನು ಇಲ್ಲಿ ಇರಿಸಿರುತ್ತಾರೆ. ಇವಕ್ಕೆ ವಾಹನ-ಮಂಡಪಗಳೆಂದೇ ಹೆಸರು. ವಿಮಾನಪ್ರದಕ್ಷಿಣದ ಉತ್ತರಭಾಗದಲ್ಲಿ ಪ್ರಾಕಾರಕ್ಕೆ ಹೊಂದಿಕೊಂಡು ಹಲವು ಕೋಣೆಗಳಿವೆ. ಬೇರೆಬೇರೆ ಕರ್ಮಚಾರಿಗಳ ಉಪಯೋಗಕ್ಕೆ ಮೀಸಲಾದ ಕೋಣೆಗಳು ಇವು. ಅಡುಗೆಯವರು (ಗಮ್ಮಿಕ್ಕರು) , ದೀಪದವರು, ಪಣ್ಯಾರವನ್ನು ನೋಡಿಕೊಳ್ಳುವವರು (ವಗಪ್ಪಡಿಯವರು), ಮೊದಲಾದವರ ಕೋಣೆಗಳು, ದೇವರ ಉಡುಗೆ-ಪಲ್ಲಕ್ಕಿ ಮೊದಲಾದುವನ್ನು ಇರಿಸುವ ಕೋಣೆಗಳು. ಇವುಗಳಲ್ಲಿ ಕೈಕೋಳರ (ಎಂದರೆ, ಉತ್ಸವಸಂದರ್ಭದಲ್ಲಿ ದೀಪಗಳನ್ನು ಹೊತ್ತಿಸಿ ಹಿಡಿದುಕೊಂಡು ಹೋಗುವ ಊಳಿಗದವರು) ಕೋಣೆಯ ಬಳಿ ವಿಮಾನ-ಶ್ರೀನಿವಾಸನ ದರ್ಶನವಾಗುತ್ತದೆ.

ಗರ್ಭಗುಡಿಯ ಮೇಲಿರುವ ವಿಮಾನದಲ್ಲಿ ಈ ಕಡೆಗೆ ಮುಖಮಾಡಿ ಮೂಲವರ ಸಣ್ಣದೊಂದು ಪ್ರತೀಕವಿದೆ. ಇದನ್ನು ವಿಮಾನ-ವೇಂಕಟೇಶ್ವರ ಅಥವಾ ವಿಮಾನ-ಶ್ರೀನಿವಾಸನೆಂದು ಕರೆಯುತ್ತಾರೆ. ಗರ್ಭಗುಡಿಯಲ್ಲಿ ದೇವರನ್ನು ಕಾಣಲಾಗದವರು ಈ ಪ್ರತೀಕವನ್ನೇ ನೋಡಿ ಸಮಾಧಾನಪಟ್ಟುಕೊಳ್ಳುವರು. ವ್ಯಾಸತೀರ್ಥರು ಈ ಬೆಟ್ಟದ ಮೇಲೆ ಹನ್ನೆರಡು ವರ್ಷಕಾಲ ತಂಗಿದ್ದಾಗ, ದಿನವೂ ವಿಮಾನಪ್ರದಕ್ಷಿಣೆ ಮಾಡಿ ಈ ವಿಮಾನ-ಶ್ರೀನಿವಾಸನನ್ನು ನೋಡಿ ಹಿಂದಿರುಗುತ್ತಿದ್ದರಂತೆ; ಕಾರಣಾಂತರದಿಂದ ಆಗ ಗರ್ಭಗುಡಿಯಲ್ಲಿ ದೇವರನ್ನು ಕಾಣುವಂತಿರಲಿಲ್ಲ. ಆದುದರಿಂದ ಈಗಲೂ ಭಕ್ತರು ಮೂಲವರನ್ನು ನೋಡಿಬಂದರೂ ಈ ವಿಮಾನಪ್ರತೀಕವನ್ನು ನೋಡಿಹೋಗುವ ವಾಡಿಕೆಯಿದೆ.

ರಾಮಾನುಜರ ಸನ್ನಿಧಿ

ಅಲ್ಲಿಂದ ಮುಂದೆ ಬಂದರೆ ತಾಳ್ಳಪಾಕಂ ಅಣ್ಣಮಾಚಾರ್ಯರ ಕೀರ್ತನೆಗಳ ಭಂಡಾರವಿದೆ. ಇನ್ನೂ ಮುಂದೆ ಸರಿದರೆ ಭಾಷ್ಯಕಾರರ (ಎಂದರೆ, ರಾಮಾನುಜಾಚಾರ್ಯರ) ಸನ್ನಿಧಿ. ಇದರ ವಿಚಾರ ಈಗಾಗಲೇ ಬಂದಿದೆ. ಹದಿನೈದು ಅಡಿ ಅಗಲ ಹನ್ನೆರಡು ಅಡಿ ಉದ್ದ ಇರುವ ಈ ಗುಡಿಯ ಮುಂಭಾಗದಲ್ಲಿ ಇಪ್ಪತ್ತು ಅಡಿಗಳಷ್ಟು ಉದ್ದವಿರುವ ಮುಖಮಂಡಪವಿದೆ. ಒಳಪ್ರಾಕಾರದ ಉತ್ತರಗೋಡೆಯೇ ರಾಮಾನುಜ ಸನ್ನಿಧಿಯ ಹಿಂಭಾಗದ ಗೋಡೆ. ಎಂದಮೇಲೆ ಪ್ರಾಕಾರ ಕಟ್ಟಿಮುಗಿಸಿದಮೇಲೆ ಈ ಸನ್ನಿಧಿ ಸಿದ್ಧವಾದುದು. ಇದರ ಕಾಲ ಕ್ರಿಸ್ತಾಬ್ದ 1476 ಎಂದು ಹೇಳುತ್ತಾರೆ. ಈ ಗುಡಿಯ ಗೋಡೆಯ ಮೇಲಿರುವ ಶಾಸನಗಳಲ್ಲಿ ತುಂಬ ಹಳೆಯದೆಂದರೆ ಈ ಕಾಲದ್ದೇ. ಕೆಳತಿರುಪತಿಯಲ್ಲಿ ರಾಮಾನುಜಸನ್ನಿಧಿ 1220ರ ಸುಮಾರಿಗೆ ಮೈದಳೆಯಿತೆಂದೂ, ಬೆಟ್ಟದ ಮೇಲೂ ಅದೇ ಸಮಯದಲ್ಲೇ ಕಾಣಿಸಿಕೊಂಡಿತೆಂದೂ ಕೆಲವರ ನಂಬಿಕೆ. ರಾಮಾನುಜಾಚಾರ್ಯರ ಕಾಲ ಕ್ರಿಸ್ತಾಬ್ದ 1017ರಿಂದ 1137ರವರೆಗೆ. ಅವರ ನಲವತ್ತೈದನೆಯ ವರ್ಷ ವಯಸ್ಸಿನಲ್ಲಿ ಅವರೆದುರೇ ಶಿಲ್ಪಿಗಳಿಂದ ಅವರ ಪ್ರತಿಕೃತಿ

ಯನ್ನು ಮೂಡಿಸಿದರೆಂದೂ, ಅವರು ತೀರಿಕೊಂಡಮೇಲೆ ಪಿಳ್ಳೈ-ತಿರುಮಲೆ-ನಂಬಿ ಎಂಬುವರು ಬೆಟ್ಟದ ಮೇಲೆ ಗುಡಿಯಲ್ಲಿ ಈ ಪ್ರತಿಕೃತಿಯನ್ನು ಇರಿಸಿದರೆಂದೂ ಇನ್ನೊಂದು ಪ್ರತೀತಿಯಿದೆ. ವ್ಯಾಖ್ಯಾನಮುದ್ರೆಯಲ್ಲಿರುವ ಈ ಮೂರ್ತಿ ಅಪುರೂಪದ್ದು. ಸಾಮಾನ್ಯವಾಗಿ ನಾವು ಕಾಣುವುದು ಅಂಜಲಿಬದ್ಧ ಭಂಗಿಯಲ್ಲೇ. ಈ ಗುಡಿಯ ಮುಖಮಂಡಪ ಮುಂಚಾಚಿಕೊಂಡಿರುವುದನ್ನು ನೋಡಿದರೆ ಅದು ಕಾಲಾಂತರದ ಕಟ್ಟಡ ಎಂದು ಸ್ಪಷ್ಟವಾಗುತ್ತದೆ. ಮಹಂತರ ಆಡಳಿತಕ್ಕೆ 1843ರಲ್ಲಿ ಗುಡಿಯು ಬಂದಾಗ ತೋರಿಕೊಂಡ ಸನದಿನಲ್ಲಿ (ಕರಾರುನಾಮೆಯಲ್ಲಿ) ಮುಖ್ಯಗುಡಿಗೆ ಸೇರಿದಂತೆ, ಆದರೆ ಹೊರಗೆ ಇರುವಂತೆ ಕಾಣಿಸಿರುವ ಆರು ಸನ್ನಿಧಿಗಳಲ್ಲಿ ಇದೊಂದು (ವರಾಹಸ್ವಾಮಿ, ಬೇಡಿ ಆಂಜನೇಯ, ಪುಷ್ಕರಿಣಿ ಆಂಜನೇಯ, ದೋವಾಭಾಷ್ಯಕಾರರು ಇರುವಂತೆ). ರಾಮಾನುಜರ ಪ್ರಭಾವ ಈ ಗುಡಿಯ ಮೇಲೆ ವಿಶೇಷವಾಗಿ ಬಿದ್ದಿದ್ದುದರಿಂದ ಅವರ ಮೂರ್ತಿಯನ್ನು ಗುಡಿಯೊಳಗೆ ಪ್ರಥಮಾವರಣದಲ್ಲೇ ಇರಿಸಿರುವುದು ಸೋಜಿಗವಲ್ಲ. ಪಾಂಚರಾತ್ರಸಂಪ್ರದಾಯದ ಗುಡಿಗಳಲ್ಲಿ ರಾಮಾನುಜರ, ಆಳ್ವಾರರ ಸನ್ನಿಧಿಯಿರುವುದು ನಿಯಮ; ಅಲ್ಲಿಯೇ ಶಾತ್ತುಮುರೈ ಮೊದಲಾದ ವಿಧಿಗಳು ನಡೆಯುವುದು ವಾಡಿಕೆ. ಆದರೆ ವೈಖಾನಸಪದ್ಧತಿಯ ಈ ಗುಡಿಯಲ್ಲಿ ಆಳ್ವಾರರಿಗೆ ಎಡೆಯಿಲ್ಲ , ರಾಮಾನುಜರಿಗೆ ಮಾತ್ರ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ; ಗುಡಿಯಿದ್ದರೂ ಆಚಾರ್ಯರಿಗೆ ಪ್ರತ್ಯೇಕವಾಗಿ ಪೂಜೆ-ನಿಮಂದನೆಗಳು ನಡೆಯುವುದಿಲ್ಲ.


ನರಸಿಂಹನ ಆಲಯ

ರಾಮಾನುಜರ ಸನ್ನಿಧಿಯಿಂದ ಮುಂದೆ ಬಂದರೆ ಮೊದಲ ಆವರಣ ಮುಗಿಯುವಲ್ಲಿ ನರಸಿಂಹಸ್ವಾಮಿಯ ಗುಡಿಯಿದೆ. ರಾಮಾನುಜರು ತಿರುಮಾಮಣಿಮಂಡಪಕ್ಕೆ ಮುಖಮಾಡಿ ಕುಳಿತಿದ್ದರೆ ನರಸಿಂಹನು ದೇವರೆದುರೇ ಮುಖಮಾಡಿ ಕುಳಿತಿದ್ದಾನೆ. ಇಲ್ಲಿರುವ ನರಸಿಂಹನು ಯೋಗಪಟ್ಟದಲ್ಲಿ ಕುಳಿತಿರುವುದರಿಂದ ಯೋಗಾನರಸಿಂಹ ಎಂದು ಕರೆಯುತ್ತಾರೆ. ತಮಿಳಿನಲ್ಲಿ 'ಅಳಗಿಯ-ಸಿಂಗರ್' ಎಂದೂ 'ವೆಂಕಟತ್ತರಿ' ಎಂದೂ ಹೆಸರುಗಳಿವೆ. ಈ ಗುಡಿ ಮೂಡಿಕೊಂಡುದಕ್ಕೆ ಹಿನ್ನೆಲೆಯೇನೆಂದು ತಿಳಿಯುವುದಿಲ್ಲ. ಅಹೋಬಲ ಅಥವಾ ಶೋಲಂಗಿಪುರಗಳಿಗೆ ಮುಸಲ್ಮಾನರ ದಾಳಿಯ ಅಂಜಿಕೆ ತಲೆದೋರಿದಾಗ ಅಲ್ಲಿನ ಉತ್ಸವಮೂರ್ತಿಯನ್ನು ಹೊರತಂದು ಇಲ್ಲಿರಿಸಿದ್ದಿರ ಬಹುದೆಂದು ಕೆಲವರ ಊಹೆ. ಈ ಗುಡಿ ಏರ್ಪಟ್ಟಿರುವ ಬಗೆಯನ್ನು ನೋಡಿದರೆ ತುಂಬ ಆತುರದಲ್ಲಿ ಸಿದ್ಧವಾದುದೆಂದು ತೋರುತ್ತದೆ. ಅಹೋಬಲ ವಣ್-ಶಠಕೋಪ ಮಠದ ಪ್ರಧಾನದೇವತೆ, ನರಸಿಂಹ. ಈ ಮಠದ ಶಿಷ್ಯನಾದ ಕಂದಾಡೈ ರಾಮಾನುಜಯ್ಯನ ಪ್ರಭಾವ ಬೆಟ್ಟದ ಗುಡಿಯಲ್ಲಿ ಬೇರೂರಿದುದನ್ನು ಹಿಂದೆಯೇ ಕಂಡಿದ್ದೇವೆ. ಆತನು ಪಂಗುಣಿಅಮಾವಾಸ್ಯೆ ಮತ್ತು ವಸಂತಪೂರ್ಣಿಮೆಗಳಂದು ಬೆಟ್ಟದ ಗುಡಿಯಲ್ಲಿರುವ ಈ ನರಸಿಂಹನಿಗೆ ತಿರುವೋಲಕ್ಕವನ್ನು ಸಮರ್ಪಿಸುವ ವ್ಯವಸ್ಥೆಯನ್ನು



ನರಸಿಂಹಸ್ವಾಮಿ (ವಿಮಾನಪ್ರದಕ್ಷಿಣೆಯಲ್ಲಿ)

ಕ್ರಿಸ್ತಾಬ್ದ 1469ರಲ್ಲಿ ಮಾಡಿದ ಉಲ್ಲೇಖವಿದೆ. ಅವನೇ ಈ ಗುಡಿಯನ್ನೂ ಏರ್ಪಡಿಸಿದನೋ ಏನೋ! ಆ ಕಾಲಕ್ಕೆ ಮೊದಲು ಈ ನರಸಿಂಹನ ಪ್ರಸ್ತಾಪ ಎಲ್ಲಿಯೂ ಬರುವುದಿಲ್ಲ. ಮುಂದೆ 1493ರಲ್ಲಿ ಅದೇ ವಣ್-ಶಠಕೋಪ ಮಠದ ಇನ್ನೊಬ್ಬ ಶಿಷ್ಯ ತಮ್ಮಯ್ಯನ ಮಗ ದತ್ರಿರಾಜನೆಂಬುವನು "ತಿರುವೇಂಗಡದೊಡೆಯನ ಸನ್ನಿಧಿಯಲ್ಲಿ ಇರುವ ಅಳಗಿಯ-ಸಿಂಗರಿಗೆ ತಿರುಪ್ಪಳಿ-ಎಳುಚ್ಚಿಯ ಮೂವತ್ತು ದಿನಗಳೂ ಮೂವತ್ತು ತಿರುಪ್ಪೋನಕಗಳನ್ನೂ, ಮತ್ತು ಶ್ರೀಜಯಂತಿ, ವಸಂತಪೌರ್ಣಮಿ, ರಾಮ ನವಮಿ ಮತ್ತು ಏಳು ತಿರುಕ್ಕೋಡಿ ತಿರುನಾಳಿನ (ಎಂದರೆ, ಬ್ರಹ್ಮೋತ್ಸವದ) ದಿನಗಳಲ್ಲಿ



ಘಂಟೆಗಳು (ಮಂಟಪದಲ್ಲಿ)

ಒಟ್ಟು ಹತ್ತು ಅತಿರಸಪ್ಪಡಿಗಳನ್ನೂ" ಸಮರ್ಪಿಸುವ ವ್ಯವಸ್ಥೆಮಾಡುತ್ತಾನೆ. 'ನರಸಿಂಹನಿ ಗೋಸ್ಕರ ವೇಂಗಡದೊಡೆಯನಿಗೆ ಸಮರ್ಪಣೆ' ಎಂಬ ಒಕ್ಕಣೆ ಶಾಸನದಲ್ಲಿ ಕಂಡು ಬರುತ್ತದೆ.

ಹೀಗೆ ವಿಮಾನಪ್ರದಕ್ಷಿಣೆಯಲ್ಲಿ (ಎಂದರೆ, ಗುಡಿಯ ಮೊದಲ ಆವರಣದಲ್ಲಿ) ಕಾಣಬರುವ ಈ ಎಲ್ಲ ಕಟ್ಟಡಗಳೂ ಗುಡಿಗಳೂ ವಿಜಯನಗರದ ಅರಸರ ಕಾಲದವು. ವರದರಾಜನ ಗುಡಿಯೊಂದನ್ನು ಬಿಟ್ಟರೆ ಉಳಿದೆಲ್ಲ ಕಟ್ಟಡಗಳೂ ಒಳಪ್ರಾಕಾರಕ್ಕೇ ಹೊಂದಿಕೊಂಡು ಸಿದ್ಧವಾದುವು. ಇವನ್ನೆಲ್ಲ ಮದಿಲ್-ಪಟ್ಟಿ-ಮಂಡಪಗಳೆಂದು ಕರೆಯುವುದು ಸರಿಯೇ; ಎಂದರೆ ಗೋಡೆಗೇ ಆನಿಸಿ ಕಟ್ಟಿದ ಮಂಡಪಗಳು. ಎಲ್ಲ ಕಟ್ಟಡಗಳೂ ಒಳಪ್ರಾಕಾರ ಸಿದ್ಧವಾದಮೇಲೆ ಮೈದೋರಿಕೊಂಡವು. ಅದಕ್ಕೆ ಮುಂಚೆ ಬೆಟ್ಟದ ಗುಡಿಯಲ್ಲಿ ವರದರಾಜನಾಗಲೀ ರಾಮಾನುಜರಾಗಲೀ ನರಸಿಂಹನಾಗಲೀ ಸೇರಿಬಂದಿರಲಿಲ್ಲ. ಈಗಲೂ ಈ ಸನ್ನಿಧಿಗಳಲ್ಲಿ ಪ್ರತ್ಯೇಕವಾದ ಪೂಜೆ ನಡೆಯುವುದಿಲ್ಲ. ಶ್ರೀವೈಷ್ಣವರು ರಾಮಾನುಜಸನ್ನಿಧಿಗೆ ಹೋಗುವುದನ್ನು ಬಿಟ್ಟರೆ, ಯಾರೂ ಈ ಯಾವ ಸನ್ನಿಧಿಗಳಿಗೂ ಹೋಗಿ ಪೂಜೆಸಲ್ಲಿಸುವ ಪದ್ಧತಿಯಿಲ್ಲ. ಬೆಟ್ಟದ ಗುಡಿಯಲ್ಲಿ ಇಂದಿಗೂ ವೇಂಗಡದೊಡೆಯನೊಬ್ಬನೇ ದೇವರು.

ತಿರುಮಾಮಣಿ-ಮಂಡಪ

ವಿಮಾನಪ್ರದಕ್ಷಿಣೆಯನ್ನು ಮುಗಿಸಿ ದೇವರನ್ನು ನೋಡಲು ತಿರುಮಾಮಣಿ ಮಂಡಪದೊಳಗೆ ಹೋಗಬೇಕು. ವೈಕುಂಠದಲ್ಲಿ ವಿಷ್ಣುವಿನ ದರ್ಶನ ನಿತ್ಯಸೂರಿಗಳಿಗೆ ಆಗುವುದು ತಿರುಮಹಾಮಣಿಮಂಡಪದಲ್ಲಿ. ವೇಂಗಡದೊಡೆಯನು ವಿಷ್ಣು, ವೇಂಗಡವು ವೈಕುಂಠ. ಇಲ್ಲಿಯೂ ಭಕ್ತರಿಗೆ ದರ್ಶನವನ್ನು ಒದಗಿಸುವ ಮಂಡಪ ಅದೇ ಹೆಸರಿನದು. ಕಲ್ಲಿನ ಹದಿನಾರು ಕಂಬಗಳ ಮೇಲೆ ನಿಂತು, ನಲವತ್ತಮೂರು ಅಡಿ ಅಗಲ ನಲವತ್ತಡಿ ಉದ್ದವಿರುವ ಈ ಮಂಡಪವನ್ನು 'ಮುಖಮಂಡಪ'ವೆಂದೂ 'ಆಸ್ಥಾನಮಂಡಪ'ವೆಂದೂ ಕರೆಯುತ್ತಾರೆ. ಇದನ್ನು ಕಟ್ಟಿಸಿದವನು ಚಂದ್ರಗಿರಿಯಲ್ಲಿರುತ್ತಿದ್ದ ಮಲ್ಲಣ-ಮಾಧವ ದಾಸರ್; ಇದು ಕಟ್ಟಿ ಮುಗಿದದ್ದು 1417ರ ಆಗಸ್ಟ್ 25ರಂದು. ಇದು ಚೆಲುವಾದ ಮಂಡಪವೆಂಬುದು ಶಾಸನದ ಮಾತುಗಳಿಂದ ಮಾತ್ರ ಸಿದ್ಧವಾಗುವುದಿಲ್ಲ, ನೋಡಿದವರಿಗೆಲ್ಲ ಇದರ ಅನುಭವವಾಗುತ್ತದೆ. ಆದರೆ ದೇವರ ದರ್ಶನಕ್ಕೆ ಕಾತರರಾಗಿ ಕ್ಯೂನಲ್ಲಿ ನಿಂತ ಭಕ್ತರಿಗೆ ಮುಂದಿನವರನ್ನು ತಳ್ಳುವುದು ಹಿಂದಿನವರಿಂದ ತಳ್ಳಿಸಿಕೊಳ್ಳುವುದು—ಈ ಬವಣೆಯಲ್ಲಿ ಮಂಡಪದ ಸೌಂದರ್ಯವನ್ನು ಸಾವಧಾನವಾಗಿ ನೋಡುವ ಅವಕಾಶವಾಗುವುದಿಲ್ಲ. ಇಡೀ ಗುಡಿಯಲ್ಲಿ ಇಷ್ಟು ಸೊಗಸಾದ ಕಟ್ಟಡ ಇನ್ನೊಂದಿಲ್ಲವೆಂದರೆ ಉತ್ಪ್ರೇಕ್ಷೆಯಲ್ಲ.

ಈ ಮಂಡಪದ ಪೂರ್ವದಲ್ಲಿ ಈಗ ಗರುಡನಿಗೆ ಎಡೆಮಾಡಿಕೊಟ್ಟಿದ್ದಾರೆ. ಮಂಡಪ ಸಿದ್ಧವಾಗುವಾಗ ಗರುಡನ ಯೋಚನೆಯಿರಲಿಲ್ಲ. ಮೇಲಾಗಿ ಈ ಮಂಟಪ ತೆರೆದ ಮಂಡಪ, ಅಲ್ಲಿ ಯಾವ ಸನ್ನಿಧಿಗೂ ಅವಕಾಶವಿಲ್ಲ. ಆದರೆ ವಿಷ್ಣುವಿನ ಗುಡಿಯಲ್ಲಿ ಗರುಡ ಇರದಿದ್ದರೆ ಹೇಗೆ ಎಂದು ಮುಂದೆ ಯಾರಿಗೋ ಮನಸ್ಸು ಕಿರಿಕಿರಿಯಾಯಿತು, ವೇಂಗಡದೊಡೆಯನು ವಿಷ್ಣುವೇ ಎಂದು ಸಾಧಿಸಬೇಕಾದರೆ ದೇವರೆದುರು ಗರುಡನನ್ನು ನಿಲ್ಲಿಸಬೇಕೆಂದು ಸಂಕಲ್ಪಿಸಿದರು. ಗರ್ಭಗುಡಿಯ ಹತ್ತಿರದಲ್ಲಿ ಎಲ್ಲಿಯೂ ವೈಖಾನಸರು ಗರುಡನನ್ನು ಬರಗೊಡುವುದಿಲ್ಲ, ಗರುಡನಿಗೆ ಬೇರೆಲ್ಲಿಯ ಎಡೆ? ತಿರುಮಾಮಣಿಮಂಡಪವೇ ಸರಿಯಾದುದೆಂದು ತೀರ್ಮಾನಿಸಿ, ಅದರ ಒಂದು ಭಾಗವನ್ನು ಮುಚ್ಚಿ ಅಲ್ಲಿ ಗರುಡನನ್ನು ಅಂಜಲಿಬದ್ಧಮುದ್ರೆಯಲ್ಲಿ ನಿಲ್ಲಿಸಿದರು. ಬಲಿಪೀಠ, ಧ್ವಜಸ್ತಂಭ, ಒಳಬಾಗಿಲು ಇವಕ್ಕೆ ನೇರವಾಗಿ, ಇವಕ್ಕೆ ಬೆನ್ನುಮಾಡಿ ದೇವರೆದುರು ನಿಂತ ಗರುಡನಿಗೆ ಇಲ್ಲಿ ಗುಡಿಯಿದೆ. ಗುಡಿ ಸಣ್ಣದೇ, ಎದ್ದು ಕಾಣುವಂಥದಲ್ಲ. ಆದರೆ ತಿರುಮಾಮಣಿಮಂಡಪಕ್ಕೆ ತಕ್ಕ ಕಟ್ಟಡವಲ್ಲ. ಅದರ ಸೊಗಸಿಗೆ ಇದೊಂದು ದೃಷ್ಟಿಬೊಟ್ಟು. ಇದನ್ನು ಯಾರು ಯಾವಾಗ ಕಟ್ಟಿಸಿದರೋ ತಿಳಿದು ಬರುವುದಿಲ್ಲ; ಇದನ್ನು ಕುರಿತ ಶಾಸನವಾಗಲೀ ಉಲ್ಲೇಖವಾಗಲೀ ಇಲ್ಲ. ಯಾರು ಕಟ್ಟಿಸಿದರೆಂದು ತಿಳಿದಿದ್ದರೆ ರಸಿಕರು ಅವರನ್ನು ಶಪಿಸುತ್ತಿದ್ದರು! ಈ ಗರುಡನ ಮೊತ್ತಮೊದಲ ಉಲ್ಲೇಖ ಬರುವುದು ಕ್ರಿಸ್ತಾಬ್ದ 1512ರ ಶಾಸನವೊಂದರಲ್ಲಿ. ಗರುಡನ

ಗುಡಿಯ ಮೇಲ್ಭಾಗದಲ್ಲಿ ವಿಮಾನವೊಂದಿದೆ. ಈಚೆಗೆ ಇದಕ್ಕೂ ಬಂಗಾರದ ಮೆರುಗಿನ ಲೋಹದ ಕವಚ ತೊಡಿಸಿದ್ದಾರೆ. ಶ್ರೀರಂಗದ ರಂಗನಾಥನನ್ನು ನೆನಪಿಗೆ ತರುವ ಚಿತ್ರಣ ಇದರ ಮೇಲಿದೆ.

ಈ ಮಂಡಪದ ಅಗತ್ಯವೇನಿದ್ದಿತು? ಕಲ್ಯಾಣಮಂಡಪವು ಮೈದಳೆಯುವ ಮೊದಲು ಉತ್ಸವಮೂರ್ತಿಯನ್ನು ಬ್ರಹ್ಮೋತ್ಸವ, ಅಧ್ಯಯನೋತ್ಸವ ಸಂದರ್ಭಗಳಲ್ಲಿ ಗರ್ಭಗುಡಿಯಿಂದ ಹೊರಮಾಡಿ ಇಲ್ಲಿಯೇ ಇರಿಸುತ್ತಿದ್ದರು. ದಿನವೂ ಗರ್ಭಗುಡಿಯಲ್ಲಿ 'ತೋಮಾಲಸೇವೆ'ಯೆಂಬ ಬೆಳಗಿನ ವಿಧಿ ಮುಗಿದಮೇಲೆ, ಕೊಲುವು-ಶ್ರೀನಿವಾಸ ನೆನಿಸಿಕೊಳ್ಳುವ ಬಲಿಬೇರವನ್ನು ಗರ್ಭಗುಡಿಯಿಂದ ಇಲ್ಲಿಗೆ ತಂದು ಸಿಂಹಾಸನದ ಮೇಲೆ ಕೂಡಿಸಿ, ಅದರೆದುರು ದಿನದ ಪಂಚಾಂಗವನ್ನು ಓದುವುದು, ಅರ್ಚಕರಿಗೆ ಮಾತ್ರದಾನ ಮಾಡುವುದು (ಎಂದರೆ, ದಿನಕ್ಕೆ ಗೊತ್ತಾದ ಅಕ್ಕಿಯನ್ನು ಕೊಡುವುದು) ಮೊದಲಾದ ವಿಧಿಗಳನ್ನು ನಡೆಸುತ್ತಾರೆ. ಇದಕ್ಕೇ ಕೊಲುವು, ಆಸ್ಥಾನ ಎಂದು ಹೆಸರು; ಎಂದರೆ ದರ್ಬಾರ್. ಮುಂಜಾನೆ ಗುಡಿಯ ಬಾಗಿಲು ತೆರೆದೊಡನೆ ಈ ಮಂಡಪದಲ್ಲೇ ಸುಪ್ರಭಾತಸೇವೆ ನಡೆಯುತ್ತದೆ. ಈ ಮಂಡಪದ ಒಂದು ಭಾಗದಲ್ಲಿ, ರಾಮಾನುಜ ಸನ್ನಿಧಿಗೆ ಎದುರಾಗಿ, ದೊಡ್ಡದೊಂದು ಗಂಗಾಳವನ್ನಿರಿಸುತ್ತಾರೆ; ಇದೇ ಕೊಪ್ಪರ ಅಥವಾ ಹುಂಡಿ. ಹರಕೆ ಹೊತ್ತವರು ತಮ್ಮ ಹರಕೆಯನ್ನು ಇದರಲ್ಲಿ ಸಲ್ಲಿಸುತ್ತಾರೆ. ಗಂಗಾಳದ ಪಕ್ಕದಲ್ಲೇ ಗುಡಿಯ ಪಾರುಪತ್ಯದಾರನು ಕುಳಿತು ಗುಡಿಯ ವ್ಯವಹಾರವನ್ನು ನೋಡಿಕೊಳ್ಳುತ್ತಾನೆ. ಗಂಗಾಳದಲ್ಲಿ ಭಕ್ತರು ಹಾಕಿ ಹೋದ ಹಣದ ಎಣಿಕೆಯೂ ಇಲ್ಲಿಯೇ ಎಲ್ಲರೆದುರು ನಡೆಯುತ್ತದೆ.

ಸ್ನಪನಮಂಡಪ

ತಿರುಮಾಮಣಿಮಂಡಪದಿಂದ ಗರ್ಭಗುಡಿಯ ಕಡೆಗೆ ಹೋಗಲು ಇರುವ ಬಾಗಿಲು 'ಬಂಗಾರಬಾಗಿಲು'. ಇಡೀ ಬಾಗಿಲಿಗೆ ಬಂಗಾರದ ಮೆರುಗಿನ ಕವಚವನ್ನು ತೊಡಿಸಿದ್ದಾರೆ. ಈ ಬಾಗಿಲಿನ ಎರಡೂ ಪಕ್ಕಗಳಲ್ಲಿ ದ್ವಾರಪಾಲಕರ ಅತಿಪ್ರಮಾಣದ ಲೋಹಪ್ರತಿಮೆಗಳಿವೆ. ಇವುಗಳ ಭವ್ಯತೆ, ಚೆಲುವು, ಗಾಂಭೀರ್ಯಗಳನ್ನು ನೋಡಿಯೇ ಅರಿತುಕೊಳ್ಳಬೇಕು. ಈಚೆಗೆ ಈ ದ್ವಾರಪಾಲಕರನ್ನು ಕೋಷ್ಠಗಳಲ್ಲಿ ಅಡಗಿಸಿದ್ದಾರೆ.

ಬಂಗಾರಬಾಗಿಲನ್ನು ದಾಟಿ ಹೋದರೆ ಸಿಗುವುದು 'ಸ್ನಪನಮಂಡಪ'. ಇದು ತಿರುಮಾಮಣಿಮಂಡಪ ಮೈದಳೆಯುವ ಮೊದಲೇ ಇದ್ದುದು. ಕ್ರಿಸ್ತಾಬ್ದ 966ರಲ್ಲಿ ಮೂಲವರ ಪ್ರತಿಕೃತಿಯಾಗಿ ಸಾಮವೈ ಭೋಗ-ಶ್ರೀನಿವಾಸನ ಬೆಳ್ಳಿಯ ಮೂರ್ತಿಯನ್ನು ಮಾಡಿಸಿಕೊಟ್ಟುದನ್ನು ಹಿಂದೆಯೇ ತಿಳಿದುಕೊಂಡೆವಷ್ಟೆ. ಈ ವಿಗ್ರಹವನ್ನು ಇರಿಸಲೆಂದು, ಅದಕ್ಕೆ ಅಗತ್ಯವಾದ ವಿಧಿಗಳನ್ನು ನಡೆಸುವ ಸಲುವಾಗಿ ಈ ಮಂಡಪ ಸಿದ್ಧವಾಯಿತು. ಆದುದರಿಂದ ಇದಕ್ಕೆ ಮೊದಲಿದ್ದ ಹೆಸರು 'ತಿರುವಿಳನ್-ಕೋಯಿಲ್'. ಇದರ ವಿವರಣೆ ಆಗಲೇ ಬಂದಿದೆ. ಹೊಸದಾಗಿ ಸಿದ್ಧವಾದ ಭೋಗ-ಶ್ರೀನಿವಾಸನಿಗೆ (ಕೌತುಕಬೇರಕ್ಕೆ)

ಅಭಿಷೇಕವನ್ನು ಇಲ್ಲಿಯೇ ನಡೆಸುತ್ತಿದ್ದರಿಂದ ಇದು 'ಸ್ನಪನಮಂಡಪ'ವೆನಿಸಿಕೊಂಡಿತು. ಮುಂದೆ ಭೋಗ-ಶ್ರೀನಿವಾಸನೂ ಗರ್ಭಗುಡಿಯೊಳಗೆ ಸೇರಿ, ಇಲ್ಲಿ ಅಭಿಷೇಕವೂ ನಡೆಯದೆ, ಈ ಎರಡು ಹೆಸರುಗಳೂ ಅರ್ಥವಿಲ್ಲವಾದುವು.

ಇದನ್ನು ಮಂಡಪವೆಂದು ಕರೆಯುವುದು ಅಷ್ಟಾಗಿ ಉಚಿತವಲ್ಲ. ಅಲ್ಲಿರುವ ನಾಲ್ಕು ಕಂಬಗಳೂ ಮೊದಲಿನವಂತೆ ಕಾಣುವುದಿಲ್ಲ. ಅದರ ಸ್ಥಳ, ವಿನ್ಯಾಸ, ಗೋಡೆಗಳ ಅಚ್ಚುಕಟ್ಟನ್ನು ನೋಡಿದರೆ ಮೊದಲಿದ್ದ ಮಂಡಪವನ್ನು ಭಂಡಾರವನ್ನಾಗಿ ಮಾರ್ಪಡಿಸಿದರೆಂದು ತೋರುತ್ತದೆ. ಗುಡಿಯ ಧನ-ಕನಕಗಳನ್ನು ಇರಿಸಿಕೊಳ್ಳುತ್ತಿದ್ದುದು ಇಲ್ಲಿಯೇ ಇರಬೇಕು. ಈಗ ತಿರುಮಾಮಣಿಮಂಡಪದಲ್ಲಿರುವ ದೇವರ ಕೊಪ್ಪರ (ಹುಂಡಿ) 1831ರಲ್ಲಿ ಕೂಡ ಈ ಸ್ನಪನಮಂಡಪದಲ್ಲಿಯೇ ಇದ್ದುದು ಆ ಕಾಲದ ಲೇಖನವೊಂದರಿಂದ ತಿಳಿದುಬರುತ್ತದೆ. ಭಕ್ತರು ದೇವರೆದುರೇ ಇದ್ದ ಈ ಗಂಗಾಳದಲ್ಲಿ ತಮ್ಮ ಹರಕೆಯನ್ನು ಸಲ್ಲಿಸುವ ವ್ಯವಸ್ಥೆಯಿದ್ದುದು ಸರಿಯೇ. ಈ ಮಂಡಪ ಹೆಚ್ಚೂಕಡಮೆ ಮೂವತ್ತು ಅಡಿಯ ಚಚ್ಚೌಕ, ಇದರ ಒಂದು ಮೂಲೆಯನ್ನು ಕೋಣೆಯನ್ನಾಗಿ ಮಾರ್ಪಡಿಸಿದ್ದಾರೆ.

ರಾಮರ ಮೇಡೆ

ಈ ಸ್ನಪನಮಂಡಪವನ್ನು ದಾಟಿಹೋದರೆ 'ರಾಮರ ಮೇಡೆ' (ತೆಲುಗಿನಲ್ಲಿ 'ರಾಮುಲವಾರಿ ಮೇಡ', ಎಂದರೆ ರಾಮದೇವರ ಮಹಡಿ) ಎಂಬ ಇಕ್ಕಟ್ಟಾದ ಕೋಣೆ; ಹತ್ತೂವರೆ ಅಡಿ ಉದ್ದ, ಹನ್ನೆರಡೂಮುಕ್ಕಾಲು ಅಡಿ ಅಗಲ. ನಡುವೆ ದಾರಿಯನ್ನು ಬಿಟ್ಟು, ಎರಡೂ ಕಡೆಗಳಲ್ಲಿ ಎತ್ತರವಾದ ಕಟ್ಟೆಗಳನ್ನು ಕಟ್ಟಿ ಒಂದರ ಮೇಲೆ ಗರ್ಭಗುಡಿಯಲ್ಲಿರುವ ರಾಮಪರಿವಾರಕ್ಕೆ ಸೇರಿದ ಅಂಗದ, ಹನುಮಂತ ಇವರ ಲೋಹಮೂರ್ತಿಗಳನ್ನೂ ಎದುರು ಕಟ್ಟೆಯ ಮೇಲೆ ವಿಷ್ವಕ್ಸೇನ, ಗರುಡ, ಶೇಷ ಇವರ ಮೂರ್ತಿಗಳನ್ನೂ ಇರಿಸಿದ್ದಾರೆ. ಮುಕ್ಕೋಟಿಪ್ರದಕ್ಷಿಣ ತೆರವಾಗಿದ್ದ ಕಾಲದಲ್ಲಿ ಇದು ಈ ಪ್ರದಕ್ಷಿಣಮಾರ್ಗದ ಮುಂಭಾಗವಾಗಿದ್ದಿತು. ಸ್ನಪನಮಂಡಪಕ್ಕೂ ಶಯಾನಮಂಡಪಕ್ಕೂ ನಡುವೆ ಇದು ತೆರೆದ ಭಾಗವೇ ಆಗಿದ್ದಿರಬೇಕು. ಆದರೆ ಕಾರಣಾಂತರಗಳಿಂದ ಮುಕ್ಕೋಟಿಪ್ರದಕ್ಷಿಣವನ್ನು ಮುಚ್ಚಬೇಕಾದಾಗ ಈ ಭಾಗವೊಂದು ಕೋಣೆಯಾಗಿ ಮಾರ್ಪಟ್ಟಿತು. ಮೊದಲು ಇಲ್ಲಿ ರಾಮ-ಲಕ್ಷ್ಮಣ-ಸೀತೆಯರ ಪ್ರತಿಮೆಗಳನ್ನು ಇರಿಸುತ್ತಿದ್ದರೋ ಏನೋ, ಈಗ ಈ ಪ್ರತಿಮೆಗಳು ಗರ್ಭಗುಡಿಯಲ್ಲೇ ಇರುತ್ತವೆ. ರಾಮನ ಪರಿವಾರಕ್ಕೆ ಸೇರಿದ ಅಂಗದ, ಹನುಮಂತರ ಪ್ರತಿಮೆಗಳು ಮಾತ್ರ ಈ ಕೋಣೆಯಲ್ಲಿವೆ. ಈಚೆಗೆ ಇವೂ ಸ್ಥಳಾಂತರಗೊಂಡಿವೆ; ವಿಮಾನ ಪ್ರದಕ್ಷಿಣದಲ್ಲಿ ಕಾಣಸಿಗುತ್ತವೆ. ಇದರ ಕಾರಣವೇನೋ ತಿಳಿಯದು. ಈ 'ಮೇಡೆ' ಮೈದಳೆದದ್ದು ಕ್ರಿಸ್ತಾಬ್ದ 1262ರ ಸುಮಾರಿಗೆ ಎಂದು ತೋರುತ್ತದೆ.

ಶಯಾನ-ಮಂಡಪ

'ರಾಮರ ಮೇಡೆ'ಯನ್ನೂ ದಾಟಿ ಗರ್ಭಗುಡಿಯ ಕಡೆ ನಡೆದರೆ ನಡುವೆ ಸಿಗುವುದು 'ಶಯಾನಮಂಡಪ'. ಮೊದಲಿಗೆ ಇದು ಅಂತರಾಳ ಅಥವಾ ಮುಖ ಮಂಡಪ. ಈಗ ಪ್ರತಿರಾತ್ರಿಯೂ ಉತ್ಸವಬೇರವನ್ನು ಏಕಾಂತಸೇವೆಯಲ್ಲಿ ಇಲ್ಲಿಗೆ ಬಿಜಯಮಾಡಿಸಿ ಶಯನೋತ್ಸವನಡೆಸುವ ವಾಡಿಕೆ ಇರುವುದರಿಂದ ಇದು 'ಶಯಾನ ಮಂಡಪ'ವೆನಿಸಿಕೊಂಡಿದೆ. ಗರ್ಭಗುಡಿಗೆ ಹೊಂದಿಕೊಂಡಿರುವ ಈ ಮಂಡಪ ಹದಿನೆಂಟು ಅಡಿ ಆರಂಗುಲದ ಚಚ್ಚೌಕ. ಗರ್ಭಗುಡಿಗೂ ಇದಕ್ಕೂ ನಡುವೆ ಇರುವ ಕಲ್ಲುಹೊಸ್ತಿಲನ್ನು 'ಕುಲಶೇಖರಪ್ಪಡಿ' ಎಂದು ಕರೆಯುತ್ತಾರೆ. ಆಳ್ವಾರರಲ್ಲಿ ಒಬ್ಬರಾದ ಕುಲಶೇಖರರು ವೇಂಗಡದ ದೇವರ ಹಿರಿಮೆಯನ್ನು ಹೊಗಳುತ್ತ ತಮ್ಮ ಮುಂದಿನ ಜನ್ಮದಲ್ಲಿ ತಾವು ದೇವರ ಗುಡಿಯ ಹೊಸ್ತಿಲಾಗಿ ಮೈದಳೆದು ಭಕ್ತರು ತನ್ನನ್ನು ಮೆಟ್ಟಿನಿಂತು ದೇವರನ್ನು ಕಾಣುವಂತಾಗಲಿ ಎಂದು ಹಂಬಲಿಸಿದ್ದರು. ಈ ಹಂಬಲಿಕೆಯನ್ನು ಮನ್ನಿಸಿ ಹೊಸ್ತಿಲಿಗೆ ಈ ಹೆಸರು. ಇದನ್ನು ಕಾಮ್ಯಾರ್ಥವಾದ ಯಾವ ನೈವೇದ್ಯವಾಗಲೀ ಪದಾರ್ಥವಾಗಲೀ ದಾಟುವಂತಿಲ್ಲ. ಮೂಲದೇವರಿಗೆ ದಿನವೂ ನೈವೇದ್ಯ ಮಾಡುವಾಗ ಅಡುಗೆಯನ್ನೆಲ್ಲ ಈ ಹೊಸ್ತಿಲ ಹೊರಗೇ ಇರಿಸುತ್ತಾರೆ. ಕ್ರಿಸ್ತಾಬ್ದ 966ರಲ್ಲಿ ವ್ಯವಸ್ಥೆ ಮಾಡಿದ ನಾಲ್ಕು ನಾಳಿ ಅಕ್ಕಿ ಮಾತ್ರ ಗರ್ಭಗುಡಿಯೊಳಗೆ ಹೋಗಬಹುದು, ಅಷ್ಟೆ. ಆರತಿಗೆ ಕರ್ಪೂರ, ಅಲಂಕಾರಕ್ಕೆ ಹೂವು ಇಷ್ಟನ್ನು ಬಿಟ್ಟು ಉಳಿದ ಏನನ್ನೂ ಈ ಹೊಸ್ತಿಲ ಒಳಗೆ ತರುವ ವಾಡಿಕೆಯಲ್ಲ. ಇದು ವೈಖಾನಸ ಸಂಪ್ರದಾಯದ ಕಟ್ಟುಪಾಡು.

ಗರ್ಭಗುಡಿಯ ಆಕಾರವೂ ಚಚ್ಚೌಕವಾದುದು. ಒಂದೊಂದು ಕಡೆಯೂ ಹನ್ನೆರಡು ಅಡಿ ಒಂಬತ್ತು ಅಂಗುಲಗಳು. ತುಂಡುಗಲ್ಲಿನ ಗೋಡೆಯ ಈ ಕಟ್ಟಡ ಎಂಟನೆಯ ಅಥವಾ ಒಂಬತ್ತನೆಯ ಶತಮಾನಕ್ಕೆ ಸೇರಿದುದೆಂದು ಅಂದಾಜು ಮಾಡಲಾಗಿದೆ. ಈ ಕಾಲಕ್ಕೆ ಮೊದಲು ಗರ್ಭಗುಡಿ ಹೇಗಿದ್ದಿತೋ ಹೇಳುವುದು ಸಾಧ್ಯವಿಲ್ಲ. ಅದರ ಹರವನ್ನೂ ಊಹೆಮಾಡುವುದಾಗದು. ಶಾಸನ ಈ ಗರ್ಭಗುಡಿಯನ್ನು 'ಕೋಯಿಲ್-ಆಳ್ವಾರ್' ಎಂದು ಕರೆದಿದೆ, ಎಂದರೆ ಇಡೀ ಗುಡಿಗೆ ಈ ಭಾಗ ದೇವರಿದ್ದಂತೆ. ಗರ್ಭಗುಡಿಗೆ ಇನ್ನೊಂದು ಗರ್ಭಗುಡಿ ಮೂಡಿಬಂದುದು 'ಕೋಯಿಲ್-ಆಳ್ವಾರ್‌ಕ್ಕು ಕೋಯಿಲ್' ಎಂಬ ಮಾತಿನಿಂದ ಸ್ಪಷ್ಟವಾಗುತ್ತದೆ. ದಿಟವಾಗಿ ಗರ್ಭಗುಡಿಗಿರುವುದು ಜೋಡಿಗೋಡೆಗಳು. ಗರ್ಭಗುಡಿಯನ್ನೂ ಮುಂದಿರುವ ಮುಖಮಂಡಪವನ್ನೂ ಸೇರಿಸಿಕೊಂಡು ಮೂರು ಕಡೆಗಳಲ್ಲಿ (ದೇವರು ಮುಖಮಾಡಿ ನಿಂತಿರುವ ಕಡೆಯನ್ನು ಬಿಟ್ಟು) ಒಳಗೋಡೆಗಳಿಗೆ ಹೊಂದಿಕೊಂಡಂತೆ ಹೊರಗೋಡೆಗಳಿವೆ. ನಡುವೆ ಗಾಳಿ ಆಡಲೆಂದು ಕೆಲವಂಗುಲಗಳ ಎಡೆ ಬಿಟ್ಟಿದ್ದಾರೋ ಏನೋ ತಿಳಿಯುವಂತಿಲ್ಲ. ಹಾಗೆ ಬಿಡುವ ವಾಡಿಕೆಯೇನೋ ಇದೆ. ಆ ಎಡೆಯನ್ನು 'ಅಂತರ್ಮಂಡಲ'ವೆಂದು ಕರೆಯುತ್ತಾರೆ. ಎರಡೂ ಗೋಡೆಗಳನ್ನು ಕೂಡಿಸಿದರೆ ಏಳು ಅಡಿ ಎರಡು ಅಂಗುಲ

ದಪ್ಪವಾಗುತ್ತದೆ! ಇಷ್ಟು ಸುಭದ್ರವಾದ ಗರ್ಭಗುಡಿಯನ್ನು ಬೇರೆಲ್ಲಿಯೂ ಕಾಣಲಾರೆವು. ಗರ್ಭಗುಡಿಯ ಮೇಲಿರುವ 'ಆನಂದನಿಲಯ'ವಿಮಾನವು ಹೊರಗೋಡೆಯ ಮೇಲೇ ಕುಳಿತಿರುವುದು.

ಮುಕ್ಕೋಟಿ-ಪ್ರದಕ್ಷಿಣೆ

ಗರ್ಭಗುಡಿಯ ಜೋಡಿಗೋಡೆಗಳು ಒಮ್ಮೆಲೆ ಮೂಡಿಕೊಂಡುವಲ್ಲ. ಮೊದಲಿದ್ದುದು ಒಳಗೋಡೆಗಳಷ್ಟೆ. ಇದರ ಸುತ್ತ ಒಂದು ಪ್ರದಕ್ಷಿಣಪಥವಿದ್ದು ಕೊಂಚ ದೂರದಲ್ಲಿ ಮೊದಲ ಪ್ರಾಕಾರವಿದ್ದಿತು. ಆಗ ಗುಡಿಯ ಮೇಲೆ ವಿಮಾನವಿದ್ದಿತೋ ಇಲ್ಲವೋ ಹೇಳಲಾರೆವು, ಬಹುಶಃ ಇದ್ದಿರಲಾರದು. ಆದರೆ ಹದಿಮೂರನೆಯ ಶತಮಾನದಲ್ಲಿ ಗರ್ಭಗುಡಿಯ ಸುತ್ತಮುತ್ತ ಕಟ್ಟಡಗಳು ಎದ್ದುವು. ಮುಂಚಿನ ಸ್ವರೂಪ ಮರೆಯಾಯಿತು, ಮೊದಲಿದ್ದ ಕಟ್ಟಡ ಕೊಂಚಮಟ್ಟಿಗೆ ಘಾಸಿಗೊಳಗಾಯಿತು. ಈ ಕಾಲದಲ್ಲಿ ಮೊದಲ ಪ್ರಾಕಾರವನ್ನು ಕೆಡವಿ ಗರ್ಭಗುಡಿಯ ಗೋಡೆಯ ದಪ್ಪವನ್ನು ಹೆಚ್ಚಿಸಿದರೆಂಬ ಸೂಚನೆಯಿದೆ. ಮೊದಲಿದ್ದ ಗೋಡೆಗಳ ಸುತ್ತ ಮತ್ತೆ ಗೋಡೆಗಳನ್ನು ಕಟ್ಟಿ 'ಕೋಯಿಲ್-ಆಳ್ವಾರಿ'ಗೆ ಇನ್ನೊಂದು 'ಕೋಯಿಲ'ನ್ನು ಸಿದ್ಧಪಡಿಸಿದರು. ಇದೇ, ಶಾಸನದಲ್ಲಿ ಬರುವ 'ಕೋಯಿಲ್-ಆಳ್ವಾರ್‌ಕ್ಕು ಕೋಯಿಲ್'. ಇದು ನಡೆದ ಕಾಲ 1262ರ ಸುಮಾರು ಎಂದು ಊಹೆ.

ಈ ಕಾಲದಲ್ಲಿ ನಡೆದ ಬದಲಾವಣೆಗಳಲ್ಲಿ ಒಳಗಿನ ಪ್ರದಕ್ಷಿಣಪಥಕ್ಕೆ ಸಂಬಂಧಿಸಿದುದು ಮುಖ್ಯವಾದುದು. ಈಗ ಬೆಟ್ಟದ ಗುಡಿಯಲ್ಲಿ ಗರ್ಭಗುಡಿಯ ಸುತ್ತ ನೇರವಾಗಿ 'ಮುಕ್ಕೋಟಿಪ್ರದಕ್ಷಿಣೆ'ಯೆಂಬುದೊಂದಿದೆ ಎಂದು ಬಹುಮಂದಿ ಅರಿಯರು. ಸಾಮಾನ್ಯ ಜನರಿಗೆ ತಿಳಿದಿರುವುದು 'ವಿಮಾನಪ್ರದಕ್ಷಿಣೆ'. ಇದರಲ್ಲಿ ಹೋದರೆ ಗರ್ಭಗುಡಿ, ಮುಖಮಂಡಪ, ರಾಮರ ಮೇಡೆ, ಸ್ನಪನಮಂಡಪ ಮತ್ತು ತಿರುಮಾಮಣಿಮಂಡಪ ಇಷ್ಟನ್ನೂ ಸುತ್ತರಿದು ಬರುತ್ತೇವೆ. ಗರ್ಭಗುಡಿ, ಮುಖಮಂಡಪ ಇಷ್ಟನ್ನೇ ಸುತ್ತರಿದು ಬರುವ ಪ್ರದಕ್ಷಿಣವೊಂದು ಹಿಂದೆ ಇದ್ದಿತು. ಈಗಿನ 'ರಾಮರ ಮೇಡೆ' ಆಗಿನ್ನೂ ಇರಲಿಲ್ಲ. ಗರ್ಭಗುಡಿಯ ಪ್ರದಕ್ಷಿಣ ಪೂರ್ಣವಾಗಿದ್ದಿತು. ಆದರೆ ಹದಿಮೂರನೆಯ ಶತಮಾನದಲ್ಲಿ ಈ ಪ್ರದಕ್ಷಿಣಮಾರ್ಗದ ಮುಂಭಾಗ ಕಟ್ಟಡದೊಳಗೆ ಸೇರಿಹೋಗಿ ('ರಾಮರ ಮೇಡೆ'ಯಾಗಿ), ಪ್ರದಕ್ಷಿಣೆಗೆ ಮೂರು ಕಡೆಗಳು ಮಾತ್ರ ಉಳಿದುವು.

ಬಹುಶಃ ಇದೇ 'ಮುಕ್ಕೋಟಿ-ಪ್ರದಕ್ಷಿಣ' ಎನ್ನುವ ಹೆಸರಿಗೆ ಹಿನ್ನೆಲೆ: ಮೂರು ಕಡೆಗಳಷ್ಟೇ ಇರುವ ಪ್ರದಕ್ಷಿಣ. ಮುಂದೆ ಮುಕ್ಕೋಟಿ-ಏಕಾದಶಿಗೂ ಈ ಪ್ರದಕ್ಷಿಣಕ್ಕೂ ಸಂಬಂಧವನ್ನು ಕಲ್ಪಿಸಿಕೊಂಡು, ಅದನ್ನು 'ಮುಕ್ಕೋಟಿ-ಏಕಾದಶಿ-ಪ್ರದಕ್ಷಿಣ' ಎನ್ನುವುದರ ಸಂಕ್ಷಿಪ್ತರೂಪವೆಂದು ಭಾವಿಸಿದರು. ಈಗಲೂ ಈ ಪ್ರದಕ್ಷಿಣಮಾರ್ಗವನ್ನು ವರ್ಷದಲ್ಲಿ ಮುಕ್ಕೋಟಿ-ಏಕಾದಶಿ ಮತ್ತು ಮರುದಿನವಾದ ಮುಕ್ಕೋಟಿ-ದ್ವಾದಶಿ ಎರಡು ದಿನಗಳು ಮಾತ್ರ ತೆರೆಯುತ್ತಾರೆ. ಆಗ ಭಕ್ತರು ಇಲ್ಲಿ ಪ್ರದಕ್ಷಿಣೆಯನ್ನು ಮಾಡಬಹುದು,

ಗರ್ಭಗುಡಿಯ ಹೊರಗೋಡೆಯನ್ನು ನೋಡಬಹುದು. ಉಳಿದಂತೆ ಈ ಪ್ರದಕ್ಷಿಣ ಮಾರ್ಗಕ್ಕೆ ಹೋಗುವ ಮತ್ತು ಅಲ್ಲಿಂದ ಬರುವ ಬಾಗಿಲುಗಳನ್ನು ಬೀಗಮುದ್ರೆಯಿಂದ ಮುಚ್ಚಿರುತ್ತಾರೆ. ಮುಕ್ಕೋಟಿಪ್ರದಕ್ಷಿಣಕ್ಕೆ ಹೋಗುವುದು, ಅಲ್ಲಿಂದ ಬರುವುದು ಎರಡೂ ವಿಮಾನಪ್ರದಕ್ಷಿಣದಿಂದಲೇ, ತಿರುಮಾಮಣಿಮಂಡಪದ ಹೊರಗಡೆಯಿಂದಲೇ. ಒಳಗಿನ ಯಾವ ಭಾಗದಿಂದಲೂ (ಎಂದರೆ ಸ್ನಪನಮಂಡಪ, ರಾಮರ ಮೇಡೆ, ಮುಖಮಂಡಪ ಈ ಭಾಗಗಳಿಂದ) ಮುಕ್ಕೋಟಿ-ಪ್ರದಕ್ಷಿಣಮಾರ್ಗವನ್ನು ಮುಟ್ಟುವ ಹಾಗಿಲ್ಲ. ಈ ಭಾಗಗಳಿಗೂ ಮುಕ್ಕೋಟಿಪ್ರದಕ್ಷಿಣಕ್ಕೂ ನಡುವೆ ಭಾರಿ ಗೋಡೆಗಳಿವೆ.

ಹೀಗೆ ಒಳಗಿನ ಪ್ರದಕ್ಷಿಣವನ್ನು ಮುಕ್ಕೋಟಿಯಾಗಿಸಿದುದು ಏಕೆಂಬುದು ಬಗೆಹರಿಯದ ಸಮಸ್ಯೆ. ಈಗಿನ 'ರಾಮರ ಮೇಡೆ' ಎನ್ನುವ ಮಂಡಪದ ಆ ಕಡೆ ಈ ಕಡೆ (ಈಗ ಎತ್ತರದ ಕಟ್ಟೆಗಳಿರುವಲ್ಲಿ) ಮೊದಲಿಗೆ ಬಾಗಿಲುಗಳಿದ್ದುವೆಂದೂ ಈ ಬಾಗಿಲುಗಳಿಂದ ಪ್ರದಕ್ಷಿಣಮಾರ್ಗವನ್ನು ಸೇರುವ ಏರ್ಪಾಟು ಇದ್ದಿತೆಂದೂ ತೋರುತ್ತದೆ. ಈಗ ಬಾಗಿಲುಗಳನ್ನು ತೆಗೆದು ಗೋಡೆಗಳನ್ನೆಬ್ಬಿಸಿಬಿಟ್ಟಿದ್ದಾರೆ. ಹೀಗಾಗಿ ಪ್ರದಕ್ಷಿಣೆಗೆ ಒಂದು ಭಾಗ, ದೇವರೆದುರಿನ ಭಾಗ, ಮುಕ್ಕಾಯಿತು. ಮೇಲೆ ಹೇಳಿದಂತೆ ವರ್ಷದ ಎರಡು ದಿನಗಳನ್ನು ಬಿಟ್ಟು ಉಳಿದಂತೆ ಜನರ ಪಾಲಿಗೆ ಈ ಪ್ರದಕ್ಷಿಣಪಥದಲ್ಲಿ ಹೋಗುವ ಅವಕಾಶ ತಪ್ಪಿ ಈಗ್ಗೆ ಸುಮಾರು ಏಳುನೂರು ವರ್ಷಗಳಾಗಿವೆ. ಈಗಿನ ಈ ಪ್ರದಕ್ಷಿಣಪಥವು ಗರ್ಭಗೃಹ, ಮುಖಮಂಡಪ, ರಾಮರ ಮೇಡೆ, ಸ್ನಪನಮಂಡಪ ಇಷ್ಟನ್ನು ಸುತ್ತರಿದು ಬರುತ್ತದೆ.

ಮುಕ್ಕೋಟಿಪ್ರದಕ್ಷಿಣದ ದಕ್ಷಿಣದ ಕಡೆ, ಎಂದರೆ ಪೂರ್ವ-ಪಶ್ಚಿಮವಾಗಿ, ಪ್ರದಕ್ಷಿಣೆ ಮೊದಲುಮಾಡಿ ನಡೆಯುವ ದಾರಿ ಏಳು ಅಡಿ ಅಗಲವಷ್ಟೆ. ಉತ್ತರದ ಕಡೆ, ಪ್ರದಕ್ಷಿಣೆ ಮುಗಿಸಿ ಬರುವಾಗ, ದಾರಿಯ ಅಗಲ ಹದಿನೇಳು ಅಡಿಗಳು! ಪ್ರದಕ್ಷಿಣಪಥವೆಂದರೆ ಎಲ್ಲ ಕಡೆಗಳಲ್ಲಿಯೂ ಒಂದೇ ಅಗಲವಿರುವುದು ವಾಡಿಕೆಯಲ್ಲವೆ? ಇಲ್ಲಿ ದೇವರ ಎಡಪಕ್ಕದ ದಾರಿಯ ಅಗಲ ಬಲಪಕ್ಕದ ದಾರಿಯದಕ್ಕಿಂತ ಎರಡರಷ್ಟು ಮೀರಿ ಹೆಚ್ಚಾಗಿರುವುದು ಏಕೆ? ದಕ್ಷಿಣದ ದಾರಿಯಲ್ಲಿ (ಎಂದರೆ, ದೇವರ ಬಲಗಡೆ) ಸಾಲಾಗಿ ಆರು ಕಂಬಗಳಿವೆ; ಪಶ್ಚಿಮ ದಿಕ್ಕಿನಲ್ಲಿ (ಎಂದರೆ, ದೇವರ ಹಿಂಭಾಗದಲ್ಲಿ) ನಾಲ್ಕು ಕಂಬಗಳು; ಉತ್ತರದ ಕಡೆ (ಎಂದರೆ, ದೇವರ ಎಡಗಡೆ) ಕಂಬಗಳ ಸಾಲು ಎರಡಿದ್ದು, ಒಂದೊಂದು ಸಾಲಿನಲ್ಲಿಯೂ ಏಳೇಳು ಕಂಬಗಳಿವೆ. ಈ ಪ್ರದಕ್ಷಿಣೆಯ ದಾರಿ ಉತ್ತರದಿಕ್ಕಿನಲ್ಲಿ (ದೇವರ ಎಡಗಡೆ) ಹೆಚ್ಚು ಅಗಲವಾಗಿರುವುದು ಮಾತ್ರವಲ್ಲ, ಅದರ ಉದ್ದವೂ ಹೆಚ್ಚಾಗಿದೆ. ದಕ್ಷಿಣದಿಕ್ಕಿನ ದಾರಿ ಸುಮಾರು ಎಪ್ಪತ್ತು ಅಡಿಗಳಷ್ಟಾದರೆ, ಉತ್ತರದ್ದು ತೊಂಬತ್ತೆರಡು ಅಡಿ ಆರು ಅಂಗುಲಗಳಷ್ಟು ಉದ್ದವಿದೆ. ದಾರಿಯನ್ನು ಒಳಮಾಡಿರುವ ಪ್ರಾಕಾರವೂ ಇಷ್ಟುದ್ದ ಮುಂಚಾಚಿರುವುದನ್ನು ವಿಮಾನಪ್ರದಕ್ಷಿಣೆಯಿಂದಲೇ ಗಮನಿಸಬಹುದು. ಮುಕ್ಕೋಟಿಪ್ರದಕ್ಷಿಣೆಯನ್ನು ಮೊದಲು ಮಾಡುವುದು ತಿರುಮಾಮಣಿಮಂಡಪ ಮೊದಲಾಗುವಲ್ಲಿ; ಪ್ರದಕ್ಷಿಣೆಯನ್ನು ಮುಗಿಸಿ ಹೊರಬರುವುದು ತಿರುಮಾಮಣಿಮಂಡಪದ ಅರ್ಧಭಾಗ ಕಳೆದಮೇಲೆ. ಈ ಕಡೆ

ಪ್ರಾಕಾರಗೋಡೆಯ ಮೇಲೆ ಕೃಷ್ಣದೇವರಾಯ-ಮಹಾರಾಯನ, ಅವನ ಅರಸಿಯರ ಕೊಡುಗೆಗಳನ್ನು ತಿಳಿಯಪಡಿಸುವ ಶಾಸನಗಳಿವೆ. ಈ ಶಾಸನಗಳನ್ನು ಮೂಡಿಸಲೆಂದೇ ಗೋಡೆಯನ್ನು ಮುಂದುವರೆಸಿದ್ದಾರೆಂದು ತೋರುತ್ತದೆ.

ವಿಷ್ವಕ್ಸೇನನ ಸನ್ನಿಧಿ

ಮುಕ್ಕೋಟಿಪ್ರದಕ್ಷಿಣದ ಉತ್ತರಭಾಗದಲ್ಲಿ (ಒಳಗಡೆ ಮುಖಮಂಡಪ ಮುಗಿದು ರಾಮರ ಮೇಡೆ ಮೊದಲಾಗುವುದಕ್ಕೆ ನೇರವಾಗಿ) ವಿಷ್ವಕ್ಸೇನನ ಸನ್ನಿಧಿಯಿದೆ. ವಿಷ್ವಕ್ಸೇನನು ಗುರುಪರಂಪರೆಯಲ್ಲಿ ವಿಷ್ಣು, ಲಕ್ಷ್ಮಿ ಆದಮೇಲೆ ಮೂರನೆಯ ಆಚಾರ್ಯ; ವೈಕುಂಠದ ವೈಷ್ಣವಸೇನೆಯ ನಾಯಕ (ತಮಿಳಿನಲ್ಲಿ ಸೇನೈ-ಮುದಲಿಯಾರ್). ಶೈವರಿಗೆ ಚಂಡಿಕೇಶ್ವರನೂ ಗಣಪತಿಯೂ ಹೇಗೋ ಶ್ರೀವೈಷ್ಣವರಿಗೆ ವಿಷ್ವಕ್ಸೇನನು ಹಾಗೆ. ಅವನನ್ನು ಮೊದಲುಮಾಡಿಕೊಂಡೇ ವಿಷ್ಣುಪೂಜೆಗೆ ತೊಡಗಬೇಕೆಂಬ ಕಟ್ಟಳೆಯಿದೆ. ಉತ್ಸವರ ಬಳಿ ವಿಷ್ವಕ್ಸೇನನ ಸ್ಥಾನವಿರುತ್ತದೆ.

ಈ ದೇವತೆಯ ಹಿನ್ನೆಲೆಯ ಕಥೆ ಹೀಗೆ. ದುರ್ವಾಸಋಷಿಯ ತಪಸ್ಸನ್ನು ಕೆಡಿಸಲು ಇಂದ್ರನು ಕುಂತಲೆಯೆಂಬ ಅಪ್ಸರೆಯನ್ನು ಕಳುಹಿಸಿದ; ದುರ್ವಾಸನು ಆಕೆ ಕಿರಾತಿಯಾಗಿ ಭೂಮಿಯ ಮೇಲೆ ಹುಟ್ಟಿ ಕಾಡುಮೇಡುಗಳಲ್ಲಿ ಅಲೆದಾಡೆಂದು ಶಪಿಸಿದ. ಕುಂತಲೆ ವೀರಬಾಹುವೆಂಬ ಕಿರಾತನ ಮಗಳಾಗಿ ಹುಟ್ಟಿದಳು, ಅವಳ ಹೆಸರು ಸುವರ್ಚಲೆಯೆಂದಾಯಿತು. ಧರ್ಮಪುತ್ರನನ್ನು ಆಕೆ ಮದುವೆಯಾದಮೇಲೆ ವರುಣನು ಅವಳನ್ನು ಮೋಹಿಸಿ ವರವನ್ನು ಬೇಡುವಂತೆ ಹೇಳಲು, ಸುವರ್ಚಲೆ ತನಗೆ ಧೀರೋದಾತ್ತಗುಣಗಳಿಂದ ಕೂಡಿದ ಮಗನಾಗುವಂತೆ ಕೇಳಿಕೊಂಡಳು. ಹಾಗೆ ಹುಟ್ಟಿದವನು ವಿಷ್ವಕ್ಸೇನ. ಬಂಗಾರದಂಥ ಮೈ ಹೊಳಪು, ಹರಡಿದ ಕಣ್ಣುಗಳು, ಹುಟ್ಟುವಾಗಲೇ ಕೈಗಳಲ್ಲಿ ಶಂಖ, ಖಡ್ಗ ಮತ್ತು ಧನುಸ್ಸುಗಳ ಚಿಹ್ನೆ—ಮುಂದೆ ಸೇನಾನಿಯಾಗುವುದರ ಸಂಕೇತವಾಗಿ. ಅವನು ಹುಟ್ಟಿದ ಹತ್ತು ತಿಂಗಳುಗಳಲ್ಲಿ ತಾಯಿ ತೀರಿಕೊಂಡಳು, ತಂದೆ ಧರ್ಮಪುತ್ರನೂ ಈ ಮಗನನ್ನು ಬಿಟ್ಟ. ವಿಷ್ವಕ್ಸೇನನನ್ನು ಕಶ್ಯಪ ಋಷಿ ಬೆಳೆಸಿ ವೇದವನ್ನೂ ಮಂತ್ರಶಾಸ್ತ್ರವನ್ನೂ ಕಲಿಸಿದ. ಅನಂತರ ವಿಷ್ವಕ್ಸೇನನು ವೃಷಭಾದ್ರಿಗೆ ಬಂದು ಹನ್ನೆರಡು ವರ್ಷ ತಪಸ್ಸು ಮಾಡಿ, ಶ್ರೀನಿವಾಸನನ್ನು ಒಲಿಸಿಕೊಂಡು ಅವನಿಂದ ಸೈನಾಪತ್ಯವನ್ನು ಪಡೆದು, ನಾರಾಯಣಾದ್ರಿಯಲ್ಲೇ ಗಂಧರ್ವರೊಂದಿಗೂ ಭೂತಗಣಗಳೊಂದಿಗೂ ನೆಲೆಸಿದ—ಇದು ಕಥೆ.

ಆದರೆ ವೈಖಾನಸಪೂಜಾಪದ್ಧತಿಯಲ್ಲಿ ವಿಷ್ವಕ್ಸೇನನಿಗೆ ಅಷ್ಟಾಗಿ ಹಿರಿಮೆಯಿರದು. ಮುಕ್ಕೋಟಿಪ್ರದಕ್ಷಿಣದ ಉತ್ತರಭಾಗದಲ್ಲಿ ಈ ವಿಷ್ವಕ್ಸೇನನ ಸನ್ನಿಧಿ ಯಾವಾಗ ಹೇಗೆ ಮೂಡಿಕೊಂಡು ಬಂದಿತೋ ತಿಳಿಯದು. ಕ್ರಿಸ್ತಾಬ್ದ 1491ರಲ್ಲಿ ಸಿದ್ಧವಾದ ಒಂದು ಶಾಸನ ಈ ಸನ್ನಿಧಿಯನ್ನು ಪ್ರಸ್ತಾಪಿಸುತ್ತದೆ. ಎಂದರೆ ಆ ವೇಳೆಗೆ ಗುಡಿ ಇದ್ದಿರಬೇಕು. ಅದಕ್ಕೆ ಮೊದಲು ಎಷ್ಟು ಹಿಂದಿನಿಂದ ಇದ್ದಿತೋ ಹೇಳಲಾರೆವು. ಇದಿರುವ ಸ್ಥಳವನ್ನು



ವಿಷ್ವಕ್ಸೇನ

ನೋಡಿದರೆ ಮುಕ್ಕೋಟಿಪ್ರದಕ್ಷಿಣವನ್ನು ಮುಚ್ಚಿದಮೇಲೆ ಈ ಗುಡಿಯನ್ನು ಕಟ್ಟಿರ ಬೇಕೆನಿಸುತ್ತದೆ. ವಿಷ್ವಕ್ಸೇನನ ಗುಡಿಗಾಗಿ ಈ ಪ್ರದಕ್ಷಿಣದ ಉತ್ತರಭಾಗದ ಅಗಲ ಹೆಚ್ಚಬೇಕಾಯಿತು ಎನ್ನುವುದು ಸರಿಯಲ್ಲ. ಈ ಭಾಗದ ಹರವು ಹೆಚ್ಚಾಗಲು ಕಾರಣ ಬೇರೆಯಿರಬೇಕು. ಮುಕ್ಕೋಟಿಪ್ರದಕ್ಷಿಣವನ್ನು ಸಿದ್ಧಪಡಿಸುವಾಗ ಗುಡಿಯಲ್ಲಿ ಕಲ್ಯಾಣ ಮಂಡಪವೇ ಮೊದಲಾದ ಮಂಡಪಗಳಿರಲಿಲ್ಲ. ಸ್ನಪನಮಂಡಪವೇನೋ ಇದ್ದಿತು; ಆದರೆ ಅದು ಸ್ನಪನಕ್ಕೆಂದೇ ನಿರ್ದಿಷ್ಟವಾದ ಸ್ಥಳ, ಮೇಲಾಗಿ ಸಣ್ಣದು. ಉತ್ಸವ

ಮೂರ್ತಿಯನ್ನು ಗರ್ಭಗುಡಿಯ ಹೊರಗೆ ಬಿಜಯಮಾಡಿಸಿ ಆಸ್ಥಾನವನ್ನು ನಡೆಸಲು, ಭಕ್ತರ ಕೈಂಕರ್ಯಗಳನ್ನು ಸಲ್ಲಿಸಲು ಅನುಕೂಲವಾಗುವಂತೆ ಈ ಭಾಗ ವಿಸ್ತಾರವಾಯಿತೆಂದು ತೋರುತ್ತದೆ.

'ಆನಂದನಿಲಯ'-ವಿಮಾನ

ಬೆಟ್ಟದ ಗುಡಿಯಲ್ಲಿ ಈಗ ಎಲ್ಲರ ಮನಸ್ಸನ್ನೂ ಗಮನವನ್ನೂ ಆದರವನ್ನೂ ಸೆಳೆಯುವುದು ಗರ್ಭಗುಡಿಯ ಮೇಲೆ ಕಂಗೊಳಿಸುವ ಬಂಗಾರವಿಮಾನ. ಗಾರೆಗಚ್ಚಿನ ವಿಮಾನಕ್ಕೆ ತಾಮ್ರದ ತಗಡುಗಳನ್ನು ಅಳವಡಿಸಿ ಹೊದಿಸಿ, ಅದಕ್ಕೆ ಬಂಗಾರದ ಮೆರುಗನ್ನು ಹೊಂದಿಸಿ ಮೆರೆಸಿರುವ ವಿಮಾನ ಇದು. ಇದಕ್ಕೆ 'ಆನಂದನಿಲಯ'ವೆಂದು ಹೆಸರು. ಇದು ವೈಕುಂಠದಿಂದಲೇ ಬಂದದ್ದೆಂದೂ, ತೋಂಡಮಾನ-ರಾಜನು ಏರ್ಪಡಿಸಿದುದೆಂದೂ ಬೇರೆಬೇರೆ ಕಲ್ಪನೆಗಳಿವೆ. ಗುಡಿಯ ಕಟ್ಟಡದಲ್ಲಿ ವಿಮಾನ ಸೇರಿಬಂದುದು ಯಾವಾಗ ಎಂಬುದು ಖಚಿತವಾಗಿ ತಿಳಿಯುವುದಿಲ್ಲ. ಹದಿಮೂರನೆಯ ಶತಮಾನದಲ್ಲಿ ಗರ್ಭಗುಡಿಯ ಹೊರ ಗೋಡೆಗಳನ್ನು ಕಟ್ಟಿಸಿದನಂತರವೇ ಇದು ಸಿದ್ಧವಾಯಿತೆಂದು ಕಾಣುತ್ತದೆ; ವಿಮಾನವು ಹೊರಗೋಡೆಯ ಮೇಲೇ ನಿಂತಿರುವುದು. ಮೊದಲಿಗೆ ಒಂದು ವಿಮಾನವು ಇದ್ದಿತೋ ಏನೋ ಹೇಳಲಾಗುವುದಿಲ್ಲ. ಈ ವಿಮಾನದ ಮೊದಲ ಪ್ರಸ್ತಾಪ ಬರುವುದು ತೋಂಡಮಂಡಲವನ್ನಾಳಿದ ವೀರನರಸಿಂಗದೇವ ಯಾದವರಾಯನ ಕಾಲದ ಶಾಸನವೊಂದರಲ್ಲಿ; ವೇಂಕಟಗಿರಿಯನ್ನು ಸುರಗಿರಿಯನ್ನಾಗಿಸಿದ ಅವನ ಆಳ್ವಿಕೆಯ ಕಾಲ ಕ್ರಿಸ್ತಾಬ್ದ 1205ರಿಂದ 1262ರವರೆಗೆ. ಅವನು ತನ್ನ ತುಲಾಭಾರದಿಂದ ಬಂದ ಬಂಗಾರವನ್ನು ಬಳಸಿ ಆನಂದನಿಲಯ ವಿಮಾನಕ್ಕೆ ಬಂಗಾರದ ತಗಡುಗಳನ್ನು ಹೊದಿಸಿದನು. ಆಗಲೇ ಜಟಾವರ್ಮ-ಸುಂದರಪಾಂಡ್ಯನು (ಆಳ್ವಿಕೆ 1251-1275) ಅದರ ಮೇಲೆ ಬಂಗಾರದ ಕಳಶವನ್ನು ಮೂಡಿಸಿದನು. ಇದು 1260ರ ಮಾತು.

ಮುಂದೆ ಕುಮಾರ-ಕಂಪಣ-ಉಡೈಯಾರ ಸೇನಾನಿಯಾಗಿದ್ದ ಸಾಳುವ ಮಂಗಿದೇವ ಮಹಾರಾಜನು ತಿರುವೇಂಗಳನಾಥನ ಗುಡಿಯ ವಿಮಾನದ ಮೇಲೆ ಬಂಗಾರದ ಶಿಖರವನ್ನು ಏರ್ಪಡಿಸಿದ ಶಾಸನವಿದೆ; ಇದು 1359ರದ್ದು. ಅನಂತರ ಇಮ್ಮಡಿ ದೇವರಾಯನ ಮಂತ್ರಿ ಅಮಾತ್ಯಶೇಖರ ಮಲ್ಲಣನು ಚಂದ್ರಗಿರಿ ರಾಜ್ಯವನ್ನಾಳುತ್ತಿದ್ದಾಗ ತಿರುಮಲಮಂಟಪವನ್ನು ಕಟ್ಟಿಸಿದ್ದಲ್ಲದೆ ಆನಂದನಿಲಯವಿಮಾನದ ಜೀರ್ಣೋದ್ಧಾರ ಕೆಲಸವನ್ನೂ 1417ರಲ್ಲಿ ಕೈಗೊಂಡನು. ಅತಿಮುಖ್ಯವಾದ ಸೇವೆಯೆಂದರೆ ವಿಜಯನಗರದ ಅರಸ ಕೃಷ್ಣದೇವರಾಯಮಹಾರಾಯನದು. ಅವನು 1517ರಲ್ಲಿ ಕಳಿಂಗದ ಜೈತ್ರಯಾತ್ರೆಯಲ್ಲಿ ವಿಜಯಿಯಾಗಿ ಹಿಂದಿರುಗಿದಾಗ, ಆನಂದನಿಲಯವಿಮಾನಕ್ಕೆ ಬಂಗಾರದ ಮುಲಾಮನ್ನು ಮೂಡಿಸಲು 30,000 ಬಂಗಾರದ ವರಹಗಳನ್ನು ದಾನಮಾಡುತ್ತಾನೆ. ಈ ಕೈಂಕರ್ಯ ಮುಗಿದದ್ದು 1518ರಲ್ಲಿ (ಒಂಬತ್ತನೆಯ ತಿಂಗಳ

ಒಂಬತ್ತನೆಯ ದಿನ). ಒಂದನೆಯ ವೇಂಕಟರಾಜ ಆಳುತ್ತಿದ್ದಾಗ ಕಂಚಿಯ ಕೋಟಿ ಕನ್ಯಾದಾನಂ ತಾತಾಚಾರ್ಯರು 1630ರಲ್ಲಿ ಈ ವಿಮಾನದ ಬಂಗಾರದ ಹೊದಿಕೆಯ ಜೀರ್ಣೋದ್ಧಾರದ ಕೆಲಸವನ್ನು ನೆರವೇರಿಸಿದರು. ಇದೇ ಕೆಲಸವನ್ನು ಮಹಂತ ಪ್ರಯಾಗದಾಸನ ಅಧಿಕಾರಿ ರಾಮಕೃಷ್ಣದಾಸನೆಂಬುವನು 1908ರಲ್ಲಿ ಕೈಗೊಂಡನು.



ಆನಂದನಿಲಯ


ಈ ವಿಮಾನವು 'ವೇಸರ'ವೆಂಬ ಪ್ರಕಾರಕ್ಕೆ ಸೇರಿದ್ದು; 'ದ್ವಿತಲ' ಜಾತಿಯದು. ಎರಡು ತಲಗಳ ಮೇಲೆ ವಿಮಾನದ ಅಂಡವು ಏಳುತ್ತದೆ. ವಿಮಾನದ ಅಧಿಷ್ಠಾನವು ಇಪ್ಪತ್ತೇಳು ಅಡಿ ನಾಲ್ಕು ಅಂಗುಲ ಚಚ್ಚೌಕದ ಮೇಲೆ ನಿಂತಿದ್ದು, ಕಳಶವೂ ಸೇರಿ ಮೂವತ್ತೇಳು ಅಡಿ ಎಂಟು ಅಂಗುಲಗಳಷ್ಟು ಎತ್ತರವಿದೆ. ಎರಡು ತಲಗಳೂ ಚತುರಸ್ರ ಆಯತಾಕಾರವಾಗಿದೆ; ಮೇಲ್ಭಾಗದ 'ಗಲ' (ಎಂದರೆ, ಕತ್ತು) ವೃತ್ತಾಕಾರವಾದುದು. ತಲಗಳಲ್ಲಿ ಕೂಟ, ಪಂಜರ, ಶಾಲ, ಪಂಜರ, ಕೂಟ ಈ ಕ್ರಮ ಕಾಣುತ್ತದೆ. ಕೆಳಗಿನ ತಲದಲ್ಲಿ ವೈಖಾನಸಸಂಪ್ರದಾಯದ ಪುರುಷ, ಸತ್ಯ, ಅಚ್ಯುತ, ಅನಿರುದ್ಧ ಎಂಬ ನಾಲ್ಕು ಪ್ರಕಾರಗಳೂ, ಮೇಲಿನ ತಲದಲ್ಲಿ ಆಂಜನೇಯ, ಗರುಡ, ಋಷಿಗಳು ಮೊದಲಾಗಿ ನಲವತ್ತು ಮೂರ್ತಿಗಳೂ ಅದರ ಮೇಲಿನ ಭಾಗದಲ್ಲಿ ಹತ್ತೊಂಬತ್ತು ಮೂರ್ತಿಗಳೂ ಅಡಕವಾಗಿವೆ. ಎರಡನೆಯ ತಲದ ಮೂಲೆಗಳಲ್ಲಿ ಸಿಂಹಗಳನ್ನು ನಿಲ್ಲಿಸಿದ್ದಾರೆ. ಮೇಲಿನ 'ಗಲ'ದಲ್ಲಿ ಶಾಲಕೋಷ್ಠಗಳಿದ್ದು ಉನ್ನತವಾದ ಸಿಂಹಲಲಾಟ ಗಳಿಂದ ಅಲಂಕೃತವಾಗಿವೆ. ಶಿಖರಭಾಗ ಅಂಡಾಕಾರವಾಗಿದ್ದು ಅದರ ಮೇಲೆಲ್ಲ ಕಮಲದಳವಿನ್ಯಾಸವಿದೆ.

ವಿಮಾನಪ್ರದಕ್ಷಿಣೆ ಬರುವಾಗ ಉತ್ತರದಿಕ್ಕಿನಲ್ಲಿ ಕಾಣುವ ವಿಮಾನದ ಮೇಲೆ ಇರುವ ಶ್ರೀನಿವಾಸನನ್ನು ವ್ಯಾಸರಾಯಸ್ವಾಮಿಗಳು ಪೂಜಿಸುತ್ತಿದ್ದರು. ಈಗಲೂ ಯಾತ್ರಿಕರು ವಿಮಾನಶ್ರೀನಿವಾಸನ ದರ್ಶನ ಮಾಡುವ ವಾಡಿಕೆಯಿದೆ.


ಇತ್ತೀಚೆಗೆ ವಿಮಾನದ ಕನಕ-ಕವಚದ ಜೀರ್ಣೋದ್ಧಾರ 1957-1958ರಲ್ಲಿ ಜರುಗಿತು. ಅದಕ್ಕೆ ಪೂರ್ವಭಾವಿಯಾಗಿ 'ಬಾಲಾಲಯ'ವಿಧಿಯು 1957ರ ಅಕ್ಟೋಬರ್ 25ರಂದು ಮೊದಲಾಗಿ ಅದೇ ವರ್ಷದ ನವೆಂಬರ್ ಮೊದಲ ದಿನ ಮುಗಿಯಿತು. ಆಮೇಲೆ ಕವಚವನ್ನು ತೆಗೆದು, ಸರಿಪಡಿಸಿ, ಮತ್ತೆ ಬಂಗಾರದ ಮೆರುಗನ್ನು ಹಾಕಿದ ಮೇಲೆ 1958ರ ಆಗಸ್ಟ್ 27ರಂದು ಮಹಾಸಂಪ್ರೋಕ್ಷಣೆ ನಡೆಯಿತು. ಈ ಕೆಲಸಕ್ಕೆ ಬೇಕಾದ ತಾಮ್ರದ ತಗಡುಗಳ ವೆಚ್ಚ 57,375 ರೂಪಾಯಿಗಳೆಂದೂ ಬಂಗಾರದ ತೂಕ 12,020 ತೊಲಗಳೆಂದೂ ವರದಿಯಿದೆ.

ವರಾಹಸ್ವಾಮಿಯ ಗುಡಿ


ವೇಂಗಡದೊಡೆಯನ ಗುಡಿಯ ಎಡಭಾಗದಲ್ಲಿ ಮುಂದೆ ಸ್ವಾಮಿಪುಷ್ಕರಿಣಿಯೆನಿಸಿ ಕೊಳ್ಳುವ ಕೊಳವಿದೆ. ದಿಟವಾಗಿ ಇದು ಎರಡು ಕೊಳಗಳು ಸೇರಿ ಆಗಿರುವ ಕೊಳ; ನಡುವಣ ಗಡಿಯನ್ನು ಈಗಲೂ ಗುರುತಿಸಬಹುದು. ಗುಡಿಯ ಕಡೆ ಇರುವ ಕೊಳ 'ಶ್ರೀನಿವಾಸತೀರ್ಥ', ಅದರಾಚೆಗಿರುವುದು 'ವರಾಹತೀರ್ಥ'. 'ವರಾಹತೀರ್ಥ'ವೆಂಬ ಹೆಸರು ಬರಲು ಕಾರಣ ಆ ಭಾಗದಲ್ಲಿ ಕೊಳದ ದಂಡೆಯ ಮೇಲೆ ವರಾಹಸ್ವಾಮಿಯ ಗುಡಿಯಿರುವುದು. ಸಣ್ಣದೊಂದು ಗುಡಿ ಪೂರ್ವದಿಕ್ಕಿಗೆ ಮುಖಮಾಡಿ ನಿಂತಿದೆ. ಅದರಲ್ಲಿ ಭೂದೇವಿಯನ್ನು ಎರಡೂ ಕೈಗಳಲ್ಲಿ ಎತ್ತಿಹಿಡಿದು ಎಡಗಾಲನ್ನು ಬಗ್ಗಿಸಿ




ಗರ್ಭಗುಡಿಯ ಹೊರಗೋಡೆಯಲ್ಲಿ (ಉತ್ತರದ ಕಡೆ) ಕಾಣುವ ತೋರಣಪಂಜರ;
ಎತ್ತರ—ಏಳು ಅಡಿ ನಾಲ್ಕು ಅಂಗುಲ




ಗರ್ಭಗುಡಿಯ ದಕ್ಷಿಣಭಾಗದಲ್ಲಿ ಅಧಿಷ್ಠಾನ (ಮುಖಮಂಡಪದ ದಕ್ಷಿಣಗೋಡೆ)




ಗರ್ಭಗುಡಿಯ ವೈಕುಂಠದ್ವಾರ-ಅಧಿಷ್ಠಾನ; ಎತ್ತರ ಮೂರು ಅಡಿ ಎಂಟು ಅಂಗುಲ



ಮುಕ್ಕೋಟಿಪ್ರದಕ್ಷಿಣದಲ್ಲಿ ಕಾಣುವ ಕುಂಭಪಂಜರ



ಗರ್ಭಗುಡಿಯ ಹೊರಗೋಡೆಯಮೇಲೆ ಉತ್ತರಭಾಗದಲ್ಲಿರುವ ಕುಂಭಪಂಜರ;
ಎತ್ತರ—ಏಳು ಅಡಿ ನಾಲ್ಕು ಅಂಗುಲ



ಮುಕ್ಕೋಟಿಪ್ರದಕ್ಷಿಣದಲ್ಲಿ ಗರ್ಭಗುಡಿಯ ಅಧಿಷ್ಠಾನ


ಬಲಗಾಲ ಮೇಲೆ ನಿಂತ ಆದಿವರಾಹಸ್ವಾಮಿಯ ಶಿಲಾಮೂರ್ತಿಯಿದೆ; ಅಡಿಯ ಭಾಗ ಭೂಮಿಯಲ್ಲಿ ಹುದುಗಿದೆ. ಬೆಟ್ಟಕ್ಕೆ ಬಂದವರು ಮೊದಲು ವರಾಹಸ್ವಾಮಿಯ ದರ್ಶನ ಮಾಡಿ ಅನಂತರವೇ ಗುಡಿಗೆ ಹೋಗಬೇಕೆಂಬ ಕಟ್ಟಳೆ ಮಹಂತರ ಕಾಲದಿಂದಲೂ ಬಂದಿದೆ. ಅದಕ್ಕೆ ಅನುಗುಣವಾಗಿ ಕಥೆಯೊಂದು ಬಳಕೆಯಲ್ಲಿದೆ. ಮೊದಲಿಗೆ ಬೆಟ್ಟ ವರಾಹಸ್ವಾಮಿಯದೇ; ವೈವಸ್ವತಮನ್ವಂತರದ ಮೊದಲಲ್ಲೇ ಶ್ವೇತವರಾಹಕಲ್ಪ ಶುರುವಾದಾಗ ವರಾಹಸ್ವಾಮಿಯು ಈ ಬೆಟ್ಟವನ್ನು ಆಕ್ರಮಿಸಿಕೊಂಡ. ಶ್ರೀನಿವಾಸನು ವೈಕುಂಠವನ್ನು ಬಿಟ್ಟು ಭೂಮಿಯ ಮೇಲೆ ನೆಲೆಗಾಣದೆ ಅಲೆದಾಡುತ್ತಿದ್ದಾಗ, ಕಾರಣಾಂತರದಿಂದ ಗಾಯಗೊಂಡು ಔಷಧಮೂಲಿಕೆಗಳನ್ನು ಹುಡುಕುತ್ತಿದ್ದಾಗ ವರಾಹ ಸ್ವಾಮಿಯು ಅವನಿಗೆ ನೂರುಹೆಜ್ಜೆ ಭೂಮಿಯನ್ನು ಬಿಟ್ಟುಕೊಟ್ಟು ಅಲ್ಲಿಯೇ ನೆಲೆಸುವಂತೆ ಅನುಕೂಲ ಮಾಡಿಕೊಟ್ಟ. ಕಲಿಯುಗದಲ್ಲಿ ವೇಂಗಡದೊಡೆಯನೇ ಪ್ರತ್ಯಕ್ಷದೈವವಾದಾಗ ಅವನು, "ನನ್ನನ್ನು ನೋಡಲು ಬರುವ ಭಕ್ತರು ಮೊದಲು ನಿನ್ನ ದರ್ಶನ ಮಾಡಿ ಬರಲಿ" ಎಂದು ವರಾಹಸ್ವಾಮಿಗೆ ಕೃತಜ್ಞತೆಯ ಕಾಣಿಕೆಯನ್ನು ಸಲ್ಲಿಸಿದನಂತೆ—



ವರಾಹಸ್ವಾಮಿ

ಭವಿಷ್ಯೋತ್ತರಪುರಾಣದಲ್ಲಿ ಬರುವ ಕಥೆಯಿದು. ಈ ಕಥೆಯ ಇನ್ನೊಂದು ರೂಪದಲ್ಲಿ, ವರಾಹಸ್ವಾಮಿಯು ಬೇಟೆಯಾಡಲು ಎಲ್ಲೋ ಹೋಗಿದ್ದಾಗ, ಶ್ರೀನಿವಾಸನು ಬಂದು ಆ ಸ್ಥಳವನ್ನಾಕ್ರಮಿಸಿಕೊಳ್ಳುತ್ತಾನೆ; ಹಿಂದಿರುಗಿ ಬಂದ ವರಾಹನನ್ನು ಬೆದರಿಸಿ ಓಡಿಸುತ್ತಾನೆ; ಅನಂತರ ಅವನ ಮೇಲೆ ಮರುಕಗೊಂಡು ಸ್ವಾಮಿಪುಷ್ಕರಿಣೀಕೊಳದ ಪಶ್ಚಿಮ ದಂಡೆಯ ಮೇಲೆ ವಾಸಮಾಡಲು ಅವಕಾಶಮಾಡಿಕೊಟ್ಟು, ತನ್ನ ದರ್ಶನಕ್ಕೆ ಬರುವ ಭಕ್ತರು ವರಾಹಸ್ವಾಮಿಯನ್ನು ಕಂಡು ಬರಬೇಕೆಂಬ ಕಟ್ಟಳೆ ಏರ್ಪಡಿಸುತ್ತಾನೆ.

ವರಾಹಪುರಾಣವು ಶೇಷಾಚಲದಲ್ಲಿ ಶ್ರೀನಿವಾಸನು ಬರುವ ಮೊದಲು ವರಾಹ ಸ್ವಾಮಿಯೇ ನೆಲೆಗೊಂಡಿದ್ದನೆಂದು ಹೇಳುತ್ತದೆ. ಬೆಟ್ಟವು ಈಗಲೂ 'ವರಾಹಕ್ಷೇತ್ರ'ವೆಂದೇ ಹೆಸರಾಗಿದೆ. ಅಲ್ಲಿ ಸಂಕಲ್ಪಮಾಡುವಾಗ 'ವರಾಹಕ್ಷೇತ್ರೇ ಆನಂದನಿಲಯವಿಮಾನ-ಚ್ಛಾಯಾಯಾಂ' ಎಂದು ಹೇಳುವ ವಾಡಿಕೆಯನ್ನು ಹಿಂದೊಮ್ಮೆ ಉಲ್ಲೇಖಿಸಿದ್ದೇವಷ್ಟೆ. ಬ್ರಹ್ಮನೇ ಯುಗಾರಂಭದಲ್ಲಿ ಸ್ವಾಮಿಪುಷ್ಕರಿಣೀತೀರ್ಥದ ದಂಡೆಯ ಮೇಲೆ ವರಾಹ ಸ್ವಾಮಿಯನ್ನು ಪ್ರತಿಷ್ಠೆಮಾಡಿದನಂತೆ. ಕಾಲಕ್ರಮದಲ್ಲಿ ಈ ವರಾಹಸ್ವಾಮಿಯ ಸನ್ನಿಧಿಯು ಜನರ ಅರಿವಿನಿಂದ ಮರೆಯಾಯಿತು. ಬೆಟ್ಟದ ಮೇಲೆ ನಿಷಾದನೊಬ್ಬನು ಶ್ಯಾಮಾಕಧಾನ್ಯದ ಬೆಳೆಯನ್ನು ಅದೇ ಸ್ಥಳದಲ್ಲಿ ತೆಗೆಯುತ್ತಿದ್ದ. ಒಂದು ದಿನ ಬಿಳಿಯ ವರಾಹವು ಬೆಳೆಯನ್ನು ತಿನ್ನುತ್ತಿದ್ದುದನ್ನು ಕಂಡು ಅದನ್ನಟ್ಟಿಸಿಕೊಂಡು ಹೋಗಲು ಅದು ಹುತ್ತವೊಂದರಲ್ಲಿ ಮರೆಯಾಯಿತು. ಮುಂದೆ ಅಲ್ಲಿಯೇ ವರಾಹಸ್ವಾಮಿಯ ಆಲಯ ವನ್ನು ಕಟ್ಟಿದರೆಂದು ವಾಮನಪುರಾಣದ ಕಥೆ.



ವರಾಹಸ್ವಾಮಿ-ಆಲಯ

ಹೀಗೆ ಪುರಾಣಗಳಲ್ಲಿ ವರಾಹಸ್ವಾಮಿಯ ಗುಡಿಯ ಉಲ್ಲೇಖ ಬಂದರೂ, ಸ್ಥಳದ ಶಾಸನಗಳಲ್ಲಿ ಮೊತ್ತಮೊದಲ ಬಾರಿಗೆ ಅದು ನಮ್ಮ ಗಮನಕ್ಕೆ ಬರುವುದು ಕ್ರಿಸ್ತಾಬ್ದ 1380ರಲ್ಲಿ. ಆ ವರ್ಷದ ಜನವರಿ ಹದಿಮೂರರಂದು ಸಿದ್ಧವಾದ ಶಾಸನವು ತಿರುಪತಿಯ ಶ್ರೀವೈಷ್ಣವರಲ್ಲಿ ಒಬ್ಬರಾದ ಅಳಗಪ್ಪಿರಾನಾರ್-ತಿರುಕ್ಕಲಿಕನ್ಯದಾಸರೆಂಬುವರು ಬೆಟ್ಟದ ಗುಡಿಯಲ್ಲಿ ಉತ್ಸವರು (ಮಲೈಕ್ಕೂನಿಯನಿನ್ರ-ಪೆರುಮಾಳ್, ಎಂದರೆ ಮಲೆಯಪ್ಪ) ತಿರುಪ್ಪೂ-ಮಂಡಪದಲ್ಲಿ (ಹೂವಿನ ಮಂಡಪದಲ್ಲಿ) ಕುಳಿತು ಕೆಲವು ನಿಮಂದನಗಳನ್ನು ಪಡೆಯುವುದನ್ನು ಹೇಳುತ್ತದೆ. ನಿಮಂದನಗಳ ಪಟ್ಟಿಯ ಕಡೆಯಲ್ಲಿ "...ಪೆರುಮಾಳಿಗೂ ವರಾಹ-ನಾಯನಾರಿಗೂ' (**...ಪೆರುಮಾಳುಕ್ಕುಂ ಶ್ರೀವರಾಹ ನಾಯನಾರುಕ್ಕುಂ**) ಒಂದು 'ಕುರುಣಿ' ಅಕ್ಕಿಯನ್ನು ಒದಗಿಸಬೇಕೆಂಬ ಒಕ್ಕಣೆಯಿದೆ. ತಿರುಪ್ಪೂ-ಮಂಡಪವೆನ್ನುವುದು ವರಾಹಸ್ವಾಮಿಯ ಗುಡಿಯಲ್ಲಿ ಸಿದ್ಧಪಡಿಸುವ ಮಂಡಪ.

ಶ್ರೀವೈಷ್ಣವರಿಗೆ ವರಾಹಸ್ವಾಮಿ ಜ್ಞಾನಪ್ರದನಾದ ದೇವತೆ, 'ಜ್ಞಾನಪ್ಪಿರಾನ್' ಎಂದೇ ಅವನ ಹೆಸರು. ಪಂಚಕೋಶವ್ಯವಸ್ಥೆಯಲ್ಲಿ ಅವನು ವಿಜ್ಞಾನಮಯಕೋಶಕ್ಕೆ ಅಧಿಷ್ಠಾನ, ಅಭಿಮಾನದೇವತೆ. ಅವನು ಪ್ರಾದುರ್ಭಾವಮೂರ್ತಿಯೂ ಹೌದು; ಎಂದರೆ ವಿಷ್ಣುವಿನ ದಶಾವತಾರಗಲ್ಲಿ ವರಾಹವತಾರ ಒಂದು. ಪಾಂಚರಾತ್ರಸಂಪ್ರದಾಯದ ಈಶ್ವರಸಂಹಿತೆಯಲ್ಲಿ ವರಾಹನನ್ನು ಮೂವರು 'ಮುಖ್ಯವೃತ್ತಿ'ಯ ದೇವತೆಗಳಲ್ಲಿ ಸೇರಿಸಿದೆ (ನೃಸಿಂಹ, ಹಯಗ್ರೀವ ಇವರು ಉಳಿದ ಇಬ್ಬರು). ಹೀಗಿರುವುದರಿಂದ ವರಾಹಸ್ವಾಮಿಗೆ ಬೆಟ್ಟದ ಮೇಲೆ ಆಲಯವೊಂದನ್ನು ಕಟ್ಟಿಸಲು ಅವರ ಉತ್ಸಾಹ ಕಾರಣವಾಗಿರಬಹುದು. ಕಲ್ಪನೆಯಲ್ಲಿರುವಂತೆ ಅಷ್ಟು ಪ್ರಾಚೀನವಾದ ಗುಡಿಯೇನು ಅಲ್ಲ. ಮಹಾಂತರು ದೇವಾಲಯದ ಆದಾಯವನ್ನು ಹೆಚ್ಚಿಸಲು ಅದಕ್ಕೆ ಪ್ರಾಚೀನತೆಯನ್ನೂ, ವರಾಹಸ್ವಾಮಿಯ ದರ್ಶನದ ಆದ್ಯತೆಯನ್ನೂ ಹೆಚ್ಚಿಸಿರಬಹುದು. ಯಾವ ಕಾಲದಲ್ಲೂ ಅದು ಅಷ್ಟಾಗಿ ಹಿರಿಮೆಯನ್ನು ಪಡೆದುಕೊಂಡಂತೆ ಕಾಣುವುದಿಲ್ಲ.

ಮೇಲೆ ಗುಡಿಯ ಇರವನ್ನು ಹೇಳುವ ಶಾಸನವೊಂದನ್ನು, 1380ರದು, ಉಲ್ಲೇಖಿಸಿದೆವಷ್ಟೆ. ಮುಂದೆ ಶಾಸನದಲ್ಲಿ ವರಾಹಸ್ವಾಮಿಯ ಪ್ರಾದುರ್ಭಾವವಾಗುವುದು ತೊಂಬತ್ತಾರು ವರ್ಷಗಳ ಮೇಲೆ, 1476ರಲ್ಲಿ. ಇಷ್ಟರಲ್ಲಿ 'ವರಾಹನಾಯನಾರ್' ಆಗಿದ್ದವನು 'ಜ್ಞಾನಪ್ಪಿರಾನ್' ಆಗಿಬಿಟ್ಟಿದ್ದ. ಈ ಶಾಸನದಲ್ಲಿಯೂ ಬೆಟ್ಟದ ಗುಡಿಯ ಉತ್ಸವರು ವರಾಹಸ್ವಾಮಿಯ ಗುಡಿಗೆ ದಯಮಾಡಿಸಿ ಅಲ್ಲಿನ ತಿರುಪ್ಪೂ-ಮಂಡಪದಲ್ಲಿ ಆಸ್ಥಾನ ನಡೆಸುವ ಪ್ರಸ್ತಾಪವಿದೆ. ಈ ಮಂಡಪವನ್ನು 'ರಾಮಾನುಜಯ್ಯನ ಹೂವಿನ ಮಂಡಪ'ವೆಂದು ಕರೆಯಲಾಗಿದೆ (**ತಿರುಕ್ಕೋನೇರಿ ಕರೈಯಿಲ್ ಜ್ಞಾನಪ್ಪಿರಾನ್ ಸನ್ನಿಧಿಯಿಲ್ ಇರಾಮಾನುಜಯ್ಯನ್ ತಿರುಪ್ಪೂಮಂಡಪತ್ತಿಲ್**). ಈ ರಾಮಾನುಜಯ್ಯನು ಕಂದಾಡೆ-ಮನೆತನದವನೇ ಇರಬೇಕು. ಏಕೆಂದರೆ ರಾಮಾನುಜ-ಅಯ್ಯಂಗಾರನ ಹೂವಿನಮಂಡಪದ ಉಲ್ಲೇಖ ಸ್ಪಷ್ಟವಾಗಿ ಇನ್ನೊಂದು ಸಂದರ್ಭದಲ್ಲಿ ಬಂದಿದೆ. ಆದರೆ ಈ ಶಾಸನದಲ್ಲಿ ವರಾಹಸ್ವಾಮಿಗೆ ಸಮರ್ಪಣೆಯೇನೂ ಸಲ್ಲುವುದಿಲ್ಲ. ವರಾಹಸ್ವಾಮಿಯ ಗುಡಿಯಲ್ಲಿ ಕೂತ ಮಲೆಯಪ್ಪನಿಗೇ 'ಸುಖಿಯನ್ ಪಡಿ'

ದೊರಕುವುದು, ವರಾಹಸ್ವಾಮಿ ನೋಡುತ್ತಿರಬೇಕಷ್ಟೆ! ಎಂದರೆ, ಬೆಟ್ಟದ ಮೇಲೆ ಗುಡಿಯ ಹೊರಗಡೆ ಎದ್ದುಕೊಂಡ ಹತ್ತಾರು ಮಂಡಪಗಳಲ್ಲಿ ವರಾಹಸ್ವಾಮಿಯ ಗುಡಿಯೂ ಒಂದು. ಇಷ್ಟರ ಮೇಲೆ ವರಾಹಸ್ವಾಮಿಯ ಹಿರಿಮೆ ಏರುವುದಿಲ್ಲ.

ಆದರೆ ಬರುಬರುತ್ತ ವರಾಹಸ್ವಾಮಿಗೆ ಕೊಂಚ ಜನಪ್ರೀತಿ ಒದಗಿಬಂದಂತೆ ಕಾಣುತ್ತದೆ. ಕ್ರಿಸ್ತಾಬ್ದ 1481ರ ಸುಮಾರಿನಲ್ಲಿ 'ಶ್ರೀಮನ್ಮಹಾಮಂಡಲೇಶ್ವರ, ಮೇದಿನೀ-ಮೀಸರ-ಗಂಡ, ಕಟ್ಟಾರಿ-ಸಾಳುವ' ಸಾಳುವ-ಮಲ್ಲಯದೇವ-ಮಹಾರಾಜನ ಮಗ ತಿಮ್ಮರಾಜನಿಗೆ ಗುಡಿಯ ಸ್ಥಾನತ್ತಾರರು ಬರೆಯಿಸಿಕೊಟ್ಟ ಶಿಲಾಶಾಸನವು ಈ ದೇವರನ್ನು 'ಆದಿವರಾಹ-ಪ್ಪೆರುಮಾಳ್' ಎಂದು ಕರೆಯುತ್ತದೆ. 'ವರಾಹ-ನಾಯನಾರ್' ಆ ವೇಳೆಗಾಗಲೇ 'ಪೆರುಮಾಳ್' ಪದವಿಗೆ ಏರಿದ್ದುದು ಮಾತ್ರವಲ್ಲ, ದಾನಶಾಸನದಲ್ಲಿ ಬರುವ ಒಕ್ಕಣೆ ತಿರುವೇಂಗಡಮುಡ್ಡೆಯಾನನನ್ನೂ ಆದಿವರಾಹಪ್ಪೆರುಮಾಳನ್ನೂ ಒಂದೇ ಉಸಿರಿನಲ್ಲಿ ಹೆಸರಿಸಿ ಅವರಿಬ್ಬರಿಗೂ ಒಟ್ಟಿಗೆ ಆರು ತಿರುಪ್ಪೋನಕಗಳನ್ನು ದಿನವೂ ಸಲ್ಲಿಸುವ ಏರ್ಪಾಡು ಮಾಡಿದೆ. ತಿರುವೇಂಗಡದೊಡೆಯನಿಗೆ ನಾಲ್ಕು ತಿರುಪ್ಪೋನಕಗಳೂ ವರಾಹಪ್ಪೆರುಮಾಳಿಗೆ ಎರಡು ತಿರುಪ್ಪೋನಕಗಳೂ ಸಲ್ಲಬೇಕೆಂಬ ವಿವರವೇನೋ ಇದೆಯೆನ್ನಿ. ಮುಂದೆ ಈ ಗುಡಿಯ ಹಿರಿಮೆಯನ್ನು ಗುರುತಿಸಿದವರಲ್ಲಿ ಕಂದಾಡೈ-ದೊಡ್ಡಪ್ಪಯ್ಯಂಗಾರ್ (1519), ತಾಳ್ಳಪಾಕಂ-ತಿರುಮಲಯ್ಯಂಗಾರ್ (1535), ಮಲೈ ನಿನ್ರಾನ್-ಭಟ್ಟರ್-ಅಪ್ಪಯ್ಯನ್ (1539), ಶೆಟ್ಟಲೂರು-ಶ್ರೀನಿವಾಸಯ್ಯನ್ (1541), ಕುಪ್ಪಾ-ವೆಂಕಟತ್ತರಸು (1543), ತಾಳ್ಳಪಾಕಂ-ತಿರುವೇಂಗಳನಾಥ (1546) ಮೊದಲಾದವರ ಶಾಸನಗಳಿವೆ.

ಇಷ್ಟಾದರೂ 1819ರಲ್ಲಿ ಗುಡಿಯ ಆಡಳಿತವು ಈಸ್ಟ್-ಇಂಡಿಯ-ಕಂಪೆನಿಯವರ ವಶಕ್ಕೆ ಬಂದಾಗ ವರಾಹಸ್ವಾಮಿಯ ಗುಡಿಯ ಯೋಗಕ್ಷೇಮವನ್ನು ಭಕ್ತರೇ ನೋಡಿಕೊಳ್ಳ ತಕ್ಕದ್ದೆಂದು ಕೈಬಿಟ್ಟರು. ಇಡೀ ವರ್ಷಕ್ಕೆ ಈ ಗುಡಿಯ ಒಟ್ಟು ಆದಾಯ-ವೆಚ್ಚ ಸುಮಾರು ಇನ್ನೂರೈವತ್ತು ರೂಪಾಯಿಗಳಷ್ಟೇ ಇದ್ದಿತೆಂಬ ದಾಖಲೆಯಿದೆ. ಇದರಿಂದ ಭಕ್ತರ ಉತ್ಸಾಹವನ್ನೂ ಔದಾರ್ಯವನ್ನೂ ಅಂದಾಜು ಮಾಡಬಹುದು.



ಹದಿಮೂರು


ಗರ್ಭಗುಡಿಯಲ್ಲಿರುವ ಮೂರ್ತಿಗಳು

ಅಲಂಕಾರದ ಹೊರೆ, ಮುಸುಕು


ಗರ್ಭಗುಡಿಯಲ್ಲಿ ಕಾಣಿಸಿಕೊಳ್ಳುವ ವೇಂಗಡದೊಡೆಯನ ಸ್ವರೂಪ ಸಾಮಾನ್ಯವಾಗಿ ಎಲ್ಲರಿಗೂ ಪರಿಚಿತವಾದುದೇ. ಅದರ ಚಿತ್ರ ಎಲ್ಲರ ಮನೆಗಳಲ್ಲೂ ಇರುತ್ತದೆ. ಎಲ್ಲ ಹೋಟೆಲುಗಳಲ್ಲೂ ಕಾಣಬಹುದು. ಅಂಗಡಿಗಳಲ್ಲೆಲ್ಲ ಪೂಜೆಗೊಳ್ಳುತ್ತದೆ. ಕಾರುಗಳಲ್ಲಿ ಸಿಕ್ಕಿಸಿಕೊಂಡಿರುತ್ತಾರೆ. ಆಟೋರಿಕ್ಷಾಗಳಲ್ಲಿ ಚಾಲಕನೆದುರು ನಿಂತಿರುತ್ತದೆ. ಬೀಗದ-ಕೈಗೊಂಚಲುಗಳಲ್ಲಿ ನೇತಾಡುತ್ತದೆ. ಕೈ ಬೆರಳಿನ ಉಂಗುರದಲ್ಲಿ ಸೇರಿಕೊಂಡಿರುತ್ತದೆ. ಆ ಸ್ವರೂಪವನ್ನು ಅರಿಯದಿರುವವರು ದಕ್ಷಿಣ ಮತ್ತು ಉತ್ತರಭಾರತಪ್ರದೇಶಗಳೆರಡರಲ್ಲೂ ತೀರ ವಿರಳ. ಉತ್ತರದವರಿಗೆ ಇದು ಬಾಲಾಜಿ, ದಕ್ಷಿಣದವರಿಗೆ ವೇಂಕಟೇಶ್ವರ (ಅಥವಾ ಶ್ರೀನಿವಾಸ). ಆದರೆ ಪ್ರಸಿದ್ಧವಾದ ಈ ಸ್ವರೂಪದಲ್ಲಿ ಮೂರ್ತಿಯ ದಿಟವಾದ ಸ್ವರೂಪವನ್ನು ಮರೆಯಾಗಿರುವುದನ್ನು ಬಹುಜನ ಅರಿಯರು. ಗರ್ಭಗುಡಿಯೊಳಗಿರುವ ಮೂಲವರನ್ನು ಹೀಗೆ ಅತಿಯಾದ ಅಲಂಕರಣದಲ್ಲಿ ಮುಚ್ಚಿ, ಮೈ ಯಾವುದು ಮುಖ ಹೇಗಿದೆ ಎಂದು ಗೊತ್ತಾಗದಂತೆ ಮಾಡಿ, ಬಗೆಬಗೆಯ ಹಾರಗಳ ಹರವಿನಲ್ಲಿ ಮೂರ್ತಿಯ ನಿಲುವನ್ನು ಅಡಗಿಸುವುದು ಇಲ್ಲಿ ತುಂಬ ಹಿಂದಿನಿಂದ ಬಂದ ಸಂಪ್ರದಾಯ. ಅದು ಯಾವಾಗ ಮೊದಲಾಯಿತು ಎಂದಾಗಲೀ, ಅದಕ್ಕೆ ಕಾರಣವೇನು ಎಂದಾಗಲೀ ತಿಳಿಯುವುದಿಲ್ಲ.

ದೇವರ ಮೂರ್ತಿಗೆ ಅಲಂಕಾರ ಸರಿಯೇ. ಅರಸರ ಆದರಕ್ಕೆ ಒಳಪಟ್ಟ ಮೇಲಂತೂ ಬೆಲೆಬಾಳುವ ಉಡುಗೆ-ತೊಡುಗೆಗಳಿಗೆ ಕೊರತೆಯಿಲ್ಲ. ಮೂರ್ತಿಯ ಮೈಮೇಲೆ ದಿನವೂ ತೊಡಿಸುವ, ಏರಿಸುವ, ಹೊರಿಸುವ ಒಡವೆಗಳ, ಆಭರಣಗಳ, ಕವಚಗಳ ಬೆಲೆ ಕೋಟ್ಯಂತರ ರೂಪಾಯಿಗಳಷ್ಟು. ಆದರೆ ಇಷ್ಟನ್ನೂ ದಿನವೂ ತೊಡಿಸುವುದು ಏಕೆ? ಕಡೆಗೆ ಮೂರ್ತಿಯ ಮುಖವನ್ನಾದರೂ ಇದ್ದಂತೆ ತೋರಿಸಬಾರದೆ? ಕಣ್ಣುಗಳನ್ನೂ ಹಣೆಯನ್ನೂ ಮೂಗನ್ನೂ ಮುಚ್ಚಿ ನಾಮವಿರುತ್ತದೆ; ಮುಖದ ಮುಕ್ಕಾಲುಭಾಗ ಬಿಳಿಯ ನಾಮದಿಂದ ಮರೆ. ಹೀಗೆ ದಿಟವಾದ ಸ್ವರೂಪವನ್ನು ಮರೆಮಾಚುವ ಗುಟ್ಟೇನು?


ವಾರಕ್ಕೊಂದು ದಿನ, ಶುಕ್ರವಾರ ಮುಂಜಾನೆ, ಗರ್ಭಗುಡಿಯಲ್ಲಿ ಮೂಲವರಿಗೆ ಅಭಿಷೇಕ ನಡೆಯುತ್ತದೆ; ಇದಕ್ಕೆ 'ತಿರುಮಂಜನ'ವೆಂದು ಹೆಸರು. ಆ ಸಮಯದಲ್ಲಿ



ಕಲ್ಯಾಣಮಂಟಪ (ಒಂದು ಹಳೆಯ ಚಿತ್ರ)



ಪ್ರಾಚೀನ ವೇಂಕಟೇಶ್ವರಮೂರ್ತಿಗಳು


ಉಗ್ರಾಣ
ಮಂಟಪ
ಸಂಪಂಗಿ ಪ್ರದಕ್ಷಿಣೆ
ಮಂಟಪ
ಯಾಗಶಾಲೆ
ವಿಮಾನ ಪ್ರದಕ್ಷಿಣೆ
ಕಲ್ಯಾಣ ಮಂಟಪ
ಮುಕ್ಕೋಟಿ ಪ್ರದಕ್ಷಿಣೆ
ಗರ್ಭಗುಡಿ
ಶಯನ ಮಂಟಪ
ಸ್ನಪನಮಂಟಪ
ಬಂಗಾರ ಬಾಗಿಲು
ರಾಮಾನುಜ ಸನ್ನಿಧಿ
ಬಂಗಾರ ಬಾವಿ
ತಿರುಮಾಮಣಿ ಮಂಟಪ
ಹುಂಡಿ
ಗರುಡ
ನರಸಿಂಹ ಸನ್ನಿಧಿ
ಪಾಕ ಶಾಲೆ
ಪರದ ರಾಜ
ಗೋಪುರ
ಪರಮಪದ ಗೃಹ
ಮಂಟಪ
ಮಂಟಪ
ಮಂಟಪಗಳು
ಮಂಟಪಗಳು
ತಿರುಮಲರಾಯ ಮಂಟಪ
ಮುಖಮಂಟಪ
ಧ್ವಜಸ್ತಂಭ
ಬಲಿಪೀಠ
ನಿನಾಮಹಲ್
ಹೂವಿನ ಬಾವಿ
ಮಂಟಪ
ರಂಗಮಂಟಪ
ಕೃಷ್ಣದೇವರಾಯ ಮಂಟಪ
ಮುಹಾದ್ವಾರ ಗೋಪುರ

ಗುಡಿಯ ನಕ್ಷೆ

ಸುಮಾರು ಒಂದು ಗಂಟೆಯಷ್ಟು ಕಾಲ, ಮೂರ್ತಿಯ ಮೈಮೇಲಿನ ಉಡುಗೆ-ತೊಡುಗೆಗಳನ್ನೆಲ್ಲ ತೆಗೆದಿರುತ್ತಾರೆ. ಆಗಲೇ ಮೂರ್ತಿಯ ದಿಟವಾದ ಸ್ವರೂಪವನ್ನು ಕಾಣಲಾಗುವುದು. ಇದು 'ಆರ್ಜಿತ'ವೆಂಬ ಸೇವೆ, ಎಂದರೆ ಸುಮಾರು ಹಣವನ್ನು ತೆತ್ತು ನೋಡಬಹುದಾದದ್ದು. ಹೀಗೆ ಹಣದಿಂದ ನೋಡುವ ಅಧಿಕಾರವನ್ನು ಪಡೆದುಕೊಂಡ ಭಕ್ತರು ಮುಖಮಂಡಪದಲ್ಲೋ, ರಾಮರ ಮೇಡೆಯಲ್ಲೋ, ಸ್ನಪನಮಂಡಪದಲ್ಲೋ, ಭಕ್ತರ ಗುಂಪು ಹೆಚ್ಚಾಗಿದ್ದರೆ ತಿರುಮಾಮಣಿಮಂಡಪದಲ್ಲೋ ಕುಳಿತು ಮೂಲಮೂರ್ತಿಯನ್ನು ನೋಡಬಹುದು. ಹತ್ತಿರದಿಂದ ನೋಡುವ ಅವಕಾಶವಂತೂ ಇರಲಾರದು. ಕಣ್ತುಂಬ ನೋಡುವ ಅವಕಾಶವೂ ಕಡಮೆಯೇ. ಮೂಲಮೂರ್ತಿಯ ಮೂಲಸ್ವರೂಪವನ್ನು ಮನವರಿಕೆ ಮಾಡಿಕೊಳ್ಳಬೇಕೆನ್ನುವವರು ಮತ್ತೆಮತ್ತೆ ಶುಕ್ರವಾರ ಮುಂಜಾನೆ 'ತಿರುಮಂಜನ'ವನ್ನು ನೋಡಬೇಕು, ಸಾಧ್ಯವಾದಷ್ಟು ಮುಂದೆ ಕೂರಬೇಕು.

ಆಗ ಸ್ಪಷ್ಟವಾಗುವ ರೂಪ ನಿಜಕ್ಕೂ ಅದ್ಭುತವಾದುದು. ಮೂಲವರದ್ದು ದಿವ್ಯಮಂಗಳವಿಗ್ರಹವೇ; ಅದರಲ್ಲಿ ಎಳ್ಳಷ್ಟೂ ಅಡ್ಡಮಾತಿರದು. ಅಷ್ಟು ಸುಂದರವಾದ ಮೂರ್ತಿಯನ್ನು ಬೇರೆಲ್ಲಿಯೂ ಕಾಣುವುದು ಕಷ್ಟ. ಮಾಟವಾದ ಮೈ, ಮುದ್ದಾದ ಮುಖದ ಮೇಲೆ ಮುಗುಳುನಗೆ, ಅಂದವಾಗಿ ಬಿಡಿಸಿದ ಅಂಗಾಂಗಗಳಲ್ಲಿ ನವುರಾಗಿ ಮೂಡಿಸಿದ ಆಭರಣಗಳು, ನಡೆದುಬರಲು ಸಿದ್ಧವಾಗಿರುವಂತೆ ನಿಲುವು, ಒಪ್ಪಾದ ಎತ್ತರ. ಒಮ್ಮೆ ಕಣ್ಣಾಡಿಸಿದರೆ ಅಲ್ಲಿಂದ ಕಣ್ಣನ್ನು ಕೀಳುವುದು ಕಷ್ಟ; ನೋಡತೊಡಗಿದರೆ ನೋಡುತ್ತಲೇ ಇರಬೇಕೆಂಬ ತವಕವನ್ನು ಅನುಭವಿಸದಿರುವವರು ವಿರಳ; ಅರಸಿಕರ ಮಾತು ಬಿಡಿ. ಇಷ್ಟು ದಿವ್ಯವಾದ, ಭವ್ಯವಾದ ಮೂರ್ತಿಯನ್ನು ಆ ಹೊರೆ ಆಭರಣಗಳ ಕಸದಿಂದ ಮುಚ್ಚುವುದೇಕೆ ಎನಿಸುವುದು ಸಹಜ. ಬಂಗಾರವನ್ನೇ ನಂಬಿಕೊಂಡು ಬಂಗಾರವನ್ನು ಬಯಸುವ ಭಕ್ತರಿಗೆ ಬಂಗಾರವಿಮಾನವಿರಲಿ, ಬಂಗಾರಬಾಗಿಲಿರಲಿ. ಆದರೆ ಒಳಗಿನ ವಿಗ್ರಹವನ್ನು ಅದು ಮೊದಲು ಮೈದಳೆದಂತೆಯೇ ಬಿಡಬಾರದೆ?

ಮೂಲಮೂರ್ತಿಯ ರೂಪ

ಇದು ಸ್ವಯಂವ್ಯಕ್ತಮೂರ್ತಿಯೆಂದು ನಂಬಿಕೆ; ಎಂದರೆ ತಾನೇತಾನಾಗಿ ಮೈದೋರಿಕೊಂಡುದು ಎಂದರ್ಥ. ಮನುಷ್ಯನು ತನ್ನ ಕಲ್ಪನೆಯನ್ನೂ ಪ್ರತಿಭೆಯನ್ನೂ ಕೈಚಳಕವನ್ನೂ ಬಳಸಿ ಸಿದ್ಧಪಡಿಸಿದುದಲ್ಲವೆಂದು ತಾತ್ಪರ್ಯ. ಇದು ಶ್ರದ್ಧೆಯ ಮಾತು. ನಂಬುವವರು ನಂಬಲಿ, ಅದರಿಂದ ತೊಂದರೆಯೇನಿಲ್ಲ. ನಂಬದವರು ಬಿಡಲಿ, ಅದರಲ್ಲಿ ಕುಂದೇನಿಲ್ಲ. ಮನುಷ್ಯಶಿಲ್ಪಿಯೇ ಈ ಮೂರ್ತಿಯನ್ನು ಕಲ್ಲಿನಲ್ಲೋ ಮರದಲ್ಲೋ ಕಡೆದನೆಂದರೂ ಅವನೇನು ಸಾಮಾನ್ಯಮನುಷ್ಯನಾಗಿರಲಾರ. ಅವನಲ್ಲಿ ದೈವೀಸಂಪತ್ತೂ ಕಠೋರತಪಸ್ಸೂ ಅಲೌಕಿಕಸ್ಫೂರ್ತಿಯೂ ಇರದಿದ್ದರೆ ಈ ಮೂರ್ತಿಯಲ್ಲಿ ಇಷ್ಟು ಕಳೆ ತುಂಬಿಬರುತ್ತಿರಲಿಲ್ಲ, ಇಷ್ಟು ಸತ್ತ್ವ ಸೇರಿಬರುತ್ತಿರಲಿಲ್ಲ, ಇಷ್ಟು ಜನಪ್ರೀತಿ ಒದಗಿಬರುತ್ತಿರಲಿಲ್ಲ.

ಈ ಮೂರ್ತಿಯು ಸ್ವಯಂವ್ಯಕ್ತವೋ ಶಿಲ್ಪವೋ ಎನ್ನುವ ವಿವಾದದಲ್ಲಿ ಕೊನೆಮಾತೆಂಬುದು ಇರದು. ಆದರೆ ಇಷ್ಟುಮಾತ್ರ ಹೇಳಬಹುದು—ಮೂರ್ತಿಯ ಲಕ್ಷಣಗಳನ್ನು ನೋಡಿದರೆ ನಮಗೆ ತಿಳಿದಿರುವ ಪಲ್ಲವ, ಚೋಳ, ಪಾಂಡ್ಯಪ್ರಕಾರಗಳಿಗೆ ಸೇರಿಸುವಂತಿಲ್ಲ. ವಿಗ್ರಹದ ತಾಳಮಾನ, ಅಂಗಸೌಷ್ಠವ, ಅಲಂಕರಣವಿನ್ಯಾಸ ಇವು ಯಾವೊಂದು ನಿರ್ದಿಷ್ಟ ಶಿಲ್ಪಶಾಸ್ತ್ರದ ಚೌಕಟ್ಟಿನಲ್ಲಿಯಾಗಲೀ ಕೂಡಿಬರುವುದಿಲ್ಲ. ಇದಕ್ಕೆ ಮುಖ್ಯಕಾರಣ ಅದರ ಪ್ರಾಚೀನತೆಯಿರಬಹುದು. ಮೇಲಾಗಿ, ಇದು ವಿಷ್ಣು ವಿಗ್ರಹವೆಂದೇ ಭಾವಿಸಿದರೂ, ಶಿಲ್ಪಶಾಸ್ತ್ರಗಳು ನಿರ್ದೇಶಿಸುವ, ಒಕ್ಕಣಿಸುವ ಯಾವ ವಿಷ್ಣುಮೂರ್ತಿಭೇದಕ್ಕೂ ಸರಿಹೊಂದುವುದಿಲ್ಲ. ವಿಷ್ಣುವಿನ ಯಾವುದೇ ವ್ಯೂಹ, ಪ್ರಾದುರ್ಭಾವ, ಮೂರ್ತ್ಯಂತರ ವಿಭಾಗದಲ್ಲಿಯೂ ವೇಂಕಟೇಶ್ವರ(ಶ್ರೀನಿವಾಸ)ನೆಂಬ ಮೂರ್ತಿ ಸೇರಿಲ್ಲ. ಶಿಲ್ಪಿಗಳಿಗೆ ನೆರವಾಗುವಂತೆ ಈ ಮೂರ್ತಿಯ ಧ್ಯಾನಶ್ಲೋಕ ಯಾವ ಶಿಲ್ಪಶಾಸ್ತ್ರಗ್ರಂಥದಲ್ಲಿಯೂ ಕಂಡುಬರುವುದಿಲ್ಲ. ವೇಂಗಡಬೆಟ್ಟದ ಮೇಲಲ್ಲದೆ ಬೇರೆಲ್ಲಿಯೂ ಈ ದೇವರ ಗುಡಿ ವಿಜಯನಗರದ ಕಡೆಯ ಕಾಲಕ್ಕೆ ಮೊದಲು ಕಾಣಿಸಿಕೊಂಡುದಿಲ್ಲ. ಈಚಿನವರೆಗೆ ಇದು ಎಲ್ಲ ದೃಷ್ಟಿಗಳಿಂದಲೂ 'ಏಕಮೂರ್ತಿ'ಯೇ.

ಬೆಟ್ಟದ ಮೇಲಿನ ಗುಡಿ 'ಏಕಮೂರ್ತಿದೇವಾಲಯ', ಎಂದರೆ ಗರ್ಭಗುಡಿಯಲ್ಲಿ ಇರುವುದು ಒಂದೇ ಮೂರ್ತಿ. ಇದು ವಿಷ್ಣುವಿನ ಮೂರ್ತಿಯೆಂದು ಆಳ್ವಾರರ ಕಾಲದಿಂದಲೂ, ಎಂದರೆ ಒಂದು ಸಾವಿರ ವರ್ಷಗಳಿಗೂ ಮೀರಿ, ಪ್ರಸಿದ್ಧವಾಗಿದೆ. ಆದರೆ ಅಂದಿನಿಂದ (ಅದಕ್ಕೂ ಹಿಂದಿನಿಂದ) ಇಂದಿನವರೆಗೂ ಈ ದೇವರನ್ನು ವಿಷ್ಣುವಿನ ಯಾವ ಪ್ರಸಿದ್ಧವಾದ ಹೆಸರಿನಿಂದಲೂ ಕರೆಯುವ ವಾಡಿಕೆ ಬಂದಿಲ್ಲ. ಈ ದೇವರ ಹೆಸರು ವೇಂಕಟೇಶ್ವರನೆಂದೇ; ಎಂದರೆ ವೇಂಗಡಬೆಟ್ಟದ ಒಡೆಯ, ಮಲೆಯಪ್ಪ. ಶ್ರೀನಿವಾಸನೆಂಬ ಹೆಸರೇನೋ ಇಲ್ಲಿ ಶ್ರೀವೈಷ್ಣವರ ಪ್ರಾಬಲ್ಯ ಒದಗಿಬಂದಾಗಿನಿಂದ ಬಳಕೆಯಲ್ಲಿದೆ. 'ಶ್ರೀ' ಎಂದರೆ ಲಕ್ಷ್ಮಿ, ಲಕ್ಷ್ಮಿಗೆ ತನ್ನ ವಕ್ಷಃಸ್ಥಲದಲ್ಲೇ ಎಡೆ ಮಾಡಿಕೊಟ್ಟವನೆಂಬ ಅರ್ಥದಲ್ಲಿ 'ಶ್ರೀನಿವಾಸ' ಎನ್ನುವ ಹೆಸರನ್ನು ಅವರು ಬಳಸಿದರು. ವಿಷ್ಣುವಿನ ಸನ್ನಿಧಿಯಲ್ಲಿ ಲಕ್ಷ್ಮಿಗೆ ಸನ್ನಿಧಿಯಿರಲೇಬೇಕೆಂಬ ಕಟ್ಟಳೆ ಅವರಲ್ಲಿದೆ. ಆದರೆ ವೇಂಗಡದ ಬೆಟ್ಟದ ಗುಡಿಯಲ್ಲಿ ಗರ್ಭಗುಡಿಯಲ್ಲಿರುವುದು ಒಂದೇ ಮೂರ್ತಿ; ವಿಷ್ಣುವಿನದು ಎನ್ನಿ. ಆ ಗುಡಿಯಲ್ಲಾಗಲೀ, ಬೆಟ್ಟದ ಮೇಲೆ ಬೇರೆಲ್ಲಿಯಾಗಲೀ ಲಕ್ಷ್ಮಿಗೆ ಸನ್ನಿಧಿ ಎಂದೂ ಒದಗಿ ಬರಲಿಲ್ಲ. ಲಕ್ಷ್ಮಿಯಿಲ್ಲದೆ ವಿಷ್ಣುವನ್ನು ಕಲ್ಪಿಸಿಕೊಳ್ಳುವುದು ಶ್ರೀವೈಷ್ಣವರಿಗೆ ಸಾಧ್ಯವಿಲ್ಲ. ಈ ಸಮಸ್ಯೆಗೆ ಪರಿಹಾರವಾಗಿ ವಿಷ್ಣುವಿನ ವಕ್ಷಃಸ್ಥಳದಲ್ಲೇ ಲಕ್ಷ್ಮಿಯ ಸನ್ನಿಧಿಯಿದೆ ಎಂದರೆ ಮುಗಿಯಿತಲ್ಲವೆ? ಏಕಮೂರ್ತಿಯೂ ಆಯಿತು, ಲಕ್ಷ್ಮಿಯ ಒಡನಾಟವೂ ಆಯಿತು. 'ಶ್ರೀನಿವಾಸ'ನೆಂದರೆ ಲಕ್ಷ್ಮೀನಾರಾಯಣನೆಂದೇ ಅರ್ಥ. ಆದರೆ 'ಶ್ರೀನಿವಾಸ' ಎನ್ನುವ ಮಾತಿಗೆ ಮೊದಲು ಮಾಡಿಕೊಂಡ ಅರ್ಥ ಶ್ರೀಗಿರಿವಾಸ ಎಂದು, ಎಂದರೆ ತಿರುಮಲೆಯಲ್ಲಿರುವವನು. ತನ್ನ ಹಿರಿಮೆಯಿಂದ ಬೆಟ್ಟವು 'ತಿರುಮಲೆ'ಯಾಯಿತು. ಈ ಮಾತು ಸಂಸ್ಕೃತದಲ್ಲಿ 'ಶ್ರೀಶೈಲ'ವೆಂದಾಯಿತು,

ಅದೇ 'ಶ್ರೀ-ಗಿರಿ'. ಹೀಗಾಗಿ 'ಶ್ರೀನಿವಾಸ'ನೆನ್ನುವುದು ವೇಂಗಡದೊಡೆಯನೆನ್ನುವುದಕ್ಕೆ ಸಮನಾದ ಪದ.

ಈ ಮೂರ್ತಿಯು ವಿಷ್ಣುವೋ ಶಿವನೋ ಹರಿಹರನೋ ಸುಬ್ರಹ್ಮಣ್ಯನೋ ದುರ್ಗೆಯೋ ವೀರಭದ್ರನೋ ಎನ್ನುವ ವಿಚಾರವಾಗಿ ಬಗೆಹರಿಯದ ಗೊಂದಲ ಹಿಂದಿನ ಕಾಲದಿಂದಲೂ ಇದೆ. ರಾಮಾನುಜಾಚಾರ್ಯರ ಕಾಲಕ್ಕೇ ಈ ವಿವಾದ ಇದ್ದಿತೆಂದು ಕಥೆಯಿದೆ. ಅವರೇ ಇದು ವಿಷ್ಣುವಿನ ಮೂರ್ತಿಯೆಂದು ನಿರ್ಧರಿಸಿ, ವಿಷ್ಣುವಿನ ಲಕ್ಷಣಗಳನ್ನು ಮೂಡಿಸಿದರೆಂದು ಪ್ರತೀತಿಯೂ ಇದೆ. ಇದರ ನಿಜಾಂಶ ತಿಳಿಯುವಂತಿಲ್ಲ. ಆದರೆ ಈ ವಿವಾದದಲ್ಲಿ ಅರ್ಥವಿಲ್ಲ. ಶೈವ, ವೈಷ್ಣವಸಂಪ್ರದಾಯಗಳ ನಡುವೆ ಬಿಕ್ಕಟ್ಟು ಬಿರುಸಾಗಿದ್ದಾಗ ಇಂಥ ವಿವಾದ ಮೊದಲಾಯಿತೆಂದು ತೋರುತ್ತದೆ; ಮತಾಭಿಮಾನದ ನಂಜು ಕರಗಿದಾಗ ಈ ಜಗಳದಲ್ಲಿ ತಿರುಳಿಲ್ಲವೆಂದು ಸ್ಪಷ್ಟವಾಗುತ್ತದೆ. ಶೈವ, ವೈಷ್ಣವಪಂಥಗಳು ಕವಲೊಡೆಯುವ ಮೊದಲೇ ಮೂಡಿಕೊಂಡ ಮೂರ್ತಿ ಇದು. ಮೂರ್ತಿಯ ಕೈಗಳಲ್ಲಿರುವ ಶಂಖಚಕ್ರಗಳನ್ನು ನೋಡಿ, ಗುಡಿಯ ವಾಸ್ತುಶಿಲ್ಪದ ಲಕ್ಷಣಗಳನ್ನು ಎಣಿಸಿ, ಶ್ರೀವೈಷ್ಣವರು ಗುಡಿಯಲ್ಲಿ ಪ್ರಬಲರಾಗಿರುವುದನ್ನು ಗಮನಿಸಿ ಮೂಲಮೂರ್ತಿಯು ವೈಷ್ಣವಸಂಪ್ರದಾಯದ್ದೆಂದು ಕೆಲವರ ವಾದ. ಗುಡಿಯ ವಿಮಾನದ ಮೇಲೆ ಮೂಲೆಗಳಲ್ಲಿ ಸಿಂಹಗಳಿರುವುದನ್ನು ನೋಡಿ, ಶುಕ್ರವಾರದ ಸ್ನಾನವಿಧಿಯನ್ನು ಗಮನಿಸಿ, ಮೂರ್ತಿಗೆ ಉಡಿಸುವ ಸೀರೆಯನ್ನು ಕಂಡು ಮೂರ್ತಿಯು ಶಾಕ್ತಸಂಪ್ರದಾಯದ್ದೆಂದು ಇನ್ನು ಕೆಲವರ ವಾದ. ಸಹಸ್ರನಾಮದಲ್ಲಿ ವಿರೂಪಾಕ್ಷನೆಂದಿರುವುದನ್ನು ಗಮನಿಸಿ, ಮೈಮೇಲೆ ನಾಗಾಭರಣ ಇರುವುದನ್ನೂ ಬಿಲ್ವಾರ್ಚನೆ ನಡೆಯುವುದನ್ನೂ ನೋಡಿ ಮೂರ್ತಿಯು ಶೈವಸಂಪ್ರದಾಯದ್ದೆಂದು ಮತ್ತೆ ಕೆಲವರ ವಾದ. ಆದರೆ ಇವೆಲ್ಲ ಮುಂದೆ ಮೂಡಿಕೊಂಡ ವಿವರಗಳೆಂಬುದನ್ನು ವಾದಮಾಡುವವರು ಮರೆಯುತ್ತಾರೆ. ಈಗ ಗುಡಿ ಇರುವ ಪರಿಯಿಂದ, ಅಲ್ಲಿ ಬಳಕೆಗೆ ಬಂದಿರುವ ಕಟ್ಟಳೆಗಳ ಬಲದಿಂದ, ಮಾಡುವ ಅಲಂಕಾರಗಳ ಬಗೆಯಿಂದ ಏನನ್ನೂ ನಿರ್ಧರಿಸುವುದಾಗದು. ಅಥವಾ ಮುಂದೆ ಎಂದೋ ಮೈದಳೆದ ಆಗಮ-ಸಂಹಿತೆಗಳ ಒಕ್ಕಣೆಯಿಂದ, ಎಂದಿನಿಂದಲೋ ಇರುವ ಇದು ವೀರಮೂರ್ತಿಯೋ ಭೋಗಮೂರ್ತಿಯೋ ಆಭಿಚಾರಿಕವೋ ಎಂದು ಪರಿಶೀಲನೆಗೆ ತೊಡಗುವುದೂ ತಪ್ಪು.

ಮೂಲವರ ಮೂರ್ತಿಲಕ್ಷಣ

ಗರ್ಭಗುಡಿಯಲ್ಲಿ ಹಿಂಬದಿಯ ಗೋಡೆಯಿಂದ ಸ್ವಲ್ಪ ಮುಂದೆ, ಇರುವ ಮೂರ್ತಿಯನ್ನು ವಿವರಿಸಬೇಕೆಂದರೆ, ಇದು ಸುಮಾರು ಎಂಟು ಅಥವಾ ಎಂಟೂವರೆ ಅಡಿ ಎತ್ತರವಿರುವ ಮೂರ್ತಿ. ಕರಾರುವಾಕ್ಕಾಗಿ ಅಳೆಯಗೊಡುವುದಿಲ್ಲವಷ್ಟೆ. ಕಿರೀಟವೇ ಸುಮಾರು 20 ಅಂಗುಲಗಳಷ್ಟು ಎತ್ತರವಿದೆ. ಸಾಮಾನ್ಯನಿಲುವಿನ ಅರ್ಚಕರು ಅದರ ಮುಂದೆ ನಿಂತಾಗ ಮೂರ್ತಿಯ ಎತ್ತರವನ್ನು ಅಂದಾಜು ಮಾಡಿಕೊಳ್ಳಬಹುದು.

ಅಭಿಷೇಕ ಮಾಡುವಾಗ ಮೂರ್ತಿಯ ಹಿಂದೆ ಎತ್ತರವಾದ ಕಟ್ಟೆಯ ಮೇಲೆ ನಿಂತು ಅರ್ಚಕರೊಬ್ಬರು ಮೂರ್ತಿಯ ತಲೆಯ ಮೇಲೆ ನೀರೆರೆಯುತ್ತಾರೆ; ಮುಂದೆ ನಿಂತ ಅರ್ಚಕರು ಕೈ ಚಾಚಿದರೂ ಮೂರ್ತಿಯ ತಲೆಯನ್ನು ಮುಟ್ಟಲಾರರು. ಮೂರ್ತಿ ಇಷ್ಟು ಎತ್ತರವಾಗಿದ್ದರೂ, ಮೈ ತೆಳುವಾಗಿದ್ದು ಮಾಟವಾಗಿದೆ. ತೆಳುವಾಗಿದ್ದರೂ ಮೈಕೈ ತುಂಬಿಕೊಂಡಿದೆ, ಬಡಕಲಾಗಿಲ್ಲ. ನಡುವು ಸಣ್ಣದಾಗಿದೆ, ಎದೆಯ ಭಾಗ ವಿಶಾಲವಾಗಿದೆ.

ವಿಗ್ರಹವು ಶಾಲಗ್ರಾಮಶಿಲೆಯದೆಂದು ನಂಬಿಕೆ; ವಿಗ್ರಹವೇನೋ ಕಪ್ಪುಬಣ್ಣವೇ, ಮುಖ ನುಣುಪಾಗಿಯೇ ಇದೆ. ಆದರೆ ಕವಚಗಳನ್ನು ತೆಗೆದಾಗ ಕೈಗಳು (ಅದರಲ್ಲಿಯೂ ವರದಹಸ್ತ) ಒರಟಾಗಿರುವುದನ್ನು ನೋಡಿದರೆ ಮೂರ್ತಿಯು ಮರದಿಂದ ಮಾಡಿದ್ದೋ ಎನ್ನುವ ಸಂಶಯ ಬರುತ್ತದೆ. ವೇಂಕಟೇಶನು 'ದಾರುಮಯ' ಎನ್ನುವ ಉಲ್ಲೇಖ ಪುರಾಣದಲ್ಲೇ ಬರುತ್ತದೆ. ತುಂಬ ಪ್ರಾಚೀನವಾದ ಅರ್ಚಾಮೂರ್ತಿಗಳು ಮರದಲ್ಲಿ ಮಾಡಿದುವೆಂಬುದೂ ನಿಜವೇ; ನಮ್ಮ ದೇಶದ ಹಲವು ಕಡೆ ಇದಕ್ಕೆ ನಿದರ್ಶನಗಳು ದೊರೆಯುತ್ತವೆ. ತಿರುಪತಿಯ ಸುತ್ತಮುತ್ತ ಬೆಟ್ಟದ ಕಾಡಿನಲ್ಲಿ ರಕ್ತಚಂದನದ ಮರಗಳು ಪ್ರಸಿದ್ಧವಾದುವು.

ಕ್ರಿಸ್ತಾಬ್ದ 1958ರಲ್ಲಿ ವಿಮಾನದ ಜೀರ್ಣೋದ್ಧಾರಸಮಯದಲ್ಲಿ ಮೂರ್ತಿಯಿಂದ ಕಳಾಕರ್ಷಣ ಮಾಡಿ ನಾಲ್ಕು ತಿಂಗಳುಗಳವರೆಗೆ ಪೂಜೆಯೆಲ್ಲ ಹೊರಗೆ ಬಾಲಾಲಯದಲ್ಲಿ ನಡೆಯುತ್ತಿದ್ದಾಗ, ಮೂಲಮೂರ್ತಿಯ ಪ್ರತಿನಿಧಿಯಾಗಿ ಅತ್ತಿಮರದ ಮೂರ್ತಿಯೊಂದನ್ನು ಇರಿಸಿಕೊಂಡಿದ್ದರು. ಶುಕ್ರವಾರದ 'ತಿರುಮಂಜನ'ಸಂದರ್ಭದಲ್ಲಿ ಬಳಸುವ ಪುನಗು, ಪಚ್ಚಕರ್ಪೂರ (ಗಂಬೂರ), ಕಸ್ತೂರಿ, ಅರಿಶಿನ ಮೊದಲಾದುವು ಮರವನ್ನು ಕೆಡದಂತೆ ಉಳಿಸಲು ನೆರವಾಗುವ ದ್ರವ್ಯಗಳು. ಭಾರವಾದ ಆಭರಣಗಳು, ಚೂಪಾದ ಬಂಗಾರದ ಮೊನೆಗಳುಳ್ಳ ಹಾರಗಳು, ಕವಚಗಳು ಮೊದಲಾದುವನ್ನು ಮೇಲೇರಿಸುವ ಮೊದಲು ಮೂರ್ತಿಯನ್ನು ದೊಡ್ಡದಾದ ಮೆದುವಾದ ರೇಷ್ಮೆಸೀರೆಯ ಮಡಿಕೆಗಳಿಂದ ಸುತ್ತಿ, ಅದರ ಮೇಲೆ ತೊಡುಗೆಗಳನ್ನು ಅಳವಡಿಸುತ್ತಾರೆ. ಇದಕ್ಕೆ 'ಉಳ್ಚಾತ್ತು' ಎಂದು ಹೆಸರು. ಮರದ ಮೂರ್ತಿಯಾಗಿದ್ದರೆ ಆಭರಣಗಳ ಕಚ್ಚು ಬಿದ್ದೀತೆಂದೋ? ದೇವರಿಗೆ ಕರ್ಪೂರದ ಆರತಿ ಮಾಡಿದಾಗ, ಅನಂತರ ದೇವರೆದುರೇ ಇರಿಸದೆ ನೀರಿನಲ್ಲಿ ಹಾಕುವ ಪದ್ಧತಿಯಿದ್ದಿತು. ಇವನ್ನೆಲ್ಲ ಗಮನಿಸಿದರೆ ಮೂಲಮೂರ್ತಿಯು ಮರದ್ದಿರಬಹುದೇ ಎಂಬ ಸಂಶಯ ಮೂಡುವುದು ಸಹಜ. ಆದರೆ ಖಚಿತವಾಗಿ ಏನನ್ನೂ ಹೇಳುವುದು ಸಾಧ್ಯವಿಲ್ಲ.

ನಿಂತಿರುವ ಈ ಮೂರ್ತಿಗೆ ನಾಲ್ಕು ಕೈಗಳು ಎಂದು ಪ್ರಸಿದ್ಧಿ. ಆದರೆ ಮೇಲಿನ ಎರಡು ಕೈಗಳು (ಪರಹಸ್ತಗಳು) ಸ್ಪಷ್ಟವಾಗಿ ಕಾಣಿಸುವುದಿಲ್ಲ. ಇವುಗಳಲ್ಲಿ ಬಂಗಾರದ ಚಕ್ರ (ಬಲಗೈಯಲ್ಲಿ) ಮತ್ತು ಶಂಖ (ಎಡಗೈಯಲ್ಲಿ) ಇವೆ. ಚಕ್ರ-ಶಂಖಗಳೂ ಅವನ್ನು ಹಿಡಿದಂತೆ ಕಾಣುವ ಹಸ್ತಗಳೂ ಬಂಗಾರದ ಕವಚಗಳು. ಇವನ್ನು ರಾಮಾನುಜಾಚಾರ್ಯರು ತೊಡಿಸಿದ್ದೆಂದು ಹೇಳುತ್ತಾರೆ. ಹಿನ್ನೆಲೆಯ ಕಥೆಯಲ್ಲಿ ಬರುವ ವಿವರ,

ಅವರ ಕಾಲಕ್ಕೆ ಮೊದಲು ಇವೆರಡೂ ಬರಿಗೈಗಳಾಗಿದ್ದುವೆಂಬುದು. ಪುರಾಣದ ಕಥೆಗಳಲ್ಲಿ ತೋಂಡಮಾನ್-ಚಕ್ರವರ್ತಿ ಯುದ್ಧಕ್ಕೆ ಹೊರಟಾಗ ದೇವರು ಅವನಿಗೆ ತನ್ನ ಶಂಖಚಕ್ರಗಳೆರಡನ್ನೂ ಕೊಟ್ಟು ತಾನು ಬರಿಗೈಯಲ್ಲಿ ನಿಂತನೆಂದಿದೆ—

ದರ್ಶಯನ್ ಭಕ್ತವಾತ್ಸಲ್ಯಂ ಯೋ ದದೌ ಹಸ್ತಗೇ ಶುಭೇ।
ಶಂಖಚಕ್ರೇ ನೃಪೇಂದ್ರಾಯ ಚಕ್ರವರ್ತೀತಿ ಯಂ ವಿದುಃ॥
ಅತ ಏವಾರಿಶಂಖಾಭ್ಯಾಂ ದೃಶ್ಯತೇ ರಹಿತೌ ಕರೌ।
ಅರ್ಚಾರೂಪಶಿಲಾರೂಪವಿಗ್ರಹಸ್ಯ ಮಹಾತ್ಮನಃ॥

ಚಕ್ರವರ್ತಿಯು ದೇವರನ್ನು, "ಶಂಖ-ಚಕ್ರಗಳನ್ನು ನನಗೆ ಕೊಟ್ಟಿರುವೆಯೆಂದು ಲೋಕಕ್ಕೆ ತಿಳಿಯಪಡಿಸಲು ನೀನು ಶಂಖಚಕ್ರಗಳನ್ನು ಮತ್ತೆ ಧರಿಸದೆ ನಿಲ್ಲು" ಎಂದು ಬೇಡಿಕೊಂಡನಂತೆ:

ಮಯಾಯುಧಪ್ರದಾನಸ್ಯ ಖ್ಯಾತ್ಯೈ ದೇವೋತ್ತಮ ಪ್ರಭೋ।
ಅರ್ಚಾಬಿಂಬೇ ಶಿಲಾಬಿಂಬೇ ಚಕ್ರ-ಶಂಖೌ ನ ಧಾರಯ॥

ಬ್ರಹ್ಮಾಂಡಪುರಾಣದಲ್ಲಿಯೂ ಸ್ಕಾಂದಪುರಾಣದಲ್ಲಿಯೂ ಬ್ರಹ್ಮವೈವರ್ತಪುರಾಣದಲ್ಲಿಯೂ ಬರುವ ಕಥೆಯಿದು. ಭವಿಷ್ಯೋತ್ತರಪುರಾಣವು ಈ ದೇವರ ಸ್ವರೂಪವನ್ನು ಬಣ್ಣಿಸುತ್ತ, ಅವನು ಕೈಗಳಲ್ಲಿ ಶಂಖ-ಚಕ್ರಗಳನ್ನು ಹಿಡಿಯದೆ ನಿಂತಿದ್ದಾನೆ ಎನ್ನುತ್ತದೆ—

ಅರಿಶಂಖವಿಹೀನೋಽಸೌ ಕಟನ್ಯಸ್ತಕರೋತ್ತಮಃ।
ದರ್ಶಯನ್ ಪಾಣಿನೈಕೇನ ದಕ್ಷಿಣೇನ ವೃಷಾಕಪಿಃ॥

ಚತುರ್ಭುಜಮೂರ್ತಿಯೆಂದು ಭಾವಿಸಿದರೂ ಮೂರ್ತಿಯ ಮೇಲಿನ ಕೈಗಳಲ್ಲಿ ಏನೂ ಇರದಿದ್ದುದರಿಂದ ಸ್ವರೂಪದ ವಿಚಾರವಾಗಿ ವಿವಾದ ಮೊದಲಾಯಿತೆಂದು ತೋರುತ್ತದೆ. ರಾಮಾನುಜರು ಮೂರ್ತಿಯು ವಿಷ್ಣುವೆಂದು ಸ್ಪಷ್ಟಪಡಿಸಲು ಶಂಖ-ಚಕ್ರಗಳನ್ನು ತೊಡಿಸಿದ್ದರೆ ಆಶ್ಚರ್ಯವಲ್ಲ. ಇಲ್ಲಿನ ದೇವರಿಗೆ ಬೇಕಾದಂತೆ ಆಯುಧವನ್ನು ತೊಡಿಸುವ ಪದ್ಧತಿ ಹಿಂದಿನಿಂದಲೂ ಇದ್ದಿತೆಂದು ಕಾಣುತ್ತದೆ. ವಾಮನಪುರಾಣವು 'ಚತುರ್ಬಾಹು'ವಾದ ಇವನನ್ನು 'ಶಂಖ-ಚಕ್ರ-ಧನುರ್ಬಾಣಪಾಣಿಂ ನೀಲೋತ್ಪಲ-ದ್ಯುತಿಂ' ಎಂದು ವರ್ಣಿಸಿದೆ; ಭವಿಷ್ಯೋತ್ತರಪುರಾಣದಲ್ಲಿಯೂ 'ಧನುರ್ಬಾಣಧರಃ ಶ್ರೀಮಾನ್ ಸಾಕ್ಷಾತ್ ಮನ್ವಥಮನ್ವಥಃ' ಎಂಬ ಒಕ್ಕಣೆಯಿದೆ. ಎಂದರೆ, ಈ ಮೂರ್ತಿಯ ಕೈಗಳಲ್ಲಿ ಶಂಖ-ಚಕ್ರಗಳು ಮಾತ್ರವಲ್ಲದೆ ಬಿಲ್ಲು-ಬಾಣಗಳೂ ಇರುತ್ತಿದ್ದುವೆಂದು ತಾತ್ಪರ್ಯ. ಈಗಲೂ ಮೂಲಮೂರ್ತಿಯ ಎರಡೂ ಭುಜಗಳಿಂದ ಕಂಕುಳಸಂದಿನವರೆಗೆ ಗೆರೆಗಳಿದ್ದು, ಬಿಲ್ಲುಬಾಣಗಳನ್ನು ತೊಡಿಸುವ ವಾಡಿಕೆಯಿದ್ದಂತೆ ತೋರುತ್ತದೆಯೆಂದು ಅಲ್ಲಿನ ಅರ್ಚಕರು ಹೇಳುತ್ತಾರೆ. ಸಾಮಾನ್ಯವಾದ ಎಡಗೈ ಕಟ್ಯವಲಂಬಿತಮುದ್ರೆಯಲ್ಲಿದ್ದು, ಬಿಲ್ಲನ್ನು ತೊಡಿಸಲು ಅನುಕೂಲವಾಗಿದೆಯಂತೆ.

ಸ್ಕಾಂದಪುರಾಣದಲ್ಲಿ 'ಅಸಿರತ್ನಗದಾಚಾಪಶಕ್ತಿತೋಮರಪಾಣಯೇ। ಪ್ರದೀಪ್ತಾ-ಯುಧಜಾಲಾಯ ಪ್ರದೀಪ್ತವಪುಷೇ ನಮಃ॥' ಎಂದು ಹೇಳಿ ಬಿಲ್ಲು-ಬಾಣಗಳಲ್ಲದೆ ಕತ್ತಿ, ಗದೆ, ಶಕ್ತ್ಯಾಯುಧ, ತೋಮರಗಳನ್ನು ಹಿಡಿದಿದ್ದಂತೆ ವರ್ಣನೆಯಿದೆ. ಸಾತ್ತ್ವತಸಂಹಿತೆಯಲ್ಲಿ 'ಶರ-ಚಾಪ-ಕರವ್ಯಗ್ರಂ ಖಡ್ಗ-ಕುಂತ-ಕುಠಾರಿಣಂ' ಎಂದು ಬಿಲ್ಲು-ಬಾಣಗಳ ಜೊತೆಗೆ ಕತ್ತಿ , ಕುಠಾರ(ಕೊಡಲಿ)ಗಳನ್ನೂ ದೇವರಿಗೆ ತೊಡಿಸುವ ಸೂಚನೆಯಿದೆ. ಪೇಯಾಳ್ವಾರರ ತಿರುವಂದಾದಿಯಲ್ಲಿ ಬೆಟ್ಟದ ದೇವರನ್ನು ಬಣ್ಣಿಸುತ್ತ "ನೀಳವಾದ ಮುಡಿ, ಇಳಿಬಿದ್ದ ಜಟೆ, ಕೈಗಳಲ್ಲಿ ಕೊಡಲಿ-ಚಕ್ರಗಳು" ಎಂದು ಮೊದಲಾಗಿ ಹೇಳಿದ್ದಾರೆ—

ತಾಳ್ ಜಡೈಯುಂ ನೀಳ್‌ಮುಡಿಯುಂ
ಒಣ್ ಮಳುವುಂ ಚಕ್ಕರಮುಂ (3, 63)

ಈ ಪಾಶುರವನ್ನೇ ಬಲವಾಗಿ ಹಿಡಿದು ಕೆಲವರು, ಇದು ಬರಿಯ ವಿಷ್ಣುಮೂರ್ತಿಯಲ್ಲ , ಹರಿಹರಸ್ವರೂಪ ಎಂದು ವಾದಮಾಡುತ್ತಾರೆ. ಹಾಗಾದರೆ, ಪುರಾಣಗಳಲ್ಲಿ ಬರುವ ವಿವರಗಳನ್ನೂ ಗಣನೆಗೆ ತಂದುಕೊಂಡರೆ ಈ ದೇವರು 'ಸರ್ವದೇವತಾತ್ಮಕ' ನೆನ್ನಬೇಕಾಗುತ್ತದೆ. ಆಳ್ವಾರರು ಕಂಡಾಗ ಮೂರ್ತಿಯ ಕೈಗಳಲ್ಲಿದ್ದ ಕೊಡಲಿಯೂ ಚಕ್ರವೂ ತೊಡಿಸಿದ್ದೇ ಇರಬೇಕು. ಮೂಲವರ ಕೈಗಳು ದಿಟವಾಗಿ ಬರಿಗೈಗಳು. ಈಗ ಕಾಣುವ ಶಂಖ-ಚಕ್ರಗಳು ಯಾವುದೋ ಕಾಲದಲ್ಲಿ ಅಳವಡಿಸಿದುವು ಅಷ್ಟೆ ಎಂದು ಸೂಚನೆ ಬರುತ್ತದೆ. ತಿರುಮಂಜನದ ಕಾಲದಲ್ಲಿಯೂ ಈ ತೊಡುಗೆಗಳನ್ನು ತೆಗೆಯುವುದಿಲ್ಲ. ರಾಮಾನುಜಾಚಾರ್ಯರು ತೊಡಿಸಿದುದೆಂದು ಕಾರಣವನ್ನು ಹೇಳುತ್ತಾರೆ. ಈಗೇನೋ ಶಂಖ-ಚಕ್ರಗಳನ್ನು ಬಿಟ್ಟು ಬೇರೆ ಯಾವ ಆಯುಧಗಳನ್ನೂ ಕೈಗಳಲ್ಲಿ ತೊಡಿಸುವುದಿಲ್ಲ , ನಡುವಿಗೆ ಒಂದು ಕಠಾರಿಯನ್ನು ಸಿಕ್ಕಿಸಿರುತ್ತಾರೆ.

ಉಳಿದೆರಡು ಕೈಗಳು ವರದ (ಬಲಗೈ) ಮತ್ತು ಕಟ್ಯವಲಂಬಿತ (ಎಡಗೈ) ಮುದ್ರೆಗಳಲ್ಲಿವೆ. ವರದಮುದ್ರೆಯೆಂದರೆ ಭಕ್ತರ ಬಯಕೆಗಳನ್ನು ತೀರಿಸುವ ವ್ರತವನ್ನು ತಳೆದಿರುವುದು; ವರದಾನದ ಮುದ್ರೆ. ಬಲಗೈಯ ಹಸ್ತವನ್ನು ಕೆಳಮುಖವಾಗಿ ಇರಿಸಿಕೊಂಡಿರುವುದನ್ನು, ತನ್ನ ಚರಣಗಳ ಕಡೆ ಕೈತೋರಿಸಿ ಅವೇ ಭಕ್ತರನ್ನು ಕಾಪಾಡತಕ್ಕುವು, ಶರಣ್ಯವಾದುವು ಎಂದು ತಿಳಿಯಪಡಿಸುವ ವಿಧಾನ ಎಂದೂ ಅರ್ಥಹೇಳುತ್ತಾರೆ—

ಶರಣ್ಯತ್ವೇನ ಪಾಣಿನಾ
ಕೃಪಯಾऽऽದಿಶತೇ ಪುಂಸಾಂ

ಹಾಗೆ ತನ್ನ ಚರಣಗಳಲ್ಲಿ ಶರಣುಬಂದವರು ಸಂಸಾರದಲ್ಲಿ ತೊಡಗಿದ್ದರೂ, ಅವರಿಗೆ ನೀರು ಮೊಳಕಾಲವರೆಗೆ ಮಾತ್ರ, ಅದು ಅವರನ್ನು ಮುಳುಗಿಸಲಾರದು **(ಸಂಸಾರಾಬ್ಧಿಃ ಜಾನುದಘ್ನಃ ಕಿಲ)** ಎಂದು ಎಡಗೈಯ ಕಟ್ಯವಲಂಬಿತಮುದ್ರೆಯ ಅರ್ಥವಂತೆ. ಪುರಾಣದಲ್ಲಿರುವ ಮೂರ್ತಿವರ್ಣನೆ—

ಶಂಖಂ ಚಕ್ರಂ ಧಾರಯಂತಂ ಕರಾಭ್ಯಾಂ
ಫಲಪ್ರದರ್ಶ್ಯೂರುಗ ವಾಮಹಸ್ತಮ್
ಪ್ರಾಪ್ಯಾವಿಮಾವಿತ್ಯಪರೇಣ ಪಾದೌ
ಸಂದರ್ಶಯಂತಂ ಕರಪಂಕಜೇನ

ಈ ವಿವರಣೆಯಲ್ಲಿ ಕಲ್ಪನೆಯ ಪಾಲು ಹೆಚ್ಚು ಎಂದು ಬೇರೆ ಹೇಳುವ ಅಗತ್ಯವಿಲ್ಲ. ಪ್ರಾಚೀನಶಿಲ್ಪಗಳಲ್ಲಿ ಕಟ್ಯವಲಂಬಿತಹಸ್ತ ಸಾಮಾನ್ಯವಾಗಿ ಕಂಡುಬರುತ್ತದೆ; ಪಲ್ಲವಶಿಲ್ಪದಲ್ಲಂತೂ ವಿಶೇಷವಾಗಿ ಇದರ ಬಳಕೆಯುಂಟು. ನಡುವನ್ನು ಹಿಡಿದು ನಿಲ್ಲುವುದು, ನಡುವಿಗೆ ಸುತ್ತಿದ ಧೋತ್ರದ ಕುಚ್ಚನ್ನು ಹಿಡಿದು ನಿಲ್ಲುವುದು ನಿತ್ಯಜೀವನದಲ್ಲೂ ಸಾಧಾರಣವಾಗಿ ಕಾಣಬರುವ ಭಂಗಿಯೇ ಅಲ್ಲವೆ? ಗಾಂಭೀರ್ಯ, ಗತ್ತು ಅದರಲ್ಲಿ ಎದ್ದುಕಾಣುತ್ತವೆ. ಈ ಮೂರ್ತಿಯಲ್ಲಿ , ಮೇಲೆ ಹೇಳಿದಂತೆ, ಬಿಲ್ಲನ್ನು ಹಿಡಿದಿರುವಂತೆ ಕಟ್ಯವಲಂಬಿತಮುದ್ರೆಯನ್ನು ಅಳವಡಿಸಿರಬಹುದು. ಈ ಕಟ್ಯವಲಂಬಿತವಾದ ಎಡಗೈ ತೊಡೆಗೆ ತಾಕಿಕೊಂಡಿರದೆ ಕೊಂಚ ಮುಂದಿದೆಯಂತೆ. ಅಂತೂ ಈ ಮೂರ್ತಿಯ ವರ್ಣನೆ—

ಕೇಯೂರಾಂಗದಸದ್ಭೂಷಂ ವೃತ್ತಾಯುತಚತುರ್ಭುಜಮ್।
ಜ್ವಾಲಾಯುತಸಹಸ್ರಾರಸುದರ್ಶನಧರಂ ಪರಮ್॥
ಶರಚ್ಚಂದ್ರಪ್ರತೀಕಾಶಪಾಂಚಜನ್ಯಧರಂ ಶುಭಮ್।
ಅಶ್ರಾಂತವರದಾನೋದ್ಯದ್ದಕ್ಷಪಾಣಿಸರೋರುಹಮ್॥
ಕಟೀತಟಸುವಿನ್ಯಸ್ತವಾಮಪಾಣಿಜಲೇರುಹಮ್। (ಬ್ರಹ್ಮಪುರಾಣ)

ಚತುರ್ಭುಜಃ ಶಂಖಚಕ್ರವರಾವನತಹಸ್ತಕಃ।
ಶ್ರೀವತ್ಸಕೌಸ್ತುಭೋರಸ್ಕೋ ವೈಜಯಂತ್ಯಾ ವಿರಾಜಿತಃ॥ (ಪದ್ಮಪುರಾಣ)

—ಹೀಗೆ ಬರುತ್ತದೆ.

ಮೂರ್ತಿಯ ಪಾದಗಳು ಗರ್ಭಗುಡಿಯ ನೆಲದ ಮಟ್ಟಕ್ಕಿಂತ ತಗ್ಗಿನಲ್ಲಿವೆ. ಗರ್ಭಗುಡಿಯಲ್ಲಿ ಮೂರ್ತಿಗೆ ಅಭಿಷೇಕ ಮಾಡಿದ ನೀರು ಹೊರಗೆ ಹೋಗುವ ಅವಕಾಶ ಸಾಕಷ್ಟು ಸಮರ್ಪಕವಾಗಿರದೆ, ಗೋಮುಖವಿದ್ದಿತಾದರೂ ಅದು ಕೆಲಸ ಮಾಡದೆ, ಅರ್ಚಕರು ನೀರಿನಲ್ಲಿಯೇ ನಿಂತು ಆರಾಧನೆನಡೆಸುವ ತೊಂದರೆಯನ್ನು ತಪ್ಪಿಸಲು ನೆಲದ ಮಟ್ಟವನ್ನು ಕೊಂಚ ಹೆಚ್ಚಿಸಿದರಂತೆ. ಮೂರ್ತಿಯಿರುವ ಕಡೆ ಮಾತ್ರ ಚಚ್ಚೌಕವಾಗಿ ತಗ್ಗಿದೆ. ಇದರಲ್ಲಿ ಪಾದಗಳೇನೋ ಕಾಣಿಸುತ್ತವೆ. ಆದರೆ ಪಾದಗಳ ಅಡಿಯಲ್ಲಿ ಇದೆಯೆನ್ನುವ ಪದ್ಮಪೀಠ ನೆಲದಲ್ಲಿ ಮುಚ್ಚಿಹೋಗಿದೆ; ತಿರುಮಂಜನದ ಸಮಯದಲ್ಲಿಯೂ ಕಾಣಿಸುವುದಿಲ್ಲ. ನಮ್ಮಾಳ್ವಾರರ ಒಂದು ವರ್ಣನೆಯಿಂದ, ಈಗ ಬಳಕೆಯಲ್ಲಿರುವಂಥ ಪೀಠವಿರಲಿಲ್ಲವೆಂದೂ, ಹಲಗೆಗಳಂತೆ ತೋರುವ ಕಟ್ಟೆಯೊಂದರ ಮೇಲೆ ಮೂರ್ತಿ ನಿಂತಿದೆಯೆಂದೂ ಊಹಿಸಿಕೊಳ್ಳಬಹುದು. ಸಾಮಾನ್ಯವಾಗಿ ಮೂರ್ತಿಯನ್ನು ತೋರಿಸುವಾಗ ಪಾದಗಳ ಮೇಲೆ ಬಂಗಾರದ ಕವಚವನ್ನು



ಮೂಲವರ (ಮಂಗಾಪುರದಲ್ಲಿ)

ಅಳವಡಿಸಿರುತ್ತಾರೆ; ಅದರಲ್ಲಿ ಪದ್ಮಪೀಠವನ್ನೂ ಕಾಣಿಸಿರುವುದರಿಂದ ಕವಚದ ಪಾದಗಳು ಕೊಂಚ ಮೇಲಟ್ಟದಲ್ಲಿವೆ. ಹೀಗಾಗಿ ಮೂರ್ತಿಯ ನಡುವಿನಿಂದ ಕಾಲುಗಳವರೆಗಿನ ಭಾಗ ಮೈ ಅಳತೆಗೆ ಕುಳ್ಳಾಗಿರುವಂತೆ ಕಾಣುತ್ತವೆ, ಮೊಳಕಾಲುಗಳು ಮುಂಚಾಚಿರುವಂತೆಯೂ ಕಾಣುತ್ತವೆ. ವಾಸ್ತವವಾಗಿ ಮೂಲಮೂರ್ತಿಯಲ್ಲಿ ಈ ಆಭಾಸವಿಲ್ಲ.

ವಕ್ಷಃಸ್ಥಲ-ಲಕ್ಷ್ಮೀ

ಮೂರ್ತಿಯ ವಕ್ಷಃಸ್ಥಲದಲ್ಲಿ ಶ್ರೀವತ್ಸಚಿಹ್ನೆಯ (ಇದೊಂದು ಆಭರಣವಿಶೇಷ, ಮೂಲಪ್ರಕೃತಿಯನ್ನು ಸಂಕೇತಿಸುವುದು) ಮೇಲ್ಭಾಗದಲ್ಲಿ ಬಲ-ಎದೆಯ ಮೇಲೆ ಲಕ್ಷ್ಮಿಯ

ಪ್ರತೀಕವಿದೆಯೆಂದು ಹೇಳುತ್ತಾರೆ. ಈ ಪ್ರತೀಕವಿರುವ ಸೂಚನೆ ಆಳ್ವಾರರ ಪಾಶುರ ಗಳಲ್ಲಿಯೇ ಇದೆ. ವರಾಹಪುರಾಣವು ಈ ಪ್ರತೀಕವನ್ನು, ಪದ್ಮಾಸನದಲ್ಲಿ ಅಳವಡಿಸಿದೆ ಯೆಂದೂ, ಎರಡು ಕೈಗಳ ವ್ಯೂಹಲಕ್ಷ್ಮಿಯೆಂದೂ ಬಣ್ಣಿಸಿದೆ—

ದ್ವಿಭುಜಾ ವ್ಯೂಹಲಕ್ಷ್ಮೀ ಸ್ಯಾತ್ ಬದ್ಧಪದ್ಮಾಸನಪ್ರಿಯಾ।
ಶ್ರೀನಿವಾಸಾಂಗಮಧ್ಯಸ್ಥಾ ಸುತರಾಂ ಕೇಶವಪ್ರಿಯಾ॥

ಭವಿಷ್ಯೋತ್ತರಪುರಾಣವು ಈ ವ್ಯೂಹಲಕ್ಷ್ಮಿಯನ್ನು ಪದ್ಮಾವತಿಯೆಂದು ಕರೆದಿದೆ—

ವರಪದ್ಮಾಸನೇ ಸುಸ್ಥಾಂ ವಿಧಾಯ ಕಮಲಾಲಯಾಮ್।
ಪದ್ಮಾವತೀಂ ವಿಶಾಲಾಕ್ಷೀಂ ಭಗವಾನ್ ಆತ್ಮವಕ್ಷಸಿ॥

ಮೂಲಮೂರ್ತಿಯಲ್ಲಿಯೇ ಈ ಲಕ್ಷ್ಮೀಸನ್ನಿಧಾನ ಇದೆಯೋ ಅಥವಾ ಆ ಸ್ಥಳದಲ್ಲಿ ಅಳವಡಿಸಿರುವ ಆಭರಣವಿಶೇಷವೋ ಎನ್ನುವ ವಿಚಾರವಾಗಿ ಸ್ವಲ್ಪ ವಿವಾದವಿದೆ. ಮೂಲಮೂರ್ತಿಯಲ್ಲಿ ಇರಲಿಲ್ಲವೆಂದೂ ರಾಮಾನುಜಾಚಾರ್ಯರು ಉತ್ತರಫಲ್ಗುನೀ ನಕ್ಷತ್ರವಿದ್ದ ಶುಕ್ಲಪಕ್ಷದ ದ್ವಾದಶೀ ಶುಕ್ರವಾರದಂದು ರತ್ನಮಾಲಿಕಾಯೋಗವಿದ್ದಾಗ "ನಿರವಧಿಕನಿತ್ಯೈಶ್ವರ್ಯಸಮೃದ್ಧಿಸಿದ್ಧಿ"ಗಾಗಿ ಕನಕಮಯಕಂಠಿಕೆಯಲ್ಲಿ 'ತಿರುಮಲ್ ನಾಚ್ಚಿಯಾರ'ನ್ನು ಮೂಲಮೂರ್ತಿಯ ವಕ್ಷಃಸ್ಥಲದಲ್ಲಿ ಪ್ರತಿಷ್ಠೆ ಮಾಡಿಸಿದರೆಂದೂ ತಿರುಮಲೈ-ಒಳಗು ಮೊದಲಾದ ಇತಿಹಾಸಮಾಲೆಯಲ್ಲಿ ಬರುತ್ತದೆ. ಹೀಗೆ ಲಕ್ಷ್ಮಿಯನ್ನು ಶುಕ್ರವಾರ ಪ್ರತಿಷ್ಠೆ ಮಾಡಿಸಿದಮೇಲೆ, ಶುಕ್ರವಾರದಂದೇ ಮೂಲವರಿಗೆ 'ತಿರುಮಂಜನ' ವಾಗಬೇಕೆಂಬ ಪದ್ಧತಿಯನ್ನೂ ಅವರೇ ಏರ್ಪಡಿಸಿದರಂತೆ. ವೈಖಾನಸ-ಆಗಮದ 'ಆನಂದಸಂಹಿತೆ'ಯಲ್ಲಿ—

ಕಂ ಚ ಲಕ್ಷ್ಮ್ಯಭಿಷೇಕಸ್ತು ವಾಸರೇ ಭಾರ್ಗವೇ ಹರೇಃ।
ಸಾನ್ನಿಧ್ಯಕಾರೀ ಸತತಂ ಸರ್ವಸಂಪತ್ ಪ್ರದಾಯಕಃ॥

ಎಂದಿರುವುದು ಇದನ್ನು ಸಮರ್ಥಿಸುತ್ತದೆ. ಹೀಗೆ ವೇಂಗಡದೊಡೆಯನಿಗೆ ಲಕ್ಷ್ಮಿಯನ್ನು ಒದಗಿಸಿಕೊಟ್ಟು, ಶಂಖ-ಚಕ್ರಗಳನ್ನೂ ಅಂಕನ ಮಾಡಿ ರಾಮಾನುಜಾಚಾರ್ಯರು ದೇವರಿಗೆ ಮಾವನಾದರೆಂದು, ಆಚಾರ್ಯರಾದರೆಂದು ಅವರ ಹಿರಿಮೆಯನ್ನು ಹೇಳುವುದಿದೆ! ಲಕ್ಷ್ಮಿಯ ಪ್ರತೀಕವನ್ನು ಪದಕದಲ್ಲಿ ಬಲಭಾಗದಲ್ಲಿ ಇಳಿಬಿಟ್ಟಿರುತ್ತಾರೆ.

ಮುಖದ ಮಂದಹಾಸ

ಮೂರ್ತಿಯ ತಲೆಯ ಮೇಲೆ ನೀಳವಾದ ಮುಡಿಯಿದೆಯೆಂದು ಪೇಯಾಳ್ವಾರರ ಪಾಶುರ ಹೇಳುವುದನ್ನು ಇನ್ನೊಂದು ಸಂದರ್ಭದಲ್ಲಿ ಗಮನಿಸಿದ್ದೇವೆ. ಭವಿಷ್ಯೋತ್ತರ ಮೊದಲಾದ ಪುರಾಣಗಳಲ್ಲಿಯೂ "ಅತಿ ಎತ್ತರವಲ್ಲದ ಜಟಾಮುಕುಟ" (**ನಾತಿದೀರ್ಘ**

ಜಟಾಧರಂ), "ಗುಪ್ಪೆಯಂತೆ ನಿಂತ ಜಟೆ" (ಉಷ್ಣೀಷಜಟಾಧರ), "ಮೇಲೆತ್ತಿ ಕಟ್ಟಿದ ಜಡೆಗೆ ಕೆಂಪುಬಣ್ಣದ ಬಟ್ಟೆಯನ್ನು ಸುತ್ತಿ" (ಶಬರೀಕೃತ ಕೇಶೇಷು ರಕ್ತವಸ್ತ್ರಂ ಸುವೇಷ್ಟ್ಯ ಚ) ಎಂಬ ವರ್ಣನೆಗಳನ್ನು ಕಾಣುತ್ತೇವೆ. ಈಗ ಮೂರ್ತಿಯ ತಲೆಯ ಮೇಲೆ ಕಿರೀಟದಂತೆ ಸುಮಾರು ಒಂದೂವರೆ ಅಡಿ ಎತ್ತರ ಇರುವ ಭಾಗ ಅಷ್ಟು ಸ್ಪಷ್ಟವಾಗಿ ಕಾಣುವುದಿಲ್ಲ. ಸಾಂಪ್ರದಾಯಿಕವಾದ ಕಿರೀಟದಂತೆ ಇಲ್ಲ ಅದು, ಹೆಚ್ಚೂಕಡಮೆ ಉದ್ದವಾದ ಕೊಳಗದಂತೆ ಕಾಣಿಸುತ್ತದೆ. ಹಣೆಯ ಮೇಲ್ಭಾಗದಲ್ಲಿ ಸಣ್ಣದೊಂದು ಅಡ್ಡಪಟ್ಟಿಯೂ ಅದರ ಮೇಲೆ ಸ್ವಲ್ಪ ಕೆತ್ತನೆಯ ಕೆಲಸವೂ ದಿಟ್ಟಿಸಿ ನೋಡಿದರೆ ಕಾಣುತ್ತವೆ. ತಿರುಮಂಜನವಾದೊಡನೆ ಈ ಭಾಗವನ್ನು ಬಟ್ಟೆಯಿಂದ ಮುಚ್ಚಿಬಿಡುವುದೂ ಉಂಟು. ಸಾಮಾನ್ಯವಾಗಿ ಮೂರ್ತಿಯ ತಲೆಯ ಮೇಲಿರಿಸುವ ಕಿರೀಟಗಳು ಮೂಲವಿವರದ ಪ್ರತಿಕೃತಿಗಳಂತೂ ಅಲ್ಲ. ತಲೆಯ, ಕತ್ತಿನ, ಭುಜಗಳ ಹಿಂಭಾಗದಲ್ಲಿ ಧಾರೆಧಾರೆಯಾಗಿ ಇಳಿಬಿದ್ದಿರುವ ಜಡೆಗಳನ್ನು ಕಾಣಿಸಿದ್ದಾರೆಂದು ಅರ್ಚಕರು ಹೇಳುತ್ತಾರೆ; ಈ ಜಡೆಗಳಲ್ಲಿ ಕೆಲವು ಭುಜದ ಮೇಲೆ ಮುಂಭಾಗದಲ್ಲಿಯೂ ಸ್ವಲ್ಪ ಕಾಣಿಸಿಕೊಳ್ಳುವುವಂತೆ.

ಮುಖ ಸೌಮ್ಯವಾಗಿದೆ, ಕಣ್ಣುಗಳು ವಿಶಾಲವಾಗಿದ್ದು ದೃಷ್ಟಿ ಸಮನಾಗಿದೆ. ಮೂಗು ಸ್ವಲ್ಪ ಚಪ್ಪಟೆಯೇ, ತುಂಬಿದ ಕೆನ್ನೆಗಳಿಗೂ ಮೂಗಿಗೂ ಅಂತರ ಅಷ್ಟಿಲ್ಲ. ತುಟಿಗಳು ತುಂಬಿಕೊಂಡಿವೆ. ತುಟಿಗಳ ಕೊನೆಗಳು ಮೇಲೆದ್ದು ಮುಖದ ಮೇಲೆ ಮಂದಹಾಸದ ಕಳೆಯನ್ನು ಸ್ಪಷ್ಟವಾಗಿ ಮೂಡಿಸಿವೆ. ಗಲ್ಲ ಖಚಿತವಾಗಿ ಎದ್ದು ನಿಲ್ಲುವುದಾದರೂ, ಅದರ ಕೊಂಚ ಭಾಗ ಮುಕ್ಕಾಗಿದೆಯೆಂದು ಹೇಳುತ್ತಾರೆ; ಅದನ್ನು ತುಂಬಲೆಂದೇ ಅಲ್ಲಿ ಪಚ್ಚಕರ್ಪೂರವನ್ನು ಲೇಪಿಸುವ ಪದ್ಧತಿಯಿದೆಯೆಂದು ವಿವರಣೆ. ಹಣೆಯ ಮೇಲೆ ಯಾವ ಚಿಹ್ನೆಯೂ ಕಾಣುವುದಿಲ್ಲ. ಹುಬ್ಬುಗಳು ಅಂದವಾಗಿ ಬಾಗಿವೆ. ಆದರೆ ಅವು ಸೇರುವೆಡೆ ಸ್ವಲ್ಪ ಉಬ್ಬಿರುವುದರಿಂದ ಕೋಪಗೊಂಡಂತೆ ಕೆಲವರಿಗೆ ಭಾಸವಾಗುವುದು. ಪುರಾಣಗಳು ಈ ಮೂರ್ತಿಯನ್ನು ಘೋರರೂಪ, ಸೌಮ್ಯರೂಪ ಎರಡೂ ಉಳ್ಳಂತೆ, "ರೂಕ್ಷಸೌಮ್ಯದ್ವಿವಿಧಾಕಾರಧಾರಿ"ಯೆಂದು ಬಣ್ಣಿಸಿರುವುದು ಇದಕ್ಕಾಗಿಯೇ ಎಂದು ತೋರುತ್ತದೆ—ತುಟಿಗಳ ಮೇಲೆ ನಗೆ, ಹುಬ್ಬುಗಳ ನಡುವೆ ಸಿಟ್ಟು, ಆದರೆ ಒಟ್ಟಾರೆ ಮುಖದ ಮೇಲೆ ಸೌಮ್ಯವಾದ ಕಳೆಯೇ; ಎದ್ದು ಕಾಣುವುದು ಮುಗುಳ್ನಗೆಯೇ.

ಕತ್ತಿನಲ್ಲಿ ಅರ್ಧವೃತ್ತಾಕಾರವಾಗಿ ಉಬ್ಬಿ ಕಾಣುವ ಮೂರು ಹಾರಗಳು; ಇನ್ನೊಂದೂ ಅದಕ್ಕೆ ಸೇರಿಕೊಂಡಂತೆ ತೋರುತ್ತದೆ. ಹಾರಗಳಿಂದ ಇಳಿಬೀಳುವ ಉಪವೀತ, ಅದನ್ನು ನಡುವೆ ಕಟ್ಟಿರುವ ಉದರಬಂಧ, ತೋಳುಗಳಲ್ಲಿ ಬಾಹುವಲಯ ಮತ್ತು ಕೇಯೂರಗಳು, ಸೊಂಟದಲ್ಲಿ ಕಟಿಬಂಧ, ಎರಡೂ ಕಡೆ ಧೋತರದ ಕುಚ್ಚುಗಳು, ಮೊಳಕಾಲನ್ನು ಕಾಣಿಸುವ ಗುಪ್ಪು, ಕಾಲಗಡಗ, ಕಾಲುಂಗುರ ಹೀಗೆ—ಆಭರಣಗಳ ಚಿತ್ರಣವಿದೆ. ಒಟ್ಟಿನಲ್ಲಿ ತುಂಬ ಚೆಲುವಾದ, ಕಳೆಕಳೆಯಾಗಿ ಬೆಳಗುವ ಮೂರ್ತಿ. ಇಡೀ ನಿಲುವಿನಲ್ಲಿ ಅಲೌಕಿಕವಾದ ಒಂದು ಗಾಂಭೀರ್ಯವನ್ನು ಗಮನಿಸ

ದಿರುವುದು ಸಾಧ್ಯವಿಲ್ಲ. ಇದನ್ನೇ ಹಿಂದಿನವರು 'ದಿವ್ಯಮಂಗಳವಿಗ್ರಹ'ವೆಂದು ಕರೆದರು. ಸಾಮಾನ್ಯವಾಗಿ ಈ ಮೂರ್ತಿಯ ಮೇಲೆ ತೊಡಿಸುವ ಕವಚ, ಉಡಿಸುವ ಉಡುಗೆ, ಹಾಕುವ ಹಾರಗಳು ಇವುಗಳಲ್ಲಿ ಮೂಲವಿಗ್ರಹದ ಸೊಗಸು ಮರೆಯಾಗುತ್ತದೆ.

ನಾಮಗಳು

ಬೆಟ್ಟದ ದೇವರಿಗೆ ನಾಮದ ಬಲವೇ ಬಲ! ಆದರೆ ಎಲ್ಲ ನಾಮಗಳಂತಲ್ಲ ಈ ನಾಮ. ಈ ನಾಮವಾದರೋ ದೇವರ ಮೋರೆಯ ಮೇಲೆ ಮೂಡಿಕೊಂಡುದು 1465ರ ಸುಮಾರಿಗಷ್ಟೆ. ಮುಖವನ್ನೂ ಮುಕ್ಕಾಲು ಭಾಗ ಮುಚ್ಚಿ ನಾಮವಿರುತ್ತದೆ. ಇದಕ್ಕೆ 'ತಿರುಮಣ್-ಕಾಪ್ಪು' ಎಂದು ಹೆಸರಾದರೂ ಮಣ್ಣಿನ ನಾಮವಲ್ಲ. ಶ್ರೀವೈಷ್ಣವರ ನಾಮ ಬಿಳಿಯ ಮಣ್ಣಿನದಾಗಿರುತ್ತದೆ, 'ಶ್ವೇತಮೃದೂರ್ಧ್ವಪುಂಡ್ರ' ಎಂದೇ ಹೆಸರು; ನಡುವೆ 'ಕುಂಕುಮರೇಖೆ'. ಆದರೆ ವೇಂಗಡದೊಡೆಯನ ಮುಖದ ಮೇಲೆ ಕಾಣುವ ನಾಮ ಪಚ್ಚಕರ್ಪೂರದ್ದು. ನಡುವೆ ತಿಲಕದಂತಿರುವ ನಾಮ ಕಸ್ತೂರಿಯದು. ಊರ್ಧ್ವಪುಂಡ್ರದ್ರವ್ಯಗಳಲ್ಲಿ 'ಕಸ್ತೂರೀ-ಕರ್ಪೂರ-ಶ್ವೇತಮೃತ್ತಿಕಾ-ಗೋಪೀಚಂದನ-ಮುಕ್ತಾ-ಹೇಮ-ರಜತ'ಗಳನ್ನೇನೋ ಸೇರಿಸಿದ್ದಾರೆ. ವೈಖಾನಸಸಂಪ್ರದಾಯದಲ್ಲಿ—

ನಾಸಿಕಾಮೂಲಮಾರಭ್ಯ ರೇಖಾದ್ವಿತಯಸಂಯುತಮ್।
ಧಾರಯೇದೂರ್ಧ್ವಪುಂಡ್ರಂ [ಚ] ಹರೇಃ ಫಾಲತಲೇ ಶುಭೇ॥

—ಎಂದು ಹೇಳುತ್ತಾರೆ. ಮೂಗಿನ ತುದಿಯಿಂದ ಮೊದಲುಮಾಡಿಕೊಂಡು ಎರಡು ಕವಲಾಗಿ ಮೇಲೆ ಹಣೆಗಳನ್ನು ಮುಚ್ಚಿರಬೇಕೆಂದು ವಿಧಿ; ನಡುವಣ ರೇಖೆ ಹುಬ್ಬುಗಳು ಸೇರುವೆಡೆಯಿಂದ ಮೇಲೇಳಬೇಕು. ಇಲ್ಲಿ ಹಣೆಯನ್ನು ಮಾತ್ರವಲ್ಲದೆ ಪಚ್ಚಕರ್ಪೂರದ ಲೇಪ ಎರಡು ಕಣ್ಣುಗಳನ್ನೂ ಮುಚ್ಚಿರುತ್ತದೆ. ಶುಕ್ರವಾರದ ತಿರುಮಂಜನಕ್ಕೆ ಸಿದ್ಧತೆಯಾಗಿ ಗುರುವಾರದಂದು ಈ ನಾಮವನ್ನು ಕೆರೆದು ತೆಳುವಾಗಿಸಿ ಕಣ್ಣುಗಳು ನೋಡುವವರಿಗೆ ಕಾಣುವಂತೆ ಮಾಡುತ್ತಾರೆ. ಇದಕ್ಕೆ 'ನೇತ್ರದರ್ಶನ'ವೆಂಬ ಹೆಸರೂ ಬಳಕೆಗೆ ಬಂದಿದೆ. ಬೆಟ್ಟದ ಗುಡಿಯ ದೇವರಿಗೆ ಈ ಬಗೆಯ ನಾಮವಿಡುವ ಪದ್ಧತಿ ಮೇಲೆ ಹೇಳಿದಂತೆ ಕ್ರಿಸ್ತಾಬ್ದ 1465ರಿಂದ ಮೊದಲಾಯಿತು; ಅದಕ್ಕೆ ಮೊದಲು ನಾಮ ಹೇಗಿದ್ದಿತೋ ಹೇಳುವುದು ಕಷ್ಟ. ಹಳೆಯ ಚಿತ್ರಗಳಲ್ಲಿ ಈಗಿನ ನಾಮ ಕಾಣುವುದಿಲ್ಲ. ಪದ್ಮಪುರಾಣವು ಶ್ರೀನಿವಾಸನ ನಾಮ ಅರ್ಧಚಂದ್ರಾಕಾರದಲ್ಲಿದೆಯೆಂದು ಹೇಳಿರುವುದನ್ನು ಗಮನಿಸ ಬೇಕು—

ಅಷ್ಟಮೀಂದುಕಲಾಕಾರೇ ಲಲಾಟೇ ದರ್ಪಣಸ್ಫುಟೇ।
ಊರ್ಧ್ವಪುಂಡ್ರಂ ದಧಾರಾಥ ಶ್ರೀನಿವಾಸಃ ಸತಾಂ ಗತಿಃ॥

ಅದೇ ಪುರಾಣದಲ್ಲಿ ಇನ್ನೊಂದೆಡೆ 'ಅಷ್ಟಮೀಂದುಕಲಾಧಾರ-ಲಲಾಟಸ್ಥೋऽರ್ಧ್ವ

ಪುಂಡ್ರಕಃ' ಎಂದು ಮೂರ್ತಿವರ್ಣನೆಯಿದೆ. ನಾಮ ಅರ್ಧಚಂದ್ರಾಕಾರವಾಗಿದ್ದಾಗಲೂ ಕಣ್ಣುಗಳನ್ನು ಮುಚ್ಚುತ್ತಿದ್ದಿತೇ ಎನ್ನುವುದು ತಿಳಿಯುವುದಿಲ್ಲ, ಬಹುಶಃ ಇರಲಾರದು. ಅದು 'ನಾಸಿಕಮೂಲ'ವೆನ್ನುವ ಮಾತಿಗೆ 'ನಾಸಿಕಾಯಾಸ್ತ್ರಿಭಾಗಃ' ಎಂದರ್ಥ ಮಾಡುವುದೂ ಉಂಟು, ಮೂಗಿನ ತುದಿಯೆಂದರೆ ಮೂಗಿನ ಮೂರನೇ ಒಂದು ಭಾಗ. ಇಲ್ಲಿಂದ ನಾಮ ಮೊದಲಾದರೆ ಕಣ್ಣುಗಳ ಕೊಂಚಭಾಗ ನಾಮದೊಳಗೆ ಅಡಗುವುದು ಸಹಜ. ಶಾಸ್ತ್ರವೇನೇ ಇರಲಿ, ಪದ್ಧತಿಯೇನೇ ಇರಲಿ, ಈ ನಾಮದಿಂದ ಮೂರ್ತಿಯ ಸುಂದರವಾದ ಕಣ್ಣುಗಳು ಕಾಣದಾಗುತ್ತವೆ. ಗುಡಿಯಲ್ಲಿ ಈಗ ಮೂಗಿನ ಎರಡೂ ಕಡೆಗಳನ್ನೂ ಮೂಗನ್ನೂ ಹಣೆಯನ್ನೆಲ್ಲವನ್ನೂ ಮುಚ್ಚಿ ಪಚ್ಚಕರ್ಪೂರ ಬಳಿಯುತ್ತಾರೆ. ನಡುವೆ ಕಸ್ತೂರಿಯಿಂದ ತಿಲಕವನ್ನು ತಿದ್ದುತ್ತಾರೆ. ಬಿಳಿಯ ಭಾಗವನ್ನು ನಾಮ ವೆಂದಾಗಲೀ ಊರ್ಧ್ವಪುಂಡ್ರವೆಂದಾಗಲೀ ಕರೆಯುವುದು ಅಷ್ಟಾಗಿ ಸರಿಯಾಗುವುದಿಲ್ಲ. 'ಕಸ್ತೂರೀತಿಲಕ'ವೇನೋ ಸರಿ, ಊರ್ಧ್ವಪುಂಡ್ರವೇ.

ಭೋಗ-ಶ್ರೀನಿವಾಸ

ಬೆಟ್ಟದ ಗುಡಿ 'ಏಕಮೂರ್ತಿ-ಆಲಯ'; ಎಂದರೆ ಗರ್ಭಗುಡಿಯಲ್ಲಿರುವ ಧ್ರುವಬೇರವೊಂದೇ ಬೆಟ್ಟದ ಮೇಲೆ ಪೂಜೆಗೊಳ್ಳುವುದು. ಗುಡಿಯ ಆವರಣದೊಳಗೆ ಇತರ ಸನ್ನಿಧಿಗಳಿವೆ (ವರದರಾಜ, ನರಸಿಂಹ, ಭಾಷ್ಯಕಾರರು, ವಿಷ್ವಕ್ಸೇನ). ಆದರೆ ಇವುಗಳಲ್ಲೆಲ್ಲೂ ಪ್ರತ್ಯೇಕವಾದ ಪೂಜೆ ನಡೆಯುವುದಿಲ್ಲ. ಬೆಟ್ಟದ ಮೇಲೆ ಇತರ ಕೆಲವು ಗುಡಿಗಳಿವೆ; ಅಲ್ಲಿಯೂ ಪ್ರತ್ಯೇಕವಾದ ಪೂಜೆ ನಡೆಯುವುದಿಲ್ಲ. ಬೆಟ್ಟದ ಮೇಲೆ ಪೂಜೆಗೊಳ್ಳುವುದು ವೇಂಗಡದೊಡೆಯನ ಒಂದೇ ಮೂರ್ತಿ. ಗರ್ಭಗುಡಿಯಲ್ಲಿ ಕ್ರಿಸ್ತಾಬ್ದ 1000ರ ಸುಮಾರಿನವರೆಗೂ ಬೇರೆ ಯಾವ ಮೂರ್ತಿಯೂ ಇರಲಿಲ್ಲ.

ಕಾಲಕ್ರಮದಲ್ಲಿ, ಕಾರಣಾಂತರಗಳಿಂದ ಕೆಲವು ಲೋಹದ ಮೂರ್ತಿಗಳು ಗರ್ಭಗುಡಿಯನ್ನು ಹೊಕ್ಕವು. ಗರ್ಭಗುಡಿಯೆದುರು ನಿಂತು ನೋಡುವಾಗ ಇವುಗಳಲ್ಲಿ ಯಾವುದೂ ಕಣ್ಣಿಗೆ ಬೀಳುವುದಿಲ್ಲ. ಇಣುಕಿ ನೋಡಿದರೆ ಒಂದೆರಡು ಕಂಡಾವು. ಏಕಮೂರ್ತಿ-ಆಲಯವಾದರೂ, ಆರಾಧನೆಯಲ್ಲಿ ಆಗಮದ ಪಾತ್ರ ಹಿಗ್ಗಿದಂತೆ ಹಲವಾರು ವಿಧಿಗಳು ಅಗತ್ಯವಾದುವು. ಈ ವಿಧಿಗಳಿಗನುಸಾರವಾಗಿ ಹಲವು ಮೂರ್ತಿಗಳು ಮೂಡಿಕೊಳ್ಳಬೇಕಾಯಿತು. ಗರ್ಭಗುಡಿಯಲ್ಲಿ ಸ್ವಯಂವ್ಯಕ್ತವೆನಿಸಿ ಧ್ರುವವಾಗಿ ನಿಂತ ಮೂಲವರ ಕಳೆಯನ್ನು ಹೊತ್ತು, ಬೇರೆಬೇರೆ ವಿಧಿಗಳಲ್ಲಿ (ಸ್ನಪನ, ಶಯನ, ಉತ್ಸವ, ಬಲಿಹರಣ ಮೊದಲಾಗಿ) ಮೂಲವರನ್ನು ಪ್ರತಿನಿಧಿಸಿ ಇತರ ಚಲ-ಮೂರ್ತಿಗಳು ಗರ್ಭಗುಡಿಯಲ್ಲಿ ಮೈದಳೆದವು.

ಗರ್ಭಗುಡಿಯಲ್ಲಿ ನೆಲೆಯಾಗಿ ನಿಂತ ಮೂಲವರನ್ನು ಧ್ರುವ ಅಥವಾ ಅಚಲ ಬೇರವೆನ್ನುತ್ತಾರೆ. ಬೇರವೆಂದರೆ ವಿಗ್ರಹ, ಪ್ರತಿಮೆ, ಮೂರ್ತಿ. ಇದು ಉಳಿದ ಬೇರಗಳಿಗೆ ಬೇರಿದ್ದಂತೆ, ಇದರಿಂದಲೇ ಉಳಿದ ಬೇರಗಳಿಗೆ ಬೆಲೆ ಬರುವುದು.



ಭೋಗ-ಶ್ರೀನಿವಾಸ

ಇದನ್ನು ತಿರುವೇಂಗಡಮುಡೈಯಾನ್, ತಿರುಮಲೈಕ್ಕೋಯಿಲ್-ಆಳ್ವಾರ್, ತಳಮಳಗಿರಿಯಪ್ಪನ್ ಎಂದು ಕರೆಯುತ್ತಾರೆ. ತಿರುಮಲೆಯಪ್ಪ ಎನ್ನುವುದು ಜನರ ಬಾಯಲ್ಲಿ 'ತಿಮ್ಮಪ್ಪ' ಎಂದಾಯಿತು. ಉತ್ತರದೇಶದವರು ಇದನ್ನು 'ಬಾಲಾಜಿ' ಎಂದು ಕರೆಯುತ್ತಾರೆ. ಬಾಲಾಜಿ ಎನ್ನುವುದು ಜಾನಪದನೆಲೆಯಲ್ಲಿ ಕಾಣಿಸಿಕೊಳ್ಳುವ ಯಕ್ಷ, ಗ್ರಾಮದೇವತೆ, ಗಂಧರ್ವ ಮೊದಲಾದ ಚೈತನ್ಯಗಳಿಗೆ ಸಾಮಾನ್ಯವಾದ ಹೆಸರು. ಆ ಕಡೆ ಹನುಮಂತನನ್ನೂ ಬಾಲಾಜಿಯೆಂದು ಕರೆಯುವುದಿದೆ; ಹಲವಾರು ಕ್ಷುದ್ರದೇವತೆ

ಗಳು ಬಾಲಾಜಿಯೆನಿಸಿಕೊಳ್ಳುತ್ತವೆ. ಈ ಮಾತಿಗೆ ಪ್ರಭಾವಶಾಲಿಯಾದ, ಕಾರಣಿಕವುಳ್ಳ ದೈವ ಎಂದಷ್ಟೇ ಅರ್ಥ.

ಈ ಮೂರ್ತಿ ಗರ್ಭಗುಡಿಯಲ್ಲಿ ನೆಲೆನಿಂತದ್ದು; ಆ ಚೌಕಟ್ಟನ್ನು ಬಿಟ್ಟು ಹೊರಬರುವಂತಿಲ್ಲ. ಗುಡಿಯ ಹಿರಿಮೆ ಜನರಿಗೆ ಮನವರಿಕೆಯಾಗಿ, ಗುಡಿಯಲ್ಲಿ ಉತ್ಸವಗಳು ನಡೆಯತೊಡಗಿದಾಗ ಈ ಸ್ಥಿರವಿಗ್ರಹವನ್ನು ಪ್ರತಿನಿಧಿಸುವ ಇನ್ನೊಂದು ಅಂಥದೇ ಮೂರ್ತಿಯ ಅಗತ್ಯ ಬಿದ್ದಿತು. ಈ ಅಗತ್ಯವನ್ನು ಪೂರೈಸಲೆಂದೇ ಪಲ್ಲವರಾಣಿ ಕಾಡವನ್-ಪೆರುನ್-ದೇವಿ-ಸಾಮವೈ, ಕ್ರಿಸ್ತಾಬ್ದ 966ರಷ್ಟು ಹಿಂದೆಯೇ ಬೆಳ್ಳಿಯ ಸಣ್ಣದೊಂದು ಮೂರ್ತಿಯನ್ನು ಮಾಡಿಸಿಕೊಟ್ಟು, ಅದನ್ನು ಗರ್ಭಗುಡಿಯೆದುರು ಮಂಡಪವೊಂದರಲ್ಲಿ ಇರಿಸುವ ಏರ್ಪಾಡು ಮಾಡಿದಳು. ಈ ವಿಚಾರವು ಗುಡಿಯ ಮೊದಲ ಪ್ರಾಕಾರದ ಉತ್ತರ ಗೋಡೆಯ ಮೇಲಿರುವ ಶಾಸನದಿಂದ ತಿಳಿದುಬರುತ್ತದೆ. ಈ ವಿಚಾರ ಹಿಂದೆಯೇ ಬಂದಿದೆ. ಇದನ್ನು ಮಣವಾಳಪ್ಪೆರುಮಾಳ್ ಎಂದು ಕರೆದರು. ಇದು ಸಿದ್ಧವಾದದ್ದು ಸ್ನಪನಕ್ರಿಯೆಗೆ, ಎಂದರೆ ದಿನನಿತ್ಯದ ಅಭಿಷೇಕಕ್ಕೆ. ಮೂಲವರಿಗೆ ದಿನವೂ ಅಭಿಷೇಕಮಾಡುವ ಪದ್ಧತಿ ಹಿಂದಿನಿಂದ ಇಲ್ಲ. ಅದನ್ನು ಮಾಡಿರುವ ದ್ರವ್ಯದ ಸ್ವಭಾವವೇ ಕಾರಣವೋ, ಗರ್ಭಗುಡಿಯಿಂದ ನೀರು ಹೊರ ಹಾಯುವ ತೊಂದರೆಯೋ ನಿಮಿತ್ತವೋ, ಆಗಮದ ವಿಧಿಯೇ ಹಾಗಿದ್ದಿತೋ ತಿಳಿಯದು. ವೈಖಾನಸ-ಆಗಮವೇನೋ ಶುಕ್ರವಾರದ ತಿರುಮಂಜನವನ್ನು ವಿಧಿಸುತ್ತದೆ. ಮೂಲವರಿಗೆ ವಾರಕ್ಕೊಮ್ಮೆ, ಶುಕ್ರವಾರದಂದು ಮುಂಜಾನೆ ವಿಶೇಷಸಿದ್ಧತೆಗಳನ್ನು ಮಾಡಿಕೊಂಡು ಸ್ನಾನಮಾಡಿಸುತ್ತಾರೆ. ಆದರೆ ದಿನನಿತ್ಯದ ತಿರುವಾರಾಧನೆಯಲ್ಲಿ ಸ್ನಾನ ಸೇರುತ್ತದೆಯಲ್ಲವೇ? ಇದಕ್ಕಾಗಿ ಇನ್ನೊಂದು ಸಣ್ಣಮೂರ್ತಿಯನ್ನು ಇರಿಸಿಕೊಂಡು ವಿಧಿಯನ್ನು ಮುಗಿಸುವ ವಾಡಿಕೆ ಬಂದಿತು. ಸಾಮವೈ ಮಾಡಿಸಿಕೊಟ್ಟ ಮೂರ್ತಿ ಇದಕ್ಕಾಗಿಯೇ.

ಗರ್ಭಗುಡಿಯಲ್ಲಿ ಈ ಮೂರ್ತಿಯನ್ನು ಇರಿಸುವುದೂ, ಅದಕ್ಕೆ ಅಲ್ಲಿಯೇ ಅಭಿಷೇಕಮಾಡುವುದೂ ಆಗಮದ ವಿಧಿಗೆ ಸರಿತೋರದೆ, ಪಲ್ಲವರಾಣಿಯು ಗರ್ಭಗುಡಿಯೆದುರು ಸ್ನಪನಮಂಡಪವನ್ನೇ ಕಟ್ಟಿಸಿಕೊಟ್ಟು, ಅದರಲ್ಲಿಯೇ ಮಣವಾಳಪ್ಪೆರುಮಾಳನ್ನು ಪ್ರತಿಷ್ಠೆ ಮಾಡಿಸಿದಳು. ಈಗಲೂ ಈ ಮೂರ್ತಿಗೇ ದಿನದ ಸ್ನಾನ ನಡೆಯುತ್ತದೆ, ಆದರೆ ಸ್ನಪನಮಂಡಪದಲ್ಲಲ್ಲ. ಸಹಸ್ರಕಳಶಾಭಿಷೇಕದ ಸಂದರ್ಭದಲ್ಲಿ ಮಾತ್ರ ಸ್ನಪನ ಮಂಡಪಕ್ಕೆ ಬಿಜಯಮಾಡುತ್ತದೆ. ಉಳಿದಂತೆ ಗರ್ಭಗುಡಿಯಲ್ಲೇ (ಅಥವಾ ಮುಖಮಂಡಪದಲ್ಲಿ) ಸ್ನಪನವಿಧಿ ನಡೆಯುತ್ತದೆ. ಆಗ ಈ ಮೂರ್ತಿಯನ್ನು ಅದರ ಜೀವಸ್ಥಾನದಿಂದ ಹೊರಡಿಸಿ ಸ್ನಪನಪೀಠದ ಮೇಲೆ ಇರಿಸುತ್ತಾರೆ, ಅಭಿಷೇಕವಾದ ನಂತರ ಮತ್ತೆ ಜೀವಸ್ಥಾನಕ್ಕೆ ಹಿಂದಿರುಗಿಸುತ್ತಾರೆ.

ಇದನ್ನು ಗುಡಿಯಲ್ಲಿ ಸ್ನಪನಬೇರವೆಂದು ಕರೆಯುವ ವಾಡಿಕೆ ಇಲ್ಲ. ಆಗಮದ ಪರಿಭಾಷೆಯಲ್ಲಿ ಇದು 'ಕೌತುಕಬೇರ'. ಮೂಲವರ ಮುಖ್ಯಪ್ರತಿನಿಧಿಯಾಗಿ,

ಮೂಲವರೊಂದಿಗೇ ಎಲ್ಲ ಆರಾಧನೆಗಳಲ್ಲೂ ಪಾಲ್ಗೊಳ್ಳುವುದು ಇದರ ತಾತ್ಪರ್ಯ. ಮೂಲವರಿಗೆ ಸಲ್ಲಬೇಕಾದ, ಆದರೆ ಸಾಧ್ಯವಿಲ್ಲದ, ಕೆಲವು ವಿಶೇಷವಿಧಿಗಳನ್ನು ಇದು ಅನುಭವಿಸುವುದು, ಎಂದರೆ ಭೋಗಿಸುವುದು. ಸ್ನಪನ, ಶಯನ, ಇವನ್ನು ಮೂಲವರಿಗೆ ಮಾಡುವುದು ಸಾಧ್ಯವಿಲ್ಲದಾಗ ಈ ಮೂರ್ತಿ ನೆರವಿಗೆ ಬರುತ್ತದೆ.

ತತ್ರಾಪಿ ಕೌತುಕೇ ಕುರ್ಯಾನ್ನಿತ್ಯಂ ವಿಧಿವದರ್ಚನಮ್।
ನಿತ್ಯಾರ್ಚಾಮಧಿಕಾರ್ಚಾಂ ಚ ವಿಶೇಷಾರ್ಚಾಂ ಚ ಕೌತುಕೇ॥

(ಕ್ರಿಯಾಧಿಕಾರಃ, 9.16)

ನಿತ್ಯಾರ್ಚನೆಯಲ್ಲಿ ಮೂಲವರೊಂದಿಗೇ ಇದ್ದು, ವಿಶೇಷಾರ್ಚನೆಯನ್ನು ತಾನೇ ಕೈಗೊಳ್ಳುವುದರಿಂದ ಇದಕ್ಕೆ 'ಭೋಗ-ಶ್ರೀನಿವಾಸ'ನೆಂದು ಹೆಸರು ಬಂದಿದೆ. ಕೌತುಕ ವೆಂದರೆ ಉತ್ಸವ, ಸೂತ್ರ ಎಂದು ಅರ್ಥಗಳಿವೆ. ಉತ್ಸವವೆಂದರೆ ವಿಶೇಷವಾದ ಆರಾಧನೆ. ಸೂತ್ರವೆಂದರೆ ದಾರ, ಮೂಲವರೊಂದಿಗೆ ಸಂಬಂಧವನ್ನು ಪಡೆದಿರುವ ಸಂಕೇತ. ಗರ್ಭಗುಡಿಯಲ್ಲಿ ಮೂಲವರ ಪಾದಪೀಠದ ಎದುರೇ ಎಡಗಡೆಗೆ ಈ ಮೂರ್ತಿಯಿರುತ್ತದೆ. ಗರ್ಭಗುಡಿಯಲ್ಲಿ ಮೂಲಮೂರ್ತಿ ಇರುವುದು ಹಿಂಬದಿಯ ಗೋಡೆಗೆ ಹತ್ತಿರವಾಗಿಯೇ. ಎಂದರೆ ನಟ್ಟನಡುವೆ ಬ್ರಹ್ಮಸ್ಥಾನದಲ್ಲಿ ಅಲ್ಲ. ಬ್ರಹ್ಮಸ್ಥಾನ ದಲ್ಲಿರುವುದು ಈ ಕೌತುಕಮೂರ್ತಿಯೇ. ಎಲ್ಲ ಭೋಗಗಳೂ, ಎಂದರೆ ಉಪಚಾರ ಆರಾಧನೆಗಳೂ, ಇದಕ್ಕೇ ನಡೆಯುವುದು. ಇವು ಮೂಲಮೂರ್ತಿಗೆ ಸಲ್ಲಲೆಂದು ಇದಕ್ಕೂ ಮೂಲವರಿಗೂ ಸೇರಿದಂತೆ ಬಂಗಾರ-ಬೆಳ್ಳಿಕೊಂಡಿಗಳಿರುವ ರೇಷ್ಮೆಯ ಸೂತ್ರವೊಂದಿರುತ್ತದೆ. ಯಾವ ಸಂದರ್ಭದಲ್ಲಿಯೂ ಈ ಸೂತ್ರವನ್ನು ಬಿಟ್ಟು ಭೋಗಶ್ರೀನಿವಾಸ ಹೋಗುವಂತೆಯೇ ಇಲ್ಲ. ಸಾಮವೈ ಇದನ್ನು ಪ್ರತಿಷ್ಠೆ ಮಾಡಿಸಿ ದಾಗಲೇ ಮೂಲವರಿಂದ ಹೊರಟ ಈ ಸಂಬಂಧಸೂತ್ರ ಕೌತುಕಮೂರ್ತಿಯನ್ನು ಬಳಸಿಕೊಂಡು ಬರುವಂತೆ ಏರ್ಪಾಡು ಮಾಡಿದ್ದರೆಂದು ಪ್ರತೀತಿ. ಆಗ ಈ ಮೂರ್ತಿಯಿದ್ದುದು 'ಸ್ನಪನಮಂಡಪ'ದಲ್ಲಿ. ಎಂದರೆ, ಬಂಗಾರಬಾಗಿಲಿನ ಒಳ ಅಂಕಣದಲ್ಲಿ. ಎಂದರೆ ಸಂಬಂಧಸೂತ್ರ ಸುಮಾರು ದೀರ್ಘವಾಗಿಯೇ ಇರಬೇಕು. ಮುಂದೆ ಈ ಮೂರ್ತಿಯು ಸ್ನಪನಮಂಡಪವನ್ನು ಬಿಟ್ಟು ಗರ್ಭಗುಡಿಯನ್ನೇ ಸೇರಿತಷ್ಟೆ. ಈಗಲೂ ಈ ಸೂತ್ರದ ಹರವಿನಲ್ಲೇ ಭೋಗಶ್ರೀನಿವಾಸನು ಬಂಗಾರಬಾಗಿಲಿನವರೆಗೂ ಬರಬಹುದು, ಅಲ್ಲಿಂದಾಚೆ ಬರುವ ಹಾಗಿಲ್ಲ.

ಇದೇ ಮೂರ್ತಿಯನ್ನು ಧನುರ್ಮಾಸವನ್ನು ಬಿಟ್ಟು ವರ್ಷದ ಉಳಿದ ದಿನಗಳಲ್ಲೆಲ್ಲ ಶಯನವಿಧಿಗೂ ಬಳಸುತ್ತಾರೆ. ದಿನದ ಪೂಜೆಯೆಲ್ಲ ಮುಗಿದು, ರಾತ್ರಿ ದೇವರನ್ನು ಮಲಗಿಸುವ ವಿಧಿ ಶಯನೋತ್ಸವ, ಅಥವಾ ಏಕಾಂತಸೇವೆ. ಆ ಸಂದರ್ಭದಲ್ಲಿ ಸ್ನಪನಮಂಡಪದ ಸೂರಿನಿಂದ ಬೆಳ್ಳಿಯ ಸರಪಣಿಗಳಿಂದ ಉಯ್ಯಾಲೆಯೊಂದನ್ನು ಇಳಿಬಿಟ್ಟು ಅದರ ಮೇಲೆ ಸುಪ್ಪತ್ತಿಗೆ ಹಾಸಿ, ಮಣವಾಳಪ್ಪೆರುಮಾಳನನ್ನು ಗರ್ಭಗುಡಿ ಯಿಂದ ತಂದು ಮಲಗಿಸುತ್ತಾರೆ. ಮರುದಿನ ಮುಂಜಾನೆ, ತಿರುಮಾಮಣಿಮಂಡಪದಲ್ಲಿ

ಸುಪ್ರಭಾತಸೇವೆ ನಡೆಯುತ್ತಿರುವಾಗ, ತೆರೆಯ ಹಿಂದೆ ಮಣವಾಳಪ್ಪೆರುಮಾಳನನ್ನು ಉಯ್ಯಾಲೆಯಿಂದ ಎಬ್ಬಿಸಿ, ಗರ್ಭಗುಡಿಗೆ ಒಯ್ದು ಜೀವಸ್ಥಾನಕ್ಕೆ ಸೇರಿಸುತ್ತಾರೆ. ಈ ವಿಧಿ ಮುಗಿಯುವವರೆಗೂ ಬಂಗಾರಬಾಗಿಲು ಮುಚ್ಚಿರಬೇಕಷ್ಟೆ. ಆಗ ದೇವರ ದರ್ಶನಕ್ಕಾಗಿ ನೆರೆದ ಭಕ್ತರ ಸಲುವಾಗಿ 'ಸುಪ್ರಭಾತಸೇವೆ' ನಡೆಯುತ್ತದೆ. ಈಗ ಎಲ್ಲರಿಗೂ ಪರಿಚಿತವಾಗಿರುವ, ಸುಪ್ರಭಾತ, ಸ್ತೋತ್ರ, ಪ್ರಪತ್ತಿ ಮತ್ತು ಮಂಗಳಾಶಾಸನ ಎಂಬ ನಾಲ್ಕು ಭಾಗಗಳನ್ನೊಳಗೊಂಡ 'ವೇಂಕಟೇಶಸುಪ್ರಭಾತ'ವನ್ನು ಕ್ರಿಸ್ತಾಬ್ದ 1465ರ ಸುಮಾರಿಗೆ ಮಣವಾಳಮಾಮುನಿಗಳೆಂಬುವರು ರಚಿಸಿದರು. ಇವರನ್ನು 'ಪೆರಿಯ ಜೀಯರ್' ಎಂದೂ, 'ವಾದಿಭೀಕರ-ಮಹಾಗುರು'ವೆಂದೂ ಕರೆಯುವುದಿದೆ. ಸಾಮಾನ್ಯವಾಗಿ ಇವರು ಶ್ರೀರಂಗದ ತ್ರಿವಿಕ್ರಮನ್-ತಿರುವೀಧಿಯಲ್ಲಿರುತ್ತಿದ್ದ ಪಲ್ಲವರಾಯನ್-ಮಠದಲ್ಲಿ ಬಿಡಿಸಂನ್ಯಾಸಿಗಳಾಗಿ ವಾಸಮಾಡುತ್ತಿದ್ದರಂತೆ. ವೇಂಗಡಬೆಟ್ಟದ ಮೇಲೆ ಒಮ್ಮೆ ಇವರು ಒಂದು ವರ್ಷಕಾಲ 'ಕಾಲಕ್ಷೇಪ' ನಡೆಸಿದರಂತೆ. ಇವರ ಶಿಷ್ಯರಲ್ಲಿ ಪ್ರತಿವಾದಿಭಯಂಕರನ್-ಅಣ್ಣನ್ ಎಂಬುವರು ಪ್ರಸಿದ್ಧರು. ಈ 'ಸುಪ್ರಭಾತ' ವಾಡಿಕೆಗೆ ಬರುವ ಮೊದಲು ವೇದಪಾರಾಯಣವಾಗುತ್ತಿದ್ದಿತು; ಕೆಲವೊಮ್ಮೆ ತಾಳ್ಳಪಾಕಂ ಅನ್ನಮಾಚಾರ್ಯರ ಮತ್ತು ಅವರ ಮಕ್ಕಳ ಕೀರ್ತನೆಗಳನ್ನು ಹಾಡುತ್ತಿದ್ದರು.

ಕೌತುಕಬೇರವು ಧ್ರುವಬೇರದ ಪ್ರತಿಕೃತಿಯಾಗಿರಬೇಕೆಂದು ಕಟ್ಟಲೆಯಿದೆ. ಭೋಗ-ಶ್ರೀನಿವಾಸನು ಹೆಚ್ಚೂಕಡಮೆ ಮೂಲವರ ಮೂರ್ತಿಲಕ್ಷಣಗಳನ್ನೇ ಪಡೆದಿದ್ದಾನೆನ್ನಬಹುದು. ಆದರೆ ಅದರ ಪಡಿಯಚ್ಚಲ್ಲ. ಮೂಲವರ ಮೇಲಿನ ಕೈಗಳಲ್ಲಿರುವ ಶಂಖ-ಚಕ್ರಗಳು ಕವಚಗಳಷ್ಟೆ; ಆದರೆ ಭೋಗಶ್ರೀನಿವಾಸನ ಕೈಗಳಲ್ಲಿರುವ ಆಯುಧಗಳು ಮೂರ್ತಿಯೊಂದಿಗೇ ಏಕರಸವಾಗಿರುವ ಭಾಗಗಳು. ಭೋಗಶ್ರೀನಿವಾಸನ ಕೈಯಲ್ಲಿರುವ ಚಕ್ರ ಸ್ವಲ್ಪಮಟ್ಟಿಗೆ ಪ್ರಯೋಗಮುದ್ರೆಯಲ್ಲಿದೆ. ಚಕ್ರವನ್ನು ಮೂಡಿಸುವಾಗ ಎರಡು ಬಗೆ—ಪ್ರಯೋಗಚಕ್ರ, ಸ್ಥಿತಿಚಕ್ರ ಎಂದು. ಪ್ರಯೋಗಚಕ್ರವೆಂದರೆ ಕೈಯಿಂದ ಇನ್ನೇನು ಚಕ್ರವನ್ನು ಹೊರಡಿಸಬೇಕು ಎನ್ನುವಂತೆ ಇರುತ್ತದೆ; ಸ್ಥಿತಿಚಕ್ರವೆಂದರೆ ಬಳಸುವ ಆಲೋಚನೆಯಿಲ್ಲದೆ ಸುಮ್ಮನೆ ಲಾಂಛನವಾಗಿ ಇರಿಸಿಕೊಂಡಿರುವುದು. ಮೂಲವರಲ್ಲಿ ಕಾಣುವುದು ಸ್ಥಿತಿ-ಚಕ್ರ; ಅದರ ಒಡಲೆಲ್ಲ ನಮಗೆ ತೋರಿಕೊಳ್ಳುತ್ತದೆ. ಆದರೆ ಭೋಗಶ್ರೀನಿವಾಸನ ಕೈಯಲ್ಲಿರುವ ಚಕ್ರ ತಿರುಗಿಕೊಂಡು ಅದರ ಅಲುಗು ನಮಗೆ ಕಾಣಿಸುವಂತಿದೆ. ಸಾಮವೈ ಇದನ್ನು ಮಾಡಿಸಿದ ಕಾಲದಲ್ಲಿ ಮೂಲವರ ಚಕ್ರ-ಕವಚವೂ ಹೀಗೆಯೇ ಇದ್ದಿತೋ ಏನೋ! ಮೂರ್ತಿಶಿಲ್ಪದಲ್ಲಿ ಪ್ರಯೋಗಚಕ್ರ ಪ್ರಾಚೀನವಾದ ಮುದ್ರೆ. ಇನ್ನೊಂದು ವಿಶೇಷವೆಂದರೆ ಭೋಗಶ್ರೀನಿವಾಸನ ಪಾದಪೀಠದಲ್ಲಿ ಷಾಡ್ಗುಣ್ಯ ಯಂತ್ರವಿರುವುದು. ಆರು ಮೂಲೆಗಳಿರುವ ಈ ವೈಷ್ಣವಮಂಡಲವು ದೇವರ ಆರು ಗುಣಗಳಾದ ಜ್ಞಾನ, ಐಶ್ವರ್ಯ, ಶಕ್ತಿ, ಬಲ, ತೇಜಸ್ಸು, ವೀರ್ಯಗಳನ್ನು ಸಂಕೇತಿಸುತ್ತದೆ. ಮೂಲವರ-ಪಾದಪೀಠದಲ್ಲಿಯೂ ಇಂಥದೇ ಚಕ್ರವಿದೆಯೆಂದು ಊಹಿಸಿಕೊಳ್ಳಬಹುದು. ನಮ್ಮಾಳ್ವಾರರ ಪಾಶುರವೊಂದು ಇದನ್ನು ಸೂಚಿಸುತ್ತದೆ. ಈಗೇನೋ ಸ್ಪಷ್ಟವಾಗಿ ಕಾಣಿಸುವುದಿಲ್ಲವಂತೆ.

ಉಗ್ರ-ಶ್ರೀನಿವಾಸ

ಮೂಲವರಂತೆ ಕೌತುಕಬೇರವೂ (ಭೋಗ-ಶ್ರೀನಿವಾಸನೂ) ಒಂಟಿಯಾಗಿಯೇ ಇದೆ; ಎಡಬಲಗಳಲ್ಲಿ ದೇವಿಯರಿಲ್ಲ. ಹೀಗೆ ದೇವಿಯರಿರದೆ ಉತ್ಸವಗಳಲ್ಲಿ ಏಕಮೂರ್ತಿಯನ್ನು ತರುವುದು ಆಗಮದ ವಿಧಿಗೆ ಸರಿಯಾಗುವುದಿಲ್ಲ. ಆಗಮದ ಪೂಜೆ ನಡೆಯತೊಡಗಿದಾಗ, ದೇವಿಯರೊಡಗೂಡಿದ ಪ್ರತಿಮೆಯನ್ನು ಉತ್ಸವ ಗಳಿಗೆಂದು ಮಾಡಿಸಿ ಇರಿಸಿಕೊಂಡಿದ್ದರೆಂದು ತೋರುತ್ತದೆ. ಸಾಮವೈ, ಭೋಗ-ಶ್ರೀನಿವಾಸನನ್ನು ಮಾಡಿಸಿಕೊಡುವ ಮೊದಲೇ ಈ ಉತ್ಸವಮೂರ್ತಿ ಇದ್ದಿತೆಂದು ಹೇಳುತ್ತಾರೆ. ಇದೂ ಈಗ ಗರ್ಭಗುಡಿಯಲ್ಲೇ ಇದೆ. ಇದನ್ನು 'ಉಗ್ರ-ಶ್ರೀನಿವಾಸ' ನೆಂದೂ 'ವೇಂಕಟತ್ತುರೈವಾರ್' ಎಂದೂ ಕರೆಯುತ್ತಾರೆ. ಏಳಂಗುಲ ಪೀಠದ ಮೇಲೆ ನಿಂತು ಒಂದೂವರೆ ಅಡಿಯಷ್ಟೇ ಎತ್ತರವಿರುವ ಈ ಮೂರ್ತಿಯ ಇಕ್ಕೆಲಗಳಲ್ಲಿ ಸುಮಾರು ಹದಿನಾರು ಅಂಗುಲ ಎತ್ತರವಿರುವ ಶ್ರೀದೇವಿ-ಭೂದೇವಿಯರು (ನಾಚ್ಚಿಮಾರರು) ಇದ್ದಾರೆ. ಮೊದಲಿಗೆ ಇದೇ 'ಸ್ನಪನಬೇರ'ವಾಗಿದ್ದಿತೆಂದೂ, ಸಾಮವೈ ಕಾಲದಲ್ಲಿ ಭೋಗ-ಶ್ರೀನಿವಾಸ ಕಾಣಿಸಿಕೊಂಡಮೇಲೆ ಇದು ಉತ್ಸವ-ಬೇರವಾಗಿ ಉಳಿಯಿತೆಂದೂ ಹೇಳುತ್ತಾರೆ.

ಈಗ ಇದು ಉತ್ಸವ-ಬೇರವೂ ಅಲ್ಲ. ಈ ಯೋಗವನ್ನು ಇದು ಕಳೆದುಕೊಂಡ ಹಿನ್ನೆಲೆಯಾಗಿ ಕಥೆಯೊಂದಿದೆ. ಒಮ್ಮೆ (ಕ್ರಿಸ್ತಾಬ್ದ 1330ರ ಸುಮಾರಿಗೆ) ಬ್ರಹ್ಮೋತ್ಸವದ ಅಂಗವಾಗಿ ರಥವು ಬೀದಿಯ ಮೇಲೆ ಸಾಗುತ್ತಿದ್ದಾಗ ಇದ್ದಕ್ಕಿದ್ದಂತೆ ಬೆಂಕಿಯೊಂದು ಕಾಣಿಸಿಕೊಂಡು ಗ್ರಾಮದಲ್ಲಿ ಅನಾಹುತವಾಯಿತಂತೆ. ಆಗ ನೆರೆದವನೊಬ್ಬನ ಮೇಲೆ ಆವೇಶ ಬಂದು "ಇನ್ನು ಮುಂದೆ ಈ ಮೂರ್ತಿಯನ್ನು ರಥದ ಮೇಲೇರಿಸಲಾಗದು, ಅದರ ಮೇಲೆ ಸೂರ್ಯನ ಬೆಳಕು ಬಿದ್ದರೆ ಅದು ಉಗ್ರರೂಪವನ್ನು ತಳೆಯುವುದು" ಎಂದು ಸೂಚನೆಯಾಯಿತಂತೆ. ಅಂದಿನಿಂದ ಇದು ಉಗ್ರ-ಶ್ರೀನಿವಾಸನೆನಿಸಿಕೊಂಡಿದೆ. ಅದೇ ಸಂದರ್ಭದಲ್ಲಿ ಆವೇಶ ತಳೆದವನು ಉತ್ಸವಕ್ಕಾಗಿ ಬಳಸಬೇಕಾದ ಇನ್ನೊಂದು ಮೂರ್ತಿಯನ್ನೂ ನಿರ್ದೇಶಿಸಿದನಂತೆ.

ಈಗ ಉಗ್ರ-ಶ್ರೀನಿವಾಸನನ್ನು ಗರ್ಭಗುಡಿಯಿಂದ ಹೊರಗೆ ತರುವುದು ಕಾರ್ತಿಕ ಮಾಸದ ಶುದ್ಧ ಕೈಶಿಕ(ಉತ್ಥಾನ)ದ್ವಾದಶಿಯಂದು ಮಾತ್ರ; ವರ್ಷದಲ್ಲಿ ಒಂದೇ ದಿನ. ಆಗಲೂ, ನಸುಕಿನಲ್ಲೇ ಈ ಮೂರ್ತಿಯನ್ನು ಗುಡಿಯ ಹೊರಗೆ ಮಾಡ-ಬೀದಿಗಳಲ್ಲಿ ಬೇಗನೆ ಬಿಜಯಮಾಡಿಸಿ ಸೂರ್ಯೋದಯವಾಗುವುದರೊಳಗೆ ಗರ್ಭಗುಡಿಯಲ್ಲಿ ಅದರ ನೆಲೆಗೆ ಸೇರಿಸಿಬಿಡುತ್ತಾರೆ. ಅದರ ಮೇಲೆ ಹಗಲಿನ ಬೆಳಕನ್ನು ಬೀಳಗೊಡುವು ದಿಲ್ಲ. ಅಂದು ಗರ್ಭಗುಡಿಯಲ್ಲಿ ಮೂಲವರಿಗೆ ಪ್ರಾತಃಕಾಲಾರಾಧನೆ ನಡೆದನಂತರ, ಉಗ್ರ-ಶ್ರೀನಿವಾಸಮೂರ್ತಿಯನ್ನು ಬಂಗಾರದ ಪಲ್ಲಕ್ಕಿಯಲ್ಲಿ ಕೂರಿಸಿ, ಹೊರಡಿಸಿ ಕೊಂಡು ವಿಮಾನಪ್ರದಕ್ಷಿಣೆಯಾಗಿ ನಾಲ್ಕು ಮಾಡಬೀದಿಗಳಲ್ಲಿ ಮೆರವಣಿಗೆ ಮಾಡಿ, ಸೂರ್ಯೋದಯವಾಗುವುದರೊಳಗೆ ಮಂಟಪವನ್ನು ಸೇರಿಸಿ, ಸರ್ವಭೂಪಾಲವಾಹನ

ದಲ್ಲಿ ಬಿಜಯಗೊಳಿಸುತ್ತಾರೆ. ಅಲ್ಲಿ ಆಸ್ಥಾನಾಲಂಕಾರ ಜರುಗಿ ತಳಿಗೆ ನಿವೇದನ ನಡೆಯುತ್ತದೆ. ಕೈಶಿಕ-ದ್ವಾದಶೀ-ಆಸ್ಥಾನವೆಂದು ಇದರ ಹೆಸರು. ಆಗ ಕೈಶಿಕಪುರಾಣದ ಕಾಲಕ್ಷೇಪವೂ ನಡೆಯುತ್ತದೆ. ಇದಾದಮೇಲೆ ಉಗ್ರ-ಶ್ರೀನಿವಾಸಮೂರ್ತಿಯು ಗರ್ಭ ಗುಡಿಯೊಳಗೇ ಸೇರಿಕೊಳ್ಳುತ್ತದೆ. ಗುಡಿಯಲ್ಲಿ ಉತ್ಥಾನ-ದ್ವಾದಶಿ, ಮುಕ್ಕೋಟಿ-ದ್ವಾದಶಿ ಮತ್ತು ದ್ವಾದಶಾರಾಧನೆ—ಈ ಮೂರು ಸಂದರ್ಭಗಳಲ್ಲಿ ಉಗ್ರ-ಶ್ರೀನಿವಾಸ ಮೂರ್ತಿಯೇ ಪ್ರಧಾನವಾಗಿ ಪಾಲ್ಗೊಳ್ಳುವುದು. ಉಳಿದಂತೆ ಅದಿರುವುದೇ ತಿಳಿಯುವು ದಿಲ್ಲ. ನಾಚ್ಚಿಮಾರರೊಡಗೂಡಿದ ಈ ಮೂರ್ತಿ ದೇವಾಲಯದಲ್ಲಿ ಸೇರಿಕೊಂಡುದು ಯಾವಾಗ, ಹೇಗೆ ಎಂಬುದು ಗೊತ್ತಾಗುವುದಿಲ್ಲ.

ಉತ್ಸವಮೂರ್ತಿ ಮಲೆಯಪ್ಪ

ಈಗ ಬೆಟ್ಟದ ಗುಡಿಯಲ್ಲಿ ಎಲ್ಲರಿಗೂ ಪರಿಚಿತವಾಗಿದ್ದು, ಎಲ್ಲ ಉತ್ಸವಗಳಲ್ಲೂ ಮುಂದಾಗಿ ಬರುವ ಮೂರ್ತಿಗೆ ಮಲೆಯಪ್ಪನೆಂದು ಹೆಸರು. 'ಮಲೈಕ್ಕೂನಿಯ-ನಿನ್ರ-ಪೆರುಮಾಳ್' ಎಂಬುದರ ಸಂಕ್ಷಿಪ್ತರೂಪ ಇದು. 'ಬೆಟ್ಟ ಬಾಗಿರುವೆಡೆ ನಿಂತ ದೇವರು' ಎಂಬರ್ಥವಿರುವ ಈ ಹೆಸರು ಮೂಲವರಿಗೇ ಇದ್ದುದು. ಆದರೆ ಕಥೆಯೊಂದರಿಂದ ಈ ಮೂರ್ತಿಗೆ ಅದು ಅನ್ವರ್ಥವಾಗಿದೆ. ಉಗ್ರ-ಶ್ರೀನಿವಾಸನ ತರುವಾಯ ಉತ್ಸವ ಮೂರ್ತಿಯಾದುದು ಇದೇ ಅಲ್ಲವೆ? ಆವೇಶ ತಳೆದವನ ಸೂಚನೆಯಂತೆ ಗುಡಿಯ ಅಧಿಕಾರಿಗಳು ಹೊಸ ಉತ್ಸವಮೂರ್ತಿಯನ್ನು ಅರಸುತ್ತ ಹೋಗಿ ಬೆಟ್ಟ ಇಳಿಜಾರಾ ಗಿರುವ ಒಂದು ಕಡೆ ನಾಚ್ಚಿಮಾರರೊಡಗೂಡಿದ ಈ ಮೂರ್ತಿಯನ್ನು ಕಂಡರಂತೆ. ಕಥೆಯ ನಿಜಾಂಶವೇನೇ ಇರಲಿ, ಉಗ್ರ-ಶ್ರೀನಿವಾಸನಿಗಿಂತಲೂ ಮಲೆಯಪ್ಪ ಗಾತ್ರದಲ್ಲಿ ದೊಡ್ಡ ಮೂರ್ತಿ. ಸಾವಿರಾರು ಜನ ನೆರೆಯುವ ಉತ್ಸವಗಳಲ್ಲಿ ಮೆರೆಯಿಸುವ ಉತ್ಸವ ಮೂರ್ತಿ ಎಲ್ಲರಿಗೂ ಕಾಣಿಸುವಂತಿರಬೇಡವೆ? ಮೂರಡಿ ಎತ್ತರದ ಭವ್ಯವಿಗ್ರಹ ಮಲೆಯಪ್ಪನದು. ಆ ಕಡೆ ಈ ಕಡೆ ಶ್ರೀದೇವಿ-ಭೂದೇವಿಯರಿದ್ದಾರೆ. ಈ ಮೂರೂ ಮೂರ್ತಿಗಳು ಪಂಚಲೋಹದವು.

ಗುಡಿಯಲ್ಲಿ ಈ ಮೂರ್ತಿಯಿದ್ದುದು ನಮಗೆ ಮೊತ್ತಮೊದಲು ತಿಳಿಯುವುದು ಕ್ರಿಸ್ತಾಬ್ದ 1339ರ ಶಾಸನವೊಂದರಲ್ಲಿ. ಇದು ವರದರಾಜಸ್ವಾಮಿಸನ್ನಿಧಿಯ ಉತ್ತರ ಗೋಡೆಯ ಮೇಲಿರುವ ಶಾಸನ. ರಂಗನಾಥ ಯಾದವರಾಯನು ಪಟ್ಟಕ್ಕೆ ಬಂದ 19ನೆಯ ವರ್ಷ ಸಿದ್ಧವಾದದ್ದು. 'ಮಲೈಚ್ಚು ನಿನ್ರಾನ್ ಪೆರುಮಾಳ್ ಮರಿಯು ನಾಚ್ಚಿಯಾರ್ಲು' ಎಂಬ ಒಕ್ಕಣೆಯಿದೆ. ಮುಸಲ್ಮಾನರ ದಾಳಿಯ ಆತಂಕ ದಕ್ಷಿಣ ದೇಶವನ್ನೆಲ್ಲ ಆವರಿಸಿದ್ದ ಕಾಲ ಅದು. ಹಲವು ಹೆಸರಾಂತ ಕ್ಷೇತ್ರಗಳಿಂದ ಉತ್ಸವ ಮೂರ್ತಿಗಳು ಬೆಟ್ಟದ ಗುಡಿಯನ್ನು ಸೇರತೊಡಗಿದ್ದುವು. ಶ್ರೀರಂಗದಿಂದ ರಂಗನಾಥನೂ ಇಲ್ಲಿಗೆ ಬಂದು ಗುಡಿಯ ನೆರೆಯಲ್ಲಿಯೇ ಹತ್ತಾರು ವರ್ಷ ಇದ್ದನಲ್ಲವೆ? ಅವನೊಂದಿಗೆ ಆ ಗುಡಿಯ ಪಾಂಚರಾತ್ರಸಂಪ್ರದಾಯದ ಶ್ರದ್ಧಾಳುಗಳೂ ಬೆಟ್ಟದ ಮೇಲೆ ಬಂದಿದ್ದು,

ವೇಂಗಡದೊಡೆಯನ ಗುಡಿಯಲ್ಲಿ ಪಾಂಚರಾತ್ರಪದ್ಧತಿಗಳು ಮೂಡಿಕೊಳ್ಳಲು ಮೊದಲಾಗಿದ್ದುವು. ಮಲೆಯಪ್ಪನು ಮೊದಲಿಗೆ ಬೆಟ್ಟದ ಕೆಳಗೆ ತಿರುಚ್ಚಾನೂರಿನಲ್ಲಿ ತಿರುವಿಳನ್‌ಕೋಯಿಲಲ್ಲಿ (ಎಂದರೆ, ಮೇಲಿನ ಗುಡಿಯ ಪ್ರತಿನಿಧಿಯಾಗಿ ಕೆಳಗೆ ನಿಂತ ಗುಡಿ) ಪಾಂಚರಾತ್ರಸಂಪ್ರದಾಯದವರು ಏರ್ಪಡಿಸಿಕೊಂಡಿದ್ದ ಅರ್ಚಾಮೂರ್ತಿಯೆಂದು ಹೇಳುತ್ತಾರೆ. ಮುಸಲ್ಮಾನರ ದಾಳಿ ತಿರುಚ್ಚಾನೂರಿನ ನೆರೆಯಲ್ಲೂ ಮೈದೋರಿದಾಗ, ತಿರುವಿಳನ್‌ಕೋಯಿಲಿನ ಅರ್ಚಕರು ಮಲೆಯಪ್ಪನನ್ನು ಬೆಟ್ಟದ ಮೇಲೆ ಸಾಗಿಸಿ, ಬೆಟ್ಟದ ಇಳಿಜಾರಿನಲ್ಲೊಂದು ಕಡೆ ಅಡಗಿಸಿಟ್ಟಿದ್ದರೆಂದೂ, ಉಗ್ರ-ಶ್ರೀನಿವಾಸನ ಉತ್ಸವದಲ್ಲಿ ಬೆಂಕಿಯ ಅನಾಹುತ ನಡೆದಾಗ ಆ ಮೂರ್ತಿಗೆ ಬದಲಾಗಿ ಮಲೆಯಪ್ಪನನ್ನೇ ಉತ್ಸವವಿಗ್ರಹವಾಗಿ ಬಳಸುವಂತೆ ಪ್ರಭಾವ ಬೀರಿದರೆಂದೂ ಊಹೆ ಇದೆ. ಗುಡಿಯ ಪ್ರಥಮಾಚಾರ್ಯಪುರುಷರಾಗಿದ್ದ ವೀರರಾಘವಾಚಾರ್ಯರ ಊಹೆ ಇದು.

ಮಲೆಯಪ್ಪ, ಮೂಲವರ ಪಡಿಯಚ್ಚಂತೂ ಖಂಡಿತ ಅಲ್ಲ. ಆದರೆ ಹದಿನಾಲ್ಕು ಅಂಗುಲ ಪಾದಪೀಠದ ಮೇಲೆ ಮೂರು ಅಡಿ ಎತ್ತರವಾಗಿ ನಿಂತಿರುವ ಈ ಮೂರ್ತಿಯ ಮೈಕಟ್ಟು, ಮುಖಮುದ್ರೆ, ನಿಲುವು ತುಂಬ ಸೊಗಸಾಗಿವೆ. ಶಿಲ್ಪಿಗಳು ತುಂಬ ಜಾಣತನದಿಂದ ಮೂರ್ತಿಯನ್ನು ಮಾಡಿದ್ದಾರೆ. ಮೈಮೇಲೆ ಕಾಣಿಸಿರುವ ಅಲಂಕರಣ ಹಗುರವಾಗಿದೆ; ಅಂದವಾದ ಮೈಮಾಟಕ್ಕೆ ಇದರಿಂದ ಅಡ್ಡಿ ಬರುವುದಿಲ್ಲ. ಮೂಲವರ ಆಭರಣಗಳು ಇಲ್ಲಿ ಕಾಣುವುದಿಲ್ಲ; ಶಂಖ-ಚಕ್ರಗಳನ್ನು ಹಿಡಿದಿರುವ ಕೈಗಳ ಭಂಗಿಯೂ ಬೇರೆಯೇ. ಮೂಲದಲ್ಲಿ ನೆಟ್ಟಗೆ ಇಳಿಬಿದ್ದಿರುವ ವರದಹಸ್ತ ಇಲ್ಲಿ ಸಹಜವಾದ ವಿನ್ಯಾಸದಿಂದ ಕೂಡಿದೆ. ಸಾಂಪ್ರದಾಯಿಕ ಶಿಲ್ಪಕ್ಕೆ ಈ ವಿಗ್ರಹ ಉತ್ತಮ ನಿದರ್ಶನವೆನ್ನಬಹುದು. ಶ್ರೀದೇವಿ-ಭೂದೇವಿಯರು (ಪಾದಪೀಠ ನಾಲ್ಕು ಅಂಗುಲ, ಮೂರ್ತಿಗಳ ಎತ್ತರ ಇಪ್ಪತ್ತೊಂಬತ್ತು ಅಂಗುಲಗಳು) ಈ ಮೂರ್ತಿಗೆಂದೇ ಮಾಡಿದವೋ ಅಲ್ಲವೋ ಎಂದು ಸಂದೇಹವಾಗುತ್ತದೆ. ಆದರೆ ಇವರೆಡು ಪಾರ್ಶ್ವ ವಿಗ್ರಹಗಳೂ ಚೆಲುವಾಗಿವೆ.

ಬೆಟ್ಟದ ಗುಡಿಯ ಉತ್ಸವಗಳಲ್ಲೆಲ್ಲ ಪ್ರಧಾನವಾದ ಪಾತ್ರ ಮಲೆಯಪ್ಪನದು. ವಿಶೇಷಾರ್ಚನೆಗಳಲ್ಲಿ , ಸೇವೆಗಳಲ್ಲಿ , ಉತ್ಸವಗಳಲ್ಲಿ ಇದೇ ಗರ್ಭಗುಡಿಯಿಂದ ಹೊರಗೆ ಬಂದು ರಂಗಮಂಡಪದಲ್ಲೋ ಕಲ್ಯಾಣಮಂಡಪದಲ್ಲೋ ಬಿಜಯ ಮಾಡುವುದು; ಭಕ್ತರು ಹೆಚ್ಚಾಗಿ ಕಾಣುವುದು ಇದನ್ನೇ. ಬ್ರಹ್ಮೋತ್ಸವದಲ್ಲಂತೂ ವಾಹನವೇರಿ, ರಥವೇರಿ, ಆಂದೋಳಿಕೆಯೇರಿ, ಸ್ವಾಮಿಪುಷ್ಕರಿಣಿಯಲ್ಲಿ ತೆಪ್ಪವನ್ನೇರಿ, ಬೀದಿಗಳಲ್ಲಿ ವೈಭವದ ಮೆರವಣಿಗೆಯಲ್ಲಿ ಮೈದೋರಿಕೊಳ್ಳುವುದು ಇದೇ. ಈ ಸಂದರ್ಭದ ಸ್ವಾರಸ್ಯ ವೇನೆಂದರೆ, ಉತ್ಸವವಾಗುವಾಗ ಮೂಲವರಿಗೂ ಮಲೆಯಪ್ಪನಿಗೂ ಸಂಬಂಧವೇ ಇಲ್ಲದಿರುವುದು. ಗರ್ಭಗುಡಿಯಲ್ಲಿ ಮೂಲದೇವರಿಗೆ ದಿನವೂ ನಡೆಯುವ ಪೂಜೆಯ ಕಟ್ಟಳೆ ಎಂದೂ ಬದಲಾಗಲಾರದು. ಉತ್ಸವವಿದ್ದರೆ, ಈ ಕಟ್ಟಳೆ ಮುಗಿದ ಮೇಲೇ ನಡೆಯಬೇಕು. ದಿಟವಾಗಿ ಉತ್ಸವಕ್ಕೂ ಮೂಲವರಿಗೂ ಸಂಬಂಧವಿಲ್ಲ. ಉತ್ಸವದ ದಿನವೆಂದು ಮೂಲವರ ಮೇಲೆ ಒಂದು ಹೂವನ್ನೂ ಹೆಚ್ಚು ಹಾಕುವ ಹಾಗಿಲ್ಲ,

ಒಂದು ಹಿಡಿ ಅನ್ನವನ್ನೂ ಹೆಚ್ಚಾಗಿ ನೈವೇದ್ಯವೆಂದು ಇಡುವಹಾಗಿಲ್ಲ; ಹೆಚ್ಚಿನ ಒಂದು ಆಭರಣವನ್ನೂ ತೊಡಿಸುವ ಹಾಗಿಲ್ಲ; ದಿನದ ಕಟ್ಟಳೆಯಲ್ಲಿ ಕೊಂಚವೂ ಏರು ಪೇರಿರುವುದಿಲ್ಲ. ಉತ್ಸವದ ಸಡಗರವೆಲ್ಲ ಗರ್ಭಗುಡಿಯ ಹೊರಗೇ. ಮಲೆಯಪ್ಪನು ಗರ್ಭಗುಡಿಯೊಳಗೆ ಉಳಿದು ಯಾವ ವಿಶೇಷವಾದ ಉಪಚಾರವನ್ನೂ ಪಡೆಯುವ ಹಾಗಿಲ್ಲ. ಆದುದರಿಂದ ಉತ್ಸವವೆಂದರೆ ಮಲೆಯಪ್ಪಸ್ವಾಮಿ ಹೊರಗೆ ಬರಬೇಕು. ಹೊರಗೆ ಬರುವುದರಲ್ಲಿ ಅವನಿಗೆ ಯಾವ ನಿರ್ಬಂಧವೂ ಇಲ್ಲ—ಭೋಗಶ್ರೀನಿವಾಸನಿಗಿರುವಂತೆ. ಯಾವ ಸಂಬಂಧಸೂತ್ರವೂ ಮಲೆಯಪ್ಪನನ್ನು ಮೂಲವರೊಂದಿಗೆ ಕೂಡಿಸುವುದಿಲ್ಲ.

ಉತ್ಸವಗಳಲ್ಲಿ ಮುಖ್ಯವಾದುದು ಬ್ರಹ್ಮೋತ್ಸವ (ತಿರುಕ್ಕೋಡಿ-ತಿರುನಾಳ್). ಬೆಟ್ಟದ ಮೇಲೆ ಬ್ರಹ್ಮೋತ್ಸವವನ್ನು ನಡೆಸುವ ಪದ್ಧತಿ ಕ್ರಿಸ್ತಾಬ್ದ 966ರ ಕಾಲಕ್ಕಿಂತಲೂ ಹಿಂದಿನದು. ಕ್ರಿಸ್ತಾಬ್ದ 966ರಲ್ಲಿ ಪಲ್ಲವರಾಣಿ ಸಾಮವ್ವೈ, ವರ್ಷದಲ್ಲಿ ಎರಡು ಬ್ರಹ್ಮೋತ್ಸವಗಳನ್ನು ನಡೆಸುವ ಏರ್ಪಾಡು ಮಾಡಿದಳು; ಒಂದು ಪುರಟ್ಟಾಶಿ, ಎಂದರೆ ಆಶ್ವಯುಜಮಾಸದಲ್ಲಿ (ಸೆಪ್ಟೆಂಬರ್-ಅಕ್ಟೋಬರ್) ನಡೆಯುವುದು, ಇನ್ನೊಂದು ಮುಕ್ಕೋಟಿದ್ವಾದಶಿಯಂದು. ಈಗ ನಾಲ್ಕು ನಡೆಯುತ್ತವೆ. ಮುಖ್ಯವಾದುದೇನೋ ಪುರಟ್ಟಾಶಿಮಾಸದ್ದೇ. ಆ ಮಾಸದಲ್ಲಿ (ಎಂದರೆ, ನಮ್ಮ ಆಶ್ವಯುಜಮಾಸದಲ್ಲಿ ನವರಾತ್ರಿಯ ಸಂದರ್ಭದಲ್ಲಿ) ಶ್ರವಣನಕ್ಷತ್ರವಿರುವಾಗ ಆರಂಭವಾಗುವ ಈ ಉತ್ಸವವು ಹನ್ನೆರಡು ದಿನಗಳದ್ದು. ಅಂಕುರಾರ್ಪಣ, ಧ್ವಜಾರೋಹಣ(ಕೋಡಿ)ಗಳಿಂದ ಮೊದಲಾಗಿ ಸ್ವಾಮಿಪುಷ್ಕರಿಣಿಯಲ್ಲಿ ಅವಭೃಥಸ್ನಾನದಿಂದ ಮುಗಿಯುವವರೆಗೂ ದಿನವೂ ಶೇಷ, ಹಂಸ, ಸಿಂಹ, ಪುಣ್ಯಕೋಟಿ, ವಿಮಾನ, ಗರುಡ, ಗಜ, ಚಂದ್ರಪ್ರಭ, ಅಶ್ವ ಮೊದಲಾದ ವಾಹನಗಳನ್ನೇರಿ ಉತ್ಸವಮೂರ್ತಿಯು (ಮಲೆಯಪ್ಪ) ಬೆಟ್ಟದ ಊರಿನ ಸುತ್ತ ಮೆರವಣಿಗೆಯಲ್ಲಿ ತಿರುಗಾಡುತ್ತದೆ.

ಧ್ವಜಾರೋಹಣವಾಗುವ ಮೊದಲೇ ಗರ್ಭಗುಡಿಯನ್ನು ಬಿಟ್ಟುಬಂದ ಮಲೆಯಪ್ಪ ಮುಂದೆ ದೀಪಾವಳಿ (ಆಶ್ವಯುಜ-ಅಮಾವಾಸ್ಯೆ) ಆಸ್ಥಾನದವರೆಗೂ ಗರ್ಭಗುಡಿಗೆ ಹಿಂದಿರುಗುವುದಿಲ್ಲ. ಎಂದರೆ ಸುಮಾರು ಒಂದು ತಿಂಗಳು ಕಲ್ಯಾಣಮಂಡಪದಲ್ಲೇ ಬಿಡಾರ. ಹಾಗೆಯೇ ಮುಕ್ಕೋಟಿದ್ವಾದಶಿಯ ಹಿಂದೆ ಮುಂದೆ ಸುಮಾರು ಇಪ್ಪತ್ತು ದಿನಗಳ ಕಾಲ ನಡೆಯುವ ಅಧ್ಯಯನೋತ್ಸವದ ಸಂದರ್ಭದಲ್ಲಿಯೂ ಮಲೆಯಪ್ಪನು ಗರ್ಭಗುಡಿಯಲ್ಲಿರದೆ ಕಲ್ಯಾಣಮಂಡಪದಲ್ಲೇ ನೆಲೆಗೊಳ್ಳುತ್ತಾನೆ. ಈ ಉತ್ಸವದಲ್ಲಿ ವೇದಪಾರಾಯಣ ಮತ್ತು ತಮಿಳುಪ್ರಬಂಧಗಳ ಪಾರಾಯಣ ಮುಖ್ಯವಾದುದು. ಇದು ಕ್ರಿಸ್ತಾಬ್ದ 1400ರ ಸುಮಾರಿಗೆ ಬೆಟ್ಟದ ಗುಡಿಯಲ್ಲಿ ಮೊದಲಾಯಿತೆಂದು ತೋರುತ್ತದೆ.

ಇವಲ್ಲದೆ ಮತ್ತೆ ಕೆಲವು ಉತ್ಸವಸಂದರ್ಭಗಳೂ ಇವೆ. ಸಾಳುವ-ನರಸಿಂಹನ ಕಾಲದಲ್ಲಿ (ಎಂದರೆ, 1463ರ ಸುಮಾರಿಗೆ) ಆರಂಭವಾದ ಪವಿತ್ರೋತ್ಸವ (ಐದು ದಿನಗಳ ಉತ್ಸವ) ಮತ್ತು 'ಅನ್ನ-ಉಂಜಲ್ ತಿರುನಾಳ್' ಎನ್ನುವ ಉಯ್ಯಾಲೋತ್ಸವ (ಏಳು ದಿನಗಳ ಉತ್ಸವ)—ಇವೆರಡರಲ್ಲೂ ಮಲೆಯಪ್ಪನೇ ಪ್ರಧಾನದೈವ. ಇವೆರಡೂ

ಕಾಲಕ್ರಮದಲ್ಲಿ ಗುಡಿಯ ನಡಾವಳಿಯಿಂದ ತಪ್ಪಿಹೋದುವು. ಪವಿತ್ರೋತ್ಸವವನ್ನು ಈಚೆಗೆ ಮತ್ತೆ ನಡೆಸತೊಡಗಿದ್ದಾರೆ. ಉಯ್ಯಾಲೋತ್ಸವವೇನೋ ನಿಂತುಹೋಗಿದೆ. ನಾಲ್ಕು ದಿನಗಳ ವಸಂತೋತ್ಸವ, ಇಪ್ಪತ್ತು ದಿನಗಳ ಕೋಡ್ಡೈ-ತಿರುನಾಳ್ (ಗ್ರೀಷ್ಮ ಋತುವಿನಲ್ಲಿ), ಯುಗಾದಿಯನಂತರ ನಲವತ್ತು ದಿನಗಳ ನಿತ್ಯೋತ್ಸವ, ಐದು ದಿನಗಳ ತೆಪ್ಪೋತ್ಸವ (ತಿರುಪ್ಪಳಿಯೋಡಂ-ತಿರುನಾಳ್) ಮೊದಲಾದ ಹಲವಾರು ಉತ್ಸವಗಳು ಏರ್ಪಟ್ಟು ಮಲೆಯಪ್ಪನ ಜನಪ್ರೀತಿ ಹೆಚ್ಚಿತು.

ಕೊಲುವು-ಶ್ರೀನಿವಾಸ

ಚಲಬೇರಗಳಲ್ಲಿ ದಿನವೂ ಬಳಕೆಗೆ ಬರುವುದು ಬಲಿಬೇರ. ಗರ್ಭಗುಡಿಯಲ್ಲಿ ನೈವೇದ್ಯ ನಡೆದನಂತರ, ಬಲಿಬೇರವನ್ನು ವಾದ್ಯದೊಂದಿಗೆ ಗುಡಿಯ ಆವರಣದಲ್ಲಿ ಹೊರಡಿಸಿಕೊಂಡು ವಿಮಾನ, ಧ್ವಜಸ್ತಂಭ, ಬಲಿಪೀಠ—ಈ ಸ್ಥಳಗಳಲ್ಲಿ ಹಗಲೂ ರಾತ್ರಿಯೂ ಪರಿವಾರದೇವತೆಗಳು, ದಿಕ್ಪಾಲಕರು, ದ್ವಾರಪಾಲಕರು ಮೊದಲಾದ ದೇವತೆಗಳಿಗೆ ಬಲಿಹರಣ ಮಾಡುವ ಪದ್ಧತಿ ಎಲ್ಲ ಗುಡಿಗಳಲ್ಲೂ ಇದೆ. ಆದರೆ ಬೆಟ್ಟದ ಗುಡಿಯಲ್ಲಿ ಈ ಪದ್ಧತಿಯಿಲ್ಲ. ಎಲ್ಲ ದೇವತೆಗಳಿಗೂ ಒಟ್ಟಾಗಿ ಬಲಿಪೀಠದ ಬಳಿ ಎಡೆಯಿಟ್ಟುಬಿಡುತ್ತಾರೆ. ಬಲಿಬೇರವೆನಿಸಿಕೊಳ್ಳುವ ಕೊಲುವು-ಶ್ರೀನಿವಾಸನನ್ನೇನು ಹೊರಡಿಸಿಕೊಂಡು ಬರುವುದಿಲ್ಲ. ಹೆಸರಿಗೆ ಮಾತ್ರ ಬಲಿಬೇರ ಅಷ್ಟೆ. ಆದರೆ ಬಲಿಬೇರವೆಂಬ ವಾಡಿಕೆಯೂ ಅಷ್ಟಾಗಿ ಇರದು. ಅದನ್ನು 'ಅಳಗಪ್ಪಿರಾನಾರ್' ಎಂದೂ 'ಪ್ರಸನ್ನ-ತಿರುವೇಂಗಡಮುಡ್ಡೆಯಾನ್' ಎಂದೂ ಕರೆಯುವರು. 'ಕೊಲುವು-ಶ್ರೀನಿವಾಸ' ಎನ್ನುವುದು ವಾಡಿಕೆಯಲ್ಲಿರುವ ಹೆಸರು. ಈ ಹೆಸರಿನಲ್ಲಿ ಔಚಿತ್ಯವೂ ಇದೆ.

ದಿನದ ಮುಖ್ಯಪೂಜೆಯಾದ ತೋಮಾಲೆ-ಸೇವೆ ನಡೆದಮೇಲೆ ಗರ್ಭಗುಡಿಯಿಂದ ಕೊಲುವು-ಶ್ರೀನಿವಾಸನ ವಿಗ್ರಹವನ್ನು ಹೊರತಂದು ತಿರುಮಾಮಣಿಮಂಡಪದಲ್ಲಿ ಕೂರಿಸುತ್ತಾರೆ. ಬೆಳ್ಳಿಯ ಸಿಂಹಾಸನ, ಸಿಂಹತೋರಣ, ಬಂಗಾರದ ಛತ್ರಿ—ಇವು ಓಲಗದ ಸೂಚಕಗಳು. 'ಕೊಲುವು' ಎಂದರೆ ಅರಸನ ಓಲಗ, ಸಭೆ, ದರ್ಬಾರ್. ಹೀಗೆ ಆಸ್ಥಾನದಲ್ಲಿ ಈ ಮೂರ್ತಿಯು ಕುಳಿತಮೇಲೆ, ಅದರೆದುರು ದಿನದ ಪಂಚಾಂಗವನ್ನು ಓದುತ್ತಾರೆ. ಹಿಂದಿನ ದಿನ ಕೊಪ್ಪರದಲ್ಲಿ ಭಕ್ತರು ಸಲ್ಲಿಸಿದ ಕಾಣಿಕೆಗಳ ಲೆಕ್ಕವನ್ನು ವಿವರವಾಗಿ ಒಪ್ಪಿಸುತ್ತಾರೆ. ಪದ್ಧತಿಯಂತೆ ಅರ್ಚಕರಿಗೂ ಮತ್ತಿತರರಿಗೂ ದಿನವೂ ಸಲ್ಲಬೇಕಾದ ಮಾತ್ರಾದಾನ (ಎಂದರೆ, ಅಕ್ಕಿ ಮೊದಲಾದ ಪದಾರ್ಥಗಳ ವಿತರಣೆ) ನಡೆಯುತ್ತದೆ.

ಈ ಪದ್ಧತಿ ಯಾವಾಗ ಮತ್ತು ಹೇಗೆ ಮೊದಲಾಯಿತೆನ್ನುವುದು ಶಾಸನಗಳಿಂದ ತಿಳಿದುಬರುವುದಿಲ್ಲ. ಈ ಮೂರ್ತಿಯು ಗರ್ಭಗುಡಿಯೊಳಗೆ ಸೇರಿಕೊಂಡುದು ಹೇಗೆ ಎನ್ನುವುದೂ ತಿಳಿಯದು. ತಿರುಚ್ಚಾನೂರಿನಲ್ಲಿ ಶ್ರೀವೈಷ್ಣವರು ಧರ್ಮಪ್ರಚಾರದ ಕೆಲಸಕ್ಕೆಂದು ತಿರುವಿಳನ್-ಕೋಯಿಲಿಗೆ ಸೇರಿದಂತೆ ತಿರುಮಂತ್ರಶಾಲೆಯನ್ನು ಏರ್ಪಡಿಸಿ



ಕೊಲುವು-ಶ್ರೀನಿವಾಸ

ಕೊಂಡಿದ್ದರು. ಹೊಸದಾಗಿ ಶ್ರೀವೈಷ್ಣವಧರ್ಮಕ್ಕೆ ಸೇರುವವರಿಗೆ ದೇವರೆದುರಿನಲ್ಲಿ ನಾರಾಯಣಮಂತ್ರವನ್ನು ದೀಕ್ಷೆಯಾಗಿ ಕೊಟ್ಟು ಧರ್ಮದ ವಿವರಗಳನ್ನು ತಿಳಿಯಪಡಿಸುತ್ತಿದ್ದುದು ಇಲ್ಲಿಯೇ. ಮುಸಲ್ಮಾನರ ದಾಳಿಯ ಆತಂಕ ಒದಗಿದಾಗ ತಿರುವಿಳನ್ ಕೋಯಿಲಿಂದ ಮಲೆಯಪ್ಪನನ್ನು ಬೆಟ್ಟದ ಮೇಲೆ ಉತ್ಸವಮೂರ್ತಿಯಾಗಿ ತಂದಂತೆಯೇ ತಿರುಮಂತ್ರಶಾಲೆಯಲ್ಲಿರುತ್ತಿದ್ದ ಅಳಗಪ್ಪಿರಾನಾರನನ್ನೂ ಮೇಲೆತಂದು ಬಲಿಬೇರವನ್ನಾಗಿಸಿದರೆಂದು ಒಂದು ಊಹೆ.

ವೈಖಾನಸಸಂಪ್ರದಾಯದ ಅರ್ಚನೆಯಲ್ಲಿ ಧ್ರುವಬೇರವೂ ಸೇರಿ ಐದು ಬೇರಗಳಿರಬೇಕೆಂಬ ವಿಧಿಯಿದೆ. ಮೂಲ, ಕೌತುಕ, ಸ್ನಪನ, ಉತ್ಸವ, ಬಲಿಬೇರಗಳೆಂಬ

ಹೆಸರುಗಳು ಆಗಮದವು. ಬೆಟ್ಟದ ಗುಡಿಯಲ್ಲಿ ಈಗ ಮೂಲವರಲ್ಲದೆ ನಾಲ್ಕು ವಿಗ್ರಹಗಳಿದ್ದರೂ, ಆಗಮದ ಹೆಸರುಗಳು ಬಳಕೆಯಲ್ಲಿ ಎಂದೂ ಇದ್ದಂತೆ ಕಾಣುವುದಿಲ್ಲ. ಕ್ರಮವಾಗಿ ತಿರುವೇಂಗಡಮುಡೈಯಾನ್ (ಶ್ರೀನಿವಾಸ), ಮಣವಾಳಪ್ಪೆರುಮಾಳ್ (ಭೋಗ-ಶ್ರೀನಿವಾಸ), ವೇಂಕಟತ್ತುರೈವಾರ್ (ಉಗ್ರ-ಶ್ರೀನಿವಾಸ), ಮಲೆಯಪ್ಪ (ಉತ್ಸವ-ಶ್ರೀನಿವಾಸ), ಅಳಗಪ್ಪಿರಾನಾರ್ (ಕೊಲುವು-ಶ್ರೀನಿವಾಸ) ಎನ್ನುವ ಹೆಸರುಗಳೇ ವಾಡಿಕೆಯಲ್ಲಿವೆ. ಮೇಲಾಗಿ ಸ್ನಪನಬೇರ ಮತ್ತು ಬಲಿಬೇರಗಳು ಆಗಮದಲ್ಲಿ ತಮಗೆ ನಿರ್ದೇಶಿಸಿರುವ ವಿಧಿಗಳನ್ನೇನು ಕೈಗೊಳ್ಳುವುದಿಲ್ಲ. ವ್ಯೂಹಸಿದ್ಧಾಂತದ ಪ್ರಕಾರ ಮೂಲವರು ಪರ (ವಿಷ್ಣು), ಕೌತುಕಬೇರವು ಭೋಗ (ಅರ್ಚಾಮೂರ್ತಿ, ಪುರುಷ, ಧರ್ಮ, ವಾಸುದೇವ), ಸ್ನಪನಬೇರವು ಉಗ್ರ (ಪ್ರದ್ಯುಮ್ನ ಅಥವಾ ಅಚ್ಯುತ), ಉತ್ಸವಬೇರವು ವಿಭವಾವತಾರ (ಜ್ಞಾನ, ಸತ್ಯ, ಸಂಕರ್ಷಣ), ಬಲಿಬೇರವು ಹಾರ್ದ ಅಥವಾ ಅಂತರ್ಯಾಮಿ (ವೈರಾಗ್ಯ; ಅನಿರುದ್ಧ).

ಇತರ ಮೂರ್ತಿಗಳು

ಮೇಲೆ ಹೇಳಿದ ಪಂಚಬೇರಗಳಲ್ಲದೆ ಗರ್ಭಗುಡಿಯಲ್ಲಿ ಮತ್ತೆ ಎರಡು ಮೂರ್ತಿಗಳು ಸೇರಿಕೊಂಡಿವೆ—ರಾಮ ಮತ್ತು ಕೃಷ್ಣ, ಎರಡೂ ಪಂಚಲೋಹದವು. ರಾಮನೊಂದಿಗೆ ಸೀತೆ, ಲಕ್ಷ್ಮಣರಿದ್ದಾರೆ. ಜೊತೆಗಿರುವ ಇನ್ನೊಂದು ಮೂರ್ತಿಯನ್ನು ಸುಗ್ರೀವನೆಂದು ನಿರ್ದೇಶಿಸುತ್ತಾರೆ. ರಾಮಪರಿವಾರಕ್ಕೇ ಸೇರಿದ ಹನುಮಂತ ಮತ್ತು ಅಂಗದ ಇವರ ಮೂರ್ತಿಗಳನ್ನು ಗರ್ಭಗುಡಿಯಲ್ಲಿರಿಸದೆ ಹೊರಗೆ ರಾಮರ ಮೇಡೆಯಲ್ಲಿ ಕಟ್ಟೆಯ ಮೇಲೆ ನಿಲ್ಲಿಸಿದ್ದಾರೆ. ಈ ನಾಲ್ಕೂ ತಾಮ್ರವಿಗ್ರಹಗಳು ಸಾಂಪ್ರದಾಯಿಕಶೈಲಿಯಲ್ಲೇ ಇವೆ. ಕೃಷ್ಣನ ವಿಗ್ರಹ ಕೈಯಲ್ಲಿ ಬೆಣ್ಣೆಮುದ್ದೆಯನ್ನು ಹಿಡಿದು ಕುಣಿಯುತ್ತಿರುವಂತೆ ಇದೆ, ನವನೀತ-ನೃತ್ಯಭಂಗಿ. ಪಕ್ಕದಲ್ಲಿ ರುಕ್ಮಿಣಿಯ ಮೂರ್ತಿಯೂ ಇದೆ.

ಈ ಬಗೆಯ ಅವತಾರವಿಗ್ರಹಗಳು ವೇಂಗಡದೊಡೆಯನ ಗರ್ಭಗುಡಿಯಲ್ಲಿ ಇರಬೇಕಾದ ಕಾರಣವಿಲ್ಲ. ವೇಂಗಡದೊಡೆಯನು ವಿಷ್ಣುವೆಂದೂ, ರಾಮಾವತಾರ ಕೃಷ್ಣಾವತಾರಗಳ ಸಂಬಂಧ ಪುರಾಣಗಳಲ್ಲಿ ಬರುವುವೆಂದೂ ಹೇಳುವುದು ಅಷ್ಟು ಸಮಾಧಾನವನ್ನು ತರಲಾರದು. ಮೂಲವರ ಪ್ರತಿಕೃತಿಗಳಾಗಿ, ಪ್ರತಿನಿಧಿಗಳಾಗಿ ಇರುವ ಮೂರ್ತಿಗಳು ಮಾತ್ರವೇ ಗರ್ಭಗುಡಿಯಲ್ಲಿ ಇರಬೇಕೆಂಬುದು ಆಗಮದ ವಿಧಿ. ಉಳಿದ ವಿಗ್ರಹಗಳು ಗುಡಿಯ ಬೇರಾವ ಭಾಗದಲ್ಲಾದರೂ ಇದ್ದರೆ ಅಡ್ಡಿಯಿಲ್ಲ, ಗರ್ಭಗುಡಿಯಲ್ಲಿ ಅವಕ್ಕೆ ಎಡೆಯಿಲ್ಲ. ಆದರೆ ಬೆಟ್ಟದ ಗುಡಿಯಲ್ಲಿ ಇವು ಮೂಲವರ ಸನ್ನಿಧಿಯಲ್ಲೇ ಸೇರಿಬಂದುದು ಸೋಜಿಗವಲ್ಲವೆ? ಅವೆರಡಕ್ಕೂ ಅಲ್ಲಿ ಪ್ರತ್ಯೇಕವಾಗಿ ಪೂಜೆಯೇನೋ ನಡೆಯುವುದಿಲ್ಲವೆನ್ನಿ.

ಗರ್ಭಗುಡಿಗೆ ಮೊದಲು ಹೊಕ್ಕುದು ಕೃಷ್ಣನ ವಿಗ್ರಹವೆಂದು ತೋರುತ್ತದೆ;

ಯಾವಾಗ ಎಂದು ಹೇಳುವುದು ಕಷ್ಟ. ರಾಜಕೇಸರಿವರ್ಮ-ರಾಜೇಂದ್ರಚೋಳದೇವನ ರಾಣಿ ಅವನಿ-ಮುಳುದುದೈಯಾಳ್ (ಎಂದರೆ 'ಇಡೀ ಜಗತ್ತಿಗೆ ಒಡತಿ') ಎಂಬುವಳು ಈ ಕೃಷ್ಣನಿಗೆ ಸೇವೆಯೊಂದನ್ನು (ಪಾಲಮುದು, ತಯಿರ್ಅಮುದು ಎಂದರೆ ಹಾಲು-ಮೊಸರು) ಸಲ್ಲಿಸಿದ ಶಾಸನವೊಂದಿದೆ. ಶಾಸನದ ಕಾಲ ಕ್ರಿಸ್ತಾಬ್ದ 1100ರ ಸುಮಾರು. ಈ ಶಾಸನದಲ್ಲಿ ಕೃಷ್ಣನನ್ನು 'ನಮ್ಮ ತಿರುವಾಯ್‌ಪಾಡಿ-ಆಳ್ವಾರ್' (**ನಿನ್ನ ಆಳ್ವಾರ್ ಎಂಗಳುಡೈಯ ತಿರುವಾಯ್ಪಾಡಿ**) ಎಂದೂ ತಿರುಮಲೆ-ದೇವರ (**ತಿರುಮಲೈಆಳ್ವಾರ್‌ಕ್ಕು**) ಜೊತೆಗೇ ಇರುವವನೆಂದೂ ನಿರ್ದೇಶನಗಳಿವೆ. ಶಾಸನ ತುಂಬ ಸಣ್ಣದು, ಮುಖ್ಯವಾದ ಭಾಗಗಳು ಅಳಿಸಿಹೋಗಿವೆ. ಆ ಕಾಲಕ್ಕೆ ಕೃಷ್ಣನ ವಿಗ್ರಹವನ್ನು ಗರ್ಭಗುಡಿಯಲ್ಲೇ ಇರಿಸಿದ್ದರೆಂದು ಊಹಿಸಿಕೊಳ್ಳಬಹುದು. ಖಚಿತವಾಗಿ ಏನನ್ನೂ ಹೇಳುವುದಾಗದು. ಬೆಟ್ಟದ ಗುಡಿಯಲ್ಲಿ ಹಿಂದಿನಿಂದ ಬಂದ ವಾಡಿಕೆ ಮಾರ್ಗಳಿ ಅಥವಾ ಧನುರ್ಮಾಸದ ಮೂವತ್ತು ದಿನಗಳೂ ವೇಂಗಡದೊಡೆಯನ ಏಕಾಂತಸೇವೆಯ ಶಯನೋತ್ಸವದಲ್ಲಿ ಪಾಲ್ಗೊಳ್ಳುವುದು. ಇತರ ದಿನಗಳಲ್ಲಿ ಪಾಲ್ಗೊಳ್ಳುವ ಭೋಗ-ಶ್ರೀನಿವಾಸನಲ್ಲ, ಈ ಕೃಷ್ಣನ ವಿಗ್ರಹ. ಎಷ್ಟು ಹಿಂದಿನ ವಾಡಿಕೆಯಿದು ಎನ್ನುವುದು ಗೊತ್ತಾಗುವುದಿಲ್ಲ.

ಗರ್ಭಗುಡಿಯಲ್ಲಿರುವ ರಾಮನನ್ನು ರಘುನಾಥನೆಂದೂ ಕರೆಯುತ್ತಾರೆ. ಈ ಹೆಸರು 1504ರ ಶಾಸನವೊಂದರಲ್ಲಿ ಬಂದಿದೆ. 'ವೇಂಗಡದೊಡೆಯನ ಸನ್ನಿಧಿಯಲ್ಲಿರುವ ರಘುನಾಥನಿಗೆ' (**ತಿರುವೇಂಗಡೈಮುಡೆಯಾನ್ ಸನ್ನಿಧಿಯಿಲ್ ಎಳುಂದರುಳಿಯಿರುಕ್ಕುಂ ರಘುನಾಥನುಕ್ಕು**) ದಿನವೂ ನಂದಾದೀಪವನ್ನು ಹಚ್ಚುವ ಸಲುವಾಗಿ ಮಾಡಿದ ಗ್ರಾಮದಾನದ ವಿಚಾರ ಈ ಶಾಸನದಲ್ಲಿ ಬಂದಿದೆ. ಇದರಲ್ಲಿ ರಾಮನ ವಿಗ್ರಹವು ಗರ್ಭಗುಡಿಯಲ್ಲೇ ಇದೆಯೆನ್ನುವ ಒಕ್ಕಣೆ ಸ್ಪಷ್ಟವಾಗಿದೆ. ಆ ಕಾಲಕ್ಕೆ ಎಷ್ಟು ಮುಂಚಿನಿಂದ ಅದು ಇದ್ದಿತು? ಯಾವ ಶಾಸನವೂ ಇದನ್ನು ಹೇಳುವುದಿಲ್ಲ.

ರಾಮಾನುಜರ ಕಾಲಕ್ಕೆ ಮೊದಲಂತೂ ಇರಲಿಲ್ಲವೆನ್ನಬಹುದು. ರಾಮಾನುಜರ ಇಷ್ಟದೈವ ರಘುನಾಥ; ರಾಮಾನುಜರು ಲಕ್ಷ್ಮಣನ ಅವತಾರವೆಂದೇ ಕಲ್ಪನೆಯಲ್ಲವೆ? ರಾಮಾನುಜರಿಗೆ ಗುಡಿಗಳಾಗಿ, ಅಲ್ಲಿ ಅವರಿಗೆ ನೈವೇದ್ಯಗಳನ್ನು ಸಲ್ಲಿಸುವಾಗ ಮೊದಲು ರಘುನಾಥನಿಗೆ ಸಮರ್ಪಣೆ ಮಾಡಿದನಂತರ ರಾಮಾನುಜರಿಗೆ ಒಪ್ಪಿಸುವ ವಾಡಿಕೆ ಹಲವಾರು ಶಾಸನಗಳಿಂದ ತಿಳಿದುಬರುತ್ತದೆ. ಕ್ರಿಸ್ತಾಬ್ದ 1488ರಲ್ಲಿ ಮೂಡಿಕೊಂಡ ಶಾಸನವೊಂದು ಬೆಟ್ಟದ ಕೆಳಗೆ ತಿರುಪತಿಯಲ್ಲಿ ಪೆರಿಯ-ರಘುನಾಥನ ಗುಡಿಯಲ್ಲಿ ರಾಮಾನುಜರ ಸನ್ನಿಧಿ ಏರ್ಪಟ್ಟುದನ್ನು ತಿಳಿಸುತ್ತದೆ, ಅಲ್ಲಿ ಇದೇ ಒಕ್ಕಣೆ ಬರುತ್ತದೆ. ರಘುನಾಥನ ಗುಡಿ ಮೊತ್ತಮೊದಲು ಕಾಣಿಸಿಕೊಳ್ಳುವುದು ತಿರುಪತಿಯಲ್ಲಿ 1481ರಲ್ಲಿ ಶಠಕೋಪದಾಸರ್-ನರಸಿಂಹರಾಯ-ಮುದಲಿಯಾರರ ಸೇವೆಯಾಗಿ. ಈ ಸೇವಾ ಕರ್ತನೇ ಇನ್ನೊಂದು ಶಾಸನದಲ್ಲಿ (1476ರದ್ದು) ಬೆಟ್ಟದ ಮೇಲೆ ಗುಡಿಯಲ್ಲಿ ಉಡೈಯವರ್-ಎಂಬೆರುಮಾನಾರಿಗೆ (ಎಂದರೆ, ರಾಮಾನುಜರಿಗೆ) ಹನ್ನೆರಡು ದಿನಗಳ ಉತ್ಸವವೊಂದನ್ನು ನಡೆಸುವ ಏರ್ಪಾಡು ಮಾಡಿ, ಅದರ ಅಂಗವಾಗಿ 'ಬೆಟ್ಟದ ಮೇಲಿರುವ ರಘುನಾಥ'ನಿಗೆ (**ತಿರುಮಲೈಮೇಲ್ ರಘುನಾಥನ್**) ದಿನವೂ ಒಂದು



ಕೃಷ್ಣ – ರುಕ್ಮಿಣಿ

ತಿರುಪ್ಪೋನಕ ಸಲ್ಲಬೇಕೆಂದು ಬಯಸಿದ್ದಾನೆ. ಎಂದರೆ ಆ ಕಾಲಕ್ಕೆ ರಾಮನ ವಿಗ್ರಹ ಬೆಟ್ಟದ ಗುಡಿಯಲ್ಲಿದ್ದಿತು. ಎಲ್ಲಿದ್ದಿತು ಎನ್ನುವ ವಿವರವಿಲ್ಲ. ಗರ್ಭಗುಡಿಯಲ್ಲಿ ಇದ್ದಿರಲಾರದು. ಇದ್ದಿದ್ದರೆ ಆ ಒಕ್ಕಣೆ ಶಾಸನದಲ್ಲಿರುತ್ತಿದ್ದಿತು. ಬಹುಶಃ, ರಾಮಾನುಜರ ಸನ್ನಿಧಿಯಲ್ಲೇ ಇದ್ದಿರಬಹುದು. ರಾಮಾನುಜರ ಗುಡಿಯಲ್ಲೇ ರಾಮನ ಸನ್ನಿಧಿಯನ್ನು ಏರ್ಪಡಿಸಿದ ನಿದರ್ಶನಗಳು ಹಲವು ದೊರೆಯುತ್ತವೆ.

'ತಿರುಮಲೈ-ಒಳಗು'ವಿನಲ್ಲಿ ಬರುವ ಒಂದು ಕಥೆ ಈ ಸಮಸ್ಯೆಗೆ ಒಂದು ಪರಿಹಾರವನ್ನು ಸೂಚಿಸಿದೆ. ವಿಶ್ವಂಭರನೆಂಬ ಋಷಿಯು ಮಧುರೆಯ ಬಳಿ ವೈಗೈ

ನದಿಯ ದಂಡೆಯ ಮೇಲೆ ಕುರುವಿತ್ತರೈ ಎಂಬ ಹಳ್ಳಿಯಲ್ಲಿ ರಾಮನನ್ನು ಕುರಿತು ತಪಸ್ಸು ಮಾಡಿ ಸಾಕ್ಷಾತ್ಕರಿಸಿಕೊಂಡನಂತೆ. ತಾನು ನೋಡಿದ ರಾಮನ ರೂಪದಂತೆ ಮೂರ್ತಿಯೊಂದನ್ನು ಮಾಡಿ ಪೂಜೆಗೆ ಇರಿಸಿಕೊಂಡನಂತೆ. ಋಷಿಯು ಸತ್ತಮೇಲೆ ಈ ವಿಗ್ರಹವು ಹಳ್ಳಿಯಲ್ಲೇ ಉಳಿದು ಪೂಜೆಗೊಳ್ಳುತ್ತಿತ್ತು. ಹಳ್ಳಿಯ ಮೇಲೆ ಶತ್ರುಗಳು ಎರಗಿ ಬೀಳುವರೆಂಬ ಭೀತಿ ತಲೆದೋರಿದಾಗ, ಹಳ್ಳಿಗರು ಈ ಮೂರ್ತಿಯನ್ನು ಕೆಳತಿರುಪತಿಗೆ ಸಾಗಿಸಿದರು. ರಾಮಾನುಜರು ಬೆಟ್ಟದ ಮೇಲೆ ತಮ್ಮ ಸೋದರಮಾವ ತಿರುಮಲೆ-ನಂಬಿಯ ಬಳಿ ರಾಮಾಯಣವನ್ನು ಓದುತ್ತಿದ್ದ ಕಾಲ ಅದು. ಒಂದು ದಿನ ರಾಮಾನುಜರೂ ನಂಬಿಯೂ ವಿಭೀಷಣ-ಶರಣಾಗತಿಯ ವಿಚಾರ ಮಾತನಾಡುತ್ತಿದ್ದಾಗಲೇ ಈ ಮೂರ್ತಿಯೂ ಅಲ್ಲಿಗೆ ಬಂದಿತು. ವಿಶ್ವಂಭರ-ಋಷಿಯ ಮನಸೆಳೆದದ್ದೂ ರಾಮನು ಸೇತುವಿನಲ್ಲಿ ವಿಭೀಷಣನಿಗೆ ಅಭಯವನ್ನು ಕೊಟ್ಟ ಸಂದರ್ಭವೇ. ಇದರಿಂದಲೇ ಅವನು ಸ್ಫೂರ್ತಿಗೊಂಡು ರಾಮನನ್ನು ಕುರಿತು ತಪಸ್ಸು ಮಾಡತೊಡಗಿದ್ದು. ಹೀಗೆ ರಾಮನ ಮೂರ್ತಿಯು ಬಂದಾಗ, ರಾಮಾನುಜರೂ ನಂಬಿಯೂ ಸಂತೋಷಗೊಂಡು, ರಾಮನಿಗೆ ಕಲ್ಯಾಣೋತ್ಸವವನ್ನು ನೆರವೇರಿಸಿ (ಎಂದರೆ ಒಂಟಿಯಾಗಿದ್ದ ರಾಮವಿಗ್ರಹಕ್ಕೆ ಸೀತಾವಿಗ್ರಹವನ್ನು ಸೇರಿಸಿ ಎಂದರ್ಥ ಇದ್ದೀತು), ಬೆಟ್ಟದ ಮೇಲೆ ಗುಡಿಯೊಂದನ್ನು ಕಟ್ಟಿಸಿ ಅಲ್ಲಿರಿಸಿದರಂತೆ. ಮುಂದೆ ನಂಬಿಯು ಅದನ್ನು ವೇಂಗಡದೊಡೆಯನ ಗರ್ಭಗುಡಿಗೆ ಸೇರಿಸಿರಬಹುದು.

ಗರ್ಭಗುಡಿಯಲ್ಲಿ ಕೃಷ್ಣನ ಸೇರ್ಪಡೆಗೂ ರಾಮಾನುಜರೇ ಕಾರಣವೆಂದು ಹೇಳುವುದೂ ಇದೆ. ಕೃಷ್ಣನ ಉತ್ಸವಬೇರವನ್ನು ಮಾರ್ಗಳಿಮಾಸದಲ್ಲಿ ಶಯನಬೇರವನ್ನಾಗಿ ಬಳಸುವರೆಂಬ ವಿಚಾರ ಬಂದಿತಲ್ಲವೆ? ಇದು ವೈಖಾನಸಸಂಪ್ರದಾಯವಲ್ಲ. ರಾಮಾನುಜರು ತಮಿಳುಪ್ರಬಂಧಗಳ ಮೇಲೆ ವಿಶೇಷವಾದ ಆದರವನ್ನು ತಳೆದು, ಆಂಡಾಳ್ (ಗೋದಾದೇವಿ) ಮಾರ್ಗಳಿಮಾಸದಲ್ಲಿ ಕೃಷ್ಣಾನುಭವವನ್ನು ಪಡೆದಳೆಂಬ ವಿವರವನ್ನು ಗಮನಿಸಿದ್ದರು; ಬೆಟ್ಟದ ದೇವರನ್ನು ಅರ್ಚಾವತಾರವೆಂದು ಆಕೆ ಬಗೆದಿದ್ದುದನ್ನೂ ಅರಿತಿದ್ದರು. ಈ ನಂಟನ್ನು ಬೆಟ್ಟದ ಗುಡಿಯಲ್ಲಿ ಉಳಿಸಲೆಂದು, ಕೃಷ್ಣನ ವಿಗ್ರಹವನ್ನು ಮಾಡಿಸಿ, ಮಾರ್ಗಳಿಮಾಸದ ಮೂವತ್ತು ದಿನಗಳೂ ಅದನ್ನೇ ಏಕಾಂತಸೇವೆಯಲ್ಲಿ ಬಳಸಬೇಕೆಂದು ವಿಧಿಸಿದರು ಎನ್ನುವ ಪ್ರತೀತಿ ಇದೆ. ಗರ್ಭಗುಡಿಯಲ್ಲಿ ರಾಮ, ಕೃಷ್ಣ—ಎರಡೂ ಮೂರ್ತಿಗಳೂ ಸೇರುವುದಕ್ಕೆ ತಿರುಮಲೆ-ನಂಬಿಯೇ ನಿಮಿತ್ತನಾದನೆಂದೂ ಹೇಳುವುದಿದೆ.

ಮೊದಲಿಗೆ ರಾಮಪರಿವಾರದ ಮೂರ್ತಿಗಳಲ್ಲಿ ರಘುನಾಥ, ಜಾನಕಿ (ಸೀತೆ) ಎರಡೇ ಇದ್ದುವು; ಕೃಷ್ಣ-ರುಕ್ಮಿಣಿ ಇದ್ದಂತೆ. ಆದರೆ ಮಹಂತರ ಕಾಲದಲ್ಲಿ ಲಕ್ಷ್ಮಣ, ಸುಗ್ರೀವ, ಹನುಮಂತ, ಅಂಗದ—ಈ ವಿಗ್ರಹಗಳನ್ನು ಮಾಡಿಸಿ ಪರಿವಾರವನ್ನು ಹಿಗ್ಗಿಸಿದರು. ರಾಮ-ಸೀತೆಯರೊಂದಿಗೆ ಲಕ್ಷ್ಮಣನು ಗರ್ಭಗುಡಿಯಲ್ಲಿ ಸೇರಿಕೊಂಡುದು ಸಹಜವೇ. ಉಳಿದವರು ರಾಮರ ಮೇಡೆಯಲ್ಲಿ ನಿಂತರು. ಗರ್ಭಗುಡಿಯಲ್ಲಿರುವ ರಾಮನಿಗಾಗಲೀ ಕೃಷ್ಣನಿಗಾಗಲೀ ಪ್ರತ್ಯೇಕವಾಗಿ ಪೂಜೆ, ನೈವೇದ್ಯಗಳು ನಡೆಯುವುದಿಲ್ಲ.

ಶ್ರೀರಾಮನವಮಿ ಮತ್ತು ಶ್ರೀಜಯಂತಿ (ಎಂದರೆ, ಕೃಷ್ಣಜನ್ಮೋತ್ಸವ) ಈ ಸಂದರ್ಭಗಳಲ್ಲಿ ನಡೆಯುವ ವಿಶೇಷಸಮರ್ಪಣೆಗಳು ಕೂಡ ಈ ಮೂರ್ತಿಗಳಿಗೆ ನೇರವಾಗಿ ಸಲ್ಲುವುದಿಲ್ಲ ; ಮೂಲವರಿಗೇ ಸಲ್ಲುವುವು.

ಗರ್ಭಗುಡಿಯಲ್ಲಿ ನಟ್ಟನಡುವೆ ನೇರವಾಗಿ ಕಾಣುವುದು ವೇಂಗಡದೊಡೆಯನ ಸ್ಥಿರವಿಗ್ರಹ. ಅದರ ಬಲಭಾಗದಲ್ಲಿ (ಎಂದರೆ, ದೇವರನ್ನು ನೋಡುತ್ತ ನಿಂತವರ ಎಡಗಡೆ) ನಾಚ್ಚಿಮಾರರೊಡನಿರುವ ಮಲೆಯಪ್ಪನನ್ನು ಕಾಣಬಹುದು. ಮೂಲವರ ಎಡಭಾಗದಲ್ಲಿ (ಎಂದರೆ, ನಮ್ಮ ಬಲಗಡೆ) ರಾಮ-ಪರಿವಾರ (ರಘುನಾಥ, ಜಾನಕಿ, ಲಕ್ಷ್ಮಣ), ಕೃಷ್ಣ-ರುಕ್ಮಿಣಿ, ಉಗ್ರಶ್ರೀನಿವಾಸ ಮತ್ತು ಕೊಲುವುಶ್ರೀನಿವಾಸರ ಮೂರ್ತಿಗಳಿರುತ್ತವೆ. ಮೂಲವರ ಮುಂದೆ ಕೊಂಚ ಎಡಗಡೆಗೆ ಪಾದಪೀಠದ ಬಳಿ ಸಣ್ಣದಾಗಿ ಕಾಣುವ ಬೆಳ್ಳಿವಿಗ್ರಹ ಭೋಗಶ್ರೀನಿವಾಸನದು. ಗರ್ಭಗುಡಿಯಲ್ಲೇ ಸುದರ್ಶನಚಕ್ರದ ಪ್ರತಿಮೆಯನ್ನು ಇರಿಸಿದ್ದಾರೆ. ಇದಕ್ಕೆ ಚಕ್ರತ್ತಾಳ್ವಾರ್ ಎಂದು ಹೆಸರು. ಉತ್ಸವಮೂರ್ತಿ (ಮಲೆಯಪ್ಪ) ಬಿಜಯಮಾಡುವಾಗ ಮುಂದೆ ಈ ಪ್ರತಿಮೆಯನ್ನೊಯ್ಯುತ್ತಾರೆ. ಮೂಲವರ ಸನ್ನಿಧಿಯನ್ನು ಬಿಟ್ಟು ಭೋಗಶ್ರೀನಿವಾಸನು ಹೋಗುವುದೇ ಇಲ್ಲ ; ಉಗ್ರಶ್ರೀನಿವಾಸನು ಒಮ್ಮೆ ಮಾತ್ರ ಹೋಗಿ ಹಿಂದಿರುಗುತ್ತಾನೆ. ಉಳಿದ ಮೂರ್ತಿಗಳು ಉತ್ಸವಸಂದರ್ಭಗಳಲ್ಲಿ ಗರ್ಭಗುಡಿಯಿಂದ ಹೊರಗೆ ಕಾಣಿಸಿಕೊಳ್ಳುತ್ತಾರೆ, ಊರೊಳಗೆ ತಿರುಗಾಡುತ್ತಾರೆ.



ಹದಿನಾಲ್ಕು

ಗುಡಿಯಲ್ಲಿ ನಡೆಯುವ ಪೂಜೆ

ವೈಖಾನಸ-ಸಂಪ್ರದಾಯ

ನಮ್ಮ ನಾಡಿನ ಗುಡಿಗಳಲ್ಲಿ ನಡೆಯುವ ಪೂಜೆ ಯಾವುದಾದರೊಂದು ನಿರ್ದಿಷ್ಟವಾದ ಪದ್ಧತಿಯಲ್ಲೇ ಇರುತ್ತದೆ. ಗುಡಿಯನ್ನು ಕಟ್ಟಿರುವ ಬಗೆ, ಅದರ ಅಂಗಗಳನ್ನು ಅಳವಡಿಸಿರುವ ರೀತಿ, ಮೂರ್ತಿಗಳನ್ನು ನಿಲ್ಲಿಸಿರುವ ಭಂಗಿ, ಪೂಜೆಯ ವಿವರಗಳು ಸಾಗುವ ಕ್ರಮ, ಕಾಲಕಾಲಕ್ಕೆ ಜರುಗುವ ಉತ್ಸವಗಳು, ಇವುಗಳಲ್ಲೆಲ್ಲ ಪಾಲ್ಗೊಳ್ಳಬೇಕಾದ ಅರ್ಚಕರ ಪರಿಚಾರಕರ ಮತದೀಕ್ಷೆ—ಇವೆಲ್ಲವೂ ಈ ಪದ್ಧತಿಯ ಚೌಕಟ್ಟಿನಲ್ಲೇ ಸಿದ್ಧವಾಗುವುವು. ಇವೆಲ್ಲವನ್ನೂ ಒಳಗೊಂಡ ಶಾಸ್ತ್ರವೇ 'ಆಗಮ'ವೆನಿಸಿ ಕೊಳ್ಳುತ್ತದೆ. ಗುಡಿಯ ಪ್ರಧಾನಮೂರ್ತಿಯನ್ನನುಸರಿಸಿ ಮುಖ್ಯ-ಅರ್ಚಕನನ್ನನುಸರಿಸಿ ಆಗಮದಲ್ಲಿ ಶೈವ, ಶಾಕ್ತ, ಮತ್ತು ವೈಷ್ಣವಗಳೆಂಬ ಭೇದವಿದೆ. ವೈಷ್ಣವರ ಆಗಮದಲ್ಲಿ ವೈಖಾನಸ, ಪಾಂಚರಾತ್ರ ಎಂದೆರಡು ಕವಲುಗಳು. ಇದರ ಬಳಕೆ ಹೆಚ್ಚಾಗಿ ದಕ್ಷಿಣದೇಶದ ಗುಡಿಗಳಲ್ಲೇ. ಎಲ್ಲ ಪೂಜಾಪದ್ಧತಿಗಳೂ ಮುಖ್ಯವಾಗಿ ಇವೆರಡು ಕ್ರಮಗಳಲ್ಲೇ ಅಡಕವಾಗುತ್ತವೆ. ಮಾಧ್ವಸಂಪ್ರದಾಯದ ಗುಡಿಗಳಲ್ಲಿ ತಂತ್ರಸಾರವೆಂಬ ಪದ್ಧತಿ ಬಳಕೆಯಲ್ಲಿದೆ. ಆದರೆ ಇದು ಸಾಮಾನ್ಯವಾಗಿ ಪಾಂಚರಾತ್ರದ ಚೌಕಟ್ಟಿನಲ್ಲೇ ಸೇರುತ್ತದೆ ಎನ್ನಬಹುದು.

ಮಧ್ಯಯುಗದಲ್ಲಿ ವೈಖಾನಸ, ಪಾಂಚರಾತ್ರಪದ್ಧತಿಗಳ ನಡುವೆ ಪೈಪೋಟಿ, ಹಗರಣ, ಮೇಲಾಟ ಇದ್ದುದು ಕಂಡುಬರುತ್ತದೆ; ಪಾಂಚರಾತ್ರವು ಹೆಚ್ಚೂಕಡಮೆ ಗೆದ್ದಂತೆಯೂ ತೋರುತ್ತದೆ. ದಕ್ಷಿಣದೇಶದಲ್ಲಿ ತಿರುಮಲ-ತಿರುಪತಿಯಲ್ಲದೆ ಮಹಾಬಲಿಪುರಂ, ಉತ್ತರಮೇರೂರು, ಶ್ರೀಪೆರಂಬೂದೂರು, ಪೂನಮಲ್ಲಿ, ಸೆಂಜಿ, ತಂಜಾವೂರು, ವಾನಮಾಮಲೆ, ತಿರುವಾಲಿತಿರುನಗರಿ, ತಿರುಕ್ಕುರುಂಗುಡಿ, ನವ ತಿರುಪತಿಗಳು, ಮಧುರೆ, ಅಳಹರ್‌ಕೋವಿಲ್, ತಿರುಚಿರಪಳ್ಳಿ, ಶ್ರೀವಿಲ್ಲಿಪುತ್ತೂರು, ರಾಮನಾಥಪುರಂ, ಸೇಲಂ, ದರ್ಭಶಯನಂ ತಿರುವಿಳಿಕ್ಕೇಣಿ, ವೇಂಕಟಗಿರಿ, ಅಮರಾವತಿ, ಶ್ರೀಕಾಕುಳಂ, ಕೊಂಡವೀಡು, ವಿನುಕೊಂಡ, ವೇದಾದ್ರಿ, ಸಿಂಗರಾಯ ಕೊಂಡ, ಸೂಜಿವೀಡು, ವಿಜಯನಗರ, ಪಿಠಾಪುರ, ಕಾಕಿನಾಡ ಮೊದಲಾದ ಎಡೆಗಳಲ್ಲೆಲ್ಲ ವೈಖಾನಸಪದ್ಧತಿಯ ಪೂಜೆ ನಡೆಯುವುದಿದೆ. ಕನ್ನಡನಾಡಿನಲ್ಲಂತೂ


ವೈಖಾನಸರ ಗುಡಿಗಳೇ ಬಹುಸಂಖ್ಯೆಯಲ್ಲಿವೆ. ವೈಖಾನಸಸಂಪ್ರದಾಯಕ್ಕೆ ಕನ್ನಡನಾಡು ತೌರೂರು ಎಂದರೂ ತಡೆದೀತು.

ವೈಖಾನಸಕ್ಕೆ ವೈದಿಕ ಹಿನ್ನೆಲೆ ಹೆಚ್ಚು; ವೇದೋಕ್ತವಾದ ಕರ್ಮಾನುಷ್ಠಾನದಲ್ಲಿ ಅವರ ಆದರ ಹೆಚ್ಚು; ಪಾಂಚರಾತ್ರರಿಗೆ ಜಾನಪದಸಂಪರ್ಕ ಹೆಚ್ಚು. ಅದು ಉತ್ತರದೇಶದ ಭಾಗವತಪಂಥದ ಆಶ್ರಯದಲ್ಲಿ ಮೈದಳೆದು, ರಾಮಾನುಜರ ಪ್ರಭಾವ ದಿಂದಾಗಿ ಈ ಕಡೆ ಬಲಗೊಂಡಿತೆಂದು ಹೇಳಬಹುದು. ಪಾಂಚರಾತ್ರಸಂಹಿತೆಗಳು ಭಗವಚ್ಛಾಸ್ತ್ರವೆಂದೂ ವಾಸುದೇವಮತವೆಂದೂ ಸಾತ್ತ್ವತವಿಧಿಯೆಂದೂ ಎಣಿಕೆ; ಇವು ಗಳಲ್ಲಿ ವ್ಯೂಹಸಿದ್ಧಾಂತಕ್ಕೆ ಹೆಚ್ಚಿನ ಬೆಲೆ. ಮೊದಲು ಇದಕ್ಕೆ ವೈದಿಕಪುಷ್ಟಿ ಎಷ್ಟಿದ್ದಿತೋ ಹೇಳುವುದು ಕಷ್ಟ. ರಾಮಾನುಜರ ಪೂರ್ವಸೂರಿಗಳಾದ ಯಾಮುನರು ಪಾಂಚರಾತ್ರಕ್ಕೆ ಆಗಮಪ್ರಾಮಾಣ್ಯವನ್ನು ಒದಗಿಸಲು ಯತ್ನಿಸಿದರು. ರಾಮಾನುಜರು ಈ ಸಿದ್ಧಾಂತಕ್ಕೆ ಒಲಿದು, ತಮ್ಮ ಪ್ರಭಾವ ಮೂಡಿದಲ್ಲೆಲ್ಲ ಅದನ್ನೇ ಬಳಕೆಗೆ ತರಲು ಯತ್ನಿಸಿದರು. ಎಷ್ಟೋ ವೈಖಾನಸಗುಡಿಗಳು ಅವರ ಕಾಲದಲ್ಲಿ ಪಾಂಚರಾತ್ರಗುಡಿಗಳಾಗಿ ಮಾರ್ಪಟ್ಟುವು. ಈ ಪದ್ಧತಿಗೆ ಇದ್ದ ಆತಂಕವನ್ನೂ ಎದುರಾಟವನ್ನೂ ವೇದಾಂತ ದೇಶಿಕರು ತೊಡೆದು ಹಾಕಿ 'ಪಾಂಚರಾತ್ರರಕ್ಷೆ'ಯನ್ನು ಕೈಗೊಂಡರು. ಪಾಂಚರಾತ್ರ ಪದ್ಧತಿಗೆ ಕೇಂದ್ರ ಶ್ರೀರಂಗ. ಶ್ರೀವೈಷ್ಣವಸಮುದಾಯಕ್ಕೇ ಕೇಂದ್ರವಲ್ಲವೆ ಅದು? ಹೀಗಾಗಿ ಶ್ರೀರಂಗ, ಶ್ರೀವೈಷ್ಣವ, ಪಾಂಚರಾತ್ರ—ಎಂಬ ಮೂರೂ ಒಂದೇ ನೆಲದಲ್ಲಿ ಕೂಡಿಕೊಂಡುವು.

ಇದು ಗುಡಿಯ ಊಳಿಗಕ್ಕೆಂದು ನೇಮಕಗೊಂಡವರ ಹಿನ್ನೆಲೆಯನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ. ನಾಲ್ಕು ಮನೆತನಗಳಿಂದ ಪರಂಪರೆಯಾಗಿ ಬಂದ ಅರ್ಚಕರು, ವೈಖಾನಸರು, ತೆಲುಗರು. ಏಳು ಮನೆತನದವರಾದ ಆಚಾರ್ಯಪುರುಷರು (ತೋಳಪ್ಪಾಚಾರ್ಯ, ಪರವಸ್ತು, ಪ್ರತಿವಾದಿಭಯಂಕರಂ, ವೀರವಲ್ಲಿ, ಪುರಿಶೈ, ಧರ್ಮಪುರಿ ಮತ್ತು ಕಂದಾಡೈ) ಶ್ರೀವೈಷ್ಣವರು, ಪಾಂಚರಾತ್ರಕ್ಕೆ ಒಲಿದವರು, ದೇವರ ಉತ್ಸವದಲ್ಲಿ ಮುಂದೆ ನಡೆದು ತಮಿಳು-ಪ್ರಬಂಧಪಾರಾಯಣ ಮಾಡುವವರು. ಧರ್ಮಕರ್ತರೆನಿಸಿಕೊಂಡ ಹಿರಿಯ ಜೀಯಂಗಾರ್, ಅವರ ನೆರವಿಗೆಂದು ಕಿರಿಯ ಜೀಯಂಗಾರ್, ಏಕಾಂಗಿ ಇವರೂ ಶ್ರೀವೈಷ್ಣವಮಠಕ್ಕೇ ಸೇರಿದವರು. ಏಕಾಂತಸೇವೆಯಲ್ಲಿ ಸಂಗೀತಸೇವೆಮಾಡುವ ತಾಳ್ಳಪಾಕಂ ಸೋದರರೂ ಶ್ರೀವೈಷ್ಣವ ಸಂಪ್ರದಾಯದವರೇ. ವೇದಪಾರಾಯಣ ಮಾಡುವವರು, ಪುರೋಹಿತ ಸಾಮವೇದ ವಾಧ್ಯಾರರು ಯಾರಾದರೂ ಆಗಿರಬಹುದು; ಸ್ಮಾರ್ತಸಂಪ್ರದಾಯದವರೂ ಇರುತ್ತಾರೆ. ಹಾಗೆಯೇ ಆರ್ಜಿತಸೇವೆಗಳಲ್ಲಿ ಮಂತ್ರಪಠಣಮಾಡುವವರೂ ಕೂಡ. ಅಡುಗೆಮನೆಯಲ್ಲಿ ಪ್ರಸಾದವನ್ನು ಸಿದ್ಧಪಡಿಸುವ ಗಮೇಕಾರರೂ ಶ್ರೀವೈಷ್ಣವರೇ; ಪಾಂಚಾರತ್ರಪಕ್ಷದವರು.

ವೇಂಗಡಬೆಟ್ಟದ ಗುಡಿಯಲ್ಲಿ ಪೂಜೆ ನಡೆಯುವುದು ವೈಖಾನಸಪದ್ಧತಿಯಲ್ಲಿ. ಗುಡಿಯಲ್ಲಿ ಪೂಜೆ ಮೊದಲಾದಾಗಿನಿಂದಲೂ ಇದೇ ಪದ್ಧತಿಯೇ ಅಲ್ಲಿ ಬಳಕೆಯಲ್ಲಿರುವುದು. ಈ ಗುಡಿಗೆ ರಾಮಾನುಜರ ಸಂಪರ್ಕ ನಿಕಟವಾಗಿಯೇ ಇದ್ದಿತು.

ಶ್ರೀವೈಷ್ಣವರ ಪ್ರಭಾವ ಅಲ್ಲಿ ಹೆಚ್ಚಾಗಿಯೇ ಸಾಗಿಬಂದಿದೆ. ಆದರೂ ಅಲ್ಲಿನ ವೈಖಾನಸ ಪದ್ಧತಿಯ ಪೂಜೆ ನಿಲ್ಲಲಿಲ್ಲ, ಪಾಂಚರಾತ್ರ ಬೇರೂರಲಿಲ್ಲ. ಇಂದಿಗೂ ಅರ್ಚಕರೆಲ್ಲ ವೈಖಾನಸರೇ. ಗುಡಿ ಮೈದಳೆದಾಗ ಅರ್ಚಕನಾಗಿ ನಿಂತ ಗೋಪೀನಾಥನು ವೈಖಾನಸ ಪದ್ಧತಿಯವನು, ಅಂದಿನಿಂದ ಇಂದಿನವರೆಗೂ ಈ ಪದ್ಧತಿಯೇ ಅಲ್ಲಿ ಪ್ರಬಲವಾಗಿದೆ. ಶ್ರೀರಂಗದ ರಂಗನಾಥನ ಉತ್ಸವಮೂರ್ತಿ ಬೆಟ್ಟದ ಮೇಲೆ ಬಂದು ಗುಡಿಯ ನೆರೆಯಲ್ಲೇ ಸುಮಾರು ಮೂವತ್ತು ವರ್ಷಗಳಿದ್ದರೂ, ಆ ಕಾಲದಲ್ಲಿ (ಕ್ರಿಸ್ತಾಬ್ದ 1330ರಿಂದ 1360ರ ವರೆಗೆ) ಶ್ರೀರಂಗದ ಶ್ರೀವೈಷ್ಣವ-ಪಾಂಚರಾತ್ರಶ್ರದ್ಧಾಳುಗಳ ವಸತಿ ಬೆಟ್ಟದ ಮೇಲೇ ಇದ್ದಿತಾದರೂ ಗುಡಿಯೊಳಗೆ ಪೂಜೆ ವೈಖಾನಸಪದ್ಧತಿಯಲ್ಲೇ ನಡೆಯುತ್ತಿದ್ದಿತು, ಅದೇ ಮುಂದುವರೆಯಿತು. ಮುಂದೆ ಗುಡಿಗೆ ನಡೆದುಕೊಂಡ ಅರಸರೆಲ್ಲ ಪಾಂಚರಾತ್ರ-ಶ್ರೀವೈಷ್ಣವರ ಶಿಷ್ಯರೇ. ಕೆಲವರಂತೂ (ಅಚ್ಯುತರಾಯ, ವೇಂಕಟಪತಿರಾಯನಂಥವರು) ಈ ಪಂಥದ ದೀಕ್ಷೆಯನ್ನು ತಳೆದಿದ್ದವರೇ. ಆದರೆ ವೈಖಾನಸಪೂಜೆಯನ್ನು ಅಲ್ಲಿ ಮಾರ್ಪಡಿಸಲು ಯಾರೂ ಪ್ರಯತ್ನಪಡಲಿಲ್ಲ, ಅಥವಾ ಪ್ರಯತ್ನಪಟ್ಟು ಸಫಲರಾಗಲಿಲ್ಲ. ಇದು ವೈಖಾನಸಪದ್ಧತಿಯ ಹಳಮೆಯನ್ನೂ ಹಿಡಿತವನ್ನೂ ಸೂಚಿಸುತ್ತದೆ.



ಸಹಸ್ರಕಂಬಮಂಟಪ

ವೈಖಾನಸಪದ್ಧತಿಯನ್ನು ಕುರಿತು ನಾಲ್ಕು ಮಾತು ಹೇಳಬೇಕು. ದೇವರನ್ನು ಒಲಿಸಿಕೊಳ್ಳಲು ಜಪ, ಹೋಮ, ಧ್ಯಾನ ಮತ್ತು ಅರ್ಚನೆ ಎಂದು ನಾಲ್ಕು ಬಗೆಗಳೆಂದು ಹಿಂದಿನಿಂದ ಬಂದ ಎಣಿಕೆ. ಇವುಗಳಲ್ಲಿ ಅರ್ಚನೆ (ಎಂದರೆ, ದೇವತಾಪೂಜೆ) ಸರ್ವಾರ್ಥಸಾಧಕವಾದುದೆಂದು ಆಗಮದ ವಿಶ್ವಾಸ. ಅರ್ಚನೆಗೆ ನೆರವಾಗಿ ಅರ್ಚಾಮೂರ್ತಿಯ ಕಲ್ಪನೆ ಒದಗಿಬಂದಿತು; ಅರ್ಚಾವಿಧಿಗಳು ಮೈದಳೆದುವು. ಅರ್ಚಾಮೂರ್ತಿಯು ವಿಷ್ಣುವೆಂದೂ, ಅರ್ಚಾವಿಧಿಗಳು ವೇದೋಕ್ತವಾಗಿರಬೇಕೆಂದೂ ಹಟತೊಟ್ಟವರು ವೈಖಾನಸರು. 'ವೈಖಾನಸ' ಎನ್ನುವ ಮಾತಿಗೆ ಸರಿಯಾದ ಅರ್ಥ ತಿಳಿಯುವುದಿಲ್ಲ. ಆದರೆ ತುಂಬ ಹಿಂದಿನಿಂದ ಬಂದಿರುವ ಮಾತು ಅದು. ಋಗ್ವೇದದ ಒಂಬತ್ತನೆಯ ಮಂಡಲದಲ್ಲಿ ಅರವತ್ತಾರನೆಯ ಸೂಕ್ತಕ್ಕೆ ವೈಖಾನಸರೇ ಮಂತ್ರದ್ರಷ್ಟಾರರು. ವೈಖಾನಸರೆಂದರೆ ವಾನಪ್ರಸ್ಥರು ಎಂದು 'ತ್ರಿಕಾಂಡಶೇಷ'ದಲ್ಲಿಯೂ **(ವಾನಪ್ರಸ್ಥೋ ವೈಖಾನಸೋಽಗ್ರಹಃ)**, ಮುನಿಗಳು ಎಂದು 'ದೇವೀಭಾಗವತ'ದಲ್ಲಿಯೂ **(ವೈಖಾನಸೋ ಯೇ ಮುನಯೋ ಮಿತಾಹಾರಾ ಜಿತವ್ರತಾಃ)**, ವೈಖಾನಸವೆನ್ನುವುದು ವ್ರತವೆಂದು ಕಾಳಿದಾಸನು ಶಾಕುಂತಲದಲ್ಲಿಯೂ **(ವೈಖಾನಸಂ ವ್ರತಂ)** ಹೇಳಿರುವುದನ್ನು ಗಮನಿಸಬೇಕು. ವಿಖನಸನೆಂದರೆ ಬ್ರಹ್ಮ; ಅವನನ್ನು ತಪಸ್ಸಿನಿಂದ ಅರಿತುಕೊಳ್ಳುವವರು ವೈಖಾನಸರು ಎಂಬ ವಿವರಣೆಯೂ ಇದೆ **(ವಿಖನಸಂ ಬ್ರಹ್ಮಾಣಂ ವೇತ್ತಿ ತಪಸಾ)**. ವಿಷ್ಣುವಿನ ಹೊಕ್ಕುಳಿಂದ ಕಾಣಿಸಿಕೊಂಡ ಬ್ರಹ್ಮನೇ ಜನರಿಗೆ ಅರ್ಚನಾಪದ್ಧತಿಯನ್ನು ತಿಳಿಸಲೆಂದು ವಿಖನಸಮುನಿಯಾಗಿ ಅವತರಿಸಿದನೆಂದೂ ಒಕ್ಕಣೆಯಿದೆ. ಭಾಗವತರು ವೈಖಾನಸರಿಂದ ಬೇರೆಯಾಗಿದ್ದರೆಂದು ಕೆಲವು ಉಲ್ಲೇಖಗಳಿಂದ ಸ್ಪಷ್ಟವಾಗುತ್ತದೆ.

ವೈಖಾನಸರು ವಾನಪ್ರಸ್ಥಾಶ್ರಮದಲ್ಲಿ ನಿಂತವರೆಂದು ಸಾಮಾನ್ಯವಾದ ಅರ್ಥ. ಗೃಹಸ್ಥಾಶ್ರಮವನ್ನು ಅವರು ದಾಟಿದ್ದರೂ, ವರ್ಣಾಶ್ರಮವ್ಯವಸ್ಥೆಯನ್ನೂ ಶ್ರೌತ-ಸ್ಮಾರ್ತ ಕರ್ಮಗಳನ್ನೂ ದೃಢವಾಗಿ ನಂಬಿದ್ದವರು. ಯಜ್ಞದ ಪರಿಪಾಟಿಯನ್ನು ಬಿಡದೆ ಅರ್ಚನೆಯನ್ನೂ ವೇದದ ಚೌಕಟ್ಟಿನಲ್ಲಿಯೇ ನಿಲ್ಲಿಸಲು ಯತ್ನಿಸಿದಂತೆ ಕಾಣುತ್ತದೆ. ಮುಖ್ಯವಾಗಿ ಯಜುರ್ವೇದವನ್ನೇ ಹಿಡಿದವರು ಅವರು; ಎಂದರೆ ವೈದಿಕ-ಕರ್ಮಕಾಂಡವನ್ನು ಶ್ರದ್ಧೆಯಿಂದ ಅನುಸರಿಸುತ್ತಿದ್ದವರು. ವೈಖಾನಸಸೂತ್ರಗಳಲ್ಲಿ ವೇದಮಂತ್ರಗಳೂ ವೈದಿಕ ಕ್ರಿಯೆಗಳೂ ವೇದದ ಕಲ್ಪನೆಗಳೂ ಆರಾಧನೆಯ ನೆಲೆಯಲ್ಲಿ ಹೆಣೆಯಲ್ಪಟ್ಟಿವೆ. ಬೋಧಾಯನ, ಮನು ಮೊದಲಾದ ಸ್ಮೃತಿಕಾರರೂ ಈ ವೈಖಾನಸಸೂತ್ರಗಳನ್ನು ಗೌರವದಿಂದ ಉಲ್ಲೇಖಿಸಿದ್ದಾರೆ. ಎಂದರೆ ವೈಖಾನಸರ ನೆಲೆ ತುಂಬ ಪ್ರಾಚೀನವಾದುದೆನ್ನಲು ಅಡ್ಡಿಯಿಲ್ಲ.

ಈ ನೆಲೆಯಲ್ಲಿ ಮುಂದೆ ಮೂಡಿಕೊಂಡ ಆಗಮ 'ನೂರೈವತ್ತು ಲಕ್ಷ ಗ್ರಂಥ'ಗಳೆಂದು ಹೇಳುತ್ತಾರೆ. ಗ್ರಂಥವೆಂದರೆ ಮೂವತ್ತೆರಡು ಅಕ್ಷರಗಳಿಂದ ಕೂಡಿದ ಅನುಷ್ಟುಪ್-ಶ್ಲೋಕವೆಂದರ್ಥ. ಈ ಆಗಮವನ್ನೆಲ್ಲ ನಾಲ್ಕುಲಕ್ಷ ಶ್ಲೋಕಗಳಲ್ಲಿ ಸಂಹಿತಾರೂಪವಾಗಿ ಭೃಗು, ಮರೀಚಿ, ಅತ್ರಿ ಮತ್ತು ಕಶ್ಯಪಋಷಿಗಳು ಸಂಗ್ರಹಿಸಿದುದೇ ಇಂದು ಬಳಕೆಯಲ್ಲಿವೆ. ಈ ಸಂಹಿತೆಗಳಲ್ಲಿ ಗುಡಿಯ ಕಟ್ಟಡ, ಬೇರೆಬೇರೆ ಭಾಗಗಳ ರಚನೆ

ಮತ್ತು ಮಾನ, ಮೂರ್ತಿಪ್ರತಿಷ್ಠೆ, ಪೂಜಾವಿಧಿ, ಉತ್ಸವಾದಿನಿಯಮ—ಇವು 'ಕ್ರಿಯಾ' ಮತ್ತು 'ಚರ್ಯಾ' ಎಂಬ ಎರಡು ಪಾದಗಳಲ್ಲಿ ಅಡಕವಾಗಿವೆ. ಪಾಂಚರಾತ್ರಸಂಹಿತಾ ಗ್ರಂಥಗಳಿಗೆ ಹೋಲಿಸಿದರೆ ವೈಖಾನಸರ ಗ್ರಂಥಗಳು ಸ್ವಲ್ಪವೇ. ಪಾಂಚರಾತ್ರರ ಆಗಮ 'ಶತಕೋಟಿಪ್ರಮಾಣ'ದ್ದು, ಎಂದರೆ ಒಂದುನೂರು ಕೋಟಿ ಗ್ರಂಥಗಳು ಉಳ್ಳದ್ದು! ದಿಟವಾಗಿ ಈಗಲೂ ಪಾಂಚರಾತ್ರಗ್ರಂಥಗಳ ಸಂಖ್ಯೆಯೇ ಹೆಚ್ಚು. ಆದುದರಿಂದ ಅಲ್ಲಿ ಪರಿಶೀಲನೆಗೆ ಬರುವ ವಿವರಗಳೂ ಹೆಚ್ಚೇ. ಹೀಗಾಗಿ ವೈಖಾನಸಗ್ರಂಥಗಳಲ್ಲಿ ಗಣನೆಗೆ ಬಾರದೆ ಇರುವ ವಿಚಾರಗಳನ್ನು ವೈಖಾನಸರು ಪಾಂಚರಾತ್ರಗಳಿಂದಲೇ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ.

ವೈಖಾನಸರು ಗೃಹಾರ್ಚನೆಗೇ (ಎಂದರೆ, ಮನೆಯಲ್ಲಿ ಮಾಡುವ ಪೂಜೆಗೇ) ಹೆಚ್ಚು ಒಲಿದಿದ್ದರೆಂದು ಕಾಣುತ್ತದೆ; ಆಲಯಾರ್ಚನೆಯನ್ನು (ಎಂದರೆ, ಗುಡಿಯಲ್ಲಿ ಪೂಜೆ ಮಾಡುವುದನ್ನು) ಅವರು ಒಪ್ಪಿದರೂ ಅದಕ್ಕೆ ಎರಡನೆಯ ಸ್ಥಾನವನ್ನು ಕೊಟ್ಟಂತೆಯೂ ಕಾಣುತ್ತದೆ. "ಗೃಹೇ ದೇವತಾಯತನೇ ವಾ ಭಕ್ತ್ಯಾ ಭಗವಂತಂ ನಾರಾಯಣಂ ಅರ್ಚಯೇತ್ 'ತದ್ವಿಷ್ಣೋಃ ಪರಮಂ ಪದಂ' ಗಚ್ಛೇತ್..." ಎಂದು ವೈಖಾನಸಸೂತ್ರದ ಒಕ್ಕಣೆ. 'ಸಮೂರ್ತಾರ್ಚನ'ವೆಂಬ ಗ್ರಂಥದಲ್ಲಂತೂ ಸ್ಪಷ್ಟವಾಗಿ "ವೈಖಾನಸೇನ ವಿಪುಲಂ ನೋಕ್ತಂ ಆಲಯಪೂಜನಂ" (ಗುಡಿಯ ಪೂಜೆಯನ್ನು ವೈಖಾನಸರು ಹೆಚ್ಚಾಗಿ ಹೇಳಲಿಲ್ಲ) ಎಂದು ಹೇಳಿದೆ. ಆದುದರಿಂದ ವೈಖಾನಸ ಸಂಪ್ರದಾಯದ ಗುಡಿಯಾದರೂ ಪಾಂಚರಾತ್ರದ ಕೆಲವು ಪದ್ಧತಿಗಳನ್ನು ಅಳವಡಿಸಿ ಕೊಂಡಿರುತ್ತಾರೆ.

ಗುಡಿಯ ಅರ್ಚಕರು

ಪಾಂಚರಾತ್ರರಿಗೂ ವೈಖಾನಸರಿಗೂ ಇರುವ ಮುಖ್ಯ ವ್ಯತ್ಯಾಸ ಅವರಿಗೆ ಒದಗುವ ದೀಕ್ಷೆಯಲ್ಲಿ. ಪಾಂಚರಾತ್ರ-ವೈಷ್ಣವರಿಗೆ ದೀಕ್ಷೆ ಒದಗುವುದು ಮುದ್ರಾಂಕನ ಅಥವಾ ಚಕ್ರಾಂಕನ ಎನ್ನುವ ವಿಧಿಯಿಂದ. ವಿಷ್ಣುವಿನ ಆಯುಧಗಳಾದ ಶಂಖ-ಚಕ್ರ ಗಳನ್ನು ಮುದ್ರೆಗಳಂತೆ ಮಾಡಿಟ್ಟುಕೊಂಡು ಆಚಾರ್ಯರು ಶಿಷ್ಯರಿಗೆ ಅದನ್ನು ತೋಳುಗಳ ಮೇಲೆ ಒತ್ತುತ್ತಾರೆ; ಮಂತ್ರೋಪದೇಶವನ್ನೂ ಮಾಡುತ್ತಾರೆ. ಒತ್ತುವುದರಲ್ಲಿ ಎರಡು ಬಗೆಗಳು: 'ತಪ್ತಮುದ್ರಾಂಕನ' ಎಂದರೆ ಮುದ್ರೆಗಳನ್ನು ಕೆಂಡದ ಮೇಲೆ ಕಾಯಿಸಿ ಮುದ್ರೆ ಬಿಸಿಯಾಗಿರುವಾಗಲೇ ಒತ್ತುವುದು, ಮತ್ತು 'ಶೀತಲಮುದ್ರಾಂಕನ' ಎಂದರೆ ಮುದ್ರೆಗಳನ್ನು ಗೋಪೀಚಂದನ ಅಥವಾ ಶ್ರೀವೈಷ್ಣವರು ನಾಮಕ್ಕೆ ಬಳಸುವ ಬಿಳಿಮಣ್ಣು (ತಿರುಮಣ್) ಇದರಲ್ಲಿ ಇಟ್ಟು ಅನಂತರ ತೋಳುಗಳ ಮೇಲೆ ಒತ್ತುವುದು. ಪಾಂಚರಾತ್ರರು ಈ ಎರಡೂ ಕ್ರಮಗಳನ್ನು ಅನುಸರಿಸುತ್ತಾರೆ. ಮಗು ಹುಟ್ಟಿದ ಹನ್ನೊಂದನೆಯ ದಿನ ಶೀತಲಮುದ್ರಾಂಕನ; ಉಪನಯನಕಾಲದಲ್ಲಿ ತಪ್ತಮುದ್ರಾಂಕನ ಮಾಡುವುದೂ ಉಂಟು. ಇದು ದೇಹಶೋಧನಸಂಸ್ಕಾರ.

ಆದರೆ ವೈಖಾನಸರಿಗೆ ಇಂಥ ಮುದ್ರಾಂಕನದ ಅಗತ್ಯವಿಲ್ಲ, ಅವರು ಗರ್ಭ ವೈಷ್ಣವರೆಂದು ಕಲ್ಪನೆ. ಮಗು ಹುಟ್ಟುವ ಮೊದಲೇ, ತಾಯಿಯ ಎಂಟನೆಯ ತಿಂಗಳ ಗರ್ಭದಲ್ಲಿ ವಿಷ್ಣುಬಲಿಯೆಂಬ ಸಂಸ್ಕಾರ ಆಕೆಗೆ ನಡೆಯುತ್ತದೆ. ಮುದ್ರೆಗಳನ್ನು ಪಾಯಸದಲ್ಲಿ ಅದ್ದಿ ಆ ಪಾಯಸವನ್ನು ಆಕೆಗೆ ಪ್ರಾಶನ ಮಾಡಿಸುತ್ತಾರೆ. ಇದರಿಂದ ಗರ್ಭದಲ್ಲಿರುವ ಮಗುವಿಗೇ ಮುದ್ರಾಂಕನ ದೊರೆತಂತೆ. ವೈಖಾನಸರಿಗೆ ಹೇಳಿರುವ ಹದಿನೆಂಟು ದೇಹಸಂಸ್ಕಾರಗಳಲ್ಲಿ ಜಾತಕರ್ಮಕ್ಕೆ ಮೊದಲೇ ನಡೆಯುವ ಸಂಸ್ಕಾರ ಇದು.

ವೈಖಾನಸರಿಗೆ ತಾವು ಗರ್ಭವೈಷ್ಣವರೆಂಬ ವಿಶ್ವಾಸ. ತಮ್ಮ ಸಂಪ್ರದಾಯದ ಗುಡಿಯಲ್ಲಿ ಹೀಗೆ ಗರ್ಭವೈಷ್ಣವರೇ ಪೂಜೆ ನಡೆಸಬೇಕೆಂಬ ಕಟ್ಟಳೆಯಿದೆ. ಹಾಗಲ್ಲದವರಿಗೆ ಪೂಜೆಯ ಅಧಿಕಾರವಿಲ್ಲ, ಗರ್ಭಗುಡಿಯನ್ನು ಅವರು ಪ್ರವೇಶಿಸುವ ಹಾಗೂ ಇಲ್ಲ, ಅಲ್ಲಿ ಪರಿಚಾರಕರಾಗಿಯೂ ಕೆಲಸ ಮಾಡಲಾರರು. ಬೆಟ್ಟದ ಗುಡಿಯಲ್ಲಿ ಅರ್ಚಕರೇನೋ ವೈಖಾನಸರೇ. ಆದರೆ ಅವರಿಗೆ ನೆರವಾಗಿ ಮೊದಲಿನಿಂದ ವೈಖಾನಸರಲ್ಲದವರು ಇದ್ದಾರೆ. ರಾಮಾನುಜರ ಸೋದರಮಾವ ತಿರುಮಲೆ-ನಂಬಿಯೇ ಅರ್ಚಕರಿಗೆ ಸಹಾಯಮಾಡುತ್ತ ಬೆಟ್ಟದ ಮೇಲೆ ಇರಲಿಲ್ಲವೆ? ಯಾದವರಾಯರು ಈ ಕಡೆ ಆಳುತ್ತಿದ್ದಾಗ, ಎಂದರೆ ಕ್ರಿಸ್ತಾಬ್ದ 1100ರಿಂದ 1360ರ ವರೆಗೆ, ಶ್ರೀವೈಷ್ಣವರ ಪ್ರಭಾವ ಅಲ್ಲಿ ಹೆಚ್ಚಾಯಿತಷ್ಟೆ. ರಾಮಾನುಜರು ಅಲ್ಲಿಗೆ ಬಂದುದು ಘಟ್ಟಿಗ ಯಾದವರಾಯನ ಕಾಲದಲ್ಲಿ ಎಂದು ಹೇಳುತ್ತಾರೆ. ಶ್ರೀರಂಗದ ಉತ್ಸವಮೂರ್ತಿ ಬೆಟ್ಟದ ಮೇಲೆ ತಂಗಿದ್ದುದು 1330ರಿಂದ 1360ರವರೆಗೆ, ಶ್ರೀರಂಗನಾಥ-ಯಾದವರಾಯನ ಕಾಲದಲ್ಲಿ. ವೈಖಾನಸರ ಮಣವಾಳಪ್ಪೆರುಮಾಳಿಗೆ (ಭೋಗಶ್ರೀನಿವಾಸನಿಗೆ) ಬದಲಾಗಿ ಪಾಂಚರಾತ್ರರ ಮಲೆಯಪ್ಪನು ಉತ್ಸವಮೂರ್ತಿಯಾಗಿ ಬಂದದ್ದು ಅದೇ ಸಮಯದಲ್ಲೇ. ಬೆಟ್ಟದ ಮೇಲೆ ತಮಿಳುಪ್ರಬಂಧ 'ತಿರುಮೋಳಿ'ಯ ಪಾರಾಯಣ ಮೊತ್ತಮೊದಲ ಬಾರಿಗೆ ನಡೆದದ್ದು 1360ರಲ್ಲಿ. ಈ ಮಾರ್ಪಾಟುಗಳೆಲ್ಲ ನಡೆದ ತರುಣದಲ್ಲಿ ಮುಲ್ಲೈ-ತಿರುವೇಂಕಟ-ಜೀಯರ್ ಅರಿಶಿಣಾಲಯಂ-ನಂದವನದ ಕರ್ತರಾಗಿದ್ದಾಗ ಪಾಂಚರಾತ್ರಸಂಪ್ರದಾಯದ ಸಂನ್ಯಾಸಿ ಕೋಯಿಲ್-ಕೆಳ್ವಿಯಾಗಿ ಗರ್ಭಗುಡಿಯಲ್ಲಿ ವೈಖಾನಸ-ಅರ್ಚಕರಿಗೆ ನೆರವಾಗುವ ವ್ಯವಸ್ಥೆ ಮೊದಲಾಯಿತು.

ಈ ಅವಧಿಯಲ್ಲಿ ವೈಖಾನಸ-ಅರ್ಚಕರ ಪ್ರಾಬಲ್ಯವೂ ತಗ್ಗಿತೆನ್ನಬಹುದು. ಸಾಮವೈ-ಶಾಸನದಿಂದ ತಿಳಿದುಬರುವುದು ಗುಡಿಯ ಆಡಳಿತವು 'ಬೆಟ್ಟದ ಮೇಲೆ ಮಾಠಾಪತ್ಯವನ್ನು ಮಾಡುವವರ' (**திருவேங்கடத்து மாஶபத்தியம் ஶேய்வார்**) ವಶದಲ್ಲಿದ್ದಿತೆಂದು. ಇವರು ಯಾರೆಂಬುದು ಸ್ಪಷ್ಟವಾಗುವುದಿಲ್ಲ. ಮುಂದೆ, ರಾಮಾನುಜರು ಗುಡಿಯ ಧಾರ್ಮಿಕವಿಧಿಗಳನ್ನು ನೋಡಿಕೊಳ್ಳಲು ವೈಖಾನಸ-ಅರ್ಚಕ, ತಮ್ಮ ಸೋದರಮಾವ ತಿರುಮಲೆ-ನಂಬಿ ಮತ್ತು ತಮ್ಮ ಶಿಷ್ಯ ಅನಂದಾಳ್ವಾನ್ ಇವರ ಒಂದು ಸಮಿತಿಯನ್ನು ಏರ್ಪಡಿಸಿದರೆಂದು ಪ್ರತೀತಿಯಿದೆ. ಇದು ದಿಟವಾದರೆ ಮೂವರಲ್ಲಿ ಇಬ್ಬರು ಪಾಂಚರಾತ್ರಪದ್ಧತಿಗೆ ಒಲಿದವರು. ಯಾದವರಾಯರ ಕಾಲವಾದ

ಮೇಲೆ, 1379ರ ಸುಮಾರಿಗೆ ಸ್ಥಾನತ್ತಾರರು ಗುಡಿಯ ಲೌಕಿಕ-ಅಧಿಕಾರಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಇವರ ಸಂಖ್ಯೆ ಹನ್ನೆರಡೆಂದು ತಿಳಿದುಬರುತ್ತದೆ. ಇವರಲ್ಲಿ ವೈಖಾನಸ-ಅರ್ಚಕ (ನಂಬಿಮಾರರು) ಒಬ್ಬರು, ತಿರುಪತಿಯ ಶ್ರೀವೈಷ್ಣವರು (ಪಾಂಚ ರಾತ್ರರು) ನಾಲ್ವರು, ತಿರುಚ್ಚಾನೂರುಸಭೆಯವರು ಮೂವರು, ಗುಡಿಯಲ್ಲಿ ಪರಿಚಾರಕ ರಾದ ಕೋಯಿಲ್-ಕೆಲ್ವಿ-ಜೀಯರರು (ಪಾಂಚರಾತ್ರರು) ಇಬ್ಬರು, ಲೆಕ್ಕ-ಪತ್ರಗಳ ಅಧಿಕಾರಿಗಳಾದ ಕೋಯಿಲ್-ಕಣಕ್ಕು (ತಿರುನಿನ್ರ-ಊರ್-ಉಡೈಯರ್) ಇಬ್ಬರು. ಕೋಯಿಲ್-ಕಣಕ್ಕುಗಳು ಶ್ರೀವೈಷ್ಣವ ಆಚಾರ್ಯಪುರುಷರ ಶಿಷ್ಯರೇ ಆಗಿದ್ದಂತೆ ಅವರ ದಾನಶಾಸನಗಳಿಂದ ತಿಳಿದು ಬರುತ್ತದೆ. ಎಂದರೆ ಸ್ಥಾನತ್ತಾರರ ಸಾಮಾನ್ಯ ಒಲವು ಯಾವ ಕಡೆಗಿದ್ದಿತೆನ್ನುವುದನ್ನು ಊಹಿಸಿಕೊಳ್ಳಬಹುದು.

ವೈಖಾನಸರಿಗೆ ಹಿತವಲ್ಲದ ಅನೇಕ ಆಚಾರಗಳು ಗುಡಿಯೊಳಗೆ ನುಸುಳಿಕೊಂಡು ಬಂದುವು. ಕ್ರಿಸ್ತಾಬ್ದ 1467ರ ವೇಳೆಗೆ ತಮಿಳುಪ್ರಬಂಧಗಳ ಪಾರಾಯಣವೇ ಮುಖ್ಯವಾದ ಅಧ್ಯಯನೋತ್ಸವವು ರಾಮಾನುಜರ ಸನ್ನಿಧಿಯಲ್ಲಿ ನಡೆಯತೊಡಗಿತು. ಕಂದಾಡೆ-ರಾಮಾನುಜ-ಅಯ್ಯನ ಕಾಲದಲ್ಲಿ ದೇವದಾಸಿಯರು ಗುಡಿಯೊಳಗೆ ಕಾಲಿಟ್ಟರು. ಉತ್ಸವಗಳು ಮಿತಿಮೀರಿ ಬೆಳೆದು ನಿತ್ಯಾರ್ಚನೆ ಹಿಂದೆ ಸರಿಯು ವಂತಾಯಿತು. ಪೂಜೆಯಲ್ಲೂ ಪರಿಸರದಲ್ಲೂ ಇದ್ದ ಸರಳತೆ ಮಾಯವಾಗಿ ವೈಭವ ಎದ್ದುಕೊಂಡಿತು. ಅರ್ಚನೆಗಿಂತ ನಿಮಂದನಗಳು (ತಿಂಡಿ-ತಿನಿಸುಗಳು) ಜೋರಾದುವು. ಈ ಬೆಳವಣಿಗೆಗಳನ್ನೆಲ್ಲ ಹಿಂದೆಯೇ ನಾವು ಗಮನಿಸಿದ್ದೇವೆ. ವೈಖಾನಸ-ಅರ್ಚಕರು ತೆಲುಗು ಮಾತನಾಡುವವರು, ಬಹುಮಟ್ಟಿಗೆ ಕರ್ನಾಟಕಸೀಮೆಯವರು. ಈಗಲೂ ಕೋಲಾರ-ಮುಳುಬಾಗಿಲ ಕಡೆಯವರೇ ಹೆಚ್ಚು. ಅವರು ಅನುಸರಿಸುವುದು ಚಾಂದ್ರಮಾನ-ಪಂಚಾಂಗವನ್ನು. ಶ್ರೀರಂಗದ ಪಾಂಚರಾತ್ರರು ತಮಿಳು ಮಾತನಾಡು ವವರು, ಸೌರಮಾನ-ಪಂಚಾಂಗವನ್ನು ಹಿಡಿದವರು. ಎರಡೂ ಗುಂಪಿನವರು ಶ್ರೀವೈಷ್ಣವ-ಚೌಕಟ್ಟಿನಲ್ಲೇ ಸೇರಿದವರಾದರೂ ಅವರ ನಡುವೆ ಹೊಂದಾಣಿಕೆ ಅಷ್ಟಷ್ಟೇ. ವೈಖಾನಸಸಂಪ್ರದಾಯದ ಗುರುಪರಂಪರೆ ವಿಷ್ಣು-ವಿಖನಸ-ಭೃಗುವೇ ಮೊದಲಾದ ಋಷಿಗಳನ್ನು ಹೆಸರಿಸುತ್ತದೆ; ಪಾಂಚರಾತ್ರರ ಶ್ರೀಸಂಪ್ರದಾಯದಲ್ಲಿರುವಂತೆ ವಿಷ್ಣು-ಲಕ್ಷ್ಮಿ-ವಿಷ್ವಕ್ಸೇನ-ಶಠಕೋಪ-ನಾಥಮುನಿ-ಯಾಮುನ-ರಾಮಾನುಜರನ್ನು ಇವರು ಗುರು ಪರಂಪರೆಯಲ್ಲಿ ಸೇರಿಸುವುದಿಲ್ಲ. ವೈಖಾನಸರಿಗೆ ಪಾಂಚರಾತ್ರರ ತಿರುಮಂತ್ರಶಾಲೆಯ ಕೆಲಸದಲ್ಲಿ ಆದರ ಕಡಮೆ.

ಏನೇ ಆದರೂ, ವೈಖಾನಸ-ಅರ್ಚಕರು ಉಳಿದುಕೊಂಡರು. ವೈಖಾನಸ-ಸಂಪ್ರದಾಯದ ಪೂಜೆ ಮುಂದುವರೆಯಿತು. ಕೆಲವು ಮಾರ್ಪಾಟುಗಳೇನೋ ನಡೆದುವೆನ್ನಿ. ಆದರೆ ಹಿಂದಿನಿಂದ ಬಂದ ಪದ್ಧತಿಯನ್ನು ತಿರುಮಲೆ-ನಂಬಿಯಾಗಲೀ ರಾಮಾನುಜರಾಗಲೀ ಶ್ರೀವೈಷ್ಣವಪಕ್ಷಪಾತಿಗಳಾಗಿದ್ದ ಅರಸರಾಗಲೀ ಅಧಿಕಾರಿಗಳಾಗಲೀ ಬದಲಾಯಿಸಲು ಯತ್ನಿಸಲಿಲ್ಲ. ವಾಸ್ತವವಾಗಿ, ಬೆಟ್ಟದ ಗುಡಿಯಲ್ಲಿ ವೈಖಾನಸ ಮತ್ತು ಪಾಂಚರಾತ್ರ—ಎರಡೂ ಪದ್ಧತಿಗಳ ವಿವರಗಳು ಹೆಚ್ಚು ಗೊಂದಲವಿಲ್ಲದೆ, ವಿರಸವಿಲ್ಲದೆ

ಸೇರಿಕೊಂಡು ಬಂದಿರುವುದು ಸ್ವಾರಸ್ಯ. ವೈಖಾನಸ-ಅರ್ಚನೆಯನ್ನು ಪಾಂಚರಾತ್ರರು ಉಳಿಸಿದರು; ಪಾಂಚರಾತ್ರರ ಹಲವು ಉತ್ಸವಾದಿ ಪದ್ಧತಿಗಳನ್ನು ವೈಖಾನಸರು ಅಳವಡಿಸಿಕೊಂಡರು.

ವೈಖಾನಸವೆಂಬ ಪಂಗಡ ತುಂಬ ಪ್ರಾಚೀನವಾದುದೆಂಬುದರಲ್ಲಿ ಸಂಶಯವಿಲ್ಲ. ಮರೀಚಿಮಹರ್ಷಿಯ 'ವಿಮಾನಾರ್ಚನಕಲ್ಪ'ವೆಂಬ ಗ್ರಂಥದಲ್ಲಿ (ಪಟಲ 96) 'ವೈಖಾನಸಂ ಮಹಾಶಾಸ್ತ್ರಂ ಸರ್ವವೇದೇಷೂದ್ಧೃತಂ ಸರ್ವವೇದಸಾರಭೂತಂ ಅಪ್ರತರ್ಕ್ಯಂ ಅನಿಂದಿತಂ ವೈದಿಕೈರುಪಸೇವಿತಂ ವಿಷ್ಣೋರಾರಾಧನಂ ಸರ್ವಭೂತ-ಹಿತಾರ್ಥಾಯ' ಎಂಬ ಒಕ್ಕಣೆಯನ್ನು ಕಾಣಬಹುದು. ನಮ್ಮ ನಾಡಿನ ವಿಷ್ಣುದೇವಾಲಯ ಗಳಿಗೆ ಮೂಲನೆಲೆ ವೈಖಾನಸವೇ ಎಂದರೆ ತಪ್ಪಲ್ಲ. ಮೇಲಾಗಿ, ವೈಖಾನಸವು ಶುದ್ಧವೈದಿಕ. ವೈಖಾನಸರ ಆರಾಧನಾಕ್ರಮದಲ್ಲಿ ವೇದಮಂತ್ರಗಳನ್ನೇ ಬಳಸುವುದು. ಉಳಿದ ಆಗಮಗಳಲ್ಲಿ ತಾಂತ್ರಿಕಪ್ರಕ್ರಿಯೆ ನುಸುಳಿಕೊಂಡು ಬರುತ್ತದೆ. ಈ ಆಗಮದಲ್ಲಿಯಾದರೋ ವೈದಿಕಚೌಕಟ್ಟಿನ ಹೋಮ ಮುಖ್ಯವಾಗುತ್ತದೆ. ಅಗ್ನಿಯಲ್ಲಿ ನಿತ್ಯಹೋಮ ಮಾಡಿದನಂತರವೇ ವಿಷ್ಣುವಿನ ಪೂಜೆ ಮಾಡಬೇಕೆಂಬ ವಿಧಿಯಿದೆ. ದೇವತೆಗಳಲ್ಲಿ ಕಡೆಯವನು (ಅವಮ) ಅಗ್ನಿ; ಮೊದಲಿನವನು (ಪರಮ) ವಿಷ್ಣು. ಇವರೆಡೂ ದೇವತೆಗಳನ್ನು ಪೂಜಿಸಿದರೆ ನಡುವೆ ಇರುವ ಎಲ್ಲ ದೇವತೆಗಳನ್ನೂ ಪೂಜಿಸಿದಂತಾಯಿತು, ಎನ್ನುವ ಬ್ರಾಹ್ಮಣವಾಕ್ಯ ಇವರಿಗೆ ಮಾನ್ಯ. ಇವರಿಗೆ ಕಲ್ಪ-ಸೂತ್ರವೂ ಪ್ರತ್ಯೇಕವಾಗಿಯೇ ಇದೆಯಾಗಿ ಗೃಹದಲ್ಲಿಯೂ ಶ್ರೌತ-ಸ್ಮಾರ್ತ-ಕರ್ಮ ಕಲಾಪಗಳುಂಟು. ಇವರಲ್ಲಿ ಸಂನ್ಯಾಸಾಶ್ರಮಕ್ಕೆ ಬೆಲೆಯಿರದು. ಹೋಮಕ್ಕಾಗಲಿ, ಪೂಜೆಗಾಗಲಿ ಗೃಹಸ್ಥರು, ಬ್ರಹ್ಮಚಾರಿಗಳು ಮಾತ್ರ ಅಧಿಕಾರಿಗಳು.

ಮತ್ತೆ ಇವರು ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಎಂಬ ಮತಪ್ರಕ್ರಿಯೆಗಳಿಗೆ ಅಂಟಿಕೊಂಡವರಲ್ಲ. ಸಾಧನಾಭಾಗದಲ್ಲಿ ಕರ್ಮವನ್ನು ಒಪ್ಪಿಕೊಂಡವರು, ಜ್ಞಾನದ ಹೆಗ್ಗಳಿಕೆಯನ್ನೂ ಸ್ವೀಕರಿಸಿದವರು, ಭಕ್ತಿಯ ಅಗತ್ಯವನ್ನೂ ಕಂಡುಕೊಂಡವರು. ಆದರೆ ಬರಿಯ ಭಕ್ತಿಯು ಮೋಕ್ಷಕ್ಕೆ ದಾರಿಯಾಗದು; ಭಕ್ತಿಯೊಂದಿಗೆ ಸಮೂರ್ತಾರ್ಚನೆಯೂ ಕೂಡಿಕೊಳ್ಳುವುದು ಉತ್ತಮ ಬ್ರಹ್ಮವಿದ್ಯೆ. ಭಕ್ತಿಯೆನ್ನುವ ಮಾತಿಗೂ ಉಪಾಸನೆಯೆನ್ನುವ ಮಾತಿಗೂ ಇರುವ ವ್ಯತ್ಯಾಸವನ್ನು ಇವರು ಗಮನಿಸಿ, ಉಪಾಸನೆ (ಅಥವಾ ಯಜನ)ಯ ದಾರಿ ಭಕ್ತಿಗಿಂತ ಉತ್ತಮವಾದುದೆಂದು ಹೇಳುತ್ತಾರೆ. ಅದೇ ಭಗವದಾರಾಧನೆ; ಭಕ್ತಿಸಹಕೃತವಾಗಿ ಮಾಡುವ ಪೂಜಾವಿಧಾನ.

ವಿಖನಸಮುನಿಯ ಕೃತಿಯಾದ ವೈಖಾನಸಕಲ್ಪಸೂತ್ರವೇ ಮುಖ್ಯವಾದುದರಿಂದ ಇವರಿಗೆ ಗೃಹಾರ್ಚನೆಯೇ ಪ್ರಧಾನವಾದದ್ದು. ಆದರೂ ಆಲಯಾರ್ಚನೆಯನ್ನು ಪರಾರ್ಥ ವಾಗಿ ಕೈಗೊಂಡು ಆಲಯನಿರ್ಮಾಣ, ಬಿಂಬನಿರ್ಮಾಣ, ಪ್ರತಿಷ್ಠೆ, ಅರ್ಚನೆ, ಉತ್ಸವ, ಪ್ರಾಯಶ್ಚಿತ್ತ ಮೊದಲಾದ ವಿವರಗಳನ್ನು ಕ್ರೋಡೀಕರಿಸಿದ ವೈಖಾನಸ-ಶಾಸ್ತ್ರಗ್ರಂಥಗಳಿವೆ (ಅತ್ರಿ, ಭೃಗು, ಮರೀಚಿ, ಕಾಶ್ಯಪ). ದೇವಾಲಯಸಂಸ್ಕೃತಿಯು ನಾಡಿನಲ್ಲಿ ಸ್ಪಷ್ಟಗೊಂಡು ದೃಢವಾದದ್ದು ವೈಖಾನಸರಿಂದಲೇ. ವೈದಿಕಸಂಸ್ಕೃತಿಯು ಮುಂದುವರೆದು ಉಳಿದು

ಕೊಂಡದ್ದು ದೇವಾಲಯಸಂಸ್ಕೃತಿಯಾಗಿಯೇ ಎನ್ನುವುದನ್ನು ಇವರು ಎತ್ತಿಹಿಡಿದು ತೋರಿಸಿದ್ದಾರೆ. ವೇದಕ್ಕೆ ವಿಲಕ್ಷಣವಾದ, ವಿರುದ್ಧವಾದ ತಾಂತ್ರಿಕಪ್ರಕ್ರಿಯೆಗಳನ್ನು ಇವರು ದೂರವಿರಿಸಿದ್ದಾರೆ. ವೇದಮಂತ್ರಗಳ ಪಾರಮ್ಯ ಮಾತ್ರವಲ್ಲದೆ, ವೇದದ ಉಪಾಸನಾಪ್ರಕಾರವನ್ನೂ ಇವರು ಉಳಿಸಿಕೊಂಡು ಬಂದರು.

'ವೃದ್ಧಹಾರೀತಸಂಹಿತೆ'ಯಲ್ಲಿ ಭಗವದಾರಾಧನೆಯು ಶ್ರೌತ, ಸ್ಮಾರ್ತ, ಆಗಮ ಎಂದು ಮೂರು ತೆರನಾಗಿದೆಯೆಂದು ಹೇಳಿದೆ. ಇಲ್ಲಿ ಶ್ರೌತವೆಂದರೆ ವೈಖಾನಸವೇ (ಶ್ರುತಿಯಿಂದ, ಎಂದರೆ ವೇದದಿಂದ ಸಿದ್ಧವಾದುದು). ಸ್ಮಾರ್ತವೆಂದರೆ ಪುರುಷಕರ್ತೃಕವಾದ ಗ್ರಂಥಗಳಿಗನುಸಾರವಾಗಿ ಮಾಡುವ ಪೂಜೆ. ಆಗಮದಲ್ಲಿ ಅಷ್ಟಾಕ್ಷರಮಂತ್ರ, ಪಂಚಾಕ್ಷರಮಂತ್ರ ಮೊದಲಾದ ತಾಂತ್ರಿಕಪರಿಕರಗಳನ್ನು ಬಳಸಿ ಪೂಜೆ ನಡೆಯುತ್ತದೆ. ಶ್ರೌತದಲ್ಲಿ ವೇದ, ಸ್ಮಾರ್ತದಲ್ಲಿ ಪುರಾಣ, ಆಗಮದಲ್ಲಿ ತಂತ್ರ—ಹೀಗೆ ಭೇದವನ್ನೂ ಹೇಳುವುದಿದೆ. ವೈಖಾನಸವು ಶ್ರೌತಪ್ರಕಾರಕ್ಕೆ ಸೇರಿದ್ದು.

ವೃತ್ತಿಯಿಂದ, ಹಣದಾಸೆಯಿಂದ ಆಲಯಾರ್ಚನೆಯನ್ನು ಕೈಗೊಂಡರೆ ಅವರು ದೇವಲಕರು; ಅವರು ಮಾಡುವ ಅರ್ಚನೆ ನಿರರ್ಥಕವಾದುದು. ವೈಖಾನಸರಿಗೆ ದೇವತಾರ್ಚನೆ, ವೇದಾಧ್ಯಯನದಂತೆ, ವೈದಿಕಕರ್ಮಗಳಂತೆ, ಹುಟ್ಟಿನಿಂದಲೇ ಸಿದ್ಧವಾದುದು. ಅವರ ಬದುಕೇ ಅರ್ಚನೆಗೆ ಮೀಸಲಾದುದು. ಅರ್ಚನಾಧಿಕಾರವು ಅವರಿಗೆ ಸ್ವಭಾವದಿಂದಲೇ ಒದಗಿಬರುವಂಥವು; ಹುಟ್ಟಿದ ಮೇಲೆ ಯಾವುದೋ ಸಂಸ್ಕಾರದಿಂದ, ದೀಕ್ಷೆಯಿಂದ ಪ್ರಾಪ್ತವಾಗುವುದಲ್ಲ. ಶ್ರೌತ ಎನ್ನುವ ಮಾತಿನ ಇಂಗಿತ ಇದು. ಅವರು ಕೈಗೊಳ್ಳುವ ಆಲಯಾರ್ಚನೆಗೆ ವೇದವೇ ಪ್ರಮಾಣ; ಗೃಹಾರ್ಚನೆಗೂ ಅದೇ ಪ್ರಮಾಣ. ಶ್ರೌತಾಗ್ನಿಯಂತೆಯೇ ಬೇರಪೂಜೆ. ಗೃಹಾರ್ಚನೆ ಮನೆಯನ್ನು ಬೆಳಗುವ ದೀಪದಂತೆ; ಆಲಯಾರ್ಚನೆ ಲೋಕವನ್ನೆಲ್ಲ ಬೆಳಗುವ ಸೂರ್ಯನಂತೆ.

ಪೂಜಾಪದ್ಧತಿ

ಬೆಟ್ಟದ ಗುಡಿಯಲ್ಲಿ ಮೊದಲಿಂದ ಮೂಲವರ ನಿತ್ಯಾರ್ಚನೆಗೆ ಹೆಚ್ಚು ಪ್ರಾಶಸ್ತ್ಯ. ಅಲ್ಲಿ ಕಾಲಕಾಲಕ್ಕೆ ಮೂಡಿಕೊಂಡ ಉತ್ಸವಗಳ, ಸಂಧಿಗಳ ಹೆಚ್ಚಳವನ್ನು ನೋಡಿದರೆ, ನಿತ್ಯಾರ್ಚನೆ ನಡೆಯುವುದಾದರೂ ಹೇಗೆ ಎಂದು ಸಂಶಯಪಡುವುದು ಸಹಜ. ಆದರೆ ಯಾವುದೇ ಉತ್ಸವವಾಗಲಿ ಮೂಲವರಿಗೆ ನಿತ್ಯಾರ್ಚನೆ ಕ್ರಮವರಿತು ನಡೆದಮೇಲೇ ಮೊದಲಾಗುವುದು; ಅದಕ್ಕೆ ಏನೂ ಲೋಪ ಬರುವುದಿಲ್ಲ, ಅದರಲ್ಲಿ ಯಾವ ವಿವರವನ್ನೂ ಕೈಬಿಡುವುದಿಲ್ಲ, ಮಂತ್ರವನ್ನಾಗಲೀ ತಂತ್ರವನ್ನಾಗಲೀ ಹಾರಿಸುವುದಿಲ್ಲ. ಹಲವು ದೇವಾಲಯಗಳಲ್ಲಿ ಉತ್ಸವವೇ ಮುಖ್ಯ, ಉತ್ಸವಸಂದರ್ಭದಲ್ಲಿ ನಿತ್ಯಾರ್ಚನೆ ಅಷ್ಟಿಷ್ಟು ಮೊಟಕಾದರೂ ಚಿಂತೆಯಿಲ್ಲ. ವರ್ಷಕ್ಕೊಮ್ಮೆ ಬ್ರಹ್ಮೋತ್ಸವದ ಅವಭೃಥ ಸ್ನಾನವಾದಮೇಲೆ ದ್ವಾದಶಾರಾಧನವೆಂಬ ವಿಧಿಯನ್ನು ಈ ಲೋಪಗಳಿಗೆ ಪ್ರಾಯಶ್ಚಿತ್ತ

ರೂಪವಾಗಿ ನಡೆಸಿಬಿಡುತ್ತಾರೆ, ಅಷ್ಟೆ. ಆದರೆ ಬೆಟ್ಟದ ಗುಡಿಯಲ್ಲಿ ಇಂಥ ದ್ವಾದಶಾರಾಧನೆ ಎಂದೂ ನಡೆದಿಲ್ಲ ; ನಡೆಯಬೇಕಾದ ಕಾರಣವೂ ಇಲ್ಲ.

ವೈಖಾನಸಸಂಪ್ರದಾಯದಲ್ಲಿ ನಿತ್ಯಾರ್ಚನೆ ದಿನಕ್ಕೊಮ್ಮೆ ನಡೆದರೆ ಸಾಕು. ಎರಡು ಬಾರಿಯೋ ಮೂರು ಬಾರಿಯೋ ಮಾಡಬಹುದು, ಸಾಧ್ಯವಿದ್ದರೆ ಆರು ಬಾರಿಯೂ ನಡೆಯಬಹುದು (ಷಟ್ಕಾಲಪೂಜೆ). ಪಾಂಚರಾತ್ರರ ಪ್ರಕಾರ, ಅನುಕೂಲವಿದ್ದರೆ ಹನ್ನೆರಡು ಬಾರಿ ಮಾಡಬೇಕು! ಮಾಡಲೇಬೇಕೆಂಬ ಹಟವೇನು ಅವರಿಗಿಲ್ಲ. ಆದರೆ ತ್ರಿಕಾಲಪೂಜೆ ಪ್ರಶಸ್ತವಾದುದೆಂದು ಎಲ್ಲ ಆಗಮಗಳೂ ಹೇಳುತ್ತವೆ. ಮುಂಜಾನೆ ಮಾಡುವ ಪ್ರಾತಃಕಾಲಪೂಜೆ ಜಪ-ಹೋಮ ಮೊದಲಾದ ಕ್ರಿಯೆಗಳು ಹೆಚ್ಚಲು ನೆರವಾಗುವುದೆಂದೂ, ನಡುಹಗಲಲ್ಲಿ ಮಾಡುವ ಮಧ್ಯಾಹ್ನಪೂಜೆ ರಾಜ-ರಾಷ್ಟ್ರಾಭಿವೃದ್ಧಿಗೆಂದೂ, ಸಂಜೆಯಂದು ಮಾಡುವ ಸಾಯಂಕಾಲಪೂಜೆ ಸಸ್ಯಾಭಿವೃದ್ಧಿಗೆಂದೂ ಗ್ರಂಥಗಳು ಹೇಳುತ್ತವೆ. ಈ ಮೂರರ ಜೊತೆಗೆ ಉಷಃಕಾಲಪೂಜೆ (ಪ್ರಜೆಗಳ, ಪಶುಗಳ ಅಭಿವೃದ್ಧಿಗೆ) , ಅಪರಾಹ್ಣಪೂಜೆ (ದೈತ್ಯರ ದಮನಕ್ಕೆ) , ನಿಶಿಪೂಜೆ (ಪ್ರಾಣಿವರ್ಗದ ಅಭಿವೃದ್ಧಿಗೆ) ಇವನ್ನೂ ಸೇರಿಸಿ ಷಟ್ಕಾಲಪೂಜೆಯೆಂದು ಕರೆಯುವ ವಾಡಿಕೆಯಿದೆ. ಆದರೆ ಹೆಚ್ಚಾಗಿ ಬಳಕೆಯಲ್ಲಿರುವುದು ತ್ರಿಕಾಲಪೂಜೆಯೇ. ಅಷ್ಟು ನಡೆದರೇ ದೇವರು ಸಂತೋಷಪಟ್ಟುಕೊಳ್ಳಬೇಕು!

ಮೊದಲಿಗೆ ಬೆಟ್ಟದ ಮೇಲೆ ದಿನಕ್ಕೆ ಒಂದೇ ಬಾರಿ ಪೂಜೆ ನಡೆಯುತ್ತಿದ್ದಿತಂತೆ. ಕೆಳಗಿನ ಊರಿನಿಂದ ಅರ್ಚಕನು ಬೆಟ್ಟವನ್ನೇರಿ ಹೋಗಿ, ಪೂಜೆ ಮುಗಿಸಿ ಮಧ್ಯಾಹ್ನ ಅಥವಾ ಸಂಜೆಯ ವೇಳೆಗೆ ಊರಿಗೆ ಹಿಂದಿರುಗುತ್ತಿದ್ದನಂತೆ. ದೇವರ ಹಿರಿಮೆ ಜನರಲ್ಲಿ ಹರಡಿ, ಅರಸರ ಆದರ ಈ ಕಡೆ ಹರಿದಾಗ ಬೆಟ್ಟದ ಮೇಲೇ ಅರ್ಚಕರೂ ಪರಿಚಾರಕರೂ ವಾಸಮಾಡತೊಡಗಿದರು. ಬೆಟ್ಟದ ಮೇಲಿದ್ದಾಗ ಅರ್ಚಕರು 'ಏಕಾಂಗಿ' ಯಾಗಿರಬೇಕೆಂಬ ನಿಯಮವಿದೆ; 'ಏಕಾಂಗಿ'ಯೆನ್ನುವುದು 'ಏಕಾಕಿ'ಯೆನ್ನುವುದರ ರೂಪಾಂತರ. ಸಂಸಾರವಿಲ್ಲದೆ, ಒಂಟಿಯಾಗಿದ್ದುಕೊಂಡು ಗುಡಿಯಲ್ಲಿ ಪೂಜೆ ನಡೆಸ ಬೇಕೆಂದು ಅರ್ಥ. ವೈಖಾನಸರೆಂದರೆ ವಾನಪ್ರಸ್ಥರೆಂದು ಹೇಳಿದೆವಲ್ಲ? ವಾನಪ್ರಸ್ಥರು ಸಂಸಾರಿಗಳು, ಸಂನ್ಯಾಸಿಗಳಲ್ಲ. ಆದರೆ ವಾನಪ್ರಸ್ಥರು ಕೆಲವೊಂದು ವೈದಿಕ-ಸಂದರ್ಭ ದಲ್ಲಿ 'ಅಪತ್ನೀಕ'ರಾಗಿರತಕ್ಕದ್ದು, ಎಂದರೆ ಹೆಂಡತಿಯಿಂದ ದೂರವಾಗಿರಬೇಕು. ಬೆಟ್ಟದ ಗುಡಿಯ ಅರ್ಚಕರು ಸಂಸಾರಿಗಳೇ. ಅವರ ಸಂಸಾರ ಕೆಳಗಿನ ಊರುಗಳಲ್ಲಿದ್ದು ಕೊಂಡು, ಅರ್ಚಕರು ಸರತಿಯಂತೆ ಬೆಟ್ಟದ ಮೇಲೆ ಒಂಟಿಯಾಗಿ ಕೆಲಕಾಲ ನಿಂತು ಪೂಜೆ ನಡೆಸಿ ಮತ್ತೆ ತಮ್ಮ ಸಂಸಾರವನ್ನು ಸೇರಿಕೊಳ್ಳುತ್ತಾರೆ.

ಧರ್ಮದರ್ಶನ

ಈಗ ಅಲ್ಲಿ ವಿಸ್ತಾರವಾಗಿ ನಡೆಯುವುದು ದಿನಕ್ಕೆ ಎರಡೇ ಪೂಜೆಗಳು. ಬೆಳಗ್ಗೆ ನಡೆಯುವ 'ತೋಮಾಲೆಸೇವೆ'ಯಲ್ಲಿ ಭಕ್ತರು ಹಣ ತೆತ್ತು ಪಾಲ್ಗೊಳ್ಳಬೇಕು; ಅದು

'ಆರ್ಜಿತ'ವೆನಿಸಿಕೊಳ್ಳುತ್ತದೆ. ಎರಡನೆಯ ಪೂಜೆ ಸಾಯಂಕಾಲದ್ದು. ಅದರಲ್ಲಿ ಅರ್ಚಕರು, ಪರಿಚಾರಕರು, ಆಚಾರ್ಯಪುರುಷರು ಮಾತ್ರ ಇರುತ್ತಾರೆ; ಇತರರು ಆಗ ನೆರೆಯುವ ಅವಕಾಶವಿರದು. ಈ ಗುಡಿಯಲ್ಲಿ ಪೂಜೆಗೆ 'ತಿರುವಾರಾಧನೆ'ಯೆಂದು ಹೆಸರು. ಇದಾದಮೇಲೆ ನೈವೇದ್ಯಸಮರ್ಪಣೆಯಾಗಿ, ಪೂಜೆಗೊಂಡ ದೇವರನ್ನು ಯಾತ್ರಿಕರೂ ಭಕ್ತರೂ ನೋಡಲು ಬಿಡುತ್ತಾರೆ. ಇದನ್ನು ಮೊದಲು 'ಧರ್ಮದರ್ಶನ' ವೆಂದು ಕರೆಯುತ್ತಿದ್ದರು, 'ಧರ್ಮ'ವೆಂದರೆ ಉಚಿತ; ಉಳಿದಂತೆ ದರ್ಶನವಾಗುವುದು ಹಣವನ್ನು ಕೊಟ್ಟು ಅಧಿಕಾರವನ್ನು ಪಡೆದುಕೊಂಡು (ಆರ್ಜಿತ). ಈಚೆಗೆ ಇದನ್ನು 'ಸರ್ವದರ್ಶನ'ವೆಂದು ಕರೆಯುತ್ತಾರೆ; ಎಲ್ಲರೂ ಹೋಗಿ ದೇವರನ್ನು ನೋಡಿಕೊಂಡು ಬರಬಹುದಾದ ಸಂದರ್ಭ ಎಂದು ಸೂಚನೆ. ಆದರೆ ಜನಸಂದಣಿಯಿಂದಾಗಿ ನಮಗೆ ಆಗುವುದು ದೇವರ ದರ್ಶನವಲ್ಲ, ನೆರದವರೆಲ್ಲರ ದರ್ಶನವೇ! 'ಸರ್ವದರ್ಶನ' ವೆನ್ನುವುದು ಸರಿಯೆ!

ದೇವರ ದರ್ಶನವು 'ಆರ್ಜಿತ'ವಾದ ಬಗೆಯನ್ನು ಹಿಂದೆಯೇ ವಿವರಿಸಿದ್ದೇವೆ. ಅರಸರು, ಶ್ರೀಮಂತರು ತಾವಾಗಿ ಬಯಸಿ, ತಮಗೆ ತೋರಿದಷ್ಟು ಹಣವನ್ನು ದೇವರಿಗೆಂದು ಕೊಟ್ಟು, ಸೇವೆ ಸಲ್ಲಿಸಿ ಹೋಗುತ್ತಿದ್ದುದು 'ಆರ್ಜಿತ'ವಲ್ಲ. ಇಂಥಿಂಥ ಸೇವೆಗೆ ಇಷ್ಟಿಷ್ಟು ಹಣ ಎಂದು ಮೊದಲೇ ನಿಗದಿಮಾಡಿ ಅದರಂತೆ ಹಣವನ್ನು ವಸೂಲುಮಾಡುವುದು 'ಆರ್ಜಿತ'. ಇಲ್ಲಿ ಭಕ್ತನ ಶಕ್ತಿಗೂ ಭಕ್ತಿಗೂ ಮತ್ತು ಸೇವೆಗೆಂದು ನಿರ್ಧಾರವಾದ ಮೊತ್ತಕ್ಕೂ ಸಂಬಂಧವಿಲ್ಲ. ಮೊದಲು 'ಆರ್ಜಿತ'ವಿದ್ದುದು ಉತ್ಸವ ಗಳನ್ನು ನಡೆಸುವುದಕ್ಕೆ. ಗುಡಿಯು ತಾನೇ ನಡೆಸುವ ಉತ್ಸವಗಳಲ್ಲದೆ, ಹೆಚ್ಚಾಗಿ ಬಿಡಿಯಾಗಿ ಬ್ರಹ್ಮೋತ್ಸವ, ಕಲ್ಯಾಣೋತ್ಸವ, ಗರುಡೋತ್ಸವ ಮೊದಲಾದ ಉತ್ಸವ ಗಳನ್ನು ಮಾಡಿಸಬೇಕೆಂದು ಭಕ್ತರು ಬಯಸಿದರೆ ಗುಡಿಯವರು ಅವರಿಂದ ಹಣವನ್ನು ಬಯಸುವುದು ಸರಿಯೇ. ಹೆಚ್ಚಿನ ಉತ್ಸವಗಳನ್ನು ನಡೆಸಬೇಕೆಂದರೆ ಗುಡಿಗೆ ಹೊರೆಯಲ್ಲವೆ? ಸೇವಾಕರ್ತರು ಅದನ್ನು ಹೊರಬೇಕಾದುದು ಸಹಜವೇ. ಆದರೆ ದೇವರನ್ನು ನೋಡುವುದೂ 'ಆರ್ಜಿತ'ವಾಗಬೇಕೆ? ಅದಕ್ಕೆ ಹಣ ತೆರಬೇಕೆ? ಹಣವಿಲ್ಲದವನಿಗೆ ದರ್ಶನವೇ ಇಲ್ಲವೆ? ಗುಡಿಯ ಆಡಳಿತದವರಿಗೆ ಈ ಸಮಸ್ಯೆ ತುಂಬ ಹಿಂದೆಯೇ ಕಾಣಿಸಿಕೊಂಡು, ಇದರ ಪರಿಹಾರಕ್ಕೆಂದೇ 'ಧರ್ಮದರ್ಶನ'ದ ವ್ಯವಸ್ಥೆಮಾಡಿದರು. ಪೂಜಾಪದ್ಧತಿಯಲ್ಲಿ ಇದನ್ನು ಸೇರಿಸಿ, ಒಂದೊಂದು ಪೂಜೆಯಾದ ಮೇಲೂ ಧರ್ಮದರ್ಶನಕ್ಕೆ ಅವಕಾಶವಿರಬೇಕೆಂದು ವಿಧಿಸಿದರು.

ಹದಿನೈದು

ನಿತ್ಯಾರ್ಚನೆ

ಪ್ರಾತಃಕಾಲಾರ್ಚನೆ

ದಿನದ ಮೊದಲ ಪೂಜೆ 'ವಿಶ್ವರೂಪಸೇವೆ'ಯೆನಿಸಿಕೊಳ್ಳುತ್ತದೆ. ಈ ಸೇವೆ ಯಾವಾಗ ಬಳಕೆಗೆ ಬಂದಿತೋ ತಿಳಿಯುವುದಿಲ್ಲ; ಶಾಸನಗಳಲ್ಲಂತೂ ಇದರ ಸೊಲ್ಲಿಲ್ಲ. ವಿಶ್ವರೂಪನೆಂದರೆ ಬ್ರಹ್ಮ. ರಾತ್ರಿ ಗುಡಿಯ ಬಾಗಿಲು ಮುಚ್ಚಿರುವಾಗ ಬ್ರಹ್ಮನು ಬಂದು ದೇವರ ಪೂಜೆ ಮಾಡಿಹೋಗುವನೆಂಬ ಪ್ರತೀತಿ ಇಲ್ಲಿದೆ. ಇದಕ್ಕಾಗಿಯೇ ರಾತ್ರಿ ಪೂಜೆಯೆಲ್ಲ ಮುಗಿದು ಬಾಗಿಲು ಮುಚ್ಚುವ ಮೊದಲು ಐದು ಬೆಳ್ಳಿಯ ದೊಡ್ಡ ಬಟ್ಟಲುಗಳಲ್ಲಿ ಶುದ್ಧವಾದ ನೀರನ್ನೂ, ಚಂದನದ ಒಂದು ಉಂಡೆಯನ್ನೂ, ಇತರ ಪೂಜಾದ್ರವ್ಯಗಳನ್ನೂ ದೇವರೆದುರು ಇರಿಸಿ ಹೋಗುತ್ತಾರೆ. 'ವಿಶ್ವರೂಪಸೇವೆ'ಯ ಅನಂತರ ನೆರೆದ ಭಕ್ತರಿಗೆ ಈ ನೀರನ್ನೇ ಬ್ರಹ್ಮತೀರ್ಥವೆಂದು ಕೊಡುವ ವಾಡಿಕೆಯಿದೆ. 'ವಿಶ್ವರೂಪಸೇವೆ'ಯಲ್ಲಿ ಅರ್ಚಕರು ಯಾವ ಪೂಜೆಯನ್ನೂ ಮಾಡುವುದಿಲ್ಲ.

ನಿತ್ಯದಿಟ್ಟ ವಿಧಿಸಿರುವಂತೆ, ಮುಂಜಾನೆ ಹರಿಯುವ ಮೊದಲೇ ದೀಪಾಲಿಯೆಂಬ ಪರಿಚಾರಕನು ಆಲಯಶುದ್ಧಿ ಮಾಡುವನು; ರಂಗೋಲಿಹಾಕುವ ಪರಿಚಾರಕೆ ತನ್ನ ಕೆಲಸವನ್ನು ಮಾಡುವಳು. ಮಹಾದ್ವಾರಕ್ಕೂ ಬಂಗಾರ-ಬಾಗಿಲಿಗೂ ಹೊಸ ಮಾವಿನೆಲೆಗಳಿಂದ ತೋರಣ ಕಟ್ಟುವರು. ನೌಬತ್‌ಖಾನೆಯಿಂದ ಮಂಗಳವಾದ್ಯ ನಡೆಯುವುದು.

ಸರತಿಯ ಅರ್ಚಕನು ನಸುಕಿನಲ್ಲೇ ಬ್ರಾಹ್ಮೀಮುಹೂರ್ತಕ್ಕೆ ಮೊದಲೇ, ಎದ್ದು, ನಿತ್ಯಕರ್ಮಗಳನ್ನೆಲ್ಲ ತೀರಿಸಿ, ಬಂಗಾರ-ಬಾಗಿಲಿನ ಬೀಗದಕೈಗೆ ಸಾಷ್ಟಾಂಗಪ್ರಣಾಮ ಮಾಡಿ, ಅದನ್ನು ತಲೆಯ ಮೇಲಿರಿಸಿಕೊಂಡು, ಮಂಗಳವಾದ್ಯಗಳೊಡನೆ ಗುಡಿಯ ಮಹಾಪ್ರದಕ್ಷಿಣೆಯನ್ನು ಮಾಡಿ ಗುಡಿಯನ್ನು ಹೊಕ್ಕು, ವಿಮಾನವನ್ನು ನಮಸ್ಕರಿಸಿ ವಿಮಾನಪ್ರದಕ್ಷಿಣೆ ಮಾಡಿ, ತಿರುಮಾಮಣಿಮಂಡಪವನ್ನು ಹೊಕ್ಕು, ದ್ವಾರಪಾಲಕರಿಗೆ ನಮಸ್ಕರಿಸಿ, ಬಂಗಾರ-ಬಾಗಿಲಿಗೆ ಸಾಷ್ಟಾಂಗಪ್ರಣಾಮ ಮಾಡಿ ಬಾಗಿಲನ್ನು ತೆರೆಯುತ್ತಾನೆ. ಬಂಗಾರ-ಬಾಗಿಲಿನ ಒಳಗಡೆಯೂ ಬೀಗಹಾಕುವ ವ್ಯವಸ್ಥೆಯಿದೆ. ಇದನ್ನು ಮಂತ್ರಪೂರ್ವಕವಾಗಿ ಅರ್ಚಕನು ಕುಂಚಕೋಲಿನಿಂದ ತೆಗೆದನಂತರ, ಅಧಿಕಾರಿಗಳು ಹಾಕಿದ ಹೊರಬೀಗಮುದ್ರೆಯನ್ನು ತೆಗೆಯುವರು. ಬಾಗಿಲನ್ನು ತೆರೆಯುವ ಕೆಲಸ

ಗೊಲ್ಲನದು; ಇದು ಪರಪಂರೆಯಿಂದ ಬಂದದ್ದು. ಅನಂತರ ಅರ್ಚಕ, ಜೀಯಂಗಾರು, ಏಕಾಂಗಿ, ಪರಿಚಾರಕ, ಗೊಲ್ಲ ಇವರು ಒಳಗೆ ಹೋದನಂತರ ಬಂಗಾರ-ಬಾಗಿಲನ್ನು ಮುಚ್ಚುತ್ತಾರೆ. ಹೊರಗಡೆ ತಿರುಮಾಮಣಿಮಂಡಪದಲ್ಲೇ ವೈದಿಕರು ನಿಂತು ಗುಂಪಾಗಿ ವೇಂಕಟೇಶ-ಸುಪ್ರಭಾತಸ್ತೋತ್ರಗಳನ್ನು ಹೇಳುತ್ತಿರುತ್ತಾರೆ. ಮೊದಲಿಗೆ ಸಾಮವೇದ ವಾಧ್ಯಾರರು ಈ ಸಮಯದಲ್ಲಿ ವೇದಪಾಠಮಾಡುವ ಪದ್ಧತಿಯಿದ್ದಿತು. ಪ್ರತಿವಾದಿ ಭಯಂಕರಂ-ಅಣ್ಣನ್ ಎಂಬುವರು ಹದಿನೈದನೆಯ ಶತಮಾನದಲ್ಲೇ ರಚಿಸಿದ್ದ ಸುಪ್ರಭಾತ, ಸ್ತೋತ್ರ, ಪ್ರಪತ್ತಿ, ಮಂಗಳಶಾಸನಗಳೆಂಬ ನಾಲ್ಕು ಭಾಗಗಳನ್ನೊಳಗೊಂಡ ಸುಪ್ರಭಾತವು ಮುಂದೆ ಬಳಕೆಗೆ ಬಂದಿತು.

ಒಳಗೆ ಜೀಯಂಗಾರೋ ಏಕಾಂಗಿಯೋ ಒಳಗಿರುವ ಅಖಂಡ-ದೀಪಗಳನ್ನು ಮತ್ತು ಇತರ ತುಪ್ಪದ ದೀಪಗಳನ್ನು ಗೊಲ್ಲನೋ ಪರಿಚಾರಕನೋ ಸರಿಪಡಿಸಿ, ಅಂಕಣವನ್ನು ಗುಡಿಸುತ್ತಿರುವಾಗ, ಅರ್ಚಕನು ರಾತ್ರಿ ಶಯನೋತ್ಸವದಲ್ಲಿ ಸ್ನಪನ ಮಂಡಪದಲ್ಲಿ ಮಲಗಿಸಿದ್ದ ಭೋಗಶ್ರೀನಿವಾಸನನ್ನು ಚಪ್ಪಾಳೆ ತಟ್ಟಿ, ಪ್ರಣವೋಚ್ಚಾರಣೆ ಮಾಡಿ ಮಂತ್ರಪೂರ್ವಕವಾಗಿ ಎಚ್ಚರಗೊಳಿಸಿ ಗರ್ಭಗುಡಿಗೊಯ್ದು ಮತ್ತೆ ಅದರ ಜೀವಸ್ಥಾನದಲ್ಲಿ (ಮೂಲವರ ಎದುರಿನಲ್ಲಿ) ಇರಿಸಿ, ಅದಕ್ಕೆ ಹಾಲು-ಮೊಸರುಗಳನ್ನು ಸಮರ್ಪಿಸಿ ಕರ್ಪೂರದಾರತಿ ಬೆಳಗುತ್ತಾನೆ. ಶಯನೋತ್ಸವಕ್ಕೆಂದು ಅಣಿಮಾಡಿದ್ದ ಉಯ್ಯಾಲೆ-ಮಂಚ, ಸುಪ್ಪತ್ತಿಗೆ ಮೊದಲಾದುವುಗಳನ್ನು ಸಭೆಯ ಪರಿಚಾರಕನು ತೆಗೆದು ಮಂಡಪವನ್ನು ತೆರವು ಮಾಡುವ ಹೊತ್ತಿಗೆ, ಹೊರಗಡೆ ಸುಪ್ರಭಾತ-ಪಠಣವೂ ಮುಗಿದಿರುತ್ತದೆ. ಸುಪ್ರಭಾತವನ್ನು ಹಾಡುವ ಉದ್ದೇಶವೇ ಅದು. ದೀಪಗಳನ್ನು ಬೆಳಗಿಸುವುದು, ಗರ್ಭಗುಡಿಯ ಆವರಣವನ್ನು ಗುಡಿಸಿ, ತೊಳೆದು ಶುದ್ಧಿಮಾಡುವುದು ಎಲ್ಲ ಮುಗಿದಮೇಲೆ, ಪರಿಚಾರಕರು ಗರ್ಭಗುಡಿಗೆ ತೆರೆಯನ್ನು ಹಾಕಿ, ಅರ್ಚಕರು ಒಳಗಡೆ ದೇವರಿಗೆ ಹಾಲು, ಬೆಣ್ಣೆ, ಪಂಚದಾರಗಳನ್ನು ನಿವೇದನೆ ಮಾಡಿ, ಕರ್ಪೂರ, ಲವಂಗ, ಏಲ, ಜಾಜಿ, ಅಡಿಕೆಗಳ ಸುಗಂಧಿ-ಚೂರ್ಣವನ್ನು ಮುಖವಾಸವಾಗಿ (ತಾಂಬೂಲವನ್ನು) ಸಮರ್ಪಿಸಿ, ನೀರಾಜನಮಾಡುತ್ತಾರೆ. ಅನಂತರ ಅರ್ಚಕರೇ ಮೊದಲಾಗಿ ಒಳಗಿರುವವರೆಲ್ಲ ತೀರ್ಥ-ಸ್ವೀಕಾರಮಾಡಿದಮೇಲೆ ದೇವರಿಗೆ ಕರ್ಪೂರ ಆರತಿ ನಡೆಯುತ್ತದೆ. ಹೊರಗೆ ನಿಂತು ಸುಪ್ರಭಾತಸ್ತೋತ್ರಗಳನ್ನು ಪಠಿಸಿದವರು ಒಳಗೆ ಬಂದು ದೇವರ ದರ್ಶನ ಮಾಡುತ್ತಾರೆ. ಆಗ ಬಂಗಾರಬಾಗಿಲನ್ನು ತೆಗೆದು, ನೆರೆದ ಭಕ್ತರನ್ನು ಒಳಗೆ ಬಿಡುತ್ತಾರೆ. ಇದೇ ಮೊದಲ ಧರ್ಮದರ್ಶನ.

ದಿನದ ಮೊದಲ ವಿಧಿಯಾಗಿ ಭೋಗಶ್ರೀನಿವಾಸನನ್ನು ಮುಖಮಂಡಪದಿಂದ ಗರ್ಭಗುಡಿಗೆ ಮರಳಿಸುವಾಗ ಆಗಮ ಹಲವು ಕಟ್ಟಳೆಗಳನ್ನು ವಿಧಿಸುತ್ತದೆ, ಅನೇಕ ಉಪಚಾರಗಳನ್ನು ಸೂಚಿಸುತ್ತದೆ. ಆದರೆ ಬೆಟ್ಟದ ಗುಡಿಯಲ್ಲಿ ಇದೊಂದೂ ನಡೆಯುವುದಿಲ್ಲ, ಎಂದಾದರೂ ನಡೆಯುತ್ತಿದ್ದಿತೆಂಬ ಕುರುಹೂ ಇಲ್ಲ. ತುಂಬ ಸರಳವಾಗಿಯೇ ಈ ಕೆಲಸ ನಡೆದುಹೋಗುತ್ತದೆ. ದಿಟವಾಗಿ ಪೂಜೆಯೆಂಬುದೇನೂ ನಡೆಯುವುದಿಲ್ಲ.

ಧರ್ಮದರ್ಶನವಾದ ಮೇಲೆ ಗುಡಿಯ ಒಳ-ಆಂಕಣಗಳನ್ನೆಲ್ಲ (ಗರ್ಭಗುಡಿ ಮತ್ತು ಶಯನಮಂಟಪ) ತೊಳೆದು ಶುದ್ಧಿಮಾಡಿ, ಮೂಲವರ ಮೇಲಿರುವ ಹಿಂದಿನ ದಿನದ ಹೂಮಾಲೆಗಳನ್ನು ತೆಗೆಯುತ್ತಾರೆ. ಇದು ನಿರ್ಮಾಲ್ಯಶೋಧನವೆಂಬ ವಿಧಿ. ಮೂಲಬೇರದ ಮೇಲಿನ ಹೂಮಾಲೆ ವೈಷ್ಣವಸೇನಾನಾಯಕನಾದ ವಿಷ್ವಕ್ಸೇನನಿಗೆ ಸಲ್ಲಬೇಕೆಂದು ಆಗಮದ ವಿಧಿ. ಆದರೆ ಬೆಟ್ಟದ ಗುಡಿಯಲ್ಲಿ ಹೂಮಾಲೆಗಳನ್ನೆಲ್ಲ ಸುತ್ತಿ ಗುಡಿಯ ಆವರಣದಲ್ಲೇ ಇರುವ ಬಾವಿಯಲ್ಲಿ ಹಾಕುತ್ತಾರೆ. ಈ ಹೂವನ್ನು ಭಕ್ತರಿಗೆ ಪ್ರಸಾದವೆಂದು ಕೊಡುವ ವಾಡಿಕೆಯಿಲ್ಲ. ಆ ವೇಳೆಗೆ ಆಕಾಶಗಂಗೆಯಿಂದ ಮೂರು ಕೊಡ ನೀರನ್ನು ಆಚಾರ್ಯ ಪುರುಷರು ತಂದಿರುತ್ತಾರೆ. ತಿರುಮಲೆ-ನಂಬಿಯ ಕಾಲದಿಂದಲೂ ಅವನ ಮನೆತನದವರೇ ಇಂದಿನವರೆಗೂ ಈ ಕೈಂಕರ್ಯವನ್ನು ನಿರ್ವಹಿಸುತ್ತಿರುವರು. ಮೂರು ಕೊಡಗಳಲ್ಲಿ ಒಂದನ್ನು ಮಾತ್ರ ಬೆಳಗಿನ ಪೂಜೆಗೆ ಬಳಸುವರು. ಉಳಿದ ಒಂದು ಕೊಡವನ್ನು ಸಂಜೆಯ ಪೂಜೆಗೆಂದು ಇರಿಸಿಕೊಳ್ಳುವರು. ಮೂರನೆಯ ಕೊಡದ ನೀರನ್ನೇ ಬ್ರಹ್ಮನ ಪೂಜೆಗೆಂದು ರಾತ್ರಿ ಐದು ಬಟ್ಟಲುಗಳಲ್ಲಿ ಇರಿಸಿ ಮರುದಿನ ಮುಂಜಾನೆ 'ವಿಶ್ವರೂಪಸೇವೆ'ಯ ಧರ್ಮದರ್ಶನದ ಸಮಯದಲ್ಲಿ ನೆರೆದವರಿಗೆ ತೀರ್ಥವೆಂದು ಕೊಡುವರು.

ತೋಮಾಲೆಸೇವೆ

ನಿರ್ಮಾಲ್ಯಶೋಧನವಾದ ಮೇಲೆ ನಡೆಯುವುದೇ ದಿನದಲ್ಲಿ ಮುಖ್ಯವಾದ ಪೂಜೆ; ಈ ಮಧ್ಯಾಹ್ನಪೂಜೆಗೆ 'ತೋಮಾಲೆಸೇವೆ'ಯೆಂದು ಹೆಸರು. 'ತೋಮಾಲೆ' ಎನ್ನುವ ಮಾತಿಗೆ ಸರಿಯಾದ ಅರ್ಥ ತಿಳಿಯದು. 'ತೋಡಿತ್ತ-ಮಾಲೆ' ಎನ್ನುವುದರ ಸಂಕ್ಷೇಪವಿದ್ದೀತೆಂದು ಊಹೆ; ಹೀಗೆಂದರೆ ಕಟ್ಟಿದ ಹೂದಂಡೆಗಳು. ದೇವರಿಗೆ ಬಗೆಬಗೆಯ ಹೂಮಾಲೆಗಳನ್ನು ಹಾಕಿ ಸಿಂಗರಿಸುವ ಪದ್ಧತಿ ತುಂಬ ಹಿಂದಿನದು; ಆಳ್ವಾರರ ಪಾಶುರಗಳಲ್ಲೇ ಅದರ ಉಲ್ಲೇಖವಿದೆ. ಇಲ್ಲಿನ ದೇವರಿಗೆ ತೊಡಿಸುವ ಹೂಮಾಲೆಗಳಲ್ಲಿ ಕತ್ತಿನ ಸುತ್ತಬರುವ ಕಂಠಮಾಲೆ, ಎದೆಯವರೆಗೆ ಇಳಿಬೀಳುವ ಹೃದಯಪರ್ಯಂತಮಾಲೆ, ಹೊಕ್ಕುಳವರೆಗೆ ಬರುವ ನಾಭಿಪರ್ಯಂತಮಾಲೆ, ಸೊಂಟವನ್ನು ಮುಟ್ಟುವ ಕಟಿಪರ್ಯಂತಮಾಲೆ, ಮಂಡಿಯವರೆಗೆ ಇಳಿಬೀಳುವ ಜಾನುಪರ್ಯಂತಮಾಲೆ ಮತ್ತು ತಿರುವಡಿಗಳನ್ನು ಸೋಕುವ ಪಾದಪರ್ಯಂತಮಾಲೆ ಇವೂ, ಸೊಂಟಕ್ಕೆ ಸಿಕ್ಕಿಸಿರುವ ಕಠಾರಿಗೂ, ಮೇಲಿನ ಕೈಗಳಲ್ಲಿ ಹಿಡಿದಿರುವ ಶಂಖ-ಚಕ್ರಗಳಿಗೂ, ತಲೆಯ ಮೇಲಣ ಕಿರೀಟಕ್ಕೂ ತೊಡಿಸುವ ಬೇರೆ ಬೇರೆ ಹೂಮಾಲೆಗಳಿರುತ್ತವೆ. ಭೋಗಶ್ರೀನಿವಾಸಮೂರ್ತಿಗೂ ಶ್ರೀದೇವಿ-ಭೂದೇವಿಯರಿಗೂ ಹೂಮಾಲೆಗಳನ್ನು ತೊಡಿಸುತ್ತಾರೆ. ಇವೆಲ್ಲವೂ ಯಮುನತ್ತುರೆಯೆಂಬ ಆವರಣದಲ್ಲಿ ಸಿದ್ಧವಾದ

ಮೇಲೆ, ಜೀಯಂಗಾರರು ಬಿದಿರುಪುಟ್ಟಿಯಲ್ಲಿ ಅವೆಲ್ಲವನ್ನೂ ತಲೆಯಮೇಲೆ ಹೊತ್ತು ಜಾಗಟೆವಾದನದೊಂದಿಗೆ ಪರಿಚಾರಕರೊಡನೆ ಮೆರವಣಿಗೆಯಲ್ಲಿ ಗರ್ಭಗುಡಿಗೆ ತಂದು, ಅರ್ಚಕರಿಗೆ ಒಪ್ಪಿಸಿರುತ್ತಾರೆ. ಈ ಮಾಲೆಗಳಲ್ಲಿ ಬಗೆಬಗೆಯ ಹೂಗಳಲ್ಲದೆ ದವನ, ಮರುವಕಗಳೂ ಸೇರಿರುತ್ತವೆ. ತುಳಸಿಯಂತೂ ಸರಿಯೇ ಸರಿ; ಇದ್ದೇ ಇರಬೇಕು. ಈ ತೋಮಾಲಸೇವೆಯು ಅಲಂಕಾರಾಸನದ ಮುಖ್ಯಭಾಗ. ಆದರೆ ಹೀಗೆ ಹೂಮಾಲೆಗಳನ್ನು ಹಾಕುವುದೇ ಪೂಜೆಯ ಮುಖ್ಯ ವಿವರವಿರಲಾರದು. ಆಚಾರ್ಯಪುರುಷರು ಆಕಾಶಗಂಗೆಯಿಂದ ತಲೆಯಮೇಲೆ ಹೊತ್ತು ತಂದ ನೀರನ್ನು ಮಂತ್ರಗಳಿಂದ ಸಂಸ್ಕರಿಸಿ ಪೂಜೆಗೆ ಅಣಿಮಾಡಿಕೊಂಡು, ವೈಖಾನಸಪದ್ಧತಿಯ 'ಆಸನ'ಪೂಜೆಗಳನ್ನು ನಡೆಸುತ್ತಾರೆ.

ಮೊದಲನೆಯ ಹಂತ ಮಂತ್ರಾಸನ. ದೇವರಿಗೆ ಅರ್ಘ್ಯ, ಪಾದ್ಯ, ಆಚಮನೀಯಗಳನ್ನು ಕೊಟ್ಟು ಪೂಜೆಗೆ ಸಿದ್ಧಮಾಡಿಕೊಳ್ಳುವ ಹಂತ ಇದು. ಅನಂತರ ಸ್ನಾನಾಸನ. ಮೂಲವರಿಗೆ ದಿನವೂ ಸ್ನಾನವಿಲ್ಲ; ಶುಕ್ರವಾರ ಮಾತ್ರ ತಿರುಮಂಜನ. ಮೂಲವರಿಗೆ ಬದಲಾಗಿ ಮಣವಾಳಪ್ಪೆರುಮಾಳಿಗೆ (ಭೋಗಶ್ರೀನಿವಾಸನಿಗೆ ಅಥವಾ ಕೌತುಕಬೇರಕ್ಕೆ) ದಿನವೂ ಅಭಿಷೇಕ ನಡೆಯುತ್ತದೆ. ಮೂಲವರ ಮುಂದಿರುವ ಈ ಬೆಳ್ಳಿಯ ಮೂರ್ತಿಯನ್ನು ಮೂಲವರೊಂದಿಗಿರುವ ಸಂಬಂಧಸೂತ್ರದಿಂದ ಸಡಿಲಿಸಿ, ಅದರ ಜೀವಸ್ಥಾನದಿಂದ ಮೇಲೆತ್ತಿ ಚತುಷ್ಕೋಣರೂಪದ ಬೆಳ್ಳಿಯ ಸ್ನಪನಪೀಠದ ಮೇಲೆ ಇರಿಸುತ್ತಾರೆ. ಪುರುಷಸೂಕ್ತದ ಮಂತ್ರಗಳನ್ನು ಪಠಿಸುತ್ತ ಮಾಡುವ ಈ ಅಭಿಷೇಕಕ್ಕೆ 'ಸಹಸ್ರಧಾರೆ'ಯನ್ನು ಬಳಸುತ್ತಾರೆ. ಮೊದಲು ಮೂರ್ತಿಯನ್ನು ಸುಗಂಧತೈಲದಿಂದ ತಿಕ್ಕಿ, ಅನಂತರ ಅರಿಶಿನ-ನೀರಿನಿಂದ ತೊಳೆದ ಮೇಲೆ ಹಸುವಿನ ಹಾಲು, ಚಂದನ, ಜೇನುತುಪ್ಪ ಮತ್ತು ಅರಿಶಿನದ ನೀರಿನಿಂದ ಕ್ರಮವಾಗಿ ಅಭಿಷೇಕವಾಗುತ್ತದೆ; ನಡುನಡುವೆ ಶುದ್ಧೋದಕಸ್ನಾನವಿರುತ್ತದೆ. ಆಮೇಲೆ ಮೂರ್ತಿಯನ್ನು ಬಟ್ಟೆಯಿಂದ (ಪ್ಲೋತ) ಒರೆಸಿ, ಹೂಗಳನ್ನು ಸಮರ್ಪಿಸಿ (ಪುಷ್ಪಾಂಜಲಿ), ಮತ್ತೆ ಮೂಲವರೆದುರು ಜೀವಸ್ಥಾನಕ್ಕೆ ಹಿಂದಿರುಗಿಸುತ್ತಾರೆ. ಮೂಲವರಿಗೆ ಪ್ರೋಕ್ಷಣಮಾಡಿ, ಅದರಿಂದ ಸಂಬಂಧಸೂತ್ರವನ್ನು ಬೆಳ್ಳಿಯ ಮೂರ್ತಿಗೆ ಮೊದಲಿನಂತೆ ತೊಡಿಸುತ್ತಾರೆ. ಅನಂತರ ಮೂಲವರ ಪಾದಗಳ ನಡುವೆ ಪುಷ್ಪನ್ಯಾಸ ನಡೆಯುತ್ತದೆ.

ಭೋಗಶ್ರೀನಿವಾಸನಿಗೆ ಅಭಿಷೇಕವಾಗುವ ಸಮಯದಲ್ಲೇ ಮೂಲವರ ತಿರುವಡಿಗಳ ಎಂದರೆ ಪಾದಗಳ ಮೇಲೆ ಇರುವ ಬಂಗಾರದ ಕವಚಗಳನ್ನೂ ತೆಗೆದು ಬೇರೆ ಪೀಠದ ಮೇಲಿರಿಸಿ ಅದಕ್ಕೂ ಅಭಿಷೇಕ ನಡೆಸುತ್ತಾರೆ. ಆಗಲೇ ಸೀತಾರಾಮ, ನರಸಿಂಹ, ಗೋಪಾಲ, ಮತ್ಸ್ಯ, ಕೂರ್ಮ ಮೊದಲಾದ ಹಲವು ಶಾಲಗ್ರಾಮಗಳಿಗೂ ಅಭಿಷೇಕ ನಡೆಯುತ್ತದೆ.

ಸ್ನಾನಾಸನದನಂತರ ಅಲಂಕಾರಾಸನ. ಮೂಲವರಿಗೂ ಭೋಗಶ್ರೀನಿವಾಸನಿಗೂ ಆಸನ, ವಸ್ತ್ರ, ಭೂಷಣ, ಉತ್ತರೀಯಗಳು ಸಮರ್ಪಿತವಾಗಿ, ಅಷ್ಟಾಕ್ಷರಮಂತ್ರವನ್ನು ಹೇಳಿಕೊಂಡು ಊರ್ಧ್ವಪುಂಡ್ರಧಾರಣೆಯಾಗುತ್ತದೆ. ಪಚ್ಚಕರ್ಪೂರವನ್ನು ಹಣೆಗೆ

(ಮೂಗನ್ನೂ ಕೆನ್ನೆಗಳನ್ನೂ ಮುಚ್ಚಿ) ಬಳಿದು, ನಡುವೆ ಕಸ್ತೂರಿತಿಲಕವನ್ನಿಡುತ್ತಾರೆ. ಜನಿವಾರವನ್ನೂ ತೊಡಿಸುತ್ತಾರೆ. ಆಮೇಲೆ 'ಮಂತ್ರಪುಷ್ಪ' ನಡೆಯುತ್ತದೆ. ಇದರಲ್ಲಿ ಬರುವ ವೈದಿಕಮಂತ್ರಗಳೂ ಶ್ಲೋಕಗಳೂ ಈ ಗುಡಿಗೇ ವಿಶಿಷ್ಟವಾದುವು; ಅವುಗಳ ಬಳಕೆ ಸಂಹಿತೆಗಳಿಂದ ಸಿದ್ಧವಾಗಿಲ್ಲ.

ಅಲಂಕಾರಾಸನಕ್ಕೆ ಸೇರಿದಂತೆ 'ಕೊಲುವು' (ಎಂದರೆ, ದರ್ಬಾರ್ ಅಥವಾ ಆಸ್ಥಾನ) ತಿರುಮಾಮಣಿಮಂಡಪದಲ್ಲಿ ನಡೆಯುತ್ತದೆ. ಗರ್ಭಗುಡಿಯಿಂದ ಬಲಿಬೇರನನ್ನು (ಕೊಲುವುಶ್ರೀನಿವಾಸನನ್ನು) ಹೊರಡಿಸಿಕೊಂಡು ಬಂದು ಬಂಗಾರ-ಬಾಗಿಲಿಂದ ಹೊರಗೆ ತಿರುಮಾಮಣಿಮಂಡಪಕ್ಕೆ ತಂದು ಅಲ್ಲಿ ಬೆಳ್ಳಿಯ ಸಿಂಹಾಸನದ ಮೇಲೆ ರಾಜಮರ್ಯಾದೆಯಿಂದ ಕುಳ್ಳಿರಿಸಿ ಲಘು ಆರ್ಚನೆಯನ್ನು ನಡೆಸುತ್ತಾರೆ. ಅರ್ಘ್ಯ, ಪಾದ್ಯ ಮತ್ತು ಆಚಮನೀಯಗಳಷ್ಟನ್ನು ಸಲ್ಲಿಸುತ್ತಾರೆ; ಎಳ್ಳುಪುಡಿ, ಒಣಶುಂಠಿ, ಬೆಲ್ಲಗಳನ್ನು ಕಲೆಸಿ ನೈವೇದ್ಯವಾಗಿ ಇಡುತ್ತಾರೆ. ಅನಂತರ ದಿನದ ಪಂಚಾಂಗವನ್ನು ಕೊಲುವುಬೇರದ ಮುಂದೆ ಓದಿ, ಹಿಂದಿನ ದಿನ ಹುಂಡಿಯಲ್ಲಿ ಬಂದ ಆದಾಯದ ವಿವರಗಳನ್ನು ಸಂಕ್ಷೇಪವಾಗಿ ಅರಿಕೆಮಾಡಿಕೊಳ್ಳುತ್ತಾರೆ. ಗುಡಿಯ ಆದಾಯ ನೆರೆದವರಿಗೆಲ್ಲ ತಿಳಿಯಲಿ ಎನ್ನುವ ಉದ್ದೇಶದಿಂದ ಈ ವಿಧಿಯೆಂದು ತೋರುತ್ತದೆ. ಈ ಸಂದರ್ಭದಲ್ಲಿ ಅರ್ಚಕನಿಗೆ ಮಾತ್ರಾದಾನ (ದಕ್ಷಿಣೆ, ತಾಂಬೂಲ, ತಿಲ, ಫಲಗಳಿಂದ ಕೂಡಿದ ಅಕ್ಕಿ) ನಡೆದು, ದಾನವನ್ನು ಕೊಂಡ ಅರ್ಚಕನಿಂದ ದೇವರಿಗೆ 'ನಿತ್ಯೈಶ್ವರ್ಯೋ ಭವ' ಎಂಬ ಮಂಗಳಾಶಾಸನವೂ ಆಗುತ್ತದೆ. ಅನಂತರ ದಿವ್ಯಪ್ರಬಂಧ, ಚತುರ್ವೇದ, ಕಲ್ಪಸೂತ್ರ, ಬ್ರಹ್ಮಸೂತ್ರಗಳ ಅವಧಾರಣೆ ನಡೆಯುತ್ತದೆ. ಕೊಲುವುಬೇರಕ್ಕೆ ಸಲ್ಲುವ ನಿವೇದನದಲ್ಲಿ ಗುಡಮಿಶ್ರತಿಲಚೂರ್ಣ (ಎಂದರೆ ಬೆಲ್ಲ ಸೇರಿದ ಎಳ್ಳುಪುಡಿ) ಒಪ್ಪಿಸಿ ಆರತಿಯಾಗುತ್ತದೆ.

ಕೊಲುವು ಮುಗಿದಮೇಲೆ ತುಳಸೀದಳಗಳಿಂದ 'ಶ್ರೀನಿವಾಸ-ಸಹಸ್ರನಾಮಾರ್ಚನೆ' ನಡೆಯುತ್ತದೆ. ಆಗ ಅರ್ಚಕರು ದೇವರ ತಿರುವಡಿಗಳ ಬಳಿ ಬಲಭಾಗದಲ್ಲಿ ಕೂರ್ಮಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತು, ಘಂಟಾನಾದಪೂರ್ವಕವಾಗಿ ಸಂಕಲ್ಪ ಮಾಡಿ, ಪೂರ್ವಾಂಗದ ಉಪಚಾರಗಳನ್ನು ಸಲ್ಲಿಸಿದನಂತರ 'ಓಂ ಶ್ರೀ ವೇಂಕಟೇಶಾಯ ನಮಃ' ಎಂದು ಪೂಜೆ ಆರಂಭಿಸುತ್ತಾರೆ. ಇಲ್ಲಿ ನಡೆಯುವ ಶ್ರೀನಿವಾಸ ಸಹಸ್ರನಾಮಾರ್ಚನೆಯ ಪಾಠ ಬ್ರಹ್ಮಾಂಡಪುರಾಣದಲ್ಲಿ ಬರುವುದು. ಒಂದೊಂದು ಹೆಸರಿನ ಮೊದಲಲ್ಲೂ ಕಡೆಯಲ್ಲೂ ಓಂಕಾರವಿರುತ್ತದೆ (ಪ್ರಣವಸಂಪುಟ). ಇದನ್ನು ಮಧುರವಾಗಿ, ಗಟ್ಟಿಯಾಗಿ ಹೇಳುವವನು ಭಾಗವತ. ಅರ್ಚಕರು ದೇವರ ತಿರುವಡಿಗಳ ಮೇಲೆ ಒಂದೊಂದು ಹೆಸರಿನ ಪಾಠವಾದಾಗ ತುಳಸೀದಳಗಳನ್ನು, ಹೂಗಳನ್ನು ಸಮರ್ಪಿಸುತ್ತಾರೆ. ಇದು ಮುಗಿದ ಮೇಲೆ, ಅದೇ ತುಳಸೀದಳ-ಹೂಗಳನ್ನೆತ್ತಿಕೊಂಡು ಅರ್ಚಕರು ಲಕ್ಷ್ಮಿಯನ್ನು 'ಓಂ ಶ್ರೀಂ ಶ್ರಿಯೈ ನಮಃ' ಎಂದು ಅರ್ಚನೆ ಮಾಡತೊಡಗುತ್ತಾರೆ. ವರಾಹಪುರಾಣಾಂತರ್ಗತವಾದ ಲಕ್ಷ್ಮೀನಾಮಮಾಲೆ ಇಲ್ಲಿ ಬಳಕೆಗೆ ಬರುತ್ತದೆ. ಇದಾದಮೇಲೆ ದೇವರಿಗೆ ನಕ್ಷತ್ರ-ಆರತಿ, ಕರ್ಪೂರ-ಆರತಿ ಜರುಗುತ್ತವೆ.

ಅನಂತರ ಗರ್ಭಗುಡಿಯ ನೆಲವನ್ನು ತೊಳೆದು (ಲಘುಶುದ್ಧಿ) 'ಭೋಜ್ಯಾಸನ' ಅಥವಾ ನೈವೇದ್ಯಕ್ಕೆ ಅಣಿಮಾಡುತ್ತಾರೆ. ಆಗ ನೆರೆದವರನ್ನೆಲ್ಲ ಹೊರಗೆ ಕಳುಹಿಸಿ, ಅರ್ಚಕರು ಮಾತ್ರ ಒಳಗಿದ್ದುಕೊಂಡು ಬಂಗಾರ-ಬಾಗಿಲನ್ನು ಮುಚ್ಚಿ ಹೊರಗಿನ ಎರಡು ದೊಡ್ಡ ಘಂಟೆಗಳನ್ನು ಮೊಳಗಿಸುತ್ತಾರೆ. ಭೋಜ್ಯಸಾಮಗ್ರಿಗಳನ್ನು ದೊಡ್ಡ ದೊಡ್ಡ ಗಂಗಾಳಗಳಲ್ಲಿ ತುಂಬಿ ಅದನ್ನು ಮುಖಮಂಡಪದಲ್ಲಿ ದೇವರಿಗೆ ಎದುರಾಗಿ ಇರಿಸುತ್ತಾರೆ. ಗರ್ಭಗುಡಿಯೊಳಗೆ ಇವು ಯಾವುವೂ ಹೋಗಲಾರವು. ಹೊರಗಿನಿಂದಲೇ ನೈವೇದ್ಯದ ವಿಧಿ ನಡೆಯಬೇಕು. ದೇವರಿಗೆ ಮಾಮೂಲಿನಂತೆ ಸಲ್ಲುವ ಮಾತ್ರಾ ಪ್ರಸಾದವಲ್ಲದೆ ವಿಶೇಷಪ್ರಸಾದಗಳೂ ಪ್ರಾರ್ಥನಾಪ್ರಸಾದಗಳೂ ಇರುತ್ತವೆ. ಇವೆಲ್ಲವನ್ನೂ ದೇವರಿಗೆ ಕಾಣುವಂತೆ (ದೃಷ್ಟಿಪ್ರಸಾರಸ್ಥಾನದಲ್ಲಿ) ಇರಿಸಿ ಒಯ್ಯುತ್ತಾರೆ. ನೈವೇದ್ಯದ ಸಮಯದಲ್ಲಿ ಮೊಳಗುವ ಘಂಟಾನಾದವೇ ಮೊದಲ ಘಂಟೆಯೆನಿಸಿಕೊಳ್ಳುತ್ತದೆ (ಪ್ರಾತರ್ನಿವೇದನ). ತಿರುಮಾಮಣಿಮಂಡಪದಲ್ಲಿರುವ ಎರಡು ದೊಡ್ಡ ಕಂಚಿನ ಘಂಟೆಗಳ ಮುಂದೆ ಕುಳಿತು, ಘಂಟೆಗಳ ಕಬ್ಬಿಣದ ನಾಲಗೆಗಳನ್ನು ಅಂಬಿಗೆ ತಾಕಿಸುತ್ತ ಪರಿಚಾರಕನು ಎರಡೂ ಕೈಗಳಿಂದ ಮಾಡುವ ಘಂಟಾನಾದವು ಒಳಗೆ ನೈವೇದ್ಯ ಮುಗಿಯುವವರೆಗೂ ನಡೆಯುತ್ತಿರುತ್ತದೆ. ಆಗ ಬಾಗಲು ಮುಚ್ಚಿದ್ದು, ಇತರರಿಗೆ ದರ್ಶನವಾಗದು. ನೈವೇದ್ಯವಾಗಿ ತಾಂಬೂಲ (ಮುಖವಾಸ), ಕರ್ಪೂರ-ಆರತಿ ಆದಮೇಲೇ ಬಾಗಲು ತೆರೆಯುವುದು. ಬೇಯಿಸಿದ ಭೋಜ್ಯಗಳನ್ನು ಸಮರ್ಪಿಸುವ ಮೊದಲು 'ಮಧುಪರ್ಕ'ವನ್ನು ನೀಡಬೇಕೆಂದು ಆಗಮ ವಿಧಿಸುತ್ತದೆ; ಆದರೆ ಬೆಟ್ಟದ ಗುಡಿಯಲ್ಲಿ ಈ ವಾಡಿಕೆಯಿಲ್ಲ. ನೈವೇದ್ಯವಾದಮೇಲೆ ಯಾಗಶಾಲೆಯಲ್ಲಿ ಹೋಮ ನಡೆಯುವ ವಿಧಿಯಿದೆ.

ಗರ್ಭಗುಡಿಯಲ್ಲಿ ಮೂಲವರಿಗೆ ನೈವೇದ್ಯಸಮರ್ಪಣೆಯಾದಮೇಲೆ ಆಲಯ, ಪರಿವಾರ, ದ್ವಾರದೇವತೆಗಳಿಗೂ ದ್ವಾರಪಾಲಕರಿಗೂ ಪ್ರಾಕಾರದೇವತೆಗಳಿಗೂ ಲೋಕಪಾಲಕರಿಗೂ ವಿಮಾನಪಾಲಕರಿಗೂ ಬಲಿಹರಣ ನಡೆಯಬೇಕೆಂದು ಆಗಮದ ಕಟ್ಟಳೆ. ಬಲಿಬೇರವನ್ನು ಮುಂದೆ ಮಾಡಿಕೊಂಡು ಮೆರವಣಿಗೆಯಲ್ಲಿ ವಾದ್ಯಸಮೇತರಾಗಿ ಅರ್ಚಕರು ಬೇರೆಬೇರೆ ಬಲಿಸ್ಥಾನಗಳಿಗೆ ಹೋಗಿ ಕ್ರಮವಾಗಿ ಬಲಿಯನ್ನೊಪ್ಪಿಸಬೇಕು. ಇದು 'ಯಾತ್ರಾಸನ'ದ ಕ್ರಮ. ಆದರೆ ಇಲ್ಲಿ ಸಾಮಾನ್ಯವಾಗಿ, ವಿಶೇಷ ಸಂದರ್ಭಗಳನ್ನು ಬಿಟ್ಟರೆ ಬಲಿಬೇರವು ಗರ್ಭಗುಡಿಯನ್ನು ಬಿಟ್ಟು ಹೊರಡುವುದಿಲ್ಲ, ಮೆರವಣಿಗೆಯೂ ನಡೆಯುವುದಿಲ್ಲ, ವಾದ್ಯಗಳೂ ಮೊಳಗುವುದಿಲ್ಲ. ಅರ್ಚಕನು ಪರಿಚಾರಕನೊಂದಿಗೆ ಹೊರಟು ವಿಮಾನಪ್ರದಕ್ಷಿಣೆಮಾಡಿ ವಿಷ್ವಕ್ಸೇನನಿಗೂ ಗರುಡನಿಗೂ ಅವರವರ ಸ್ಥಾನಗಳಲ್ಲಿ ಎಡೆಯಿಟ್ಟು ಧ್ವಜಸ್ತಂಭದ ಬಳಿ ಬಂದು, ಧ್ವಜಸ್ತಂಭಕ್ಕೂ ಬಲಿಪೀಠಕ್ಕೂ ನಡುವೆ ಇರುವ ಐದು ಬಲಿಕಲ್ಲುಗಳ ಮೇಲೆ ಒಟ್ಟಾಗಿ ಬಲಿಯನ್ನು ಪೇರಿಸಿಟ್ಟು ಹೊರಟುಹೋಗುತ್ತಾನೆ.

ಅರ್ಚಕನು ಬಲಿಹರಣಮಾಡಿ ಗರ್ಭಗುಡಿಗೆ ಹಿಂದಿರುಗಿದೊಡನೆ ಜೀಯ್ಯಂಗಾರರನ್ನು ಮುಂದೆಮಾಡಿಕೊಂಡು ಶ್ರೀವೈಷ್ಣವರು ನೆರೆದು ತಮಿಳುಪ್ರಬಂಧಗಳನ್ನು ಹಾಡಿ

'ಶಾತ್ತುಮುರೈ' ಎಂಬ ವಿಧಿಯನ್ನು ನಡೆಸುತ್ತಾರೆ. ಇದರಲ್ಲಿ ಪಾಲ್ಗೊಂಡವರಿಗೆ ಕ್ರಮವರಿತು ತೀರ್ಥ, ಶಠಾರಿ, ಚಂದನ, ಪ್ರಸಾದಗಳು ದೊರೆಯುತ್ತವೆ. ಇಲ್ಲಿಗೆ 'ತೋಮಾಲೆಸೇವೆ' ಮುಗಿದಂತೆ. ತರುವಾಯ 'ಧರ್ಮದರ್ಶನ'ವಿರುತ್ತದೆ.

ಮಾಧ್ಯಾಹ್ನಿಕಾರಾಧನೆ

ತೋಮಾಲೆಸೇವೆಯನಂತರ ಸರ್ವದರ್ಶನವು ಮುಗಿದಮೇಲೆ ಅಪರಾಹ್ಣಪೂಜೆ ನಡೆಯುತ್ತದೆ. ಇದು ಎರಡನೆಯ ಅರ್ಚನೆ, ಆದರೆ ಮಧ್ಯಾಹ್ನದ ಅರ್ಚನೆಯಂತೆ ವಿಸ್ತಾರವಾಗಿ ನಡೆಯುವುದಿಲ್ಲ. ವರಾಹಪುರಾಣಾಂತರ್ಗತವಾದ 'ಓಂ ವೇಂಕಟೇಶಾಯ ನಮಃ' ಎಂದು ಮೊದಲಾಗುವ 'ಶ್ರೀನಿವಾಸ-ಅಷ್ಟೋತ್ತರಶತನಾಮ'ಪೂಜೆ ನಡೆದಮೇಲೆ ನೈವೇದ್ಯವನ್ನು ಎರಡನೆಯ ಬಾರಿ ಸಲ್ಲಿಸುತ್ತಾರೆ. ಇದು ಎರಡನೆಯ ಘಂಟೆ (ಮಾಧ್ಯಾಹ್ನಿಕ-ನಿವೇದನ) ಎನಿಸಿಕೊಳ್ಳುತ್ತದೆ. ಮತ್ತೆ ನಕ್ಷತ್ರ-ಆರತಿ, ಕರ್ಪೂರ-ಆರತಿಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಉತ್ಸವಮೂರ್ತಿಯನ್ನು (ಮಲಯಪ್ಪಸ್ವಾಮಿ, ಉಭಯನಾಚ್ಚಿಯಾರರು) ಹೆಗಲಮೇಲೆ ಹೊತ್ತು ಪರಿಚಾರಕರು ವಾದ್ಯವೈಭವ ದೊಂದಿಗೆ ವಿಮಾನಪ್ರದಕ್ಷಿಣೆ ಮಾಡಿ ರಂಗಮಂಟಪಕ್ಕೆ ಬಿಜಯಮಾಡಿಸುತ್ತಾರೆ. ಭಕ್ತಾದಿಗಳು ಮಾಡಿಸುವ ಕಲ್ಯಾಣೋತ್ಸವ, ವಸಂತೋತ್ಸವ, ವಾಹನೋತ್ಸವ ಮೊದಲಾದ ಸೇವೆಗಳು ಈ ಮೂರ್ತಿಯ ಸನ್ನಿಧಿಯಲ್ಲೇ ಇಲ್ಲೇ ಜರುಗುತ್ತವೆ. ಸಂಜೆಯವರೆಗೂ ಈ ಮೂರ್ತಿ ಇಲ್ಲಿಯೇ ಬಿಡಾರ ಹೂಡುತ್ತದೆ.

ಸಂಜೆಯಂದು ನಡೆಯುವ 'ಸಾಯಂಕಾಲಪೂಜೆ' ಶುದ್ಧಿಯನಂತರ ಮೊದಲಿನ ತೋಮಾಲೆಸೇವೆಯಂತೆಯೇ ಜರುಗುತ್ತದೆ. ಆದರೆ ಅರ್ಚಕರಲ್ಲದೆ ಬೇರೆ ಯಾರಿಗೂ ಆಗ ಪ್ರವೇಶವಿಲ್ಲ. ಆಗಲೂ ನೈವೇದ್ಯಸಮರ್ಪಣೆಯಾಗಿ ಮಂತ್ರಪುಷ್ಪ, ನಕ್ಷತ್ರ-ಆರತಿ, ಕರ್ಪೂರ-ಆರತಿಗಳು ನಡೆದು, ಅಷ್ಟೋತ್ತರಶತನಾಮಾರ್ಚನೆಯೂ ಸೇರಿಕೊಳ್ಳುತ್ತದೆ. ಘಂಟಾನಾದವೂ ಉಂಟು.

ದಿನದ ಕಡೆಯ ಪೂಜೆ 'ಏಕಾಂತಸೇವೆ', ಆಗಮದ ಮಾತಿನಲ್ಲಿ 'ಪರ್ಯಂಕಾಸನ'. ಇದನ್ನು ಅರ್ಧಯಾಮಪೂಜೆಯೆಂದೂ ನಿಶಿಪೂಜೆಯೆಂದೂ ಶಯನಾಸನವೆಂದೂ ಕರೆಯುವುದಿದೆ. ಈ ಸೇವೆಗೆ ಗರ್ಭಗುಡಿಯ ಮುಖಮಂಟಪದಲ್ಲಿ ಬೆಳ್ಳಿಯ ಕಾಲುಗಳುಳ್ಳ ಬಂಗಾರದ ಮಂಚವನ್ನು ಹಾಸುಗೆ, ದಿಂಬು, ರೇಷ್ಮೆ-ಹೊದಿಕೆ ಮೊದಲಾದ ಪರಿಕರಗಳಿಂದ ಅಣಿಮಾಡಿ, ಹಲವು ಹಣ್ಣುಗಳು, ಸಕ್ಕರೆ, ಹಾಲು, ದ್ರಾಕ್ಷಿ-ಬಾದಾಮಿ ಮುಂತಾದುವನ್ನೂ ತಾಂಬೂಲವನ್ನೂ ಸಿದ್ಧಪಡಿಸಿರುತ್ತಾರೆ. ಅರ್ಚಕರು ಬಾಗಲು ಮುಚ್ಚಿ ಅಂಗೋಪಚಾರಗಳನ್ನು ಮಾಡಿ, ಭೋಗ್ಯದ್ರವ್ಯಗಳನ್ನು ಬೇರೆಬೇರೆಯಾಗಿ ಸಮರ್ಪಿಸುತ್ತಾರೆ. ಈ ಸಂದರ್ಭದಲ್ಲಿ ತಾಳ್ಳಪಾಕಂ-ಕವಿಗಳ ಕೃತಿಗಳನ್ನು ಹಾಡುವ ಪದ್ಧತಿಯಿದೆ. ಆ ದಿನದ ಅರ್ಚನೆಯಲ್ಲಿ ಒದಗಿರಬಹುದಾದ ಲೋಪದೋಷಗಳನ್ನು ಮನ್ನಿಸುವಂತೆ ಕ್ಷಮಾಮಂತ್ರವನ್ನೂ ಪಠಿಸುವ ಪದ್ಧತಿಯಿದೆ.

'ಭೋಗಶ್ರೀನಿವಾಸ'ಮೂರ್ತಿಯನ್ನು ಮುಖಮಂಡಪಕ್ಕೆ ತಂದು, ಅಲ್ಲಿ ಉಯ್ಯಾಲೆ-ಮಂಚದ ಮೇಲೆ ಮಲಗಿಸಿ ಬಿಸಿಹಾಲು, ಹಣ್ಣು, ಬಾದಾಮಿ ಮೊದಲಾದುವುಗಳನ್ನು ಸಮರ್ಪಿಸಿ, ಎದೆಯ ಪ್ರದೇಶದಲ್ಲಿ ಚಂದನದ ಒಂದು ಉಂಡೆಯನ್ನು ಇರಿಸುತ್ತಾರೆ. ಮೂಲವರ ಪಾದಕವಚಗಳನ್ನೂ ತೆಗೆದು ಎರಡೂ ಪಾದಗಳ ನಡುವೆ ಎರಡು ಪರಿಮಳಚಂದನದ ಉಂಡೆಗಳನ್ನಿರಿಸುತ್ತಾರೆ. ಮೂಲವರ ವಕ್ಷಃಸ್ಥಲದಲ್ಲಿ ಅಲರ್-ಮೇಲು-ಮಂಗೈತಾಯಾರಿಗೆಂದು ಪರಿಮಳಚಂದನದ ಸಣ್ಣದೊಂದು ಉಂಡೆಯನ್ನು ಇರಿಸುತ್ತಾರೆ. ಬ್ರಹ್ಮನ ಪೂಜೆಗೆಂದು ಇನ್ನೊಂದು ಸಣ್ಣ ಉಂಡೆ ಪರಿಮಳಚಂದನವನ್ನು ಇಡುತ್ತಾರೆ. ಬ್ರಹ್ಮನ ಪೂಜೆಗೆ ಮೊದಲೇ ಹೇಳಿದಂತೆ ನೀರನ್ನು ಸಿದ್ಧಪಡಿಸಿದಮೇಲೆ ಪೂಜಾವಿಧಿ ಮುಗಿಯಿತು.

ಹೀಗೆ ನಿತ್ಯಾರ್ಚನೆಯ ವಿಧಿಗಳೆಲ್ಲ ಮುಗಿದಮೇಲೆ ಒಳಗಣ ಮೂರನೆಯ ಬಾಗಲನ್ನು ಮುಚ್ಚಿ, ಬೀಗವನ್ನು ಹಾಕಿ, ಮಂತ್ರಪೂರ್ವಕವಾಗಿ ಕುಂಚಿಕೋಲ ಎಂಬ ಯಂತ್ರಿಕೆಯಿಂದ (ಬೀಗದ-ಕೈಯಿಂದ) ಬಂಗಾರದ ಬಾಗಲನ್ನು ಒಳಗಡೆಯಿಂದ ಬೀಗಹಾಕುತ್ತಾರೆ. ಅನಂತರ ಅಧಿಕಾರಿಗಳು ಹೊರಗಡೆಯಿಂದ ಬೀಗಮುದ್ರೆ ಮಾಡುತ್ತಾರೆ. ಅರ್ಚಕರು, ಅಧಿಕಾರಿಗಳು ಎಲ್ಲರೂ ವಿಮಾನವಂದನೆ ಮಾಡಿ ಮಹಾದ್ವಾರದಿಂದ ಹೊರಹೊರಡುತ್ತಾರೆ. ಇದು ಕವಾಟಬಂಧನವೆಂಬ ವಿಧಿ.

ಪೂಲಂಗಿ-ಸೇವೆ

ಗುರುವಾರದಂದು ಅಪರಾಹ್ಣಪೂಜೆಯಾದ ಮೇಲೆ ಮೂಲವರ ಮೈಮೇಲಿರುವ ಆಭರಣಗಳನ್ನೆಲ್ಲ ಕಳಚುತ್ತಾರೆ. ಮೂಲಮೂರ್ತಿಗೆ ಬರಿಯ ಪಂಚೆಯೊಂದನ್ನುಡಿಸಿ, ಸಾಧಾರಣ ಉತ್ತರೀಯವನ್ನು ಹೊದಿಸಿ, ಹಣೆಯ ಮೇಲಿರುವ ಪಚ್ಚಕರ್ಪೂರನಾಮದ ಹರವನ್ನು ಕಡಮೆಮಾಡಿ, ಮೂರ್ತಿಯ ಕಣ್ಣುಗಳನ್ನು ಕಾಣಿಸುತ್ತಾರೆ. ನೈವೇದ್ಯವನ್ನು ಸಮರ್ಪಿಸಿ ಬಾಗಿಲನ್ನು ಮುಚ್ಚುತ್ತಾರೆ. ಸಂಜೆಯಂದು ಅಂಕಣಗಳನ್ನು ಶುದ್ಧಿಮಾಡಿದ ಮೇಲೆ 'ಯಮುನೋತ್ತರೈ' ಎಂಬ ಕೋಣೆಯಿಂದ ಅಲ್ಲಿ ಈ ಕೆಲಸಕ್ಕೇ ನಿಯುಕ್ತರಾಗಿರುವ ನಾಲ್ಕು ಮನೆತನದವರು ಕಟ್ಟಿ ಸಿದ್ಧಮಾಡಿದ ಬಗೆಬಗೆಯ ಹೂದಂಡೆಗಳು ಜೀಯಂಗಾರ್ ಅಥವಾ ಏಕಾಂಗಿಯು ಮೆರವಣಿಗೆಯಲ್ಲಿ ಗರ್ಭಗುಡಿಗೆ ತರುತ್ತಾರೆ. ಹೀಗೆ ಮೂಲವರನ್ನು ಹೂದಂಡೆಗಳಿಂದ ಸಿಂಗರಿಸುವುದು ಹಿಂದಿನಿಂದ ಬಂದಿರುವ ಪದ್ಧತಿಯಂತೆ. 'ಪೂಲಂಗಿ' (ಹೂವಿನ ಅಂಗಿ) ಎನ್ನುವುದು ತೆಲುಗುಪದ, ಅದಕ್ಕೆ ಸರಿಯಾದ 'ಪೂವಾಡೈ' (ಹೂದಂಡೆ) ಎನ್ನುವುದು ಪ್ರಾಚೀನ ತಮಿಳುಗ್ರಂಥಗಳಲ್ಲಿ ಬೆಟ್ಟದ ದೇವರ ವೈಶಿಷ್ಟ್ಯವೆಂಬ ಸೂಚನೆಯಿದೆ.

ಮೂಲವರಿಗೆ ಆಭರಣಗಳು ಅಷ್ಟಾಗಿ ಇರದಿದ್ದ ಕಾಲದಲ್ಲಿ ದಿನವೂ ಹೀಗೆಯೇ ಹೂದಂಡೆಗಳಿಂದ ಸಿಂಗರಿಸುತ್ತಿದ್ದರೆಂದು ತೋರುತ್ತದೆ. ಬರುಬರುತ್ತ ಆಭರಣ, ಆಡಂಬರ, ವೈಭವಗಳು ಜಾಸ್ತಿಯಾಗಿ ನಿಸರ್ಗದ ಪರಿಕರಗಳು ಹಿಂದೆಬಿದ್ದುವು.

ಆಳ್ವಾರರು ಬಣ್ಣಿಸುವ ಸುವಾಸನೆಯ, ತಣ್ಣಗಿರುವ ತುಳಸಿಯ ಮಾಲೆಗಳನ್ನು ಈಗ ದೇವರ ಮೇಲೆ ಕಾಣಬಹುದೇ? ವಜ್ರ-ವೈಡೂರ್ಯ, ಮುತ್ತು-ರತ್ನಗಳ ಮೇಲಾಟದಲ್ಲಿ ವಾರಕ್ಕೊಮ್ಮೆ ಅಷ್ಟೆ ದೇವರಿಗೆ ಪೂಲಂಗಿಸೇವೆ! ಅದೂ ಹೂಮಾಲೆಗಳ ಅಂದಕ್ಕಾಗಿ ಇರಲಾರದು, ಹಿಂದಿನ ಪದ್ಧತಿಯೆಂದೂ ಇರಲಾರದು. ಮರುದಿನ ನಡೆಯುವ ತಿರುಮಂಜನಕ್ಕೆ ಸಿದ್ಧತೆಯಾಗಿ ಇದ್ದೀತು. ಶುಕ್ರವಾರ ಮುಂಜಾನೆ ಮೂಲವರಿಗೆ ಅಭಿಷೇಕ. ಆಗ ಆಭರಣಗಳನ್ನೂ ಅಲಂಕರಣಗಳನ್ನೂ ಪೀತಾಂಬರಗಳನ್ನೂ ತೆಗೆಯ ಬೇಕು. ದೇವರ ಮೈಮೇಲೆ ನೂರಾರು ಒಡವೆಗಳಿವೆ. ಅವೆಲ್ಲವನ್ನೂ ಬೆಳಗಿನ ವೇಳೆಗೆ ತೆಗೆಯುವುದಾಗದು. ಆದುದರಿಂದ ಹಿಂದಿನ ದಿನವೇ ತೆಗೆದುಬಿಟ್ಟರೆ, ಮರುದಿನ ಬೆಳಕು ಹರಿದೊಡನೆ ಮಜ್ಜನ ನಡೆಯಬಹುದು. ಹಾಗೆ ಪೂಲಂಗಿಸೇವೆ ಬಳಕೆಗೆ ಬಂದಿದ್ದೀತು. ಅದೇನು ಆಗಮದ ವಿಧಿಯಲ್ಲ. ಗುರುವಾರವೇ ಪೂಲಂಗಿಸೇವೆ ಎಂದು ಯಾವ ಹಳೆಯ ಶಾಸನದಲ್ಲಿಯೂ ಉಲ್ಲೇಖವಿರದು. ಆದರೆ ಶಿಲಪ್ಪದಿಕಾರದಲ್ಲಿ (ಕ್ರಿಸ್ತಾಬ್ದ ಎರಡನೆಯ ಶತಮಾನ) 'ಪುವಡೈಯಿಲ್ ಪೊಲಿಂದ ತೋನ್ರಿಯ' ಎಂದರೆ ಹೂದಂಡೆಗಳಿಂದ ಕಂಗೊಳಿಸುವ ಮೂರ್ತಿಯೆಂಬ ವರ್ಣನೆಯಿದೆ. ಗುರುವಾರದಂದು ಇತರ ಆಭರಣಗಳೊಂದಿಗೆ ದೇವರ ಕೊರಳಲ್ಲಿ ಪದಕವಾಗಿ ಇಳಿಬಿದ್ದಿರುವ ತಿರುಮಲ-ನಾಚ್ಚಿಯಾರರ ಬಿಂಬವನ್ನೂ ತೆಗೆದುಬಿಡುತ್ತಾರೆ. ಹಾಗೆ ತೆಗೆಯುವಾಗ 'ನಾಚ್ಚಿಯಾರ್-ತಿರುಮೋಳಿ'ಯನ್ನು ಹಾಡುವ ವಾಡಿಕೆಯಿದೆ. ಮತ್ತು ಪೂಲಂಗಿಸೇವೆಯಲ್ಲೇ ಕಠಾರಿಯನ್ನು ದೇವರ ಸೊಂಟಕ್ಕೆ ಓರೆಯಾಗಿ ಸಿಕ್ಕಿಸುತ್ತಾರೆ. ಇದು ತಿರುಪ್ಪಾವಡೆ ಅಲಂಕಾರವೆನಿಸಿಕೊಳ್ಳುತ್ತದೆ.

ಈ ದಿನ ನಡೆಯುವ ತಿರುಪ್ಪಾವಡ (ಅನ್ನಕೂಟೋತ್ಸವ) ಮುಖ್ಯವಿಧಿ. ಗುಡಿಯ ಅಡುಗೆಯವರು ಆರು ಮೂಟೆ (ಎಂದರೆ 450 ಕಿಲೋಗ್ರಾಂ) ಅಕ್ಕಿಯಿಂದ ತಯಾರಿಸಿದ ಅನ್ನಪ್ರಸಾದರೂಪವಾದ ಪುಲಿಹೋರವನ್ನು ಗಂಗಾಳಗಳಲ್ಲಿ ತಂದು ದೇವರಿಗೆ ತೋರಿಸಿ ತಿರುಮಾಮಣಿಮಂಟಪದಲ್ಲಿ ಪರ್ವತಾಕಾರವಾಗಿ ಇರಿಸುತ್ತಾರೆ. ಮೇಲೆ ಶಿಖರದಂತೆ ಇರುವುದರಿಂದ ಇದು 'ಅನ್ನಕೂಟ'ವೆನಿಸಿಕೊಳ್ಳುತ್ತದೆ. ನಾಲ್ಕು ದಿಕ್ಕುಗಳಲ್ಲೂ ಈ ಅನ್ನರಾಶಿಯನ್ನು ಸೊಗಸಾಗಿ ಅಣಿಮಾಡಿ, ಎಂಟೂ ದಿಕ್ಕುಗಳಲ್ಲಿ ಶಿಖರಗಳನ್ನು ನಿರ್ಮಿಸುತ್ತಾರೆ. ಜೊತೆಗೆ ಲಡ್ಡು, ವಡೆ, ಅಪ್ಪಂ, ದೋಸೆ, ಜಿಲೇಬಿ, ಪಾಯಸ ಪ್ರಸಾದಗಳೂ ದೇವರಿಗೆ ಕಾಣಿಸುವಂತೆ ಜೋಡಿಸಿರುತ್ತಾರೆ. ಘಂಟಾನಾದವಾಗುವಾಗ ಅರ್ಚಕರು ಪ್ರತಿಯೊಂದು ನಿವೇದನೆಯನ್ನೂ ಪ್ರತ್ಯೇಕವಾಗಿ ಸಮರ್ಪಿಸುತ್ತಾರೆ. ಇದು ಗುರುವಾರದಂದು ಮಾಧ್ಯಾಹ್ನಿಕನಿವೇದನ.

ಆ ದಿನ ಸಾಯಂಕಾಲ ಜೀಯಂಗಾರು, ಏಕಾಂಗಿ ಪರಿವಾರದೊಂದಿಗೆ ಯಮುನತ್ತುರೈಗೆ ಹೋಗಿ ಅಲ್ಲಿ ಸಿದ್ಧವಾಗಿರುವ ಹೂಮಾಲೆಗಳನ್ನು ಬಿದಿರುಬುಟ್ಟಿಯಲ್ಲಿ ತುಂಬಿ ಜೀಯಂಗಾರೂ ಏಕಾಂಗಿಯೂ ವಸ್ತ್ರವನ್ನು ಸುತ್ತಿಕೊಂಡ ತಲೆಯ ಮೇಲೆ ಹೊತ್ತು ಜಾಗಟೆ, ಮಂಗಳವಾದ್ಯಗಳೊಂದಿಗೆ ಧ್ವಜಪ್ರದಕ್ಷಿಣೆಯಾಗಿ ಬಂಗಾರಬಾಗಲಿಗೆ ತರುತ್ತಾರೆ. ಅಲ್ಲಿ ವಾದ್ಯಗಳೆಲ್ಲ ನಿಂತು, ಜೀಯಂಗಾರೂ ಏಕಾಂಗಿಯೂ ಹೂಮಾಲೆಗಳ

ಬುಟ್ಟಿಗಳನ್ನು ಒಳಗೆ ತಂದು, ಗರ್ಭಗುಡಿಯೆದುರು ನಿಂತು ಅರ್ಚಕರಿಗೆ ಒಪ್ಪಿಸುತ್ತಾರೆ.

ಅರ್ಚಕರು ಅಷ್ಟರಲ್ಲಿ ದೇವರ ಮೈಮೇಲೆ ಹೊದಿಸುವ ಬಟ್ಟೆಯನ್ನೂ ಕಿರೀಟವನ್ನು ಮುಚ್ಚುವ ಬಟ್ಟೆಯನ್ನೂ ತೊಡಿಸಿರುತ್ತಾರೆ. ಸಾಯಂಕಾಲಾರಾಧನೆಯಾದಮೇಲೆ ಅಲಂಕಾರಾಸನದಲ್ಲಿ ತೋಮಾಲಸೇವೆ ನಡೆಯುತ್ತದೆ. ಆಗ ಬಾಗಲು ಮುಚ್ಚಿ ಹೂಮಾಲೆಗಳಿಂದ ದೇವರನ್ನು ಅಲಂಕರಿಸುವ ಕೆಲಸ ಮೊದಲಾಗುತ್ತದೆ. ಬಗೆಬಗೆಯ ಚಿಲುವಾದ ಹೂಗಳಿಂದಲೇ ವಸ್ತ್ರ, ಉತ್ತರೀಯ, ಆಭರಣ, ಕಿರೀಟ, ಶಂಖ, ಚಕ್ರ, ಸೂರ್ಯಕಠಾರಿ ಎಲ್ಲವೂ ರೂಪಿತವಾಗುತ್ತವೆ. ಹೂಗಳಿಂದ, ಹೂದಂಡೆಗಳಿಂದಲೇ ಕಂಗೊಳಿಸುವುದರಿಂದ ಇದು ಪೂಲಂಗಿಸಮರ್ಪಣ ಅಥವಾ ಪೂಲಂಗಿಸೇವೆ ಎನಿಸಿ ಕೊಳ್ಳುತ್ತದೆ. ಈ ಸಂದರ್ಭದಲ್ಲಿ ದೇವರಿಗೆ ನಿವೇದನವಾಗಿ ಪುಲಿಹೋರ, ಪೊಂಗಲಿ, ದೋಸೆ, ಪಣ್ಯಾರ, ಇವಲ್ಲದೆ ಶೈತ್ಯೋಪಚಾರಕ್ಕಾಗಿ ವಡಪಪ್ಪು ಮತ್ತು ಪಾನಕ ನಿವೇದನೆಯಾಗುತ್ತವೆ.

ಶುಕ್ರವಾರ-ತಿರುಮಂಜನ

ಬೆಟ್ಟದ ದೇವರಿಗೆ ನಡೆಯುವ ಪೂಜಾವಿಧಿಗಳಲ್ಲೆಲ್ಲ ತುಂಬ ಮುಖ್ಯವಾದುದು, ಸೊಗಸಾದುದು, ಸ್ವಾರಸ್ಯವಾದುದು ಶುಕ್ರವಾರ ನಡೆಯುವ ಅಭಿಷೇಕ. ಇದಕ್ಕೆ 'ತಿರುಮಂಜನ'ವೆಂದು ಹೆಸರು; ಎಂದರೆ ಮಜ್ಜನ, ಸ್ನಪನ. ಮೂಲಮೂರ್ತಿಗೆ ದಿನವೂ ಅಭಿಷೇಕವಿಲ್ಲ. ಯಾವ ಕಾಲದಲ್ಲೂ ನಡೆಯುತ್ತಿದ್ದಂತೆ ತೋರುವುದಿಲ್ಲ. ಎರಡು ವಾರಗಳಿಗೊಮ್ಮೆ ನಡೆಯುತ್ತಿದ್ದಿತೆನ್ನುವ ಸೂಚನೆಯಿದೆ. ವಿಜಯನಗರದ ಅರಸ ಕೃಷ್ಣದೇವರಾಯ-ಮಹಾರಾಯನ ಕಾಲದಲ್ಲಿ ಇದು ವಾರಕ್ಕೊಮ್ಮೆ ನಡೆಯುವುದೆಂದು ಗೊತ್ತಾಯಿತು. ಕ್ರಿಸ್ತಾಬ್ದ 1517ರ ಜನವರಿ ಎರಡನೆಯ ದಿನ (ಶುಕ್ರವಾರ) ಕೃಷ್ಣದೇವರಾಯನು ಬೆಟ್ಟದ ಮೇಲೆ ಬಂದು "ತಿರುವೇಂಗಳನಾಥುನಿ ದರ್ಶಿಂಚಿ ....ದೇವುನಿಕಿ ಯೆನಿಮಿದಿ ದಿನಾಲವರಿಶ ಪುಳುಕಾಪುಕು", ಎಂದರೆ ವೇಂಗಡದೊಡೆಯನಿಗೆ ಎಂಟುದಿನಕ್ಕೊಮ್ಮೆ 'ಪುಳುಕಾಪು' (ಪುನುಗಿನ ಎಣ್ಣೆಯನ್ನು ಬಳಿದು ಸ್ನಾನ) ನಡೆಯುವ ಸಲುವಾಗಿ ಗೊಡಗರನಾಡಿನ ಒಂದುಸಾವಿರ ವರಹ ಸುಂಕವನ್ನು ಸಮರ್ಪಿಸಿ, ಈ ಸೇವೆ ಆಚಂದ್ರಾರ್ಕಸ್ಥಾಯಿಯಾಗಿ ನಡೆಯಬೇಕೆಂದು ಧರ್ಮಶಾಸನವನ್ನು ಬರೆಸಿದ್ದಾನೆ.

ಸಾಮವೈ ಮಣವಾಳಪ್ಪೆರುಮಾಳನನ್ನು (ಎಂದರೆ, ಭೋಗಶ್ರೀನಿವಾಸನನ್ನು) ಸ್ನಪನಬೇರವಾಗಿ ಪ್ರತಿಷ್ಠೆಮಾಡಿ ಅದಕ್ಕೆ ಮೊದಲ ಅಭಿಷೇಕವನ್ನು ನಡೆಸಿದುದೂ ಶುಕ್ರವಾರವೇ. ಅಂದೇ ಮೂಲವರಿಗೆ ಅಭಿಷೇಕ ನಡೆದಿರಬೇಕು. ರಾಮಾನುಜರು ದೇವರ ವಕ್ಷಃಸ್ಥಲದಲ್ಲಿ ದ್ವಿಭುಜೆಯಾದ ವ್ಯೂಹಲಕ್ಷ್ಮಿಯನ್ನು (ಅಲರ್-ಮೇಲ್-ಮಂಗೈ-ನಾಚ್ಚಿಯಾರನ್ನು) ಮೂಡಿಸಿದುದೂ ಶುಕ್ರವಾರದಂದೇ (ಉತ್ತರಾಫಾಲ್ಗುಣೇರತ್ನ ಮಂಜರಿಕಾಯೋಗವಿದ್ದ ಶುಕ್ಲದ್ವಾದಶೀ). ಅಂದೂ ದೇವರಿಗೆ ಅಭಿಷೇಕವಾಗಿರಬೇಕು.


ಮೇಲಾಗಿ, ವೈಖಾನಸಾಗಮದ ಆನಂದಸಂಹಿತೆಯಲ್ಲಿ ಶುಕ್ರವಾರದಂದು ದೇವರೊಂದಿಗೆ ಲಕ್ಷ್ಮಿಗೆ ಅಭಿಷೇಕ ಶ್ರೇಷ್ಠವಾದುದೆಂದು ಹೇಳಿದೆ—

ಸಹ ಲಕ್ಷ್ಮ್ಯಾಭಿಷೇಕಸ್ತು ವಾಸರೇ ಭಾರ್ಗವೇ ಹರೇಃ।
ಸಾನ್ನಿಧ್ಯಕಾರೀ ಸತತಂ ಸರ್ವಸಂಪತ್ಪ್ರದಾಯಕಃ॥

ಹೀಗಾಗಿ ಇಲ್ಲಿನ ದೇವರ ತಿರುಮಂಜನಕ್ಕೆ ಶುಕ್ರವಾರವೇ ಒದಗಿಬಂದಿದೆ.

ಈ ತಿರುಮಂಜನದಲ್ಲಿ ಕೆಲವು ಸ್ವಾರಸ್ಯಗಳಿವೆ. ಅವುಗಳಲ್ಲಿ ಒಂದು ಪುನುಗು ತೈಲವನ್ನು ಮೂರ್ತಿಯ ಮೈಗೆಲ್ಲ ಬಳಿದು ತಿಕ್ಕುವುದು. ಇದಕ್ಕೆ 'ಪುಳುಗುಕ್ಕಾಪ್ಪು' ಎಂದು ಹೆಸರು. ಪುನುಗಿನ ಬೆಕ್ಕನ್ನು ಕೊಂದು ಅದರ ಮೈಯೊಳಗಿಂದ ತೆಗೆದುಕೊಳ್ಳುವ ಎಣ್ಣೆ ಅಥವಾ ಕೊಬ್ಬು 'ಪುನುಗುತೈಲ'. ಇದನ್ನು ದೇವರ ಮೈಗೆ ಸೋಂಕಿಸಬಹುದೆ? ಈ ಪದ್ಧತಿ ಮೊದಲಾದುದು ಯಾವಾಗ? ಹೇಗೆ? ಏತಕ್ಕಾಗಿ? ಈ ಪ್ರಶ್ನೆಗಳಿಗೆ ಉತ್ತರ ಸಿಗುವುದಿಲ್ಲ. ಪುನುಗು ಎನ್ನುವುದು ಬೇರೆ. ಈ ಬೆಕ್ಕಿನಿಂದಲೇ ಪಡೆದುಕೊಳ್ಳುವುದಾದರೂ ಬೆಕ್ಕಿಗೆ ಘಾಸಿಮಾಡದೆ ಸಂಗ್ರಹಿಸುವ ಸುಗಂಧದ್ರವ್ಯ, 'ಪುನುಗು-ಜವ್ವಾಜಿ'. ಸಾಮಾನ್ಯವಾಗಿ ಪೂಜಾದ್ರವ್ಯಗಳಲ್ಲಿ ಸೇರುತ್ತದೆ ಇದು. ಪುನುಗು-ಎಣ್ಣೆ ಬೇರೆ. ಅದರ ಬಳಕೆ ಬೇರೆಲ್ಲಿಯೂ ಕಾಣಸಿಗುವುದಿಲ್ಲ.

ದೇವರ ಪೂಜೆಗೆ 'ಎರಡು ಹಿರಿಯ ಪುಣುಗಿನ' ಸಮರ್ಪಣೆ ಮಾಡಿದ ಉಲ್ಲೇಖ ವಿಜಯನಗರದ ಅರಸ ದೇವರಾಯ-ಮಹಾರಾಯನ ಶಾಸನವೊಂದರಲ್ಲಿ ಬರುತ್ತದೆ. ಬಂಗಾರದ ಬಾಗಲ ಮೇಲೆ ಮೂಡಿಕೊಂಡಿರುವ ಈ ಶಾಸನದ ಕಾಲ ಕ್ರಿಸ್ತಾಬ್ದ 1429ರ ಡಿಸೆಂಬರ್ ಐದನೆಯ ದಿನ. ಈ ಶಾಸನದಲ್ಲಿ ಸುಗಂಧದ್ರವ್ಯವೆಂದು ಸ್ಪಷ್ಟವಾಗಿರುವುದರಿಂದ ಪುನುಗು ಅಷ್ಟೆ; ಹರಿವಾಣದಲ್ಲಿಟ್ಟು ಒಪ್ಪಿಸಿದ್ದು. ಆದರೆ ಅಲ್ಲಿಯೇ ಮೂಡಿಕೊಂಡಿರುವ ಇನ್ನೊಂದು ಶಾಸನ 1434ರದ್ದು, ಸುಮಾರು ನಾಲ್ಕು ವರ್ಷಗಳ ನಂತರ ಸಿದ್ಧವಾದುದು. ಇದರಲ್ಲಿ ತಿರುಪತಿಯ ಶ್ರೀವೈಷ್ಣವರಲ್ಲೊಬ್ಬನಾದ ಮುದಲಿಯಾರ್-ತಿರುಕ್ಕುಲಿಕನ್ರದಾಸರ್-ಅಳಗಪ್ಪಿರಾನಾರ್ ಎಂಬುವನು ದಕ್ಷಿಣಾಯನದ ಆರು ತಿಂಗಳುಗಳು ದಿನವೂ (**ಆಡಿಮಾಸ ಮುದಲ್ ಮಾರ್ಗಳಿವರೈಕ್ಕು ನಾಳ್ ಒನ್ರುಕ್ಕು**) ಮೂಲಮೂರ್ತಿಯ ಮುಖಕ್ಕೆ ಮಾತ್ರ ಪುನುಗುತೈಲವನ್ನು ತಿಕ್ಕುವ ವ್ಯವಸ್ಥೆ ಮಾಡಿದುದು ಕಾಣುತ್ತದೆ. ಮೈಗೆಲ್ಲ ತಿಕ್ಕುವ ಪರಿಪಾಟಿ ಆಗಿನ್ನೂ ಒದಗಿರಲಿಲ್ಲ; ಮುಖವೆಂದೇ ಕಾಣಿಸಿದ್ದಾರೆ (**ತಿರುಮುಖಮಂಡಲತ್ತುಕ್ಕು ಮೆದಿತ್ತ ಪುಳುಗುಕ್ಕಾಪ್ಪು**). ಮುಖಕ್ಕೆ ಪುನುಗು-ಎಣ್ಣೆಯನ್ನು ದಿನವೂ ತಿಕ್ಕುವ ಪದ್ಧತಿ ಯಾವಾಗ ನಿಂತಿತೋ ತಿಳಿಯುವುದಿಲ್ಲ ; ಈಗಂತೂ ಇಲ್ಲ. ಈಗ ದಿನದ ಪೂಜೆಯೆಲ್ಲ ಮುಗಿದು ಗುಡಿಯ ಬಾಗಿಲನ್ನು ಮುಚ್ಚುವ ಮೊದಲು, ಮೂಲಮೂರ್ತಿಯ ಪಾದಕವಚಗಳನ್ನು ತೆಗೆದಿಟ್ಟು, ಪಾದಗಳಿಗೆ ಪುನುಗು-ಎಣ್ಣೆಯನ್ನು ತಿಕ್ಕಿ, ಪಾದಗಳನ್ನು ದಿನವೂ ಹೊಸದೊಂದು ಬಟ್ಟೆಯಿಂದ ಮುಚ್ಚಿ, ಪಾದಗಳ ನಡುವೆ ಚಂದನದ ಎರಡು ಉಂಡೆಗಳನ್ನಿರಿಸುವ ವಾಡಿಕೆಯಿದೆ.



ದ್ವಾರಪಾಲಕ

ದೇವರ ಮುಖಕ್ಕೆ ಪುನುಗು-ಎಣ್ಣೆಯನ್ನು ಬಳಿಯುವ ಪದ್ಧತಿಯನ್ನು ಹೀಗೆ ಮೊದಲುಮಾಡಿದ ಐರವತ್ತು ವರ್ಷಗಳ ಮೇಲೆ ಕಂದಾಡೆ-ಅಪ್ಪಾಚ್ಚಿಯಾರ್-ಅಣ್ಣಾ ಎಂಬುವನು ತನ್ನ ಒಂದು ಶಾಸನದಲ್ಲಿ ಮೂರ್ತಿಯ ಅಭಿಷೇಕದ ಸಮಯದಲ್ಲಿ ಪುನುಗು-ಎಣ್ಣೆಯನ್ನು ಮೈಗೆಲ್ಲ ಬಳಿಯುವ ಪದ್ಧತಿಯನ್ನು ಉಲ್ಲೇಖಿಸುತ್ತಾನೆ; ಇದನ್ನು 'ಪುನುಗುಕ್ಕಾಪ್ಪುಮುರೈ' ಎಂದು ಶಾಸನ (1496 ಡಿಸೆಂಬರ್ 21ರದ್ದು) ಕರೆಯುತ್ತದೆ. ಆದರೆ ಹದಿನೈದು ದಿನಕ್ಕೊಮ್ಮೆ ಶುಕ್ರವಾರದಂದು ಇದನ್ನು ಬಳಿಯುವರೆಂಬ ಮಾತೂ ಬರುತ್ತದೆ (**ಪದಿನಂಜು ನಾಳ್ಕಿಕ್ಕು ಒರುಕ್ಕಾಲ್ ವೆಳ್ಳಿಕ್ಕಿಳ ಮೈನಾಳ್ ಪುಳುಗುಕ್ಕಾಪ್ಪು ಮುರೈ....**). ಆಗ ತಿರುಮಂಜನ ಶುಕ್ರವಾರ ತಪ್ಪಿ ಶುಕ್ರವಾರ ನಡೆಯುತ್ತಿದ್ದಿತೆಂದು ಊಹಿಸಿಕೊಳ್ಳಬಹುದು. ಅದು ಪ್ರತಿಶುಕ್ರವಾರವೂ ನಡೆಯುವಂತೆ ವ್ಯವಸ್ಥೆ ಮಾಡಿದವನು ಕೃಷ್ಣದೇವರಾಯ (1517ರ ಜನವರಿ ಎರಡರಂದು); ಅವನ ಶಾಸನವೂ ಇದನ್ನು 'ಪುಳುಕಾಪು' ಎಂದೇ ಕರೆಯುತ್ತದೆ.

ಎಟ್ಟೂರು-ತಿರುಮಲೆ ಕುಮಾರತಾತಾಚಾರ್ಯನು ಕ್ರಿಸ್ತಾಬ್ದ 1583ರಲ್ಲಿ ಬರೆಯಿಸಿದ ಶಾಸನದಲ್ಲಿ ಶುಕ್ರವಾರ ತಿರುಮಂಜನಕ್ಕೆ ಬೇಕಾಗುವ ಸಾಮಾನುಗಳ ಪಟ್ಟಿಯಿದೆ—ಗೆಂಬೂರಾ (ಎಂದರೆ, ಪಚ್ಚಕರ್ಪೂರ), ಪನ್ನೀರ್-ಚೆಂಬು (ಗುಲಾಬಿ ನೀರಿನ ಕೊಡಗಳು), ಕುಂಕುಮಪ್ಪು (ಕೇಸರ) ಇವುಗಳೊಂದಿಗೆ ಇನ್ನೂರು 'ಪುಳುಗು ಶಟ್ಟಂ' (ಎಂದರೆ, ಪುನುಗಿನ ಚೀಲಗಳು). ಅವುಗಳ ಪ್ರಮಾಣವನ್ನೂ ಶಾಸನದಲ್ಲಿ ಕೊಡಲಾಗಿದೆ. ಈಗ ತಿರುಮಂಜನಕ್ಕೆ ಬೇಕಾಗುವ ಸಾಮಗ್ರಿಗಳನ್ನು ವೀರರಾಘವಾಚಾರ್ಯರು ತಿಳಿಸಿದ್ದಾರೆ—ಮೂರುವರೆ ಕಚ್ಚಾಸೇರು (ಎಂದರೆ 84 ತೊಲ ತೂಕ) ಪಚ್ಚಕರ್ಪೂರ, ಏಳುವರೆ ಕಚ್ಚಾಸೇರು (ಎಂದರೆ ಒಂದೂವರೆ ವೀಸೆ) ಪುನುಗು ಚೀಲ, ಒಂದೂವರೆ ಕಚ್ಚಾಸೇರು (36 ತೊಲ ತೂಕ) ಕೇಸರ (ಕುಂಕುಮಪ್ಪು), ಮೂರು ವರಹಾ ತೂಕ ಕಸ್ತೂರಿ ಮತ್ತು ಕಾಲು ಕಚ್ಚಾಸೇರು ಅರಿಶಿನದ ರಾಡಿ.

ತಿರುಮಂಜನದ ಸಮಯದಲ್ಲಿ, ಚೆನ್ನಾಗಿ ತೀಡಿದ ಕೇಸರದ ರಾಡಿಯನ್ನು ಮೂರ್ತಿಯ ಮೈಗೇ ತಿಕ್ಕಿ ನೀರಿನಿಂದ ತೊಳೆಯುತ್ತಾರೆ. ಕೇಸರ ಕದಡಿದ ನೀರಿನಿಂದ ಅಭಿಷೇಕವಾದ ಮೇಲೆ (ಇದಕ್ಕೆ 'ಕುಂಕುಮಪ್ಪು-ಕಾಪ್ಪು' ಎಂದು ಹೆಸರು) ಮೂರ್ತಿಯನ್ನು ಚೆನ್ನಾಗಿ ಒರೆಸಿ ಪುನುಗು-ಎಣ್ಣೆಯನ್ನು ಮೈಗೆಲ್ಲ ತಿಕ್ಕುತ್ತಾರೆ. ಅನಂತರ ಶುದ್ಧೋದಕದಿಂದ ಸ್ನಾನವಾಗುತ್ತದೆ. ಅಭಿಷೇಕ (ತಿರುಮಂಜನ) ಮತ್ತು ಪುನುಗು ಎಣ್ಣೆಯನ್ನು ಬಳಿಯುವುದು (ಪುಳುಗುಕಾಪ್ಪು) ಇವೆರಡೂ ಬೇರೆಬೇರೆ ವಿಧಿಗಳು. ಇವೆರಡೂ ಆದಮೇಲೆ ಮೂರ್ತಿಯ ವಕ್ಷಃಸ್ಥಲದಲ್ಲಿರುವ ಅಲರ್-ಮೇಲ್-ಮಂಗೈ-ನಾಚ್ಚಿಯಾರಿಗೆ ಅರಿಶಿನದ ರಾಡಿಯಿಂದ ಅಭಿಷೇಕ ಮಾಡುತ್ತಾರೆ. ಲಕ್ಷ್ಮಿಯ ಸ್ನಪನಕ್ಕೆ ಅರಿಶಿನದ ನೀರು (ಹರಿದ್ರೋದಕ) ಪ್ರಶಸ್ತವಾದುದಷ್ಟೆ? ಆದರೆ ಇದು ಈಚೆಗೆ ಕಾಣಿಸಿಕೊಂಡ ಪದ್ಧತಿ. ಮೇಲೆ ಹೇಳಿದ 1583ರ ಶಾಸನದಲ್ಲಿ ತಿರುಮಂಜನಸಾಮಗ್ರಿಗಳ ಪಟ್ಟಿಯಲ್ಲಿ ಅರಿಶಿನ ಸೇರಿಲ್ಲದಿರುವುದನ್ನು ಗಮನಿಸಬೇಕು. ಈಗಲೂ ಅರಿಶಿಣದ ರಾಡಿಯನ್ನು ಮೂರ್ತಿಯ ವೃಕ್ಷಃಸ್ಥಲದ ಮೇಲೆ ಮಾತ್ರ ಬಳಸುತ್ತಾರೆ. ತಾಳ್ಳಪಾಕಂ ತಿರುಮಲ-ಅಯ್ಯಂಗಾರು 1544ರಲ್ಲಿ ಅಲರ್-ಮೇಲು-ಮಂಗೈ-ತಾಯಾರಿಗೂ ತಿರುಮಂಜನವನ್ನು ನಡೆಸುವ ವ್ಯವಸ್ಥೆಮಾಡಿ, ವರ್ಷದ ಆರವತ್ತಾರು ದಿನಗಳಲ್ಲಿ (ಐವತ್ತು ಮೂರು ಶುಕ್ರವಾರಗಳು, ಮಾರ್ಗಶಿರಮಾಸದ ಹದಿಮೂರು ದಿನಗಳು) ಇದಕ್ಕಾಗಿ ಅರಿಶಿನ-ನೀರಿನ ಬಳಕೆಯನ್ನು ಒದಗಿಸಿದ ಶಾಸನವಿದೆ. ಲಕ್ಷ್ಮಿಯ ಅಭಿಷೇಕವೂ ಆದಮೇಲೆ 'ತಿರುಮಣ್-ಕಾಪ್ಪು' ಎಂಬ ವಿಧಿ ನಡೆಯುತ್ತದೆ. ದೇವರ ಹಣೆಯ ಮೇಲೆ ಪಚ್ಚಕರ್ಪೂರದ ಊರ್ಧ್ವಪುಂಡ್ರವನ್ನು ಹಚ್ಚಿ ಕಸ್ತೂರಿಯಿಂದ ತಿಲಕವನ್ನು ತಿದ್ದುತ್ತಾರೆ. ಪಚ್ಚಕರ್ಪೂರದ ಆರತಿಗಳು ಈ ಸಂದರ್ಭದಲ್ಲಿ ಮೂರುಬಾರಿ ಬೆಳಗುತ್ತವೆ—ಪರಿಮಳಸಮರ್ಪಣೆಯಾದಮೇಲೆ, ಮೂಲವರ ಅಭಿಷೇಕ ಮುಗಿದ ಮೇಲೆ, ವಕ್ಷಃಸ್ಥಲಲಕ್ಷ್ಮಿಯ ಅಭಿಷೇಕವಾದಮೇಲೆ.

ಹೀಗೆ ತಿರುಮಂಜನದ ವಿಧಿಯಲ್ಲಿ ನಾಲ್ಕು ಬೇರೆಬೇರೆ ಕಟ್ಟಳೆಗಳಿವೆ—ಕೇಸರದ ನೀರಿನಿಂದ ಅಭಿಷೇಕ (ಕುಂಕುಮಪ್ಪು-ಕಾಪ್ಪು), ದೇವರ ಮೈಗೆ ಪುನುಗು-ಎಣ್ಣೆಯ

ಲೇಪನ (ಪುಳುಗು-ಕಾಪ್ಪು), ವಕ್ಷಃಸ್ಥಲಲಕ್ಷ್ಮ್ಯಾಯ ಅಭಿಷೇಕ, ಮತ್ತು ಊರ್ಧ್ವಪುಂಡ್ರ ಧಾರಣೆ (ತಿರುಮಣ್-ಕಾಪ್ಪು). ಇದಾದಮೇಲೆ ದೇವರ ಕೈಗಳಲ್ಲಿರುವ ಶಂಖಚಕ್ರಗಳಿಗೆ ಮೊದಲು ಹೂಮಾಲೆಗಳನ್ನು ತೊಡಿಸಿ, ಅನಂತರ ವಕ್ಷಃಸ್ಥಲಲಕ್ಷ್ಮಿಗೆ ಹೂಮಾಲೆಯನ್ನು ಹಾಕಿ, ಆಮೇಲೆ ಕಿರೀಟ ಮೊದಲಾದ ವಿವರಗಳನ್ನು ಹೂಗಳಿಂದ ಅಲಂಕರಿಸುತ್ತಾರೆ. ಇದು ರಾಮಾನುಜಾಚಾರ್ಯರ ಕಾಲದಿಂದಲೂ ನಡೆದುಬಂದ ಪದ್ಧತಿಯೆಂದು ಹೇಳುತ್ತಾರೆ.

ಶುಕ್ರವಾರದಂದು ದೇವರ ಮೊದಲ ದರ್ಶನ ಹಿಂದಿನ ರಾತ್ರಿ ತೊಡಿಸಿದ ಪೂಲಂಗಿರೂಪದಲ್ಲೇ. ಈ ವಿಶ್ವರೂಪದರ್ಶನವಾದಮೇಲೆ ಒಳಗಿನ ಬಾಗಿಲು ಮುಚ್ಚಿ ಹೂಮಾಲೆಗಳ ಅಲಂಕಾರವನ್ನೆಲ್ಲ ತೆಗೆದುಬಿಡುತ್ತಾರೆ. ಅನಂತರ ಆಲಯಶುದ್ಧಿ, ಪ್ರಾತಃಕಾಲಾರಾಧನೆ. ಎಂದಿನಂತೆ ತೋಮಾಲ-ಸೇವೆ ಮತ್ತು ಕೊಲುವು; ಪ್ರಸಾದ ಮೂಲ-ನಿವೇದನೆ. ಇಷ್ಟಾದಮೇಲೆ, ತೆರೆಯ ಹಿಂದೆ ಅರ್ಚಕರು ಅಭಿಷೇಕ ಸಂಕಲ್ಪವನ್ನು ಮಾಡಿ ಅಷ್ಟೋತ್ತರಶತನಾಮಾರ್ಚನೆಯನ್ನು ಮುಗಿಸುತ್ತಾರೆ. ಅಭಿಷೇಕಕ್ಕೆ ಪೂರ್ವಾಂಗವಾಗಿ ಊರ್ಧ್ವಪುಂಡ್ರದ ಅರ್ಧಭಾಗವನ್ನು ತೆಗೆಯುವುದು, ದೇವರ ಮೈಯಿಂದ ವಸ್ತ್ರ-ಉತ್ತರೀಯಗಳನ್ನು ಕಳಚಿ, ಸ್ನಾನಶಾಟಿಯನ್ನು (ಸ್ನಾನಕೌಪೀನವನ್ನು) ತೊಡಿಸುವುದು ನಡೆಯುತ್ತವೆ. ದೇವರೆದುರು ಎರಡು ಬೆಳ್ಳಿ-ಗಂಗಾಳಗಳಲ್ಲಿ ಹಾಲು (ಗೋಕ್ಷೀರ), ಮತ್ತೆರಡು ಬೆಳ್ಳಿ-ಗಂಗಾಳಗಳಲ್ಲಿ ಬಂಗಾರುಬಾವಿಯಿಂದ ಶುದ್ಧೋದಕ ಸಿದ್ಧವಾಗಿರುತ್ತದೆ. ಗುಡಿಯ ಮೊದಲ ಪ್ರಾಕಾರದಲ್ಲಿರುವ ಪರಿಮಳ ಅರ ಎಂಬ ಕೋಣೆಯಿಂದ ಜೀಯಂಗಾರು, ಏಕಾಂಗಿ ಮೊದಲಾದವರು ಪಚ್ಚಕರ್ಪೂರ, ಕಸ್ತೂರಿ, ಚಂದನಬಿಲ್ಲೆಗಳು, ಅರಿಶಿನ, ಕುಂಕುಮಹೂ ಮೊದಲಾದ ಸಾಮಗ್ರಿಗಳನ್ನು ಉತ್ಸವದಲ್ಲಿ ಶ್ವೇತಛತ್ರಾದಿಮರ್ಯಾದೆಯಿಂದ ಗರ್ಭಗುಡಿಯ ಬಳಿಗೆ ತರುತ್ತಾರೆ.

ಅರ್ಚಕರು ದೇವರ ಪಾದಗಳಿಗೆ, ವಕ್ಷಃಸ್ಥಲಲಕ್ಷ್ಮಿಗೆ ಪೊಡಮಟ್ಟು, ತಲೆಗೆ ಉಷ್ಣೀಷವನ್ನು ಕಟ್ಟಿಕೊಂಡು, ಬಟ್ಟೆಯಿಂದ ಬಾಯನ್ನೂ ಮುಚ್ಚಿಕೊಂಡು, ಬಂಗಾರದ ಶಂಖವನ್ನು ಎತ್ತಿಕೊಂಡು, ಅದರಲ್ಲಿ ಜೀಯಂಗಾರು ತಂದುಕೊಟ್ಟ ಆಕಾಶಗಂಗೆಯ ನೀರನ್ನು ತುಂಬಿ 'ಹರಿಃ ಓಂ ಸಹಸ್ರಶೀರ್ಷಾ ಪುರುಷಃ' ಎಂದು ಪುರುಷಸೂಕ್ತವನ್ನು ಪಠಿಸಿಕೊಂಡು, ದೇವರ ಕಿರೀಟದ ಮೇಲೆ ಅಭಿಷೇಕ ಮಾಡಲು ತೊಡಗುತ್ತಾರೆ. ಅಭಿಷೇಕ ಮುಗಿಯುವವರೆಗೆ ಪಂಚಸೂಕ್ತಗಳ, ಪಂಚೋಪನಿಷತ್ತುಗಳ ಪಾರಾಯಣ ನಡೆಯುತ್ತಿರುತ್ತದೆ. ಈ ಸುವರ್ಣಶಂಖಾಭಿಷೇಕದನಂತರ ಕ್ಷೀರಾಭಿಷೇಕ. ಎರಡು ಗಂಗಾಳಗಳ ಹಾಲನ್ನು ಬಳಸುತ್ತಾರೆ. ಆಗ ವೇದಪಾರಾಯಣ ನಡೆಯುತ್ತಿರುತ್ತದೆ. ಮೂರ್ತಿಯ ವರದಹಸ್ತ(ವೈಕುಂಠಹಸ್ತ)ದಿಂದ ಹರಿದು ಬರುವ ಹಾಲನ್ನು ಪಾತ್ರೆಗಳಲ್ಲಿ ಹಿಡಿದಿಟ್ಟುಕೊಳ್ಳುತ್ತಾರೆ.

ಅನಂತರ ಶುದ್ಧೋದಕದಿಂದ ಅಭಿಷೇಕ. ಬಂಗಾರುಬಾವಿಯ ನೀರನ್ನು ಕಲಶ ಗಳಲ್ಲಿ ತಂದು ಗಂಗಾಳಗಳಲ್ಲಿ ಇರಿಸಿಕೊಂಡು ಇದಕ್ಕೆ ಬಳಸುತ್ತಾರೆ. ಇದಾದಮೇಲೆ ಉದ್ವರ್ತನ; ಜೀಯಂಗಾರು ಮೊದಲಾದವರು ತಂದ ಪರಿಮಳಗಳನ್ನು ಪಾದಗಳಿಂದ

ಕಿರೀಟದವರೆಗೆ ಮೂರ್ತಿಯ ಮೈಗೆಲ್ಲ ತಿಕ್ಕಿ, ಮತ್ತೆ ಶುದ್ಧೋದಕಸ್ನಾನ ಮಾಡಿಸುತ್ತಾರೆ. ವಕ್ಷಃಸ್ಥಲಲಕ್ಷ್ಮಿಗೆ ಅರಿಶಿನ-ನೀರಿನ ಅಭಿಷೇಕ ನಡೆಯುತ್ತದೆ. ಇದಾದಮೇಲೆ, ಮತ್ತೆ ಶುದ್ಧೋದಕಾಭಿಷೇಕ; ನೂರೆಂಟು ಕಲಶಗಳಿಂದ. ಆಗ ಸಂಗ್ರಹಿಸಿದ ನೀರೇ ಅಭಿಷೇಕ ತೀರ್ಥ. ಅಭಿಷೇಕ ಮಾಡುವಾಗ ಅರ್ಚಕರು ಸ್ನಾನಪೀಠದ ಮೇಲೆ ನಿಂತಿರುತ್ತಾರೆ. ಅಲ್ಲಿಂದ ಅವರು ಇಳಿಯುವಾಗ ಚತುರ್ವೇದಪಾರಾಯಣವೂ ಮುಗಿದಿರುತ್ತದೆ.

ಆಗ ತೆರೆ ಹಾಕಿ, ಅರ್ಚಕರು ದೇವರ ಮೈಯಿಂದ ಸ್ನಾನಶಾಟಿಯನ್ನೂ ತೆಗೆದು ಮೂರ್ತಿಯನ್ನು ಒಣಬಟ್ಟೆಯಿಂದ ಒರೆಸುತ್ತಾರೆ (ಪ್ಲೋತವಿಮಾರ್ಜನ). ಕಿರೀಟಕ್ಕೊಂದು ಬಟ್ಟೆಯನ್ನು ಹೊದಿಸುತ್ತಾರೆ. ಮೂರ್ತಿಗೆ ಸರಿಗೆ ಅಂಚಿನ ಧೋತರವನ್ನು ಉಡಿಸಿ, ಮೇಲೆ ಉತ್ತರೀಯವನ್ನೂ ಮೂಡಿಸುತ್ತಾರೆ. ಅನಂತರ ಪಚ್ಚಕರ್ಪೂರ, ಕಸ್ತೂರಿಗಳಿಂದ ಊರ್ಧ್ವಪುಂಡ್ರವನ್ನು ಕಾಣಿಸುತ್ತಾರೆ. ಇದಕ್ಕೆ ನೀರುತಿರುಮಣಿಕಾಪು ಎಂದು ಹೆಸರು. ಗದ್ದದ ಮೇಲೂ ಪಚ್ಚಕರ್ಪೂರವನ್ನು ಮೂಡಿಸುವ ಪದ್ಧತಿಯಿದೆ. ಇದು ಯಾವಾಗ ಆರಂಭವಾಯಿತೋ ತಿಳಿಯುವುದಿಲ್ಲ. ಹಳೆಯ ಚಿತ್ರಗಳಲ್ಲಿ ಇದು ಕಾಣಿಸುವುದಿಲ್ಲ. ಶಾಸನದ ಉಲ್ಲೇಖವೂ ಇಲ್ಲ.

ಮುಂದೆ ಬೆಣ್ಣೆ, ಪಂಚದಾರ ನಿವೇದನೆ, ತಾಂಬೂಲಸಮರ್ಪಣೆ, ಪಚ್ಚಕರ್ಪೂರ-ಆರತಿ. ಇವಾದನಂತರ ತೆರೆಯನ್ನು ಸರಿಸುತ್ತಾರೆ. ತರುವಾಯ ಅಲಂಕಾರ ಸಮರ್ಪಣೆ. ಮೊದಲು ಧೋತರ (24 ಮೊಳ ಉದ್ದ, 4 ಮೊಳ ಅಗಲ), ಉತ್ತರೀಯ (12 ಮೊಳ ಉದ್ದ, 4 ಮೊಳ ಅಗಲ), ಗಾತ್ರಸಂವರಣವಸ್ತ್ರ, ಕಠಾರಿವಸ್ತ್ರ. ಅನಂತರ ಪಾದಗಳ ಕೆಳಗೆ ಬಂಗಾರದ ಪದ್ಮಪೀಠ, ಪಾದಗಳಿಗೆ ಸುವರ್ಣಕವಚ, ಕಿರುಗೆಜ್ಜೆಗಳಿಂದ ಕೂಡಿದ ನೂಪುರ, ಪೊಗಡ, ಕಾಂಚೀಗುಣ, ಉದರಬಂಧ, ದಶಾವತಾರರಶನಾ (ಗಂಟೆಗಳಿಂದ ಕೂಡಿ), ಸಣ್ಣ ಕಂಠಾಭರಣ, ದೊಡ್ಡ ಕಂಠಾಭರಣ (ಎದೆಯವರೆಗೆ), ಹೃದಯಪರ್ಯಂತಹಾರ (ಹುಲಿಯುಗುರುಗಳಂತೆ), ನಾಭಿಪರ್ಯಂತಹಾರ, ಸುವರ್ಣ ಯಜ್ಞೋಪವೀತ, ಸಾಧಾರಣ ಯಜ್ಞೋಪವೀತ, 108 ತುಳಸೀಪತ್ರಹಾರ, ಚತುರ್ಭುಜಲಕ್ಷ್ಮೀಹಾರ (108 ಲಕ್ಷ್ಮೀಪ್ರತಿಮೆಗಳದ್ದು), ಅಷ್ಟೋತ್ತರಶತನಾಮಹಾರ (ತೊಡೆಯವರೆಗೆ), ಸಹಸ್ರನಾಮಹಾರ (ಪಾದಪರ್ಯಂತ), ಸೂರ್ಯಕಠಾರಿ (ನಾಭಿಯಿಂದ ಪಾದದವರೆಗೆ), ವೈಕುಂಠಹಸ್ತ (ಬಲಗೈ), ಕಟಿಹಸ್ತ (ಎಡಗೈ), ಕೈಕಡಗಗಳು, ಭುಜದಂಡಭೂಷಣ, ನಾಗಾಭರಣ, ಭುಜಕೀರ್ತಿ, ಕರ್ಣಪತ್ರ, ಚಕ್ರ, ಶಂಖ ಮತ್ತು ಕಿರೀಟ. ಹೀಗೆ ಆಭರಣಗಳನ್ನು ತೊಡಿಸುತ್ತಾರೆ.

ಈ ಸಂದರ್ಭದಲ್ಲೇ ದೇವರಿಗೆ ತೊಡಿಸಿರುವ ಸುವರ್ಣಲಕ್ಷ್ಮೀಪ್ರತಿಮೆಗೂ ಸುವರ್ಣಶಂಖದಿಂದ, ಶ್ರೀಸೂಕ್ತದೊಂದಿಗೆ ಅಭಿಷೇಕ ನಡೆಯುತ್ತದೆ.

ಅನಂತರ ಅಂದಿನ ಮಾಧ್ಯಾಹ್ನಿಕ ಆರಾಧನೆ, ತೋಮಾಲಸೇವೆ, ಅಷ್ಟೋತ್ತರ ಶತನಾಮಾರ್ಚನೆ, ಆರತಿ, ನಿವೇದನ, ಮಲಯಪ್ಪಸ್ವಾಮಿಗೆ ಕಲ್ಯಾಣೋತ್ಸವ (ರಂಗಮಂಡಪದಲ್ಲಿ). ತರುವಾಯ ವಾಡಿಕೆಯಂತೆ ಸಾಯಂಕಾಲಾರಾಧನೆ, ಏಕಾಂತ ಸೇವೆಗಳು.

ಸಹಸ್ರಕಳಶಾಭಿಷೇಕ

ಇದು ಪ್ರತಿ ಬುಧವಾರ ಮುಂಜಾನೆ ನಡೆಯುವ ವಿಧಿ. ಗರ್ಭಗುಡಿಯಲ್ಲಿ ಆರಾಧನೆ ನಡೆದಮೇಲೆ, ಬಂಗಾರು-ಬಾಗಿಲ ಎದುರು ಮಲಯಪ್ಪಸ್ವಾಮಿಯನ್ನು ಬಿಜಯಮಾಡಿಸಿ, ಸಹಸ್ರಕಳಶಗಳನ್ನೂ ನವಕಲಶಗಳನ್ನೂ ಸಂಸ್ಕರಿಸಿ, ಹೋಮವನ್ನು ಮುಗಿಸಿ, ವೇದಘೋಷದಿಂದ ನವಕಲಶಗಳಿಂದ ಸಹಸ್ರಧಾರೆಯಾಗಿ ಅಭಿಷೇಕ ಮಾಡುತ್ತಾರೆ. ಪ್ರತ್ಯೇಕವಾದ ಸ್ನಾನಪೀಠದಲ್ಲಿ ಭೋಗಶ್ರೀನಿವಾಸಮೂರ್ತಿಯೂ ವಿಷ್ವಕ್ಸೇನನೂ ಇರುತ್ತಾರೆ. ಕೌತುಕಬೇರವು ಗರ್ಭಗುಡಿಯನ್ನು ಬಿಟ್ಟು ಬಂಗಾರು-ಬಾಗಿಲ ಹೊರಗೆ ಬರುವುದು ಇದೊಂದೇ ಸಂದರ್ಭದಲ್ಲಿ.

ಪ್ರಸಾದ

ಈ ಗುಡಿಯಲ್ಲಿ ದೇವರಿಗೆ ಮಾಡಿದ ನಿವೇದನೆಗಳ ಪ್ರಸಾದ ಮಾತ್ರವಲ್ಲದೆ ಹಲವಾರು ಇತರ ಪ್ರಸಾದಗಳನ್ನೂ ಕೊಡುವ ವಾಡಿಕೆಯಿದೆ. ಶುಕ್ರವಾರ ತಿರುಮಂಜನದ ತೀರ್ಥ ಪ್ರಸಿದ್ಧವಾದುದು. ದಿನವೂ ಮುಂಜಾನೆಯ ವಿಶ್ವರೂಪ ಸೇವೆಯನಂತರ ನಡೆಯುವ ಧರ್ಮದರ್ಶನದಲ್ಲಿ ಕೊಡುವ ತೀರ್ಥ; ರಾತ್ರಿ ದೇವರ ಪಾದಗಳ ನಡುವೆ ಇರಿಸಿದ ಚಂದನದ ಉಂಡೆಗಳಿಂದ ಕೊಡುವ 'ಶ್ರೀಪಾದ-ಚಂದನ'; ಬಲಗೈ (ವರದಹಸ್ತದ) ನಡುವೆ ಇರುವ ಮಾಣಿಕ್ಯದ ಮೇಲೆ ಗಂಧವನ್ನು ಒತ್ತಿ ಅದರ ಪ್ರತಿಕೃತಿಯನ್ನು ಮೂಡಿಸಿಕೊಂಡಿರುವ ಚಂದನಮುದ್ರೆ; ದೇವರ ತಿಲಕಕ್ಕೆ ಬಳಸಿದ ಕಸ್ತೂರಿ; ರಾತ್ರಿ ದೇವರ ಪಾದಕವಚವನ್ನು ತೆಗೆದು, ಪುನುಗುತೈಲವನ್ನು ಪಾದಗಳಿಗೆ ಬಳಿದು ಮೇಲೆ ಮುಚ್ಚುವ ಬಟ್ಟೆ, 'ಶ್ರೀಪಾದವಸ್ತ್ರ'; ದೇವರಿಗೆ ತೊಡಿಸಿದ ರೇಷ್ಮೆ ಸೀರೆ-ಪಂಚೆಗಳು 'ಶೇಷ-ವಸ್ತ್ರ'—ಇವನ್ನೆಲ್ಲ ಭಕ್ತರಿಗೆ ಕೊಡುತ್ತಾರೆ. ಆದರೆ ವಿಶ್ವರೂಪ ತೀರ್ಥವನ್ನು ಬಿಟ್ಟು ಉಳಿದೆಲ್ಲವೂ ಗುತ್ತಿಗೆಯ ಚೌಕಟ್ಟಿನಲ್ಲಿ ಸೇರಿರುವುದರಿಂದ, ಹಣ ಕೊಟ್ಟೇ ಪಡೆಯಬೇಕಾಗುತ್ತದೆ.

ಈ ಕ್ರಮದ ನಿತ್ಯಾರ್ಚನೆಗೆ 'ತಿರುವಾರಾಧನೆ'ಯೆಂದು ಹೆಸರು. ಯಾವುದೇ ಉತ್ಸವವಾಗಲೀ, ತಿರುವಾರಾಧನೆ ನಡೆದಮೇಲೇ. ಸಾಮಾನ್ಯದಿನಗಳಲ್ಲಿ ಮೊದಲ ಸೇವೆಯಾದ ಸುಪ್ರಭಾತ ಮತ್ತು ವಿಶ್ವರೂಪಸೇವೆ ಮುಂಜಾನೆ ಸುಮಾರು ಐದು ಗಂಟೆಗೆ ಮೊದಲಾಗಿ, ಧರ್ಮದರ್ಶನ ಸುಮಾರು ಏಳೂವರೆಗಂಟೆಯವರೆಗೆ ನಡೆಯುವ ವಾಡಿಕೆ. ತರುವಾಯ ತೋಮಾಲಸೇವೆ; ಸುಮಾರು ಹನ್ನೊಂದು ಗಂಟೆಯವರೆಗೆ. ಅದಾದಮೇಲೆ ನೈವೇದ್ಯಸಮರ್ಪಣೆ ಮತ್ತಿತರ ವಿಧಿಗಳು ಮುಗಿಯುವ ವೇಳೆಗೆ ಹನ್ನೆರಡು ಗಂಟೆ ಹೊಡೆಯುತ್ತದೆ. ಅನಂತರ ಮತ್ತೆ ಧರ್ಮದರ್ಶನ. ದಿನದ ಉಳಿದ ಮುಖ್ಯಸೇವೆಯೆಂದರೆ ರಾತ್ರಿ ಒಂಬತ್ತರ ನಂತರ ನಡೆಯುವ ಏಕಾಂತಸೇವೆ ಅಥವಾ ಶಯನೋತ್ಸವ.

ಅಲ್ಲಿಗೆ ದಿನದ ಅರ್ಚನೆ ಮುಗಿಯಿತು. ಶುಕ್ರವಾರದಂದು ಮುಂಜಾನೆಯೇ ತಿರುಮಂಜನವಾಗಬೇಕಾದುದರಿಂದ ಬೆಳಗಿನ ಧರ್ಮದರ್ಶನವಿಲ್ಲ. ಉತ್ಸವಗಳಿದ್ದ ದಿನ ಮೊದಲ ಸೇವೆ ಇನ್ನೂ ಮೊದಲೇ ಆರಂಭವಾಗುತ್ತದೆ. ಇದು ಕೆಲವು ವರ್ಷಗಳ ಹಿಂದಿನ ವೇಳಾಪಟ್ಟಿ. ಈಚೆಗೆ ಗುಡಿಯಲ್ಲಿ ಉತ್ಸವಗಳೂ ಸೇವೆಗಳೂ ಭಕ್ತರ ಸಂದಣಿಯೂ ತುಂಬ ಹೆಚ್ಚಾಗಿರುವುದರಿಂದ ವೇಳಾಪಟ್ಟಿ ಬದಲಾಗಿದೆ. ಅರುಣೋದಯದಲ್ಲೇ (ಎಂದರೆ ಮೂರು, ಮೂರುವರೆ ಗಂಟೆಗೇ) ಸುಪ್ರಭಾತಸೇವೆ ಮೊದಲಾಗುತ್ತದೆ. ಏಕಾಂತಸೇವೆಯಾಗುವಾಗ ಹನ್ನೆರಡರ ನಡುರಾತ್ರಿಯೂ ಆದೀತು. ಶಯನೋತ್ಸವದಲ್ಲಿ ಸುಪ್ಪತ್ತಿಗೆಯ ಮೇಲೆ ಪವಡಿಸುವವನು ಭೋಗಶ್ರೀನಿವಾಸನೊಬ್ಬನೇ ಆದುದರಿಂದ ತೊಂದರೆಯೇನಿಲ್ಲ. ಅಲ್ಲಿ ಅಲರ್-ಮೇಲ್-ಮಂಗೈ ನಾಚ್ಚಿಯಾರರು ಇರುವುದಿಲ್ಲ ; ತಾಳ್ಳಪಾಕಂ ಅನ್ನಮಾಚಾರ್ಯರ ವಂಶಸ್ಥರು ಈಕೆಯನ್ನು ಕುರಿತ ಕೀರ್ತನೆಗಳನ್ನು ಹಾಡುತ್ತಾರೆ ಅಷ್ಟೆ. ಹೀಗಾಗಿ, ದೇವರು ಮಲಗಲು ನಡುರಾತ್ರಿ ಬಂದರೂ ದಾಂಪತ್ಯದ ಸೌಹಾರ್ದ ಕೆಡುವ ಸಂಭವವಿಲ್ಲ!

ಬ್ರಹ್ಮೋತ್ಸವ

ಬೆಟ್ಟದ ಮೇಲೆ ನಡೆಯುವ ವಿಶೇಷಕಟ್ಟಳೆಯ ಉತ್ಸವಗಳಲ್ಲೆಲ್ಲ ಹೆಸರಾದುದು ಬ್ರಹ್ಮೋತ್ಸವ. ಬ್ರಹ್ಮೋತ್ಸವವಾದರೋ ಗುಡಿಗೆ ಸಹಜವಾಗಿರುವಂತೆ ಜರಗುತ್ತದೆ. ಮೊದಲು ಇದು ವರ್ಷಕ್ಕೊಮ್ಮೆ ನಡೆಯುತ್ತಿದ್ದಿತು. ಅನಂತರ, ಪಲ್ಲವರಾಣಿ ಸಾಮವೈ ಮಾಡಿದ ಏರ್ಪಾಟಿನಂತೆ ವರ್ಷಕ್ಕೆ ಎರಡು ಬಾರಿ. 1551ರಲ್ಲಿ ಹೊರಟ ಶಾಸನವೊಂದರ ಸೂಚನೆಯಂತೆ ವರ್ಷಕ್ಕೆ ಹತ್ತು ಬ್ರಹ್ಮೋತ್ಸವಗಳು ನಡೆಯುತ್ತಿದ್ದುದೂ ಉಂಟು. ಈಗ ನಡೆಯುವುದು ನಾಲ್ಕು ಬ್ರಹ್ಮೋತ್ಸವಗಳು. ಮುಖ್ಯವಾದುದು ಪುರಟ್ಟಾಶಿ-ಬ್ರಹ್ಮೋತ್ಸವ, ಎರಡನೆಯದು ರಥಸಪ್ತಮಿಯಂದು ನಡೆಯುವ ಆರ್ಷ ಬ್ರಹ್ಮೋತ್ಸವ. ಮೂರನೆಯದು ಕೈಶಿಕ ದ್ವಾದಶಿಯಂದು ನಡೆಯುವ ರಾಕ್ಷಸ-ಬ್ರಹ್ಮೋತ್ಸವ. ನಾಲ್ಕನೆಯದು ಮುಕ್ಕೋಟಿ ದ್ವಾದಶಿಯಂದು ನಡೆಯುತ್ತದೆ. ಇದಲ್ಲದೆ ಗುಡಿಯಲ್ಲಿ ಹಲವು ನಕ್ಷತ್ರೋತ್ಸವಗಳೂ, ಆಸ್ಥಾನೋತ್ಸವಗಳೂ, ಜಯಂತ್ಸುತ್ಸವಗಳೂ, ತೀರ್ಥೋತ್ಸವಗಳೂ, ದೀಪೋತ್ಸವಗಳೂ, ಅಧ್ಯಯನೋತ್ಸವ, ಚೂರ್ಣೋತ್ಸವ, ಕಾರ್ತಿಕೋತ್ಸವ, ಡೋಲೋತ್ಸವಗಳೂ ನಡೆಯುತ್ತವೆ. ಇವುಗಳ ಸಂಖ್ಯೆ ಐವತ್ತರಷ್ಟು. ಇವಲ್ಲದೆ ಕಲ್ಯಾಣೋತ್ಸವಗಳೂ ಆರ್ಜಿತವಾಗಿ ನಡೆಯುತ್ತಲೇ ಇರುತ್ತವೆ. ಹೀಗಾಗಿ ದಿನವೂ ಉತ್ಸವವೇ, ಸಂಭ್ರಮವೇ. ಇವೆಲ್ಲ ಕಾಲಕಾಲಕ್ಕೆ ವ್ಯವಸ್ಥೆಗೊಂಡುವು. ಅದೂ ಮಹಂತರ ಕಾಲದಲ್ಲಿ ಇವುಗಳ ಏರಾಟ.

ಬ್ರಹ್ಮೋತ್ಸವ ತುಂಬ ಹಳೆಯ ಉತ್ಸವವೂ ಹೌದು. ಪಲ್ಲವರಾಣಿ ಸಾಮವೈ

ಕಾಲಕ್ಕೇ (ಎಂದರೆ, ಕ್ರಿಸ್ತಾಬ್ದ 900ರ ಸುಮಾರಿಗೇ) ಇದು ಪ್ರಸಿದ್ಧವಾಗಿದ್ದಿತು; ಆಕೆಯ ಶಾಸನ ಇದನ್ನು ಉಲ್ಲೇಖಿಸುತ್ತದೆ. ಭವಿಷ್ಯೋತ್ತರಪುರಾಣ (ಹದಿನಾಲ್ಕನೆಯ ಅಧ್ಯಾಯ) ಮತ್ತು ವರಾಹಪುರಾಣ(ಹದಿನೆಂಟನೆಯ ಅಧ್ಯಾಯ)ಗಳಲ್ಲಿ ಇದರ ಹಿನ್ನೆಲೆಯೂ ವಿವರಗಳೂ ಬರುತ್ತವೆ. ಬ್ರಹ್ಮನೇ ಇದನ್ನು ಬೆಟ್ಟದೊಡೆಯನಿಗೆ ನಡೆಸಿದನೆಂದು ಅಲ್ಲಿರುವ ಒಕ್ಕಣೆ; ಬ್ರಹ್ಮೋತ್ಸವವೆನ್ನುವುದು ಬ್ರಹ್ಮಕ್ಲೃಪ್ತೋತ್ಸವವೆನ್ನುವುದರ ಸಂಕ್ಷೇಪ; ಬ್ರಹ್ಮನು ವ್ಯವಸ್ಥೆ ಮಾಡಿದ ಉತ್ಸವವೆಂದರ್ಥ.

ಗುಡಿಗಳಲ್ಲಿ ನಡೆಯುವ ಉತ್ಸವಗಳು ಮೂರು ಬಗೆಯವೆಂದು ಆಗಮ ಹೇಳುತ್ತದೆ—ಕಾಲೋತ್ಸವ, ಶ್ರದ್ಧೋತ್ಸವ, ಮತ್ತು ನಿಮಿತ್ತೋತ್ಸವ. ಕಾಲೋತ್ಸವ ಎಂದರೆ ನಿರ್ದಿಷ್ಟಕಾಲಕ್ಕೆ ತಪ್ಪದೆ ನಡೆಯಬೇಕಾದುದು. ಶ್ರದ್ಧೋತ್ಸವವೆಂದರೆ ಭಕ್ತರು ತಮಗೆ ಅನುಕೂಲವಾದಾಗ, ಅಗತ್ಯತೋರಿದಾಗ ಮಾಡಿಸುವ ಉತ್ಸವ; ಸೇವಾರೂಪವಾದದ್ದು. ನಿಮಿತ್ತೋತ್ಸವವೆಂದರೆ ಯಾವುದಾದರೂ ಗ್ರಹಣ, ಅಶೌಚ, ಆತಂಕ ಮೊದಲಾದ ಕಾರಣಗಳಿಗೆ ಶಾಂತ್ಯರ್ಥವಾಗಿ ನಡೆಸುವ ಉತ್ಸವ. ಕಾಲೋತ್ಸವವನ್ನೇ ಮಹೋತ್ಸವವೆಂದು ಕರೆಯುವುದುಂಟು—ಗುಡಿಯ ಕಟ್ಟಳೆಗೆ ಅಗತ್ಯವಾಗಿ ನಡೆಯುವ ದೊಡ್ಡ ಉತ್ಸವ. ಬ್ರಹ್ಮೋತ್ಸವವೆಂದರೆ ಮಹೋತ್ಸವ ಎಂದರ್ಥ; ಬ್ರಹ್ಮ ಮತ್ತು 'ಮಹಾ' ಎಂಬೆರಡು ಪದಗಳೂ ಒಂದೇ ಅರ್ಥದವು.

ಆದರೆ ಇದು ಜನರ ಕಲ್ಪನೆಯಲ್ಲಂತೂ ಬ್ರಹ್ಮದೇವರು ನಡೆಸುವ ಉತ್ಸವವೇ. ಆದುದರಿಂದಲೇ ಬ್ರಹ್ಮೋತ್ಸವದ ಸಂದರ್ಭದಲ್ಲಿ ದಿನವೂ ಬೇರೆ ಬೇರೆ ವಾಹನಗಳ ಮೇಲೆ ಉತ್ಸವಮೂರ್ತಿ ಬರುವಾಗ ಮುಂದೆ ಸಣ್ಣದೊಂದು ತೇರು ಹೊರಡುತ್ತದೆ. ತೇರನ್ನು ಚೆನ್ನಾಗಿ ಸಿಂಗರಿಸಿರುತ್ತಾರೆ. ಆದರೆ ಅದರೊಳಗೆ ಯಾವ ಮೂರ್ತಿಯೂ ಇರದೆ ಖಾಲಿಯಾಗಿರುತ್ತದೆ. ಬ್ರಹ್ಮನೇ ಅದರಲ್ಲಿ ಕುಳಿತು ಉತ್ಸವದ ಏರ್ಪಾಟುಗಳನ್ನೆಲ್ಲ ನೋಡಿಕೊಳ್ಳುತ್ತಿದ್ದಾನೆಂದು ಕಲ್ಪನೆ. ಬ್ರಹ್ಮೋತ್ಸವವೆನ್ನುವುದು 'ಬ್ರಹ್ಮಪ್ರತ್ಯಕ್ಷ'ವಾದ ಉತ್ಸವ; ಎಂದರೆ ನೇರವಾಗಿ ಬ್ರಹ್ಮನ ಎದುರಿನಲ್ಲೇ ನಡೆಯುವ ಉತ್ಸವ.

ಬ್ರಹ್ಮೋತ್ಸವವನ್ನು ಕಾಲೋತ್ಸವವೆಂದೆವಲ್ಲ? ಯಾವ ಕಾಲದಲ್ಲಿ ನಡೆಯತಕ್ಕ ಉತ್ಸವ ಇದು? ಆಗಮದ ಪ್ರಕಾರ, ಗುಡಿಯ ಮೂಲವರ ಜನ್ಮನಕ್ಷತ್ರದ (ಶ್ರವಣ) ದಿನದಿಂದ ಮೊದಲು ಮಾಡಿ ಒಂಬತ್ತು ದಿನಗಳ ವಾರ್ಷಿಕ ಉತ್ಸವವಾಗಬೇಕು, ಅಥವಾ ಆ ಜನ್ಮನಕ್ಷತ್ರದ ದಿನವೇ ಕಡೆಯದಾಗಿ (ಅವಧಿಯಾಗಿ) ಅದಕ್ಕೆ ಹಿಂದೆ ಒಂಬತ್ತು ದಿನಗಳು ನಡೆಯುವ ಉತ್ಸವವಾಗಬೇಕು. ಬೆಟ್ಟದ ಗುಡಿಯಲ್ಲಿ ಎರಡನೆಯ ಕ್ರಮವನ್ನು ಹಿಡಿದಿದ್ದಾರೆ. ಬೆಟ್ಟದ ಒಡೆಯನ ಜನ್ಮನಕ್ಷತ್ರ (ಎಂದರೆ, ಜನರ ಕಣ್ಣಿಗೆ ಕಾಣಿಸಿಕೊಂಡ ಸಮಯ, ಅವತಾರಕಾಲ ಅಥವಾ ಅವಿರ್ಭಾವಕಾಲ) ಆಶ್ವಯುಜ ಮಾಸದ ಶುಕ್ಲಪಕ್ಷದಲ್ಲಿ ಒದಗುವ ಶ್ರವಣನಕ್ಷತ್ರ; ಸೌರಮಾನ ಎಣಿಕೆಯಂತೆ ಇದು ಕನ್ಯಾಮಾಸವಾಗುತ್ತದೆ; ಪುರಟ್ಟಾಶಿ ಎಂದೂ ಕರೆಯುತ್ತಾರೆ. ಇದು ಸಾಮಾನ್ಯವಾಗಿ ಸೆಪ್ಟೆಂಬರ್ ತಿಂಗಳಿಗೆ ಸರಿಹೋಗುತ್ತದೆ. ಶ್ರವಣನಕ್ಷತ್ರವು ನವರಾತ್ರಿಯ ಉತ್ಸವದ ಕಡೆಯ ದಿನವಾದ ವಿಜಯದಶಮಿಯಂದು ಒದಗುವುದು ವಾಡಿಕೆ. ಅದಕ್ಕೆ ಒಂಬತ್ತು

ದಿನಗಳು ಮುಂಚೆ ಎಂದರೆ ಪಾಡ್ಯದಿಂದ ಮೊದಲಾಗಿ ನವರಾತ್ರಿಗಳಿಗೇ ಸರಿಯಾಗುತ್ತದೆ.



ಕಾಸಿನ ಸರ

ಬ್ರಹ್ಮೋತ್ಸವ (ತಿರುಕ್ಕೋಡಿ-ತಿರುನಾಳ್) ಒಂಬತ್ತು ದಿನಗಳ ಉತ್ಸವ; ಯಾಗಶಾಲೆಯಲ್ಲಿ ಅಂಕುರಾರ್ಪಣದಿಂದ ಆರಂಭವಾಗಿ ಚಕ್ರಸ್ನಾನ ಅಥವಾ ಅವಭೃಥಸ್ನಾನದಲ್ಲಿ

(ತೀರ್ಥವಾರಿ) ಮುಗಿಯುತ್ತದೆ. ಅವಭೃಥಸ್ನಾನವು ಕನ್ಯಾಮಾಸದ ಶ್ರವಣನಕ್ಷತ್ರದಿಂದ ಕೂಡಿದ ದಿನದಲ್ಲಿ ಆಗುವಂತೆ ಏರ್ಪಡಿಸುತ್ತಾರೆ. ಒಂಬತ್ತು ದಿನಗಳೂ ಬೆಳಗ್ಗೆ ಮತ್ತು ಸಂಜೆ ಬೇರೆಬೇರೆ ವಾಹನಗಳ ಮೇಲೆ ಉತ್ಸವ ನಡೆಯುತ್ತದೆ; ರಾತ್ರಿ ಉಯ್ಯಾಲೆ, ಆಸ್ಥಾನಗಳು ನಡೆಯುತ್ತವೆ. ಗುಡಿಯಲ್ಲಿ ಉತ್ಸವ ಮೊದಲಾಯಿತೆಂದು ಸೂಚಿಸುವ ಧ್ವಜಾರೋಹಣವಾದೊಡನೆ ಊರಿನಲ್ಲಿ ಯಾರ ಮನೆಯಲ್ಲೂ ಒಂಬತ್ತು ದಿನಗಳ ಕಾಲ ಯಾವ ಶುಭಸಂದರ್ಭವೂ ನಡೆಯುವಹಾಗಿಲ್ಲ; ಊರಿನಲ್ಲಿ ಇರುವವರು ಊರನ್ನು ಬಿಟ್ಟು ಹೊರಗೆ ಹೋಗುವ ಹಾಗಿಲ್ಲ; ಅಗತ್ಯ ಬಿದ್ದು ಹೊರಗೆ ಹೋಗುವುದು ಅನಿವಾರ್ಯವಾದರೆ ಧ್ವಜಾವರೋಹಣವಾಗುವ ಮೊದಲು (ಕಡೆಯ ದಿನಕ್ಕೆ ಮುಂಚೆ) ಹಿಂದಿರುಗಿ ಬಂದುಬಿಡಬೇಕೆಂಬ ಕಟ್ಟಳೆಯಿದೆ. ಬ್ರಹ್ಮೋತ್ಸವ ಊರಹಬ್ಬ; ಊರ ಬೀದಿಗಳಲ್ಲೆಲ್ಲ ಸಡಗರ, ಎಲ್ಲರ ಮನೆಗಳಲ್ಲೂ ಸಂಭ್ರಮ.

ಉತ್ಸವ ಆರಂಭವಾಗುವುದು ಅಲಂಕರಿಸಿದ 'ಪಾಲಿಕೆ'ಗಳೆಂಬ ಮಡಕೆಗಳಲ್ಲಿ ನವಧಾನ್ಯಗಳ ಅಂಕುರಾರ್ಪಣದಿಂದ. ಉತ್ಸವಮೂರ್ತಿಯ ಕೈಗೆ ಕಂಕಣವನ್ನು ಕಟ್ಟಿ, ಗುಡಿಯಲ್ಲಿ ಮೊದಲ ಆವರಣದಲ್ಲೇ, ಬಂಗಾರಬಾಗಿಲ ಒಳಗೇ ನೆಲೆಸಿರುವ ವಿಷ್ಣುಸೇನಾಪತಿಯಾದ ವಿಷ್ವಕ್ಸೇನನನ್ನು ಸಂಜೆಯಂದು ಗುಡಿಯಿಂದ ಬಿಜಯಮಾಡಿಸಿ, ಊರಿನ ಬೀದಿಗಳಲ್ಲಿ ಮೆರವಣಿಗೆ ಮಾಡಿಸಿ, ಮೃತ್ಸಂಗ್ರಹಣ ಮಾಡುತ್ತಾರೆ. ಬ್ರಹ್ಮೋತ್ಸವವು ಯಜ್ಞ; ಇದಕ್ಕಾಗಿ ಯಜ್ಞಪೀಠವನ್ನು ಸಿದ್ಧಪಡಿಸುವುದೇ ಮೃತ್ಸಂಗ್ರಹಣ. ಅದನ್ನು ವಿಷ್ವಕ್ಸೇನನೇ ಮಾಡುತ್ತಾನೆಂದು ಕಲ್ಪನೆ. ಮೆರವಣಿಗೆಯನ್ನು ಮುಗಿಸಿ ವಿಷ್ವಕ್ಸೇನನು ಯಾಗಶಾಲೆಗೆ ಬರುತ್ತಾನೆ. ಅಲ್ಲಿ ಪೂರ್ಣಕುಂಭಸ್ಥಾಪನೆಯಾಗುತ್ತದೆ, ಅಂಕುರಾರ್ಪಣವಿಧಿಯೂ ನಡೆಯುತ್ತದೆ. ಅನಂತರ ದೊಡ್ಡ-ಶೇಷವಾಹನದ ಮೇಲೆ ಉತ್ಸವಮೂರ್ತಿಗಳ ಮೆರವಣಿಗೆಯಾಗುತ್ತದೆ.

ಮರುದಿನ ಬೆಳಗ್ಗೆ ಚಿಕ್ಕ-ಶೇಷವಾಹನದ ಮೇಲೆ ಮಲೆಯಪ್ಪನೊಬ್ಬನ ಉತ್ಸವ ವಾಗುತ್ತದೆ. ಸಂಜೆ ಧ್ವಜಾರೋಹಣ (ತಿರುಕ್ಕೋಡಿ). ಒಳಗೋಪುರದ ಹೊರಗಿರುವ ಧ್ವಜಸ್ತಂಭದ ಮೇಲೆ ಗರುಡನ ಚಿತ್ರವಿರುವ ಬಟ್ಟೆಯನ್ನು ಏರಿಸುವುದೇ ಧ್ವಜಾ ರೋಹಣ. ಇದು ಗರುಡಧ್ವಜ ಅಥವಾ ವಿಷ್ಣುಪತಾಕೆ. ಉದ್ದವಾದ ಬಿಳಿಬಟ್ಟೆಯ ಮೇಲೆ ಗರುಡನ ಚಿತ್ರವನ್ನು ಸೊಗಸಾಗಿ, ಬಣ್ಣಗಳಲ್ಲಿ ಬಿಡಿಸಿರುತ್ತಾರೆ; ಛತ್ರ, ಚಾಮರ, ಕಮಲ, ಪೂರ್ಣಕುಂಭಗಳನ್ನೂ ಚಿತ್ರಿಸಿರುತ್ತಾರೆ. ಭೇರೀತಾಡನದೊಂದಿಗೆ ಈ ಧ್ವಜವನ್ನು ಏರಿಸುತ್ತಾರೆ. ಗರುಡಮಂತ್ರ, 'ಸುಪರ್ಣೋಽಸಿ' ಎಂದು ಮೊದಲಾಗುವ ತೈತ್ತಿರೀಯಸಂಹಿತಾಮಂತ್ರ ಮೊದಲಾದ ಪ್ರಸಕ್ತಮಂತ್ರಗಳ ಪಠನೆಯೂ ನಡೆಯು ತ್ತಿರುತ್ತದೆ. ತೈತ್ತಿರೀಯಸಂಹಿತೆಯ ಮಂತ್ರ (4, 1, 10) ಇದು—

ಸುಪರ್ಣೋಽಸಿ ಗರುತ್ಮಾನ್ ತ್ರಿವೃತ್ತೇ ಶಿರೋ ಗಾಯತ್ರಂ ಚಕ್ಷುಃ ಸ್ತೋಮ ಆತ್ಮಾ ಸಾಮ ತೇ ತನೂರ್ವಾಮದೇವ್ಯಂ ಬೃಹದ್ರಥಂತರೇ ಪಕ್ಷೌ ಯಜ್ಞಾಯಜ್ಞಿಯಂ ಪುಚ್ಛಂ ಛಂದಾಂಸ್ಯಂಗಾನಿ ಧಿಷ್ಣಿಯಾಃ ಶಫಾ ಯಜೂಂಷಿ ನಾಮ। ಸುಪರ್ಣೋಽಸಿ ಗರುತ್ಮಾನ್ ದಿವಂ ಗಚ್ಛ ಸುವಃ ಪತ॥

"ನೀನು ಬಂಗಾರದ ರೆಕ್ಕೆಗಳವನು. ತ್ರಿವೃತ್‌ಸ್ತೋಮವೇ ನಿನ್ನ ತಲೆ, ಗಾಯತ್ರಿಯೇ ನಿನ್ನ ಕಣ್ಣು, ಸ್ತೋಮವೇ ನಿನ್ನ ಉಸಿರು, ವಾಮದೇವ್ಯ-ಸಾಮವೇ ನಿನ್ನ ದೇಹ. ಬೃಹತ್ ಮತ್ತು ರಥಂತರ ಎಂಬ ಸಾಮಗಳೇ ನಿನ್ನ ರೆಕ್ಕೆಗಳು, ಯಜ್ಞಾಯಜ್ಞೀಯವೇ ನಿನ್ನ ಬಾಲ. ವೈದಿಕಛಂದಸ್ಸುಗಳೇ ನಿನ್ನ ಅಂಗಾಂಗಗಳು. ಯಜುಸ್ಸೇ ನಿನ್ನ ಹೆಸರು. ಬಂಗಾರದಂತೆ ಹೊಳೆಯುವ ರೆಕ್ಕೆಗಳುಳ್ಳವನು ನೀನು! ಆಕಾಶಕ್ಕೆ ಹಾರು, ಸ್ವರ್ಗವನ್ನು ಸೇರು" ಎಂದು ಈ ಮಂತ್ರದ ಅರ್ಥ.

ಗರ್ಭಗುಡಿಯಿಂದ ಮಲೆಯಪ್ಪ (ಉತ್ಸವಮೂರ್ತಿ), ನಾಚ್ಚಿಯಾರರನ್ನು ಹೊರಡಿಸಿಕೊಂಡು ಬಂದು ಧ್ವಜಮಂಡಪದ ಎದುರುಗಿರುವ ತಿರುಮಲರಾಯ ಮಂಡಪದಲ್ಲಿ ಕೂರಿಸುತ್ತಾರೆ. ಬ್ರಹ್ಮೋತ್ಸವ ನಡೆಯುವುದು ಉತ್ಸವಮೂರ್ತಿಗೇ ಆದುದರಿಂದ ಅದರ ಸಮ್ಮುಖದಲ್ಲೇ ಧ್ವಜಾರೋಹಣ ನಡೆಯಬೇಕು. ಇದರ ಅಂಗವಾಗಿ ಅಷ್ಟದಿಕ್ಪಾಲಕರಿಗೂ ಇತರ ದೇವತೆಗಳಿಗೂ ಉತ್ಸವದಲ್ಲಿ ಪಾಲ್ಗೊಳ್ಳುವಂತೆ ಕರೆಯಿರುತ್ತದೆ, ಅವರಿಗೆ ಬಲಿಪ್ರಸಾದಗಳೂ ಇರುತ್ತವೆ. ಧ್ವಜಾರೋಹಣವಾದ ಮೇಲೆ ಗರುಡನಿಗೆ ಮುದ್ದಾನ್ನ (ಪೊಂಗಲು) ನಿವೇದನವಾಗುತ್ತದೆ, ನೆರೆದವರಿಗೆ ವಿತರಣ ವಾಗುತ್ತದೆ. ಆನಂತರ ಹಂಸವಾಹನದ ಮೇಲೆ ಉತ್ಸವ.

ಮೂರನೆಯ ದಿನ ಬೆಳಗ್ಗೆ ಸಿಂಹವಾಹನ, ರಾತ್ರಿ ಮುತ್ತಿನ ಚಪ್ಪರದಲ್ಲಿ ಉತ್ಸವ. ನಾಲ್ಕನೆಯ ದಿನ ಹಗಲು ಕಲ್ಪವೃಕ್ಷವಾಹನ, ರಾತ್ರಿ ಸರ್ವಭೂಪಾಲವಾಹನ. ಐದನೆಯ ದಿನ ಬೆಳಗ್ಗೆ ಮಲೆಯಪ್ಪನಿಗೆ ಮೋಹಿನಿಯ ಅಲಂಕಾರಮಾಡಿ ದಂತದ ಆಂದೋಳಿಕಾ ಎಂದರೆ ಪಲ್ಲಕ್ಕಿಯಲ್ಲಿ ಕೂರಿಸಿ ಉತ್ಸವ ಮಾಡುತ್ತಾರೆ. ಈ ಅವತಾರದಲ್ಲಿ ಮೂರ್ತಿಗೆ ಸೀರೆಯುಡಿಸಿ, ಹೆಂಗಸರ ಒಡವೆಗಳನ್ನು ತೊಡಿಸಿ, ಮೂಗುಬಟ್ಟನ್ನೂ ಇರಿಸಿ, ಮೇಲುಗೈಗಳ ಶಂಖಚಕ್ರಗಳನ್ನು ಮರೆಯಿಸಿ ತಾವರೆಹೂವಿನ ಮೊಗ್ಗುಗಳನ್ನು ಅಳವಡಿಸಿ, ಬಲಗೈಯ ವರದಹಸ್ತಕ್ಕೆ ಬದಲಾಗಿ ಅಭಯಹಸ್ತವನ್ನು ಕಾಣಿಸಿ ಮೂರ್ತಿಕುಳಿತಿರುವಂತೆ ಏರ್ಪಡಿಸುತ್ತಾರೆ. ನಿಂತಿರುವ ಉತ್ಸವಬೇರದ ಭಂಗಿ (ನಿನ್ರ-ತಿರುಕ್ಕೋಲಂ) ಬದಲಾಗುವುದು ಇದೊಂದೇ ಸಂದರ್ಭದಲ್ಲಿ.

ಅಂದೇ ರಾತ್ರಿ ಗರುಡೋತ್ಸವ. ಇದು ಬೆಟ್ಟದ ಗುಡಿಯಲ್ಲಿ ತುಂಬ ವೈಭವದ ಉತ್ಸವ. ಅಂದು ಸಂಜೆ ಉಯ್ಯಾಲೆಸೇವೆಯಾದ ನಂತರ ಗರುಡವಾಹನದ ಮೇಲೆ ಕೂರಿಸುವ ಮಲೆಯಪ್ಪನಿಗೆ (ಆಗ ನಾಚ್ಚಿಯಾರರು ಇರುವುದಿಲ್ಲ) ವಜ್ರಕವಚ ಮೊದಲಾದ ವಿಶೇಷ ಆಭರಣಗಳನ್ನು ತೊಡಿಸಿರುತ್ತಾರೆ. ಉತ್ಸವ ಹೊರಡುವ ವೇಳೆಗೆ ಗರ್ಭಗುಡಿಯಿಂದ ಮೂಲವರ ಮೈಮೇಲಿರುವ ಲಕ್ಷ್ಮೀಹಾರ ಮತ್ತು ಮಕರಕಂಠಿಗಳನ್ನು ತಂದು ಮಲೆಯಪ್ಪನಿಗೆ ಹಾಕುತ್ತಾರೆ. ಗರ್ಭಗುಡಿಯಿಂದ ದೇವರ ಈ ಆಭರಣಗಳು ಇದೊಂದೇ ಸಂದರ್ಭದಲ್ಲಿ ಹೊರಬರುವುದು, ಮತ್ತು ಇವೆರಡೇ. ಉತ್ಸವ ಗುಡಿಯ ಸುತ್ತ ನಾಲ್ಕೂ ಮಾಡರಸ್ತೆಗಳಲ್ಲಿ ರಾತ್ರಿಯೆಲ್ಲ ನಡೆಯುತ್ತದೆ. ಮರುದಿನ ಮುಂಜಾನೆ ಗರುಡವಾಹನವಾದ ಕೂಡಲೇ, ಹನುಮಂತನ ವಾಹನದ ಮೇಲೆ ಉತ್ಸವ ನಡೆಯುತ್ತದೆ. ಇದು ಸುಮಾರಾಗಿ ಸರಳವಾಗಿರುತ್ತದೆ. ವಿಷ್ಣುವಿಗೆ ಗರುಡ 'ಪೆರಿಯ-

ತಿರುವಡಿ', ಎಂದರೆ ಹಿರಿಯ ಭಕ್ತ; ಹನುಮಂತ 'ಶಿರಿಯ-ತಿರುವಡಿ', ಕಿರಿಯ ಭಕ್ತ! ಆ ದಿನ ಸಂಜೆ ವಸಂತೋತ್ಸವ, ರಾತ್ರಿ ಗಜವಾಹನ. ಮುಂದೆ ಏಳನೆಯ ದಿನ ಬೆಳಗ್ಗೆ ಸೂರ್ಯಪ್ರಭ(ಮಂಡಲ)ವಾಹನ, ರಾತ್ರಿ ಚಂದ್ರಪ್ರಭ(ಮಂಡಲ)ವಾಹನ.

ಎಂಟನೆಯ ದಿನವೇ ರಥೋತ್ಸವ (ಅಥವಾ ರಥಯಾತ್ರೆ). ಬೆಳಗ್ಗೆ ಮಲೆಯಪ್ಪನನ್ನು ನಾಚ್ಚಿಯಾರರೊಡನೆ ಅಲಂಕೃತರಥದ ಮೇಲೆ ಕೂರಿಸಿ ಬೀದಿಗಳ ಮೇಲೆ ತೇರನ್ನು ಎಳೆದು ತರುತ್ತಾರೆ. ತೇರಿನ ಮೇಲಿರಿರುವ ಶ್ರೀನಿವಾಸನನ್ನು ನೋಡಿದರೆ ಪುನರ್ಜನ್ಮವಿಲ್ಲವೆಂದು ಜನರ ನಂಬಿಕೆ. ಆ ರಾತ್ರಿ ಅಶ್ವವಾಹನ.

ಮರುದಿನ, ಎಂದರೆ ಕಡೆಯ ದಿನ, ಬೆಳಗ್ಗೆ ಉತ್ಸವಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಉತ್ಸವ ಮಾಡಿ, ಮಂಗಳಗಿರಿ-ವಾಹನದಲ್ಲಿ ವರಾಹಸ್ವಾಮಿಯ ಗುಡಿಯೆದುರು ತಂದು ಸ್ವಾಮಿಪುಷ್ಕರಿಣಿಯ ವರಾಹತೀರ್ಥದಲ್ಲಿ ಹರಿದ್ರಾಚಂದನಚೂರ್ಣಾಭಿಷೇಕ, ಅವಭೃಥಸ್ನಾನವನ್ನು ನಡೆಸುತ್ತಾರೆ. ಇದಕ್ಕೆ ತೀರ್ಥವಾರಿ-ತಿರುಮಂಜನ ಎಂದೂ ಹೆಸರಿದೆ. ಉತ್ಸವಮೂರ್ತಿಗಳೊಂದಿಗೆ ಸುದರ್ಶನಚಕ್ರಕ್ಕೂ (ಚಕ್ರತ್ತಾಳ್ವಾರ್) ಸ್ನಾನ ನಡೆಯುತ್ತದೆ; ನೆರೆದವರೆಲ್ಲ ಕೊಳದಲ್ಲಿ ಸ್ನಾನಮಾಡುತ್ತಾರೆ. ಅನಂತರ ಉತ್ಸವರು ತಿರುಚ್ಚಿಯ ಮೇಲೆ ಗುಡಿಗೆ ಹಿಂದಿರುಗುತ್ತಾರೆ. ಆಗ ಗರುಡಧ್ವಜವನ್ನು ಕೆಳಗಿಳಿಸಿ ಒಂಬತ್ತು ದಿನಗಳ ಉತ್ಸವ ಮುಗಿಯಿತೆಂದು ಘೋಷಿಸುತ್ತಾರೆ; ಇದೇ ಧ್ವಜಾವರೋಹಣ. ಮಲೆಯಪ್ಪನೂ ನಾಚ್ಚಿಯಾರರೂ ಕಲ್ಯಾಣಮಂಡಪಕ್ಕೆ ಬಂದು ಅಲ್ಲಿ ಬಿಡಾರ ಮಾಡುತ್ತಾರೆ.

ಇದು ಉತ್ಸವದ ಕ್ರಮ. ಮೊದಲಿಗೆ ಬೆಟ್ಟದ ಮೇಲೆ ಊರು ಇರಲಿಲ್ಲವಾಗಿ, ಈ ಉತ್ಸವ ನಡೆಯುವುದು ಸಾಧ್ಯವೂ ಇಲ್ಲದೆ, ನಡೆದರೆ ಸ್ವಾರಸ್ಯವೂ ಇರದಂತಾಗಿದ್ದಿತು. ಜನ ನೆರೆದರೆ ಉತ್ಸವವಲ್ಲವೆ? ಹೀಗಾಗಿ ವಿಧಿಯಂತೆ ಗುಡಿಯಲ್ಲಿ ಧ್ವಜಾರೋಹಣವನ್ನು ನಡೆಸಿ, ಉತ್ಸವಮೂರ್ತಿಯನ್ನು ಬೆಟ್ಟದ ಕೆಳಗೆ ತಿರುಚ್ಚಾನೂರಿಗೆ ತಂದು ಅಲ್ಲಿ ಬ್ರಹ್ಮೋತ್ಸವವನ್ನು ವಿಧಿಯಂತೆ ನಡೆಸಿ ಅವಭೃಥವಾದಮೇಲೆ ಮತ್ತೆ ಬೆಟ್ಟದ ಮೇಲೆ ಒಯ್ಯುತ್ತಿದ್ದರೆಂದು 'ತಿರುಮಲೆ-ಒಳುಗು'ವಿನಿಂದ ತಿಳಿದುಬರುತ್ತದೆ. ರಾಮಾನುಜರು ಇದು ಸರಿಯಲ್ಲವೆಂದು ಬಗೆದು, ಬೆಟ್ಟದ ಮೇಲೇ ಗುಡಿಯ ಸುತ್ತ ಬೀದಿಗಳನ್ನೂ ಮನೆಗಳನ್ನೂ ಕಟ್ಟಬೇಕೆಂದು ಸೂಚಿಸಿ ಅಲ್ಲೇ ಬ್ರಹ್ಮೋತ್ಸವವು ನಡೆಯುವ ಏರ್ಪಾಟು ಮಾಡಿದರಂತೆ.

ಅಧಿಕಮಾಸವಿದ್ದ ವರ್ಷ, ನವರಾತ್ರಿಯಂದು ಮಾಮೂಲಾಗಿ ನಡೆಯುವ ಬ್ರಹ್ಮೋತ್ಸವವಲ್ಲದೆ, ಇನ್ನೊಂದು ಬ್ರಹ್ಮೋತ್ಸವವೂ ಕಾಲೋತ್ಸವವಾಗಿ ನಡೆಯುತ್ತದೆ. ಆಗ (ನವರಾತ್ರಿಯ) ಉತ್ಸವದಲ್ಲಿ ಧ್ವಜಾರೋಹಣ ಮತ್ತು ಅವಭೃಥ—ಇವೆರಡು ವಿಧಿಗಳನ್ನು ಬಿಟ್ಟು ಉಳಿದ ವಿಧಿಗಳು ಜರುಗುತ್ತವೆ. ಶ್ರದ್ಧೋತ್ಸವವಾಗಿ ಬ್ರಹ್ಮೋತ್ಸವವನ್ನು ಸೇವಾರ್ಥಿಗಳ ಅನುಕೂಲವಿದ್ದಂತೆ ಯಾವಾಗಲಾದರೂ ಮಾಡಬಹುದು. ಬೆಟ್ಟದ ಗುಡಿಯಲ್ಲಿ ಇಂಥ ಬ್ರಹ್ಮೋತ್ಸವಗಳು ಹಲವಾರು ಬಾರಿ ನಡೆಯುವ ವಾಡಿಕೆಯಿದೆ. ಕ್ರಿಸ್ತಾಬ್ದ 1551ರ ಶಾಸನ, ವರ್ಷದಲ್ಲಿ ಹನ್ನೊಂದು ಬ್ರಹ್ಮೋತ್ಸವಗಳು ನಡೆಯುತ್ತಿದ್ದು

ವೆಂದು ಸೂಚಿಸುತ್ತದೆ. ಈಗ ವರ್ಷದಲ್ಲಿ ನಾಲ್ಕು ಬ್ರಹ್ಮೋತ್ಸವಗಳು ನಡೆಯುತ್ತವೆ. ಮುಖ್ಯವಾದುದು ಮೇಲೆ ಹೇಳಿದ ನವರಾತ್ರಿಯದು. ಇದು ಮಾನವ-ಬ್ರಹ್ಮೋತ್ಸವ ವೆನಿಸಿಕೊಳ್ಳುತ್ತದೆ. ಇದಲ್ಲದೆ ಕಾರ್ತಿಕಮಾಸದ ಕೈಶಿಕ-ಏಕಾದಶಿ (ರಾಕ್ಷಸ-ಬ್ರಹ್ಮೋತ್ಸವ), ಮುಕ್ಕೋಟಿ-ದ್ವಾದಶೀ (ದೈವಬ್ರಹ್ಮೋತ್ಸವ) ಮತ್ತು ರಥಸಪ್ತಮಿ (ಆರ್ಷಬ್ರಹ್ಮೋತ್ಸವ) —ಈ ದಿನಗಳಲ್ಲೂ ಬ್ರಹ್ಮೋತ್ಸವವೇ ನಡೆಯುವುದೆಂದು ಎಣಿಕೆ.

ವಾರ್ಷಿಕ-ಬ್ರಹ್ಮೋತ್ಸವವಾದನಂತರ ಪುಷ್ಪಯಾಗವನ್ನೂ ನಡೆಸುವ ಕ್ರಮವಿದೆ. ಈ ಸಂದರ್ಭದಲ್ಲಿ ಬಗೆಬಗೆಯ ಸುಗಂಧಿಪುಷ್ಪಗಳನ್ನು ಮಂತ್ರಪೂರ್ವಕವಾಗಿ ಉತ್ಸವ ಮೂರ್ತಿಗೆ ಸಮರ್ಪಿಸುತ್ತಾರೆ. ದೇವರ ಮುಖವೊಂದು ಕಾಣಿಸುವಂತೆ ಬಿಟ್ಟು ಉಳಿದೆಲ್ಲವನ್ನೂ ಹೂಗಳಿಂದ ಮುಚ್ಚಿ ಯಜ್ಞವೇದಿಕೆಯಂತೆಯೆ ಸಿಂಗರಿಸುತ್ತಾರೆ. ನಡುಯುಗದಲ್ಲಿ ಆರಂಭವಾದ ಈ ಉತ್ಸವವು 1606ರವರೆಗೂ ನಡೆಯುತ್ತಿದ್ದು ಕಾರಣಾಂತರದಿಂದ ನಿಂತುಹೋಯಿತು. ಇದನ್ನು 1983ರಲ್ಲಿ ಮತ್ತೆ ನಡೆಸಲು ಆರಂಭಿಸಿದರು.

ವೈಖಾನಸಶಾಸ್ತ್ರದ ದೃಷ್ಟಿಯಿಂದ ವರ್ಷಕ್ಕೊಮ್ಮೆ ಶ್ರವಣ-ನಕ್ಷತ್ರದಲ್ಲಿ ನಡೆಯುವ ಪವಿತ್ರೋತ್ಸವ ಮುಖ್ಯವಾದುದು. ಮನುಷ್ಯಮಾತ್ರದವರಾದ ಅರ್ಚಕರು ಆರಾಧನೆಯನ್ನು ವಿಧ್ಯುಕ್ತವಾಗಿ, ಸಂಪೂರ್ಣವಾಗಿ ನಡೆಸಲಾರರು. ಅನೇಕ ಕಾರಣಗಳಿಂದ ನಿತ್ಯ-ನೈಮಿತ್ತಿಕಪೂಜೆಯಲ್ಲಿ ಲೋಪ-ದೋಷಗಳು ಆವಾಪ-ಉದ್ವಾಪಗಳು ಒದಗಿಯೇ ಒದಗುತ್ತವೆ. ಇವಕ್ಕೆ ಪ್ರಾಯಶ್ಚಿತ್ತರೂಪವಾಗಿ ನಡೆಯುವುದು ಪವಿತ್ರೋತ್ಸವ. ಇಲ್ಲಿ ವೇದಪಾರಾಯಣ ಪ್ರಧಾನವಾದ ವಿವರ. ಸಾಳುವ-ನರಸಿಂಹನು 1493ರಲ್ಲಿ ಇದನ್ನು ಐದು ದಿನಗಳ ಉತ್ಸವವಾಗಿ ಆರಂಭಮಾಡಿದಂತೆ ಸೂಚನೆಯಿದೆ. ಆದರೆ ಮುಂದೆ ಇದು ಬಳಕೆಯಿಂದ ತಪ್ಪಿಹೋಯಿತು. ಮತ್ತೆ ಇದು ಮೊದಲಾದಾಗ ಶ್ರಾವಣ-ಶುಕ್ಲ-ದಶಮಿಯಿಂದ ಮೂರು ದಿನಗಳ ಉತ್ಸವವಾಗಿದೆ. ಬಿಳಿ ಮತ್ತು ನಾಲ್ಕು ಬಣ್ಣಗಳಲ್ಲಿ ಅದ್ದಿದ ರೇಷ್ಮೆ, ಹತ್ತಿದಾರಗಳನ್ನು ಮಣಿಗಳಂತೆ ಹೊಸೆದು ಮಾಡಿದ ಪವಿತ್ರಗಳಿಂದ ದೇವರನ್ನು ಅಲಂಕರಿಸುತ್ತಾರಾಗಿ ಇದು ಪವಿತ್ರೋತ್ಸವವೆನಿಸಿಕೊಳ್ಳುತ್ತದೆ.

ಸಾಳುವ-ನರಸಿಂಹನೇ 1468ರಲ್ಲಿ ಏರ್ಪಡಿಸಿದ ತೆಪ್ಪೋತ್ಸವವು ಗುಡಿಯ ನೆರೆಯಲ್ಲಿರುವ ಸ್ವಾಮಿಪುಷ್ಕರಿಣಿಯ ನಡುವೆ ಇರುವ ನೀರಾಳಿಮಂಟಪದಲ್ಲಿ ಫಾಲ್ಗುಣ ಮಾಸದಲ್ಲಿ ಐದು ದಿನಗಳು ನಡೆಯುತ್ತದೆ. ವೇದಪಾರಾಯಣ, ನಾಗಸ್ವರವಾದನ ಈ ಉತ್ಸವದಲ್ಲಿ ಸೇರಿಕೊಳ್ಳುತ್ತವೆ.

ಇನ್ನೂ ಒಂದು ಮುಖ್ಯವಾದ ಉತ್ಸವವೆಂದರೆ ಕೋಯಿಲ್-ಆಳ್ವಾರ್-ತಿರುಮಂಜನ. ಇದು ವರ್ಷದಲ್ಲಿ ನಾಲ್ಕು ಬಾರಿ ನಡೆಯುತ್ತದೆ—ಅಣಿವರ-ಆಸ್ಥಾನ, ಬ್ರಹ್ಮೋತ್ಸವ, ದೀಪಾವಳಿ-ಆಸ್ಥಾನ ಮತ್ತು ಯುಗಾದಿ-ಆಸ್ಥಾನಗಳ ಸಂದರ್ಭಗಳಲ್ಲಿ. ಗರ್ಭಗುಡಿಯೂ ಸೇರಿದಂತೆ ಇಡೀ ಗುಡಿಯ ಆವರಣವನ್ನೆಲ್ಲ ತೊಳೆದು ಶುದ್ಧಿಗೊಳಿಸುವುದು ಈ ಉತ್ಸವದ ಉದ್ದೇಶ.

1562ರಲ್ಲಿ ಸಿದ್ಧವಾದ ಒಂದು ಶಾಸನದಲ್ಲಿ ಈ ಗುಡಿಯಲ್ಲಿ ನಡೆಯುವ

ಉತ್ಸವಗಳ ದೊಡ್ಡ ಪಟ್ಟಿಯೇ ಇದೆ. ಆಳ್ವಾರರ ಪಾಶುರಗಳಲ್ಲೂ ಬೆಟ್ಟದ ಮೇಲೆ ನಡೆಯುವ ಉತ್ಸವಗಳ ಉಲ್ಲೇಖವಿದೆ. ಈಗಲೂ ಪ್ರತಿತಿಂಗಳೂ ಶ್ರವಣನಕ್ಷತ್ರದಲ್ಲಿ ವೇಂಕಟೇಶ್ವರನಿಗೆ, ಪುನರ್ವಸುನಕ್ಷತ್ರದಲ್ಲಿ ರಾಮನಿಗೆ, ರೋಹಿಣೀನಕ್ಷತ್ರದಲ್ಲಿ ಕೃಷ್ಣನಿಗೆ ಆಸ್ಥಾನೋತ್ಸವಗಳು ನಡೆಯುತ್ತವೆ. ನಿತ್ಯಕಟ್ಟಳೆ-ಉತ್ಸವಗಳೂ ವಿಶೇಷಕಟ್ಟಳೆ-ಉತ್ಸವಗಳೂ ಈ ಗುಡಿಯಲ್ಲಿರುವಂತೆ ಬೇರೆಲ್ಲಿಯೂ ಕಾಣಸಿಗದು. ಕೆಲವೊಂದು ವಿಚಿತ್ರವಾಗಿಯೂ ಇದೆ. ನಿದರ್ಶನಕ್ಕೆ ಪ್ರಣಯಕಲಹೋತ್ಸವ. ಶ್ರೀನಿವಾಸನಿಗೂ ಪದ್ಮಾವತಿಗೂ ಆದ ಜಗಳವನ್ನೇ ಮಹೋತ್ಸವವಾಗಿಸಿಬಿಟ್ಟರು! ವರ್ಷದಲ್ಲಿ 250 ತಿರುಕ್ಕೋಡಿ-ತಿರುನಾಳ್-ಉತ್ಸವಗಳಿದ್ದುದೂ, ಒಂದೊಂದರಲ್ಲೂ ಅತಿರಸಪಡಿ ನಿವೇದನವಾಗಬೇಕೆಂಬ ಕಟ್ಟಳೆಯಿದ್ದುದೂ ಶಾಸನಗಳಲ್ಲಿ ಕಾಣಸಿಗುತ್ತದೆ (1551ರಷ್ಟು ಹಿಂದೆಯೇ). ಆಗಮೋಕ್ತ, ಆರ್ಜಿತ ಎರಡರ ನಡುವೆ ಇಲ್ಲಿನ ದೇವರಿಗೆ ನಿತ್ಯೋತ್ಸವವೇ!



ಹದಿನಾರು

ಹಿನ್ನೆಲೆಯ ಕೆಲವು ಕಥೆಗಳು

ಬೆಟ್ಟದ ಗುಡಿಯನ್ನು ಕುರಿತು ಹಲವಾರು ಕಥೆಗಳು ಬಳಕೆಯಲ್ಲಿವೆ. ಬಹುಮಟ್ಟಿಗೆ ಎಲ್ಲ ಪುರಾಣಗಳೂ ವೇಂಕಟಾಚಲ-ಮಾಹಾತ್ಮ್ಯೆಯನ್ನು ವಿವರವಾಗಿ, ಅನೇಕ ಅಧ್ಯಾಯಗಳಲ್ಲಿ ಬಣ್ಣಿಸುತ್ತ ಕಥೆಗಳನ್ನು ಕಾಣಿಸುತ್ತವೆ. ಆದರೆ ವರಾಹಪುರಾಣದಲ್ಲಿ ಭೂಗೋಳೋಪಾಖ್ಯಾನವೆಂಬ ಖಂಡದಲ್ಲಿ ಧರಣೀ-ವರಾಹಸಂವಾದರೂಪವಾಗಿ ಬರುವ ಮಾಹಾತ್ಮ್ಯೆ ಪ್ರಸಿದ್ಧವಾದುದು. ಇಲ್ಲಿ ಬರುವ ಕಥೆಗಳನ್ನು ಅವಲಂಬಿಸಿಯೇ ವೇಂಕಟೇಶ್ವರನ ನೂರೆಂಟು ಹೆಸರುಗಳಲ್ಲಿ (ಅಷ್ಟೋತ್ತರಶತನಾಮ) ಹಲವು ಹೆಸರುಗಳು ಸಿದ್ಧವಾಗಿವೆ. ಈ ಹೆಸರುಗಳು ಒದಗಿದ ಸಂದರ್ಭಗಳನ್ನು ಪೋಣಿಸಿದರೆ ಅದೇ ಒಂದು ನೀಳ್ಗತೆಯಾಗುತ್ತದೆ.

ಈ ಕಥೆಗಳಲ್ಲಿ ಹೆಚ್ಚೂಕಡಮೆ ಕಾಲ್ಪನಿಕವೆನ್ನಬಹುದಾದ ವಿವರಗಳೇ ಎದ್ದು ನಿಲ್ಲುವುವು. ಕೆಲವೊಮ್ಮೆ ಇತಿಹಾಸದ ನೆರಳೂ ಬೀಳುತ್ತದೆ. ಕಲ್ಪನೆಗಳ ಕಾಡಿನಲ್ಲಿ ಐತಿಹಾಸಿಕವೆಂಬ ಎಡೆಗಳನ್ನು ಗುರುತಿಸುವುದು ಕಷ್ಟ. ಆದರೆ ಇತಿಹಾಸದ ಆಸರೆಯಿರದೆ ಕಲ್ಪನೆಗಳಿಗೆ ಸ್ವಾರಸ್ಯವಿರದಷ್ಟೆ. ಇತಿಹಾಸದ ಹರವನ್ನು ಅಡಗಿಸಿಕೊಂಡ ಕೆಲವು ಕಥೆಗಳನ್ನು ಇಲ್ಲಿ ಕೊಟ್ಟಿದೆ.

ವರಾಹಕ್ಷೇತ್ರ

ಕಥೆಗಳ ಮಾಲೆ ವರಾಹಕಲ್ಪವೃತ್ತಾಂತದಿಂದ ಶುರುವಾಗುತ್ತದೆ. ಹಿಂದೆ, ಸಾಗರ ಗಳೆಲ್ಲ ಕಲೆತುಹೋಗಿ, ಬೆಟ್ಟಗುಡ್ಡಗಳೆಲ್ಲ ಬೆಂಕಿಯಲ್ಲಿ ಬೆಂದು ಬೂದಿಯಾಗಿ, ಭೂಮಿಯು ಕರಗಿ ನೀರಾಗಿ, ಬೆಂಕಿಯೂ ಅಡಗಿ, ಗಾಳಿಯೊಂದೇ ಬೀಸುತ್ತ, ಸಾವಿರ ಯುಗಗಳ ರಾತ್ರಿ ಇದ್ದಿತು. ರಾತ್ರಿ ಮುಗಿಯುವ ವೇಳೆಗೆ ವಿಷ್ಣುವು ಘೋರವಾದ ಬಿಳಿಯ ಹಂದಿಯ ರೂಪವನ್ನು ತಳೆದು, ನೀರಿನ ನಡುವೆ ನುಗ್ಗಿ ನೀರನ್ನೆಲ್ಲ ಕದಡಿ ಚೆಲ್ಲಾಡುತ್ತಾನೆ. ಪುರಾಣದ ವರ್ಣನೆ 'ಶ್ವೇತಂ ವರಾಹದೇಹಂ ಚ ಸರ್ವಯಜ್ಞಮಯಂ ಶಿವಮ್। ಅತಿಭೀಮಂ ಮಹಾರೌದ್ರಮ್ ಆಸಾದ್ಯ ತರಸಾ ತದಾ' ಇತ್ಯಾದಿಯಾಗಿದೆ. ವರಾಹರೂಪೀ ವಿಷ್ಣುವು ಗಟ್ಟಿಯಾಗಿ ಅರಚುತ್ತ ಪಾತಾಳವನ್ನು ಹೊಕ್ಕು ಹಿರಣ್ಯಾಕ್ಷನೆಂಬ ರಾಕ್ಷಸನೊಂದಿಗೆ ಕಾದು ಅವನನ್ನು ತನ್ನ ಕೋರೆದಾಡೆಗಳಿಂದ ಸೀಳಿ, ಅಲ್ಲಿ ಅಡಗಿದ್ದ ಭೂಮಿಯನ್ನು ಅದೇ ಕೋರೆದಾಡೆಗಳಿಂದ ಎತ್ತಿ ನಿಲ್ಲಿಸುತ್ತಾನೆ. ಎಲ್ಲ ಪ್ರಾಣಿಗಳಿಗೂ

ಆಸರೆಯಾದ ಭೂಮಿ ಹೀಗೆ ಮತ್ತೆ ನಿಂತುಕೊಂಡಿತು; ಸಾಗರಗಳು ಬೇರೆಬೇರೆ ಯಾದುವು, ಲೋಕಗಳೂ ತಂತಮ್ಮ ನೆಲೆಗಳಲ್ಲಿ ನಿಂತುವು, ಜೀವಿಗಳು ಉಸಿರಾಡ ತೊಡಗಿದುವು.

ಕಲ್ಪಾಂತರದಲ್ಲಿ ಕಾಲಾಗ್ನಿರುದ್ರರೂಪಿಯಾದ, ಸರ್ವಜ್ಞಮಯನಾದ ಇವನೇ ಎಲ್ಲ ಜೀವಿಗಳ ಅಂತರ್ಯಾಮಿಯೆಂದು ಅಲ್ಲಿ ಬರುವ ಒಕ್ಕಣೆ. ಪ್ರಾಣಿಗಳೆಲ್ಲದರ ಹಿತಕ್ಕೆಂದು ವಿಷ್ಣುವು ಭೂಮಿಯಲ್ಲೇ ಒಂದು ಕಡೆ ನೆಲೆಗೊಳ್ಳುವ ಮನಸ್ಸು ಮಾಡಿ, ವೈಕುಂಠ ಲೋಕದಲ್ಲಿ ತಾನು ವಿಹರಿಸುತ್ತಿದ್ದ ಕ್ರೀಡಾಚಲವನ್ನೇ ಇಲ್ಲಿಗೆ ತರಲು ಗರುಡನನ್ನು ಕಳುಹಿಸುತ್ತಾನೆ. ಇದೇ ಶೇಷಾಕಾರದಲ್ಲಿರುವ ನಾರಾಯಣಗಿರಿ; ಅಪ್ರಾಕೃತಪರ್ವತ; ಪಂಚೋಪನಿಷದಾತ್ಮಕ. ಈ ಬೆಟ್ಟವನ್ನೇರಿ ಸ್ವಾಮಿಪುಷ್ಕರಿಣೀಕೊಳದ ದಂಡೆಯ ಮೇಲೆ ಶ್ವೇತವರಾಹರೂಪಿಯಾದ ವಿಷ್ಣುವು ನೆಲೆಸುತ್ತಾನೆ.

ಅಲ್ಲಿ ಅವನು ನೆಲೆಸಿದಾಗ ಅವನ ಆಕಾರ ತುಂಬ ಘೋರವಾಗಿದ್ದಿತು. ಲೋಕಪಾಲಕರೂ ದೇವತೆಗಳೂ ಮುನಿಗಳೂ ಮರುದ್ಗಣಗಳೂ ವಸುಗಳೂ ಆದಿತ್ಯರೂ "ಭಯಂಕರವಾದ, ಅದ್ಭುತವಾದ ಈ ರೂಪವನ್ನು ಬಿಟ್ಟು ಮನುಷ್ಯರನ್ನು ಸಲಹಲು ಸೌಮ್ಯರೂಪವನ್ನು ಧರಿಸು" ಎಂದು ಬೇಡಿಕೊಳ್ಳುತ್ತಾರೆ. ಅದರಂತೆ ಅವನು ಪ್ರಸನ್ನನಾಗಿ ಸೌಮ್ಯರೂಪವನ್ನು ತಳೆದು ನಿಲ್ಲುತ್ತಾನೆ. "ವೈಕುಂಠಕ್ಕಿಂತ ಈ ವೇಂಕಟ ಬೆಟ್ಟವೇ ಹೆಚ್ಚಿನದು, ಲಕ್ಷ್ಮಿಯೊಂದಿಗೆ ಮತ್ತು ಭೂಮಿಯೊಂದಿಗೆ ಇಲ್ಲಿಯೇ ನಿಲ್ಲುತ್ತೇನೆ. ಮನುಷ್ಯರಿಗೆ ಬೇಡಿದ ವರಗಳನ್ನು ನೀಡುತ್ತೇನೆ" ಎಂದು ಆಶ್ವಾಸನೆ ಕೊಡುತ್ತಾನೆ. ಇದೇ ಅರ್ಥವನ್ನು ಈ ಪ್ರಸಿದ್ಧವಾದ ಶ್ಲೋಕವು ಹೇಳುತ್ತದೆ—

ಮಾಯಾವೀ ಪರಮಾನಂದಸ್ತಕ್ಷ್ಮಾ ವೈಕುಂಠಮುತ್ತಮಮ್।
ಸ್ವಾಮಿಪುಷ್ಕರಿಣೀತೀರೇ ರಮಯಾ ಸಹ ಮೋದತೇ॥

ಹೀಗೆ ಬೆಟ್ಟದ ಮೇಲೆ ಮೊತ್ತಮೊದಲು ನೆಲೆಸಿದ್ದು ಶ್ವೇತವರಾಹ. ಪಾದ್ಮ ಪುರಾಣದಲ್ಲಿ ಕಥೆ ಹೀಗೆ ಮುಂದುವರೆಯುತ್ತದೆ (ಕ್ಷೇತ್ರಕಾಂಡ, ೨೮ನೇ ಅಧ್ಯಾಯ). ವರಾಹವು ಸ್ವಾಮಿಪುಷ್ಕರಿಣೀಕೊಳದ ಪಶ್ಚಿಮಭಾಗದಲ್ಲಿ ಒಂದಾನೊಂದು ದೊಡ್ಡ ಬಿಲ(ಹುತ್ತ)ದೊಳಗೆ ವಾಸಿಸುತ್ತ, ಕೆಳಗಿನ ಲೋಕಗಳಲ್ಲೂ ಮೇಲಿನ ಲೋಕಗಳಲ್ಲೂ ಮನಸ್ಸು ಬಂದಂತೆ ಸಂಚರಿಸುತ್ತಿದ್ದಿತು. ಕಿನ್ನರದಂಪತಿಗಳು ದುರ್ವಾಸಮುನಿಯಿಂದ ಶಾಪವನ್ನು ಪಡೆದು, ಅದರ ಬಿಡುಗಡೆಗಾಗಿ ಈ ಬೆಟ್ಟದ ಮೇಲೆ ಕಿರಾತ (ಬೇಡ) ದಂಪತಿಗಳಾಗಿ ಹುಟ್ಟಿದರು. ಅವರಿಗೆ ಚಿತ್ರಾಂಗದನೆಂಬ ಮಗನಾದ. ಬೇಡನು ಒಮ್ಮೆ ಆಲೆದಾಡುತ್ತಿರುವಾಗ ಆಲದ ಮರದ ಪೊಟರೆಯೊಂದರಲ್ಲಿ ಬಂಗಾರದಂತೆ ಹೊಳೆಯುವ ತೆನೆಗಳುಳ್ಳ ಕಾಡುಹಿಪ್ಪಲಿ ಬಳ್ಳಿಯನ್ನು (ಪ್ರಿಯಂಗು, ಇದು ಹಂದಿಗೆ ಪ್ರಿಯವಾದ ತಿನಿಸು, ಆದುದರಿಂದ ಇದಕ್ಕೆ ಕೋಲವಲ್ಲಿ ಎಂದೂ ಹೆಸರಿದೆ) ಕಂಡು, ತೆನೆಗಳನ್ನು ಕುಯ್ದುಕೊಂಡು ಬಂದು ಹೆಂಡತಿಗೆ ಕೊಟ್ಟ. ಬೇಡತಿಯು ತನ್ನ ಬೀಡಿನ ಸುತ್ತಲೂ ಈ ಬಳ್ಳಿಗಳನ್ನೇ ಬೆಳೆಸಿದಳು. ಸೊಗಸಾದ ಬೆಳೆ ಬರಲಾಗಿ, ಅದನ್ನು

ಕಾಡುಪ್ರಾಣಿಗಳು ಹಾಳುಮಾಡದಂತೆ ಬೇಲಿಯನ್ನು ಕಟ್ಟಿ ಬೇಡನು ರಾತ್ರಿ ಅದರ ನಡುವೆಯೇ ಮಲಗಿದ್ದ.

ಹೀಗಿರಲು ಒಂದು ನಡುರಾತ್ರಿ ಬಿಳಿಯ ಹಂದಿಯೊಂದು ಈ ಹಿಪ್ಪಲಿತೋಟಕ್ಕೆ ನುಗ್ಗಿ ಬೆಳೆಯನ್ನು ಮೇಯತೊಡಗಿತು. ಬೇಡನಿಗೆ ಅದನ್ನು ನೋಡಿ ಆಶ್ಚರ್ಯವಾಯಿತು, ಆವರೆಗೆ ಅಂಥ ಹಂದಿಯನ್ನು ನೋಡಿಯೇ ಇರಲಿಲ್ಲ. ಮರುದಿನ ಇಷ್ಟು ಅಪುರೂಪದ ಪ್ರಾಣಿ ಅಲ್ಲಿರುವುದನ್ನು ತನ್ನ ನಾಡಿನ ಒಡೆಯನಿಗೆ ತಿಳಿಸಿದ. ಒಡೆಯನಿಗೂ ಕುತೂಹಲ ಕೆರಳಿ, ಬೇಡನೊಂದಿಗೆ ತೋಟಕ್ಕೆ ಬಂದು, ಬಳಿಯೇ ಇದ್ದ ಸ್ವಾಮಿಪುಷ್ಕರಿಣೇ ಕೊಳದಲ್ಲಿ ಮಿಂದು, ಬಿಲ್ಲುಬಾಣಗಳನ್ನು ಹಿಡಿದು ಇಡೀ ರಾತ್ರಿ ಹಂದಿಯ ಬರವನ್ನೇ ಕಾಯುತ್ತ ಕುಳಿತ. ರಾತ್ರಿಯು ಮುಗಿಯುತ್ತಿರುವ ವೇಳೆಗೆ ಬಿಳಿಯ ಹಂದಿಯು ಹುತ್ತದಿಂದ ಮೇಲೆದ್ದು ಬಂದಿತು. ಮನುಷ್ಯರಿರುವುದನ್ನು ಕಂಡು ಓಡತೊಡಗಲು, ಬೇಡರ ನಾಡಿನ ಒಡೆಯನು ಅದರ ಬೆನ್ನಟ್ಟಿಕೊಂಡು ಹೊರಟ. ಅವನ ಕಣ್ಣು ತಪ್ಪಿಸಿ ಹಂದಿಯು ಹುತ್ತದೊಳಗೆ ಮರೆಯಾಯಿತು.

ಬೇಡರ ಒಡೆಯನಿಗೆ ಅದನ್ನು ಪಡೆದುಕೊಳ್ಳಬೇಕೆಂಬ ಗೀಳು ಹತ್ತಿತು. ಹುತ್ತದೊಳಗೆ ಹೋದ ಹಂದಿ ಹೊರಗೆ ಬರುವುದನ್ನೇ ಕಾದು, ಊಟ ನಿದ್ರೆಗಳನ್ನೂ ಬಿಟ್ಟು ಕುಳಿತ. ಹಂದಿಯನ್ನು ನೋಡುವ ಬಯಕೆಯಿದ್ದರೆ ಹುತ್ತದ ಮೇಲೆ ಹಸುವಿನ ಹಾಲೆರೆಯಬೇಕೆಂದು ಅಶರೀರವಾಣಿ ಕೇಳಿಸಿತು. ಒಡೆಯನು ಅಚ್ಚರಿಗೊಂಡು ತನ್ನ ಬೀಡಿಗೆ ಹಿಂದಿರುಗಿ, ಹಾಲೆರೆಯುವ ಸಿದ್ಧತೆಗಳನ್ನು ಮಾಡಿಕೊಂಡು ತನ್ನ ಪರಿವಾರದೊಂದಿಗೆ ಊರಜನರೊಂದಿಗೆ ಸ್ವಾಮಿಪುಷ್ಕರಿಣೀತೀರಕ್ಕೆ ಹಿಂದಿರುಗಿದ. ಹುತ್ತದ ಮೇಲೆ ಹಾಲೆರೆಯತೊಡಗಿದೊಡನೆ ಹುತ್ತದ ಮಣ್ಣು ಕರಗುತ್ತಿದ್ದಂತೆ ವರಾಹಸ್ವಾಮಿಯ ದಿವ್ಯಮಂಗಳವಿಗ್ರಹ ಮೇಲೆದ್ದು ತೋರಿಕೊಳ್ಳತೊಡಗಿತು. ಮೂರ್ತಿಯ ಮಂಡಿಗಳವರೆಗೆ ಬರುವ ವೇಳೆಗೆ ಒಡೆಯನು ತಂದಿದ್ದ ಹಾಲು ಮುಗಿದುಹೋಯಿತು! ಅಲ್ಲಿಂದ ಕೆಳಗೆ ಹುತ್ತವನ್ನು ಅಗೆಯಬೇಕೆಂದು ಜನ ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಆಗ ವರಾಹವು ಬೇಡರ ಒಡೆಯನಿಗೆ 'ನನ್ನ ಕಾಲು ನಿನಗೆ ಕಾಣಿಸದು, ನಿನ್ನ ಆಯಾಸವೆಲ್ಲ ಬರಿದು! ನಿನಗೆ ಕಂಡಷ್ಟೇ ರೂಪವನ್ನು ಕಲ್ಲಿನಲ್ಲಿ ಕಡೆಯಿಸು. ವೈಖಾನಸ ಅರ್ಚಕರನ್ನು ಕರೆಯಿಸಿ ಪೂಜೆಗೆ ಅಣಿ ಮಾಡು!' ಎಂದು ಹೇಳಿ ಮರೆಯಾಯಿತು. ಅದರಂತೆ ಮೂಡಿಕೊಂಡುದೇ ಸ್ವಾಮಿಪುಷ್ಕರಿಣಿಯ ದಂಡೆಯ ಮೇಲಿರುವ ವರಾಹ ಸ್ವಾಮಿ ಶಿಲಾವಿಗ್ರಹ. ಇದು 'ಜಾನುದಘ್ನ-ಸಮೂದ್ಭೂತಪೋತ್ರಿ'ಯಾಗಿಯೇ ಉಳಿದಿದೆ; ಎಂದರೆ ಮಂಡಿಯಿಂದ ಕೆಳಗೆ ಕಾಣಿಸುವುದಿಲ್ಲ.

ವರಾಹಸ್ವಾಮಿಯನ್ನು ಪೂಜೆಮಾಡತೊಡಗಿದ ಬೇಡರ ನಾಡಿನ ವಿವರವನ್ನೂ ಪುರಾಣ ಒದಗಿಸಿದೆ. ಅದು ನಾರಾಯಣಗಿರಿಗೆ (ಎಂದರೆ, ಈಗ ಗುಡಿಯಿರುವ ಬೆಟ್ಟಕ್ಕೆ) ದಕ್ಷಿಣದಿಕ್ಕಿನಲ್ಲಿ ಎರಡು ಯೋಜನ ದೂರದಲ್ಲಿರುವ ಸುವರ್ಣಮುಖರೀ ನದಿಯ ದಕ್ಷಿಣಭಾಗದಲ್ಲಿರುವ ಗಂಡಶೈಲಕ್ಕೆ ಎದುರಾಗಿದ್ದಿತೆಂದು ಇಲ್ಲಿ ಹೇಳಲಾಗಿದೆ. ಪುರಾಣವು ಅಲ್ಲೊಂದು ಗ್ರಾಮವಿದ್ದುದನ್ನೂ ತಿಳಿಸುತ್ತದೆ.

ಶ್ರೀನಿವಾಸ ನೆಲೆಗೊಂಡ ಕಥೆ

ಆದರೆ ವರಾಹನು ಅಲ್ಲಿ ಬೇರೆಯವರಿಗೆ ತಿಳಿಯದಂತೆ ನೆಲೆಸಿದ್ದನೆಂದು ಮಾತಿದೆ—

ದೇವ್ಯಾ ವಸುಧಯಾ ಸಾರ್ಧಂ ಸ್ವಾಮಿಪುಷ್ಕರಿಣೀತಟೇ।
ಸುಖಮಾಸ್ತೇ ಸುರೇಶಾನಃ ಸುಖೀ ರಹಸಿ ಸುಂದರಃ॥

ಇದರ ಅರ್ಥ—ಬೇಡರ ನಾಡನ್ನು ಬಿಟ್ಟು ಉಳಿದವರಿಗೆ ಅಲ್ಲಿ ವರಾಹಾವಿರ್ಭಾವ ವಾದುದು ತಿಳಿಯಲಿಲ್ಲವೆಂದು. ಶ್ರೀನಿವಾಸ ಅಲ್ಲಿಗೆ ಬರುವವರೆಗೂ ವರಾಹಸ್ವಾಮಿ ಅಜ್ಞಾತನಾಗಿಯೇ ಇದ್ದ. ವರಾಹಕ್ಷೇತ್ರದಲ್ಲಿ ಶ್ರೀನಿವಾಸನು ನೆಲೆಗೊಂಡುದಕ್ಕೂ ಕಥೆಯೊಂದಿದೆ.

ಭೃಗುಮುನಿಯು ಬ್ರಹ್ಮ-ವಿಷ್ಣು-ಮಹೇಶ್ವರರನ್ನು ಪರೀಕ್ಷೆಮಾಡಿದ ಸಂದರ್ಭದಲ್ಲಿ ವಿಷ್ಣುವಿನ ಮೇಲೆ ಲಕ್ಷ್ಮಿ ಮುನಿದು ವೈಕುಂಠವನ್ನು ಬಿಟ್ಟು ಕೊಲ್ಹಾಪುರವನ್ನು ಸೇರಿದಳಷ್ಟೆ. ಅನಂತರ ಲಕ್ಷ್ಮಿಯನ್ನು ಅರಸುತ್ತ ವಿಷ್ಣುವು ಅಲೆದಾಡಿ ವೇಂಕಟಬೆಟ್ಟಕ್ಕೆ ಬರುತ್ತಾನೆ. ಅಲ್ಲಿ ಸ್ವಾಮಿಪುಷ್ಕರಿಣೀಕೊಳದ ಪಕ್ಕದಲ್ಲಿ ಹುಣಸೇಮರವೊಂದರ ಬುಡದಲ್ಲಿ ದೊಡ್ಡದಾಗಿ ಬೆಳೆದಿದ್ದ ಹುತ್ತವೊಂದರಲ್ಲಿ ಮನೆಮಾಡಿಕೊಂಡು ಇರುತ್ತಿದ್ದ. ಚೋಳ ರಾಜನ ಹಸುಗಳನ್ನು ಮೇಯಿಸುವ ತಾಣ ಅದು. ಒಂದು ಹಸು ದಿನವೂ ಈ ಹುತ್ತದ ಮೇಲೆ ತನ್ನ ಕೆಚ್ಚಲ ಹಾಲನ್ನೆಲ್ಲ ಸುರಿದು ಹೋಗುತ್ತಿತ್ತು; ಅರಮನೆಗೆ ಹಿಂದಿರುಗಿದಾಗ ಹಾಲನ್ನು ಕರೆಯುತ್ತಿರಲಿಲ್ಲ. ಇದನ್ನು ಒಂದು ದಿನ ತಿಳಿದುಕೊಂಡ ಗೊಲ್ಲನು ಮರುದಿನ ಹಸುವಿನ ಹಿಂದೇ ಹೋಗಿ ಅದು ಹುತ್ತದ ಮೇಲೆ ಹಾಲು ಕರೆಯತೊಡಗಿದೊಡನೆ ಸಿಟ್ಟಿಗೆದ್ದು ತನ್ನ ಕೈಯಲ್ಲಿದ್ದ ಕೊಡಲಿಯಿಂದ ಹುತ್ತವನ್ನು ಹೊಡೆಯಹೋಗುತ್ತಾನೆ. ಹುತ್ತದೊಳಗಿದ್ದ ವಿಷ್ಣುವಿಗೆ ಕೊಡಲಿಯ ಪೆಟ್ಟು ಬಿದ್ದು ತಲೆಯೊಡೆದು ರಕ್ತ ಧಾರೆ ಧಾರೆಯಾಗಿ ಏಳು ತಾಳೆಮರಗಳಷ್ಟು ಉದ್ದ ಹರಿಯ ತೊಡಗುತ್ತದೆ. ಇದನ್ನು ಕಂಡೊಡನೆ ಗೊಲ್ಲನು ಎದೆಯೊಡೆದು ಸಾಯುತ್ತಾನೆ.

ಗೊಲ್ಲನು ಸಂಜೆ ಬಾರದಿರಲು ಅವನನ್ನರಸಿಕೊಂಡು ಜನ ಬಂದು, ಈ ವಿಚಿತ್ರವಾದ ಸಾವನ್ನು ದೊರೆಗೆ ತಿಳಿಸಲು, ದೊರೆ ಬಂದು ನೋಡುತ್ತಾನೆ. ಆಗ ಮನುಷ್ಯರೂಪದಲ್ಲಿದ್ದ ವಿಷ್ಣುವು (ಶ್ರೀನಿವಾಸನು) ತಾನು ಬಡವನೆಂದೂ ದಿಕ್ಕಿಲ್ಲದವ ನೆಂದೂ ನಿಲ್ಲಲು ನೆಲೆಯಿಲ್ಲದವನೆಂದೂ ದೊರೆಗೆ ತಿಳಿಸಿ, ತನ್ನನ್ನು ಹೀಗೆ ಹಿಂಸೆಗೆ ಈಡುಮಾಡಿದ ಗೊಲ್ಲನ ಪಾಪಕ್ಕಾಗಿ ದೊರೆಗೆ ಪಿಶಾಚರೂಪವನ್ನು ತಳೆಯುವಂತೆ ಶಾಪವಿಡುತ್ತಾನೆ. ಅನಂತರ ದೊರೆಯ ಬೇಡಿಕೆಯನ್ನು ಮನ್ನಿಸಿ ಅವನಿಗೆ ಶಾಪವಿಮೋಚನೆಯ ಉಪಾಯವನ್ನೂ ತಿಳಿಸುತ್ತಾನೆ. ಈ ದೊರೆಯೇ ಮುಂದೆ ಆಕಾಶರಾಜನಾಗಿ ಹುಟ್ಟುತ್ತಾನೆ.

ತಲೆಗೆ ಪೆಟ್ಟು ತಿಂದ ಶ್ರೀನಿವಾಸನು ಅದಕ್ಕೆ ಔಷಧವನ್ನು ಹುಡುಕುತ್ತ

ಅಲೆದಾಡುತ್ತಿದ್ದಾಗ ಬಿಸಿಲಿನ ಬೇಗೆಯಿಂದ ಪಾರಾಗಲು ಸ್ವಾಮಿಪುಷ್ಕರಿಣೀಕೊಳದ ದಂಡೆಯ ಮೇಲಿದ್ದ ದೊಡ್ಡ ಹುತ್ತವೊಂದರೊಳಗೆ ನುಸುಳಿಕೊಳ್ಳುತ್ತಾನೆ. ಅದು ವರಾಹನ ನೆಲೆ. ಅವನು ಬೇಟೆಗೆಂದು ಹೊರಗೆ ಹೋಗಿರುತ್ತಾನೆ. ಹಿಂದಿರುಗಿ ಬಂದು, ತನ್ನ ಹುತ್ತವನ್ನು ಶ್ರೀನಿವಾಸನು ಆಕ್ರಮಿಸಿಕೊಂಡಿರುವುದನ್ನು ಕಂಡು ಸಿಟ್ಟಿಗೆದ್ದು ಅವನೊಂದಿಗೆ ಕಾದಾಡುತ್ತಾನೆ. ಶ್ರೀನಿವಾಸನು ವರಾಹನನ್ನು ಸೋಲಿಸಿ ಓಡಿಸುತ್ತಾನೆ. ಆದರೆ ಅನಂತರ ಕನಿಕರಗೊಂಡು, ಅವನನ್ನು ಕರೆದು ತನ್ನ ಕಥೆಯನ್ನೆಲ್ಲ ಹೇಳಿ, ತಾನು ಕಲಿಯುಗ ಮುಗಿಯುವವರೆಗೂ ಭೂಲೋಕದಲ್ಲೇ ಇರಬೇಕಾದುದರಿಂದ ಈ ಬೆಟ್ಟದ ಮೇಲೆ ತನಗೊಂದು ನೆಲೆ ಮಾಡಿಕೊಡಬೇಕೆಂದು ಕೇಳುತ್ತಾನೆ.

ಅದೆಲ್ಲವೂ ವರಾಹಕ್ಷೇತ್ರವೇ; ವರಾಹಸ್ವಾಮಿಯೇ ಅದಕ್ಕೆಲ್ಲ ಒಡೆಯ. ಶ್ರೀನಿವಾಸನ ಬೇಡಿಕೆಗೆ ವರಾಹನು ಸ್ವಾಮಿಪುಷ್ಕರಿಣಿಯ ನೆರೆಯಲ್ಲಿಯೇ ಅವನಿಗೊಂದು ತಾಣವನ್ನು ಕೊಡುವುದಾಗಿ ಹೇಳುತ್ತಾನೆ. ಆ ಜಾಗವನ್ನು ಉಚಿತವಾಗಿ ಕೊಡಲಾರೆ ನೆಂದೂ ಕ್ರಯಕ್ಕೆ ಕೊಳ್ಳಬೇಕೆಂದೂ ವರಾಹನು ಹೇಳಲು, ಶ್ರೀನಿವಾಸನು "ನನ್ನಲ್ಲಿ ಹಣವಿಲ್ಲ, ಕ್ರಯಕ್ಕೆ ಕೊಳ್ಳಲಾರೆ. ಆದರೆ ನನ್ನನ್ನು ಕಾಣಲು ಕಲಿಯುಗದಲ್ಲಿ ಭಕ್ತರು ಬಹುಮಂದಿ ಬರುತ್ತಾರೆ, ಕಾಣಿಕೆಯನ್ನು ತರುತ್ತಾರೆ. ಹಾಗೆ ಬರುವಾಗ ನಿನ್ನ ದರ್ಶನವನ್ನು ಮಾಡಿಯೇ ನನ್ನ ದರ್ಶನಕ್ಕೆ ಬರಬೇಕೆಂದೂ, ನಿನಗೆ ನೈವೇದ್ಯವನ್ನಿಟ್ಟ ಮೇಲೇ ನನಗೆ ನೈವೇದ್ಯ ಸಲ್ಲಬೇಕೆಂದೂ ಕಟ್ಟುಮಾಡುತ್ತೇನೆ. ಇಷ್ಟರಿಂದ ತೃಪ್ತಿಗೊಂಡು ನನ್ನ ಆಲಯಕ್ಕೆ ತಾಣವನ್ನು ನೀಡು" ಎನ್ನುತ್ತಾನೆ.

ಅದರಂತೆ ವರಾಹನಿಂದ ಪಡೆದುಕೊಂಡ ಭೂಮಿಯ ಮೇಲೇ ಶ್ರೀನಿವಾಸನ ಗುಡಿ ಏಳುತ್ತದೆ. ಈ ಗುಡಿಗೆ ಹೋಗುವ ಮೊದಲು ಸ್ವಾಮಿಪುಷ್ಕರಿಣಿಯಲ್ಲಿ ಮಿಂದು, ದಡದ ಮೇಲಿರುವ ವರಾಹವನ್ನು ನೋಡಿಕೊಂಡು ಬರಬೇಕೆಂಬ ಕಟ್ಟುಪಾಡು; ಯಾತ್ರಿಕರಲ್ಲದೆ, ಸ್ಥಳಪುರೋಹಿತರೂ ಇದನ್ನು ತಿಳಿಸುತ್ತಾರೆ. 'ತಿರುಮಲೈ-ಒಳಗು' ಗ್ರಂಥದಲ್ಲಿ ಬರುವ ಒಂದು ವಿವರ ಸ್ವಾರಸ್ಯವಾದುದು. ರಾಮಾನುಜರ ಕಾಲದಲ್ಲಿ ವರಾಹನ ಗುಡಿ ಸ್ವತಂತ್ರವಾಗಿದ್ದಿತೆಂದು ತೋರುತ್ತದೆ. ಅಲ್ಲಿಯೂ ಪ್ರತ್ಯೇಕವಾಗಿ ಬ್ರಹ್ಮೋತ್ಸವ, ಬಲಿ, ಪೀಠಾರ್ಚನೆ ಮೊದಲಾದುವು ನಡೆಯುತ್ತಿದ್ದುವೆಂದೂ ಕಾಣುತ್ತದೆ. ಆದರೆ ರಾಮಾನುಜರು ವರಾಹಸ್ವಾಮಿಗೆ ಹೀಗೆ ಪ್ರತ್ಯೇಕವಾದ ಪೂಜೆ ಸರಿಯಲ್ಲ ವೆಂದೂ, ಮೊದಲು ನಿವೇದನವನ್ನಿರಿಸಿದರೆ ಸಾಕೆಂದೂ ವಿಧಿಸಿದರಂತೆ.

ಅಂತೂ ವರಾಹಕ್ಷೇತ್ರವಾದರೂ ಕಿರಾತರ ದೇವರಾದ ವರಾಹಸ್ವಾಮಿ ಹಿಂದೆ ಸರಿದು ಊರವರ ದೇವರಾಗಿ ಶ್ರೀನಿವಾಸನು ಮುಂದಾದ. ಸಿದ್ಧಾಂತದಲ್ಲಿ ವರಾಹ, ಶ್ರೀನಿವಾಸರು ಬೇರೆಬೇರೆಯಲ್ಲ; ಇಬ್ಬರೂ ವಿಷ್ಣುವಿನ ಎರಡು ರೂಪಗಳೇ. ಆದರೆ ಸ್ಥಳಮಾಹಾತ್ಮ್ಯೆಯಲ್ಲಿ ಅವರನ್ನು ಬೇರೆಬೇರೆಯೆಂದೇ ಗುರುತಿಸಿದ್ದಾರೆ. ವರಾಹ ಅಲ್ಲಿ ಮೊದಲಿದ್ದ ದೈವವೆಂಬುದನ್ನೂ ಸ್ಪಷ್ಟಪಡಿಸಿದ್ದಾರೆ. ಬೇಡರ ದೇವರು ವರಾಹವೆಂದು ಹಿಂದಿನ ಕಥೆ ಸೂಚಿಸುವುದಷ್ಟೆ? ಶ್ರೀನಿವಾಸ ಊರವರ ದೇವರು ಎಂದು ಧ್ವನಿ. ವರಾಹ ಕಾಣಿಸಿಕೊಂಡುದು ಕಿರಾತನಿಗೆ; ಶ್ರೀನಿವಾಸ ಒಲಿದುದು ಚೋಳರಾಜನಿಗೆ.

ಅಷ್ಟು ಮಾತ್ರವಲ್ಲ, ವರಾಹನು ಶ್ರೀನಿವಾಸನಿಗೆ ನೆಲೆಸಲು ಭೂಮಿಯನ್ನು ನೀಡಿದುದಲ್ಲದೆ, ಶ್ರೀನಿವಾಸನ ಅಡುಗೆಯನ್ನು ಸಿದ್ಧಪಡಿಸಲು ತನ್ನ ಅಡುಗೆಯವಳಾದ ವಕುಳಾದೇವಿಯನ್ನೂ ಕಳುಹಿಸಿದನಂತೆ! ಈಗಲೂ ಬೆಟ್ಟದ ಗುಡಿಯ ಅಡುಗೆಶಾಲೆ (ಪೋಟ್ಟು)ಯಲ್ಲಿ ವಕುಳಾದೇವಿಯ ಮೂರ್ತಿಯಿದ್ದು, ಅದರ ಸಮ್ಮುಖದಲ್ಲಿಯೇ ಅಡುಗೆಯೆಲ್ಲ ತಯಾರಾಗಬೇಕೆಂಬ ಕಟ್ಟಳೆಯಿದೆ; ಇದನ್ನು ಪೋಟ್ಟು-ನಾಚ್ಚಿಯಾರ್ ಎಂದು ಕರೆಯುತ್ತಾರೆ. ಈಕೆ ಕೃಷ್ಣಾವತಾರಸಮಯದಲ್ಲಿ ಯಶೋದೆಯಾಗಿದ್ದವಳಂತೆ.

ಆದರೆ ಈ ಕಥೆಯಲ್ಲಿ ಬರುವ ಚೋಳರಾಜ ಯಾರೆಂದಾಗಲೀ ಅವನ ರಾಜ್ಯವೆಲ್ಲಿದ್ದಿತೆಂದಾಗಲೀ ಪುರಾಣ ತಿಳಿಸುವುದಿಲ್ಲ. ಈ ಪ್ರಾಂತ್ಯದಲ್ಲಿ ಚೋಳರಾಜರ ಒಡೆತನವಿದ್ದುದು ಯಾವಾಗ ಎನ್ನುವುದೂ ಸ್ಪಷ್ಟವಾಗುವುದಿಲ್ಲ. ಹುತ್ತದ ಮೇಲೆ ಹಸು ಹಾಲು ಕರೆಯುವ ವಿವರವೇನೋ ಹಲವಾರು ಜಾನಪದ ಕಥೆಗಳಲ್ಲಿ ಬರುವ ಪ್ರತಿಮೆ.

ತೋಂಡಮಾನನ ಕಥೆ

ವರಾಹನಿಂದ ಶ್ರೀನಿವಾಸನು ಭೂಮಿಯನ್ನು ಪಡೆದುಕೊಳ್ಳುವ ಮೊದಲೇ ಶ್ರೀನಿವಾಸನ ಸಂಪರ್ಕಕ್ಕೆ ಬಂದಿದ್ದ ಚೋಳರಾಜನು ಮುಂದೆ ಆಕಾಶರಾಜನಾಗಿ ಹುಟ್ಟುತ್ತಾನೆ. ಚಂದ್ರವಂಶದ ಚೋಳ-ಅರಸರಲ್ಲಿ ಸುವೀರನೆಂಬುವನ ಮಗ ಸುಧರ್ಮ. ಚೋಳರಾಜರು ದಕ್ಷಿಣದೇಶವನ್ನೆಲ್ಲ ಆಳುತ್ತಿದ್ದ ಕಾಲ ಅದು. ಅವನ ಮಗ ಆಕಾಶರಾಜ. ಇವನು ಸಣ್ಣ ಮಗುವಾಗಿದ್ದಾಗಲೇ, ರಾಜ ಸುಧರ್ಮನು ಒಂದು ದಿನ ಬೇಟೆಗೆ ಹೋಗಿದ್ದಾಗ ಈಗಿನ ಕಪಿಲತೀರ್ಥದ ಬಳಿ ಧನಂಜಯನೆಂಬ ನಾಗಲೋಕದ ರಾಜನ ಮಗಳನ್ನು ಕಂಡು ಮೋಹಗೊಂಡು ಗಾಂಧರ್ವವಿಧಿಯಿಂದ ಮದುವೆಯಾಗುತ್ತಾನೆ; ತನ್ನಲ್ಲಿ ಹುಟ್ಟುವ ಮಗನಿಗೆ ರಾಜ್ಯ ಕೊಡುವುದಾಗಿ ನಾಗಕನ್ನಿಕೆ ಸುಧರ್ಮನಿಂದ ವಾಗ್ದಾನ ಪಡೆಯುತ್ತಾಳೆ. ಆಕೆ ನಾಗಲೋಕಕ್ಕೆ ಹಿಂದಿರುಗಿ, ಮುಂದೆ ಗಂಡುಮಗುವೊಂದನ್ನು ಹೆರುತ್ತಾಳೆ. ಸುದ್ದಿ ಸುಧರ್ಮನಿಗೆ ಮುಟ್ಟಿ ಅವನು ನಾಗಲೋಕಕ್ಕೆ ಬರುತ್ತಾನೆ. ಮಗುವನ್ನು ನೋಡಿ ಸಂತೋಷಪಡುತ್ತಿರುವಾಗ, ನಾಗಕನ್ನಿಕೆ ಅವನ ವಾಗ್ದಾನವನ್ನು ನೆನಪಿಗೆ ತರುತ್ತಾಳೆ. ಹಿರಿಯ ಮಗ ಆಕಾಶರಾಜನಿರುವಾಗ ಕಿರಿಯನಿಗೆ ರಾಜ್ಯವನ್ನು ಕೊಡುವುದು ಹೇಗೆಂಬ ಚಿಂತೆ ಅವನನ್ನು ಕಾಡತೊಡಗುತ್ತದೆ.

ಬಹುವಾಗಿ ಚರ್ಚೆ ನಡೆದ ಮೇಲೆ ಮಗುವನ್ನು ತೊಂಡೆಬಳ್ಳಿಗಳ ಬುಟ್ಟಿಯಲ್ಲಿಟ್ಟು ಸಮುದ್ರದಲ್ಲಿ ತೇಲಿಬಿಡಬೇಕೆಂದೂ, ಮಗು ಉಳಿದುಕೊಂಡು ದಡ ಮುಟ್ಟಿದರೆ ಅರ್ಧರಾಜ್ಯವನ್ನು ಸುಧರ್ಮನು ಕೊಡತಕ್ಕದ್ದೆಂದೂ ನಿಶ್ಚಯವಾಯಿತು. ಅದರಂತೆ ಮೂರೇ ತಿಂಗಳ ಹಸಿಗೂಸನ್ನು ಸಮುದ್ರದಲ್ಲಿ ತೇಲಿಬಿಡಲಾಯಿತು. ಮಗುವಿನ ಅದೃಷ್ಟದಿಂದ, ಹಲವು ವರ್ಷಗಳಾದಮೇಲೆ ಮಗು ಸುಧರ್ಮನ ರಾಜ್ಯದ ಸಮುದ್ರ ತೀರವನ್ನೇ ಸೇರುತ್ತದೆ. ನಾಗಕನ್ನಿಕೆಯೂ ಸುಧರ್ಮನೂ ಮಗುವನ್ನು ಎತ್ತಿಕೊಂಡು, ತೊಂಡೆಬಳ್ಳಿಯ ಬುಟ್ಟಿಯಿಂದಲೇ ಬದುಕಿದವನಾದುದರಿಂದ 'ಆದೊಂಡೈಮಾನ್'

(ಅಥವಾ, ತೋಂಡಮಾನ್) ಎಂದು ಹೆಸರಿಡುತ್ತಾರೆ. ಸುಧರ್ಮನು ತನ್ನ ರಾಜ್ಯವನ್ನು ಇಬ್ಭಾಗ ಮಾಡಿ, ಒಂದು ಭಾಗವನ್ನು ಆಕಾಶರಾಜನಿಗೂ ಇನ್ನೊಂದು ಭಾಗವನ್ನು ತೋಂಡಮಾನನಿಗೂ ಕೊಡುತ್ತಾನೆ. ತೋಂಡಮಾನನ ಭಾಗವಿದ್ದುದು ಪುದುಕ್ಕೋಟೆಯ ಬಳಿ ಎಂದು ಹೇಳುತ್ತಾರೆ.

ಇತಿಹಾಸದ ಪುಟಗಳಲ್ಲಿ, ಬೆಟ್ಟದ ಆಸುಪಾಸಿನಲ್ಲಿ ಆಳುತ್ತಿದ್ದ ಕುರುಂಬ ನಾಡೊಡೆಯರನ್ನು ಕ್ರಿಸ್ತಾಬ್ದ ಏಳೆಂಟನೆಯ ಶತಮಾನದಲ್ಲಿ ಚೋಳರಾಜರು ಸೆಣೆಸಿ, ಸೋಲಿಸಿ, ಪ್ರದೇಶವನ್ನು ತಮ್ಮ ವಶಮಾಡಿಕೊಂಡರು. ತಂಜಾವೂರಿನ ಕುಲೋತ್ತುಂಗ ಅಥವಾ ಕರಿಕಾಲಚೋಳನೆಂಬುವನ ಮಗ ಆದೊಂಡೈ. ಇವನು ಈ ಕಡೆ ಆಳುತ್ತಿದ್ದ ಪಲ್ಲವರಾಜರನ್ನು ಕರ್ಣಾಟಕಕ್ಕೂ ನೀಲಗಿರಿಗೂ ಓಡಿಸಿ, ಇಲ್ಲಿ ತನ್ನ ಅಧಿಕಾರವನ್ನು ಬೇರೂರಿಸಿದನು. ಅವನಿಂದಾಗಿ ನಾಡು 'ತೊಂಡಮಂಡಲ' (ಆದೊಂಡೈಮಂಡಲಂ) ಎನಿಸಿಕೊಂಡಿತು. ಕುರುಂಬರ ಬಲವಾದ ನಗರವಾದ ನಾರಾಯಣಪುರ(ನಾರಾಯಣ ವರಂ)ವನ್ನು ಈ ಆದೊಂಡೈ ಅಥವಾ ತೋಂಡಮಾನ್-ಚಕ್ರವರ್ತಿ ವಶಪಡಿಸಿಕೊಂಡು ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಈ ನಾರಾಯಣಪುರವು ಈಗ ಉತ್ತರ ಆರ್‌ಕಾಡಿಗೆ ಸೇರಿದ ಕಾರ್ವೇಟಿನಗರದಲ್ಲಿದೆ. ಅದು ಅರುಣಾನದಿಯ ದಂಡೆಯ ಮೇಲಿದ್ದು ನಗರಿ ಬೆಟ್ಟಸಾಲಿನ ಎದುರಾಗಿಯೇ ದಟ್ಟವಾದ ಕಾಡುಗಳಿಂದ ಕೂಡಿದ್ದಿತು; ಶ್ರೀನಿವಾಸನು ಬೆಟ್ಟದಿಂದ ಬಂದು ಈ ಕಾಡುಗಳಲ್ಲಿ ಓಡಿಯಾಡುತ್ತಿದ್ದನೆಂದು ಪ್ರತೀತಿ. ತೊಂಡಮಂಡಲ ತೋರಿಕೊಂಡುದು ಕ್ರಿಸ್ತಾಬ್ದ ಮೊದಲನೆಯ ಶತಮಾನದಲ್ಲಿ ಎಂಬ ಸೂಚನೆಯೂ ಒಂದಿದೆ.

ಪದ್ಮಾವತೀ-ಪರಿಣಯ

ಈ ತೋಂಡಮಾನನ ಮೊಮ್ಮಗ ನಾರಾಯಣರಾಜ. ಇವನ ಕಾಲದಲ್ಲಿ ಮಿಥಿಲೆಯಿಂದ ರಾಜ ಗೋವಸಂಬನನೆಂಬುವನು (?) ಈ ಕಡೆಗೆ ಬಂದಿದ್ದಾಗ ಇಲ್ಲಿಯೇ ಇರುವ ಮನಸ್ಸುಮಾಡಿದ. ನಾರಾಯಣರಾಜನು ತನ್ನ ರಾಜ್ಯದಲ್ಲಿ ಒಂದು ಭಾಗವನ್ನು ಅವನಿಗೆ ಕೊಟ್ಟು ಅಲ್ಲಿ ರಾಜ್ಯವನ್ನು ಕಟ್ಟಿಕೊಳ್ಳುವಂತೆ ಹೇಳಿದ. ಗೋವಸಂಬನ ರಾಜನಿಗೆ ನಾಲ್ವರು ಗಂಡುಮಕ್ಕಳು—ವೇಂಕಟರಾಜ, ಉಬಜಲರಾಜ (?), ಆಕಾಶರಾಜ ಮತ್ತು ಮಿತ್ರವರ್ಮರಾಜ. ಕಡೆಯವನಾದ ಮಿತ್ರವರ್ಮನ ಮಗನ ಹೆಸರೂ ಆಕಾಶರಾಜನೆಂದೇ. ಇವನಿಗೆ ಪದ್ಮಾವತಿಯೆಂಬ ಮಗಳೂ ವೇಸಂಬನನೆಂಬ ಮಗನೂ ಇದ್ದರು. ಪದ್ಮಾವತಿಯು ವೇಂಗಡಬೆಟ್ಟದೊಡೆಯನನ್ನು ಮದುವೆಯಾದಳು. ವೇಸಂಬನನಿಗೆ ಮಕ್ಕಳಿಲ್ಲದೆ, ಅವನ ತರುವಾಯ ರಾಜ್ಯವು ದೊಡ್ಡಪ್ಪನಾದ ವೇಂಕಟರಾಜನ ಮಕ್ಕಳಿಗೆ ಹಂಚಿಹೋಯಿತು.


ಹಿನ್ನೆಲೆಯ ಕಥೆಯಲ್ಲಿ ಆಕಾಶರಾಜನೂ ತೋಂಡಮಾನನೂ ಸೋದರರು; ಸುಧರ್ಮನ ಮಕ್ಕಳು. ನಾರಾಯಣವನದಲ್ಲಿ ಆಳುತ್ತಿದ್ದ ಆಕಾಶರಾಜನಿಗೆ ಎಲ್ಲ

ಸುಖಸಂಪತ್ತುಗಳು ಇದ್ದರೂ ಮಕ್ಕಳಾಗದ ಚಿಂತೆ ಕಾಡುತ್ತಲಿತ್ತು. ಅದಕ್ಕಾಗಿ ಯಜ್ಞವೊಂದನ್ನು ಮಾಡಲೆಣಿಸಿ, ಪೂರ್ವಭಾವಿಯಾಗಿ ಬಂಗಾರದ ನೇಗಿಲಿನಿಂದ ಭೂಮಿಯನ್ನು ಉಳುತ್ತಿರುವಾಗ ಬಂಗಾರದ ಕಮಲವೊಂದು ಕಾಣಿಸಿಕೊಂಡಿತು. ಆಶ್ಚರ್ಯದಿಂದ ಅದನ್ನೆತ್ತಿಕೊಂಡು ನೋಡಲು ಹೆಣ್ಣುಮಗುವೊಂದು ಕಮಲದ ಮೇಲೆ ಮಲಗಿದ್ದಿತು. ರಾಜನೂ ರಾಣಿಯಾದ ಧಾರಿಣೀದೇವಿಯೂ ಸಂತೋಷದಿಂದ ಈ ಮಗುವನ್ನು ತಮ್ಮ ಮಗಳೆಂದೇ ಸಾಕಿಕೊಂಡರು. ಅವಳೇ ಅಲರ್-ಮೇಲ್-ಮಂಗೆ ಅಥವಾ ಪದ್ಮಾವತಿ. ಅವಳು ದೊರೆತ ಭೂಮಿಯ ಮೇಲೇ ಮುಂದೆ ಕೊಳವೊಂದು ಒದಗಿ, ಪದ್ಮಸರೋವರವೆನಿಸಿಕೊಂಡಿತು. ಹೀಗೆ ಮಗು ದೊರೆತದ್ದು ಶುಭಸೂಚಕವಾಗಿ, ಮುಂದೆ ರಾಣಿಯ ಹೊಟ್ಟೆಯಲ್ಲಿ ವಸುದಾತನೆಂಬ ಮಗ ಹುಟ್ಟಿದ.

ಪದ್ಮಾವತಿಯು ಬೆಳೆದುನಿಂತಾಗ, ವೇಂಕಟದೊಡೆಯನು ಬೇಟೆಯಾಡುತ್ತ ಈ ಕಡೆ ಬಂದವನು ತೋಟವೊಂದರಲ್ಲಿ ಒಮ್ಮೆ ಪದ್ಮಾವತಿಯನ್ನು ನೋಡಿದ. ಪರಸ್ಪರವಾಗಿ ಅನುರಾಗ ಊರಿತು. ಮದವೇರಿದ ಆನೆಯೊಂದು ಪದ್ಮಾವತಿಯನ್ನೂ ಸಖಿಯರನ್ನೂ ಕಾಡುತ್ತಿದ್ದಾಗ ಕುದುರೆಯೇರಿ ಬಿಲ್ಲುಬಾಣ ಹಿಡಿದು ಬಂದಿದ್ದ ವೇಂಕಟೇಶನು ಆನೆಯನ್ನೋಡಿಸಿ ಪದ್ಮಾವತಿಯ ಗಮನವನ್ನು ಸೆಳೆದುಕೊಂಡನೆಂಬ ಸಂದರ್ಭವೂ ಪುರಾಣಕಥೆಗಳಲ್ಲಿದೆ. ವೇಂಕಟೇಶನು ಕಿರಾತನಂತೆ (ಬೇಡನಂತೆ) ಕಾಣಿಸಿಕೊಂಡನೆಂಬ ವಿವರವೂ ಇದೆ! ಕಿರಾತನಿಗೂ ಅರಸುಗುವರಿಗೂ ನಡುವೆ ಪ್ರಣಯ ಬೆಳೆದರೆ ಮದುವೆಯಾಗುವುದು ಕಷ್ಟವಲ್ಲವೆ? ಅದಕ್ಕೆ ವಕುಳಾದೇವಿಯ ಮಧ್ಯಸ್ತಿಕೆ ಒದಗ ಬೇಕಾಯಿತು. ಹಿಂದೆಯೇ ಪರಿಚಿತಳಾದ ವಕುಳಾದೇವಿ ವೇಂಕಟೇಶನಿಗೆ ಅಡುಗೆಮಾಡಿ ಅವನನ್ನು ಮಗನಂತೆ ನೋಡಿಕೊಳ್ಳುತ್ತಿದ್ದವಳು.

ಆಕೆ ವೇಂಕಟಾಚಲದಿಂದ ದಕ್ಷಿಣಾಭಿಮುಖವಾಗಿ ಇಳಿದು, ಕಪಿಲತೀರ್ಥದಲ್ಲಿ ಮಿಂದು ತನ್ನ ಉದ್ದೇಶ ಕೈಗೂಡಿಸುವಂತೆ ಅಲ್ಲಿನ ಶಿವಾಲಯದಲ್ಲಿ ಬೇಡಿಕೆಯನ್ನು ಸಲ್ಲಿಸಿ, ಮುಂದೆ ನಾರಾಯಣವರಕ್ಕೆ ಬಂದು ರಾಣಿ ಧಾರಿಣೀದೇವಿಗೆ ವೇಂಕಟೇಶನು ಪದ್ಮಾವತಿಯಲ್ಲಿ ಅನುರಕ್ತನಾಗಿರುವುದನ್ನು ತಿಳಿಸುತ್ತಾಳೆ. ವೇಂಕಟೇಶನು ತನ್ನ ಪ್ರಯತ್ನವೂ ಇರಲೆಂದು ಕೊರವಂಜಿಯ ವೇಷವನ್ನು ತಳೆದು, ಕಾಮಾತುರಳಾಗಿ ಹಾಸಿಗೆ ಹಿಡಿದಿರುವ ಪದ್ಮಾವತಿಗೆ ತಕ್ಕ ಉಪಾಯವನ್ನು ಸೂಚಿಸುತ್ತಾನೆ. ಶುಕಮುನಿಯ ಪಾತ್ರವೂ ಇದೆ. ಇವೆಲ್ಲ ಕಪಟನಾಟಕಗಳ ಫಲವಾಗಿ ಪದ್ಮಾವತಿ ಮತ್ತು ವೇಂಕಟೇಶ ಇವರ ಮದುವೆ ಜರುಗುತ್ತದೆ.

ಈಗ್ಗೆ ಸುಮಾರು ಮುನ್ನೂರು-ನಾನ್ನೂರು ವರ್ಷಗಳಿಂದಲೂ ಜನರ ಕಲ್ಪನೆಯಲ್ಲಿ ಪದ್ಮಾವತೀಪರಿಣಯ (ಅಥವಾ, ಶ್ರೀನಿವಾಸಕಲ್ಯಾಣ) ಎಂಬುದು ಬೆಟ್ಟದ ಗುಡಿಯಲ್ಲಿ ಮುಖ್ಯವಾದೊಂದು ವಿವರವಾಗಿದೆ. ಸೇವಾರ್ಥಿಗಳು ನಡೆಸುವ ಕಲ್ಯಾಣೋತ್ಸವ ಜನಪ್ರಿಯವಾದ ಸೇವೆ. ತ್ರೇತಾಯುಗದಲ್ಲಿ ರಾಮಾವತಾರಸಂದರ್ಭದಲ್ಲಿ ರಾವಣನು ಅಪಹರಿಸಿಕೊಂಡು ಹೋದ ಮಾಯಾಸೀತೆ(ವೇದವತಿ)ಯೇ ಈಗ ಪದ್ಮಾವತಿಯಾಗಿ ಅವತರಿಸಿದಳೆಂದು ಕಥೆಯನ್ನು ಹೇಳುತ್ತಾರೆ. ದಂಡಕಾರಣ್ಯದಲ್ಲಿ ರಾಮ-ಲಕ್ಷ್ಮಣರಿಲ್ಲದ



ಅಲರ್-ಮೇಲ್-ಮಂಗೆ

ವೇಳೆಯಲ್ಲಿ ಸೀತೆಯನ್ನು ಹಾರಿಸಿಕೊಂಡು ಹೋಗಲು ಸಂನ್ಯಾಸಿವೇಷವನ್ನು ತಳೆದು ರಾವಣನು ಬಂದಾಗ ಅಗ್ನಿಯು ಅವನಿಗೆ "ನಿನಗೆ ಕಾಣುತ್ತಿರುವುದು ಮಾಯಾಸೀತೆ, ರಾಮ-ಲಕ್ಷ್ಮಣರು ಹೊರಡುವ ಮುನ್ನ ನಿಜವಾದ ಸೀತೆಯನ್ನು ನನ್ನಲ್ಲಿ ಇರಿಸಿ ಹೋಗಿದ್ದಾರೆ. ನೀನು ನನ್ನ ಮಿತ್ರನಾದುದರಿಂದ ನಿನಗೆ ನಿಜವಾದ ಸೀತೆಯನ್ನು ಒಪ್ಪಿಸುತ್ತೇನೆ" ಎಂದು ಸುಳ್ಳುಹೇಳಿ ನಿಜವಾದ ಸೀತೆಯನ್ನು ತನ್ನಲ್ಲಿ ಅಡಗಿಸಿಕೊಂಡು ಮಾಯಾಸೀತೆಯನ್ನು ರಾವಣನಿಗೆ ಕೊಟ್ಟುಕಳುಹಿಸುತ್ತಾನೆ. ಇವಳೇ ವೇದವತಿ.

ರಾವಣನ ಸಂಹಾರವಾದಮೇಲೆ ಸೀತೆಯು ತನ್ನ ಮೇಲಿನ ದೂರನ್ನೂ ಸಂಶಯವನ್ನೂ ನೀಗಿಸಿಕೊಳ್ಳುವುದಕ್ಕೆ ಅಗ್ನಿಪ್ರವೇಶಮಾಡಿದಳಷ್ಟೆ. ಆಗ ಅಗ್ನಿಯು ವೇದವತಿಯನ್ನು ತನ್ನೊಳಗೆ ಅಡಗಿಸಿಕೊಂಡು ನಿಜವಾದ ಸೀತೆಯನ್ನು ರಾಮನಿಗೆ ಒಪ್ಪಿಸುತ್ತಾನೆ. ಸೀತೆಯು ಕೃತಜ್ಞತೆಯಿಂದ "ನೀನು ವೇದವತಿಯನ್ನೂ ಮದುವೆಯಾಗ ಬೇಕೆಂದು" ರಾಮನನ್ನು ಕೇಳಿಕೊಳ್ಳಲು, ರಾಮನು ಶ್ರೀನಿವಾಸನಾಗಿ ಈ ಕೋರಿಕೆಯನ್ನು

ತೀರಿಸುತ್ತೇನೆ ಎಂದನಂತೆ. ವೇದವತಿಯೇ ಪದ್ಮಾವತಿಯಾಗಿ (ಅಲರ್-ಮೇಲ್-ಮಂಗೆ) ಶ್ರೀನಿವಾಸನನ್ನು ವರಿಸಿದಳೆಂದು ಕಥೆ. ಅಲರ್-ಮೇಲ್-ಮಂಗೆಯನ್ನು ವೇಂಕಟೇಶನಿಗೆ 'ಜೋಡಿಸಿ'ದವರು ರಾಮಾನುಜಾಚಾರ್ಯರು—ಆಕೆಯ ರೂಪವಿರುವ ಪದಕದಲ್ಲಿ.

ಈ ಕಥೆಗಳಲ್ಲಿ ಪದ್ಮಾವತಿಯೇ ಬೇರೆ, ಲಕ್ಷ್ಮಿದೇವಿಯೇ ಬೇರೆ ಎನ್ನುವ ಕಲ್ಪನೆ ಅಡಗಿದೆ. ವೇದವತಿ ಆಕಾಶರಾಜನ ಮಗಳಾಗಿ ಹುಟ್ಟಿದಳು; ವೈಕುಂಠದಿಂದ ಹೊರಬಂದ ಲಕ್ಷ್ಮಿ ಕೊಲ್ಹಾಪುರದಲ್ಲಿ ನಿಂತಳು. ಪದ್ಮಾವತೀಪರಿಣಯದ ಸಂದರ್ಭದಲ್ಲಿ ಲಕ್ಷ್ಮೀದೇವಿಗೂ ಕರೆ ಹೋಗುತ್ತದೆ! ಸೂರ್ಯನು 'ವೇಂಕಟೇಶನಿಗೆ ಬಹಳ ಕಾಯಿಲೆ, ಪ್ರಾಣ ಉಳಿಯುವುದು ಕಷ್ಟ' ಎಂಬ ಸುಳ್ಳುಸಂದೇಶವನ್ನು ಒಯ್ದು ಕೊಲ್ಹಾಪುರದಿಂದ ಲಕ್ಷ್ಮಿ ವೇಂಕಟಾಚಲಕ್ಕೆ ಬರುವಂತೆ ಮಾಡುತ್ತಾನೆ! ಮಧುರೆಯ ಮೀನಾಕ್ಷಿಯಿದ್ದಂತೆ, ಈ ಪದ್ಮಾವತಿಯೂ ಮಾನುಷಸ್ತ್ರೀಯಾಗಿದ್ದವಳು ದೇವತೆಯ ನೆಲೆಗೇರಿದಂತೆ ತೋರುತ್ತದೆ. ಈ ಕಥೆಯನ್ನು ಕೆದಕಿ ನೋಡಿದರೆ ಈ ತಾತ್ಪರ್ಯ ಸ್ಫುರಿಸುತ್ತದೆ.

ಬೆಟ್ಟದ ಗುಡಿಯಲ್ಲಿ ಕಲ್ಯಾಣೋತ್ಸವವು (ವೈವಾಹಿಕೋತ್ಸವ, ಪೆಂಡಿಲಿ-ತಿರುನಾಳ್) ಕ್ರಿಸ್ತಾಬ್ದ 1554ರ ಸುಮಾರಿಗೆ ಮೊದಲಾಯಿತೆಂದು ತೋರುತ್ತದೆ. ತಾಳ್ಳಪಾಕಂ ತಿರುಮಲೆ-ಅಯ್ಯಂಗಾರ ಮಗ ತಾಳ್ಳಪಾಕಂ ತಿರುವೇಣಾಂಡಯ್ಯರ್ (ತಿರುವೇಂಕಟನಾಥ) ಮಲ್ಲವರಂ ಎಂಬ ಹಳ್ಳಿಯ ಉತ್ಪತ್ತಿಯನ್ನು (ನೂರನಲವತ್ತು ರೇಖೆ ಹೊನ್ನುಗಳು) ಈ ಉತ್ಸವಕ್ಕಾಗಿ ಬಿಟ್ಟುಕೊಟ್ಟಿದ್ದನೆಂದೂ, ಕಾರಣಾಂತರಗಳಿಂದ ಅದು ನಿಂತುಹೋಗಿದ್ದಿತೆಂದೂ, ಮತ್ತೆ ಅದನ್ನು ಅವನೇ ಏರ್ಪಡಿಸಿದನೆಂದೂ 1554ರ ಫೆಬ್ರುವರಿ 19ನೇ ದಿನದ ಶಾಸನವೊಂದು ತಿಳಿಸುತ್ತದೆ. ಅದಕ್ಕೆ ಮೊದಲೇ (1547ರಲ್ಲಿ) ಕೆಳಗಣ ತಿರುಪತಿಯಲ್ಲಿ ಐದು ದಿನಗಳ ವೈವಾಹಿಕೋತ್ಸವವು ಚಿತ್ತಿರೈಮಾಸದಲ್ಲಿ ನಡೆಯುವ ವ್ಯವಸ್ಥೆಯನ್ನು ತಾಳ್ಳಪಾಕಂ ಚಿನ್ನತಿರುಮಲ-ಅಯ್ಯಂಗಾರು ಮಾಡಿದ್ದರು. ಬೆಟ್ಟದ ಗುಡಿಯಲ್ಲಿ ಈ ಉತ್ಸವವು ಪಂಗುಣಿಮಾಸದಲ್ಲಿ ಐದು ದಿನಗಳು ನಡೆಯಬೇಕೆಂದು ಶಾಸನದ ವಿವರವಿದೆ. ಈ ಕಾಲಕ್ಕೆ ಮೊದಲು ಅಲ್ಲಿ ಕಲ್ಯಾಣೋತ್ಸವ ನಡೆಯುತ್ತಿದ್ದ ಉಲ್ಲೇಖವಿಲ್ಲ. ಈಗಲೂ ಇದನ್ನು ಬೆಟ್ಟದ ಗುಡಿಯಲ್ಲಿ ಕಾಲೋತ್ಸವವಾಗಿ ನಡೆಸುವ ವಾಡಿಕೆಯಿಲ್ಲ. ಇದು ಶ್ರದ್ಧೋತ್ಸವವೇ; ಸೇವಾರ್ಥಿಗಳು ಮಾಡಿಸಬೇಕಷ್ಟೆ, ಗುಡಿಯಲ್ಲಿ ತಾನಾಗಿ ನಡೆಯುವ ಉತ್ಸವವಲ್ಲ. ಶ್ರೀನಿವಾಸನಿಗೆ ಪದ್ಮಾವತಿಯ ಅಗತ್ಯ ಅಷ್ಟಾಗಿ ಇಲ್ಲವೆಂದೇ ಇದರ ಅರ್ಥವಲ್ಲವೆ?

ಗುಡಿ ಮೂಡಿಕೊಂಡ ಕಥೆ

ಕಥೆಯ ಪ್ರಕಾರ, ಶ್ರೀನಿವಾಸ-ಪದ್ಮಾವತಿಯರ ದಾಂಪತ್ಯ ಅಷ್ಟು ಸುಖಮಯವಾಗಿರಲಿಲ್ಲ. ಇವರ ಕಲ್ಯಾಣವಾದೊಡನೆ ಪದ್ಮಾವತಿಯೊಡಗೂಡಿ ವಕುಳಮಾಲಿಕೆಯೊಂದಿಗೆ ಶ್ರೀನಿವಾಸನು ಅಗಸ್ತ್ಯಾಶ್ರಮದಲ್ಲಿದ್ದನಂತೆ. ಆಗ ಮಾವ ಆಕಾಶರಾಜ ತೀರಿಕೊಂಡ. ಅನಂತರ ನಾರಾಯಣಪುರದಲ್ಲಿ ಆಕಾಶರಾಜನ ತಮ್ಮನಾದ ತೊಂಡಮಾನ

ನಿಗೂ ಆಕಾಶರಾಜನ ಮಗನಾದ ವಸುದಾತನಿಗೂ ರಾಜ್ಯಕ್ಕೋಸ್ಕರ ಹಗರಣ ನಡೆಯುತ್ತದೆ. ಇಬ್ಬರೂ ಶ್ರೀನಿವಾಸನ ನೆರವನ್ನು ಕೋರುತ್ತಾರೆ. ಪದ್ಮಾವತಿಯು ಶ್ರೀನಿವಾಸನನ್ನು ವಸುದಾತನಿಗೆ (ತನ್ನ ತಮ್ಮನಿಗೆ) ನೆರವಾಗುವಂತೆ ಸಲಹೆ ಮಾಡುತ್ತಾಳೆ. ಶ್ರೀನಿವಾಸನು ಸಂದರ್ಭದ ಸಂಕಟವನ್ನು ಅರಿತುಕೊಂಡು ತನ್ನ ಶಂಖ-ಚಕ್ರಗಳನ್ನು ಚಿಕ್ಕಮಾವ ತೋಂಡಮಾನನಿಗೆ ಕೊಟ್ಟು ತಾನು ಭಾವಮೈದುನ ವಸುದಾತನ ಕಡೆ ನಿಂತು ಹೋರಾಡುತ್ತಾನೆ. ಕದನ ನಡೆಯುತ್ತಿದ್ದಾಗ ಪದ್ಮಾವತಿಯು ನಡುವೆ ಬಂದು ತೋಂಡಮಾನನೂ ವಸುದಾತನೂ ಹಗರಣವನ್ನು ನಿಲ್ಲಿಸಿ ಸಮಾಧಾನದಿಂದ, ಸೌಹಾರ್ದದಿಂದ ಇರಬೇಕೆಂದು ಬೇಡಿಕೊಳ್ಳುತ್ತಾಳೆ. ಅಗಸ್ತ್ಯನೇ ಮೊದಲಾದವರೂ ಅವಳ ಮಾತನ್ನೇ ಎತ್ತಿಹಿಡಿಯಲು, ಶ್ರೀನಿವಾಸನು ತೋಂಡಮಾನ-ವಸುದಾತರ ನಡುವೆ ರಾಜ್ಯ, ಕೋಶ, ಸೈನ್ಯ, ಸಂಪತ್ತು ಮೊದಲಾದುವನ್ನೆಲ್ಲ ಸಮನಾಗಿ ಹಂಚಿ, ರಾಜಿ ಮಾಡಿಸುತ್ತಾನೆ.

ಅನಂತರ ತೋಂಡಮಾನನು ಶ್ರೀನಿವಾಸನ ಭಕ್ತನಾಗುತ್ತಾನೆ. ಶ್ರೀನಿವಾಸನು ಅವನನ್ನು ಕುರಿತು "ನಿನ್ನ ಅಣ್ಣನು ಮದುವೆಯಿಲ್ಲದೆ ಅಲೆಯುತ್ತಿದ್ದ ನನಗೆ ಮಗಳನ್ನು ಕೊಟ್ಟು ಗೃಹಸ್ಥನನ್ನಾಗಿ ಮಾಡಿದ. ಆದರೆ ನನಗೆ ಮನೆಯಿಲ್ಲದೆ ಅಲೆದಾಡುವ ಪರಿಸ್ಥಿತಿ ಹೋಗಿಲ್ಲ! ಆಕಾಶರಾಜನ ಅಳಿಯನಾಗಿ ಹೆಂಡತಿಯೊಂದಿಗೆ ನಿಲ್ಲಲು ನೆಲೆಯಿಲ್ಲದಿರುವುದು ಏನು ಚೆನ್ನು? ಆದುದರಿಂದ ನೀನು ನನಗೊಂದು ಆಲಯವನ್ನು ಕಟ್ಟಿಸಿಕೊಡು" ಎಂದು ಕೇಳಿಕೊಳ್ಳುತ್ತಾನೆ. ಅದರಂತೆ ಪದ್ಮಾವತಿಯೊಂದಿಗೆ ತೋಂಡಮಾನನು ವೇಂಕಟಾಚಲಕ್ಕೆ ಹೋಗಿ ಅಲ್ಲಿ ವರಾಹಸ್ವಾಮಿಯನ್ನು ಒಲಿಸಿಕೊಂಡು ಅವನಿಂದ ಕೊಂಚ ನೆಲವನ್ನು ಪಡೆದುಕೊಂಡು ಅಲ್ಲಿ ಶ್ರೀನಿವಾಸನಿಗೆ ದಿವ್ಯವಾದ, ಭವ್ಯವಾದ ಆಲಯವನ್ನು ಕಟ್ಟಿಸಿಕೊಡುತ್ತಾನೆ. ಆದರೆ ಪದ್ಮಾವತಿಯ ಗತಿಯೇನು? ಆಲಯದಲ್ಲಿ ಆಕೆಗೆ ಎಡೆಯಿಲ್ಲವಲ್ಲ!

ಒಟ್ಟಿನಲ್ಲಿ ಈ ಕಥೆಗಳಲ್ಲಿ ಶ್ರೀನಿವಾಸನಿಗೆ ಗೌರವ ತರುವಂಥ ವಿವರಗಳು ಕಡಮೆಯೇ! ಆದರೆ ದಿಟವಾಗಿ ನಡೆದಿರಬಹುದಾದ ಪ್ರಸಂಗಗಳನ್ನು ಅವಲಂಬಿಸಿ, ಅವುಗಳಿಗೆ ರೆಕ್ಕೆ ಪುಕ್ಕಗಳನ್ನೂ ರಂಗುರೂಪುಗಳನ್ನೂ ಹಚ್ಚಿ ದೇವತೆಗಳನ್ನೂ ಮನುಷ್ಯರನ್ನೂ ಒಂದೇ ಬುಟ್ಟಿಯಲ್ಲಿ ಕೂರಿಸಿ, ಕಲ್ಪನೆಯ ಮೆರುಗನ್ನು ಹಾಕಿದ್ದಾರೆನ್ನಬಹುದು. ಇಂಥ ಕಥೆಗಳಿಂದ ವೇಂಗಡದೊಡೆಯನ ಹಿರಿಮೆ ಹೆಚ್ಚಾಗುವುದಿಲ್ಲ, ಜನಪ್ರೀತಿಯೂ ಒದಗುವುದಿಲ್ಲ, ಗುಡಿಯ ಸ್ವಾರಸ್ಯವೂ ಸ್ಪಷ್ಟವಾಗುವುದಿಲ್ಲ. ಹಿಂದಿನಿಂದ ಹೆಸರಾಗಿದ್ದ ಗುಡಿಯ ಸುತ್ತ ಬೇರೆಬೇರೆ ಕಾಲಗಳಲ್ಲಿ ನಡೆದಿರಬಹುದಾದ ಪ್ರಸಂಗಗಳನ್ನು ಪೋಣಿಸಿದ್ದಾರೆ. ಇತಿಹಾಸದೊಂದಿಗೆ ಜಾನಪದಕಲ್ಪನೆಗಳು ಬೆರೆತುಕೊಂಡುಹೋಗಿವೆ.

ಶ್ರೀವೇಂಕಟೇಶ್ವರ-ಅಷ್ಟೋತ್ತರಶತನಾಮಾವಲಿಗಳು

ಶ್ರೀಮದ್ವೇಂಕಟನಾಥಾಷ್ಟೋತ್ತರಶತನಾಮಾವಲಿಃ

[ನಾನು ಅಡಿಗಡಿಗೆ ತಿರುಮಲೆಯೊಡೆಯನ ಸೇವೆಗೆಂದು ಹೋಗುತ್ತಿರುವಾಗ ಮೂಡಿಕೊಂಡದ್ದು ಇದು. ಇದು ಮೂರ್ತಿಯ ಸೌಂದರ್ಯವನ್ನೂ ಸ್ವಾರಸ್ಯವನ್ನೂ ಕುರಿತಂತೆಯೇ ಇದೆ.]

ಓಂ ಶ್ರೀಶ್ರಿಯೈ ನಮಃ
ಓಂ ಶ್ರೀನಿವಾಸಾಯ ನಮಃ
ಓಂ ಶ್ರೀವಿಷ್ಣವೇ ನಮಃ
ಓಂ ಶ್ರೀವೇಂಕಟಬ್ರಹ್ಮಣೇ ನಮಃ
ಓಂ ಸಮಸ್ತದೇವತಾಮೂರ್ತಯೇ ನಮಃ
ಓಂ ಸರ್ವಭೂತಾಂತರಾತ್ಮನೇ ನಮಃ
ಓಂ ಸರ್ವಾತರ್ಯಾಮಿಣೇ ನಮಃ
ಓಂ ಸಪ್ತಾಚಲಾಧಿನಾಥಾಯ ನಮಃ
ಓಂ ವೃಷಾದ್ರಿಶಿಖರಪ್ರಾಂತಪ್ರದೀಪಾಯ ನಮಃ
ಓಂ ಶೇಷಮಹೀಧರಭೂಷಣಾಯ ನಮಃ
ಓಂ ಉತ್ತುಂಗಾಚಲಶೃಂಗಾಗ್ರವಿಹಾರಿಣೇ ನಮಃ
ಓಂ ಶ್ರೀವೇಂಕಟಶೈಲನಿಲಯಾಯ ನಮಃ ೧೦
ಓಂ ಸಿಂಹಾಚಲೇಶ್ವರಾಯ ನಮಃ
ಓಂ ವೃಷಾಭಾದ್ರಿವಿನೋದಾಯ ನಮಃ
ಓಂ ಕುಂಡಲಿರಾಜಗಿರಿಸ್ಥಾಯ ನಮಃ
ಓಂ ವೈಕುಂಠಶೈಲೇಶಾಯ ನಮಃ
ಓಂ ವೃಷಪರ್ವತಜುಷೇ ನಮಃ
ಓಂ ವೇಂಕಟಶೃಂಗಾಗ್ರಮಂಗಲಾಯ ನಮಃ
ಓಂ ನಾರಾಯಣಾಚಲನಿವಾಸಿನೇ ನಮಃ
ಓಂ ಅಂಜನಾದ್ರಿಪತಯೇ ನಮಃ
ಓಂ ಅಹೀಂದ್ರಶೈಲಶಿರೋಮಣಯೇ ನಮಃ
ಓಂ ಶ್ರೀಶೇಷಶೈಲಸ್ವಾಮಿನೇ ನಮಃ ೨೦
ಓಂ ಶ್ರುತಿಶಿಖರವಿಹಾರಿಣೇ ನಮಃ
ಓಂ ಸರ್ವಜಗತಾಮಧೀಶ್ವರಾಯ ನಮಃ

ಓಂ ಅಶೇಷವಿಶ್ವೈಕಸಾಕ್ಷಿಣೇ ನಮಃ
ಓಂ ವೇಂಕಟಗಿರಿಶೇಖರಪದಾಂಭೋಜದ್ವಂದ್ವಾಯ ನಮಃ
ಓಂ ಶ್ರೀಸ್ವಾಮಿಪುಷ್ಕರಿಣೀತೀರಸಂಚಾರಿಣೇ ನಮಃ
ಓಂ ಶ್ರೀಮದಾನಂದನಿಲಯವಿಮಾನಾಂತರ್ವಿಭೂಷಣಾಯ ನಮಃ
ಓಂ ಸರ್ವದಾನಂದವಿಗ್ರಹಾಯ ನಮಃ
ಓಂ ಸ್ವಯಂವ್ಯಕ್ತಭವ್ಯಾಕೃತಯೇ ನಮಃ
ಓಂ ಲೋಕಾನುಗ್ರಹಕಾಮಿನೇ ನಮಃ
ಓಂ ವ್ಯಕ್ತಾವ್ಯಕ್ತರೂಪಾಯ ನಮಃ ೩೦
ಓಂ ಪ್ರಣತಜನಮನಃಕಲ್ಪನಾಕಲ್ಪಶಾಖಿನೇ ನಮಃ
ಓಂ ಸಮಸ್ತಶೋಕಶಮನಶಕ್ತಯೇ ನಮಃ
ಓಂ ಅಶೇಷಕಲ್ಮಷಹಾರಿಣೇ ನಮಃ
ಓಂ ನಿಖಿಲಲೋಕಸಂರಕ್ಷಣಧುರೀಣಾಯ ನಮಃ
ಓಂ ಸರ್ವಜನಸಮಾಶ್ರಯಣೀಯಾಯ ನಮಃ
ಓಂ ಅಖಿಲಲೋಕಜಗತ್ಕಾರಣಭೂತಾಯ ನಮಃ
ಓಂ ಸರ್ವೇಷಾಮಪಿ ಪರಮಪ್ರಾಪ್ಯಾಯ ನಮಃ
ಓಂ ನಿರವಧಿಕಗುಣಗಣಕೀರ್ತಯೇ ನಮಃ
ಓಂ ಭೂತಭವ್ಯಭವನ್ನಾಥಾಯ ನಮಃ
ಓಂ ಆರ್ತಜಗತ್ತ್ರಾಣಾರ್ಥಮವತೀರ್ಣಾಯ ನಮಃ ೪೦
ಓಂ ಆನಂದನಿಲಯಗೇಹಾಂತರ್ವರ್ತಿನೇ ನಮಃ
ಓಂ ನಿಖಿಲಾನುಗ್ರಹೈಕಾರ್ಥಮೂರ್ತಯೇ ನಮಃ
ಓಂ ಉಜ್ಜ್ವಲಾದ್ಭುತಮಂಗಲವಿಗ್ರಹಾಯ ನಮಃ
ಓಂ ದೃಷ್ಟಿಚಿತ್ತಾಪಹಾರಿಣೇ ನಮಃ
ಓಂ ನಯನಾನಂದಜನಕಾಯ ನಮಃ
ಓಂ ಲಾವಣ್ಯಾಮೃತಪರಿಪೂರಿತವಪುಷೇ ನಮಃ
ಓಂ ಕುಲಶೇಖರಸಮೀಕ್ಷಣಸಮುತ್ಸುಕಾಯ ನಮಃ
ಓಂ ಸಾಕ್ಷಾನ್ನನ್ವಥಮನ್ಮಥಾಯ ನಮಃ
ಓಂ ಅತ್ಯಂತಸುಂದರಾಕೃತಯೇ ನಮಃ
ಓಂ ದಿವ್ಯಜ್ಯೋತಿಷೇ ನಮಃ ೫೦
ಓಂ ನೀಲಜೀಮೂತಸಮಕಾಂತಿಮತೇ ನಮಃ

ಓಂ ನೀಲರತ್ನವದುಜ್ಜ್ವಲಾಯ ನಮಃ
ಓಂ ಸರ್ವಾವಯವಸಂಸ್ಪಷ್ಟಸೌಂದರ್ಯಾಯ ನಮಃ
ಓಂ ಪರಮೋದಾರಮೂರ್ತಯೇ ನಮಃ
ಓಂ ವಿಶುದ್ಧವಪುಷೇ ನಮಃ
ಓಂ ಜ್ಯೋತಿರ್ಮಯವಿಗ್ರಹಾಯ ನಮಃ
ಓಂ ಅನವದ್ಯಾಂಗವಿಗ್ರಹವೈಭವಾಯ ನಮಃ
ಓಂ ಸರ್ವಜನಸೌಲಭ್ಯಪರಿಪೂರ್ಣಾಯ ನಮಃ
ಓಂ ಭಕ್ತಜನಸಮಾಶ್ವಾಸನಸಮರ್ಥಾಯ ನಮಃ
ಓಂ ನಿಸ್ತುಲನಿಃಸೀಮಲಾವಣ್ಯನಿಧಯೇ ನಮಃ ೬೦
ಓಂ ಅಹೀನಕುಮಾರಭಾವಾಯ ನಮಃ
ಓಂ ಪುಂಸ್ತ್ರೀಸಮಸ್ತವಪುಷೇ ನಮಃ
ಓಂ ಅನಿರ್ದೇಶ್ಯದೇವತಾರೂಪಿಣೇ ನಮಃ
ಓಂ ಹರಿಹರಾಭಿನ್ನಮೂರ್ತಯೇ ನಮಃ
ಓಂ ಸುಬ್ರಹ್ಮಣ್ಯಶರೀರಾಯ ನಮಃ
ಓಂ ಶಕ್ತಿಸಂಪನ್ನಾಯ ನಮಃ
ಓಂ ಶಕ್ತಿಶಕ್ತಿಮದೇಕರೂಪಿಣೇ ನಮಃ
ಓಂ ಅಚಿಂತ್ಯಾದ್ಭುತಕಮನೀಯತನವೇ ನಮಃ
ಓಂ ಯೋಗಿಧ್ಯೇಯಾಯ ನಮಃ
ಓಂ ಹೃದ್ಯವೇಶಾಯ ನಮಃ ೭೦
ಓಂ ವಾಚಾಮಗೋಚರಮಹಾಲಾವಣ್ಯಶೇವಧಯೇ ನಮಃ
ಓಂ ಶರಣಾಂತರಶೂನ್ಯಜನಾಶ್ರಿತಪದದ್ವಂದ್ವಾಯ ನಮಃ
ಓಂ ಲೋಕಪಾವನಚರಣಯುಗಲಾಯ ನಮಃ
ಓಂ ವಲ್ಮೀಕನಿಗೂಢಪಾದಾಬ್ಜಾಯ ನಮಃ
ಓಂ ದಿವ್ಯಪೀತಾಂಬರಾಶ್ಲಿಷ್ಟದೇಹಾಯ ನಮಃ
ಓಂ ಕಟಿಸಂಗತವಾಮಹಸ್ತಾಯ ನಮಃ
ಓಂ ಪ್ರಪತ್ತಿಪದದರ್ಶಿನೇ ನಮಃ
ಓಂ ಭವತಾಪಾಪಹಾರಿಶ್ರೀದಕ್ಷಿಣಹಸ್ತಾಯ ನಮಃ
ಓಂ ವರಪ್ರದಾನದೀಕ್ಷಾಬದ್ಧಾಯ ನಮಃ
ಓಂ ಕರಯುಗಪರಿಕರ್ಮಶಂಖಿಚಕ್ರಾಯ ನಮಃ ೮೦

ಓಂ ಪದ್ಮಯಾಲಂಕೃತೋರಸ್ಕಾಯ ನಮಃ
ಓಂ ಲಕ್ಷ್ಮೀಪದಲಾಕ್ಷಾರುಣವಕ್ಷಸೇ ನಮಃ
ಓಂ ವ್ಯಾಕೋಚಾಂಬುಜಸುಂದರವದನಾಯ ನಮಃ
ಓಂ ಅತ್ಯಂತಸುಂದರಮುಖಾಂಬುಜಮಂದಹಾಸಾಯ ನಮಃ
ಓಂ ದರಹಸಿತಲಸದ್ವಕ್ತ್ರಾರವಿಂದಾಯ ನಮಃ
ಓಂ ಸ್ಮಿತರುಚಿಫುಲ್ಲಕಪೋಲಾಯ ನಮಃ
ಓಂ ಕಾರುಣ್ಯಾಂಚಿತಕಟಾಕ್ಷಾಯ ನಮಃ
ಓಂ ಕ್ಷೇಮಂಕರನೇತ್ರೋತ್ಪಲಯುಗ್ಮಶ್ರೀಮತೇ ನಮಃ
ಓಂ ವಿಚಿತ್ರೋತ್ತುಂಗಮಕುಟೀಭೂಷಾಯ ನಮಃ
ಓಂ ದಿವ್ಯಾದ್ಭುತಮನೋಹರಮೂರ್ತಯೇ ನಮಃ ೯೦
ಓಂ ನಿತ್ಯನಿರವದ್ಯಾನಂದಸಂದೋಹವಿಧಾಯಿನೇ ನಮಃ
ಓಂ ಸರ್ವಜನನಯನಾನಂದಕಾರಿಣೇ ನಮಃ
ಓಂ ದಯಾತರಂಗಿತಶುಭಾಪಾಂಗದೃಶೇ ನಮಃ
ಓಂ ಕಾರುಣ್ಯಕಂದಲಕಟಾಕ್ಷವಿನಷ್ಟಕಷ್ಟಾಯ ನಮಃ
ಓಂ ಪ್ರಣತಜನಪರಮಾನಂದಮಜ್ಜಯಿತ್ರೇ ನಮಃ
ಓಂ ದಯಾಂಬುನಿಧಯೇ ನಮಃ
ಓಂ ಸರ್ವಾರ್ಥವಿಶ್ರಾಣನದಕ್ಷಾಯ ನಮಃ
ಓಂ ತ್ರಿವರ್ಗಾಪವರ್ಗಪ್ರದಾತ್ರೇ ನಮಃ
ಓಂ ಸ್ವರೂಪಾನುರೂಪಪುರುಷಾರ್ಥವಿಧಾಯಿನೇ ನಮಃ
ಓಂ ಆಧಿವ್ಯಾಧ್ಯೇಕಭಿಷಜೇ ನಮಃ ೧೦೦
ಓಂ ಆರ್ತತ್ರಾಣಪರಾಯಣಾಯ ನಮಃ
ಓಂ ನಿಃಸಮಾಭ್ಯಧಿಕಾಯ ನಮಃ
ಓಂ ವಿಶ್ವೈಕಜೀವಾತವೇ ನಮಃ
ಓಂ ಆಶ್ರಿತಪ್ರಾರ್ಥನಾಕಲ್ಪತರವೇ ನಮಃ
ಓಂ ಸರ್ವಾತ್ಮನೇ ನಮಃ
ಓಂ ಸರ್ವಸ್ವಾಮಿನೇ ನಮಃ
ಓಂ ಮತ್‌ಸ್ವಾಮಿನೇ ನಮಃ
ಓಂ ಶ್ರೀಮದ್ವೇಂಕಟಾಚಲಪತಯೇ ನಮಃ ೧೦೮

ಶ್ರೀವೇಂಕಟೇಶ್ವರ-ಅಷ್ಟೋತ್ತರಶತನಾಮಸ್ತೋತ್ರಮ್
(ವರಾಹಪುರಾಣಾಂತರ್ಗತಮ್)

ಮುನಯಃ—

ಸೂತ ಸರ್ವಾರ್ಥತತ್ತ್ವಜ್ಞ ಸರ್ವವೇದಾಂತಪಾರಗ।
ಯೇನ ಚಾರಾಧಿತಸ್ಸದ್ಯಃ ಶ್ರೀಮದ್ವೇಂಕಟನಾಯಕಃ ॥ ೧ ॥

ಭವತ್ಯಭೀಷ್ಟಸರ್ವಾರ್ಥಪ್ರದಸ್ತದ್ಬ್ರೂಹಿ ನೋ ಮುನೇ।
ಇತಿ ಪೃಷ್ಟಸ್ತದಾ ಸೂತೋ ಧ್ಯಾತ್ವಾ ಸ್ವಾತ್ಮನಿ ತತ್ಕ್ಷಣಾತ್ ॥ ೨ ॥

ಉವಾಚ ಮುನಿಶಾರ್ದೂಲಾನ್ ಶ್ರೂಯತಾಮಿತಿ ವೈ ಮುನಿಃ।

ಶ್ರೀಸೂತಃ—

ಅಸ್ತಿ ಕಿಂಚಿನ್ಮಹದ್ಗೋಪ್ಯಂ ಭಗವತ್ಪ್ರೀತಿಕಾರಕಮ್ ॥ ೩ ॥

ಪುರಾ ಶೇಷೇಣ ಕಥಿತಂ ಕಪಿಲಾಯ ಮಹಾತ್ಮನೇ।
ನಾಮ್ನಾಮಷ್ಟಶತಂ ಪುಣ್ಯಂ ಪವಿತ್ರಂ ಪಾಪನಾಶನಮ್ ॥ ೪ ॥

ಆದಾಯ ಹೇಮಪದ್ಮಾನಿ ಸ್ವರ್ಣದೀಸಂಭವಾನಿ ಚ।
ಬ್ರಹ್ಮಾ ತು ಪೂರ್ವಮಭ್ಯರ್ಚ್ಯ ಶ್ರೀಮದ್ವೇಂಕಟನಾಯಕಮ್ ॥ ೫ ॥

ಅಷ್ಟೋತ್ತರಶತೈರ್ದಿವ್ಯೈರ್ನಾಮಭಿರ್ಮುನಿಪೂಜಿತೈಃ।
ಸ್ವಾಭೀಷ್ಟಂ ಲಬ್ಧವಾನ್ ಬ್ರಹ್ಮಾ ಸರ್ವಲೋಕಪಿತಾಮಹಃ ॥ ೬ ॥

ಭವದ್ಭಿರಪಿ ಪದ್ಮೈಶ್ಚ ಸಮರ್ಚ್ಯಸ್ತೈಶ್ಚ ನಾಮಭಿಃ।
ತೇಷಾಂ ಶೇಷನಗಾಧೀಶಮಾನಸೋಲ್ಲಾಸಕಾರಿಣಾಮ್ ॥ ೭ ॥

ನಾಮ್ನಾಮಷ್ಟಶತಂ ವಕ್ಷ್ಯೇ ವೇಂಕಟಾದ್ರಿನಿವಾಸಿನಃ।
ಆಯುರಾರೋಗ್ಯದಂ ಪುಂಸಾಂ ಧನಧಾನ್ಯಸುಖಪ್ರದಮ್ ॥ ೮ ॥

ಜ್ಞಾನಪ್ರದಂ ವಿಶೇಷೇಣ ಮಹದೈಶ್ವರ್ಯಕಾರಕಮ್।
ಅರ್ಚಯೇನ್ನಾಮಭಿರ್ದಿವ್ಯೈರ್ವೇಂಕಟೇಶಪದಾಂಕಿತೈಃ ॥ ೯ ॥

ನಾಮ್ನಾಮಷ್ಟಶತಸ್ಯಾಸ್ಯ ಋಷಿರ್‌ಬ್ರಹ್ಮಾ ಪ್ರಕೀರ್ತಿತಃ।
ಛಂದೋಽನುಷ್ಟುಪ್ತಥಾ ದೇವೋ ವೇಂಕಟೇಶ ಉದಾಹೃತಃ ॥ ೧೦ ॥

ನೀಲಗೋಕ್ಷೀರಸಂಭೂತೋ ಬೀಜಮಿತ್ಯುಚ್ಯತೇ ಬುಧೈಃ।
ಶ್ರೀನಿವಾಸಸ್ತಥಾ ಶಕ್ತಿರ್ಹೃದಯಂ ವೇಂಕಟಾಧಿಪಃ ॥ ೧೧ ॥

ವಿನಿಯೋಗಸ್ತಥಾಭೀಷ್ಟಸಿದ್ಧ್ಯರ್ಥೇ ಚ ನಿಗದ್ಯತೇ।
ಓಂ ನಮೋ ವೇಂಕಟೇಶಾಯ ಶೇಷಾದ್ರಿನಿಲಯಾಯ ಚ ॥ ೧೨ ॥

ವೃಷದೃಗ್ಗೋಚರಾಯಾಥ ವಿಷ್ಣವೇ ಸತತಂ ನಮಃ।
ಸದಂಜನಗಿರೀಶಾಯ ವೃಷಾದ್ರಿಪತಯೇ ನಮಃ ॥ ೧೩ ॥

ಮೇರುಪುತ್ರಗಿರೀಶಾಯ ಸರಸ್ವಾಮಿತಟೀಜುಷೇ।
ಕುಮಾರಾಕಲ್ಪಸೇವ್ಯಾಯ ವಜ್ರಿದೃಗ್ವಿಷಯಾಯ ಚ ॥ ೧೪ ॥

ಸುವರ್ಚಲಾಸುತನ್ಯಸ್ತಸೈನಾಪತ್ಯಭರಾಯ ಚ।
ರಾಮಾಯ ಪದ್ಮನಾಭಾಯ ಸದಾ ವಾಯುಸ್ತುತಾಯ ಚ ॥ ೧೫ ॥

ತ್ಯಕ್ತವೈಕುಂಠಲೋಕಾಯ ಗಿರಿಕುಂಜವಿಹಾರಿಣೇ।
ಹರಿಚಂದನಗೋತ್ರೇಂದ್ರಸ್ವಾಮಿನೇ ಸತತಂ ನಮಃ ॥ ೧೬ ॥

ಶಂಖಿರಾಜನ್ಯನೇತ್ರಾಬ್ಜವಿಷಯಾಯ ನಮೋ ನಮಃ।
ವಸೂಪರಿಚರತ್ರಾತ್ರೇ ಕೃಷ್ಣಾಯ ಸತತಂ ನಮಃ ॥ ೧೭ ॥

ಅಬ್ಧಿಕನ್ಯಾಪರಿಷ್ವಕ್ತವಕ್ಷಸೇ ವೇಂಕಟಾಯ ಚ।
ಸನಕಾದಿಮಹಾಯೋಗಿಪೂಜಿತಾಯ ನಮೋ ನಮಃ ॥ ೧೮ ॥

ದೇವಜಿತ್‌ಪ್ರಮುಖಾನಂತದೈತ್ಯಸಂಘಪ್ರಣಾಶಿನೇ।
ಶ್ವೇತದ್ವೀಪವಸನ್ಮುಕ್ತಪೂಜಿತಾಂಘ್ರಿಯುಗಾಯ ಚ ॥ ೧೯ ॥

ಶೇಷಪರ್ವತರೂಪತ್ವಪ್ರಕಾಶನಪರಾಯ ಚ।
ಸಾನುಸ್ಥಾಪಿತತಾರ್ಕ್ಷ್ಯಾಯ ತಾರ್ಕ್ಷ್ಯಾಚಲನಿವಾಸಿನೇ ॥ ೨೦ ॥

ಮಾಯಾಗೂಢವಿಮಾನಾಯ ಗರುಡಸ್ಕಂಧವಾಸಿನೇ।
ಅನಂತಶಿರಸೇ ನಿತ್ಯಮನಂತಾಕ್ಷಾಯ ತೇ ನಮಃ ॥ ೨೧ ॥

ಅನಂತಚರಣಾಯಾಥ ಶ್ರೀಶೈಲನಿಲಯಾಯ ಚ।
ದಾಮೋದರಾಯ ತೇ ನಿತ್ಯಂ ನೀಲಮೇಘನಿಭಾಯ ಚ ॥ ೨೨ ॥

ಬ್ರಹ್ಮಾದಿದೇವದುರ್ದರ್ಶವಿಶ್ವರೂಪಾಯ ತೇ ನಮಃ।
ವೈಕುಂಠಾಗತಸದ್ಧೇಮವಿಮಾನಾಂತರ್ಗತಾಯ ಚ ॥ ೨೩ ॥

ಅಗಸ್ತ್ಯಾಭ್ಯರ್ಥಿತಾಶೇಷಜನದೃಗ್ಗೋಚರಾಯ ಚ।
ವಾಸುದೇವಾಯ ಹರಯೇ ತೀರ್ಥಪಂಚಕವಾಸಿನೇ ॥ ೨೪ ॥

ವಾಮದೇವಪ್ರಿಯಾಯಾಥ ಜನಕೇಷ್ಟಪ್ರದಾಯ ಚ।
ಮಾರ್ಕಂಡೇಯಮಹಾತೀರ್ಥಜಾತಪುಣ್ಯಪ್ರದಾಯ ಚ ॥ ೨೫ ॥

ವಾಕ್ಪತಿಬ್ರಹ್ಮದಾತ್ರೇ ಚ ಚಂದ್ರಲಾವಣ್ಯದಾಯಿನೇ।
ನಾರಾಯಣನಗೇಶಾಯ ಬ್ರಹ್ಮಕ್ಲೃಪ್ತೋತ್ಸವಾಯ ಚ ॥ ೨೬ ॥

ಶಂಖಚಕ್ರವರಾನಮ್ರಲಸತ್ಕರತಲಾಯ ಚ।
ದ್ರವನ್ಮೃಗಮದಾಸಕ್ತವಿಗ್ರಹಾಯ ನಮೋ ನಮಃ ॥ ೨೭ ॥

ಕೇಶವಾಯ ನಮೋ ನಿತ್ಯಂ ನಿತ್ಯಯೌವನಮೂರ್ತಯೇ।
ಅರ್ಥಿತಾರ್ಥಪ್ರದಾತ್ರೇ ಚ ವಿಶ್ವತೀರ್ಥಾಘಹಾರಿಣೇ ॥ ೨೮ ॥

ತೀರ್ಥಸ್ವಾಮಿಸರಃಸ್ನಾತಜನಾಭೀಷ್ಟಪ್ರದಾಯಿನೇ।
ಕುಮಾರಧಾರಿಕಾವಾಸಸ್ಕಂದಾಭೀಷ್ಟಪ್ರದಾಯ ಚ ॥ ೨೯ ॥

ಜಾನುದಘ್ನಸಮುದ್ಭೂತಪೋತ್ರಿಣೇ ಕೂರ್ಮಮೂರ್ತಯೇ।
ಕಿನ್ನರದ್ವಂದ್ವಶಾಪಾಂತಪ್ರದಾತ್ರೇ ವಿಭವೇ ನಮಃ ॥ ೩೦ ॥

ವೈಖಾನಸಮುನಿಶ್ರೇಷ್ಠಪೂಜಿತಾಯ ನಮೋ ನಮಃ।
ಸಿಂಹಾಚಲನಿವಾಸಾಯ ಶ್ರೀಮನ್ನಾರಾಯಣಾಯ ಚ ॥ ೩೧ ॥

ಸದ್ಭಕ್ತನೀಲಕಂಠಾರ್ಚ್ಯನೃಸಿಂಹಾಯ ನಮೋ ನಮಃ।
ಕುಮುದಾಕ್ಷಗಣಶ್ರೇಷ್ಠಸೈನಾಪತ್ಯಪ್ರದಾಯ ಚ ॥ ೩೨ ॥

ದುರ್ಮೇಧಃಪ್ರಾಣಹರ್ತ್ರೇ ಚ ಶ್ರೀಧರಾಯ ನಮೋ ನಮಃ।
ಕ್ಷತ್ರಿಯಾಂತಕರಾಮಾಯ ಮತ್ಸ್ಯರೂಪಾಯ ತೇ ನಮಃ ॥ ೩೩ ॥

ಪಾಂಡವಾರಿಪ್ರಹರ್ತ್ರೇ ಚ ಶ್ರೀಕರಾಯ ನಮೋ ನಮಃ।
ಉಪತ್ಯಕಾಪ್ರದೇಶಸ್ಥಶಂಕರಧ್ಯಾತಮೂರ್ತಯೇ ॥ ೩೪ ॥

ರುಕ್ಮಾಬ್ಜಸರಸೀಕೂಲಲಕ್ಷ್ಮೀಕೃತತಪಸ್ವಿನೇ।
ಲಸಲ್ಲಕ್ಷ್ಮೀಕರಾಂಭೋಜದತ್ತಕಲ್ಹಾರಕಸ್ರಜೇ ॥ ೩೫ ॥

శాలగ్రామనివాసాయ శుకదృగ్గోచరాయ చ।
నారాయణార్థితాశేషజనదృగ్ విషయాయ చ ॥ ೩೬ ॥

మృగయారసికాయాథ వృషభాసురహారిణే।
అంజనాగోత్రపతయే వృషభాచలవాసినే ॥ ೩೭ ॥

అంజనాసుతదాత్రే చ మాధవీయాఘహారిణే।
ప్రియంగుప్రియభక్ష్యాయ శ్వేతకోలవరాయ చ ॥ ೩೮ ॥

నీలధేనుపయోధారాసేకదేహోద్భవాయ చ।
శంకరప్రియమిత్రాయ చోలపుత్రప్రియాయ చ ॥ ೩೯ ॥

సుధర్మిణేసుచైతన్యప్రదాత్రే మధుఘాతినే।
కృష్ణాఖ్యవిప్రవేదాంతదేశికత్వప్రదాయ చ ॥ ೪೦ ॥

వరాహాచలనాథాయ బలభద్రాయ తే నమః।
త్రివిక్రమాయ మహతే హృషీకేశాయ తే నమః ॥ ೪೧ ॥

అచ్యుతాయ నమో నిత్యం నీలాద్రినిలయాయ చ।
నమః క్షీరాబ్ధినాథాయ వైకుంఠాచలవాసినే ॥ ೪೨ ॥

ముకుందాయ నమో నిత్యమనంతాయ నమో నమః।
విరించాభ్యర్థితానీతసౌమ్యరూపాయ తే నమః ॥ ೪೩ ॥

సువర్ణముఖరీస్నాతమనుజాభీష్టదాయినే।
హలాయుధజగత్తీర్థసమస్తఫలదాయినే ॥ ೪೪ ॥

గోవిందాయ నమో నిత్యం శ్రీనివాసాయ తే నమః।

ఫలశ్రుతిః

అష్టోత్తరశతం నామ్నాం చతుర్థ్యా నమసాన్వితమ్ ॥ ೪೫ ॥

యః పఠేచ్ఛృణుయాన్నిత్యం శ్రద్ధాభక్తిసమన్వితః।
తస్య శ్రీ వేంకటేశస్తు ప్రసన్నో భవతి ధ్రువమ్ ॥ ೪೬ ॥

అర్చనాయాం విశేషేణ గ్రాహ్యమష్టోత్తరం శతమ్।
వేంకటేశాభిధేయస్యైర్యో వేంకటాద్రినివాసినమ్ ॥ ೪೭ ॥

ಅರ್ಚಯೇನ್ನಾಮಭಿಸ್ತಸ್ಯ ಫಲಂ ಮುಕ್ತಿರ್ನ ಸಂಶಯಃ।
ಗೋಪನೀಯಮಿದಂ ಸ್ತೋತ್ರಂ ಸರ್ವೇಷಾಂ ನ ಪ್ರಕಾಶಯೇತ್ ॥ ೪೮ ॥

ಶ್ರದ್ಧಾಭಕ್ತಿಯುಜಾಮೇವ ದಾಪಯೇನ್ನಾಮಸಂಗ್ರಹಮ್।
ಇತಿ ಶೇಷೇಣ ಕಥಿತಂ ಕಪಿಲಾಯ ಮಹಾತ್ಮನೇ ॥ ೪೯ ॥

ಕಪಿಲಾಖ್ಯಮಹಾಯೋಗಿಸಕಾಶಾತ್ತು ಮಯಾ ಶ್ರುತಮ್।
ತದುಕ್ತಂ ಭವತಾಮದ್ಯ ಸದ್ಯಃ ಪ್ರೀತಿಕರಂ ಹರೇಃ ॥ ೫೦ ॥

॥ ಇತಿ ಶ್ರೀವೇಂಕಟೇಶ್ವರ-ಅಷ್ಟೋತ್ತರಶತನಾಮಸ್ತೋತ್ರಂ ಸಮಾಪ್ತಮ್ ॥

ಶ್ರೀವೇಂಕಟೇಶ್ವರ-ಅಷ್ಟೋತ್ತರಶತನಾಮಾವಲಿಃ

ಓಂ ಶ್ರೀವೇಂಕಟೇಶಾಯ ನಮಃ
ಓಂ ಶೇಷಾದ್ರಿನಿಲಯಾಯ ನಮಃ
ಓಂ ವೃಷದೃಗ್ಗೋಚರಾಯ ನಮಃ
ಓಂ ವಿಷ್ಣವೇ ನಮಃ
ಓಂ ಸದಂಜನಗಿರೀಶಾಯ ನಮಃ
ಓಂ ವೃಷಾದ್ರಿಪತಯೇ ನಮಃ
ಓಂ ಮೇರುಪುತ್ರಗಿರೀಶಾಯ ನಮಃ
ಓಂ ಸರಃಸ್ವಾಮಿತಟೀಜುಷೇ ನಮಃ
ಓಂ ಕುಮಾರಾಕಲ್ಪಸೇವ್ಯಾಯ ನಮಃ
ಓಂ ವಜ್ರಿದೃಗ್ವಿಷಯಾಯ ನಮಃ ೧೦
ಓಂ ಸುವರ್ಚಲಾಸುತನ್ಯಸ್ತಸೇನಾಪತ್ಯಭರಾಯ ನಮಃ
ಓಂ ರಾಮಾಯ ನಮಃ
ಓಂ ಪದ್ಮನಾಭಾಯ ನಮಃ
ಓಂ ಸದಾವಾಯುಸ್ತುತಾಯ ನಮಃ
ಓಂ ತ್ಯಕ್ತವೈಕುಂಠಲೋಕಾಯ ನಮಃ
ಓಂ ಗಿರಿಕುಂಜವಿಹಾರಿಣೇ ನಮಃ
ಓಂ ಹರಿಚಂದನಗೋತ್ರೇಂದ್ರಸ್ವಾಮಿನೇ ನಮಃ
ಓಂ ಶಂಖರಾಜನ್ಯನೇತ್ರಾಬ್ಜವಿಷಯಾಯ ನಮಃ
ಓಂ ವಸೂಪರಿಚರತ್ರಾತ್ರೇ ನಮಃ
ಓಂ ಕೃಷ್ಣಾಯ ನಮಃ ೨೦
ಓಂ ಅಬ್ಧಿಕನ್ಯಾಪರಿಷ್ವಕ್ತವಕ್ಷಸೇ ನಮಃ
ಓಂ ವೇಂಕಟೇಶಾಯ ನಮಃ
ಓಂ ಸನಕಾದಿಮಹಾಯೋಗಿಪೂಜಿತಾಯ ನಮಃ
ಓಂ ದೇವಜಿತ್ವಮುಖಾನಂತದೈತ್ಯಸಂಘಪ್ರಣಾಶಿನೇ ನಮಃ
ಓಂ ಶ್ವೇತದ್ವೀಪವಸನ್ಮುಕ್ತಪೂಜಿತಾಂಘ್ರಿಯುಗಾಯ ನಮಃ
ಓಂ ಶೇಷಪರ್ವತರೂಪತ್ವಪ್ರಕಾಶನಪರಾಯ ನಮಃ
ಓಂ ಸಾನುಸ್ಥಾಪಿತತಾರ್ಕ್ಷ್ಯಾಯ ನಮಃ

ಓಂ ತಾರ್ಕ್ಷ್ಯಾಚಲನಿವಾಸಿನೇ ನಮಃ
ಓಂ ಮಾಯಾಗೂಢವಿಮಾನಾಯ ನಮಃ
ಓಂ ಗರುಡಸ್ಕಂಧವಾಸಿನೇ ನಮಃ ೩೦
ಓಂ ಅನಂತಶಿರಸೇ ನಮಃ
ಓಂ ಅನಂತಾಕ್ಷಾಯ ನಮಃ
ಓಂ ಅನಂತಚರಣಾಯ ನಮಃ
ಓಂ ಶ್ರೀಶೈಲನಿಲಯಾಯ ನಮಃ
ಓಂ ದಾಮೋದರಾಯ ನಮಃ
ಓಂ ನೀಲಮೇಘನಿಭಾಯ ನಮಃ
ಓಂ ಬ್ರಹ್ಮಾದಿದೇವದುರ್ದರ್ಶವಿಶ್ವರೂಪಾಯ ನಮಃ
ಓಂ ವೈಕುಂಠಗತಸದ್ಧೇಮವಿಮಾನಾಂತರ್ಗತಾಯ ನಮಃ
ಓಂ ಅಗಸ್ತ್ಯಾಭ್ಯರ್ಥಿತಾಶೇಷಜನದೃಗ್ಗೋಚರಾಯ ನಮಃ
ಓಂ ವಾಸುದೇವಾಯ ನಮಃ ೪೦
ಓಂ ಹರಯೇ ನಮಃ
ಓಂ ತೀರ್ಥಪಂಚಕವಾಸಿನೇ ನಮಃ
ಓಂ ವಾಸುದೇವಪ್ರಿಯಾಯ ನಮಃ
ಓಂ ಜನಕೇಷ್ಟಪ್ರದಾಯ ನಮಃ
ಓಂ ಮಾರ್ಕಂಡೇಯಮಹಾತೀರ್ಥಜಾತಪುಣ್ಯಪ್ರದಾಯ ನಮಃ
ಓಂ ವಾಕ್ಪತಿಬ್ರಹ್ಮದಾತ್ರೇ ನಮಃ
ಓಂ ಚಂದ್ರಲಾವಣ್ಯದಾಯಿನೇ ನಮಃ
ಓಂ ನಾರಾಯಣನಗೇಶಾಯ ನಮಃ
ಓಂ ಬ್ರಹ್ಮಕ್ಲೃಪ್ತೋತ್ಸವಾಯ ನಮಃ
ಓಂ ಶಂಖಚಕ್ರವರಾನಮ್ರಲಸತ್ಕರತಲಾಯ ನಮಃ ೫೦
ಓಂ ದ್ರವನ್ಮೃಗಮದಾಸಕ್ತವಿಗ್ರಹಾಯ ನಮಃ
ಓಂ ಕೇಶವಾಯ ನಮಃ
ಓಂ ನಿತ್ಯಯೌವನಮೂರ್ತಯೇ ನಮಃ
ಓಂ ಅರ್ಥಿತಾರ್ಥಪ್ರದಾತ್ರೇ ನಮಃ
ಓಂ ವಿಶ್ವತೀರ್ಥಾಘಹಾರಿಣೇ ನಮಃ
ಓಂ ತೀರ್ಥಸ್ವಾಮಿಸರಃಸ್ನಾತಾಯ ನಮಃ

ಓಂ ಜನಾಭೀಷ್ಟಪ್ರದಾಯಿನೇ ನಮಃ
ಓಂ ಕುಮಾರಧಾರಿಕಾವಾಸಸ್ಕಂದಾಭೀಷ್ಟಪ್ರದಾಯಿನೇ ನಮಃ
ಓಂ ಜಾನುದಘ್ನಸಮುದ್ಭೂತಪೋತ್ರಿಣೇ ನಮಃ
ಓಂ ಕೂರ್ಮಮೂರ್ತಯೇ ನಮಃ
ಓಂ ಕಿನ್ನರದ್ವಂದ್ವಶಾಪಾಂತಪ್ರದಾತ್ರೇ ನಮಃ ೬೦
ಓಂ ವಿಭವೇ ನಮಃ
ಓಂ ವೈಖಾನಸಮುನಿಶ್ರೇಷ್ಠಪೂಜಿತಾಯ ನಮಃ
ಓಂ ಸಿಂಹಾಚಲನಿವಾಸಾಯ ನಮಃ
ಓಂ ಶ್ರೀಮನ್ನಾರಾಯಣಾಯ ನಮಃ
ಓಂ ಸದ್ಭಕ್ತನೀಲಕಂಠಾರ್ಚ್ಯನೃಸಿಂಹಾಯ ನಮಃ
ಓಂ ಕುಮುದಾಕ್ಷಗಣಶ್ರೇಷ್ಠಸೈನಾಪತ್ಯಪ್ರದಾಯ ನಮಃ
ಓಂ ದುರ್ಮೇಧಃಪ್ರಾಣಹರ್ತ್ರೇ ನಮಃ
ಓಂ ಶ್ರೀಧರಾಯ ನಮಃ
ಓಂ ಕ್ಷತ್ರಿಯಾಂತಕರಾಮಾಯ ನಮಃ
ಓಂ ಮತ್ಸ್ಯರೂಪಾಯ ನಮಃ ೭೦
ಓಂ ಪಾಂಡವಾರಿಪ್ರಹರ್ತ್ರೇ ನಮಃ
ಓಂ ಶ್ರೀಕರಾಯ ನಮಃ
ಓಂ ಉಪತ್ಯಕಾಪ್ರದೇಶಸ್ಥಶಂಕರಧ್ಯಾತಮೂರ್ತಯೇ ನಮಃ
ಓಂ ರುಕ್ಮಾಬ್ಜಸರಸೀಕೂಲಲಕ್ಷ್ಮೀಕೃತತಪಸ್ವಿನೇ ನಮಃ
ಓಂ ಲಸಲ್ಲಕ್ಷ್ಮೀಕರಾಂಭೋಜದತ್ತಕಲ್ಹಾರಕಸ್ರಜೇ ನಮಃ
ಓಂ ಶಾಲಗ್ರಾಮನಿವಾಸಾಯ ನಮಃ
ಓಂ ಶುಕದೃಗ್ಗೋಚರಾಯ ನಮಃ
ಓಂ ನಾರಾಯಣಾರ್ಥಿತಾಶೇಷಜನದೃಗ್ವಿಷಯಾಯ ನಮಃ
ಓಂ ಮೃಗಯಾರಸಿಕಾಯ ನಮಃ
ಓಂ ವೃಷಭಾಸುರಹಾರಿಣೇ ನಮಃ ೮೦
ಓಂ ಅಂಜನಾಗೋತ್ರಪತಯೇ ನಮಃ
ಓಂ ವೃಷಭಾಚಲವಾಸಿನೇ ನಮಃ
ಓಂ ಅಂಜನಾಸುತದಾತ್ರೇ ನಮಃ
ಓಂ ಮಾಧವೀಯಾಘಹಾರಿಣೇ ನಮಃ

ಓಂ ಪ್ರಿಯಂಗುಪ್ರಿಯಭಕ್ತ್ಯಾಯ ನಮಃ
ಓಂ ಶ್ವೇತಕೋಲವರಾಯ ನಮಃ
ಓಂ ನೀಲಧೇನುಪಯೋಧಾರಾಸೇಕದೇಹೋದ್ಭವಾಯ ನಮಃ
ಓಂ ಶಂಕರಪ್ರಿಯಮಿತ್ರಾಯ ನಮಃ
ಓಂ ಚೋಲಪುತ್ರಪ್ರಿಯಾಯ ನಮಃ
ಓಂ ಸುಧರ್ಮಿಣೇಸುಚೈತನ್ಯಪ್ರದಾತ್ರೇ ನಮಃ ೯೦
ಓಂ ಮಧುಘಾತಿನೇ ನಮಃ
ಓಂ ಕೃಷ್ಣಾಖ್ಯವಿಪ್ರವೇದಾಂತದೇಶಿಕತ್ವಪ್ರದಾಯ ನಮಃ
ಓಂ ವರಾಹಾಚಲನಾಥಾಯ ನಮಃ
ಓಂ ಬಲಭದ್ರಾಯ ನಮಃ
ಓಂ ತ್ರಿವಿಕ್ರಮಾಯ ನಮಃ
ಓಂ ಮಹತೇ ನಮಃ
ಓಂ ಹೃಷೀಕೇಶಾಯ ನಮಃ
ಓಂ ಅಚ್ಯುತಾಯ ನಮಃ
ಓಂ ನೀಲಾದ್ರಿನಿಲಯಾಯ ನಮಃ
ಓಂ ಕ್ಷೀರಾಬ್ಧಿನಾಥಾಯ ನಮಃ ೧೦೦
ಓಂ ವೈಕುಂಠಾಚಲವಾಸಿನೇ ನಮಃ
ಓಂ ಮುಕುಂದಾಯ ನಮಃ
ಓಂ ಅನಂತಾಯ ನಮಃ
ಓಂ ವಿರಿಂಚಾಭ್ಯರ್ಥಿತಾನೀತಸೌಮ್ಯರೂಪಾಯ ನಮಃ
ಓಂ ಸುವರ್ಣಮುಖರೀಸ್ನಾತಮನುಜಾಭೀಷ್ಟದಾಯಿನೇ ನಮಃ
ಓಂ ಹಲಾಯುಧಜಗತ್ತೀರ್ಥಸಮಸ್ತಫಲದಾಯಿನೇ ನಮಃ
ಓಂ ಗೋವಿಂದಾಯ ನಮಃ
ಓಂ ಶ್ರೀನಿವಾಸಾಯ ನಮಃ ೧೦೮

ಆಳ್ವಾರರ ನುಡಿಮುತ್ತುಗಳು

ಆಳ್ವಾರರ ನುಡಿಮುತ್ತುಗಳು

ಅರಿಕೆ

ವೇಂಗಡದ ಒಡೆಯ ನನ್ನ ಕುಲದೈವ, ಇಷ್ಟದೈವ. ಹಲಕಾಲದ ನನ್ನ ಹಿರಿಯರಂತೆ ನಾನೂ ಅವನಿಗೆ ನಡೆದುಕೊಳ್ಳುತ್ತ ಬಂದಿದ್ದೇನೆ. ಅವನ ಹಿರಿಮೆಯನ್ನು, ಅವನು ನಿಂತ ಬೆಟ್ಟದ ಹೆಗ್ಗಳಿಕೆಯನ್ನು ಹಾಡಿ ಹೊಗಳಿದ ಆಳ್ವಾರರ ಪಾಶುರಗಳನ್ನು ಓದಬೇಕೆಂಬ ತವಕ ನನ್ನಲ್ಲಿ ಮೂಡಿ ಬಂದುದು ಸೋಜಿಗವೇನಲ್ಲ.

ಕನ್ನಡದವನಿಗೆ ತಮಿಳೇನು ದೂರದ ನುಡಿಯೆ? ಆದರೆ ಆಳ್ವಾರರ ಪ್ರಬಂಧಗಳು ಶಾಸ್ತ್ರಕ್ಕೆ ಸಮ. ಅದರ ಅರ್ಥಾನುಸಂಧಾನವಿರದೆ ಮನಸ್ಸಿನ ಸಂಸ್ಕಾರ ಆಗದು. ವೇಂಗಡದೊಡೆಯನಿಗೆ ಆಳ್ವಾರರು ಮಾಡಿರುವ ಮಂಗಳಾಶಾಸನ ಪಾಶುರಗಳನ್ನಾದರೂ ಸಂಪ್ರದಾಯದಂತೆ ಅಧ್ಯಯನ ಮಾಡಬೇಕೆಂಬ ಬಯಕೆಯಿಂದ ಹಿರಿಯರಾದ ಹೆಮ್ಮಿಗೆ ದೇಶಿಕಾಚಾರ್ಯರಲ್ಲಿ ಕೆಲಕಾಲ ಕ್ರಮವರಿತು ಕಲಿತದ್ದಾಯಿತು.

ಆಳ್ವಾರರ ಭಾವಬಂಧುರತೆ, ಅವರ ನುಡಿಗಟ್ಟಿನ ಸೊಗಸು, ಭಗವದ್ವಿಷಯದ ಸ್ವಾರಸ್ಯ ಇವೆಲ್ಲ ಮನಸ್ಸಿನಲ್ಲಿ ಮೂಡುವಂತೆ ಪಾಠ ಹೇಳಿದ ದೇಶಿಕಾಚಾರ್ಯರ ಪಾಂಡಿತ್ಯ, ಸೌಜನ್ಯ, ವಿನಯ, ಭಕ್ತಿ, ಭಾವುಕತೆ ಇವುಗಳಿಗೆ ಮಾರುಹೋದೆ. ನನ್ನ ಬಾಳಲ್ಲಿ ಅವರ ಸಂಪರ್ಕವೊಂದು ರಸಘಟ್ಟ.

ಮುಂದೆ, ಅವರು ತೀರಿಕೊಳ್ಳಲು ಅವರು ತೋರಿಸಿದ ದಾರಿಯನ್ನೇ ಹಿಡಿದು ಉಳಿದ ಪಾಶುರಗಳನ್ನು ನಾನಾಗಿ ವ್ಯಾಖ್ಯಾನ, ಅನುವಾದ, ನಿಘಂಟುಗಳ ನೆರವಿನಿಂದ ನನ್ನ ಶಕ್ತಿಯಿದ್ದಷ್ಟು ಓದಿಕೊಂಡೆ. ಅವುಗಳಲ್ಲಿ ನನಗೆ ತುಂಬ ಹಿಡಿಸಿದುವನ್ನು ನನ್ನ ಮನನಕ್ಕೆಂದು ಗುರುತುಮಾಡಿಕೊಂಡೆ. ಮತ್ತೆ ಮತ್ತೆ ಅವುಗಳನ್ನು ಓದುತ್ತ, ಅವನ್ನೇ ಕುರಿತು ಚಿಂತಿಸುತ್ತ ಇದ್ದಾಗ ಈ ಅನುವಾದದ ಬಯಕೆ ಮೂಡಿಬಂದಿತು. ಮೂಲದ ಮಾತುಗಳಿಗೆ ಹತ್ತಿರವಾಗಿ, ಮೂಲದ ಭಾವದ ಬೆನ್ನುಹಿಡಿದು ಪದ್ಯಾನುವಾದವನ್ನೇ ಮಾಡಬೇಕೆನಿಸಿತು. ಮಾಡತೊಡಗಿದೆ.

ಅವುಗಳಲ್ಲಿ ಎಪ್ಪತ್ತೈದು ಪದ್ಯಗಳು ಇಲ್ಲಿವೆ; ಐವರು ಆಳ್ವಾರರ (ಮೊದಲ ಮೂವರು, ತಿರುಮಳಿಶೈ ಮತ್ತು ನಮ್ಮಾಳ್ವಾರ್) ಪ್ರಬಂಧಗಳಿಂದ ಆಯ್ದುಕೊಂಡುವು; ಬಹುಮಟ್ಟಿಗೆ ವೇಂಗಡದೊಡೆಯನನ್ನೇ ಕುರಿತವು. ಈ ಪದ್ಯಗಳು ಮುಖ್ಯವಾಗಿ ಭಾವಾನುವಾದಗಳಾದರೂ ಮೂಲದ ಮಾತುಗಳನ್ನೂ ನಿರೂಪಣೆಯ ಕ್ರಮವನ್ನೂ ಸಾಧ್ಯವಾದ ಮಟ್ಟಿಗೂ ಉಳಿಸಿಕೊಳ್ಳಲು ಯತ್ನಿಸಿದ್ದೇನೆ.

ಈ ಪದ್ಯಗಳಿಗೆ ಗದ್ಯಾನುವಾದ, ಸಂಪ್ರದಾಯದ ವಿವರಣೆ ಮತ್ತು ಸ್ವತಂತ್ರವಾದ ವಿವೇಚನೆಗಳನ್ನು ಕೊಡುವ ಉದ್ದೇಶವಿದ್ದಿತು. ನಲವತ್ತಕ್ಕೂ ಮೀರಿ ಪದ್ಯಗಳಿಗೆ ಈ

ಬಗೆಯ ಬಾಲವನ್ನು ಸೇರಿಸಿಯೂ ಆಗಿತ್ತು. ಆದರೆ ಮತ್ತೊಮ್ಮೆ ಅದನ್ನು ನೋಡಿದಾಗ ರಸಿಕರ ಮೇಲೆ ಈ ಹೊರೆಯನ್ನು ಹೊರಿಸಲೇಕೆ ಎನಿಸಿತು. ಹಾಗಾಗಿ ಇಲ್ಲಿ ಯಾವ ವ್ಯಾಖ್ಯಾನವೂ ವಿವರಣೆಯೂ ಇರದೆ ಬರಿಯ ಮೂಲ, ಪದ್ಯಾನುವಾದ ಮಾತ್ರ ಉಳಿದುಕೊಂಡುವು. ತೀರ ಅಗತ್ಯವೆನಿಸಿದ ಕೆಲವು ಕಡೆ ಅಗತ್ಯವಾದಷ್ಟೇ ಅಡಿಟಿಪ್ಪಣಿಗಳನ್ನು ಮಾತ್ರ ಸೇರಿಸಿದ್ದೇನೆ.

ಪದ್ಯಾನುವಾದವನ್ನು ಓದಿ, ಮೂಲದ ಕಡೆ ಕಣ್ಣನ್ನು ಹೊರಳಿಸಿ ಅದರ ಚೆಲುವನ್ನು ಅರಿತುಕೊಳ್ಳುವುದು ಸಾಧ್ಯವಾದರೆ ನಾನು ಕೃತಕೃತ್ಯ, ಧನ್ಯ. ಮೂಲವೇ ಬಹುಕಾಲ ಉಳಿಯುವ ಸಾಮಗ್ರಿ; ಅನುವಾದ ಅದಕ್ಕೆ ಆಗಾಗ ಎತ್ತಿಹಿಡಿದ ಸಣ್ಣ ಸೊಡರು ಅಷ್ಟೆ, ಅದಕ್ಕೆ ಸ್ವತಂತ್ರವಾದ ಸತ್ತ್ವ ಸ್ವಲ್ಪವಾದರೂ ಇದ್ದೀತೋ ನಾನರಿಯೆ.

ತಮಿಳುಮೂಲವನ್ನು ಕನ್ನಡಲಿಪಿಯಲ್ಲಿ ಕಾಣಿಸುವಾಗ ಕೆಲವು ತೊಡಕುಗಳಿವೆ. 'ಕ' ಎನ್ನುವ ಶಬ್ದ ತಮಿಳಲ್ಲಿ 'ಗ' ಎಂದೋ 'ಹ' ಎಂದೋ ತೋರಿಕೊಳ್ಳುತ್ತದೆ; ನಾನು ಬಹುಮಟ್ಟಿಗೆ 'ಗ'ಕಾರವನ್ನೇ ಬಳಸಿದ್ದೇನೆ. ಹಾಗೆಯೇ ಕನ್ನಡದ ಮಾತಿಗೆ ಹೆಚ್ಚು ಹೊಂದುವಂತೆ 'ತ'ಕಾರವನ್ನು 'ದ'ಕಾರ ಮಾಡಿದ್ದೇನೆ. ತಮಿಳಿನ 'ಳ' ಎಂಬ ಅಕ್ಷರವಾಗಲೀ ಉಚ್ಚಾರಣೆಯಾಗಲೀ ಕನ್ನಡದಲ್ಲಿ ಇಲ್ಲ; ಶಕಟರೇಫವೂ ಈಗ ಇಲ್ಲ. ಅದನ್ನು ಬಿಟ್ಟಿದ್ದೇನೆ. ಸಂಯುಕ್ತಾಕ್ಷರಗಳನ್ನು ಬರೆಯುವ ಕ್ರಮವನ್ನೂ ಹೊಸಗನ್ನಡ ಧಾಟಿಗೆ ಹೊಂದಿಸಿಕೊಂಡಿದ್ದೇನೆ. ನಿದರ್ಶನಕ್ಕೆ ತಮಿಳಿನಲ್ಲಿ 'ವೇಣ್ಡುಮ್' ಎನ್ನುವುದು ಇಲ್ಲಿ 'ವೇಂಡುಂ' ಎಂದು ಕಾಣುತ್ತದೆ. ಒತ್ತಕ್ಷರಗಳಲ್ಲಿ ಬಹುವೇಳೆ ತಮಿಳಿನ ಪದ್ಧತಿಯನ್ನೇ ಹಿಡಿದು 'ವೇರ್‌ಪು' (ವೇರ್ಪು), 'ಶೀರ್‌ಕ್ಕುಂ' (ಶೀರ್ಕುಂ), 'ಅಮರ್‌ನ್ದು' (ಅಮರ್ನ್ದು) ಎಂದು ಮುಂತಾಗಿ ಬಳಸಿದ್ದೇನೆ.

ಅನುಬಂಧವಾಗಿ ಆಳ್ವಾರರನ್ನು ಕುರಿತ ಒಂದು ಪ್ರಬಂಧವನ್ನೂ ಬರೆದು ಸೇರಿಸಿದ್ದೇನೆ. ಆಳ್ವಾರರ ಪರಿಚಯ ಸಾಲದವರು ಅದನ್ನೇ ಮೊದಲು ಓದಿಕೊಂಡರೆ ಒಳ್ಳೆಯದು.

—ಸಾ. ಕೃ. ರಾಮಚಂದ್ರರಾವ್

ಆಳ್ವಾರರನ್ನು ಕುರಿತು

'ಆಳ್‌ವಾರ್' ಎನ್ನುವ ತಮಿಳುಮಾತಿಗೆ "ಆಳವಾಗಿ ಮುಳುಗಿರುವವರು" ಎಂದಷ್ಟೇ ಅರ್ಥ. ಭಗವದನುಭವವೆಂಬ ಕಡಲಲ್ಲಿ ಮುಳುಗಿ ತಳವನ್ನು ಮುಟ್ಟಿದವರೆಂದು ವಿವರಣೆ. ಭಗವದನುಭವವನ್ನು ಪಡೆದುಕೊಂಡು ಮೈಮರೆತ ಯಾವ ಸಂತನಿಗಾಗಲಿ ಈ ವಿಶೇಷಣ ಒಪ್ಪುವುದಾದರೂ ವಿಶೇಷವಾಗಿ ಶ್ರೀವೈಷ್ಣವಸಂಪ್ರದಾಯದಲ್ಲಿ ಮಾನ್ಯರೆನಿಸಿದ ಹತ್ತು-ಹನ್ನೆರಡು ಮಂದಿ ಭಕ್ತಕವಿಗಳನ್ನು ಈ ಹೆಸರಿನಿಂದ ಕರೆಯುವುದು ವಾಡಿಕೆ. ಇವರೆಲ್ಲ ತಮಿಳುನಾಡಿನ ಪ್ರಾಚೀನ ಸಂತರು; ಬೇರೆ ಬೇರೆ ಕಾಲದವರು, ಬೇರೆ ಬೇರೆ ಊರಿನವರು, ಬೇರೆ ಬೇರೆ ಜಾತಿಯವರು, ಬೇರೆ ಬೇರೆ ವೃತ್ತಿಗಳನ್ನು ಹಿಡಿದಿದ್ದವರು, ಬೇರೆ ಬೇರೆ ಮನೋವೃತ್ತಿಗಳನ್ನು ಪಡೆದಿದ್ದವರು. ಆದರೆ ಇವರೆಲ್ಲರಿಗೂ ಸಮಾನವಾಗಿದ್ದ ಧರ್ಮವೆಂದರೆ ಗಾಢವಾದ ವಿಷ್ಣುಭಕ್ತಿ; ಮತ್ತು ಅದಕ್ಕೆ ಹೊಂದಿಕೊಂಡು ಬಂದ ಅದ್ಭುತವಾದ ಕವಿತಾಶಕ್ತಿ.

ವಿಷ್ಣುಭಕ್ತರಾದರೂ ನಿರ್ದಿಷ್ಟವಾದ ಯಾವೊಂದು ಸಂಪ್ರದಾಯಕ್ಕಾಗಲೀ ಪಂಥಕ್ಕಾಗಲೀ ಇವರು ಸೇರಿದ್ದಂತೆ ತೋರುವುದಿಲ್ಲ. ಶ್ರೀವೈಷ್ಣವಸಂಪ್ರದಾಯವೇನೋ ಅವರನ್ನು ತನ್ನವರೆಂದು ಗುರುತಿಸಿ ಆದರಿಸಿತು. ಆದರೆ ಅದು ನಡೆದದ್ದು ಅವರ ಕಾಲ ಮುಗಿದು ನೂರಾರು ವರ್ಷಗಳು ಕಳೆದಮೇಲೇ. ಅವರು ತಮ್ಮ ಕಾಲದಲ್ಲಿ ತಮಿಳುನಾಡಿನಲ್ಲೆಲ್ಲ ತಿರುಗಾಡುತ್ತ, ವಿಷ್ಣುಕ್ಷೇತ್ರಗಳಲ್ಲಿ ತಂಗಿ ಅಲ್ಲಿನ ಅರ್ಚಾಮೂರ್ತಿಗಳನ್ನು ಕಂಡಾಗ ತಮಗಾದ ಅನುಭವವನ್ನು, ತಮಗೊದಗಿದ ಭಾವನೆಗಳನ್ನು ಸರಳವಾದ ಮಾತಿನಲ್ಲಿ, ನೇರವಾದ ರೀತಿಯಲ್ಲಿ ಮನಮುಟ್ಟುವಂತೆ ಹಾಡಿದರು. ಅವರು ಹಾಡಿದ ಹಾಡುಗಳಲ್ಲಿ ಎದ್ದುಕಾಣುವ ವಿವರಗಳೆಂದರೆ ಕ್ಷೇತ್ರವರ್ಣನೆ, ಉತ್ಸವವರ್ಣನೆ, ಪ್ರಕೃತಿವರ್ಣನೆ, ಅರ್ಚಾಮೂರ್ತಿಯ ವೈಭವ, ಬರಡು ಬಾಳುವೆಯ ಅಳಲು, ಭಕ್ತನ ಕಾತರ, ಸಾಕ್ಷಾತ್ಕಾರದ ದಾರಿ, ಭಗವದನುಭವದಿಂದ ಬಂದ ಆನಂದ ಇವು. ಬಾಳಿಗೆ ಬೆಳಕನ್ನು ನೀಡುವಂಥ ಆಲೋಚನೆಗಳು ಇಲ್ಲಿವೆ. ಆದರೆ ಇಡೀ ಮಾನವಸಮುದಾಯಕ್ಕೆ ಸಮನಾಗಿಯೇ ಹೊಂದಿಕೊಳ್ಳುವ ಗುಣವನ್ನು ಇಲ್ಲಿ ಕಾಣುವೆವು.

ಇವರ ಕವಿತೆಗಳಲ್ಲಿ ಗೇಯಗುಣವೇ ಪ್ರಧಾನವಾಗಿರುವುದರಿಂದ, ಜನರು ಅವನ್ನು ಕ್ಷೇತ್ರಗಳಲ್ಲಿ, ಉತ್ಸವಸಂದರ್ಭಗಳಲ್ಲಿ, ಅರ್ಚಾಮೂರ್ತಿಗಳೆದುರು ಹಾಡಿಕೊಳ್ಳುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ. ಈ ಕವಿತೆಗಳು ಉಳಿದುಕೊಂಡು ಬಂದುದೇ ಹೀಗೆ. ಅವರ ಹಿರಿಮೆಯನ್ನು ಪಂಡಿತವರ್ಗವೂ ಕಂಡುಕೊಂಡುದು ಶ್ರೀವೈಷ್ಣವ ಸಂಪ್ರದಾಯದ ಆಚಾರ್ಯರಲ್ಲಿ ಮೊದಲಿಗರಾದ ನಾಥಮುನಿಗಳ ಕಾಲದಲ್ಲಿ, ಎಂದರೆ ಹತ್ತನೆಯ ಶತಮಾನದಲ್ಲಿ. ಶ್ರೀವೈಷ್ಣವಸಂಪ್ರದಾಯದ ಆಚಾರ್ಯತ್ರಯರಲ್ಲಿ ಇವರು

ಮೊದಲನೆಯವರು; ಇವರ ಮಗ ಯಾಮುನಮುನಿಗಳು (ಆಳವಂದಾರ್ ಎಂದು ಇವರ ಹೆಸರು) ಎರಡನೆಯವರು; ಯಾಮುನರ ಮೊಮ್ಮಗ ತಿರುಮಲೆನಂಬಿ ಅಥವಾ ಶ್ರೀಶೈಲಪೂರ್ಣರ ಸೋದರಳಿಯ ರಾಮಾನುಜರು (1019-1139) ಮೂರನೆಯವರು.

ನಾಥಮುನಿಗಳು ಆಳ್ವಾರರ ಹಿರಿಮೆಯನ್ನು ಅರಿತುಕೊಂಡ ವಿಚಾರವಾಗಿ ಕಥೆಯೊಂದಿದೆ. ನಾಥಮುನಿಗಳು ಈಗಿನ ದಕ್ಷಿಣ ಆರ್ಕಾಟ್ ಜಿಲ್ಲೆಯ ವೀರ ನಾರಾಯಣಪುರದವರು; ಸಂಸ್ಕೃತದಲ್ಲಿ ವಿದ್ವಾಂಸರು, ಶಾಸ್ತ್ರವನ್ನೆಲ್ಲ ಚೆನ್ನಾಗಿ ಅಭ್ಯಾಸ ಮಾಡಿದ್ದವರು, ಯೋಗಿಗಳು. ನಾಡಲ್ಲೆಲ್ಲ ಸುತ್ತಾಡಿ ಊರಿಗೆ ಹಿಂದಿರುಗಿ ನೆಲೆಸಿದ್ದರು. ಒಂದು ದಿನ ಊರ ಗುಡಿಯಲ್ಲಿ ಯಾರೋ ಇಬ್ಬರು ಪರವೂರ ವೈಷ್ಣವರು ದೇವರೆದುರು ತಮಿಳುಹಾಡುಗಳನ್ನು ಹಾಡುತ್ತಿದ್ದುದನ್ನು ಕೇಳಿದರು. ಹಾಡುಗಳ ಇಂಪು, ಮಾತುಗಳ ಸೊಗಸು, ಸಾಹಿತ್ಯದ ಭಾವಪುಷ್ಟಿ, ಭಕ್ತಿಯ ಹೊನಲು ಇವನ್ನೆಲ್ಲ ಗಮನಿಸಿ ಕುತೂಹಲವನ್ನು ತಳೆದು ಆ ಹಾಡುಗಳನ್ನು ರಚಿಸಿದವರು ಯಾರೆಂದೂ ಅವರ ಇನ್ನಷ್ಟು ಹಾಡುಗಳನ್ನು ಹಾಡುವಂತೆಯೂ ಕೇಳಿಕೊಂಡರು. ವೈಷ್ಣವರು ಆ ಹಾಡುಗಳು ನಮ್ಮಾಳ್ವಾರರೆಂಬುವರು ರಚಿಸಿದ ಪಾಶುರಗಳೆಂದೂ, ಅವನ್ನು ತಾವು ಕುಂಭಕೋಣದ ನೆರೆಯಲ್ಲಿ ತಿರುಕ್ಕುಡಂದೈ ಎಂಬ ಊರಿನ ಆರಾವಮುದನ್ ದೇವರ ಸನ್ನಿಧಿಯಲ್ಲಿ ಹಾಡುತ್ತಿದ್ದುದನ್ನು ಕೇಳಿ ಕಲಿತೆವೆಂದೂ, ಅಷ್ಟಕ್ಕಿಂತ ಹೆಚ್ಚು ಹಾಡುಗಳು ತಮಗೆ ಬಾರವೆಂದೂ ತಿಳಿಸಿದರು. ಹೀಗೆ ನಾಥಮುನಿಗಳ ಒಡಲನ್ನು ಮರುಳುಮಾಡಿದ ಪಾಶುರ "ಆರಾವಮುದೇ ಅಡಿಯೇನುಡಲಂ ನಿನ್ ಪಾಲನ್ಬಾಯೇ" ಎಂದು ಮೊದಲಾಗುತ್ತದೆ.

ಈ ಪಾಶುರಗಳ ಬೆನ್ನಟ್ಟಿ ನಾಥಮುನಿಗಳು ಕುಂಭಕೋಣಕ್ಕೆ ಹೋದರು. ಅಲ್ಲಿ ತಿರುಕ್ಕುಡಂದೈ ಗುಡಿಯಲ್ಲಿ ಅವರಿಗೆ ಹತ್ತು ಪಾಶುರಗಳು ದೊರೆತವು; ಉಳಿದವನ್ನು ಪಡೆಯಬೇಕೆಂದರೆ ನಮ್ಮಾಳ್ವಾರರ ತೌರೂರಾದ ತಿರುಕ್ಕುರುಗೂರಿಗೇ (ಆಳ್ವಾರ್ ತಿರುನಗರಿಗೇ) ಹೋಗಬೇಕೆಂದೂ ತಿಳಿಯಿತು. ನಾಥಮುನಿಗಳು ಆ ಊರಿಗೂ ಹೋದರು. ಅಲ್ಲಿ ಹಲವು ಪಾಶುರಗಳನ್ನು ಬಲ್ಲ ಪರಾಂಕುಶದಾಸರೆಂಬುವರನ್ನು ಕಂಡರು. ನಮ್ಮಾಳ್ವಾರರ ಶಿಷ್ಯರಾಗಿದ್ದ ಮಧುರ-ಕವಿಯಾಳ್ವಾರರ ಸೇವೆಯನ್ನು ಮಾಡಿದ್ದವರು ಪರಾಂಕುಶದಾಸರು. ಆದರೆ ಅವರಿಗೆ ನಮ್ಮಾಳ್ವಾರರ ರಚನೆಗಳೆಲ್ಲದರ ಪರಿಚಯವಿರಲಿಲ್ಲ. ನಾಥಮುನಿಗಳ ಕುತೂಹಲವನ್ನೂ ಆದರವನ್ನೂ ಅಧಿಕಾರವನ್ನೂ ಅರಿತುಕೊಂಡು ದಾಸರು ತಮ್ಮ ಗುರುಗಳಾದ ಮಧುರಕವಿಯಾಳ್ವಾರರ "ಕಣ್ಣಿನುಣ್ ಶಿರುತ್ತಾಂಬಿನಾಲ್" ಎಂದು ಮೊದಲಾಗುವ ಹನ್ನೊಂದು ಪಾಶುರಗಳನ್ನು ಅವರಿಗೆ ಹೇಳಿಕೊಟ್ಟು, ಅವನ್ನು ಹನ್ನೆರಡು ಸಾವಿರ ಬಾರಿ ಪಠಿಸಿದರೆ ನಮ್ಮಾಳ್ವಾರರ ಅನುಗ್ರಹ ವಾಗುವುದೆಂದು ಸೂಚಿಸಿದರು.

ಯೋಗಿಗಳಾದ ನಾಥಮುನಿಗಳು ನಮ್ಮಾಳ್ವಾರರನ್ನೇ ಧ್ಯಾನಿಸುತ್ತ ಈ ಪಾಶುರ ಗಳನ್ನು ಪುರಶ್ಚರಣಮಾಡಿದಾಗ ನಮ್ಮಾಳ್ವಾರರ ಚೇತನ ಅವರೆದುರು ಕಾಣಿಸಿಕೊಂಡು ತಿರುವಾಯ್ಮೊಳಿಯ ಒಂದು ಸಾವಿರ ಪಾಶುರಗಳನ್ನು ತಿಳಿಯ ಹೇಳಿತು. ಏಕಸಂತ

ಗ್ರಾಹಿಗಳಾಗಿದ್ದ ನಾಥಮುನಿಗಳು ಅವನ್ನೆಲ್ಲ ಒಡನೆಯೇ ಮನದಟ್ಟುಮಾಡಿಕೊಂಡರು. ನಮ್ಮಾಳ್ವಾರರ ತಿರುವಾಯ್ಮೊಳಿ (ಎಂದರೆ 'ಸಿರಿಬಾಯನುಡಿ') ನಾಥಮುನಿಗಳಿಗೆ ದೊರೆತ ನಂತರ ಅವರು ಅದರ ಹಿರಿಮೆಯನ್ನು ಒಂದು ಸಂಸ್ಕೃತ'ತನಿಯನ್'ನಲ್ಲಿ ಸಂಗ್ರಹ ಮಾಡಿದರು—

ಭಕ್ತಾಮೃತಂ ವಿಶ್ವಜನಾನುಮೋದನಂ
ಸರ್ವಾರ್ಥದಂ ಶ್ರೀಶಠಕೋಪವಾಙ್ಮಯಮ್।
ಸಹಸ್ರಶಾಖೋಪನಿಷತ್ಸಮಾಗಮಂ
ನಮಾಮ್ಯಹಂ ದ್ರಾವಿಡವೇದಸಾಗರಮ್॥

ತಿರುವಾಯ್ಮೊಳಿಯು ಸಾಮವೇದದ ಸಾರವೆಂದೂ, ಉಪನಿಷತ್ತಿಗೆ ಸಮನಾದು ದೆಂದೂ ಅವರು ಗ್ರಹಿಸಿದರು.

ನಾಥಮುನಿಗಳಿಂದ ಮೊದಲಾಗಿ ರಾಮಾನುಜರಿಂದ ವ್ಯವಸ್ಥಿತವಾದ ಶ್ರೀವೈಷ್ಣವ ಸಂಪ್ರದಾಯದಲ್ಲಿ ನಮ್ಮಾಳ್ವಾರರು ಸೇರಿಕೊಂಡದ್ದು ಹೀಗೆ. ಈ ಸಂಪ್ರದಾಯದ ಆಚಾರ್ಯಪರಂಪರೆಯಲ್ಲಿ ಅಸ್ಮದ್ದೇಶಿಕ (ಎಂದರೆ, ತನಗೆ ನೇರವಾದ ಆಚಾರ್ಯರು), ಪರಮಾಚಾರ್ಯ, ರಾಮಾನುಜ, ಮಹಾಪೂರ್ಣ (ಪೆರಿಯ ನಂಬಿ), ಯಾಮುನ ಮುನಿ, ರಾಮ (ಮಣಕ್ಕಾಲ್ ನಂಬಿ), ಪದ್ಮಲೋಚನ (ಉಯ್ಯಕೊಂಡರ್), ನಾಥಮುನಿ (ಆಳವಂದಾರ್), ಶಠದ್ವೇಷಿ (ಅಥವಾ ಶಠಕೋಪ, ಎಂದರೆ ನಮ್ಮಾಳ್ವಾರ್), ಸೇನೇಶ (ವಿಷ್ವಕ್ಸೇನ), ಶ್ರೀ (ಲಕ್ಷ್ಮಿ), ನಾರಾಯಣ ಎಂಬ ಕ್ರಮವಿದೆ. ಈ ಪರಂಪರೆಯಲ್ಲಿ ಉಳಿದ ಆಳ್ವಾರರು ಸೇರುವುದಿಲ್ಲ. ಆದರೆ ವ್ಯವಹಾರದಲ್ಲಿ ಎಲ್ಲ ಆಳ್ವಾರರನ್ನೂ ದಿವ್ಯಸೂರಿಗಳೆಂದು ಕರೆದು ಮೂವರು ಆಚಾರ್ಯರಿಗೆ (ಎಂದರೆ, ನಾಥಮುನಿ, ಯಾಮುನ, ರಾಮಾನುಜ) ಪೂರ್ವಸೂರಿಗಳೆಂದೂ ಮಾರ್ಗದರ್ಶಿ ಗಳೆಂದೂ ಹೇಳುವುದಿದೆ. ಆಳ್ವಾರರ ಗೋಷ್ಠಿಯಲ್ಲೇ ರಾಮಾನುಜರನ್ನೂ ಸೇರಿಸಿ ಹದಿಮೂರನೆಯ ಆಳ್ವಾರರೆಂದು ಕರೆಯುವುದೂ ಉಂಟು.

ಆದರೆ ಶಠಕೋಪರೆಂಬ ಹೆಸರಿನ ನಮ್ಮಾಳ್ವಾರರೇ ಮೊದಲಿನ 'ಆಳ್ವಾರ'ರೆಂದು ಕರೆಯಿಸಿಕೊಂಡವರು. ಅವರ ತಿರುವಾಯ್ಮೊಳಿಯ ಮೊದಲ ಪಾಶುರಕ್ಕೆ ವ್ಯಾಖ್ಯಾನವನ್ನು ಬರೆಯುತ್ತ ಮೊದಲಲ್ಲೇ ತಿರುಕ್ಕುರುಕೈಪ್ಪಿರಾನ್ ಪಿಳ್ಳಾನ್ ಶಠಕೋಪರನ್ನು 'ಆಳ್ವಾರ್' ಎಂದು ಕರೆದುದು ಈ ವ್ಯವಹಾರಕ್ಕೆ ನಾಂದಿಯಾಯಿತು. ಆಳ್ವಾರೆಂಬ ಮಾತಿಗೆ ಅರ್ಥವನ್ನೂ ಅವರೇ ಬಿಡಿಸಿ ಹೇಳಿದರು. ಅವರು ಒದಗಿಸಿರುವ ಒಕ್ಕಣೆ ಸ್ವಾರಸ್ಯವಾಗಿದೆ—"ನಿಖಿಲ ಜಗದುದಯವಿಭವಾದಿ ಲೀಲನಾಯಿರುನ್ದ ಪರಮ ಪುರುಷನೈ ಉಳ್ಳಪಡಿಯೇ ಆಳ್ವಾರ್ ತಾಮ್ ತಮ್ಮುಡೈಯ ತಿರುಉಳ್ಳತ್ತಾಲೆ ಅನುಭವಿತ್ತು...." ಎಂದರೆ, ಭಗವಂತನನ್ನು ಶಠಕೋಪರು ತಮ್ಮ ಸಿರಿಯೊಡಲಲ್ಲಿ ಅಡಗಿಸಿಕೊಂಡು, ಅದರಲ್ಲಿ ತಾವೇ ಆಳವಾಗಿ ಮುಳುಗಿ ಸಾಕ್ಷಾತ್ಕಾರದ ಸುಖವನ್ನು ನೇರವಾಗಿ ಅನುಭವಿಸಿದರಂತೆ.

ನಮ್ಮಾಳ್ವಾರರೂ ಅವರ ತಿರುವಾಯ್ಮೊಳಿಯೂ ಶ್ರೀವೈಷ್ಣವಸಂಪ್ರದಾಯದಲ್ಲಿ

ಮೊದಲು ಸೇರಿಕೊಂಡು ಬಂದ ವಿವರಗಳು. ಉಳಿದ ಆಳ್ವಾರರ ಅಥವಾ ಅವರ ಪ್ರಬಂಧಗಳ ಪರಿಚಯ ನಾಥಮುನಿಗಳಿಗಾಗಲೀ ಯಾಮುನಮುನಿಗಳಿಗಾಗಲೀ ರಾಮಾನುಜಾಚಾರ್ಯರಿಗಾಗಲೀ ಇದ್ದಿತೆನ್ನುವುದಕ್ಕೆ ಆಧಾರವಿಲ್ಲ. ಹಾಗೆ ನೋಡಿದರೆ, ರಾಮಾನುಜರು ತಮ್ಮ ಯಾವ ಗ್ರಂಥದಲ್ಲಿಯೂ ನಮ್ಮಾಳ್ವಾರರನ್ನಾಗಲೀ ಅವರ ತಿರುವಾಯ್ಮೊಳಿಯನ್ನಾಗಲೀ ಉಲ್ಲೇಖಿಸಿಲ್ಲ. ಆ ಆಳ್ವಾರರ ಪರಿಚಯ ತಮಗಿದ್ದಿತೆನ್ನುವುದನ್ನು ಸೂಚಿಸಿಯೂ ಇಲ್ಲ. ಇನ್ನು ಉಳಿದ ಆಳ್ವಾರರ ಮಾತೇನು? ರಾಮಾನುಜರ ಜ್ಞಾನಪುತ್ರನೆಂದು ಪ್ರಸಿದ್ಧರಾದ ತಿರುಕ್ಕುರಕೈಪ್ಪಿರಾನ್-ಪಿಳ್ಳಾನ್ ಬರೆದ 'ಆರಾಯಿರ ಪ್ಪಡಿ'ಯೇ (ಎಂದರೆ 'ಆರುಸಾವಿರ ಪಡಿ'ಗಳ ವ್ಯಾಖ್ಯಾನ) ತಿರುವಾಯ್ಮೊಳಿಗೆ ಸಿದ್ಧವಾದ ಮೊದಲ ವ್ಯಾಖ್ಯಾನ; ಶ್ರೀವೈಷ್ಣವಸಿದ್ಧಾಂತಕ್ಕೆ ಹೊಂದಿಸಿರುವುದು. ಇವರು ಹುಟ್ಟಿದ್ದು ಕ್ರಿಸ್ತಾಬ್ದ 1062ರಲ್ಲಿ; ತಿರುಮಲೆಯ ಮೇಲೆ. ಅವರೇ ಆಳ್ವಾರರೆಂಬ ಮಾತನ್ನು ಬಳಕೆಗೆ ತಂದವರು; ಆ ಕಾಲಕ್ಕೆ ಅವರಿಗೂ ಅವರ ಸಂಪ್ರದಾಯದವರಿಗೂ ಆಳ್ವಾರರೆಂದರೆ ನಮ್ಮಾಳ್ವಾರರೇ.

ನಮ್ಮಾಳ್ವಾರರ ಮೇಲೆ ನಾಥಮುನಿಗಳಿಗಿದ್ದ ಅಭಿಮಾನ ಅವರ ಮನೆತನದಲ್ಲಿ ಬೆಳೆಯಿತು. ಅವರ ಮಗ ಯಾಮುನಮುನಿಗಳ ಮೊಮ್ಮಗ ತಿರುಮಲೆನಂಬಿ; ಇವರಿಗೆ ಇಬ್ಬರು ಸೋದರಿಯರು. ಒಬ್ಬಳು ಸೋದರಿಯ ಮಗನೇ ರಾಮಾನುಜರು; ಇನ್ನೊಬ್ಬಳು ಸೋದರಿಯ ಮಗ ಗೋವಿಂದಭಟ್ಟ (ಎಂಬಾರ್). ರಾಮಾನುಜರ ಜ್ಞಾನಪುತ್ರ ತಿರುಕ್ಕುರ್‌ಕೈಪ್ಪಿರಾನ್-ಪಿಳ್ಳಾನ್ ತಿರುವಾಯ್ಮೊಳಿಗೆ ಬರೆದ ವ್ಯಾಖ್ಯಾನವನ್ನು ರಾಮಾನುಜರು ನೋಡಿದ್ದರೆಂದೂ, ಅದನ್ನು ಅವರು ಅನುಮೋದಿಸಿ 'ಭಗವದ್ವಿಷಯ' ಎಂಬ ಹೆಸರನ್ನು ಕೊಟ್ಟರೆಂದೂ ಹೇಳುತ್ತಾರೆ. ಆದರೆ ಈ ಪರಂಪರೆಯಲ್ಲಿ ತಿರುವಾಯ್ಮೊಳಿಯ ಮೇಲೆ ವ್ಯಾಖ್ಯಾನಗಳು ಅಷ್ಟಾಗಿ ಬೆಳೆದು ಬರಲಿಲ್ಲ. ಮುಂದೆ ವೇದಾಂತದೇಶಿಕರು 'ಎಳುಪತ್ತು ನಾಲಾಯಿರಪ್ಪಡಿ' (ನಿಗಮಪರಿಮಳಂ) ಎಂಬೊಂದು ವ್ಯಾಖ್ಯಾನವನ್ನು ಬರೆದಿದ್ದರಂತೆ; ಅದು ಉಪಲಬ್ಧವಿಲ್ಲ. ಆದರೆ ಅವರ 'ದ್ರಮಿಡೋಪ ನಿಷತ್ತಾತ್ಪರ್ಯಸಾರಾವಳಿ'ಯೂ 'ದ್ರಾಮಿಡೋಪನಿಷತ್ಸಾರ'ವೂ ಪ್ರಸಿದ್ಧವಾದುವು. ಸಾಕ್ಷಾತ್ ಸ್ವಾಮಿ (ವೇದಾಂತ ರಾಮಾನುಜಸ್ವಾಮಿ) ಎಂಬ ಇನ್ನೊಬ್ಬರು 'ಇರುಪತ್ತು ನಾಲಾಯಿರಪ್ಪಡಿ' ಎಂಬ ವ್ಯಾಖ್ಯಾನವನ್ನು ಬರೆದಿರುವುದೂ ಇದೇ ಪರಂಪರೆಯಲ್ಲೇ.

ಆದರೆ ಗೋವಿಂದಭಟ್ಟರ (ಎಂಬಾರರ) ಶಿಷ್ಯಪರಂಪರೆಯಲ್ಲಿ ತಿರುವಾಯ್ಮೊಳಿ ವಿಶಿಷ್ಟವಾಗಿ ಬೆಳಗಿತು. ಭಟ್ಟರ ಶಿಷ್ಯ ನಂಜೀಯರ್ (ವೇದಾಂತಿ ಜೀಯರ್) ಇದರ ಮೇಲೆ ಬರೆದ ವ್ಯಾಖ್ಯಾನ ತಿರುಕ್ಕುರುಕೈಪ್ಪಿರಾನ್ ಬರೆದದ್ದಕ್ಕಿಂತ ದೊಡ್ಡದು; 'ಒನ್ಬದಿ ನಾಯಿರಪ್ಪಡಿ' (ಎಂದರೆ, 'ಒಂಬತ್ತು ಸಾವಿರಪಡಿ'). ರಾಮಾನುಜರ ಕಾಲದಲ್ಲೇ ಸಿದ್ಧವಾದ ಈ ವ್ಯಾಖ್ಯಾನ ರಾಮಾನುಜರಿಗೆ ತಿಳಿದಿದ್ದಿತೋ ಇಲ್ಲವೋ ಹೇಳಬರುವುದಿಲ್ಲ. ನಂಜೀಯರ್ ನಮ್ಮಾಳ್ವಾರರ ತಿರುವಾಯ್ಮೊಳಿ ಮಾತ್ರವಲ್ಲದೆ ಆಂಡಾಳ್ ರಚಿಸಿದ 'ತಿರುಪ್ಪಾವೈ', ಪೆರಿಯಾಳ್ವಾರರ 'ತಿರುಪ್ಪಲ್ಲಾಂಡು', ಮಧುರಕವಿಯಾಳ್ವಾರರ 'ಕಣ್ಣಿನುಣ್ ಶಿರತ್ತಾಂಬು'—ಇವುಗಳ ಮೇಲೂ ವ್ಯಾಖ್ಯಾನಗಳನ್ನು ಬರೆದರು. ಅವರ ಶಿಷ್ಯ ನಂಪಿಳ್ಳೈ

(ಇವರಿಗೆ ಲೋಕಾಚಾರ್ಯ, ತಿರುಕ್ಕಳಿಕನ್ಱದಾಸರ್, ವರದರಾಜ ಎಂಬ ಹೆಸರುಗಳೂ ಇದ್ದುವು) ಎಂಬುವರ ಶಿಷ್ಯ. ಪೆರಿಯ-ಆಚ್ಚಾನ್-ಪಿಳ್ಳೈ (ಜನನ: ಕ್ರಿಸ್ತಾಬ್ದ 1227) ತಿರುವಾಯ್ಮೊಳಿಯ ಮೇಲೆ 'ಇರುಪತ್ತುನಾಲಾಯಿರಪ್ಪಡಿ' (ಎಂದರೆ, 'ಇಪ್ಪತ್ತು ನಾಲ್ಕು ಸಾವಿರ ಪಡಿ') ಎಂಬ ವ್ಯಾಖ್ಯಾನವನ್ನು ಬರೆದರು. ಅಷ್ಟಲ್ಲದೆ ಅವರು ಉಳಿದ ಎಲ್ಲ ಆಳ್ವಾರರ ರಚನೆಗಳಿಗೂ (ಇಪ್ಪತ್ತುಮೂರು ಪ್ರಬಂಧಗಳಿಗೆ) ವ್ಯಾಖ್ಯಾನವನ್ನು ಸಿದ್ಧಪಡಿಸಿದರು. ಇಡೀ ನಾಲಾಯಿರಪ್ರಬಂಧದ (ನಾಲ್ಕು ಸಾವಿರ ಪಾಶುರಗಳ) ಕಲ್ಪನೆ ಕಾಣುವುದು ಇದೇ ಮೊದಲು. ಅಲ್ಲಿಯವರೆಗೆ ಪ್ರಬಂಧವೆಂದರೆ ನಮ್ಮಾಳ್ವಾರರ ತಿರುವಾಯ್ಮೊಳಿಯಷ್ಟೇ. ಹೀಗೆ ಪ್ರಬಂಧವಾಙ್ಮಯದ ಹರವು ಹಿಗ್ಗಿದುದು ಗೋವಿಂದ ಭಟ್ಟರ ಪರಂಪರೆಯಲ್ಲಿ, ರಾಮಾನುಜರ ಪರಂಪರೆಯಲ್ಲಲ್ಲ ಎಂಬುದನ್ನು ಗಮನಿಸ ಬೇಕು. ಗೋವಿಂದಭಟ್ಟರ ಪರಂಪರೆಯಲ್ಲಿ ಬಂದ ಪೆರಿಯ-ಆಚ್ಚಾನ್-ಪಿಳ್ಳೈ ತೊಂಬತ್ತೈದು ವರ್ಷಕಾಲ ಬದುಕಿದ್ದು ಪ್ರಭಾವಶಾಲಿಗಳಾಗಿದ್ದವರು. ಅವರಿಂದಲೇ ಶ್ರೀವೈಷ್ಣವಸಂಪ್ರದಾಯಕ್ಕೂ ಆಳ್ವಾರರಿಗೂ ನಿಕಟವಾದ ಸಂಬಂಧ ಬೆಳೆದಿದ್ದಿರಬಹುದು.

ಆಳ್ವಾರರ ಸಂಖ್ಯೆ ಹನ್ನೆರಡೆಂದು ಎಣಿಕೆ; ಹತ್ತೆಂದು ಕಾಣಿಸುವುದೂ ಉಂಟು. ಮೊದಲ ಆಳ್ವಾರರು ಮೂವರು; ಪೋಯ್‌ಗೈ, ಪೂದನ್, ಪೇಯನ್. ಇವರು ಕ್ರಿಸ್ತಾಬ್ದ 550ರ ಸುಮಾರಿಗೆ ಸಮಕಾಲಿಕರಾಗಿ ಬದುಕಿದ್ದರೆಂದು ತೋರುತ್ತದೆ. ಇವರು ಒಬ್ಬೊಬ್ಬರೂ ಒಂದು ನೂರು ಪಾಶುರಗಳನ್ನು 'ಅಂತಾದಿ'ಶೈಲಿಯಲ್ಲಿ (ಎಂದರೆ, ಹಿಂದಿನ ಪದ್ಯದ ಕಡೆಯ ಮಾತಿನಿಂದ ಮುಂದಿನ ಪದ್ಯ ಮೊದಲಾಗುವ ಶೈಲಿ) ರಚಿಸಿದ್ದಾರೆ. ಅವಕ್ಕೆ ಕ್ರಮವಾಗಿ ಮುದಲ್ ತಿರುವಂದಾದಿ (ಮೊದಲ ಸಿರಿ-ಅಂತಾದಿ), ಇರಂಡಾಂ ತಿರುವಂದಾದಿ (ಎರಡನೆಯ ಸಿರಿ-ಅಂತಾದಿ) ಮತ್ತು ಮೂನ್ರಾಂ ತಿರುವಂದಾದಿ (ಮೂರನೆಯ ಸಿರಿ-ಅಂತಾದಿ) ಎಂಬ ಹೆಸರುಗಳಿವೆ.

ಉಳಿದ ಆಳ್ವಾರರ ಕ್ರಮವಾಗಲೀ ಕಾಲವಾಗಲೀ ಅಷ್ಟು ನಿರ್ದಿಷ್ಟವಾಗಿಲ್ಲ. ರಾಮಾನುಜರ ಜ್ಞಾನಪುತ್ರರೆಂದು ಹೆಸರಾದ ತಿರುಕ್ಕುರುಕೈಪ್ಪಿರಾನ್-ಪಿಳ್ಳಾನ್ (ಜನ್ಮ ಸಂವತ್ಸರ 1062) ಸಂಸ್ಕೃತದಲ್ಲಿ 'ತನಿಯನ್' ಎನಿಸಿಕೊಳ್ಳುವ ಶ್ಲೋಕವೊಂದನ್ನು ಬರೆದು ಅದರಲ್ಲಿ ಹದಿಮೂವರು ಮಂದಿ ಆಳ್ವಾರರನ್ನು ಹೆಸರಿಸಿದ್ದಾರೆ: ಭೂತ (ಪೂದತ್ತಾಳ್ವಾರ್), ಸರ (ಪೊಯ್‌ಗೈ), ಮಹಹ (ಪೇಯನ್), ಭಟ್ಟನಾಥ (ಪೆರಿಯಾಳ್ವಾರ್), ಭಕ್ತಿಸಾರ (ತಿರುಮಳಿಶೈ), ಕುಲಶೇಖರ, ಯೋಗಿವಾಹ (ತಿರುಪ್ಪಾಣ) , ಭಕ್ತಾಂಘ್ರಿರೇಣು (ತೊಂಡರಡಿಪ್ಪೊಡಿ), ಪರಕಾಲ (ತಿರುಮಂಗೈ), ಯತೀಂದ್ರ (ರಾಮಾನುಜ), ಮಿಶ್ರ (ಮಧುರಕವಿ), ಶ್ರೀ (ಆಂಡಾಳ್, ಗೋದಾದೇವಿ) ಮತ್ತು ಪರಾಂಕುಶ (ನಮ್ಮಾಳ್ವಾರ್). ಈ ಪಟ್ಟಿಯಲ್ಲಿ ಕ್ರಮವನ್ನು ಕಾಣಲಾರೆವು. ಆಚಾರ್ಯರಾದ ರಾಮಾನುಜರನ್ನು ಬಿಟ್ಟರೆ ಹನ್ನೆರಡು ಮಂದಿ ಆಳ್ವಾರರೆಂಬ ಪ್ರತೀತಿ ಆರಂಭವಾದುದನ್ನು ಮಾತ್ರ ಇಲ್ಲಿ ಕಾಣಬಹುದು. ನಮ್ಮಾಳ್ವಾರರ ಶಿಷ್ಯರಾದ ಮಧುರಕವಿ ನಮ್ಮಾಳ್ವಾರರನ್ನು ಕುರಿತೇ ತಮ್ಮ ಪಾಶುರಗಳನ್ನೆಲ್ಲ ಬರೆದು ಭಗವಂತನ ಅರ್ಚಾವತಾರಗಳ ಹಿರಿಮೆಯನ್ನು ಹಾಡಲಿಲ್ಲವಾಗಿ ಅವರನ್ನೂ, ಪೆರಿಯಾಳ್ವಾರರ

ಸಾಕುಮಗಳಾದ ಆಂಡಾಳ್ ಭಗವತ್ಸಹಚಾರಿಣಿಯೇ ಆದುದರಿಂದ ಅವಳನ್ನೂ ಆಳ್ವಾರರ ಪಟ್ಟಿಯಲ್ಲಿ ಸೇರಿಸದೆ ಆಳ್ವಾರರು ಹತ್ತೇ ಮಂದಿಯೆಂದು ಹೇಳುವುದುಂಟು. ಆದರೆ ಹನ್ನೆರಡೆನ್ನುವುದೇ ವಾಡಿಕೆ.

ಈ ಹನ್ನೆರಡು ಮಂದಿ ಆಳ್ವಾರರ ಕಾಲಕ್ರಮವನ್ನು ಕುರಿತು ನಾಲ್ಕು ಬೇರೆ ಬೇರೆ ಎಣಿಕೆಗಳಿವೆ. ರಾಮಾನುಜರ ತರುವಾಯ ತಿರುವರಂಗತ್ತು-ಅಮುದನಾರ್ ಎಂಬುವರು ರಚಿಸಿದ 'ರಾಮಾನುಜ-ನೂತ್ರಂದಾದಿ' ಎಂಬ ಪ್ರಬಂಧದಲ್ಲಿ ಬರುವುದು ತುಂಬ ಹಿಂದಿನದು. ಅನಂತರ ವೇದಾಂತದೇಶಿಕರ 'ಪ್ರಬಂಧಸಾರ'ದಲ್ಲಿ ಬರುವುದು; ಹದಿನಾಲ್ಕನೆಯ ಶತಮಾನದ ನಡುಭಾಗಕ್ಕೆ ಸೇರಿದ್ದು. ಮನವಾಳ-ಮಾಮುನಿಗಳು (ಪೆರಿಯ ಜೀಯರ್, 1370-1443) ಬರೆದಿರುವ 'ಉಪದೇಶರತ್ನಮಾಲೈ'ನಲ್ಲಿ ಬರುವುದು ಮೂರನೆಯದು. ಅವರ ಶಿಷ್ಯವರ್ಗಕ್ಕೆ ಸೇರಿದ್ದ ಅಪ್ಪಿಳ್ಳೈ ಬರೆದಿರುವ 'ವಾಳಿ-ತಿರುನಾಮಂ'ನಲ್ಲಿ ಬರುವ ಒಕ್ಕಣೆ ನಾಲ್ಕನೆಯದು. ವೇದಾಂತದೇಶಿಕರು ಕೊಟ್ಟಿರುವ ಪಟ್ಟಿಯಲ್ಲಿ ಆಳ್ವಾರರುರ ಹುಟ್ಟಿದ ಊರು, ಮಾಸ, ನಕ್ಷತ್ರಗಳ ವಿವರಗಳೂ ಇವೆ. ಅವರ ಪಟ್ಟಿಗೂ ಅಪ್ಪಿಳ್ಳೈ ಒದಗಿಸಿರುವ ಪಟ್ಟಿಗೂ ಸುಮಾರಾಗಿ ಹೊಂದಾಣಿಕೆಯಿದೆ. ದೇಶಿಕರ ಪಟ್ಟಿಯನ್ನೇ ಹಿಡಿದರೆ, ಆಳ್ವಾರರ ಕ್ರಮ ಹೀಗೆ—ಪೊಯ್‌ಗೈ, ಭೂತಂ, ಪೇಯನ್, ತಿರುಮಳಿಶೈ, ನಮ್ಮಾಳ್ವಾರ್, ಮಧುರಕವಿ, ಕುಲಶೇಖರ, ಪೆರಿಯಾಳ್ವಾರ್, ಆಂಡಾಳ್, ತೊಂಡರಪ್ಪೊಡಿ, ತಿರುಪ್ಪಾಣ, ತಿರುಮಂಗೈ.

ಮೊದಲ ಮೂವರು ಆಳ್ವಾರರನ್ನು ಬೇರೆಯಾಗಿ 'ಮೊದಲಾಳ್ವಾರ್'ರೆಂದು ಗುರುತಿಸುತ್ತಾರೆ. ಪೊಯ್‌ಗೈ ಕಚ್ಚಿಯಲ್ಲಿ ಅಪರ್ಜಶಿಮಾಸದ ಶ್ರವಣನಕ್ಷತ್ರದಲ್ಲಿ ಹುಟ್ಟಿದವರು; ಭೂದತ್ತಾಳ್ವಾರರು ಕಡಲ್‌ಮಲ್ಲೈ (ಅಥವಾ ಮಾಮಲ್ಲೈ, ಈಗಿನ ಮದ್ರಾಸಿನ ನೆರೆಯ ಮಹಾಬಲಿಪುರಂ)ನಲ್ಲಿ ಅದೇ ಮಾಸದ ಆವಿಟ್ಟಂನಲ್ಲಿ ಹುಟ್ಟಿದವರು; ಪೇಯಾಳ್ವಾರರು ಮಯಿಲೈ ಎಂಬಲ್ಲಿ ಅದೇ ಮಾಸದ ಶತಯಂನಲ್ಲಿ ಹುಟ್ಟಿದವರು. ಮೂವರೂ ಕಲೆತದ್ದು ತಿರುಕ್ಕೋವಲೂರಿನಲ್ಲಿ. ಅದನ್ನು ಕುರಿತು ಕಥೆಯೊಂದಿದೆ: ಪೊಯ್‌ಗೈ ಆಳ್ವಾರರು ಅಲ್ಲಲ್ಲಿ ತಿರುಗಾಡುತ್ತ ತಿರುಕ್ಕೋವಲೂರಿಗೆ ಬಂದರಂತೆ. ಆಗ ತಾನೆ ಇರುಳು ಕವಿಯುತ್ತಿತ್ತು; ಮಳೆ ಸುರಿಯುತ್ತಿತ್ತು. ಮನೆಯೊಂದರ ಜಗುಲಿಯ ಮೇಲೆ ಪೊಯ್‌ಗೈ ಆಸರೆಗೆಂದು ನಿಂತರು. ಕತ್ತಲೆ ಕವಿದು ಏನೂ ಕಾಣದಾಯಿತು; ಮಳೆಯೂ ಹೆಚ್ಚಿ ಕತ್ತಲೆ ಇನ್ನಷ್ಟು ಗಟ್ಟಿಯಾಯಿತು. ದಾರಿಯಲ್ಲಿ ನಡೆದುಬರುತ್ತಿದ್ದ ಪೂದತ್ತಾಳ್ವಾರರು ಇದೇ ಮನೆಯ ಮುಂದೆ ಬಂದು, 'ಜಗುಲಿಯ ಮೇಲೆ ಕೊಂಚ ಕಾಲ ತಂಗಬಹುದೇ' ಎಂದು ಕೇಳಿದರು. ಜಗುಲಿಯ ಮೇಲಿದ್ದವರು ಇವರಿಗೆ ಕಾಣಲಿಲ್ಲ ; ದಾರಿಯಲ್ಲಿದ್ದವರು ಅವರಿಗೆ ಕಾಣಲಿಲ್ಲ. ಪೊಯ್‌ಗೈ "ಬನ್ನಿ ಬನ್ನಿ. ಇಲ್ಲಿ ಒಬ್ಬರು ಮಲಗಬಹುದು, ಇಬ್ಬರು ಕೂರಬಹುದು; ಕೂಡೋಣ ಬನ್ನಿ!" ಎಂದರು. ಪೂದತ್ತಾಳ್ವಾರರು ಜಗುಲಿಯನ್ನೇರಿ ಕುಳಿತರು. ಸ್ವಲ್ಪ ಸಮಯದ ನಂತರ ಪೇಯಾಳ್ವಾರರೂ ಅದೇ ದಾರಿಯಲ್ಲಿ ಹೋಗುತ್ತ ಅದೇ ಮನೆಯ ಮುಂದೆ ಬರುವಾಗ ಜಗುಲಿಯ ಮೇಲೆ ಆಸರೆ ಪಡೆಯಲೆಂದು ಕೇಳಿದಾಗ, ಜಗುಲಿಯ ಮೇಲಿದ್ದವರು,

"ಬನ್ನಿ, ಬನ್ನಿ, ಇಲ್ಲಿ ಒಬ್ಬರು ಮಲಗಬಹುದು, ಇಬ್ಬರು ಕೂಡಬಹುದು, ಮೂವರು ನಿಲ್ಲಬಹುದು; ನಿಲ್ಲೋಣ ಬನ್ನಿ!" ಎಂದು ಅವರನ್ನೂ ಬರಮಾಡಿಕೊಂಡರು.

ಮೂವರೂ ಆಳ್ವಾರರೂ ಇರುಳಲ್ಲಿ, ಮಳೆಯಲ್ಲಿ ಒಬ್ಬರನ್ನೊಬ್ಬರು ಕಾಣಲಾರದೆ ಒಟ್ಟಿಗೇ ನಿಂತಿರುವಾಗ ಒಬ್ಬೊಬ್ಬರೂ ಭಗವದನುಭವದ ಆಳದಲ್ಲಿ ಮುಳುಗಿದ್ದರು. ಆಗ ಭಗವಂತ ನಾಲ್ಕನೆಯವನಾಗಿ ಅವರ ನಡುವೆ ಸೇರಿಕೊಂಡ. ಈಗ ದೇವರ ಸಾನ್ನಿಧ್ಯವನ್ನು ಅನುಭವಿಸುತ್ತ ಮೂವರೂ ಮೂರು ಪಾಶುರಗಳನ್ನು ಹಾಡಿದರು. ಪೊಯ್‌ಗೈ ಆಳ್ವಾರರು ಹಾಡಿದ ತಮಿಳುಪಾಶುರದ ಅರ್ಥ ಇದು—

ನೆಲವೆ ಹಣತೆಯಾಗಿರಲು, ತುಂಬು ಸಾಗರವೆ ತುಪ್ಪವಾಗಿರಲು
ಉರಿವ ಸೂರ್ಯನೆ ಬೆಳಕಾಗಿರಲು—
ಸೊಡರಂತೆ ಚಕ್ರವನು ತೊಟ್ಟವನಡಿಗಳಿಗೆ ಒಪ್ಪಿಸಿಹೆನೀ ಸೊಲ್ಲಮಾಲೆಯನು
ಒಡಲ ಬೇಗುದಿಯ ಕಡಲು ನೀಗುವುದೊ ಎಂದು!

ಪೂದತ್ತಾಳ್ವಾರರ ಪಾಶುರದ ಅರ್ಥ ಇದು—

ಒಲುಮೆಯೇ ಹಣತೆ, ಅವನ ಸೇರುವಾಸೆಯೇ ತುಪ್ಪ
ಆನಂದದಲಿ ದುಗುಡ ಹರಿದುದೆ ಅದರಲೊಡ್ಡುವ ಬತ್ತಿ
ಹೀಗಿರಲು ಮಿಗಿಲಾದ ಭಕ್ತಿಯೆನಿಪ
ಅರಿಮೆಯ ಸೊಡರನ್ನೆ ಬೆಳಗಿಸಿದೆ ನಾರಣನಿಗೆ
ಅರಿವನೀವ ತಮಿಳುನುಡಿಗಳನೆ ಹಾಡುತ್ತ ನಾನು!

ಪೇಯಾಳ್ವಾರರ ಪಾಶುರದ ಅರ್ಥ ಹೀಗಿದೆ—

ಸಿರಿದೇವಿಯನು ಕಂಡೆ ಹೊನ್ನ ಮೈಯನು ಕಂಡೆ ಸೂರ್ಯನೊಲು
ಹೊಳೆವ ರೂಪವನು ಕಂಡೆ—ಕಾಳಗದಿ ಮೆರೆವ
ಹೊನ್ನ ಚಕ್ರವನು ಕಂಡೆ, ಇನಿದಾದ ಶಂಖವನು ಹೊತ್ತ ಕೈಯನು ಕಂಡೆ!
ಎನ್ನೊಡೆಯನಹ ಕಡಲಬಣ್ಣದ ದೈವದಲಿ

ಈ ಮೂರು ಪಾಶುರಗಳು ಮೂವರು ಆಳ್ವಾರರ ತಿರುವಂದಾದಿಗಳ ಮೊದಲ ಪದ್ಯಗಳಾಗಿವೆ.

ಈ ಮೂವರೊಂದಿಗೆ ತಿರುಮಳಿಶೈ-ಆಳ್ವಾರರೂ ಸೇರಿದರೆಂದು ಪ್ರತೀತಿ. ಸಂಪ್ರದಾಯದ ಎಣಿಕೆಯಂತೆ ಇವರೂ ಮೊದಲಾಳ್ವಾರುಗಳ ಸಮಕಾಲಿಕರೇ. ನಾಲ್ವರೂ ಒಂದೇ ಸಂವತ್ಸರದಲ್ಲಿ (ಸಿದ್ಧಾರ್ಥಿ) ಹುಟ್ಟಿದವರು. ಮೊದಲ ಮೂವರೂ ತುಲಾಮಾಸದಲ್ಲಿ ಶುಕ್ಲಪಕ್ಷದಲ್ಲೇ ಹುಟ್ಟಿದವರು, ಬೇರೆ ಬೇರೆ ನಕ್ಷತ್ರಗಳಲ್ಲಿ. ನಾಲ್ಕನೆಯವರು ಅದೇ ಸಂವತ್ಸರದ ಮಕರಮಾಸದಲ್ಲಿ ಮಘಾನಕ್ಷತ್ರದಲ್ಲಿ ಹುಟ್ಟಿದರೆಂದು ಎಣಿಕೆ; ಮಲಿಶೈ ಎನ್ನುವ ಊರಿನಲ್ಲಿ ಇವರ ಜನನವಾದುದರಿಂದ ಅವರಿಗೆ ತಿರುಮಳಿಶೈ ಎಂದೇ ಹೆಸರಾಯಿತು. ಸಂಸ್ಕೃತದಲ್ಲಿ ಆ ಊರಿಗೆ ಮಹೀಸಾರವೆಂದು ಕರೆದು ಇವರನ್ನು 'ಭಕ್ತಿಸಾರ'ರೆಂದು ಕರೆಯುವ ವಾಡಿಕೆಯಿದೆ. ತಿರುವಾಳರ್ ಎಂಬ

ವೇಳಾಳರ ಮನೆಯಲ್ಲಿ ಬೆಳೆದು ಶೈವಮತವನ್ನು ಹಿಡಿದು ಅದರ ಆಚಾರದಲ್ಲೇ ತೊಡಗಿರುವಾಗ ಒಮ್ಮೆ ಪೇಯಾಳ್ವಾರರ ಸಂಪರ್ಕ ಒದಗಿ ಅದರ ಪ್ರಭಾವದಿಂದ ವೈಷ್ಣವರಾದರೆಂದು ಕಥೆಯಿದೆ. ಇವರ ಹೆಸರಿನಲ್ಲಿ ಎರಡು ಪ್ರಬಂಧಗಳಿವೆ— 'ನಾನ್ಮುಹನ್ ತಿರುವಂದಾದಿ' (96 ಪಾಶುರಗಳು) ಮತ್ತು 'ತಿರುಚ್ಚಂದವಿರುತ್ತಂ' (120 ಪಾಶುರಗಳು). ಎರಡರಲ್ಲೂ ಅವರ ಶಾಸ್ತ್ರಜ್ಞಾನವೂ ದೃಢವಾದ ಭಗವದ್ಭಕ್ತಿಯೂ ಎದ್ದುಕಾಣುತ್ತವೆ.

ಈ ನಾಲ್ವರು ಆಳ್ವಾರರ ಪ್ರಾಚೀನತೆಯನ್ನು ಎಲ್ಲರೂ ಒಪ್ಪುತ್ತಾರೆ. ಉಳಿದವರ ಕಾಲ, ಕ್ರಮಗಳನ್ನು ಕುರಿತು ಒಮ್ಮತವಿರದೆಂದು ಆಗಲೇ ಹೇಳಿದೆಯಷ್ಟೆ. ಪ್ರಕೃತ, ಈ ಸಂಗ್ರಹದಲ್ಲಿ ಸೇರಿರುವ ನಮ್ಮಾಳ್ವಾರರ ವಿಚಾರವಾಗಿ ನಾಲ್ಕು ಮಾತು ಹೇಳಬೇಕು. ನಾಥಮುನಿಗಳು ನಮ್ಮಾಳ್ವಾರರ 'ತಿರುವಾಯ್ಮೊಳಿ'ಯನ್ನು ಪಡೆದುಕೊಂಡ ಕಥೆಯನ್ನೂ ಈಗಾಗಲೇ ಹೇಳಿದೆ. ನಮ್ಮಾಳ್ವಾರರೇ ಶ್ರೀವೈಷ್ಣವಸಂಪ್ರದಾಯಕ್ಕೆ ಮೊದಲು ಮಾನ್ಯರಾದ ಆಳ್ವಾರರು; ಉಳಿದ ಆಳ್ವಾರರ ಪರಿಚಯವಾದುದು ಕಾಲಕ್ರಮದಲ್ಲಿ. ಒಂದು ನಂಬಿಕೆ ನಮ್ಮಾಳ್ವಾರರು ಮೇಲೆ ಹೇಳಿದ ನಾಲ್ವರು ಮೊದಲಾಳ್ವಾರರ ನಂತರವೇ ಬಂದವರು, ಐದನೆಯವರು ಎಂದು. ಇನ್ನೊಂದು ನಂಬಿಕೆ ಆಳ್ವಾರರ ಸಾಲಿನಲ್ಲಿ ಅವರ ಶಿಷ್ಯರಾದ ಮಧುರಕವಿಯಾಳ್ವಾರರನ್ನು ಬಿಟ್ಟರೆ ಅವರೇ ಕಡೆಯವರು ಎಂದು. ಮಧುರಕವಿ ಯಾಳ್ವಾರರ ಶಿಷ್ಯರಾಗಿದ್ದ ಪರಾಂಕುಶದಾಸರಿಂದಲೇ ತಾನೆ ನಾಥಮುನಿಗಳು ನಮ್ಮಾಳ್ವಾರರ ಪರಿಚಯವನ್ನು ಪಡೆದುಕೊಂಡದ್ದು? ಎಂದ ಮೇಲೆ, ನಾಥಮುನಿಗಳ ಕಾಲಕ್ಕೆ (ಎಂದರೆ ಕ್ರಿಸ್ತಾಬ್ದ 900ರ ಸುಮಾರಿಗೆ), ಒಂದೆರಡು ತಲೆಮಾರುಗಳಷ್ಟು ಹಿಂದೆ ನಮ್ಮಾಳ್ವಾರರ ಕಾಲವೆಂದಾಯಿತು. ಕ್ರಿಸ್ತಾಬ್ದ 760ರ ಸುಮಾರು ಎಂದೊಂದು ಎಣಿಕೆಯೂ ಇದೆ.

'ತೆಂಕಣದಿಕ್ಕಿಗೆ ತಿಲಕದಂತಿರುವ', ತಾಮ್ರಪರ್ಣಿ (ಪೊರುನಲ್) ನದಿಯ ಹತ್ತಿರವಿರುವ ತಿರುಕ್ಕುರುಗೂರು (ಸಂಸ್ಕೃತದಲ್ಲಿ ಕುರುಕಾಪುರ) ನಮ್ಮಾಳ್ವಾರರ ಹುಟ್ಟೂರು; ಹೀಗಾಗಿ ಅದನ್ನು 'ಆಳ್ವಾರ್ ತಿರುನಗರಿ' ಎಂದೇ ಕರೆಯುವುದು ವಾಡಿಕೆ ಮತ್ತು ಈ ಆಳ್ವಾರರನ್ನು 'ತಿರುಕ್ಕುರುಗೂರ್ ನಂಬಿ' ('ನಂಬಿ'ಯೆಂದರೆ ಒಡೆಯ ನೆಂದರ್ಥ) ಎಂದೇ ಮಧುರಕವಿಗಳು ಕರೆದಿದ್ದಾರೆ. ಇವರ ದಿಟವಾದ ಹೆಸರು ಮಾರಪ್ಪಿರಾನ್ ('ಪಿರಾನ್' ಎಂದರೆ ಉಪಕಾರಕನಾದ ಹಿರಿಯ) ಎಂದು; ಮಾರನ್‌ಕಾರಿಯ ಮಗ ಕಾರಿಮಾರನ್ ಎನ್ನುವ ಉಲ್ಲೇಖವೂ ಇದೆ. ನಾಥಮುನಿಗಳು ತಾವು ರಚಿಸಿದ ತನಿಯನ್‌ನಲ್ಲಿ ಇವರನ್ನು 'ವೇದವನ್ನು ತಮಿಳಿಗೆ ತಂದ ಮಾರರು' ('ವೇದಂ ತಮಿಳ್‌ಶೆಯ್ದ ಮಾರನ್') ಎಂದು ಬಣ್ಣಿಸಿದ್ದಾರೆ. ಶಠಾರಿ ಅಥವಾ ಶಠಕೋಪ ಎಂಬ ಹೆಸರೂ ಅವರಿಗಿದ್ದಿತು. ವಿಷ್ಣುವಿನ ಸೇನಾನಿಯಾದ ವಿಷ್ವಕ್ಸೇನನ ಅವತಾರವೇ ಅವರೆಂದು ನಂಬಿಕೆ.

ಅವರ ಹೆಸರಿನಲ್ಲಿ ನಾಲ್ಕು ಪ್ರಬಂಧಗಳಿವೆ—'ತಿರುವಿರುತ್ತಂ' (ನೂರು ಪಾಶುರಗಳು, ಋಗ್ವೇದದ ಸಾರವೆಂದು ಪ್ರಸಿದ್ಧವಾದುದು); 'ತಿರುವಾಶಿರಿಯಂ' (ಏಳೇ

ಪಾಶುರಗಳು, ಯಜುರ್ವೇದದ ಸಾರವೆಂದು ಪ್ರಸಿದ್ಧಿ), 'ತಿರುವಾಯ್ಮೊಳಿ (1,102 ಪಾಶುರಗಳು, ಸಾಮವೇದದ ಸಾರ) ಮತ್ತು 'ಪೆರಿಯತಿರುವಂದಾದಿ' (87 ಪಾಶುರಗಳು, ಅಥರ್ವವೇದದ ಸಾರ). ಇವುಗಳಲ್ಲಿ 'ತಿರುವಾಯ್ಮೊಳಿ' ಎಂಬ ಸಹಸ್ರಗಾಥೆ ಹೆಗ್ಗಳಿಕೆಯದು. ವೇದಾಂತದೇಶಿಕರು ಅದನ್ನು ನಾಲ್ಕೂ ವೇದಗಳ ಸಾರವೆಂದು ಬಣ್ಣಿಸಿದ್ದಾರೆ. ಶ್ರೀವೈಷ್ಣವಸಿದ್ಧಾಂತದ ಎಲ್ಲ ಪ್ರಮೇಯಗಳೂ ಇಲ್ಲಿ ಅಡಗಿವೆಯೆಂದು ಅದರ ಹಿರಿಮೆ.

ಇವರ ಹಿರಿಮೆಯನ್ನು ಲೋಕಕ್ಕೆ ಮೊದಲು ತೋರಿಸಿಕೊಟ್ಟವರು ಮಧುರಕವಿ ಯಾಳ್ವಾರರು. ನಮ್ಮಾಳ್ವಾರರ ತಂದೆ ಮಾರನ್-ಕಾರಿ ಆನೆಮಲೆಯೆಂಬ ಗುಡ್ಡದ ಮೇಲೆ ನರಸಿಂಹನ ಗುಡಿಯೊಂದನ್ನು ಕಟ್ಟಿಸಿದನಂತೆ. ಶೂದ್ರನಾದ ಇವನು ಕಟ್ಟಿಸಿದ ಗುಡಿಯಲ್ಲಿ ಬ್ರಾಹ್ಮಣಪಂಡಿತರಾದ ಮಧುರಕವಿ ಮೂರ್ತಿಪ್ರತಿಷ್ಠೆಯನ್ನು ಮಾಡಿದರು. ಮಾರನ್-ಕಾರಿಯ ಭಕ್ತಿಗೆ ಮಧುರಕವಿ ಪರವಶರಾಗಿ, ಅವನನ್ನು ತಮ್ಮ ಸ್ನೇಹಿತನಂತೆ ಕಂಡುಕೊಳ್ಳುತ್ತಿದ್ದರು. ಮಾರನ್-ಕಾರಿಯ ಮಗ ಹುಟ್ಟುವಾಗಲೇ ಮಹಿಮೆಯನ್ನು ಮೆರೆದು, ತನ್ನನ್ನು ಹಿಡಿಯಲು ಬಂದ 'ಶಠ'ವೆಂಬ ಮಾಯೆಯನ್ನು ಹುಂಗುಟ್ಟಿಯೇ ದೂರ ಅಟ್ಟಿ ಶಠಾರಿಯೆಂದಾದಮೇಲೆ, ಮಧುರಕವಿ ಅವನಲ್ಲಿ ವಿಶೇಷವಾದ ಭಗವದಂಶವನ್ನು ಕಂಡು, ಮುಂದೆ ಅವರಲ್ಲಿ ಶಿಷ್ಯವೃತ್ತಿ ಮಾಡಿದರು. ಅವರ ಪ್ರಸಿದ್ಧವಾದ ತನಿಯನ್ ಒಂದರಲ್ಲಿ—

ಹಲಗಂಟು, ನುಣ್ಣನೆಯ ಕಿರುಹಗ್ಗ, ಅದರಲಿ
ತನ್ನನೇ ಕಟ್ಟಿಸಿಕೊಂಡವ ಎನ್ನಪ್ಪ ಹಿರಿಯಮಾಯದವ!
ಅವನ ಹೆಸರ ಹಿಡಿವುದಕಿಂತ ಕುರುಗೂರನಂಬಿಯೆನಲು
ಎನ್ನ ನಾಲಗೆಗದೆ ರುಚಿ, ಅಮೃತವೆ ಊರುವುದು!

ಎಂದಿದ್ದಾರೆ. ಇದೇ 'ಕಣ್ಣಿನುಣ್ ಶಿರುತ್ತಾಂಬಿನಾಲ್' ಎಂದು ಮೊದಲಾಗುವ ಪದ್ಯ. ಯಶೋದೆಯ ಕೈಯಿಂದ ಸಣ್ಣ ಹಗ್ಗದಲ್ಲಿ ಕಟ್ಟಿಸಿಕೊಂಡ ಮಾಯಾವಿ ಕೃಷ್ಣ. ಅವನ ಹೆಸರನ್ನು ನೆನೆವುದಕ್ಕಿಂತ ಹೆಚ್ಚಾಗಿ ನಮ್ಮಾಳ್ವಾರರನ್ನೇ ನೆನೆಯಲು ಬಯಸಿದರು ಮಧುರಕವಿ. ಮುಂದಿನ ಪದ್ಯದಲ್ಲಿ—

ನಾಲಗೆಯಲವನನ್ನೆ ಹಾಡಿ ನಲಿದೆನು,
ಬಯಸಿ ಬಂದೆನವನ ಹೊನ್ನಡಿಗಳನೆ, ದಿಟವಾಗಿ
ಅರಿಯೆ ನಾ ಮತ್ತೊಂದು ದೈವವನು! ಕುರುಗೂರನಂಬಿಯ
ಹಾಡನ್ನೆ ಇನಿತಾಗಿ ಹಾಡಿ ತಿರಿಯುವೆನು!

ಎಂದಿದ್ದಾರೆ. ಹೀಗೆ ಹನ್ನೊಂದು ಪದ್ಯಗಳನ್ನು ನಮ್ಮಾಳ್ವಾರರನ್ನು ಕುರಿತೇ ಹಾಡಿದರು. ಪ್ರಬಂಧವಾಙ್ಮಯದಲ್ಲಿ ಇವು 'ಕಣ್ಣಿನುಣ್ ಶಿರುತ್ತಾಂಬು' ಎಂದೇ ಪ್ರಸಿದ್ಧವಾಗಿವೆ. 'ತಿರುವಾಯ್ಮೊಳಿ'ಯನ್ನು ಹಾಡುವ ಮೊದಲೂ ಕಡೆಗೂ ಇವನ್ನು ಪಠಿಸುವುದು ವಾಡಿಕೆ.



ಆಳದಲಿ ಮುಳುಗಿಹರು ಸೂರಿಗಳು
ಅನುಭವದ ಕಡಲಿನಾಳದಲಿ
ಮುಗಿಲ ಬೆಳಗುವ ಮಣಿಗಳನೆ ಕಂಡು
ಒಡಲ ಹರುಷದ ನೂಲಿನಲಿ ಕೋದು
ಮಾಡಿಹರು ಮಂಗಳವ ಜಗದ ಜನಕೆಲ್ಲ

ಒಂದು

ಮುದಲ್ ತಿರುವಂದಾದಿ

೧

ಉಣರ್‌ವಾರ್ ಆರ್ ಉನ್ ಪೆರುಮೈ ಊಳಿ ತೋರೂಳಿ
ಉಣರ್‌ವಾರ್ ಆರ್ ಉರುವಂ ತನ್ನೈ
ಉಣರ್‌ವಾರ್ ಆರ್
ವಿಣ್ ಅಹತ್ತಾಯ್ ಮಣ್ ಅಹತ್ತಾಯ್
ವೇಂಗಡತ್ತಾಯ್ ನಾಲ್ವೇದ—
ಪಣ್ ಅಹತ್ತಾಯ್, ನೀ ಕಿಡಂದ ಪಾಲ್ (೬೮)

೨

ಎಳುವಾರ್ ವಿಡ್ಡೈಕೊಳ್ವಾರ್ ಈನ್‌ತುಳಾಯಾನ್ಗೈ
ವಳುವಾವಹ್ಗೈ ನಿನ್ಗೈಂದು ವೈಹಲ್ ತೊಳುವಾರ್
ವಿನೈಚ್ಚುಡರೈ ನಂದುವಿಕ್ಕುಂ ವೇಂಗಡಮೇ ವಾನೋರ್
ಮನಚ್ಚುಡರೈ ತೂಂಡುಂ ಮಲೈ (೨೬)

೩

ಇಡಂದದು ಬೂಮಿ ಎಡುತ್ತದು ಕುನ್ರಂ
ಕಡಂದದು ಕಂಜನೈ ಮುನ್ ಅಂಜ ಕಿಡಂದದುವುಂ
ನೀರೋದಮಾ ಕಡಲೇ ನಿನ್ರದುವುಂ ವೇಂಗಡಮೇ
ಪೇರೋದವಣ್ಣರ್ ಪೆರಿದು (೩೯)

ಒಂದು

ಪೊಯ್ಗೈ ಆಳ್ವಾರರ ಮೊದಲ ಸಿರಿ ಅಂತಾದಿಯಿಂದ

೧

ಅರಿವವರು ಯಾರಯ್ಯ ಹಿರಿಮೆಯನು ನಿನ್ನ, ಎಡೆಬಿಡದೆ ಹೆಣಗಾಡಿದರು?
ಕಂಡರಿವವರು ಯಾರು ಎಲ್ಲಕ್ಕೆ ಮಿಗಿಲಾದ ರೂಪವನು
ನಿನ್ನದೇ ಆದುದನು? ಅರಿವವರು ಯಾರು?
ಬಾನೊಳಗಿರುವಿ, ಮಣ್ಣೊಳಗಿರುವಿ, ವೇಂಗಡದ ಮೇಲಿರುವಿ!
ವೇದನಾಲ್ಕರ ನುಡಿಯೊಳಗಡಗಿರುವಿ!
ಅರಿವರುಂಟೆ ನೀನುಪ್ಪವಡಿಸಿದ ಪಾಲ್ಗಡಲ?

೨

ಮೇಲಕೇರುವವರು, ಬಿಡುಗಡೆಯ ಬಯಸುವವರು![1]
ಸೊಗಸಿನೀ ತುಳಸಿಮಾಲೆ ತೊಟ್ಟವನನ್ನೆ
ಎಡೆಬಿಡದೆ ನೆನೆದು ಎಂದೆಂದು ಬಗೆದು ಬರುವುದಿಲ್ಲಿಗೇ ವೇಂಗಡಕೆ!
ಒಡಲ ಪಾಪದ ಕಿಚ್ಚನಡಗಿಸುವುದು ಇದು
ಬಾನವರ[2] ಮನದ ಸೊಡರ ಬೆಳಗಿಸುವುದೀ ಬೆಟ್ಟ!

1. ಮೋಕ್ಷಕಾಮಿಗಳು 2. ನಿತ್ಯಸೂರಿಗಳು, ಪರಮಪದವಾದ ವೈಕುಂಠದಲ್ಲಿ ಭಗವಂತನ ನಿತ್ಯಸೇವೆಯಲ್ಲಿ ತೊಡಗಿರುವ ಅನಂತ, ಗರುಡ, ವಿಷ್ವಕ್ಸೇನ ಮೊದಲಾದವರು.

೩

ಹಿರಿಹಬ್ಬಿ ನೆರೆಬಂದ ಕಡಲಬಣ್ಣದ ಮೈಯವನು
ಹಿಡಿದೆತ್ತಿದುದೋ[1] ನೆಲ! ಎತ್ತಿಹಿಡಿದುದೋ[2] ಬೆಟ್ಟ!
ಕಡಿದೆಸೆದುದೋ ಅಂಜಿನ ಕಂಸನಸುವನ್ನೆ[3] ಹಿಂದೊಮ್ಮೆ!
ಉಪ್ಪವಡಿಸಿದುದೋ ಅಲೆಯೋಲೈಸುವ ಮಾಕಡಲು[4]!
ಎಲ್ಲಕ್ಕೆ ಹಿರಿದಾಗಿ ನಿಂತುದೋ ವೇಂಗಡವೆ!

1. ವರಾಹಾವತಾರದಲ್ಲಿ 2. ಗೋವರ್ಧನೋದ್ಧರಣದಲ್ಲಿ 3. ಕೃಷ್ಣಾವತಾರದಲ್ಲಿ 4. ಕ್ಷೀರಸಾಗರ

೪

ಉಳನ್ ಕಂಡಾಯ್ ನಲ್‌ನೆಂಜೇ ಉತ್ತಮನ್ ಎನ್ರುಂ
ಉಳನ್ ಕಂಡಾಯ್ ಉಳ್ಳುವಾರ್ ಉಳ್ಳತ್ತು ಉಳನ್ ಕಂಡಾಯ್
ವೆಳ್ಳತ್ತಿಲುಳ್ಳಾನುಂ ವೇಂಗಡತ್ತು ಮೇಯಾನುಂ
ಉಳ್ಳತ್ತಿಲ್ ಉಳ್ಳಾನ್ ಎನ್ರು ಓರ್ (೯೯)

೫

ವಹ್ಯೆಯರು ನುಣ್ ಕೇಳ್ವಿ ವಾಯ್‌ವಾರ್‌ಗಳ್ ನಾಳುಂ
ಪುಗೈವಿಳಕ್ಕುಂ ಪೂಮ್ ಪುನಲುಂ ಏಂದಿ ದಿಶೈದಿಶೈಯಿಲ್
ವೇದಿಯರ್ಗಳ್ ಶೆನ್ರು ಇರೈಂಜುಂ ವೇಂಗಡಮೇ ವೆಣ್‌ಶಂಗಂ
ಊದಿಯವಾಯ್ ಮಾಲ್ ಉಹಂದ ಊರ್ (೩೭)

೬

ಮನಮ್ಮಾಶು ತೀರುಂ ಅರು ವಿನೈಯುಂ ಶಾರಾ
ದನಮಾಯ ತಾನೇ ಕೈಕೂಡುಂ ಪುನಮೇಯ
ಪೂಂ ತುಳಾಯಾನ್ ಅಡಿಕ್ಕೇ ಪೋತೋಡು ನೀರೇಂದಿ
ತಾಂ ತೊಳಾನಿರ್‌ಪರ್ ತಮರ್ (೪೩)

೭

ತೆಳಿದಾಹ ಉಳ್ಳತ್ತೈ ಶೆಮ್ ನಿರೀಇ ಜ್ಞಾನಂ
ತೆಳಿದಾಹ ನನ್ಗು ಉಣರ್‌ವಾರ್ ಶಿಂದೈ ಎಳಿದಾಹ
ತಾಯ್‌ನಾಡುಂ ಕನ್ರೇಪ್ಪೋಲ್ ತಣ್ ತುಳಾಯಾನ್ ಅಡಿಯೇ
ಪೋಯ್‌ನಾಡಿಕ್ಕೊಳ್ಳುಂ ಪುರಿಂದು (೩೦)

೮

ತಮರ್ ಉಹಂದದು ಎವ್ವುರುವುಂ ಅವ್ವುರುವುಂ ತಾನೇ
ತಮರ್ ಉಹಂದದು ಎಪ್ಪೇರ್ ಮತ್ತು ಅಪ್ಪೇರ್ ತಮರ್ ಉಹಂದು
ಎವ್ವಣ್ಣಂ ಶಿಂದಿತ್ತು ಇಮ್ಮೈಯಾದಿರುಪ್ಪರೇ
ಅವ್ವಣ್ಣಂ ಆಳಿಯಾನ್ ಆಮ್ (೪೪)

೪

ಬಾಳುವುದು ನಾವಿಂದು ಅವನಿಂದ, ಕಂಡೆಯಾ ಹದವರಿತ ಮನವೆ?
ಉಳಿಸಲೆಂದೇ ನಮ್ಮನೆಂದೆಂದು ಇರುವ ಉತ್ತಮನವ, ಕಂಡೆಯಾ?
ನೆನೆದವರ ಮನದಲ್ಲೆ ಇರುವ, ನೀ ಕಾಣೆಯಾ?
ಬಿಳಿಗಡಲಲ್ಲಿ ಪವಡಿಸಿರುವ, ವೇಂಗಡದಿ ನಿಂತಿರುವ ಆ ದೈವ
ನಮ್ಮೊಡಲ ಒಳಗಿರುವ, ತಿಳಿ!

೫

ದಾರಿಬೇರೆಯೊಂದನರಿಯದೆಲೆ, ನುಣುಪುನುಡಿವಿಡಿದು ದಿನದಿನವು
ಹೊಗೆ ಬೆಳಕು ಹೂ ನೀರುಗಳ ಕೈಕೊಂಡು ದಿಶೆದಿಶೆಗಳಿಂದೈ ತಂದು
ವೇದವಾದಿಗಳು ಬಂದೊದಗುವುದು ವೇಂಗಡಕೇ! ಬಿಳಿ ಶಂಖವ-
ನೂದುವ ಬಾಯ ದೈವ ನೆಲೆಗೊಂಡಿರುವ ಊರು!

(ನುಣುಪು ನುಡಿ = ನೀತಿಮಾರ್ಗ, ಶ್ರುತಿಸ್ಮೃತಿಗಳಲ್ಲಿ ಹೇಳಿರುವುದು; ಹೊಗೆ = ಧೂಪ; ಬೆಳಕು = ದೀಪ; ನೀರು = ಅರ್ಘ್ಯಪಾದ್ಯಗಳಿಗೆ)

೬

ಮನದ ಕೊಳೆ ತೊಳೆಯುವುದು, ಕೂರಾದ ದುರಿತ ಬಳಿಸಾರದು
ಧನವೆಂಬಂತೆ ಒಲುಮೆ ತಾನಾಗಿ ಬಂದೊದಗುವುದು, ತನ್ನಲ್ಲೆ ತಾನಿದ್ದು
ಹೂ ತುಳಸಿಮಾಲೆಯನು ತೊಟ್ಟವನಡಿಗಳಿಗೆ ಹೂವನ್ನು ನೀರನ್ನು
ಆರೈದು ಎರೆಯುವರು ತಾವೆ ಒಲುಮೆಯುಳ್ಳವರು

೭

ಅತ್ತಿತ್ತ ಅಲೆಯದೆಲೆ ಒಡಲ ಒಂದೆಡೆ ನಿಲಿಸಿ, ಅರಿವು
ತಿಳಿಯಾಗಿ, ಆಳದಲಿ ಅರಿವವರ ಬುದ್ಧಿ ತೊಡಕಿಲ್ಲದೆಲೆ
ಸಾಗುವುದು ತಂಪುತುಳಸಿಯ ಮಾಲೆ ತೊಟ್ಟವನ ಅಡಿಯತ್ತ,
ತಾಯನರಸುತ್ತ ನೇರಾಗಿ ಬರುವ ಕರುವಂತೆ

೮

ತನ್ನವರು ಬಯಸಿ ಬಗೆದ ರೂಪವನೆ ತೊಡುವ ತಾನು,
ತನ್ನವರು ಇನಿದಾಗಿ ಕರೆದ ಹೆಸರೆ ತನದೆಂದು ಅಲಿಸುವ, ತನ್ನವರು ಒಲುಮೆಯಲಿ
ಎಂತೆಂತು ನೆನೆನೆನೆದು ಭಾವಿಸುವರೊ ಅಂತಂತು
ತೋರಿಕೊಳುವ, ಚಕ್ರವನೆ ತೊಟ್ಟಿರುವ ಎಮ್ಮೊಡೆಯ!

೯

ನಾಡಿಲುಂ ನಿನ್ ಅಡಿಯೇ ನಾಡುವನ್, ನಾಡೋರುಂ
ಪಾಡಿಲುಂ ನಿನ್ ಪುಹಳೇ ಪಾಡುವನ್ ಶೂಡಿಲುಂ
ಪೊನ್ನಾಳಿಯೇಂದಿನಾನ್ ಪೊನ್ನಡಿಯೇ ಶೂಡವೆರ್‌ಕು
ಎನ್ನಾಹಿಲ್ ಎನ್ನೇ ಎನಕ್ಕು (೮೮)

೧೦

ಕುನ್ರನೈಯ ಕುತ್ತಂ ಶೆಯ್ಯಿನುಂ ಗುಣಂ ಕೊಳ್ಳುಮ್
ಇನ್ರು ಮುದಲಾಹ ಎನ್ ನೆಂಜೇ ಎನ್ರುಮ್
ಪುರನುರೈಯೇಯಾಯಿನುಂ ಪೊನ್ ಆಳಿಕ್ಕೈಯಾನ್
ತಿರನ್ ಉರೈಯೇ ಶಿಂದಿತ್ತು ಇರು (೪೧)

೧೧

ಪೆಯರುಂ ಕರುಂಗಡಲೇ ನೋಕ್ಕುಂ ಆರು
ಒಣ್ ಪೂ ಉಯರುಂ ಕದಿರವನೇ ನೋಕ್ಕುಂ ಉಯಿರುಂ
ದರುಮನೈಯೇ ನೋಕ್ಕುಂ, ಒಣ್‌ತಾಮರೈಯಾಳ್ ಕೇಳ್ವನ್
ಒರುವನೈಯೇ ನೋಕ್ಕುಂ ಉಣರ್‌ವು (೬೭)

೧೨

ಪುಹಳ್ವಾಯ್ ಪಳಿಪ್ಪಾಯ್ ನೀ ಪೂಮ್ ತುಳಾಯಾನೈ
ಇಹಳ್ವಾಯ್ ಕರುದುವಾಯ್ ನೆಂಜೇ ತಿಹಳ್ ನೀರ್
ಕಡಲುಂ ಮಲೈಯುಂ ಇರು ವಿಶಂಬು ಕಾತ್ತುಂ
ಉಡಲುಂ ಉಯಿರುಂ ಏತ್ತಾನ್ (೭೩)

೯

ಹಿಡಿದರೆ ನಿನ್ನಡಿಯನೇ ಹಿಡಿಯುವೆನು, ದಿನದಿನವು
ಹಾಡಿದರೆ ನಿನ್ನ ಹಿರಿಮೆಯನೆ ಹಾಡುವೆನು, ಮುಡಿಯುವೆನು
ಹೊನ್ನಚಕ್ರವನೆತ್ತಿ ಹಿಡಿದವನ ಹೊನ್ನಡಿಗಳನೆ,
ಮುಡಿಯುವ ಎನಗಿಲ್ಲಿ ಏನಾದರೇನು?

೧೦

ಗುಡ್ಡದೊಲು ಮಾಡಿದರು ದೋಷವನು ಗುಣವೆಂದೆ ಎಣಿಸುವ
ಇದು ಮೊದಲಾಗಿ, ಎಲೆ ಮನವೆ ಎಂದೆಂದು
ಒಡಲಾಳದಲ್ಲಿ ಸುಳಿಯದಾ ನುಡಿಯ ನುಡಿದರೂ ನೆನೆಯುತ್ತ ಇರು
ಹೊನ್ನಚಕ್ರವ ಹಿಡಿದವನ ದಿಟವನ್ನು

೧೧

ನೆರೆಯುಕ್ಕಿಬರುವ ಹಿರಿಗಡಲನ್ನೆ ಬಯಸುವುದು ತೊರೆ,
ಮೇಲುರಿವ ಸೂರ್ಯನನೆ ನೋಡಿ ಹಿಗ್ಗುವುದು ಹೂ, ಸೇರುವುದು ಜೀವ
ಸಾವಿಗೊಡೆಯನಹ ಯಮಧರ್ಮನನೆ, ಚೆಂದಾವರೆಯಲಿ
ನಿಂತವಳ ಗೆಳೆಯನೊಬ್ಬನನೆ
ಬಯಸುವುದು ಒಡಲೊಳಗಣ ಅರಿವು

೧೨

ಹಾಡಿ ಹೊಗಳುವೆಯೊ ಹಳಿಯುವೆಯೊ ತುಳಸಿಮಾಲೆ ತೊಟ್ಟವನನ್ನು,
ಕಡೆಗಣ್ಣಿಂದ ಕಾಣುವೆಯೊ ಆದರದಿ ಸೇರುವೆಯೊ ಎಲೆ ಮನವೆ, ಹೊಳೆವ ನೀರ್
ಕಡಲು ಮಲೆಯಾಗಸವು ಗಾಳಿ ಒಡಲುಸಿರು
ಎಲ್ಲವನು ಎತ್ತಿನಿಲಿಸಿಹನವನೆ ದಿಟ!

ಎರಡು

ಇರಂಡಾಂ ತಿರುವಂದಾದಿ

೧೩

ಅವನ್ ಕಂಡಾಯ್ ನಲ್ ನೆಂಜೇ ಆರ್ ಅರುಳುಂ ಕೇಡುಂ
ಅವನ್ ಕಂಡಾಯ್ ಐಂಬುಲನಾಯ್ ನಿನ್ರಾನ್ ಅವನ್ ಕಂಡಾಯ್
ಕಾತ್ತು ತೀ ನೀರ್ ವಾನ್ ಕರುವರೈ ಮಣ್ ಕಾರ್ ಓದಂ
ಶೀತ್ತಂ ತೀ ಆವಾನುಂ ಶೆನ್ರು (೨೪)

೧೪

ಮನತ್ತುಳ್ಳಾನ್ ವೇಂಗಡತ್ತಾನ್ ಮಾಕಡಲಾನ್ ಮತ್ತುಂ
ನಿನೈಪ್ಪರಿಯ ನೀಳ್ ಅರಂಗತ್ತು ಉಳ್ಳಾನ್ ಎನೈಪ್ಪಲರುಂ
ದೇವಾದಿದೇವಾನ್ ಎನಪ್ಪಡುವಾನ್, ಮುನ್ನೊರುನಾಳ್
ಮಾ ವಾಯ್ ಪಿಳಂದ ಮಹನ್ (೨೮)

೧೫

ಮಹಿಳ್ನ್ದದು ಶಿಂದೈ ತಿರುಮಾಲೇ ಮತ್ತುಂ
ಮಹಿಳ್ನ್ದದು ಉನ್ ಪಾದಮೇ ಪೋತ್ತಿ ಮಹಿಳ್ನ್ದದು
ಅಳಲ್ ಆಳಿ ಶಂಗಂ ಅವೈ ಪಾಡಿ ಆಡುಂ
ತೊಳಿಲ್ ಆಹಂ ಶೂಳ್ನ್ದು ತುಣಿನ್ದು (೩೨)

೧೬

ತುಣಿಂದದು ಶಿಂದೈ ತುಳಾಯಲಂಗಲ್ ಅಂಗಂ
ಅಣಿಂದವನ್ ಪೇರ್ ಉಳ್ಳತ್ತು ಪಲ್‌ಹಾಲ್ ಪಣಿಂದದುವುಂ
ವೇಯ್ ಪಿರಂಗು ಶಾರಲ್ ವಿರಲ್ ವೇಂಗಡವನ್ನೈಯೇ
ವಾಯ್ ತಿರಂಗಳ್ ಶೊಲ್ಲುಂ ವಹ್ಯೆ (೩೩)

ಎರಡು

ಪೂದತ್ತಾಳ್ವಾರರ ಎರಡನೆಯ ಸಿರಿ ಅಂತಾದಿಯಿಂದ

೧೩

ಅವನಿಂದಲೆ, ಕಂಡೆಯಾ, ನಲ್ಮನವೆ, ತುಂಬುಕರುಣೆ, ಕೇಡು
ಅವನೆ, ಕಂಡೆಯಾ, ಇಂದ್ರಿಯಗಳೈದರಲಿ ನಿಂತವನು, ಅವನೆ ಕಂಡೆಯಾ
ತಂಗಾಳಿ ಉರಿಬೆಂಕಿ ನೀರು ಬಾನು ಬೆಟ್ಟ ಮಣ್ಣು, ಕಗ್ಗಡಲನೇ
ಮುನಿಸಿಂದ ಸುಡುವ ಬಡಬಾನಲವೆ ಆದಾನು! ಸೇರು ಅವನನ್ನೆ ಇನ್ನು

೧೪

ಇರುವನೆನ್ನ ಮನದಲ್ಲೆ ವೇಂಗಡದವ, ಮಾಕಡಲಿನವ! ಮತ್ತೆ
ಮಲಗಿದವ ಒಡಕಿರದ ಹರವು ರಂಗದಲಿ, ಎನಿತೋ ಹಲರು
ದೇವರ ಮೇಲಣ ದೇವ ಎಂದು ಬಗೆದಿಹರು ನಿನ್ನ! ಹಿಂದೊಂದು ದಿನ
ಅಸುರನ[1] ಬಾಯ ಸೀಳಿದ ಮಾಣಿ ನೀ ತಾನೆ!

1. ಕೃಷ್ಣಾವತಾರದಲ್ಲಿ ಕೇಶಿಯೆಂಬ ಅಸುರನನ್ನು ಕೊಂದವ

೧೫

ಹಿಗ್ಗಿತೆನ್ನ ಮನ ನೆನೆದು ನಿನ್ನ, ಓ ದೈವ! ಮುಂದೆ,
ಹಿಗ್ಗಿದುದು ಮಾತು ನಿನ್ನಡಿಗಳನೆ ಹಾಡಿ ಹೊಗಳುತ್ತ! ಹಿಗ್ಗಿತೋ
ಅರಿಯ ಮೇಲೆರಗುವ ಚಕ್ರವನು ಶಂಖವನು ಕೊಂಡಾಡಿ! ಕುಣಿತದ
ಹೆಜ್ಜೆಯಲಿ ಹಿಗ್ಗಿತು ಮೈ ತನ್ನ ತಾನೆ ಮರೆತು!

೧೬

ನೆಲೆಗಂಡಿತು ಮನ, ಮೈತುಂಬ ತುಳಸಿಮಾಲೆಯ
ತೊಟ್ಟವನ ಹೆಸರನ್ನೆ ನೆನೆಯುವೆನೆಂದು! ಹಲಕಾಲ ಅವನಡಿಗೆರಗಿದೆನು!
ಬೆಟ್ಟ ಬಿದಿರುಮೆಳೆ ಕವಿದಿದ್ದು ಬೆಳ್ಳಗೆ ಬೆಳಗುವ ವೇಂಗಡದವ, ಅವನೊಬ್ಬನ
ತೀರನೇ ಹಾಡಿಹೊಗಳುವ ಬಗೆಯೇನೆಂದು ಕಂಡುಕೊಂಡಿತು ಬಾಯಿ!

೧೭

ಉಳದು ಎನ್ರು ಇರುಮಾವಾರ್ ಉಂಡು ಇಲ್ಲೈ ಎನ್ರು
ತಳರ್‌ತಲ್ ಅದನರುಹುಂ ಶಾರಾರ್! ಅಳವರಿಯ
ವೇದತ್ತಾನ್ ವೇಂಗಡತ್ತಾನ್ ವಿಣ್ಣೋರ್ ಮುಡಿ ತೋಯುಂ
ಪಾದತ್ತಾನ್ ಪಾದಂ ಪಯಿನ್ರು (೪೫)

೧೮

ಅರುಳ್ ಪುರಿಂದ ಶಿಂದೈ ಅಡಿಯಾರ್ ಮೇಲ್ ವೈತ್ತು
ಪೊರುಳ್ ತೆರಿಂದು ಕಾಣ್‌ಗುತ್ತ ಅಪ್ಪೋದು ಇರುಳ್ ಇರಿನ್ದು
ನೋಕ್ಕಿನೇನ್, ನೋಕ್ಕಿ ನಿನ್ರೆಂದೇನ್ ಅದು ಒಣ್‌ಕಮಲಂ
ಓಕ್ಕಿನೇನ್ ಎನ್ನೈಯುಂ ಅಂಗು ಓರ್‌ನ್ದು (೫೯)

೧೯

ಓರ್ ಉರುವನಲ್ಲೇ ಒಳಿ ಉರುವಂ ನಿನ್ ಉರುವಂ
ಈರುರುವನ್ ಎನ್ಬರ್ ಇರು ನಿಲತ್ತೋರ್ ಓರ್ ಉರುವಂ
ಆದಿ ಆಮ್ ವಣ್ಣಂ ಅರಿಂದಾಲ್ ಅವರ್ ಕಂಡೀರ್
ನೀತಿಯಾಲ್ ಮಣ್‌ಕಾಪ್ಪಾರ್ ನಿನ್ರು (೬೦)

೨೦

ಇದು ಕಂಡಾಯ್ ನಲ್ ನೆಂಜೇ ಇಪ್ಪಿರವಿಯಾವದು
ಇದು ಕಂಡಾಯ್ ಎಲ್ಲಾಂ ನಾಮ್ ಉತ್ತದು ಇದು ಕಂಡಾಯ್
ನಾರಣನ್ ಪೇರ್ ಓದಿ ನರಕತ್ತು ಅರುಹು ಆಣ್ಯೈಯಾ
ಕಾರಣಮುಂ, ವಲ್ಲೈಯೇಲ್ ಕಾಣ್ (೬೬)

೨೧

ಕಂಡೇನ್ ತಿರುಮೇನಿ ಯಾನ್ ಕನವಿಲ್ ಅಂಗು ಅವನ್ ಕೈ
ಕಂಡೇನ್ ಕನಲುಂ ಶುಡರಾಳಿ ಕಂಡೇನ್
ಉರುನೋಯ್ ವಿನೈ ಇರಂಡುಂ ಓಟ್ಟುವಿತ್ತು ಪಿನ್ನುಂ
ಮರುನೋಯ್ ಶೆರುವಾನ್ ವಲಿ (೬೭)

೧೭

ಉಳ್ಳವನೆಂದು ಅಬ್ಬರವೆ? ಉಂಟು ಇಲ್ಲೆಂಬ
ಅಳಲು ಬಳಿಸಾರುವುದೆ? ಕೊನೆಯರಿಯದ
ವೇದದ ವಿಷಯವಾದವನ, ವೇಂಗಡದಿ ನಿಂತವನ,
ಬಾನವರು ತಲೆವಾಗಿ ಓಲ್ಗೆಸುವ ಅವನಡಿಗಳನೆ ನಂಬಿ ಹಿಡಿದವಗೆ

೧೮

ಕರುಣೆ ತುಂಬಿದ ಮನವನ್ನು ನಿನ್ನ, ಇರಿಸಿ ಈ ದಾಸನ ಮೇಲೆ
ಇವನೊಂದು ಹುರುಳೆಂದು ಕಂಡುಕೊಂಡಂದು ಹರಿಯಿತು ಇರುಳು!
ನೋಡಿದೆನು ನಾ ನಿನ್ನನಾಗ, ನೋಡಿ ನೆನೆದೆನು ನಿನ್ನಡಿದಾವರೆಯ
ಬೇರೊಂದು ಎನ್ನಲಿ ಇರದೆಂದು ಸಲಿಸಿಕೊಂಡೆನು ನನ್ನನೇ ನಾನು!

೧೯

ಎನಬಹುದೇ ರೂಪ ನಿನಗೆ ಒಂದೆಂದು?
ಬಯಸಿ ಬಂದವರು ಬಗೆದುದೆಲ್ಲವು ರೂಪವೇ ನಿನಗೆ!
ಹೇಳುವರು ಹರವಾದ ಈ ಇಳೆಯೊಳಿರುವ ಜನ ಪರತತ್ತ್ವ
ನೀನೆಂದು! ಒಂದಾದ ಆ ರೂಪ
ಎಲ್ಲಕೂ ಆದಿ, ಭಕ್ತರಿಗೆ ಹದ ಎಂದರಿತವರು, ಕಂಡಿರಾ
ನೀತಿಯಲಿ ನಿಂತು ಭೂಮಿಯನು ಕಾಯುವರು!

೨೦

ಇದ ಕಂಡೆಯಾ, ನಲ್ಮನವೇ, ಈ ಭವದ ಬದುಕನ್ನು?
ಇದ ಕಂಡೆಯಾ, ನಾವು ಪಡಕೊಂಡುದೆಲ್ಲವನು? ಇದ ಕಂಡೆಯಾ
ಹಿಡಿದು ದೈವದ ಹೆಸರ ನರಕದ ಬಳಿ ಸುಳಿಯೆ ಎಂಬುದನು?
ಕಾಣಬಲ್ಲೆಯೊ, ಕಾಣು!

೨೧

ಕಂಡೆನವನ ಸಿರಿಮೈಯ ನಾ ಕನಸಿನಲಿ, ಆಗವನ ಕೈಯಲಿ ಕಂಡೆ
ಕೆಂಡದೊಲು ಕಂಗಳಿಸುವ ಚಕ್ರವನು! ಕಂಡೆ
ಬಾಳಬೇಗೆಯನು ಪಾಪವನು ಎರಡನೂ ಹೊಡೆದಟ್ಟಿ ಮತ್ತೆ
ಬವಣೆಯನು ಬಡಿದೋಡಿಸುವ ಬಲವನ್ನು!

೨೨

ನೇರ್‌ನ್ದೇನ್ ಅಡಿಮೈ ನಿನ್ಱೆನ್ದೇನ್ ಅದು ಒಣ್ ಕಮಲಂ
ಆರ್‌ನ್ದೇನ್ ಉನ್ ಶೇವಡಿಮೇಲ್ ಅನ್ಬಾಯ್ ಆರ್‌ನ್ದ
ಅಡಿಕ್ಕೋಲಂ ಕಂಡವರ್‌ಕು ಎನ್ಗೊಲೋ ಮುನ್ನೈ,
ಪಡಿಕ್ಕೋಲಂ ಕಂಡ ಪಹಲ್ (೮೦)

೨೩

ಪೋದು ಅರಿಂದು ವಾನರಂಗಳ್, ಪೂಂ ಶುನೈ ಪುಕ್ಕು ಆಂಗು ಅಲರ್‌ನ್ದ
ಪೋದು ಅರಿಂದುಕೊಂಡು ಏತ್ತುಂ, ಪೋದು ಉಳ್ಳಂ ಪೋದು
ಮಣಿ ವೇಂಗಡವನ್ ಮಲರಡಿಕ್ಕೇ ಶೆಲ್ಲ
ಅಣಿವೇಂಗಡವನ್ ಪೇರ್ ಆಯ್‌ನ್ದು (೮೨)

೨೪

ನವಿನ್ರುರೈತ್ತ ನಾವಲರ್ಹಳ್ ನಾಳ್ ಮಲರ್ ಕೊಂಡು ಆಂಗೇ
ಪಯಿನ್ರದನಾಲ್ ಪೆತ್ತ ಪಯನ್ ಎನ್ಗೊಲ್ ಪಯಿನ್ರಾರ್ ತಮ್
ಮೆಯ್ ತವತ್ತಾಲ್ ಕಾಣ್ಬರಿಯ ಮೇಗಮಣಿವಣ್ಣನೈ ಯಾನ್
ಎತ್ತವತ್ತಾಲ್ ಕಾಣ್ಬನ್ ಕೊಲ್ ಇನ್ರು (೮೬)



೨೨

ಪಡೆದೆ ಪಾದಸೇವೆಯನು, ನೆನೆದೆ ಸಿರಿಪಾದಕಮಲವನು
ಪೂರ್ಣನಾದೆನು ಇರಿಸಿ ಒಲುಮೆಯನು ಚೆಲುವಾದ ನಿನ್ನಡಿಗಳಲಿ ಪರಿಪೂರ್ಣವಹ
ಪಾದದ ಚೆಲುವ ಕಂಡವರಿಗೆಂತು ಆಗುವುದೊ
ಮೈಯ ಚೆಲುವನೆ ಕಂಡ ಕಾಲದಲಿ?

೨೩

ಬೆಳಗಾಯಿತೆಂದು ಕಪಿವಿಂಡು ಹೊಕ್ಕು ಹೂದೋಟಗಳನು
ಆಗ ಅರಳಿದ್ದ ಹೂಗಳನಾಯ್ದು ಸಲಿಸುವುವು ತಂದು!
ನೀನದನೆ ಮಾಡು, ಎನ್ನೊಡಲೇ
ಹೂಗಳನಣಿಗೊಳಿಸು
ವೇಂಗಡದವನಡಿದಾವರೆಗೆ ಸೇರುವೊಲು,
ಅಂದದ ವೇಂಗಡದಿ ನಿಂದವನ ಹೆಸರನ್ನೆ ಹಿಡಿದು!

೨೪

ಹಲಕಾಲ ಹಾಡಿ ಕಬ್ಬಿಗರು ಹೂಗಳನಾಯ್ದು ಇರಿಸಿ ಅವನಡಿಮೇಲೆ
ನಂಬಿ ನಡಕೊಂಡು ಪಡೆದ ಫಲವೇನು? ಬಗೆಬಗೆಯ ಸಾಧಕರು ತಂತಮ್ಮ
ಮೈಯ ತಪದಿಂದ ಕಂಡರಿಯದಿಹ ಕಾರ್ಮೋಡಮಣಿ ಬಣ್ಣದವನ, ನಾನಾವ
ತಪದ ಬಲದಿಂದ ಕಂಡುಕೊಂಡೆನೊ ಇಂದು!



ಮೂರು

ಮೂನ್ರಾಮ್ ತಿರುವಂದಾದಿ

೨೫

ಅಡಿವಣ್ಣಂ ತಾಮರೈ ಅನ್ರು ಉಲಹಂತಾಯೋನ್
ಪಡಿವಣ್ಣಂ ಪಾರ್‌ಕಡಲ್ ನೀರ್‌ವಣ್ಣಂ ಮುಡಿವಣ್ಣಂ
ಓರ್ ಆಳಿವೆಯ್ಯೋನ್ ಒಳಿಯುಂ ಅಃದು ಅನ್ರೇ
ಆರ್ ಆಳಿಕೊಂಡಾರ್‌ಕು ಅಳಹು (೫)

೨೬

ಮಾರ್‌ಪಾಲ್ ಮನಂ ಶುಳಿಪ್ಪ ಮಂಗೈಯರ್ ತೋಳ್ ಕೈವಿಟ್ಟು
ನೂರ್‌ಪಾಲ್ ಮನಂ ವೈಕ್ಕ ನೊಯ್ವದಾಂ ನಾರ್‌ಪಾಲ
ವೇದತ್ತಾನ್ ವೇಂಗಡತ್ತಾನ್ ವಿಣ್ಣೋರ್ ಮುಡಿತೋಯುಂ
ಪಾದತ್ತಾನ್ ಪಾದಂ ಪಣಿನ್ದು (೧೪)

೨೭

ಶೆನ್ರನಾಳ್ ಶೆಲ್ಲಾದ ಶೆಂಗಣ್‌ಮಾಲ್ ಎಂಗಳ್‌ಮಾಲ್
ಎನ್ರನಾಳ್ ಎನ್ನಾಳುಂ ನಾಳಾಗುಂ ಎನ್ರುಂ
ಇರವಾದ ಎಂದೈ ಇಣೈ ಅಡಿಕ್ಕೀ ಆಳಾಯ್
ಮರವಾದು ವಾಳ್‌ತ್ತುಹ ಎನ್‌ವಾಯ್ (೧೭)

೨೮

ವಡಿವು ಆರ್ ಮುಡಿ ಕೋಟ್ಟಿ ವಾನವರ್‌ಗಳ್ ನಾಳುಂ
ಕಡಿಯಾರ್ ಮಲರ್‌ತೂವಿ ಕಾಣುಂ ಪಡಿಯಾನೈ
ಶೆಮ್ಮೈಯಾಲ್ ಉಳ್ಳುರುಹಿ ಶೆವ್ವನೇ ನೆಜಂಮೇ
ಮೇಯ್‌ಮ್ಮೈಯೇ ಕಾಣವಿರಂಬು (೨೨)

ಮೂರು

ಪೇಯಾಳ್ವಾರರ ಮೂರನೆಯ ಸಿರಿ ಅಂತಾದಿಯಿಂದ

೨೫

ಕೆಂದಾವರೆಯ ಬಣ್ಣ ಅಂದು ಲೋಕವನಳೆದವನ[1] ಅಡಿ
ಸುತ್ತಿರುವ ಕಡಲ ನೀರಂತೆ ತಂಪು ಅವನ ಮೈಬಣ್ಣ, ಮುಡಿಯ ಹೊಳವೋ
ಒಂದೆ ಗಾಲಿಯ ತೇರನೇರಿದವನ[2] ತೆರ, ಅಂತೆಯೇ ಕಾಂತಿ!
ಅಂದದ ಚಕ್ರವನು ಕೈಗೊಂಡವನ ಚೆಂದ ಇದು!

1. ತ್ರಿವಿಕ್ರಮನಾಗಿ 2. ಸೂರ್ಯ

೨೬

ದೈವದ ಬಳಿ ಸುಳಿಯಲು ಮನ, ಕೈಬಿಟ್ಟು ಚೆನ್ನಿಯರ ತೋಳ
ವೇದದರ್ಥದಲ್ಲಿ ನೇರಾಗಿ ನಿಂತೀತು ಮನ! ವೇದನಾಲ್ಕರ
ವಿಷಯವೇ ವೇಂಗಡದವ! ಬಾನವರ ಮುಡಿ
ಮುಟ್ಟಿದವನಡಿಗಳನೆ ನೆರೆನಂಬಿ (ದೈವದ ಬಳಿ ಸುಳಿಯಲು ಮನ-)

೨೭

ಹಿಂದಾಗಲಿ ಮುಂದಾಗಲಿ ಕೆಂದಾವರೆಗಣ್ಣಿನ ದೈವ ನಮ್ಮವನೆ
ಎಂದರಿತ ದಿನ ಎಂದಾಗಲಿ ಅದು ಶುಭದಿನವೆ! ಎಂದೆಂದು
ಕುಂದದ ಎನ್ನೊಡೆಯನ ಅಡಿಗಳಿಗಾಳಾಗಿ
ಹಿಂದೆಗೆಯದೆ[1] ಹೊಗಳಲಿ ಎನ್ನಯ ಬಾಯಿ!

1. ಮರೆಯದೆ

೨೮

ಬಾಗಿಸಿ ಚೆಂದದ ಮುಡಿಗಳ ಬಾನವರೆಲ್ಲರು ದಿನದಿನ
ಪೂಸುತ ಕಂಪಿನ ಹೂಗಳಸೇವೆಯ ಸಲಿಸುವ ಸಿರಿಮೈಯವನನೆ
ನಂಬುತ, ಇರಿಸುತ ಒಲಮೆಯ ದಾರಿಯಲಡಿಯನು, ಮನವೇ
ಬೇರೊಂದನು ಬಯಸದೆ[1] ಸೇವಿಸಲಾಶಿಸು!

1. ಮೆಯ್ಮೈಯೆ = ಯಥಾರ್ಥವಾಗಿ

೨೯

ವರುಂಗಾಲ್ ಇರುನಿಲನುಂ ಮಾಲ್ ವಿಶುಂಬುಂ ಕಾತ್ತುಂ
ನೆರುಂಗು ತೀ ನೀರ್ ಉರುವುಂ ಆನಾನ್ ಪೊರುಂದುಂ
ಶುಡರಾಳಿ ಒನ್ರು ಉಡೈಯಾನ್ ಶೂಳ್ ಕಳಲೇ ನಾಳುಂ
ತೊಡರ್ ಆಳಿನೆಂಜೇ ತೊಳುದು (೨೪)

೩೦

ತಾನೇ ತನಕ್ಕು ಉವಮನ್ ತನ್‌ಉರುವೇ ಎವ್ವುರುವುಂ
ತಾನೇ ತವವುರುವುಂ ತಾರಕೈಯುಂ ತಾನೇ
ಎರಿಶುಡರುಂ ಮಾಲ್‌ವರೈಯುಂ ಎಣ್‌ದಿಶೈಯುಂ ಆಂಡತ್ತು
ಇರು ಶುಡರುಂ ಆಯ ಇರೈ (೩೮)

೩೧

ಇರೈಯಾಯ್ ನಿಲನಾಹಿ ಎಣ್‌ದಿಶೈಯುಂ ತಾನಾಯ್
ಮರೈಯಾಯ್ ಮರೈಪ್ಪೊರುಳಾಯ್ ವಾನಾಯ್ ಪಿರೈವಾಯ್‌ನ್ದ
ವೆಳ್ಳತ್ತರವಿ ವಿಳಂಗು ಒಲಿನೀರ್ ವೇಂಗಡತ್ತಾನ್
ಉಳ್ಳತ್ತಿನ್ ಉಳ್ಳೇ ಉಳನ್ (೩೯)

೩೨

ಉಳನ್ ಕಂಡಾಯ್ ನಲ್‌ನಂಜೇ ಉತ್ತಮನ್ ಎನ್ರುಂ
ಉಳನ್ ಕಂಡಾಯ್ ಉಳ್ಳುವಾರ್ ಉಳ್ಳತ್ತು ಉಳನ್ ಕಂಡಾಯ್
ವಿಣ್ ಒಡುಂಗ ಕೋಡು ಉಯರುಂ ವೀಂಗು ಅರವಿ ವೇಂಗಡತ್ತಾನ್
ಮಣ್ ಒಡುಂಗ ತಾನ್ ಅಳಂದ ಮನ್ (೪೦)

೩೩

ಕಾಣ್‌ಕಾಣ್ ಎನ ವಿರುಂಬುಂ ಕಣ್‌ಗಳ್ ಕದಿರಿಲಹು
ಪೂಣ್ ತಾರ್ ಅಹಲತ್ತಾನ್ ಪೊನ್‌ಮೇನಿ ಪಾಣ್‌ಕಣ್
ತೊಳಿಲ್ ಪಾಡಿ ವಂಡು ಅರೈಯುಂ ತೊಂಗಲಾನ್ ಶೆಮ್‌ಪೊನ್
ಕಳಲ್ ಪಾಡಿ ಯಾಮ್ ತೊಳುದುಂ ಕೈ (೪೫)

೨೯

ಮೇರೆಯರಿಯದ ಭೂಮಿ ತೀರವಿರದಿಹ ಆಗಸವು ಗಾಳಿ
ಮೇಲೇರಿಬರುವ ಉರಿ ನೀರು – ಎಲ್ಲವನು ತಾನೆ ಆಗಿಸುವ!
ನಿಂತವನು ಎಲ್ಲೆಲ್ಲು ನೆಲೆಯಾಗಿ
ಹಿಡಿದವನು ಎಣೆಯಿರದ ಸುಡುಚಕ್ರವನೆತ್ತಿ, ಹಿಡಿದಪ್ಪುವನು ತನ ಭಕ್ತರನು
ಮುಂದೆಂದು ಹಿಡಿಯೆನ್ನ ಮನವೆ ಅಳದಲಿ ಅವನಡಿಯನ್ನು!

೩೦

ತನಗೆ ತಾನೆ ಉಪಮೆ! ತನ್ನ ರೂಪಗಳೇ ಇರುವೆಲ್ಲ ರೂಪಗಳು,
ತಪಗೈದು ತಾರೆಗಳಾಗಿ ನಿಂತವರು ತನ್ನ ರೂಪಗಳೆ ತಾನೆ,
ಉರಿಬೆಂಕಿ ಹಿರಿಬೆಟ್ಟ ದಿಕ್ಕೆಂಟು! ಅಂಡದೊಳಿರುವ
ಸೊಡರೆರಡು[1] ತಾನೆ ಆಗಿರುವ ನಮ್ಮೊಡೆಯ!

1. ಬ್ರಹ್ಮಾಂಡದಲ್ಲಿರುವ ಸೂರ್ಯಚಂದ್ರರು

೩೧

ಒಡೆಯನವ, ನೆಲದೊಳಗಡಗಿ ನಡೆಸುವ, ದಿಕ್ಕೆಂಟು ತಾನಾದವ,
ವೇದವನೆ ತಂದವ, ವೇದದಲಿ ನಿಂತವ, ಬಾನ ಉಸಿರಾದವ!
ಮುಗಿಲ ನೇರಕೆ ಹರಿವ
ನೀರನೆರೆಯಿಂದ ಉಲಿವ ನೀರಿಂದ ಮೆರೆವ ವೇಂಗಡದಲಿ ತಾ ನಿಂತವ
ಎನ್ನೊಡಲ ಒಳಗೇ ಉಳಿದಿರುವ!

೩೨

ಇರುವ, ಕಂಡೆಯಾ ನಲ್ಮನವೇ, ಮೇಲ್ಮೆಯ ದೈವ! ಎಂದೆಂದು
ಇರುವ, ಕಂಡೆಯಾ, ನೆನೆದವರ ಮನದೊಳಗೆ! ಇರುವ, ಕಂಡೆಯಾ
ಬಾನ ಬಾಗಿಸುವ ಬೆಟ್ಟಗಳ ಕೋಡಿಂದ
ಮೇಲಾಗಿ ಜಾರುನೀರುಗಳಿಂದ ಮೆರೆವ ವೇಂಗಡದಲಿರುವ!
ಇಳೆಯನಡಗಿಸಿ ತಾನಳೆದ ನಿಡುದೈವ!

೩೩

ಕಾಣು ಕಾಣೆಂದು ಹಾತೊರೆಯುವುವು ಕಣ್ಗಳು ಹೊಳೆವ
ಹೂಮಾಲೆಗಳನು ಒಡಲಲ್ಲಿ ತೊಟ್ಟಿರುವ ಸಿರಿಮೈಯನ್ನು! ಇಂಪಾದ ದನಿಯಲ್ಲಿ
ಮೊರೆವ ದುಂಬಿಗಳು ಮುತ್ತಿರುವ ಹಾರವನು ಹೊತ್ತಿರುವ ದೇವದೇವನ
ಚಿಲುವ ಪಾದಕ್ಕೆ ಹಾಡಿ ಕೈ ಜೋಡಿಸುವ ನಾವು!

೩೪

ಉಲಗಮುಂ ಊಳಿಯುಂ ಆಳಿಯುಂ ಒಣ್ ಕೇಳ್
ಅಲರ್‌ಕದಿರುಂ ಶೆಮ್‌ತೀಯುಂ ಆವಾನ್ ಪಲಕದಿರ್‌ಗಳ್
ಪಾರಿತ್ತ ಪೈಂ ಪೊನ್ ಮುಡಿಯಾನ್ ಅಡಿಯಿಣೈಕ್ಕೇ
ಪೂರಿತ್ತು ಎನ್‌ನೆಂಜೇ ಪುರಿ (೪೪)

೩೫

ಪೆರಿಯ ವರೈ ಮಾರ್‌ಪಿಲ್ ಪೇರ್ ಅರಂ ಪೂಂಡು
ಕರಿಯ ಮುಗಿಲ್ ಇಡೈ ಮಿನ್‌ಪೋಲ ತೆರಿಯುಂಗಾಲ್
ಪಾಣ್ ಒಡುಂಗ ವಂಡು ಅರೈಯುಂ ಪಂಗಯಮೇ ಮತ್ತು ಅವನ್ ತನ್
ನೀಳ್ ನೆಡುಂಕಣ್ ಕಾಟ್ಟು ನಿರಂ (೫೫)

೩೬

ವಾಳುಂ ವಹೈ ಅರಿಂದೇನ್ ಮೈಪೋಲ್ ನೆಡುವರೈವಾಯ್
ತಾಳುಂ ಅರುವಿಪೋಲ್ ತಾರ್‌ಕಿಡಪ್ಪ ಶೂಳುಂ
ತಿರು ಮಾಮಣಿವಣ್ಣನ್ ಶೆಮ್‌ಕಣ್ ಮಾಲ್ ಎಂಗಳ್
ಪೆರುಮಾನ್ ಅಡಿ ಶೇರಪ್ಪೆತ್ತು (೫೯)

೩೭

ತಾಳ್ ಶಡೈಯುಂ ನೀಳ್ ಮುಡಿಯುಂ ಒಣ್ ಮಳುವುಂ ಚಕ್ಕರಮುಂ
ಶೂಳ್ ಅರವುಂ ಪೊನ್‌ನಾಣುಂ ತೋನ್ರುಂ ಆಲ್ ಶೂಳುಂ
ತಿರಂಡು ಅರುವಿ ಪಾಯುಂ ತಿರುಮಲೈಮೇಲ್ ಎಂದೈಕ್ಕು
ಇರಂಡುರುವುಂ ಒನ್‌ರಾಯ್ ಇಶೈಂದು (೬೩)

೩೮

ಶಾರ್‌ನ್ದು ಅಹಡು ತೇಯ್‌ಪ್ಪ ತಡಾವಿಯ ಕೋಡು ಉಚ್ಚಿವಾಯ್
ಊರ್‌ನ್ದುಂ ಇಯಂಗುಂ ವೆಣ್ ಮದಿಯಿನ್ ಒಣ್ ಮುಯಲೈ ಶೇರ್‌ನ್ದು
ಶಿನಂ ವೇಂಗೈ ಪಾರ್‌ಕ್ಕುಂ ತಿರುಮಲೈಯೇ ಆಯನ್
ಪುನಂ ವೇಂಗೈ ನಾರುಂ ಪೊರುಪ್ಪ (೭೫)

೩೪

ಉಳಿವು[1] ಅಳಿವು[2] ಕಡಲು ಚಂದದಿ ಬೆಳಗುವ
ಚಂದ್ರಸೂರ್ಯರು ಕೆಂಪುರಿಯು–ತಾನೆ ಆಗುವನೆಲ್ಲ! ಹಲ ಹೊಳವುಗಳ
ಹರಿಸುತ್ತ, ಚೆಲುವಿನಾ ಹೊನ್ನ ಮುಡಿಯವನ ಅಡಿಗಳೆರಡಕ್ಕೆ
ಹರಿದೋಡು ಹಿಗ್ಗಿಂದ ಎಲೆ ಮನವೆ!

1. ಉಲಗಂ = ಲೋಕ 2. ಊಳಿ = ಪ್ರಳಯ

೩೫

ಹಿರಿಬೆಟ್ಟದೊಲು ಎದೆಹರವು, ಹೂಮಾಲೆಯದರ ಮೇಲೊಂದು ಬಳುಕಿದರೆ
ಕಾರ್ಮೋಡಗಳ ನಡುವೆ ಸುಳಿಮಿಂಚಿನೊಲು ಬೆಳಗುವುದು!
ಉಳಿದೆಲ್ಲ ಸದ್ದನಡಗಿಸಿ ದುಂಬಿ ಮೊರೆವಾಗ ನಮ್ಮೊಡೆಯನ
ನಿಡುಗಣ್ಣ ಬಣ್ಣ ತೋರುವುದು ತಾವರೆಯಂತೆ!

೩೬

ಕರಿದಾದ ಹಿರಿದಾದ ಬೆಟ್ಟದೆರಡು ಕಡೆ
ಹರಿದುಬರುವಂತೆ ನೀರಧಾರೆ, ಮೈಮೇಲೆ ಮಾಲೆ! ಅದಕೆ ಮನಸೋತು
ಸಿರಿದೇವಿ ಇಹಳಲ್ಲೆ! ಮಣಿವಣ್ಣನವ, ಮುದ್ದುಕಣ್ಣಿನವ ದೇವರ ದೇವನಡಿ ಸೇರಿ
ಅರಿತೆ ನಾ ಬದುಕ ಬಗೆಯನ್ನು!

೩೭

ತಳಕೆ ಕಟ್ಟಿದ ದಡೆ, ಎತ್ತಿ ಬಿಗಿದ ಮುಡಿ, ಅಂದದ ಶೂಲ, ಚಕ್ರ,
ನಡುವಿನಲಿ ಬಿಗಿದೊಂದು ಹಾವು ಹೊನ್ನದಾರ! ಎಲೆಲೆ ಸುತ್ತರಿವ
ನೆರೆ ಬಂದ ತೊರೆ ಹರಿಯುವಾ ತಿರುಮಲೆಯ ಮೇಲೆ ಎನ್ನೊಡೆಯನಿಗೆ
ತೋರುವುದು ರೂಪ[1] ಎರಡೊಂದಾಗಿ ಸೇರಿ!

1. ಶಿವ, ವಿಷ್ಣು ಇವೆರಡು ರೂಪ

೩೮

ಬಳಿಸಾರ್ದು ತಳ ಹರವಾದ ಗಿರಿಯ ಕೋಡನುಜ್ಜುವ ತೆರ
ಬೆಳ್ ಚಂದಿರನೊಳಿಹ ಜಿಂಕೆ ಸುಳಿಸುಳಿದು ಬರೆ ಅದ ಕಂಡು ಹುಲಿ ಹತ್ತಿರಕೆ ಹಾರಿ
ಮುಳಿಮುಳಿದು ನೋಡೆ, ಅದುವೆ ತಿರುಮಲೆಯು ಗೊಲ್ಲನದೆ[1] ತಾಣ
ಬಗೆಬಗೆಯ ಹೂ ಗಮಗಮಿಸುವ ಮಲೆ

1. ಕೃಷ್ಣ

೩೯

ನೆಂಜಾಲ್ ನಿನೈಪ್ಪರಿಯನೇಲುಂ ನಿಲೈಪೆತ್ತು ಎನ್
ನೆಂಜಮೇ ಪೇಶಾಯ್ ನಿನೈಕ್ಕುಂಗಾಲ್ ನೆಂಜತ್ತು
ಪೇರಾದು ನಿರ್‌ಕುಂ ಪೆರುಮಾನೈ ಎನ್ನೊಗ್ಗಲೋ
ಓರಾದು ನಿರ್‌ಪದು ಉಣರ್‌ವು (೮೧)

೪೦

ಇನಿ ಅವನ್ ಮಾಯನ್ ಎನ ಉರೈಪ್ಪರೇಲುಂ
ಇನಿ ಅವನ್ ಕಾಣ್‌ಬರಿಯ ನೇಲುಂ ಇನಿ ಅವನ್
ಕಳ್ಳತ್ತಾಲ್ ಮಣ್‌ಕೊಂಡು ವಿಣ್ ಕಡಂದ ಪೈಂಕಳಲಾನ್
ಉಳ್ಳತ್ತಿನ್ ಉಳ್ಳೇ ಉಳ್ಳಾನ್ (೮೩)

೪೧

ಅದು ನನ್ರು ಇದು ತೀದು ಎನ್ರು ಐಯ್ಯಂಪಡಾದೇ
ಮದು ನಿನ್ರ ತಣ್ ತುಳಾಯ್ ಮಾರ್ವನ್ ಪೊದು ನಿನ್ರ
ಪೊನ್ ಅಮ್ ಕಳಲೇ ತೊಳುಮಿನ್ ಮುಳುವಿನೈಗಳ್
ಮುನ್ನಂ ಕಳಲುಂ ಮುಡಿಂದು (೮೫)

೪೨

ಕವಿಯಿನಾರ್ ಕೈಪುನೈಂದು ಕಣ್ ಆರ್ ಕಳಲ್‌ಪೋಯ್
ಶೆವಿಯಿನ್ ಆರ್ ಕೇಳ್‌ವಿಯರಾಯ್ ಶೇರ್‌ನ್ದಾರ್ ಪುವಿಯಿನಾರ್
ಪೋತ್ತಿ ಉರೈಕ್ಕ ಪೊಲಿಯುಮೇ ಪಿನ್ನೈಕ್ಕಾಯ್
ಏತ್ತು ಉಯಿರೈ ಅಟ್ಟಾನ್ ಎಳಿಲ್ (೮೫)

೪೩

ಮುಡಿಂದ ಪೊಳುದಿಲ್ ಕುರವಾಣರ್ ಏನಂ
ಪಡಿಂದು ಉರುಶಾಲ್ ಪೈತಿನೈಗಳ್ ವಿತ್ತ, ತಂಡಿದು ಎಳುಂದ
ವೇಯ್ ಕಳೈ ಪೋಯ್ ವಿಣ್ ತಿರಕ್ಕುಂ ವೇಂಗಡಮೇ ಮೇಲೊರುನಾಳ್
ತೀಂಕುಳಲ್ ವಾಯ್ ವೈತ್ತಾನ್ ಶಿಲಂಬು (೮೯)

೩೯

ಅರಿಯಬಲ್ಲುದೆ ಮನ ಹಿರಿಮೆಯನವನ? ದಿಟ! ಅಂತಾದರೂ ನೆಲೆಯನ್ನೇ ಅವನ
ನೆನೆದೆನ್ನ ಮನವೆ ನುಡಿ, ನೆನೆದರಾಯಿತು ಇನ್ನು ಮನದಲ್ಲೆ
ನೆಲೆಗೊಂಡು ನಿಲುವ ಹಿರಿಮೆಯವ ಏಕೆಂದು
ಸುಳಿಯದೋ ಅವನತ್ತ ಮನ?

೪೦

ಈಗವನು ಮಾಯದವನೆಂಬೆಯೋ?
ಈಗವನ ಕಾಣಲರಿಯೆವು ಎಂಬೆಯೋ? ಈಗವನು
ತುಡಗದಲಿ ನೆಲವನ್ನೆ ಪಡೆದು ಬಾನಲಿ ನಿಂತ ಆ ಹಿರಿಹೆಜ್ಜೆಯವ[1]
ನನ್ನೊಡಲ ಒಳಗಿರುವ ಎನ್ನೊಡೆಯ!

1. ತ್ರಿವಿಕ್ರಮಾವತಾರ

೪೧

ಅದು ಒಳಿತು ಇದು ಕಾಡು ಎಂದಿಂತು ಪರದಾಡದೆಲೆ
ದುಂಬಿ ತುಂಬಿರುವ ತುಳಸಿಮಾಲೆ ತೊಟ್ಟವನ, ಎಲ್ಲರಿಗೆ ಹಿತವೆನಿಪ
ಹೊನ್ನಡಿಗಳನೆ ನಂಬಿ ಹಿಡಿಯಿರಿ ನೀವು! ದುರಿತಗಳೆಲ್ಲ
ಮಡಿದು ಬೀಳುವುವು ಮುಂದಾಗಿ!

೪೨

ಇನಿತಾಗಿ ಹಾಡಿ, ಕೈಮುಗಿದು, ಕಂಗಳವನಡಿ ಸೇರಿ
ಇಂಪಾದ ಕೇಳ್ಮೆಯನು ತುಂಬಿ ಕಿವಿತುಂಬ, ತಲೆಬಾಗಿ ಜಗದ ಜನವೆಲ್ಲ
ಅವನನ್ನೆ ಹಾಡಿ ಹೊಗಳಿದರು ನಂಬಿದರು, ಸರಿದೂಗುವುದೆ
ಮನದನ್ನೆಗೆತ್ತ ಉಸಿರ ಅಟ್ಟಿದವನ[1] ಮೈಯ್ಮೆಯನು?

1. ನಪ್ಪಿನ್ನೈಪ್ಪಿರಾಟ್ಟಿಗಾಗಿ ವೃಷಭವನ್ನು ಕೊಂದವನು, ಕೃಷ್ಣ

೪೩

ಮುಪ್ಪಡರಿ ಸಾವ ಬಳಿಸಾರ್ದ ಕುರುವ ಕಾಡಾಡಿಗಳು
ಹಂದಿ ಹೊಕ್ಕಾಡಿ ಉತ್ತ ನೆಲದಲ್ಲೆ ಬಿತ್ತುವರು ಬೆಳೆ!
ಹಂದಿ ನೆಲಬಗೆದು ಕಿತ್ತಾಡಿ ತಿಂದುಳಿದ ಬಿದಿರು ಕಳೆ
ಬೆಳೆಬೆಳೆದು ಬಾನುದ್ದ ನಿಂತಿರುವ ವೇಂಗಡವೆ ಹಿಂದೊಂದು ದಿನ
ಇನಿತಾದ ಕೊಳಲ ಬಾಯಲಿಟ್ಟವನ ಬೆಟ್ಟ!

೪೪

ಇಡಂ ವಲಂ ಏಳ್‌ಪೂಂಡ ಇರವಿ ತೇರ್ ಓಟ್ಟಿ
ವಡಮುಹು ವೇಂಗಡತ್ತು ಮುನ್ನುಂ ಕುಡಂ ನಯಂದ
ಕುತ್ತನಾಯ್ ನಿನ್ರಾನ್ ಕುರ್ಕೈ ಕಳಲ್ ಕೂರುವದೇ
ನಾ ತನ್ನಾಲುಳ್ಳ ನಲಂ (೭೩)

೪೫

ಪೊಲಿಂದು ಇರುಂಡ ಕಾರ್‌ವಾನಿಲ್
ಮಿನ್ನೇಪೋಲ್ ತೋನ್ರಿ ಮಲಿಂದು ತಿರು ಇರುಂದ ಮಾರ್ವನ್
ಪೊಲಿಂದ ಗರುಡನ್ ಮೇಲ್‌ಕೊಂಡ ಕರಿಯಾನ್
ಕಳಲೇ ತೆರುಳ್ ತನ್ ಮೇಲ್ ಕಂಡಾಯ್ ತೆಳಿ (೫೭)



೪೪

ಎಡಬಲಗಳಲಿ ನಡೆಸುತ್ತ ಏಳು ತೇಜಿಗಳ ತೇರನೇರಿದ ಸೂರ್ಯನನು
ಬಡಗದಿಕ್ಕಲಿ ಮೆರೆವ ವೇಂಗಡದಿ ನೆಲೆನಿಂತು, ಒಲುಮೆಯಲಿ
ಕೊಡಕುಣಿತವನು ಕೈಗೊಂಡು ನಿಂತವನ ಗೆಜ್ಜೆಯಡಿಗಳನು ಕೊಂಡಾವುದೆ
ತನಗೆಂದು ನಾಲಗೆಯು ತಾನಾಗಿ ಪಡಕೊಂಡ ಮೇಲ್ಮೆ[1]

1. ಶ್ರೇಯಸ್ಸು, ನಿಧಿ

೪೫

ಮಳೆಗಾಲದೊಳು ಮಲೆತ ಮೋಡದಲಿ ಮಿಂಚು ತೋರುವ ತೆರ
ಬೆಳಗುವಳು ಸಿರಿಯವನೊಡಲಲ್ಲಿ! ಬಾನುದ್ದ ಬೆಳೆದ
ಗರುಡವನೇರಿನಿಂತ ಕರಿಮೈಯವನ ಸಿರಿಪಾದಗಳೆ ವಿಷಯ
ತಿಳಿವಿಗೂ ಮಿಗಿಲಾದ ಒಲುಮೆಗೆ ದಿಟ!



ನಾನ್ಮುಗನ್ ತಿರುವಂದಾದಿ

೪೬

ತೇರುಂಗಾಲ್ ದೇವನ್ ಒರುವನೇ ಎನ್ನು ಉರೈಪ್ಪರ್
ಆರುಂ ಅರಿಯಾರ್ ಅವನ್ ಪೆರುಮೈ ಓರುಂ
ಪೊರುಳ್ ಮುಡಿವುಂ ಇತ್ತನ್ಮೈಯೇ ಎತ್ತವಂ ಶೆಯ್ದಾರ್‌ಕುಂ
ಅರುಳ್ ಮುಡಿವದು ಆಳಿಯಾನ್‌ಪಾಲ್ (೨)

೪೭

ನೀಯೇ ಉಲಗೆಲ್ಲಾಂ ನಿನ್ ಅರುಳೇ ನಿರ್‌ಪನವುಂ
ನೀಯೇ ತವತ್ತೇವದೇವನುಂ
ನೀಯೇ ಎರಿಶುಡರುಂ ಮಾಲ್‌ವರೈಯುಂ ಎಣ್ ದಿಶೈಯುಂ ಅಂಡತ್ತು
ಇರುಶುಡರುಂ ಆಯ ಇವೈ (೨೦)

೪೮

ಕುರಿಪ್ಪು ಎನಕ್ಕು ಕೋಟ್ಟಿಯೂರ್ ಮೇಯಾನೈ ಏತ್ತ
ಕುರಿಪ್ಪು ಎನಕ್ಕು ನನ್ಮೈವೆಯಕ್ಕ ಪೆರುಪ್ಪನೋ
ವೇಂಗಡತ್ತು ಮೈಯಾನೈ ಮೆಯ್‌ವಿನೈ ನೋಯ್ ಎಯ್‌ದಾಮಲ್
ತಾನ್ ಕಡತ್ತುಂ ತನ್‌ಮೈಯಾನ್ ತಾಳ್ (೩೪)

೪೯

ಅಳೈಪ್ಪನ್ ತಿರುವೇಂಗಡತ್ತಾನೈ ಕಾಣ
ಇಳೈಪ್ಪನ್ ತಿರುಕ್ಕೂಡಲ್ ಕೂಡ ಮಳೈ ಪೇರ್
ಅರುವಿ ಮಣಿ ವರಂಡಿವಂದು ಇಳಿಯ ಆನೈ
ವೆರುವಿ ಅರವು ಒಡುಂಗುಂ ವೆರ್‌ಪು (೩೯)

ನಾಲ್ಕು

ತಿರುಮಳಿಶೈ ಆಳ್ವಾರರ ನಾಲ್ಮೊಗನ ಸಿರಿ ಅಂತಾದಿಯಿಂದ

೪೬

ಮನಮಿಕ್ಕಿನೋಡೆ ದೇವನೊಬ್ಬನೆ ಎಂದು ಅರಿತವರರುಹವರು
ಅರಿವವರು ಯಾರುಂಟು ಅವನ ಹಿರಿಮೆಯನು? ಶಾಸ್ತ್ರಗಳ
ಹುರುಳಿಲ್ಲ ಮುಗಿವುದಿಷ್ಟರಲಿ ತಾನೆ? ಎಂತೆಂತು ತಪವ ಗೈದವರು
ಫಲವ ಕಾಂಬುದು ಚಕ್ರವನು ತೊಟ್ಟವನಲ್ಲೆ ತಾನೆ!

೪೭

ಲೋಕವೆಲ್ಲವು ನೀನೆ, ಲೋಕದ ನಿಲುಮೆ ನಿನ್ನೊಲುಮೆಯಲೆ!
ತಪಗೈದು ದೇವರಾದರಿಗೆ ದೇವ ನೀನೆ,
ನೀನೆ, ಉರಿಬೆಂಕಿ ಹಿರಿಬೆಟ್ಟ ದಿಕ್ಕೆಂಟು ಅಂಡದೊಳಗಣ
ಸೊಡರೆರಡು, ಎಲ್ಲವು ನೀನೆ ಆಗಿರುವಿ!

೪೮

ಎನಗಾಸೆ ಹಾಡಿ ಹೊಗಳಲು ಕೋಟ್ಟಿಯೂರಲಿ ನಿಂತ ದೇವನನು
ವೇಂಗಡದಿ ನೆಲೆಗೊಂಡ ದೈವವನು!
ಸಾಧಿಸಲು ಮನದಾಸೆ ಎನಗೀ ಸಂಧಿಯನು!
ಬಾಳ ಬವಣೆಯನು[1] ಬೇನೆಯನು[2] ಮೇಲೆರಗದೊಲು ಕಳಿವವನ[3]
ಅಡಿಗಳನೆಂತಾದರು ಮರೆಯುವೆನೊ ನಾನು?

1. ವಿನೈ = ಕರ್ಮಗಳನ್ನು, ಪಾಪಗಳನ್ನು; 2. ನೋಯ್ = ನೋವು, ರೋಗ; 3. ಮೂಲದಲ್ಲಿ 'ಇವು ಮೇಲೆರಗದಂತೆ ಹೋಗಲಾಡಿಸುವುದೇ ಸ್ವಭಾವವಾಗಿ ಉಳ್ಳವನ' ಎಯ್ದಾಮಲ್ ಕಡತ್ತುಂ ತನ್ಮೈಯಾನ್

೪೯

ಬಾಯ್ದೆರೆದು ಕರೆಯುತಿಹೆ ಸಿರಿವೇಂಗಡದ ದೈವವನು ಕಾಣುವೆನು ಎಂತೆಂದು
ಬರೆವೆ ಹರಕೆಯ ಗೆರೆಗಳನು ಕೂಡಿಕೊಳಲೆಂದೀ ಬೆಟ್ಟವನು! ಹಿರಿಮಳಿಯಂತೆ
ಮೊರೆವ ನೀರ ಝರಿಯಲ್ಲಿ ಉರಿಮಣಿಗಳುಬ್ಬಿ ಹರಿದು ಬರೆ
ಅದ ಕಂಡು ಬೆದರಿ ಓಡಲು ಆನೆ, ಮಿಂಚೆಂದು ಹೆದರಿ ಹೊಗೆ ಹುತ್ತದೊಳು ಹಾವು
ಆ ಬೆಟ್ಟವನು ನಾ ಕಾಣುವೆನು ಎಂದು?

೫೦

ವೇರ್‌ಪು ಎನ್ರು ವೇಂಗಡಂ ಪಾಡಿನೇನ್ ವೀಡು ಆಕ್ಕಿ
ನಿರ್‌ಕಿನ್ರೇನ್ ನಿನ್ರು ನಿನ್ಯೈಕ್ಕಿನ್ರೇನ್ ಕರ್‌ಕಿನ್ರ
ನೂಲ್‌ವಲ್ಯೆಯಿಲ್ ಪಟ್ಟಿರುಂದ ನೂಲಾಟ್ಟಿ ಕೇಳ್ವನಾರ್
ಕಾಲ್‌ವಲ್ಯೆಯಿಲ್ ಪಟ್ಟಿರುಂದೇನ್ ಕಾಣ್ (೪೦)

೫೧

ಕಾಣಲ್ ಉರುಹಿನ್ರೇನ್ ಕಲ್ ಅರುವಿ ಮುತ್ತು ಉದಿರ
ಓಣವಿಳವಿಲ್ ಒಲಿ ಅದಿರ ಪೇಣಿ
ವರು ವೇಂಗಡವಾ ಎನ್ನುಳ್ಳಂ ಪುಹುಂದಾಯ್
ತಿರುವೇಂಗಡಮದನ್ಯೆ ಶೆನ್ರು (೪೧)

೫೨

ಪುರಿಂದು ಮಲರ್ ಇಟ್ಟು ಪುಂಡರೀಕಪ್ಪಾದಂ
ಪರಿಂದು ಪಡಕಾಡು ನಿರ್‌ಪ ತೆರಿಂದು ಎಂಗುಂ
ತಾನ್ ಓಂಗಿ ನಿರ್‌ಕಿನ್ರಾನ್ ತಣ್ ಅರುವಿ ವೇಂಗಡಮೇ
ವಾನೋರ್‌ಕ್ಕುಂ ಮಣ್ಣೋರ್‌ಕ್ಕುಂ ವೈಪ್ಪು (೪೨)

೫೩

ವೈಪ್ಪನ್ ಮಣಿವಿಳಕ್ಕಾಂ ಮಾಮದಿಯೈ ಮಾಲುಕ್ಕು ಎನ್ರು
ಎಪ್ಪೊಳುದುಂ ಕೈ ನೀಟ್ಟುಂ ಯಾನೈ ಎಪ್ಪಾಡುಂ
ವೇಡು ವಳ್ಳಿಕ್ಕ ಕುರವರ್ ವಿಲ್ ಎಡುಕ್ಕುಂ ವೇಂಗಡಮೇ
ನಾಡು ವಳ್ಳೈತ್ತು ಆಡುದುಮೇಲ್ ನನ್ರು (೪೩)

೫೦

ಬೆಟ್ಟವನೆ ವೇಂಗಡವೆ! ಅದನೆ ಹಾಡಿ ಹೊಗಳಿದೆನು
ಆದೆ ಬಿಡುಗಡೆಗೆ ಎಡೆಯೆಂದು
ನಂಬಿ ನಿಂತಿಹೆನು, ನಿಂತು ನೆನೆಯುತಲಿಹೆನು ಕಲಿಯುತಲಿಹ
ವೇದದ ಬಲೆಯೊಳಗೆ ಹೊಳೆಯುವ ಸಿರಿದೇವಿಯೊಡೆಯ
ಅವನ ಕಾಲ ಬಳಿಗಳಲಿ ನಾ ಸಿಲುಕಿರುವೆ ಕಂಡಿರಾ!

೫೧

ಸುರಿಸುತ ಮಣಿಗಳ ಹರಿಯುತ ಕಲಕಲ
ಓಣದ ದಿನದೊಳು ಪಾಡುವ ಪದಗಳ ಮಾರ್ದನಿಗೈಯಲು ತೊರೆಗಳು,
ಒಲುಮೆಯ ಬಂಟರು ನೆರೆಯುವ ವೇಂಗಡದವ ದಿಟದಲಿ ಸೇರಿಹನೆನ್ನೊಳಗೆ!
ಆದರು ಕಾಣಲು ಕಾತರಗೊಂಡಿಹೆ ಸಿರಿವೇಂಕಟಗಿರಿಯನೆ ನಾ ಸೇರಿ!

೫೨

ಬಯಸಿ ನಿನ್ನನೆ ಬಂದು ನಿನ್ನಡಿದಾವರೆಗಳಲಿ ಹೂವಿಟ್ಟು
ನಿನ್ನನೇ ಹಾಡಿ ಹೊಗಳುತ್ತ ನೆಲೆಗೊಂಡು
ಕಡಿದ ಮರ ಬಿದ್ದಲ್ಲೆ ಇರುವಂತೆ[1] ನಿಲುವರಿಲ್ಲ!
ಹೊಳೆಯುತ್ತ ಎಲ್ಲೆಲ್ಲು, ನಿಂತಿರುವ ತಾನಿಲ್ಲಿ ಮೇಲಾಗಿ!
ತಂಪು ತೊರೆಗಳ ವೇಂಗಡವೆ
ಬಾನವರಿಗು ಬುವಿಯವರಿಗು ಕಟ್ಟಿಟ್ಟ ಬುತ್ತಿ[2]!

1. ಜಡವಾಗಿ ಕಾಲ್ತೆಗೆಯಲು ಮನಸ್ಸು ಬಾರದೆ 2. ವೈಪ್ಪು = ನಿಧಿ

೫೩

ಇಡುವೆ ಮಣಿದೀಪ ಚಿನ್ನಿಗ ಚಂದ್ರಮನನ್ನೆ
ಎನ್ನೊಡೆಯನಿಗೆಂದು ಎಂದೆಂದು ಕೈಯೆತ್ತಿ ನಿಂತಿರುವ ಆನೆಯನು
ಎಲ್ಲೆಡೆಗಳಿಂ ಸುತ್ತರಿಯೆ ಬೇಡರದ
ಕಂಡು ಕುರುವಜನ ಬಿಲ್ಲ ಕೈಕೊಂಡ ವೇಂಗಡವನ್ನೆ
ನಾಡವರೆಲ್ಲ ಸುತ್ತರಿದು ಕುಣಿದಾಡಲದು ಮೇಲು!

೫೪

ವೇಂಗಡಮೇ ವಿಣ್ಣೋರ್ ತೋಳುವದುವುಂ ಮೆಯ್‌ಮ್ಮೈಯಾಲ್
ವೇಂಗಡಮೇ ಮೆಯ್ ವಿನೈನೋಯ್ ತೀರ್‌ಪದುವುಂ ವೇಂಗಡಮೇ
ದಾನವರೈ ವೀಳ ತನ್ ಆಳಿಪ್ಪಡೈತೊಟ್ಟು
ವಾನವರೈ ಕಾಪ್ಪಾನ್ ಮಲೈ (೪೮)

೫೫

ಅನ್‌ಬು ಆವಾಯ್ ಆರ್ ಅಮುದಂ ಆವಾಯ್ ಅಡಿಯೇನುಕ್ಕು
ಇನ್‌ಬು ಆವಾಯ್ ಎಲ್ಲಾಮುಂ ನೀ ಆವಾಯ್ ಪೊನ್‌ಪಾವೈ
ಕೇಳ್ವಾ ಕಿಳರ್ ಒಳಿ ಎಮ್ ಕೇಶವನೇ ಕೇಡು ಇನ್ರಿ
ಆಳ್ವಾಯ್‌ಕ್ಕು ಅಡಿಯೇನ್ ನಾನ್ ಆಳ್ (೫೯)

೫೬

ತರ್‌ಪು ಎನ್ನೈ ತಾನ್ ಅರಿಯಾನೇಲುಂ ತಡಂ ಕಡಲೈ
ಕಲ್‌ಕೊಂಡು ತೂರ್‌ತ್ತ ಕಡಲ್ ವಣ್ಣನ್ ಎನ್‌ಕೊಂಡ
ಎವ್ವಿನೈಯುಂ ನೀಂಗ ವಿಲಂಗಾ ಮನಂ ವೈತ್ತಾನ್
ವೆವ್ವಿನೈಯುಂ ಮಾಯುಂ ಮಾಲ್ ಕಂಡು (೭೭)



೫೪

ಬಾನವರು ಬಯಸಿ ಬರುವುದು ವೇಂಗಡಕೆ! ಮೈಮೆಯಲಿ
ಪಾಪವನು ನೋವನ್ನು ಕಳೆವುದಿದು ವೇಂಗಡವೇ! ದಿಟವಾಗಿ ವೇಂಗಡವೆ
ದಾನವರ ತೊಲಗಿಸಲು ತನ ಚಕ್ರವನೆ ತೊಟ್ಟು
ಬಾನವರ ಕಾಪಿಡುವ ಮಲೆಯಹುದು!

೫೫

ಒಲುಮೆ ಮೈವೆತ್ತಿ ಬಂದವ, ಅಮೃತ ತುಂಬಿ ತುಳುಕುವವ ಈ ದಾಸನಿಗೆ
ಸುಖವನ್ನೆ ನೀಡುವವ, ಎಲ್ಲವೂ ಎನಗಾದವ, ಸಿರಿದೇವಿಯ ಒಡೆಯನಹ
ಅವಳೊಡಗೂಡಿಯೆ ಬೆಳಗುವ ಕೇಶವನೆ,
ಕೇಡಿರದೊಂದು ಸೇವೆಯನಿತ್ತು ನೀ ಕಾಪಿಡುವೆ, ನಿನ್ನಡಿಯಾಳು ನಾನು!

೫೬

ಎನ್ನೊಡಲ ಬಲ್ಲವನಲ್ಲ ತಾನು,
ಇಂತಾದರೂ ತೆಂಗಡಲನ್ನು ತುಂಬಿದಾ ಕಲ್ಲಿಂದ ಕಡಲ ಬಣ್ಣದವ
ಎನ್ನನೇ ಸುತ್ತರಿದ!
ಪಾಪಗಳನ್ನೆಲ್ಲ ತೊಳೆವಂತೆ ನಿಲಿಸಿಕೊಂಡನವ ತನ್ನಲೇ ಎನ್ನ ಮನವ!
ಪಾಪಗಳೆಲ್ಲ ಮಾಯುವವು ಅವನ ಕಂಡು!



ಐದು

ಪೆರಿಯ ತಿರುವಂದಾದಿ

೫೭

ಯಾನುಂ ಎನ್‌ನೆಂಜುಂ ಇಶೈಂದೊಳಿಂದೋಮ್ ವಲ್‌ವಿನೈಯೈ
ಕಾನುಂ ಮಲೈಯುಂ ಪುಹಕ್‌ಕಡಿವಾನ್ ತಾನ್ ಒರ್
ಇರುಳ್ ಅನ್ನ ಮಾಮೇನಿ ಎಮ್ ಇರೈಯಾರ್ ತಂದ
ಅರುಳ್ ಎನ್ನುಂ ದಂಡಾಲ್ ಅಡಿತ್ತು (೨೬)

೫೮

ಉಣರ ಒರುವರ್‌ಕ್ಕು ಎಳಿಯನೇ ಶೆವ್ವೇ
ಇಣರುಂ ತುಳಾಯ್ ಅಲಂಗಲ್ ಎಂದೈ ಉಣರ
ತನಕ್ಕು ಎಳಿಯರ್ ಎವ್ವಳವರ್ ಅವ್ವಳವನ್ ಆನಾಲ್
ಎನಕ್ಕು ಎಳಿಯನ್ ಎಂಪೆರುಮಾನ್ ಇಂಗು (೨೯)

೫೯

ಇಂಗು ಇಲ್ಲೈ ಪಂಡುಪೋಲ್ ವೀತ್ತಿರುತ್ತಲ್ ಎನ್ನುಡೈಯ
ಶೆಮ್‌ಕಣ್ ಮಾಲ್ ಶೀರ್‌ಕ್ಕುಂ ಶಿರಿದು ಉಳ್ಳಂ ಅಂಗೇ
ಮಡಿ ಅಡಕ್ಕಿ ನಿರ್‌ಪದನಿಲ್ ವಲ್ ವಿನೈಯಾರ್ ತಾಮ್ ಈಂಡು
ಅಡಿಯೆಡುಪ್ಪದನ್ರೋ ಅಳಹು (೩೦)

೬೦

ಪಾಲ್ ಆಳಿಂ ನೀ ಕಿಡಕ್ಕುಂ ಪಣ್‌ಬೈ ಯಾಮ್ ಕೇಟ್ಟೇಯುಂ
ಕಾಲ್ ಆಳುಂ ನೆಂಜು ಅಳಿಯುಂ ಕಣ್ ಶುಳಲುಂ ನೀಲ್ ಆಳಿ
ಶೋದಿಯಾಯ್ ಆದಿಯಾಯ್ ತೊಲ್‌ವಿನೈ ಎಮ್‌ಪಾಲ್ ಕಡಿಯುಂ
ನೀದಿಯಾಯ್ ನಿನ್ ಶಾರ್‌ನ್ದು ನಿನ್ರು (೩೪)

ಐದು

ನಮ್ಮಾಳ್ವಾರರ ಹಿರಿಯ ಸಿರಿ ಅಂತಾದಿಯಿಂದ

೫೭

ನಾನು ನನ್ನ ಮನವು ಒಪ್ಪಿದೆವು ಇಬ್ಬರೊಂದಾಗಿ ದುರುಳ ದುರಿತಗಳನ್ನೆಲ್ಲ
ಕಾಡಿಗಟ್ಟುವುದು ಬೆಟ್ಟಕ್ಕೆ ಎಂದು! ತಾನಾಗಿ
ಇರುಳಂತೆ ಮೈವೆತ್ತು ಬಂದವನು ಇತ್ತಂಥ
ಅರುಳಿಂಬ[1] ದಂಡಿಗೆಯಿಂದ ಬಡಿದು!

1. ಅರುಳ್ = ಕೃಪೆ

೫೮

ಅರಿಯಬಲ್ಲರು ಯಾರು ನೇರಾಗಿ ಅವನನ್ನು
ತೊಟ್ಟ ತುಳಸಿಮಾಲೆಯನೆ ಹಿರಿಹಿಗ್ಗಿಸುವ ದೈವವನು? ಅಂತಾದರೂ
ತನ್ನ ಭಕುತರ ಒಲುಮೆ ಎಂತೆಂತೊ ಅಂತಂತು ಒಲಿಯುವನು!
ಎಂತಲೇ ಎನ್ನೊಡೆಯನನು ನಾನರಿತೆನಿಂದು!

೫೯

ಈವರೆಗೆ ಎನ್ನೊಡಲಲ್ಲಿ ಒತ್ತಾಗಿ ತಂಗಿದ್ದ
ದುರಿತಗಳಿಗೆಡೆಯಿಲ್ಲ ಇನ್ನು! ಎನ್ನನು ಕಂಡು ಕರುಣೆಯಲಿ
ಕೆಂಪಾದ ಕಣ್ಣವನ ಸಿರಿಗುಣಗಳೇ ಕಿಕ್ಕಿರಿದು ಎನ್ನೊಡಲಲ್ಲಿ
ನೆರದಿರಲು, ಇಷ್ಟು ದಿನ ಬೀಸಾಗಿ
ಬೆಳೆದಿದ್ದ ದೋಷಗಳಿನ್ನು ಮೈಮುದುರಿ ನಿಲ್ಲದೆಲೆ ಇಲ್ಲಿಂದ ಕಾಲ್ತೆಗೆವುದೇ ಲೇಸು!

೬೦

ಪಾಲ್‌ಗಡಲಲ್ಲಿ ನೀ ಪವಡಿಸಿದ ಪರಿ ಕೇಳಿದರು ಕಿವಿಯಾರೆ
ನಡುಗುವುವು ಕಾಲ್‌ಗಳು, ಉಡುಗುವುದು ಮನ, ಮೂಡುವುದು ಮಂಜು ಕಂಗಳಲಿ!
ನೀಲಗಡಲಬಣ್ಣ ಅದು ನಿನ್ನ ಮೈ, ಇನ್ನು ನೀ
ಎಂದೆಂದಿನ ದುರಿತಗಳ ಹೊಡೆದಟ್ಟುವವ!
ನಿನ್ನ ಬಳಿ ಸಾರ್ದು ನಿಂತು, ಕೇಳಿದರು ಕಿವಿಯಾರೆ
ಪಾಲ್‌ಗಡಲಲ್ಲಿ ನೀ ಪವಡಿಸಿದ ಪರಿ!

೬೧

ಆಮ್ ಆರು ಅರಿವುಡೈಯಾರಾವದು ಅರಿದನ್ರೇ
ನಾಮೇ ಅದು ಉಡೈಯೋಮ್ ನಲ್‌ನೆಂಜೇ ಪೂಮೇಯ್
ಮದುಕರಂ ಮೇತಣ್ ತುಳಾಯ್ ಮಾಲಾರ್ಯೆ ವಾಳ್‌ತ್ತು ಆಮ್
ಅದು ಕರಮೇ ಅನ್‌ಬಾಲ್ ಅಮ್ಮೈ (೩೭)

೬೨

ನಾನ್ ಕೂರುಂ ಕೂತ್ತಾವದು ಇತ್ತನ್ಯೆಯೇ ನಾಳ್‌ನಾಳುಂ
ತೇಂಗು ಓದಂ ನೀರ್ ಉರುವನ್ ಶೆಮ್‌ಕಣ್ ಮಾಲ್ ನೀಂಗಾದ
ಮಾಗತಿಯಾಂ ವೆಮ್ ನರಹಿಲ್ ಶೇರಾಮಲ್ ಕಾಪ್ಪದರ್‌ಕು
ನೀ ಗತಿಯಾಂ ನೆಂಜೇ ನಿನ್ಯೆ (೪೬)

೬೩

ಪೇರ್‌ನ್ದು ಒನ್ರು ನೋಕ್ಕಾದು ಪಿನ್ ನಿರ್‌ಪಾಯ್ ನಿಲ್ಲಾಪ್ಪಾಯ್
ಈನ್ ತುಳಾಯ್ ಮಾಯನ್ಯೆಯೇ ಎನ್‌ನೆಂಜೇ ಪೇರ್‌ನ್ದು ಎಂಗುಂ
ತೊಲ್ಲೈವೆಮ್ ನರಹಿಲ್ ಶೇರಾಮಲ್ ಕಾಪ್ಪದರ್‌ಕು
ಇಲ್ಲೈ ಕಾಣ್ ಮತ್ತು ಓರ್ ಇರೈ (೬೦)

೬೪

ಕಲ್ಲುಂ ಕನೈ ಕಡಲುಂ ವೈಗುಂದಂ ವಾನ್ ನಾಡುಂ
ಪುಲ್ ಎನ್ರು ಒಳಿನ್ದನಕೊಲ್ ಏಪಾವಂ
ವೆಲ್ಲನೆಡಿಯಾನ್ ನಿರಂಕರಿಯಾನ್ ಉಳ್‌ಪುಗುಂದು
ನೀಂಗಾನ್ ಅಡಿಯೇನದು ಉಳ್ಳತ್ತು ಅಗಂ (೬೮)

೬೧

ಪಡವುದತಿ ಕಷ್ಟ ಹದವರಿತ ಅರಿವನ್ನು
ಆದರದಿ ಗಳಿಸಿಕೊಂಡೆವು ನಾವು ನಮಗಾಗಿ! ಹೂಗಳಲಿ ಹಾರಾಡಿ
ದುಂಬಿಗಳು ಬಂದೊದಗುವುವು ತಂಪು ತುಳಸಿಯ ದಂಡೆಯಲಿ
ಅದ ತೊಟ್ಟಿರುವ ನನ್ನಯ್ಯನನು
ಹಾಡಿ ಹೊಗಳುವ ಕೆಲಸವೊಂದರಲೆ ನೆಲೆಗೊಂಡು ನಿಲ್ಲಿನ್ನು ನಲ್ಮನವೆ!

೬೨

ನಾನೊರೆವ ನುಡಿ ನಿನಗಿಷ್ಟೆ ದಿನದಿನವು!
ತಾ ತಂಗಿರುವ ಕಡಲ ನೀರಂತೆ ನೀಲಮೈಯವನು ಕೆಂದಾವರೆಯಂದದ ಕಣ್ಣವನು
ಅರಗಳಿಗೆ ಅಗಲಬಾರದ ದಿಕ್ಕೆಮಗೆ! ನರಕವನು ಸೇರದೊಲು ಕಾಪಿಡುವ
ನೀನೆ ಗತಿ! ನೆನೆ ಮನವೆ ನೀನದನು!

೬೩

ಬೇರೊಂದನೆಣಿಸದೆಲೆ ನಿಲ್ಲುವೆಯೊ ನಿಲ್ಲು
ತುಳಸಿಮಾಲೆಯ ತೊಟ್ಟಿರುವ ದೈವವನೆ ನೆರೆನಂಬಿ,
ನಂಬದೆಲೆ ಬಿಡುವೆಯೋ ಬಿಡು!
ಮೊದಲಿಲ್ಲ ಕೊನೆಯಿಲ್ಲ ಆ ನರಕಕ್ಕೆ, ಅದ ಸೇರದೊಲು ಕಾಪಿಡುಲು ನಮ್ಮ
ದೈವ ಬೇರೊಂದಿರದು ಕಂಡೆಯಾ ಮನವೆ!

೬೪

ಮಲೆಯು[1] ಮೊರೆವ ಕಡಲು[2] ಪರಮಪದ ವೈಕುಂಠ
ಹುಲ್ಲಂತೆ ಕೀಳಾಯಿತೇ ಎಲ್ಲ, ಪಾಪವೇ!
ಮುಗಿಲ ಮಟ್ಟಕೆ ಬೆಳೆದು ನಿಂತವ, ಕಾಡುಕಪ್ಪಿನ ಮೈಯವ ಅವ
ಎನ್ನೊಳಹೊಕ್ಕು ಕದಲದೆಲೆ
ಏನ್ನೊಡಲಲ್ಲೆ ಉಳಿದಿಹನಲ್ಲ!

1. ತಿರುಮಲೆ, ವೇಂಗಡಬೆಟ್ಟ 2. ಕ್ಷೀರಸಮುದ್ರ

೬೫

ಅಡರ್ ಪೊನ್ ಮುಡಿಯಾನೈ ಆಯಿರಂ ಪೇರಾನೈ
ಶುಡರ್‌ಕೊಳ್ ಶುಡರ್ ಆಳಿಯಾನೈ ಇಡರ್ ಕಡಿಯುಂ
ಮಾತಾಪಿತುವಾಹ ವೈತ್ತೇನ್ ಎನದು ಉಳ್ಳೇ
ಯಾದು ಆಗಿಲ್ ಯಾದೇ ಇನಿ (೭೦)

೬೬

ಪುವಿಯುಂ ಇರುವಿಶುಂಬುಂ ನಿನ್ ಅಹತ್ತ ನೀ ಎನ್
ಶೆವಿಯಿನ್ ವಳಿ ಪುಗುಂದು ಎನ್ ಉಳ್ಳಾಯ್ ಅವಿವು ಇನ್ರಿ
ಯಾನ್ ಪೆರಿಯನ್ ನೀ ಪೆರಿಯೈ ಎನ್‌ಬದನೈ ಯಾರ್ ಅರಿವಾರ್
ಊನ್ ಪೆರಹು ನೇಮಿಯಾಯ್ ಉಳ್ಳು (೭೫)

೬೫

ಮೆರೆವ ಹೊನ್ನಮುಡಿಯವನ, ಸಾಸಿರ ಹೆಸರವನ
ಬೆಳಕನೂ ಬೆಳಗುವ[1] ಸಿರಿಚಕ್ರವನೆ ಹಿಡಿದವನ
ಇಟ್ಟೆ ನಾನಿಂದು ಎನ್ನೊಡಲೊಳಗೆ, ಎಲ್ಲ ಬೇಗೆಯ ಕಳೆವ
ತಂದೆ ತಾಯೆಂದು ತಿಳಿದು!
ಎನಗಿನ್ನು ಏನಾದರೇನು?

1. ಸೂರ್ಯನಿಗಿಂತ ಹೆಚ್ಚು ಬೆಳಕಾದ

೬೬

ಈ ಭೂಮಿ, ಆ ಮುಗಿಲು ಅಡಗಿಹವು ನಿನ್ನೊಳಗೆ, ನೀನೆನ್ನ
ಕಿವಿಯೊಳ ಹೊಕ್ಕು ಇರುವಿ ಎನ್ನೊಡಲಲ್ಲೆ
ದಿನವೊಂದು ಬಿಡದೆ! ಹೀಗಿರಲು ಹಿರಿಯವ ನಾನೆ ತಾನೆ?
ನೀ ಹಿರಿಯ ಎಂದರಿವವರು ಯಾರು?
ರಕ್ಕಸರ ಕತ್ತರಿಪ ಚಕ್ರವನ ತೊಟ್ಟವನೆ, ನೋಡು!

ಆರು

ತಿರುವಾಯ್‌ಮೊಳಿ

೬೭

ಒಳಿವಿಲ್ ಕಾಲಮೆಲ್ಲಾಂ ಉಡನಾಯ್ ಮನ್ನಿ
ವಳುವಿಲಾವಡಿಮೈ ಶೆಯ್ಯವೇಂಡುಂ ನಾಮ್
ತೆಳಿ ಕುರಲರುವಿತ್ತಿರು ವೇಂಗಡತ್ತು
ಎಳಿಲ್ ಕೊಳ್ ಶೋದಿ ಯೆನ್‌ದೈ ತಂದೈ ತಂದೈಕ್ಕೇ (೩, ೩, ೧)

೬೮

ಆಣ್ಣಲ್ ಮಾಯನ್ ಆಣೆಕೊಳ್ ಶೆಂದಾಮರೈ ಕಣ್ಣನ್
ಶೆಂಗನಿವಾಯ್ ಕ್ಕರುಮಾಣಿಕ್ಕಂ
ತೆಣ್ಣೀರೈಚ್ಚುನೈನೀರ್ ತಿರುವೇಂಗಡತ್ತು
ಎಣ್ಣೆಲ್ ತೋಲ್‌ಪುಗಳ್ ವಾನವರೀಶನೇ (೩, ೩, ೩)

೬೯

ಈಶನ್ ವಾನವರ್‌ಕ್ಕು ಎನ್‌ಬನೆನ್ರಾಲ್ ಅದು
ತೇಶಮೋ – ತಿರುವೇಂಗಡತ್ತಾನುಕ್ಕು
ನೀಶನೇನ್ ನಿರೈವೊನ್ರುಮಿಲೇನ್ ಎನ್‌ಗಣ್
ಪಾಶಂ ವೈತ್ತ ಪರಂಜುಡರ್ ಚ್ಚೋದಿಕ್ಕೇ (೩, ೩, ೪)

೭೦

ಶೋದಿಯಾಗಿ ಯೆಲ್ಲಾ ವುಲಗಂ ತೊಳುಂ
ಆದಿಮೂರ್ತಿಯೆನ್ರಾಲ್ ಅಳವಾಗುಮೋ?
ವೇದಿಯರ್ ಮುಳುವೇದತ್ತಮುದತ್ತೈ
ತೀದಿಲ್ ಶೀರ್ ತಿರುವೇಂಗಡತ್ತಾನ್ಗೈಯೇ (೩, ೩, ೫)

ಆರು

ನಮ್ಮಾಳ್ವಾರರ ಸಿರಿಬಾಯ ನುಡಿಯಿಂದ

೬೭

ಬಿಡುವಿಲ್ಲದೆಲ್ಲ ಕಾಲದೊಳು ಒಲುಮೆಯಲಿ ನೆಲೆನಿಂತು
ಎಡೆಬಿಡದೆ ಅವನಡಿಸೇವೆ ಗೈಯಲಿಬೇಕು ನಾವೆಲ್ಲ!
ಸಡಗರದಿ ಹರಿವ ತೊರೆಗಳಿಹ ಸಿರಿವೇಂಗಡದಿ
ನಿಡುನಿಂತು ನನ್ನೆಲ್ಲ ಹಿರಿಯರಿಗೆ ಬಾಳ ಬೆಳಕಾದವನ
ಅಡಿಸೇವೆಯನು ಮಾಡಲಿಬೇಕು!

೬೮

ನೀ ಒಡೆಯ, ಮಾಯದವ, ಚೆಂದದ ಮುಡಿಯವ, ಕೆಂದಾವರೆಗಣ್ಣವ
ಕೆಂಪಡರಿದ ಬಾಯವ, ಕರಿಮಣಿ ಬಣ್ಣದ ಮೈಯವ,
ತಿಳಿಕೊಳಗಳು ಬೆಳಗುವ ಸಿರಿವೇಂಗಡದಲಿ ನಿಂತವ,
ಎಂದೆಂದು ಹಿರಿಯನಹ, ನೀ ಬಾನವರೊಡೆಯ!

೬೯

ಬಾನವರೊಡೆಯನೆನೆ, ಅದುವೆ ಬಯಕೆಯೋ ಸಿರಿವೇಂಗಡದಿ ನಿಂತವಗೆ?
ನಾ ನೀಚನು ತಾನೆ, ಮೇಲ್ಮೆಯ ಗುಣವೊಂದಿರದವ ತಾನೆ, ಇಂತಾದರು ನನ್ನೊಳು
ಒಲುಮೆಯನ್ನಿಟ್ಟಿಹ ಈ ಬೆಳಕಿಗೆ ಹಿರಿಬೆಳಕಾದವ!

೭೦

ಬೆಳಕಾಗಿ ಬೆಳಗಿಸುವೆ ಲೋಕವನೆಲ್ಲ ನಿನ್ನನು
ಆದಿಮೂರ್ತಿಯೆನಲದು ಹಿರಿಮೆಯ ಮೀರುವುದೋ?
ವೇದವಾದಿಗಳ ವೇದವೆಲ್ಲದರ ಸಾರ ನೀನು
ಕುಂದೊಂದು ಇರದಂತೆ ಗುಣ ತುಂಬಿರಲು ಸಿರಿವೇಂಗಡದಿ ನಿಂತವನೆ!

೭೧

ಶುಮನ್‌ದು ಮಾಮಲರ್ ನೀರ್ ಶುಡರ್ ದೂಪಂ ಕೊಂಡು
ಅಮರ್‌ನ್ದು ವಾನವರ್ ವಾನವರ್‌ಕೋನೊಡುಂ
ನಮನ್‌ರೆಳುಂ ತಿರುವೇಂಗಡಂ ನಂಗಟ್ಕು
ಶಮನ್‌ಕೊಳ್ ವೀಡು ತರುಂ ತಡಂಗುನ್ರಮೇ (೩, ೩, ೭)

೭೨

ಉಲಗಂ ಉಂಡ ಪೆರುವಾಯಾ ಉಲಪ್ಪಿಲ್ ಕೀರ್ತಿಯಮ್ಮಾನೇ
ನಿಲವುಂ ಶುಡರ್ ಶೂಳೊಳಿಮೂರ್ತಿ ನೆಡಿಯಾಯ್ ಅಡಿಯೇನ್ ಆರುಯಿರೇ
ತಿಲದಮುಲಗುಕ್ಕಾಯ್ ನಿನ್ರ ತಿರುವೇಂಗಡತ್ತೆಂಬೆರುಮಾನೇ
ಕುಲತೊಲಡಿಯೇನುನಪಾದಂ ಕೂಡುಮಾರು ಕೂರಾಯೇ (೬, ೧೦, ೧)

೭೩

ವಣ್ಣಮರುಳ್ ಕೊಳ್ಳಣೆಮೇಘವಣ್ಣಾ ಮಾಯವಮ್ಮಾನೇ
ಎಣ್ಣಂ ಪುಗುಂದು ತಿತ್ತಿಕ್ಕುಮಮುದೇ ಇಮ್ಮೈಯೋರದಿಪತಿಯೇ
ತೆಣ್ಣಲರುವಿ ಮಣಿ ಪೊನ್ ಮುತ್ತಲೈಕ್ಕುಂ ತಿರುವೇಂಗಡತ್ತಾನೇ
ಅಣ್ಣಲೇ ಉನ್ ಅಡಿ ಶೇರ ಅಡಿಯೇರ್‌ಕಾವಾವೆನ್ನಾಯೇ (೬, ೧೦, ೩)

೭೪

ವಂದಾಯ್ ಪೋಲೇ ವಾರಾದಾಯ್, ವಾರಾದಾಯ್ ಪೋಲ್ ವರುವಾನೇ
ಶಿಂದಾಮರೈಕ್ಕಣ್ ಶೆಂಗನಿವಾಯ್ ನಾತ್ತೋಳಮುದೇ ಯೆನದುಯಿರೇ
ಶೆಂದಾಮಣಿಗಳ್ ಪಗರಲ್ಲೈ ಪಗಲ್‌ಶೆಯ್ ತಿರುವೇಂಗಡತ್ತಾನೇ
ಅಂದೋ ಅಡಿಯೇನುನಪಾದಂ ಅಗಲಗಿಲ್ಲೇನಿರೈಯುಮೇ (೬, ೧೦, ೯)

೭೫

ಅಗಲಗಿಲ್ಲೇ ನಿರೈಯುಂ ಎನ್ರುಂ ಅಲರ್‌ಮೇಲ್ ಮಂಗೈಯುರೈಮಾರ್‌ಪಾ
ನಿಗರಿಲ್ ಪುಗಳಾಯ್ ಉಲಗಂ ಮೂನ್ರುಡೈಯಾ ಯೆನ್ನೈಯಾಳ್ವಾನೇ
ನಿಗರಿಲಮರರ್ ಮುನಿಕ್ಕಣಂಗಳ್ ವಿರುಂಬುಂ ತಿರುವೇಂಗಡತ್ತಾನೇ
ಪುಗಲೊನ್ರಿಲ್ಲಾವಡಿಯೇನ್ ಉನ್ನಡಿಕ್ಕೀಳ್ ಅಮರ್‌ನ್ದು ಪುಗುನ್ದೇನೇ(೬, ೧೦, ೧೦)

೭೧

ಒಲುಮೆಯಲಿ ಕೈಕೊಂಡು ಹಿರಿಹೂ ಕೈನೀರು ದೀಪಧೂಪಗಳನು
ನಲಿದು ಬಾನವರು ಬಂದು ದಂಡಿನೊಡೆಯನೊಡಗೂಡಿ[1]
ಮಣಿವ ಸಿರಿವೇಂಗಡವೆ ನಮಗೆಲ್ಲ
ನೆಮ್ಮದಿಯ ತರುವ ಹಿರಿಬೆಟ್ಟ!

1. ದೇವತೆಗಳ ಸೇನಾನಿಯೆಂದಾದ ವಿಷ್ವಕ್ಸೇನ

೭೨

ಲೋಕವನುಂಡ ಹಿರಿಬಾಯವನೆ, ಎಂದೆಂದು ತೀರದಿಹ ಕೀರ್ತಿಯುಳ್ಳವನೆ
ಮೇಲಸೊಡರಂತೆ[1] ಬೆಳಗುವ ಮೈಯವನೆ, ಎನ್ನುಸಿರೆ[2]
ಲೋಕಂಗಳಿಗೆ ತಿಲಕದೊಲು ನಿಂತ ಸಿರಿವೇಂಗಡದ ಹಿರಿದೈವವೆ
ನಿನ್ನಡಿಗಳನೆ ನಂಬಿದರು ಹಿರಿಯರೆನ್ನಯ ಕುಲದವರು,
ಅರುಹೀಗ ನಿನ್ನಡಿಗಳನೆ ನಾ ಕೂಡಿಕೊಳುವೆನೆಂತು!

1. ಸೂರ್ಯ 2. ಆರ್ = ದುರ್ಲಭವಾದ; ಉಯಿರ್ = ಪ್ರಾಣ

೭೩

ಮೈ ಬಣ್ಣದಲಿ ಮರುಳುಮಾಡುವ ಮೇಘಬಣ್ಣದ ಓ ಮಾಯಾವಿ
ಭಕ್ತರೊಡಲನ್ನೆ ಹೊಕ್ಕು ಸುಖವ ತರುವಮೃತವೇ ಅಮರರಿಗಧಿಪತಿಯೆ
ಮುತ್ತು ಮಣಿ ಹೊನ್ನ ಹೊತ್ತು ತರುವ ತೊರೆಗಳಿಹ ಸಿರಿವೇಂಗಡದ ಓ ದೈವ,
ಅರುಹು ದಯಮಾಡಿ ಸೇರುವ ಬಗೆಯ ನಿನ್ನಡಿಗಳನು!

೭೪


ಬಂದಂತೆ ಇರಲಾಗಿ ಬಾರದೆ ಇರುವಿ[1], ಬಾರದೆಲೆ ಇರಲಾಗಿ ಬರುವಿ[2]
ಕೆಂದಾವರೆ ಕಣ್ಣವನೆ, ಕೆಂಪಡರಿದ ಬಾಯವನೆ, ತೋಳ ನಾಲ್ಕರಮೃತವೆ ಎನ್ನುಸಿರೆ!
ಹೊಳೆವ ಚಿಂತಾಮಣಿ ಇರುಳ ಬೆಳಗಿಸುವ ಸಿರಿವೇಂಗಡದವನೆ,
ಓ, ಅಗಲಿರಲಾರೆ ನಿನ್ನಡಿಗಳನು ನಾನರಗಳಿಗೆ

1. ಭಕ್ತರಲ್ಲದವರಿಗೆ 2. ಭಕ್ತರಿಗೆ

೭೫

ಅಗಲಿ ಇರಲಾರೆ ಅರಗಳಿಗೆ ಎಂದೇ ಇಹಳು ಸಿರಿದೇವಿ ನಿನ್ನೊಡಲಲ್ಲೆ
ಎಣೆಯಿರದ ಕೀರ್ತಿಯವ, ಮೂರುಲೋಕಗಳೊಡೆಯ, ಎನ್ನಾಳುವವ!
ಎಣೆಯಿರದಮರರು ಮುನಿಗಳು ನೆರೆಯುವ ಸಿರಿವೇಂಗಡದವ
ನೀನಲ್ಲದೆ ಪೊರೆಯಲು ಬೇರುಂಟೆ? ನಿನ್ನಡಿಗಳಲೆ ಬಾಗಿ ಹೊಕ್ಕಿರುವೆ!

ಚಿತ್ರಗಳು




ಬೆಟ್ಟದ ಮೇಲೆ ವಾಹನಮಾರ್ಗ




ಬೆಟ್ಟವನ್ನು ಹತ್ತುತ್ತ ದಾರಿಯಲ್ಲಿ




ಬೆಟ್ಟದ ಮೇಲೆ ದ್ವಾರಮಂಟಪ




ತಿರುಮಲರಾಯಮಂಡಪದ ಅಧಿಷ್ಠಾನ (ಉತ್ತರದ ಕಡೆ)



ತಿರುಮಲರಾಯಮಂಡಪದೊಳಗೆ ಸಣ್ಣಮಂಟಪ (ಆಗ್ನೇಯದಿಕ್ಕಿನಲ್ಲಿ)




ತಿರುಮಲರಾಯಮಂಡಪದೊಳಗೆ



ತಿರುಮಲರಾಯಮಂಡಪದ ಒಂದು ಕಂಬ




ತಿರುಮಲರಾಯಮಂಡಪದಲ್ಲಿ ದಕ್ಷಿಣದ ಕಡೆ ಒಳಮಂಟಪ



ಮಹಾದ್ವಾರಪ್ರಾಕಾರದ ಒಳಭಾಗ




ಹೊರಗಣ ಪ್ರಾಕಾರದ ಒಳಭಾಗ (ಉತ್ತರದಿಕ್ಕಿನಲ್ಲಿ)




ಕಲ್ಯಾಣಮಂಡಪದೊಳಗೆ ಸಣ್ಣಮಂಟಪ (ಪೂರ್ವದಿಕ್ಕಿನ ಗೋಡೆ)




ಕಲ್ಯಾಣಮಂಡಪದೊಳಗೆ




ಕಲ್ಯಾಣಮಂಡಪದೊಳಗೆ



ಕಲ್ಯಾಣಮಂಡಪದ ಕಂಬವೊಂದರಲ್ಲಿ ಶಿಲ್ಪ




ಕಲ್ಯಾಣಮಂಡಪದಲ್ಲಿ — ಉತ್ತರದಿಕ್ಕಿನ ಗೋಡೆ




ಕಲ್ಯಾಣಮಂಡಪದ ಒಳಗೆ ಉತ್ತರದ ಗೋಡೆಯಲ್ಲಿನ ಕುಂಭಪಂಜರ (ಕೆಳಭಾಗ)




ಕಲ್ಯಾಣಮಂಡಪದಲ್ಲಿ ಕುಂಭಪಂಜರ (ಕೆಳಭಾಗ)




ಕಲ್ಯಾಣಮಂಡಪದಲ್ಲಿ ಕುಂಭಪಂಜರ (ಕೆಳಭಾಗ)




ಕಲ್ಯಾಣಮಂಡಪದಲ್ಲಿ ಒಳಭಾಗ




ಕಲ್ಯಾಣಮಂಡಪದಲ್ಲಿ




ಕಲ್ಯಾಣಮಂಡಪದಲ್ಲಿನ ಒಂದು ಕಂಬ




ವಿಮಾನಪ್ರದಕ್ಷಿಣದಲ್ಲಿ ರಾಮಾನುಜಸನ್ನಿಧಿ



ವಿಮಾನಪ್ರದಕ್ಷಿಣದಲ್ಲಿ ವರದರಾಜಸ್ವಾಮಿಸನ್ನಿಧಿ



ನಡುವಣ ಪಡಿಕಾವಲಿ — ಹೊರ ಅಧಿಷ್ಠಾನ (ಉತ್ತರದ ಕಡೆಗೆ)




ಸಭಾ-ಅರ-ಸೋಪಾನ




ಬಂಗಾರುಬಾವಿಯ ಮೇಲೆ ವಿಜಯನಗರರಾಜಮುದ್ರೆ ಕೆತ್ತನೆ



ಸಭಾ-ಅರ — ಯಾಳಿ



ವಿಮಾನಪ್ರದಕ್ಷಿಣದ ಪ್ರಾಕಾರ (ಉತ್ತರದ ಕಡೆ ಅಧಿಷ್ಠಾನ)



ವಿಮಾನಪ್ರದಕ್ಷಿಣದಲ್ಲಿ ಮುಖಮಂಡಪದ ಹೊರಗೆ ಬಲಿಕಲ್ಲುಗಳು

ನಡುವಣ ಪಡಿಕಾವಲಿಗೋಪುರ – ಉತ್ತರದಿಕ್ಕಿನಲ್ಲಿ

ವಿಮಾನಪ್ರದಕ್ಷಿಣದಲ್ಲಿ ಗರುಡಸನ್ನಿಧಿ (ಪೂರ್ವದ ಗೋಡೆ)




ವಿಮಾನಪ್ರದಕ್ಷಿಣದಲ್ಲಿ ಗರುಡಸನ್ನಿಧಿ



ತಾಳ್ಳಪಾಕ-ಅರದಲ್ಲಿ ಅಣ್ಣಮಾಚಾರ್ಯರ ಮೂರ್ತಿ (ವಿಮಾನಪ್ರದಕ್ಷಿಣೆಯಲ್ಲಿ)

ನಡುವಣ ಪಡಿಕಾವಲಿ (ಉತ್ತರ-ಪ್ರಾಕಾರದ ಗೋಡೆ)


ಮಹಾಮಂಡಪ – ದಕ್ಷಿಣದ ಗೋಡೆ



ವಿಮಾನಪ್ರದಕ್ಷಿಣದಲ್ಲಿ ಗರುಡನ ಗುಡಿಯ ವಿಮಾನ



ರಂಗಮಂಡಪದಲ್ಲಿ ಮಂಟಪ (ಪಶ್ಚಿಮದ ಕಡೆ)




ಕುಂಭಪಂಜರದ ಕೆಳಭಾಗ (ರಂಗಮಂಡಪ)



ಕುಂಭಪಂಜರದ ಮೇಲ್ಭಾಗ




ರಂಗಮಂಡಪದ ಪ್ರವೇಶದಲ್ಲಿ ಎಡಗಡೆಯ ಕಂಬದ ಮೇಲೆ
ವಿಜಯನಗರರಾಜಮುದ್ರೆ (ವರಾಹ)




ರಂಗಮಂಡಪದಲ್ಲಿ ಗೂಡು (ಸಣ್ಣಶೇಷವಾಹನ)



ರಂಗಮಂಡಪದಲ್ಲಿ ಉತ್ತರದ ಕಡೆಯಲ್ಲಿ ಸಣ್ಣಮಂಟಪ



ರಂಗಮಂಡಪದಲ್ಲಿ ಪಶ್ಚಿಮಭಿತ್ತಿಯಲ್ಲಿನ ಕುಂಭಪಂಜರ



ರಂಗಮಂಡಪದಲ್ಲೊಂದು ಸಣ್ಣಮಂಟಪ

ರಂಗಮಂಡಪದ ಮಧ್ಯದಲ್ಲಿ

ರಂಗಮಂಡಪದಲ್ಲಿ ಒಂದು ಕಂಬ

ಮುಕ್ಕೋಟಿಪ್ರದಕ್ಷಿಣ (ಗರ್ಭಗುಡಿಯ ಹಿಂಭಾಗ)


ರಂಗಮಂಡಪಪ್ರವೇಶ



ಮುಕ್ಕೋಟಿಪ್ರದಕ್ಷಿಣ (ಉತ್ತರದಿಕ್ಕಿನಲ್ಲಿ)

ಮುಕ್ಕೋಟಿಪ್ರದಕ್ಷಿಣ (ದಕ್ಷಿಣದಿಕ್ಕಿನಲ್ಲಿ)


ಮುಕ್ಕೋಟಿಪ್ರದಕ್ಷಿಣ (ಗರ್ಭಗುಡಿಯ ಸುತ್ತ) ಉತ್ತರದಿಕ್ಕಿನಲ್ಲಿ



ಮುಕ್ಕೋಟಿಪ್ರಾಕಾರ (ಗರ್ಭಗುಡಿಯ ಹೊರಗೋಡೆ — ನೈಋತ್ಯದಿಕ್ಕು)

ಮುಕ್ಕೋಟಿಪ್ರದಕ್ಷಿಣಿ (ಗರ್ಭಗುಡಿಯ ಹೊರಗೋಡೆ — ಪಶ್ಚಿಮದಿಕ್ಕಿನಲ್ಲಿ)


ಗರ್ಭಗೃಹದ ಅಂತರಾಳ (ದಕ್ಷಿಣದ ಗೋಡೆ)




ಗರ್ಭಗುಡಿಯ ಹೊರಗೋಡೆ




ಮುಕ್ಕೋಟಿಪ್ರದಕ್ಷಿಣ (ಪಶ್ಚಿಮದಿಕ್ಕಿನಲ್ಲಿ)




ಮಹಾಮಂಡಪದ ದಕ್ಷಿಣದಿಕ್ಕಿನ ಗೋಡೆ




ಮುಕ್ಕೋಟಿಪ್ರದಕ್ಷಿಣ (ಗರ್ಭಗುಡಿಯ ಹಿಂಭಾಗದ ಹೊರಗೋಡೆ)




ಗರ್ಭಗುಡಿಯ ಹೊರಗೋಡೆ (ಪಶ್ಚಿಮದಲ್ಲಿ)




ಗರ್ಭಗುಡಿಯ ಹೊರಗೋಡೆ (ಉತ್ತರದಲ್ಲಿ)




ಮುಕ್ಕೋಟಿಪ್ರದಕ್ಷಿಣದಲ್ಲಿ ಕುಂಭಪಂಜರಗಳು (ದಕ್ಷಿಣದಿಕ್ಕಿನ ಗೋಡೆ)




ಅರ್ಧಮಂಡಪ (ದಕ್ಷಿಣಗೋಡೆಯಲ್ಲಿ ಗೂಡು)




ಮಹಾಮಂಡಪದ ದಕ್ಷಿಣಗೋಡೆಯ ಅಧಿಷ್ಠಾನ



ಮಹಾಮಂಟಪದ ದಕ್ಷಿಣಗೋಡೆ




ಮುಕ್ಕೋಟಿಪ್ರದಕ್ಷಿಣ (ಗರ್ಭಗುಡಿಯ ಉತ್ತರದಿಕ್ಕಿನ ಹೊರಗೋಡೆ)




ಮುಕ್ಕೋಟಿಪ್ರದಕ್ಷಿಣದಲ್ಲಿ ವಿಮಾನಪ್ರಾಕಾರದ ಗೋಡೆ — ಅಧಿಷ್ಠಾನ —
(ಶಾಸನಗಳನ್ನು ಕಾಣಬಹುದು)



ವರಾಹಸ್ವಾಮಿಯ ಗುಡಿಯ ಎದುರು ಸ್ವಾಮಿಪುಷ್ಕರಿಣಿಯಲ್ಲಿ ಚಕ್ರಸ್ನಾನ




ರಂಗಮಂಟಪ




ಪವಿತ್ರೋತ್ಸವದಲ್ಲಿ ಹೋಮ



ಮಹಾದ್ವಾರದಲ್ಲಿ ಪದ್ಮನಿಧಿ




ಅಶ್ವವಾಹನ



ಗರುಡವಾಹನ




ಇನ್ನೊಂದು ಗರುಡವಾಹನ




ಹನುಮದ್ವಾಹನ




ಹನುಮದ್ವಾಹನ




ಹಂಸವಾಹನ



ಗಜವಾಹನೋತ್ಸವ



ಚಂದ್ರಪ್ರಭಾಮಂಡಲ




ಸಿಂಹವಾಹನ



ಶೇಷವಾಹನ (ದೊಡ್ಡದು)



ಶೇಷವಾಹನ (ಸಣ್ಣದು)




ಕಲ್ಪವೃಕ್ಷವಾಹನ




ಗರುಡವಾಹನ




ಗಜವಾಹನ



ಸ್ನಪನಪೀಠ




ಧ್ವಜಸ್ತಂಭಮಂಡಪದ ಬಳಿ ಇರುವ ತೋಡರಮಲ್ಲ




ಮಹಾದ್ವಾರದಲ್ಲಿ ಶಂಖನಿಧಿ



ಮೂಲವರ (ತಿರುಪತಿ ತಿಮ್ಮಪ್ಪ)




ಬೆಟ್ಟ ಏರುವಾಗ




ಬೆಟ್ಟದ ಒಂದು ನೋಟ




ಕಪಿಲತೀರ್ಥ



ಸ್ವಾಮಿಪುಷ್ಕರಿಣಿ



ಆನಂದನಿಲಯ



ಮಲಯಪ್ಪಸ್ವಾಮಿ



ವಿಮಾನಪ್ರದಕ್ಷಿಣೆಯಲ್ಲಿ ವರದರಾಜಸ್ವಾಮಿ



ಪೋಟುತಾಯಾರು


ವಿಷ್ಣು (ತಿಮ್ಮನಪಾಕಂ ಪದಲ್ಲಿ)

ನರಸಿಂಹಸ್ವಾಮಿ (ತಿಮ್ಮನಪಾಕಂ ಪದಲ್ಲಿ)

ರಾಮಾನುಜರು (ತಿಮ್ಮನಪಾಕಂ ಪದಲ್ಲಿ)



ಜ್ಯೇಷ್ಠಾಭಿಷೇಕಕವಚ (ಮಲಯಪ್ಪಸ್ವಾಮಿ)




ಮುತ್ತಿನಕವಚ (ಮಲಯಪ್ಪಸ್ವಾಮಿ)


ವಿಷ್ವಕ್ಸೇನ – ಉತ್ಸವಮೂರ್ತಿ
(ರಾಮುರ ಮೇಡೆಯಲ್ಲಿ)

ಸುಗ್ರೀವ (ರಾಮುರ ಮೇಡೆಯಲ್ಲಿ)


ರಾಮಾನುಜರು – ಉತ್ಸವಮೂರ್ತಿ
(ವಿಮಾನಪ್ರದಕ್ಷಿಣೆಯಲ್ಲಿ)




ಹನುಮಂತ



ಗರುಡ




ಆದಿಶೇಷ




ಕೃಷ್ಣದೇವರಾಯ, ಚಿನ್ನಾದೇವಿ, ತಿರುಮಲದೇವಿ



ಅಚ್ಯುತದೇವರಾಯನ ಮೂರ್ತಿ (ಪ್ರತಿಮಾಮಂಡಪ)



ಮುತ್ತಿನ ಮಂಟಪೋತ್ಸವ



ವಸಂತೋತ್ಸವ

ಹನುಮದುತ್ಸವ

ಹಂಸವಾಹನೋತ್ಸವ

ಗರುಡೋತ್ಸವ (ಲಕ್ಷ್ಮೀಹಾರವನ್ನು ಧರಿಸಿ)

ಶ್ರೀ ಮಲಯಪ್ಪಸ್ವಾಮಿ

ಶ್ರೀ ಗಜಾರೋಹಣೋತ್ಸವ

ಶ್ರೀ ಮಲಯಪ್ಪಸ್ವಾಮಿ

ಮೋಹಿನಿ-ಅವತಾರ — ಅಂಡೋಳಿಕ

ವೀಷಡಾಹನೋತ್ಸವ (ಸಣ್ಣದು)


ಗರುಡವಾಹನ




ಶೇಷವಾಹನೋತ್ಸವ (ದೊಡ್ಡದು)




ಚಂದ್ರಪ್ರಭಾವಾಹನೋತ್ಸವ



ಬ್ರಹ್ಮೋತ್ಸವಕ್ಕೆ ಮೊದಲು ಧ್ವಜಾರೋಹಣ



ದಶಾವತಾರ ಒಡ್ಯಾಣ (ಮೂಲವರಿಗೆ)



ನವರಾತ್ರಿಯಲ್ಲಿ ರಥೋತ್ಸವ




ನಾಗಾಭರಣ (ಯಾದವರಾಯರ ಕಾಲದ್ದು — ಮೂಲವರಿಗೆ)

ಉತ್ಸವಮೂರ್ತಿಯ ಕಡಗಗಳು

ಗದ್ಯಾಲರಾಜನು ಸಮರ್ಪಿಸಿದ ಕಿರೀಟ (ಮೂಲವರಿಗೆ)


ಸೂರ್ಯಕಠಾರಿ (ಮೂಲವರಿಗೆ)




ಸರ್ವಭೂಪಾಲವಾಹನ




ಬಲಿಪೀಠ — ಧ್ವಜಸ್ತಂಭ



ದೂರದಿಂದ ಗುಡಿಯ ನೋಟ



ನಡುವಣ ಪಡಿಕಾವಲಿ (ಬೆಳ್ಳಿಬಾಗಿಲು)



ಉತ್ಸವಮೂರ್ತಿಗಳು (ಶ್ರೀದೇವಿ, ಭೂದೇವಿಯರೊಂದಿಗೆ ತಿಮ್ಮಪ್ಪ)




ಗರುಡೋತ್ಸವಕ್ಕೆ ಮೂಲವರ-ಲಕ್ಷ್ಮೀಹಾರವನ್ನು ತರುತ್ತಿರುವುದು

ಆನಂದನಿಲಯ

ವೇಂಕಟಪತಿರಾಯ

ಬಂಗಾರಕಾಸಿನ ಮಾಲೆ
(ಕಾಸುಗಳ ಮೇಲೆ ಪರ್ಶಿಯನ್ ಬರಹಗಳಿವೆ)




ವಜ್ರದ ಆಭರಣಗಳು (ಮೂಲವರಿಗೆ)


ಪದ್ಮಪಾಣಿ ಮತ್ತು ಪೀನವಾಸ

ಅಭಿಜ್ಞಾನದ ಕೆಲವು ಪ್ರಕಟನೆಗಳು

- *ಕಲಾತತ್ತ್ವಮಹರ್ಷಿ ಆನಂದ ಕುಮಾರಸ್ವಾಮಿ* / ಸಾ. ಕೃ. ರಾಮಚಂದ್ರರಾವ್
  (ಜೀವನಚರಿತ್ರೆ)
- *ವಂಶೀಸಂದೇಶಂ* / ಶತಾವಧಾನಿ ಆರ್. ಗಣೇಶ್
- *ಪ್ರಥಮ ಸೋಪಾನ* / ಸ್ವಾಮೀ ಪರಮಾನಂದ ಭಾರತೀ
  (ದೇವರು-ಪುನರ್ಜನ್ಮ-ವೇದಗಳನ್ನು ಕುರಿತ ಮೀಮಾಂಸೆ)
- *ವಿಲಿಯಂ ಷೇಕ್ಸ್‌ಪಿಯರ್* / ಎಲ್. ಎಸ್. ಶೇಷಗಿರಿ ರಾವ್
- *ಮೆಲುಗಾಳಿಯ ಮಾತುಗಳು* / ಟಿ. ವಿ. ವೆಂಕಟಾಚಲ ಶಾಸ್ತ್ರೀ
  (ತೊಂಬತ್ತು ಚಿಂತನಗಳ ಸಂಗ್ರಹ)
- *ಅಣ್ಣಪ್ಪದೈವ* / ಸಾ. ಕೃ. ರಾಮಚಂದ್ರರಾವ್
- *Śaṅkara and Adhyāsa-bhāṣya* / S. K. Ramachandra Rao
- *ಅಭಿನವಗುಪ್ತ* / ಸಾ. ಕೃ. ರಾಮಚಂದ್ರರಾವ್
  (ಯೋಗಿ, ಸಿದ್ಧ, ದಾರ್ಶನಿಕ, ಆಲಂಕಾರಿಕನ ಜೀವನ-ದರ್ಶನ)
- *ಕಾಮ ಒಂದು ಪುರುಷಾರ್ಥ* / ವಿ. ಕೆ. ಹಂಪಿಹೊಳಿ
- *ಧಾರ್ಮಿಕ ಸಂಸ್ಕಾರಗಳಲ್ಲಿ ಸಂಗೀತ* / ರಾ. ಸತ್ಯನಾರಾಯಣ
- *ಚಿಂತನ ಚಿಲುಮೆ* / ಸತ್ಯೇಶ್ ಎನ್. ಬೆಳ್ಳೂರ್
- *ಹೃದಯಸಂಪನ್ನತೆ* / ಶ್ರೀಕಂಠಕುಮಾರಸ್ವಾಮಿ
- *Śṛṅgeri* / *A. V. Narasimhamurthy*
  (The Holy Abode of the Shankaracharyas of the South)
- *ತಿರುಪತಿ ತಿಮ್ಮಪ್ಪ* / ಸಾ. ಕೃ. ರಾಮಚಂದ್ರರಾವ್
- *ಚಂಪೂರಾಮಾಯಣಮ್ ಕಿಷ್ಕಿಂಧಾಕಾಂಡಮ್* / ಮಹೇಶ ಅಡಕೋಳಿ
  (ಮೂಲ, ಅನ್ವಯ, ಕನ್ನಡ ಅನುವಾದ, ಟಿಪ್ಪಣಿಗಳು)
- *ಸೂಕ್ತಿಕೋಶ* / ಕೆ. ಎಸ್. ಕಣ್ಣನ್
- *ಚಂಪೂರಾಮಾಯಣಮ್ ಬಾಲಕಾಂಡಮ್* / ಮಹೇಶ ಅಡಕೋಳಿ
  (ಮೂಲ, ಅನ್ವಯ, ಕನ್ನಡ ಅನುವಾದ, ಟಿಪ್ಪಣಿಗಳು)
- *ಶ್ರೀದತ್ತಭಾವಸುಧಾರಸಸ್ತೋತ್ರಮ್* / ಶೇಷಾಚಲಶರ್ಮಾ
- *ಗಣಪತಿಯ ಕಲ್ಪನೆ* / ಸಾ. ಕೃ. ರಾಮಚಂದ್ರರಾವ್
- *ವಾಲ್ಮೀಕಿಪ್ರತಿಭೆ* / ಸಾ. ಕೃ. ರಾಮಚಂದ್ರರಾವ್
- *ಶ್ರೀಕೃಷ್ಣನ ವ್ಯಕ್ತಿತ್ವ* / ಸಾ. ಕೃ. ರಾಮಚಂದ್ರರಾವ್
- *ಗೀತಗೋವಿಂದ* / ಸಾ. ಕೃ. ರಾಮಚಂದ್ರರಾವ್
- *ಯಶಸ್ಸು ವರ್ಸಸ್ ಆನಂದ* /
  ಗೀತ್ ಸೇಠಿ, ಸುನಿಲ್ ಅಗರ್‌ವಾಲ್, ಸತ್ಯೇಶ್ ಎನ್. ಬೆಳ್ಳೂರ್
- *ಪ್ರಜ್ಞಾರಂಗ* (ಎನ್. ರಂಗನಾಥಶರ್ಮಾ ಅವರ ಲೇಖನಗಳು)

- ತರ್ಕಸಂಗ್ರಹ / ಮಹೇಶ ಅಡಕೋಳಿ, ಶಂಕರಭಟ್ಟ
- ಸ್ವಾತ್ಮಶಿಕ್ಷಣವೇ ಸ್ವರಾಜ್ಯ / ಎಸ್. ಸೂರ್ಯಪ್ರಕಾಶ ಪಂಡಿತ್
- ಮಿಂಚಿನ ತೇರು / ಪ್ರಭುಶಂಕರ
  (ಶ್ರೀರಾಮಕೃಷ್ಣ - ಶ್ರೀಶಾರದಾದೇವಿ - ಶ್ರೀವಿವೇಕಾನಂದ ತೀರ್ಥವಾಹಿನಿ)
- ಕವಿತೆಗೊಂದು ಕಥೆ / ಶತಾವಧಾನಿ ಆರ್. ಗಣೇಶ್
- ತಂಬೂರಿ ಮೀಟಿದವ / ಎಚ್.ಎನ್. ಮುರಳೀಧರ
  (ಪುರಂದರದಾಸರ ಅಭಿವ್ಯಕ್ತಿಯ ಅಧ್ಯಯನ)
- ಸಂಪಿಗೆ ಭಾಗವತ / ಲಕ್ಷ್ಮೀಶ ತೋಳ್ಪಾಡಿ
- ಜೀವನವದೊಂದು ಕಲೆ / ಎಸ್. ಸೂರ್ಯಪ್ರಕಾಶ ಪಂಡಿತ್
- ಶಾರದಾಪೀಠದ ಮಾಣಿಕ್ಯ / ಸಾ. ಕೃ. ರಾಮಚಂದ್ರರಾವ್
- ಮಹಾಭಾರತ ಬೆಳೆದ ಬಗೆ / ಎಸ್. ಆರ್. ರಾಮಸ್ವಾಮಿ
- ಭಾರತೀಯ ಪ್ರಜ್ಞಾವಾಹಿನಿ: ಆನಂದ ಕುಮಾರಸ್ವಾಮಿ / ಎಸ್. ಸೂರ್ಯಪ್ರಕಾಶ ಪಂಡಿತ್





ಸಾ. ಕೃ. ರಾಮಚಂದ್ರರಾವ್

ಭಾರತೀಯ ಸಂಸ್ಕೃತಿಯಲ್ಲಿ ಗುಡಿ-ಗೋಪುರಗಳಿಗೆ ಮಹತ್ತ್ವದ ಸ್ಥಾನವಿದೆಯಷ್ಟೆ. ಇಂಥ ದೇವಾಲಯಗಳಲ್ಲಿ ತಿರುಮಲೆ ತಿರುಪತಿಗಿರುವ ಸ್ಥಾನ ವಿಶೇಷವಾದದ್ದು.

ಅನಂತ ಆಕರ್ಷಣೆ-ಶಕ್ತಿಗಳಿಂದ ವಿರಾಜಿಸುತ್ತಿರುವ ತಿರುಪತಿ ತಿಮ್ಮಪ್ಪ, ಅವನನ್ನು ಸುತ್ತುವರೆದಿರುವ ಪುರಾಣ-ಕಥೆಗಳು, ಅವನು ನೆಲೆನಿಂತ ಬೆಟ್ಟ, ಅಲ್ಲಿಯ ಆಲಯ, ಆಲಯದ ವಾಸ್ತುಶಿಲ್ಪ, ಗುಡಿಯಲ್ಲಿ ನಡೆಯುವ ಅರ್ಚನೆ-ಪೂಜಾಪದ್ಧತಿಗಳು, ಅಲ್ಲಿ ಜರಗುವ ಉತ್ಸವ-ವೈಭವಗಳು, ಅದಕ್ಕೆ ಹೊಂದಿಕೊಂಡ ಆಗಮ-ಶಾಸ್ತ್ರ-ಸಾಹಿತ್ಯ-ಶಾಸನ—ಹೀಗೆ ಪ್ರತಿ ವಿವರವೂ ಆಸ್ತಿಕರ ಪಾಲಿಗೆ ಪರಮಪವಿತ್ರವೆನಿಸಿದೆ; ಆಸಕ್ತರ ಪಾಲಿಗೆ ಕುತೂಹಲ ವಿಷಯವೆನಿಸಿದೆ.

ಒಟ್ಟಿನಲ್ಲಿ ಹೇಳುವುದಾದರೆ, ತಿರುಪತಿ ತಿಮ್ಮಪ್ಪ ನೂರಾರು ವರ್ಷಗಳಿಂದ ಭಾರತೀಯ ಸಂಸ್ಕೃತಿಪ್ರವಾಹದ ಒಂದು ಪ್ರಧಾನ ಸ್ರೋತವೆನಿಸಿದ್ದಾನೆ. ಇಂಥ ದೈವ ತಿಮ್ಮಪ್ಪನನ್ನೂ, ಅವನ ಗುಡಿ ವೇಂಗಡವನ್ನೂ ಹಲವು ಧಾರೆಗಳಲ್ಲಿ ವಿವರಿಸುವ ಬೃಹದ್ಗ್ರಂಥವೇ ಪ್ರಕೃತಕೃತಿ **ತಿರುಪತಿ ತಿಮ್ಮಪ್ಪ.**

ಅಭಿಜ್ಞಾನ
ಬೆಂಗಳೂರು

₹650



